ನೋಭಯ ಕವಿತಾವಿಶಾರದ ಶ್ರೀಷಡಕ್ಷರದೇವಭಕ್ತಿವಿರಚಿತ ಶ್ರೀಮದ್ಬಸವ ರಾಜವಿಜಯ ಮಹಾಪುರಾಣದೊಳ್ ದೇಶಾದಿವರ್ಣನಂ ಪಂಚಮಾಶ್ವಾಸಂ ಸಮಾಪ್ತಂ.

ಅಂತು ಆಶ್ವಾಸಂ ೫ ಕ್ಕಂ ಪದನು ೪೫೨ ಕ್ಕಂ ಮಂಗಳಂ.

೬ ನೇ ಆಶ್ವಾಸ.

ಲಲಾಟೇಕ್ಷಣದಾನ.

ನಾಂದಿ ॥ ಲಲಿತಪದವೃತ್ತ ॥ ಋಗ್ಯಜುರಭಿಸ್ತುತವಿರಾಗ್ಯಧಿಕಪದ್ಮ ಸಮುದೃಗ್ಯುಗಳಭಕ್ತ ಕೃತಭಾಗ್ಯಚಯ ನಿತ್ಯಾ । ರೋಗ್ಯ ನಿರವದ್ಯ ಬಹು ಭೋಗ್ಯ ನಿಗಮಪ್ರಬಲಯುಗ್ಯಪುರಭಿದ್ಭಜನಯೋಗ್ಯಜನಲೋಲಾ ॥ ಪ್ರಾ ಗ್ಯಮಿಸಮೀಕ್ಷ್ಯ ದಶದಿಗ್ಯುತಯಶಸ್ಕ ಮನುವಾಗ್ಯಜನರಾಗಕೃತಶುಗ್ಯಮರ ಭಾಗ । ಸ್ಪ್ರುಗ್ಯತಿವರೇಣ್ಯ ಜಲಮೃಗ್ಯದುಕುಲೇಶಸಿತರುಗ್ಯ ಗುರುಕಂತ ಜಯಮೃಗ್ಯಬಸವೇಶಾ .... ॥ ೫ ॥

ಕಂ ॥ ಶ್ರೀಮದಪರ್ಣಾನನನವ । ತಾಮರಸಾಮೋದಮುದಮಧು ವ್ರತನಭವಂ ॥ ಕಾಮಗಜಸಾಮಜಾರಿನ । ತಾಮರಕುಜನೀಗೆಸೌಖ್ಯಮಂ ಶಿವಲಿಂಗಂ .... ॥ ೧ ॥

ಕಂ ॥ ಪ್ರಭುವಿನಕೃಪೆಯಿಂದನುಪಮ । ವಿಭೂತಿಯಂಪಡೆದುಸಾಡೆ ಲಿಂಗತ್ರಯಮಂ ॥ ವಿಭವದಿನರ್ಚಿಸುತಂ ಘನ । ಶುಭಚರಿತಂ ಬಸವದೇವ ನಿಪ್ಪಂನೆಸರಂ .... ॥ ೨ ॥

ಕಂ ॥ ಹರಭಕ್ತವೇಷದಿಂಬಸ । ವರಸನಮನೆಹೊಕ್ಕುಧನಮನೀಳ್ದಪೆ ವೆನುತಂ ॥ ಪುರದಪೊಸಚೋರರಂತಿರೆ । ತಳೆದರ್ಮಿಸುಪ ಭವಭಕ್ತ ಲಾಂಛನದಿರವಂ .... ॥ ೩ ॥

ಚ ॥ ವೃ ॥ ತನುಮಲಿನಂವಿಭೂತಿಯವಿಲೇಪನದಿಂಮರೆಯಾಗೆ ಕೈತವಂ । ವಿನುತಶಿವಾಕ್ಷಮಾಲೆಯುನಡಂಗಿಶಿವಸ್ತ್ರದಿಕಟ್ಟದದಿವ್ಯಲಿಂಗಮೆಂ॥

ದಿನೆಕರಿದಾಪಸುಣ್ಬದನೆಗಾಯನಮುಹುರ್ತ ಕಂತದಲ್ಲಿ ಮ | ಲ್ಲನಿ ಬಸವಾ
ಲಯಾಂತರಮನಂತವರೊಲ್ವೊಳಪೊಕ್ಕರದ್ಭುತಂ .... ||೪||

ವ || ಆಗಲವಕ್ರ್ಯತ್ರಕವೇಷದಿನೊಳಪೊಕ್ಕು ಬಸವನಂ ಕಂಡವನತ
ರಾಗೆ ಬಸವನಾ ಕಪಟವಟುಗಳಂನೋಡಿ ತಸ್ಕರರೆಂದರಿದೆಂತಾದೊಡಮ
ಮಂತಃಪುರಮಂಭವಿಗಳ್ಪ್ರವೇಶಿಸಲಾಗದಿವಪ್ರ್ಯರಾಕೃತಮುಹಾತಪಕ್ಷ್ಮಾಪಿತ
ಕಲ್ಮಷರಾಗಲ್ವೇಳ್ಕು ಮಲ್ಲದೊಡಂತಿಲ್ಲಿಗೇಳ್ತರ್ಪರೆಂದು ನಿರ್ಧರಿಸಿ ಕುಳ್ಳಿರಿಸಿ
ಪೊಗಮಂ ನಿರೀಕ್ಷಿಸಿ—

ಕಂ || ಇದೆಜಲಗಂಧೋದ್ಧಮತತಿ | ಬಿದರದೆ ಶಿವಲಿಂಗಪೂಜೆಯಂ
ಮಾಡಿಮೆನು || ತ್ರ್ತದಧಿಗಭೀರಂಬಸವಂ | ಪದಪಿಂದಂನುಡಿಯೆಕಳ್ಳರ
ಳ್ಳದರಾಗಳ್ .... || ೫ ||

ವ || ಅಂತಳ್ಕಿಬಳ್ಕಿ ಕೈನಡುಗೆ ಮೈಬೆಮರೆಬೆಳತುರ್ಬಿಬ್ಬಳಿಪೋಗೀ—

ಉತ್ಸಾಹವೃತ್ತ || ಪೊಲ್ಲಮುಪ್ಪಬಂದಿಗೋತುಬಂದೆವಿಲ್ಲಿಗಕ್ಕಟ | ಲ್ಲಿ
ಲ್ಲಲಿಂಗಮೆಂಬಜೀವಕಿಂದೆನೂರುತೀವಿತಂ || ದಲ್ಲಿಗಂಟಿನುರ್ಚಿಬಿರ್ಚಿನೋಡೆ
ತತ್ಫಲಂಗಳಂ | ಶಿಲ್ಪಲಿಂಗರೂಪನಾಳ್ದನಾವೃಷೇಂದ್ರನಿಚ್ಛೆಯಿಂ ||೬||

ಕಂ || ಭಯಮಳಿಯೆಶಿತಗೆರತಿವಿ | ಸ್ಮಯಮಾಂತಾಲಿಂಗಮಂಸಮಂ
ತರ್ಚಿಸಿದ || ನಯಮುಸುಳದೆನಿದರೀಟ | ಸ್ಮಯಬಸವನಿಗಿಮುಶಿವೈಕ್ಯ
ತತಿಗಚ್ಚರಿಯೇ .... ||೭||

ಕಂ || ಮುನ್ನೋರ್ವನಧನಭಕ್ತಂ | ತನ್ನಪೆಸರ್ಮಲ್ಲಿಶೆಟ್ಟಿಯೆನೆಪೆಸರ್ವ
ಡೆದಾ || ತನ್ನಗಜೇಶನನರ್ಚಿಸು | ತನ್ನಿಯಮದಿನಣ್ಣಸಲ್ಲದಂದುಣಲೊಲ್ಲಂ ||೮||

ವ || ಆವಣಿಗ್ವರಸಂತಿರುತ್ತಮಿರ್ದೊರ್ಂದುದಿವಸಂ ನಿಜಬಂಧುಜನ
ಸಮೇತಂ ಪರಿದುಗೆಯ್ಯುಲೆಂದು ಪರದೇಶಕ್ಕೆ ಗಡಣದೆಳ್ತುಗಳೋಳ್ನಾನಾ
ಧಾನ್ಯಂಗಳಂ ಪೇರಿಕೊಂಡು ನಡೆತರ್ಪಾಗಳೆಡೆವಟ್ಟೆಯೊಳೆಲ್ಲಿಯುಂ ಲಿಂಗ
ದರ್ಶನಂಸಮನಿಸದಿರಲೊಡನೇ ಕೋಪವಾಸಂಪತ್ತಿ ಬಳಲ್ದುಬಂದೊಂದು
ದ್ರಾಮಸ್ಥಾನದೋಳ್ಬೀಡಿಕೆಯಂ ಬಿಟ್ಟು, ಶೆಟ್ಟಲಿಂಗಾಲಯಮನಿಲ್ಲಿನೋಡಿ
ಮೆಂಬುದು ಮೊಡನಾಡಿಗಳರಸಿಕಾಣದೇ—

ಕಂ ॥ ಕಡುಪಶಿನಡಸಿದುವೀತಂ । ಗಡರ್ದುಮುಕಣ್ಬೇನೆಪೇಶೆಸ್ವದ್ಧಂ
ಬಿಸಿಲು ॥ ಗ್ಗಡವಿಂಪಸಿಂಪುಣದಿದೊರ್ವೆ । ಪುಡಿಗುಂ ಸಿಜಪೊಂದನ
ರ್ಕರಂ ಚಿಂತಿಸಿದರ್ .... ॥ ೯ ॥

ವ ॥ ಆಗಲೊಂದು ಪುಲ್ಲೇಗುಲಮ ನವಸರವಸರದಿಂ ರಚಿಯಿಸಿ
ಬಳ್ಳಮನೊಂದು ತಂದದವಾನ್ಸುಗ್ರಖಿನಾಗಿಸಟ್ಟು, ಕಾಡಲಗೊಂಚಲ್ಗಳಂ
ಪೂಜಿಗೆಯ್ದು, ಲಿಂಗವಿಸಾಯುಡೆಯೋಳ್ಮಿಂನಪ್ರಣ್ಯಾದಿನಿರ್ದುದೆಂದು ಶೆಟ್ಟಿಯುಂ
ಕೈಗೊಟ್ಟುಕರೆದು ತಂದೊಳಗಣ್ಗೆ ಪೊಗಿಸಲೊಡನಾಪ್ರುಸ್ಥಮುಂ ಲಿಂಗಮೆಂದೇ
ಭಾವಿಸಿ—

ವಂಶಸ್ಥವೃತ್ತ ॥ ನಮುಶ್ಶಿವಾಯಾದ್ರಿಸುತಾಪ್ರಿಯಾಯತೆ । ನಮೋ
ಸ್ತುಕಾಂತಾಯಭವಾಯತೆಯುಸು ॥ ತ್ತಮುಂದಸದ್ಭಕ್ತಿಪರಂಪಣೆಗ್ವೆರಂ ।
ಪ್ರಮೋದದಿಂಕೀರ್ತಿಸಿಸ್ವೈಯುನಿಕ್ಕಿದಂ .... ॥ ೧೦ ॥

ಕಂ ॥ ಆವಣಿಜನಸದ್ಭಕ್ತಿಯ । ಭಾವದಿನದು ಲಿಂಗಮಾಯ್ತು
ಬಳ್ಳಂ ಮುದದಿಂ ॥ ಸೇವಿಸುತಾತಂ ಮರಳ್ದವ । ನಾಪಾಸದೆ ಭುಂಜಿ
ಸಿರ್ದನಿಪ್ಪಂನೆವರಂ .... ॥ ೧೧ ॥

ವ ॥ ಆಗಳಾತನ ಬಂಧುಗಳ್ಬಳಸಿ ನೆರೆದಿರ್ಪುದುಮುವಂದಿರೋಳ್
ಮೈದುನನಾದೋರ್ವನಾ ಶೆಟ್ಟಿಯುಂ ನೋಡಿ—

ಕಂ ॥ ಭಾವನನೇಮುಂ ಲೇಸಾ । ಯ್ತಾವಿಧದಿಂ ನಟ್ಟಬಳ್ಳಮಂ
ಲಿಂಗಮೆನು ॥ ತ್ತೇವೋವೊ ಸೇವಿಸುತೆ ಬಂ । ದಾವಾಸದೊಳುಂಡ
ನೆಂದುಮಿಗೆನಗುತಾಗಳ್ .... ॥ ೧೨ ॥

ಕಂ ॥ ಆಳಿಯಲ್ವೇಳ್ಕಂಧಾಸ್ಯಮ । ನಿಳೆಯೊಳ್ನಟ್ಟಿರ್ದಬಳ್ಳಮಂ
ತಂನಿಮೆನು ॥ ತ್ತಾಳದರನೀಕ್ಷಿಸುತೆನೆ ಬ । ಲ್ಮಳಸೇರಿದುದಲ್ಲಿ ಮಲ್ಲಿ
ಶೆಟ್ಟಿಯುಮನದೋಳ್ .... ॥ ೧೩ ॥

ಕಂ ॥ ಎಲೆಮೂಢ ಲಿಂಗಮಂ ನಿಂ । ಪೊಲೆಮಾತಿಂ ಬಳ್ಳಮೆಂಬು
ದಕ್ಕುಮೆ ಸೊರ್ಕಿಂ ॥ ದುಲಿಯದಿರೆಂದವನೊಡವರೆ । ಚಲದಿಂಬಂದ
ಭವನೆಂಬುದಂ ಕಾಣಿಸಿದಂ .... ॥ ೧೪ ॥

ವ || ಆಗಳಾದೇವರಂ ಬಳ್ಳಂಬಳ್ಳದಾಕೃತಿಯ ಲಿಂಗಮಾದುದರ್ಕೆ ವಿಸ್ಮಯಂಬಟ್ಟು ಘಾಮಂ ಮಹಾನುಭಾವನೆಂದು ಪೊಗಳ್ದಿರಗೆ ತದ್ಬಂಧುಜನಮುಂ ಮಣಿದಾಮಲ್ಲಿಕೆಟ್ಟಯುಂ ಗುರುಭಾವದಿಂ ಭಜಿಸುತ್ತಮಿರ್ದುದಾಪ್ರಸ್ಥಲಿಂಗಮಿಾಗಳುಂ ಬಳ್ಳೇಶ್ವರಾಭಿದಾನದಿಂದಿರ್ದ್ದಪುದಂತುಮಲ್ಲದೆಯುಂ,

ಮ || ವೃ || ಧರಣೀಭಾಗದಿಕಾಟಕೂಟನೆಸಿಪೂರ್ವಂ ಗೊಲ್ಲನೆ
ತ್ತಂದ ಸಾ | ದರಮೊಂದಾವಿನಪಿಳ್ಳೆಯುಂ ಮಿಸುಪಲಿಂಗಂ ತಾನಿದಿಂತೆಂದು
ಸೈ || ತಿರಿಸುತ್ತಂ ದೃಢಭಾವದಿಂಕರೆದು ಪಾಲಂಮೇಲೆ ಕುಂಭಂಗಳಂ |
ಸುರಿಯುತ್ತಂ ನಡೆನೋಡುತಂ ಕುಣಿಯುತಂಕೂರ್ತ್ತುಪ್ಪುತಿರ್ಪನ್ನೆಗಂ ||೧೫||

ಮ || ಸ್ರ || ಪಿತನಾಗಳ್ ಬಂದು ಪಾಲಂ ಬರಿದೆ ಸುರಿದು ಪಾಳ್ಮಾ
ಡುತಿರ್ದಪ್ಪನೀದು | ರ್ಮತಿಪುತ್ರಂ ಪಿಳ್ಳೆಗೆಂದಾದೊರ್ಡೆದು ಜರೆಯುತಲ್ಲಿಂಗ
ಮುಂ ಕಂಡು ಕೋಪಾ || ವೃತಚಿತ್ತಂ ಬೇಗದಿಂ ಕೈಗೊಡಲಿಯನಘಟಂದೆತ್ತಿ
ಪಾಯ್ದುಕ್ಕಿದಂ ತ | ತ್ಪಿಕನಂ ದೊಪ್ಪೆಂದು ಮುಂಡಂಕೆಡೆಯುತಲಿಕರಂಬೀ
ಳ್ವಸಂಕಾಟಕೋಟಿಂ .... ||೧೬||

ಮ || ಪಿತನಂ ಕೋಪಕೃತಾಪರಾಧಯುತನಂ ಕೊಂದಿಕ್ಕಲೆಂದಾಮ
ಹಾ | ಮತಿಕೈಕೊಂಡು ಕುಠಾರಮುಂ ಜಡಿಯೆ ಕೈಲಾಸಸ್ಫುರದ್ವಾರಕ || ಲ್ಪಿ
ತಸಾರಾರ್ಗಳಮುಗ್ಗಳಂಶಿಥಿಲಮಾಯ್ತಾರ್ದೆತ್ತೆಪಿಂದಗ್ಗೆಪೋ | ಯ್ತು ತುಟಾ
ಟೋಪದಿಪ್ರೊಯ್ಯೆಕಳ್ಳನೆಕವಾಟಂಬಿರ್ಚಿತೇಂಚಿತ್ರಮೋ || ೧೭ ||

ಕಂ || ಹರಭಕ್ತಕಾಟಕೋಟಿ | ಸ್ಫುರಿತಕರಸ್ಪರ್ಶ ಪೂತಪರಶು
ಪ್ರಹತಂ || ಪರಿದೋಡೆ ಪಾಪತತಿ ನಿ | ರ್ಜರಪುರಮುಂ ಪೊಕ್ಕುಮಿಕ್ಕು
ಸುಖದಿಂದಿರ್ದಂ .... || ೧೮ ||

ತರಳವೃತ್ತ || ಕುರಿಯಪಿಳ್ಳೆಯನಿಂತುಭಾವಿಸಿ ಲಿಂಗಮಂ ಮಿಗೆ
ಮಾಡಿದಂ | ಮೆರೆಯೆತನ್ನನುಮಾಧವಂ ಕಲಿಕಾಟಕೋಟಿಸಿಕಾಗ್ರದೋಳ್ ||
ಮಿರುಪಜೋಳದ ರಾಸಿಯುಂಘಸಲಿಂಗಮೊಂದೆನೆ ಮೈಮೆಕ | ಣ್ದೆರೆಯೆದಾ
ಹುರೆಪುರವಾಶ್ರಿತಬೊಮ್ಮದೇವನೊಡರ್ಚಿದಂ .... ||೧೯||

ಮಾಲಿನೀವೃತ್ತ || ಅವರತೆರದಿನೀಗಳಾಳ್ದ ಪಾತ್ರಾರ್ಕಮುಂಶಾಂ | ಭವ
ತರಶಿವಲಿಂಗಂಗೆಯ್ದುನೀಚೋರರಂದು || ಭರ್ವಿಗಳೆನಿಪರಂದಲ್ಪಭಕ್ತರಂಮಾ
ಡಿದಂಮೋ | ನವಸಿಯೊಳೆವೃಷೇಂದ್ರಂಭಕ್ತಿಸೌಭಾಗ್ಯಸಾಂದ್ರಂ || ೨೦ ||

ಕಂ || ಶರಣರಸದ್ಭಾವನೆ ತಂ | ಕರನಿರ್ಪಡೆಯುಲ್ತಿಪರನುಭಕ್ತಾಳಿ
ಗಿದೇಂ || ಪಿರಿದೆಬಸನಂಗೆನಿಜಮಿದು | ಪರಿಕಿಪೊಡೆಂದಲ್ಲಿ ಭಕ್ತರುತ್ಸ
ವನಾಂತರ್ .... || ೨೧ ||

ವ || ಇಂತು ಭಕ್ತಿಪ್ರಭಾವಮಂ ತಿಳಿದಾನಂದಿಪ ಗಣಂಗಳ್ವೆರಸುವಿತ
ರಣಜಿತಪಾರಿಜಾತನೊಪ್ಪುತ್ತಮಿರ್ಪೊಂದುದಿವಸಮುದಯಸಮಯದೊಳ್
ಲಿಂಗಸಮರ್ಪಿತ ತೈಲಾಭ್ಯಂಗಮನೆಸಗುವಾಗ ಮಹೇಶ್ವರನೋರ್ವಂ ಬಂದು
ಲಿಂಗಾರ್ಚನೆಯುರಂಗವಲ್ಲಿಗೆ ಪತ್ತು ಖಂಡುಗ ಮುತ್ತುಗಳನರ್ಥಿಸಿದಪೆನೀವು
ದೆಂದು ಬೇಡಲೊಡಂ—

ಉ || ವೃ || ಜೋಳದರಾಸಿಯಂ ಶಿವಪಸಾಯದನಿರ್ಮಳದಿವ್ಯದೃ
ಷ್ಟಿಯಿಂ | ಮೇಳಿಸಿನೋಡಿ ಪೊಚ್ಚಪೊಸಮುತ್ತಿನರಾಸಿಯದಾಗೆಭಕ್ತರಾಂ |
ದೋಳತಮಸ್ತಕರ್ಪೂರಗಳೆಕೊಳ್ವುದುದೇವಯಥೇಷ್ಟಮೆಂದುಮು | ಕ್ತಾಳಿ
ಯರಾಸಿಯಂಮಣಿದವಂಗದ ನರ್ಪಿಸಿದಂ ವೃಷಾಧಿಪಂ .... ||೨೨||

ಚ || ನೊರಟಿದಬಂಕನೆಂಬಶರಣಂ ಶಿವಪೂಜಕನೋರ್ವನೆಯ್ದೆ ನ |
ಟ್ಟಿರುಳೊಳೆತಂನಗೇಹಕವನಂಘ್ರಿಗೆ ವಂದಿಸಿ ಲಿಂಗಪೂಜೆಯಂ || ವಿರಚಿಪು
ದ್ಯೆಯ್ಯುನೀವೆನೆ ಕೊರಂಟನಬಿಲ್ವದಳಂಗಳಂ ಪ್ರಸೂ | ತಿರಹಿತಗೋಪಯೋ
ರಸನುನೀಯುಭವಾರ್ಚನೆಗೆಂದನಾಚರಂ .... ||೨೩||

ವ || ಎನೆ ಮಹಾಪ್ರಸಾದಮೆಂದು ಭೋಂಕನೆ ಬಂಕಿದೇವನಾಭಕ್ತ
ನಡಿದಾವರೆಯಂಕರ್ಚಿ ತತ್ತೀರ್ಥೋದಕಮಂ ಮನೆಯಮುಂದಣ ಬರಡಾ
ಕಳನುದ್ದಂಕಟ್ಟಿರ್ದ ಗುಣಯುತಸ್ಥಾಣುಗೆಂತೆಳೆಯೇ—.

ಕಂ || ಕರುವಿಲ್ಲದಪಶುಪಾಲಂ | ಕರೆದುದಳುಬ್ಬಂಕೊರಂಟುಬಿಲ್ವ
ದಳಂಗ || ಳ್ತುರುಳೆಚಿಗುರ್ತಪನೆರಡಂ | ನೆರೆಕೊಟ್ಟಾಪ್ರತಿಗೆ ಪೂಜೆ
ಗೈಸಿದನಾಗಳ್ .... || ೨೪ ||

ಕಂ ॥ ಎಂದೊರೆವಕಥೆಯನಾಲಿಪ । ಪಿಂದಿಲ್ಲಿವೃಷೇಂದ್ರನೆರೆದ ಭಕ್ತಂಗೆನುಸಂ ॥ ಸಂದಿರೆಜೋಳದರಾಸಿಯು । ನಂದದಮುತ್ತುಗಳ ರಾಸಿಯುಂ ನೆಗಳ್ದಿರ್ಕ್ಕುಂ .... ॥ ೨೫ ॥

ವ ॥ ಇಂತಪ್ಪಮಹಿಮೆಯುಂ ಕಣ್ಣಾರೆಕಂಡೆವೆಂದು ಸರ್ವರೂ ಪೊಗಳುತ್ತಮಿರೆ ನೆಗಳ್ತೆವೆತ್ತುಮುತ್ತಂ ಭಕ್ತರ್ಗೆ ಚಿತ್ರಮಾಗೆ ಬಸವಂ ವಿತರಣ ವಿಳಾಸಮುಂ ಮೆರೆಯುತ್ತಮಿರೆ ಸಂಗಮನಾಥಂ ಜಂಗಮರೂಪಮುಂ ತಳೆದ ಥಿಗಪಕ್ತಿಯನೇಳ್ತಂಮಸಿಂದು—

ಕಂ ॥ ಅತಿದಾನಿಬಸವರಾಜನ । ನಕಸುಹರಂಕಾಲ್ಗೆ ಕಣ್ಣನೆರೆದನೆ ಪಣೆಗೆ ॥ ದ್ಯುತನಯನಮನೆರೆದಂಘನ । ವಿತರಣೆಯುಂಬೆಳ್ಪಸಲ್ಪವಸ್ತುವ ನೆರೆಯುಂ .... ॥ ೨೬ ॥

ವ ॥ ಆಗಳ್ ॥ ಕಂ ॥ ಮಾಯದವಿದೇವಸಿಮ್ಮಯ । ಮಾಯೆಯ ನಾಂಬಳ್ಕಿಸಮುನಿನಗಂಜೆನೆನು ॥ ಕಾತ್ಯಯಕಿಯವದನಕಮಲ । ಚ್ಛಾಯೆಯ ಕಸ್ತಡಿಯನೆತ್ತಿ ಪಿಡಿದಂ ಬಸವಂ .... ॥ ೨೭ ॥

ಉತ್ಸಾಹವೃತ್ತ ॥ ಅಲ್ಲಿಕಂಡುಭಾಳನೇತ್ರಮುಂ ಮನೋಜಮರ್ದನಂ । ಗೆಲ್ಲವಾರಿ ಸೋಲ್ತುನಾಣ್ಚು ತೋಡಿಪೋಗುತಿರ್ದನಂ ॥ ಸಲ್ಲದೋಡುವಂಗಮಿಂತು ಸಂಗಮೇಶಪಂದೆನಿ । ಲ್ಲಿಲ್ಲದೇಕೆಬೇಡಬೇಳ್ಪ ವಸ್ತುದಾನದಿತ್ತಪೇಂ .... ॥ ೨೮ ॥

ವ ॥ ಎಂದು ಬಸವಂ ಮುಟ್ಟ ಮೂದಲಿಸಿ ನಿಲಿಸಿ—

ಉ ॥ ವೃ ॥ ಚೋಳನವಾಳ್ಕೆಯಿಂಕನಕವೃಷ್ಟಿಯನರ್ಥಿಸಿಸ್ತೆಯ ನಂಬಿಪೋ । ಉಸ್ಸಾಳೆಯಮಂದಿರಕ್ಕೆ ನಡೆಪಾಡಿಷೊಾಂ ಶಿರಿಯಾಳನಂದದಿಂ॥ ಬಾಲನಜೀವನಮುಂ ಬಯಸೆ ನಕ್ಷಯಭಾಗ್ಯಮನೊಲ್ಮೆಬೇಡೆ ನ । ಭಾಳಕ ದಾಸನಂತೆಪರೆಯಕ್ಕೆಳಸೇಂತಿವಕುಂಡನಂತೆವೋಲ್ .... ॥ ೨೯ ॥

ಮ ॥ ಶಿವಸೇವೀವಸುರೇಂದ್ರಭೋಗಸುಖಮೋಕ್ಷಪ್ರಾಪ್ತಿಗಳ್ಮಾತ್ಗೆನಿಂ । ನವರೊಳ್ಪಂತುಳುಪಿದ ಶೇಷವೆಸಗುಂಟೆಂದೆಂದುಮಾ ಶೇಷಮುಂ ॥ ಸಪಿದಾನಂದಮನಾಳ್ಪವಿಃಕ್ಯಸುಖಮೊಂದಂಬಾಳ್ತಿಗೆಯ್ಯಂ ಕೃಪಾ । ರ್ಣವ ಹಿಯುಕ್ತಮನುನುಂತನಂ ಬಗೆವನೇಪೇಳಾವನಾಳಾಂಬುವಂ ॥ ೩೦ ॥

ವ ॥ ಅಂತುಮಲ್ಲದೆಯುಂ ॥ ಮ ॥ ವೃ ॥ ಗಿರಿಜಾವಲ್ಲಭನಿಮ್ಮ ಮಜ್ಜನದಭೃತ್ಯಂ ಗೊಲ್ಲಳಂ ಕಾಲನಂ । ಹರಕೇಳ್ವೊವಱಿಗೆಂಗಡಾನಿಮಗೆ ಭಾಸ್ವತ್ಪುಷ್ಪದತ್ತಂ ಕೃಪಾ ॥ ಕರ ಪೂಮಾಲೆಯನಾಗಿಪಳ್ನಿನುಗೆತಾಂಱೀ ಚಲ್ವೆಕಣ್ಣಪ್ಪನೀ । ಶ್ವತ ನಿಂಮುಳ್ಕರಪೂಜಕಂ ನಿಮಗೆಖಂಡಜ್ಯೋತಿಯುಂ ಭಕ್ತಿಯಿಂ .... ॥ ೩೧ ॥

ಕಂ ॥ ಸಲೆಬೆಳಗುವನಂದೀಪದ । ಕಲಿನಾಥಂ ದೇವನಿಮ್ಮದೀವಟಿಗಂ ನ್ಯೈ ॥ ಗಲಿಗಡವಲನಂಬಿ ಮಹಾ । ಬಲನಿಮಗೊಳ್ಮತ್ತಿನಾರತಿಯನೊಲವಿಂದಂ .... ॥ ೩೨ ॥

ಮ ॥ ಸ್ರ ॥ ವೃ ॥ ಪಾಡುತ್ತಂಸೋವಿದೇವಂ ಬೆಳಗುವನನಿಶಂ ಜ್ಞಾನಸಂಬಂಧಿನಿಮ್ಮಂ । ಸೋಡುತ್ತಂಭೂತಿಯಂನೀಡುತೆಪರಸುವವನ್ನವ್ಯಗಂಧಾನುಲೇಪಂ ॥ ಮಾಡುತ್ತಂ ನಿಮ್ಮಚಿತ್ತಂ ಬಡೆವವನಣುಮೂರ್ತೀಶ್ವರಂ ಧೂಪಮುಂ ಕೊಂ । ಡಾಡುತ್ತಂ ಮಾಚಿದೇವಂ ನಿಮಗೆಸಲಿಪವಂ ಘಂಟಿಕಾನಾದಕಾರಂ .... ॥ ೩೩ ॥

ಕಂ ॥ ಹರನಿಮಗೋಹಿಲನೊಲವಿಂ । ದರಿಪಾಲಂಭಕ್ತಿಸೆಯ್ದುವತಿಗೊಡುವವನ ॥ ಚ್ಚರಿಮಿಗೆಲೀಚಂಣಕ । ಪೂರ್ಣವೀಳೆದುಮಿತ್ತುನಿಮ್ಮನೋಲಗಿಸುವವಂ .... ॥ ೩೪ ॥

ಶಾ ॥ ವೃ ॥ ಬಂಕಂಪಾಲ್ಗರೆನಂಶಶಾಂಕಧರಪಾಲಂಕಾಸಿ ಕಾದಂಕೆವಾ । ಲಂಕೋಳೊರೆಳೆನೆಣ್ಣರಂತಣೆಪವಳ್ನಿಮ್ಮಂ ಮಹಾದೇವನಿ ॥ ಶ್ಯಂಕಂಶಂಕರದಾಸಯುಂ ನಿಮಗೆಕಟ್ಬಾಳ್ ಮಂಚಣಂ ಕೂರ್ಪಿನಾ । ಲೆಂಕಂಚಂಗಳೆಪಾಕಕತ್ರಿಶಿರಿಯಾಳಂ ಸೂಪಕಾರೋತ್ತಮಂ ॥ ೩೫ ॥

ಶಾ ॥ ಪೊನ್ನೈಯ್ಯಂ ನಿಮಗೊಲ್ದುಗಿಂಡಿವಿಡಿವಾತಂ ಮಾರಯಂ ಕಾಷ್ಠವಾ । ಹಂನೀರಾಜನಧಾತ್ರಿದೇವನಿಮಗಾಸೋಮವ್ವೆಬೋಳೋರ್ವಿಪಾ ॥ ಲಂನಣ್ಪಿಂಪನಿಯಾಣಮುಂಗಡಣೆಪಾತಂಪಾಕಸುಸ್ವಾದುಮಂ । ಚನ್ನೈಯ್ಯಂತಿಳಿನಾತನೋಳುಣೆಸನೀವಳ್ವೀರಬೋಳವ್ವೆಕೇಳ್ ॥ ೩೬ ॥

ಮ || ಸ್ರ || ಬಂಕಯ್ಯಂ ಸುಂಕಿಗಂ ಕೇಳ್ನ ಮುಗಿರುಳ ತಳಾರಂ ಗಡಾ
ತ್ರೈಪರಾತ್ರೀ | ಶಂಕಯ್ಯಂ ಶಂಕರೈಯುಂ ಸರಸಮಧುರರಾಗಂಗಳಂ ಪಾಡು
ಪಾತ್ರಂ || ಮುಂಕೊಂಡೋರಂತೆ ನಿಮ್ಮಂ ನಗಿಪನೆ ಕಲಿಕಂಪಂ ಭವತ್ಪಾತಕಂ
ನಿ | ಶ್ಶಂಕಂ ವಾಗೀಶ್ವರಂ ವೈಣಿಕನ ಸಮುಳಗುಣಂ ಮಾದಿರಾಜಾರ್ಯನಲ್ತೆ ||೩೭||

ಮಲ್ಲಿ || ಮಲ್ಲಿಕಾರ್ಜುನ ಪಂಡಿತಂ ಕವಿ ಸಾಮವೇದಿ ಪುರೋಹಿತಂ |
ಮಲ್ಲಿಶೆಟ್ಟಿಯುಮಿಮ್ಮ ಕೊಟ್ಟಿಗೆಯಾತನಂಕಿತ ಮಾಲಿಯುಂ || ನಿಲ್ಲದೋದುವ
ನುದ್ಭಟಂ ಕಲಿಚಂಡಯುಂ ಪಶುಪಾಲಕಂ | ಕಲ್ಲಯುಂ ಘನಗಾರುಡಂ ವೃಗೆ
ಯಾಚರಂ ಪಟುಜೋಮಯುಂ .... || ೩೮ ||

ಕಂ || ನಯಯುತ ನಾಟ್ಯವಮಿತ್ರಂ | ಡಿಯೆ ಬೆಜ್ಜಂ ನಿಮಗೆ ನಂಬಿ
ಯೊಡನಾಡಿಯುಮಾ || ಪ್ರಿಯ ದೇವರದಾಸಿನಿಯುಂ | ನಿಯತಂ ಬಹು
ಧಾನ್ಯಕೋಶಪಾಲಕನಲ್ತೆ .... || ೩೯ ||

ಮ || ಸ್ರ || ವೃ || ಗಣನಾಥಂ ಸುಪ್ರಧಾನಂ ನಿನಗಧಿಕ ಹಿತಂ
ಭೋಗೆಯುಂ ಕೇಶಿರಾಜಂ | ಗುಣಕಂಗೇಹಕ್ಕೆ ಸಮ್ಮಾರ್ಜನೆಯುನೆ ನಗುವಳ್ನ
ಬ್ಬಿ ಪೌರಾಣಿಕಂ ನ || ದ್ಗುಣಧಾಮುಂ ಮಾಯಿದೇವಂ ಮತಿಯುತ ಜಗದೇವಂ
ಭವಂ ದಂಡನಾಥಂ | ರಣಮೋಳ್ಗ್ಬಲ್ಪಂ ಕಮೇಣಾಧಿಪತಿ ಪಡೆವಳಂ ಚೇರ
ಮಂ ಚಂದ್ರಮೌಳೀ .... ||೪೦||

ಮ || ನೆಗಳ್ದಂ ಮುನ್ನೆಯಿತಾನು ರುದ್ರಪಶುಪಂ ತ್ವನ್ಮೈತ್ರ್ಯ ಹೃನ್ಮಂತ್ರ
ಪಾ | ದಿಗಭೀರಂ ಮಲಯಾಧಿಪಂ ನಿನಗೆ ಸಾಮಂತಂ ಭವನ್ಮದ್ರಿಯುಂ ||
ಡಿಗೆಕಾರಂ ಗಡ ಕಿನ್ನರಂ ಮಡಿಯ ನೀನಂ ಮಾಚಯುಂ ನಿನ್ನ ಪೊ | ರ್ದಗೆಕಾರಂ
ಬಿಗೆ ರಾಮಯುಂ ಸುರಗಿಕಾರಂ ಚೌಡಯುಂ ಶಂಕರಾ .... ||೪೧||

ಚ || ಪರನಿನಗಲ್ಲಮಾಪ್ರಭುವೆ ಸತ್ಪ್ರಭು ಧೀರ ಹುಲಾಯುಧಂ ಭವ |
ಧ್ವರನಯಾಸೀಕ್ಷ ಕಂಕರುಳ ಕೇತಯ ನಂಕದ ನಂಪ್ರಸಾದಿಭಾ || ಸುರಮತಿ
ಬಿಬ್ಬಬಾಚವಿಭು ಕುಂಬರ ನಗ್ಗದ ಗುಂಡಯುಂ ಗುಣಾ | ಕರನುತ ಕಕ್ಕಯುಂ
ನಿನಗೆ ಯಾಮಿಕನಲ್ತೆ ಮನೋಜಭಂಜನಾ .... || ೪೨ ||

ಕಂ || ಆರೂರ ಚೊಕ್ಕನಾಥಂ | ನಾರಾಂತಕ ನಿನ್ನ ಸಹಣೆಯಿರಿವತ್ತ
ನೆಣಂ || ವಾರಣ ಶಿಕ್ಷಕನಮುಳಾ | ಚಾರಂ ಬಸವಾಭಿದಂ ಭವತ್ಕೃತಿ ದಾನಂ ||೪೩||

ಕಂ ॥ ವಿನಿಯೋಗಗೆರೆಮ್ಮಯಪುರಾ । ತನರಿಂತಿಂತಮದುರ್ದಮೆರೆಯ ನಿಂನರಸುತನ ॥ ಕ್ಕಿನಿತುಂಟೆ ಕೊರತೆಯಾನವ । ರನುಚರನೆನಗಾವವಸ್ತು ದುರ್ಲಭಮಭವಾ .... ॥ ೪೪ ॥

ಕಂ ॥ ಸ್ಮರಹರನಾಲ್ಕನೆಯಕ್ಷಿಯ । ನೆರೆಬೇಡಾರನೆಯಮೊಗಮ ನರ್ಥಿಸು ಶೋಭಾ ॥ ಕರಸನವಮಾಂಗಮುನಾದೊಡ । ಮಿರದಿತ್ತಪೆನೀಗ ಳಂಜೆನಿದಕೆಪುರಾರೀ .... ॥ ೪೫ ॥

ಕಂ ॥ ಭವವಪ್ಟಮೂರ್ತಿಗಳ್ಮಾ । ಧವವಿಧಿಮುಖರೊಗೆಯದಂದು ಮೆನಗಾಳ್ದಂನಿಂ ॥ ಭವದೀಯಭೃತ್ಯನಾಬೇ । ರೆವಿಚಾರಿವುದೇನೊಮದನ ಮದವಿಧ್ವಂಸೀ .... ॥ ೪೬ ॥

ವ ॥ ಎಂದು ವೃಷಭೇಂದ್ರಪೂಣ್ಕೆಯಿಂ ನುಡಿಯೆ ಸಂಗಮೇಶ್ವರಂ ಕೇಳ್ದು ಸದ್ಭಕ್ತಿಸುಧಾರಸಮಂ ಸವಿದಂತೆ ಸಂತುಷ್ಟನಾಗಿ ನಿರುಪಮದಯಾ ರಸವಿಸರವಿಲುಳಿತಕಟಾಕ್ಷದಿನಡರೆನೋಡಿ ಕಾರುಣ್ಯಮುಂನೀಡಿ ಪಿರಿದಾನಂದಿ ಸುತ್ತಮಿರೆಯಿರೇ—

ಮ ॥ ಸ್ರ ॥ ವೃ ॥ ಶಿವನಿಂತೆಳ್ತಂದುಭಾಳೇಕ್ಷಣಮನೆರೆಯೆತಾಂ ಕೊಟ್ಟು ತನ್ಮಾಯೆಯಂತೂ । ಳ್ದು ವಿಳಾಸಂಬೆತ್ತಸದ್ಭಕ್ತಿಯನಭವನನೋ ರಂತೆ ಗೆಲ್ದೊಪ್ಪಿದಂ ಶಾಂ ॥ ಭವಲೀಲಾಮೂರ್ತಿ ಕೀರ್ತಿದ್ಯುತಿಜಿತಹಿಮ ಕರ್ಪೂರ ಪಾಟೀರ ದುಗ್ಧಾ । ರ್ಣವತಾರಾಹೀರ ಹಾರಾಮರ ಕರಿಹರಿ ಶಯನ್ಯಾಹಿಚಂದ್ರಂ ವೃಷೇಂದ್ರಂ .... ॥ ೪೭ ॥

ತರಳವೃತ್ತಂ ॥ ದರಸ್ಮಿತವಿರಾಜಿತ ಸರೋರುಹವರಾನನೆಸುರೇಶ್ವರ ವಿರಿಂಚಿವಿನುತೆ । ಪುರತ್ರಯಹರಪ್ರಿಯೆ ನಿರಂತರಗುರುಸ್ತನಭರಾನ್ವಿತೆಪುರಾ ತನನುತೆ ॥ ಮುರಾಂತಕಪುರೋಗಸುವರಪ್ರದೆ ಸುರಕ್ಷಿತಚರಾಚರೆ ಪರಾ ಕ್ಷರಮಯೆ । ನಿರಾಮಯೆ ನಿರಾಕುಳೆ ನಿರರ್ಗಳೆ ನಿರಂಜನೆ ಧರಾಧರಸುತೆ ಜಯಜಯಾ .... ॥ ೪೮ ॥

ಗದ್ಯ ॥ ಇದುವಿನಮದಖಿಳ ಸುರಾಸುರೇಂದ್ರ ಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ ಪರಮ

ಶಿವಲಿಂಗಪಾದಾರವಿಂದ ಪರಾಗಭಸಿತಭಾಸುರ ಲಲಾಟಪಟ್ಟ ಸರಸಜನಮಾನಿತೋಭಯ ಕವಿತಾವಿಶಾರದ ಶ್ರೀಷಡಕ್ಷರದೇವಭಕ್ತಿ ವಿರಚಿತ ಶ್ರೀಮದ್ಬಸವರಾಜವಿಜಯ ಮಹಾಪುರಾಣದೊಳ್ ಸಂಗಮೇಶ್ವರ ಲಲಾಟೇಕ್ಷಣದಾನಕಥನಂ ನಾಮಷಷ್ಠಮಾಶ್ವಾಸಂ ಸಮಾಪ್ತಂ.

ಅಂತು ಆಶ್ವಾಸ ೬ ಕ್ಕಂ ಪದನು ೫೦೦ ಕ್ಕಂ ಮಂಗಳಂ.

೭ನೇ ಆಶ್ವಾಸ.

ಗೋಪೀಕಥೆ.

ನಾಂದಿ ॥ ಲಲಿತವೃತ್ತ ॥ ರಾಘವವಿಬೋಧಕಮಹಾಘಟಿಘನಸ್ತುತಯಶೋಘಟಿತದಿಕ್ತಟಸುಧೀಘಟಜಸ್ವೈನೋ । ಮಾಘಮುದಸಂಸ್ಮೃತಿಸಿರಾಘ ಕರುಣಾಮೃತ ರಸೌಘಪರಿಪೂರ್ಣದೃಗಮೋಘಧನದಾತಾ ॥ ಮೇಘರುಚಿಕಂಧರದಿಲಾಘವಚರಿತ್ರ ಸುಕಲಾಘಟನಧೀರ ಮುನಿಪೌಘಕೃತಸಿಶ್ಯ । ಶ್ಲಾಘಭವ ಸಂಚಯಘನಾಘನಸಮೀರ ಪೊರೆಭೂಘಟಕುಲಾಲ ವಿಜಿತಾಘ ಬಸವೇಶಾ .... ॥ ೭ ॥

ಕಂ ॥ ಶ್ರೀಹೈಮವತೀಹೃದಯ ಕು । ತೂಹಲಕರದಿವ್ಯರೂಪನನ್ವಯನಭವಂ ॥ ಮೋಹಾಂಧಕಾರರವಿನೃಪ । ವಾಹಂ ಪೊರೆಗೆಮ್ಮ ನಾವಗಂ ಶಿವಲಿಂಗಂ .... ॥ ೧ ॥

ಮ ॥ ಸ್ರ ॥ ವೃ ॥ ಮಣಿಪೀಠಾರೂಢನುದ್ಯಚ್ಚಮರಚಯಸಮಾಸೇವ್ಯಮಾನಂ ವರಸ್ತ್ರೀ । ಕ್ವಣದಂಚತ್ಕಂಕಣಕ್ವಾಣಯುತಕರತಳಾಂದೋಳಿತೋಚ್ಚಾರಂ ಭೂ ॥ ಷಣಕಾಂತಿಪ್ರಾಂಜುಳಾಂಗಂ ಬುಧನುತನತುಳೋದ್ದಾಮಸಾಮಂತಭೂಭೃ । ದ್ಗಣಕೋಟೀರಾಂಶುನೀರಾಜಿತನತುಳಕಳಾಮಂಜುಳಂ ಬಿಜ್ಜಳೇಂದ್ರಂ .... ॥೨॥

ಕಂ ॥ ಓಲಗದೊಳೊಪ್ಪುತಿರೆತ । ದ್ವಾಲಲನಾಘನಸಭಾಸರೋನಿಧಿಹಂಸಂ ॥ ಲೀಲೆಯನೆಸದಿರ್ದನುಮಾ । ಲೋಲಂ ಸದ್ಭಕ್ತಪುಂಗವಂ ಬಸವೇಶಂ .... ॥ ೩ ॥

ವ || ಅಂತೆಸೆಯುತ್ತಮಿರ್ದು || ಕಂ || ಅರಸಂನಡೆನೋಡುತ್ತಿರೆ | ಕರಯುಗಮಂನೆಗಪಿಬಸವನಾಕಸ್ಮಿಕದಿಂ || ತರುಣಿಯುಗದೊಗದುನಿಲ್ಲೆಂ| ದುರವಣಿಸುತ್ತಿತ್ತಿಕಂಡುನಕ್ಕನಿಳೀಶಂ .... || ೪ ||

ವ|| ಅಂತು ಸಗುತ್ತಿರ್ದರಿದೇಂ ವಿಸ್ಮಯಂಬಟ್ಟನಿನಿತು ಭಸಿತವನಿಟ್ಟ ವಂಗೆ ಬೆಟ್ಟದನಿತುಮುರುಳ್ತನಮೆಂಬುದು ನಿನ್ನೊಳ್ಕಾಣಲಾಯ್ತು ಬಸವಕರ ಯುಗಳಮಂನೆಗಪಿಸಡಗರಿಸಿಪಿಡಿದುದದೇನೆಂದುತನ್ನರೇಂದ್ರಂಕೇಳಲೊಡನೇ

ಕಂ || ಉಸರಲ್ಕಾಗದುನಿಜಗುಣ | ವಿಸರಮನುಸುರದೊಡೆ ನಗುವು ದೀಸಭೆಯನುತಂ || ಬೆಸಗೊಂಡರಸಂಗೆಂದಂ | ಬಸವಂಕೇಳ್ ನೃಪತಿ ನಿನ್ನಪಟ್ಟಣದೆಡೆಯೊಳ್ .... || ೫ ||

ಕಂ || ಪರಮತ್ರಿಪುರಾಂತಕಮಂ| ದಿರಕ್ಕೆ ಪೂರ್ವದೊಳಿಮೆರೆವುದರಿ ಗಾವುದದೋಳ್ || ಸುರುಚಿರಕಪಿಲೇಶ್ವರನೆಂ | ಬುರುಲಿಂಗಂ ಮೇಣ ದಕ್ಕೆ ತಾಪಸನೋರ್ವಂ .... ||೬||

ಚ || ವೃ || ಅಮೃತಘಟೀಸಹಸ್ರದಭಿಷೇಕಮನಾಗಿಸೆಭಕ್ತಿಯಿಂದೆ ತ | ದ್ವಿಮಳಸುಧಾರಸಂಪರಿದುಕೋಳ್ಗಿಸರೇಳ್ದರೆಬೀದಿಯಲ್ಲಿ ಗೋ || ಪ ಮಹಿಳೆತಕ್ರವಿಕ್ರಯಕೆತಾನೆಬರುತ್ತಿರೆಪೇರೆಜಾರಿಕ | ರ್ದಮುದಿನಿಜಾಂಘ್ರಿ ಬೀಳ್ವಪಥದೊಳ್ಬಸವಾಯನುತೆನ್ನನಾಮಮಂ .... || ೭ ||

ಕಂ || ಪಿಡಿದತಿದೈನ್ಯದಿನೆನ್ನಂ | ಪಿಡಿದೆತ್ತೆನೆತಕ್ರಭಾಂಡಮುರುಳದ ಮುನ್ನಂ || ಪಿಡಿದೆತ್ತಿದೆನಾಕೆಯನೆನೆ | ಕಡುಚೋದ್ಯಂಬಟ್ಟು ನೃಪತಿ ಬರಿಸಿದನವಳಂ .... || ೮ ||

ಛಂದೋವೃತ್ತ || ಪಂಕಸಂಕಲಿತವಾಮಕರಾಬ್ಜಂತಕ್ರಘಟಾಂಚಿತ ಮಂಸಕಂ | ಸಂಕದೊಲೆವಜಲಪಂಕಕಣಂತಳ್ತಂಚಿನಚೇಲಮರಳ್ಗಳಂ || ನೂಂಕಿಬಿಟ್ಟಮುಡಿಘರ್ಮಜಲಾದ್ರಂಭಾಳವಿಭೂತಿ ಶಿವಾಕ್ಷ ಮಾ | ಲಾಂಕಿ ತಂಗಳವೊಪ್ಪಿರೆಬಂದಳ್ಗೋಪವಧೂಟವಿಳಾಸದಿಂ .... || ೯ ||

ವ || ಅಂತೆಳ್ತಂದು ಬಸವಂಗಮರಸಂಗಂವಿನಯಾವನತೆಯಾಗಿನಿಂದು

ಕಂ || ಬೆಸಗೊಳೆಬಿಜ್ಜಳಭೂಪಂ | ಬಸವಂ ಮುನ್ನೊರೆದತೆರದಿ ನಿನಿಸುಳಿಯದೆ ಬೆ || ಕ್ಕಸಮೊದವೆಸಭೆಗೆಗೊಲ್ಲತಿ | ಯುಸುರ್ದಳ್ ತನ್ನೃ ಪತಿಗಾದಕಜ್ಜಮನಾಗಳ್ .... || ೧೦ ||

ವ || ಅಂತುಮಾಗೋಪಿ ಸವಿಸ್ತರಮುಸುರ್ದಲ್ಲಿ ತನಗಾದ ಕುರುವು ಗಳಂ ತೋರೆಕಂಡು—

ಕಂ || ಎಲೆಗೋಪಿಯನ್ನಸಭೆಯೊಳ್ । ನಲಸಿರ್ದಿದ್ದಂತೆ ನಿನ್ನ ಘಟಮುಂ ಬಸನಂ || ನಲಿದೆತ್ತಿದುದರಿದೆನೆಭೂ । ಲಲನೇಶಂಗೋಪಕಾಂತೆ ಮುಗುಳ್ದಂತೆಂದಳ್ .... || ೧೧ ||

ಮುಂನೋರ್ವನಭವಭಕ್ತಂ ಪೊಂನಾಂಬಲನಾಥನೆಂಬಪೆಸರಿಂದೆಸೆವಂ। ಪೊಂನಾಂಬಲಪುರದಲ್ಲಿಜ । ಗನ್ನುತಗುಣರತ್ನಭೂಷಣಂಕೇಳರಸಾ ||೧೨||

ಹರನಂಪೂಜಿಸುತಂಸಾ। ಸಿರಕುಸುಮಂಗಳನಜಸ್ರಮೊಪ್ಪುತ್ತಿರ್ದಾ॥ ವರಭಕ್ತಂಪೂದರಿಯು । ಲ್ಕರಂಡಮುಂಕೊಂಡುಪುಷ್ಪವನಕೇಳ್ತಂದಂ ||೧೩||

ಚ || ವೃ || ಸುರಭಿಯುಲರ್ಗಳಂಮಿಸುಪಸಂಪಗೆಪೂಗಳನಿಂಪುವೆತ್ತಸಾ । ದರಿಯುಲತಾಂತಮುಂ ವಿಚಕಿಲಪ್ರಸವಂಗಳನರ್ಕಪುಷ್ಪಮುಂ || ಸುರಚಿರಮಾಧವೀಕುಸುಮುಮುಂ ಕಮಲೋದ್ಗಮುಮಂ ಸುಗಂಧಬಂ । ಧುರಕುಮುದಪ್ರಸೂನಕುಲಮನ್ನವಬಿಲ್ವದಳಪ್ರತಾನಮುಂ || ೧೪ ||

ಮ || ಪದಪಿಂಕೊಯ್ದು ಕರಂಡಕಂಜಡಿಯೆ ತೀವುತ್ತಂತದಂತಾಳ್ದುತ । ಳ್ವದೆಬರ್ಪಲ್ಲಿ ನಿಜಾಂಘ್ರಿ ಜಾರೆಕೆಸರೊಳ್ಪೊಂನಾಥದೇವೇಶ ಶಂ || ಭುದಯಾವಾರ್ಧಿಚಿದಂಬರೇಶಪಿಡಿಯುಂದಾಭಕ್ತನಂ ಬೀಳದಂ । ದದೆ ಬಂದೆತ್ತಿದನೀಶನಾಗಿರಿಶನಂತೆನ್ನಂ ವೃಷಾಧೀಶ್ವರಂ .... || ೧೫ ||

ಕಂ || ಪಿಡಿದೆತ್ತಿದನಳಿದೀವಿದ । ಕೊಡನೊಡನೆಮಹಾಮಹಾತ್ಮನೀತನಪೆಂಪಂ || ನುಡಿಯುಲಸದಳಮುದೆಂತೆನೆ । ಪೊಡವಿಯೊಳೆ ಸುವರ್ಣವಲ್ಲಿಯುಂಬಾಪುರದೊಳ್ .... || ೧೬ ||

ಚ || ವೃ || ಕರಮೆಸೆದಿರ್ಪನೋರ್ವನನಘಂತನುಧರ್ಮವಿಮುಕ್ತಸುತ್ತರೋ । ತ್ತರಶಿವಯೋಗಘುರ್ವನಕಳಂಕಮಹಾಮತಿಸಿದ್ಧರಾಮನೆಂ || ಬುರುತರತಾಪಸಂ ಶತಸಹಸ್ರ ನವೀನವಿಶಾಲಯಂಗಳಂ । ವಿರಚಿಸಿಮಲ್ಲಿಕಾರ್ಜುನನನಲ್ಲಿಗೆತಂದಮಹತ್ವಮುಂಡಿತಂ .... || ೧೭ ||

ಕಂ ‖ ಪಣೆಗಣ್ಣಪರಮಗುಣನಿಧಿ । ಮಣಿಮಕುಟದ ಮಹಿಮ
ನಮಳಚಿನ್ಮಯನಿರ್ದಂ ‖ ಗಣಸಭೆಯೊಳೊರ್ಮೆಸುಮನೋ । ಗಣಸನ್ನುತ
ಸಿದ್ಧರಾಮನಭಿನವಭೀಮಂ .... ‖ ೧೮ ‖

ವ ‖ ಆಗಳಾಶಿವಯೋಗಿಲಲಾಮನಂ ಸಕಲಮಾಹೇಶ್ವರರ್ಕೊಂಡಾಡಿ

ಚ ‖ ವೃ ‖ ಅನುದಿನಮಿಾಶಲೋಕಕೆ ಮಹಾಶಿವಯೋಗದೊಳೈದಿ
ಮಾರಮ । ರ್ದನನಸಮಿಾಪಮೋಳ್ಪ್ರಮಥಗೋಷ್ಠಿಯೊಳೊಂದಿಶಿವಾನು
ಭಾವಸೇ ‖ ವನೆಯನೊಡರ್ಚಿಬರ್ಪಗಡನಿಂಬಿಡದಲ್ಲಿಯುಮಿಾವೃಷೇಂದ್ರ
ನಿ । ರ್ಪನೆನೆಲೆವೇಳ್ಪುದೆಂಮೊಡನೆಸುತ್ತಮುವರ್ಚಿಸಗೊಂಡರಾತನಂ ‖೧೯‖

ವ ‖ ಎಂದುವರ್ಚಿಸಗೊಳ್ವಿನಮುಂ ಕೈಲಾಸಕ್ಕೆಪೋಗಿ ಬಸವನಿರ್ಪುದಂ
ತಿಳಿದೆಳ್ತಂದು ನಿಂಮಡಿಗಾಂ ಬಿಂನವಿಪೆನೆಂದು ಸಿದ್ಧರಾಮಂನುಡಿದು—

ಮ ‖ ವೃ ‖ ನೆಗೆದಂತಕ್ಷಣದೋಳ್ದಿನೇಶರುಚಿಯಂತಳ್ವಿಯ್ಯೆಕಾ
ಯಾಂಶು ಕೈ । ಮಿಗೆತಾರಾಪಥದಲ್ಲಿಬರ್ಪ ದಿವಿಜರ್ ಸಂಪ್ರೀತಿಯಿಂ ಪೂಜೆ
ಗೈ ‖ ಯ್ಯೆಗಣಾನೀಕಮಭೀಕ್ಷಿಸುತ್ತೆ ಮುದದಿಂಕೊಂಡಾಡೆ ಕೈಲಾಸಮಂ ।
ಪುಗುತಂಪದ್ರಿಜೆಯಾಣನಿರ್ಪ್ಪಸಭೆಯಂ ಪೊಕ್ಕಂಮಹೋತ್ಸಾಹದಿಂ ‖೨೦‖

ವ ‖ ಅಂತುಪೊಕ್ಕು ನಿರೀಕ್ಷಿಸಾಗಳ್ ‖ ಮ ‖ ಸ್ರ ‖ ವೃ ‖ ಪಿಂಗಾ
ಕ್ಷಂ ಭರ್ಗನುಗ್ರಂಶಮನದಮನನಿಂದ್ರಾರಿಗೆಂಗೋತ್ತಮಾಂಗಂ । ತುಂಗಾಂ
ಗಂ ಧೂಮವರ್ಣಂ ವಿಧಿಮದಹರನುಗ್ರಾಕ್ಷನಾದಿತ್ಯವರ್ಣಂ ‖ ಭೃಂಗೀಶಂ
ನಾರಸಿಂಹಪ್ರಹರನತನು ಭಸ್ಮಾಂಗನಭ್ರಾಂಗಕಂ ಮಾ । ತಂಗಪ್ರಧ್ವಂಸಿ
ರುಂಡಾಭರಣನಚಲಮಾಲಾಧರಂ ಶಂಕುಕರ್ಣಂ .... ‖ ೨೧ ‖

ಮಲ್ಲಿ ‖ ದಂಡಪಾಣಿಮಹಾಬಲಂ ಮಖಮರ್ದನಂಶಿಖಿಲೋಚನಂ ।
ಪುಂಡರೀಕಹರಂಪುರಾರಿ ಶಿಖಂಡಿಧೂರ್ಜಟಿ ರೇಣುಕಂ ‖ ಚಂಡಬಾಹು
ಹುತಾಶಶಾಸನನದ್ರಿಪಾತನ ನಕ್ಷರಂ । ರುಂಡಮಾಲಿಕಪಾಲಿ ಶೂಲಧರಂ
ಧರಾಧರಕುಂಡಲಂ .... ‖ ೨೨ ‖

ಚ ‖ ವೃ ‖ ಶರಭಮುಖಂ ಮೃಗೇಂದ್ರವದನಂ ತುರಗಾಸ್ಯನಿಭಾ
ನನಂ ಮಹಾ । ಕಿರಿಲಪನಂ ತುರಂಗರಿಪುತುಂಡನಹೀಶ್ವರ ವಕ್ತ್ರನಭ್ರಮಾ‖

ವರರದಖಂಡನಂ ಕ್ಷಿತಿವಿಯತ್ತಳತಾಳನನಂತನಂಬುಜೋ । ದರರಥಪಕ್ಷ ಭಂಗನಿನನೇತ್ರನಿಪಾತನನಿಂದುಪೋಷಣಂ .... ॥ ೨೩ ॥

ಮ ॥ ವಿಕಟಾಂಗಂ ಬಡಬಾನನಂ ಡಮುರುಹಸ್ತಂ ಮೇಘನಾದಂ ಕರೋ । ಟಕರಂ ದಿಗ್ವರಭಂಜನಂ ವಿಜಯಕರ್ಣಂ ದೈತ್ಯವಿಧ್ವಂಸಿದಾ ॥ ರುಕನುಕ್ಷಧ್ವಜ ನಪ್ರಮೇಯನನಲಾಂಗಂ ನಾಗರಾಜಾಂಗುಲೀ । ಯಕ ನೂರ್ಧ್ವೇಕ್ಷಣನಂಧಕಾರಿ ವಿಷಭಕ್ಷಂ ದಕ್ಷಕೋಲಾಹಲಂ ॥೨೪॥

ಮ ॥ ಸ್ರ ॥ ಬಲಕಾಯಂ ವೀರರುದ್ರಂ ಸುಖಕರನಸಿತಗ್ರೀವನ ಭ್ರಾಳಕಂ ಬಿಂ । ಗಲನೀಶಾನಂ ಮಹಾನಾಟ್ಯಕನಭವನಜೇಯಂ ಗುಹಂ ವೀರಭದ್ರಂ ॥ ಜ್ವಲದಂಗಂ ಕ್ರೂರದಂಷ್ಟ್ರಂ ಕಲವಿಕರಣನಾತ್ಮೇಶ್ವರಂ ವಿಶ್ವಪಾಲಂ । ಕುಲಿಶಾಂಗಂ ಶಂಭುಮೃತ್ಯುಂಜಯನರುಣಜಟಂಧೀವರಂ ಕಾಲರುದ್ರಂ .... ॥ ೨೫ ॥

ವ ॥ ಇವರ್ಮೊದಲಾದಗಣಿತಗಣನಿವಹಮಲ್ಲದೆಯುಂ—

ಮ ॥ ಸ್ರ ॥ ಪ್ರ ॥ ಶುಕಸೂತಾಗಸ್ತ್ಯಕಣ್ವದ್ರುಹಿಣಜಗಣಭುಗ್ವಾಲಿ ಖ್ಯಪಾದಾತ್ರಿಮೈತ್ರೇ । ಯಕಭಾರದ್ವಾಜಶಾತಾತಪಕಪಿಲಕಣಾದಾನಿಲಾ ದಾಕ್ಷಪತ್ಕಾ ॥ ಶಿಕಮಾರ್ಕಂಡೇಯವತ್ಸಚ್ಯವನಭೃಗುಗುರುವ್ಯಾಸಮುಖ್ಯಂ ಮುನೀಂದ್ರ । ಪ್ರಕರಂ ಸಾಲ್ಗೊಂಡು ವೇದಸ್ತವದಿನಭವನಂ ಕೀರ್ತಿ ಸುತ್ತಿರ್ದುದಾಗಳ್ .... ॥ ೨೬ ॥

ಚ ॥ ಹರಿವಿಧಿಜಿಷ್ಣುವಹ್ನಿಶಮನಂದನುಜಂ ವರುಣಂಪ್ರಭಂಜನಂ ॥ ಹರಸಖಿನೀಶನಬ್ಜಸಖನಿಂದುಕುಜಂ ಬುಧಜೀವಕಾವ್ಯ ಭಾ ॥ ಸ್ಕರಸುತ ರಾಹುಕೇತುಗಳನಂತಮುಖಾಹಿಗಳಾಶ್ವಿನೇಯರ । ಚ್ಚರರಸುರಸುರರ್ವ ಸುಗಳೋಲಗಿಸಿರ್ದರುಮಾದಿನಾಥನಂ .... ॥ ೨೭ ॥

ಚ ॥ ಗರುಡರಪಾಳಿಗಂಧರರತಿಂಥಿಣಿಸಿದ್ಧರಪನ್ನಗ ಚಾರುಕಿ । ನ್ನರರ ತಿರಳ್ಕೆ ಕಿಂಪುರುಷರೊಬ್ಬುಳಿಗುಹ್ಯಕರೊರ್ಗು ಸಾಧ್ಯರು ॥ ತ್ಕರಮೆಡೆಗೊಂಡ ಚಾರಣರಜಂಗುಳಿಯಕ್ಷರವಂಗಡಂ ಮಯೂ । ರರಪಡೆ ವೇದಪೂರುಷರ ದೊಂದುಳಿಯಲ್ಲಿಕರಂಮನೋಹರಂ .... ॥೨೮॥

ವ ॥ ಆಗಳ್ ॥ ಉ ॥ ವೃ ॥ ಕಾಲನಮುಂದೆ ತೋೞನೊಲಿದೆತ್ತಿ ದಿನೇಶನಮುಂದೆ ತನ್ನ ಕ । ಣ್ಣಾಲೆಯನೊತ್ತಿಮೆಚ್ಚಿ ಸಿವಿರಿಂಚಿವಧೂಟಿಯ ಮುಂದೆ ಮೂಗಿನೋ ॥ ಳ್ಬಾಲಿಸುತಿಟ್ಟತರ್ಜನಿಯನಾಡಿಸಿ ದಕ್ಷನಮುಂದೆ ಮಂಡೆಯಂ । ಜ್ವಾಲೆಯಮುಂದೆ ಕೇಲ್‌ಗೊಡಪಿ ಭೃಂಗಿಕರಂ ಕುಣಿದಾಡುತೊಪ್ಪಿದಂ .... ॥೨೯॥

ಕಂ ॥ ಎಡಪಕ್ಕದೊಳಬ್ಜಾಕ್ಷಂ । ಜಡಜಭವಂಬಲದಪಕ್ಕದೋಳ್ನುತಿಗೆಯ್ವು ॥ ತ್ತೊಡಸಿರಿಕಣ್ಗೆಸದಿರ್ದಂ । ಮೃಡನದ್ರಿಜೆವೆರಸಿ ದಿವ್ಯಸಿಂಹಾಸನದೋಳ್ .... ॥ ೩೦ ॥

ಮಲ್ಲಿ ॥ ಪಾಡೆತುಂಬುರನಾರದರ್ಸವಗಾನಮಂ ಮಿಗೆರಂಭೆತಾ । ನಾಡೆಲಾಸ್ಯಮನೋಜೆಯಿಂ ಘನಮಂತ್ರದೇವಿಯರಣ್ಮೆ ಕೊಂ ॥ ಡಾಡೆವಿಷ್ಣುವಿರಿಂಚಿಪತ್ನಿಯರಿರ್ಕೆಲಂಗಳೊಳಿಕ್ಕೆ ಕೈ । ನೀಡಿಭಾಸುರಚಾಮರಂಗಳನದ್ರಿಜಾಧಿಪನೊಪ್ಪಿದಂ .... ॥ ೩೧ ॥

ವ ॥ ಆಸಮಯೋಳ್ಸಿದ್ಧರಾಮಯೋಗೀಂದ್ರನಾದರಂಮಿಗೆ ಪೊಡಮಟ್ಟು ಕರಾಂಜಲಿವೆರಸು ಸನ್ನುತಿಗೆಯ್ವುತ್ತಮಿರೆ—

ಕಂ ॥ ಬರದೈಯ್ಯಸಿದ್ಧರಾಮುದ । ಯಾರಸನಿಧಿಭಕ್ತರೆಯ್ದೆ ಸುಖಮಿರ್ಪರೆ ಪೇ ॥ ಳ್ದಾರುಣಿಯೊಳೆಂದುಕೇಳೆ ಪು । ರಾರಿಮುದಂಬೆತ್ತು ಸಿದ್ಧರಾಮಂನುಡಿದಂ .... ॥೩೨॥

ಕಂ ॥ ಭವದೀಯಕೃಪೆಯನೆಲ್ಲ । ರ್ಭವಹರಸುಖಮಿರ್ಪರಲ್ಲಿಭಕ್ತರ್ಬಸವಂ ॥ ಶಿವಲೋಕದೊಳುಂಟೆಂಬುದ । ನವಧರಿಸುತೆಬರ್ಪುದೆಂದು ಕಳುಪಿದರಿನ್ನಂ .... ॥ ೩೩ ॥

ವ ॥ ಎನೆ ಸರ್ವಗತಂ ಬಸವನಿಲ್ಲದೆಡೆಯಾವುದಂತಾದೊಡಮುಳುಂಬಮುಮರ್ಕೆವೆತ್ತು—

ಕಂ ॥ ಎಸೆವಷ್ಟಾವರಣದೊಳುಂ । ಮಿಸುಪಮಹಾಭಕ್ತರಲ್ಲಿಯುಂ ಪ್ರಮಥಗಣ ॥ ಪ್ರಸರದೊಳಮೆನ್ನೊಳುಂ ರಂ । ಜಿಸುವಂ ಬಸವಂವಿದಗ್ಧ ನೀನರಿಯದುದೇ .... ॥೩೪॥

ಉ ॥ ವೃ ॥ ಎಂದುಪುರಾರಿತನ್ನಹೃದಯಾಂಬುಜಮಂ ತೆರೆದಲ್ಲಿ
ನೋಳ್ಪಗೋ । ಪಿಂದವಿರಿಂಚಿಮುಖ್ಯರರರೇಜಯಜೀಯನುತಲ್ಲಿಸಾಂಜಲಿ ॥
ಸ್ಪಂದಲಲಾಟರಾಗಿನುತಿಸುತ್ತಿರೆ ತೋರಿಸಿದಂ ಗಣೇಂದ್ರರಾ । ನಂದಿಸಿನೋ
ಡಿಸಿದ್ಧಪತಿಗೊಲ್ದುವೃಷೇಂದ್ರನನಾವೃಷಧ್ವಜಂ .... ॥ ೩೫ ॥

ಕಂ ॥ ಹರನಹೃದಯಾಬ್ಜದೋಳ್ಭಾ । ಸುರರೂಪಂ ಬಸವನೊಪ್ಪಿದಂ
ಕರಲಿಂಗ ॥ ಸ್ಥಿರದೃಷ್ಟಿಜಂಗಮಾಂಘ್ರಿಗೆ । ಶರಣೆನುತಂ ಭಸ್ಮಲಿಪ್ತ
ಕಾಯನಜೀಯಂ .... ॥೩೬॥

ಮ ॥ ವೃ ॥ ಸ್ಥಿರಪದ್ಮಾಸನಸರ್ಧಕುಟ್ಮಳಿತನೇತ್ರಂ ಶಂಕರಧ್ಯಾನ
ನಿ । ರ್ಭರಸಂಜಾತ ಸುಖಾಶ್ರುಫುಲ್ಲನಳಿನಸ್ಮೇರಾನನಂ ಭಸ್ಮಭಾ ॥ ಸುರ
ಭಾಳಂಗಳ ಮಸ್ತಕಾದಿ ವಿಲಸದ್ರುದ್ರಾಕ್ಷಮಾಲಂ ಪ್ರಭಾ । ಕರಕಾಯಂ
ಕಳೆವೆತ್ತುತಂಗೊಳಿಸಿದಂ ಕಲ್ಯಾಣಕಲ್ಪದ್ರುಮಂ .... ॥ ೩೭ ॥

ವ ॥ ಆಗಳಂತಿರ್ಪ ಬಸವನಂ ಮುಕುಂದಶತಾನಂದ ಸಂಕ್ರಂದನಾದಿ
ಸುರರ್ಕಂಡು ಕೌತುಕಂಬಟ್ಟು ಭಕ್ತಿಪಾರವಶ್ಯದಿ ಸಾರೆವಂದು ನಿಂದೆರಗಿ
ಬದ್ಧಾಂಜಲಿಗಳಾಗಿ—

ಚ ॥ ವೃ ॥ ಪ್ರಮುಥಗಣಾಂಬುಜಾತದಿವಸೇಂದ್ರ ವೃಷೇಂದ್ರಶಿವೈಕ
ಭಕ್ತಿಸಂ । ಕ್ರಮಣನಿಜಾಂತರಂಗಪರಮೋಕ್ಷಕರೋಕ್ಷವರಸ್ವರೂಪದು ॥
ರ್ದಮರಿಪುವರ್ಗಭಂಜನ ನಿರಂಜನದಿವ್ಯಶಿವಪ್ರಸನ್ನಹೃ । ತ್ಕಮಲನಿವಾಸಿ
ವಾಸಿತಜಗತ್ರಯ ರಕ್ಷಿಪುದೆಮ್ಮನಾವಗಂ .... ॥ ೩೮ ॥

ಕಂ ॥ ಬಸವಜಯಜಯರವಾನನ । ಬಿಸರುಹರಾದಿವಿಜರಿಂತುಪೊಗ
ಳುತ್ತಿರೆ ಶೈ ॥ ಲಸುತೆ ವಿಸ್ಮಯಮೊದವಿರೆ । ಪೊಸತೆಂದಾ ಸಿದ್ಧರಾಮ
ನೀಕ್ಷಿಸುತಿರ್ದಂ .... ॥ ೩೯ ॥

ಗುರುಚರಹರಸ್ವರೂಪಕ । ಚರಾಚರವ್ಯಾಪಿ ತಾಪಸೇಂದ್ರ ಮನೋ
ಮಂ ॥ ದಿರಬಸವರಾಜಶರಣೆಂ । ಬರವಂ ಪೊಣ್ಮಿದುದು ಸಿದ್ಧರಾಮನ
ಮೊಗದೋಳ್ .... ॥ ೪೦ ॥

ವ || ಆಗಳ್ || ಚ || ವೃ || ಪುರಹರನದ್ರಿಜಾತೆಯಲದರ್ಾನನ
ಮಂನಿಡುನೇಹದಿಂದೆ ಕೇ । ಕರಸುಧೆಸೂಸೆನೋಡಿಸುಡಿದಂ ಪ್ರಿಯನೋಡಿವ
ನೇಳಿವೆತ್ತಭ || ಕ್ತಿರಸದಸೆಂಪನೀತನನಮುಹತ್ವಮನೀತನಚೆಲ್ವನೀತನ । ಚ್ಚರಿ
ಯಚರಿತ್ರದುನ್ನತಿಯ ನೀತನಗಾಡಿಯನೆಂದುನಲ್ಮೆಯಿಂ || ೪೧ ||

ವ || ಮತ್ತಮಿಂತೆಂದಂ || ಉ || ವೃ || ಆನೆವೃಷೇಂದ್ರನಾದೆ ನಗ
ಜಾತೆ ಚರಾಚರರಕ್ಷಣಾರ್ಥನು । ನ್ಯೂನಮದೀಯಮಾನಸದೊಳಿರ್ಪನಿವಂ
ಬಿಡದಿರ್ಪನೀಮುಹಾ || ಜ್ಞಾನಿಯ ಹೃತ್ಪಯೋರುಹದೊಳೀತನನಾದಿಸದಾದಿ
ಚಿದ್ಘನಂ । ನೀನರಿದಿರ್ಪುದೆನ್ನಸುವಿವಂಬಸವಂಗೆಸುವಾನಿವಂಗೆಕೇಳ್ ||೪೨||

ಚ || ನೆಗಳ್ದಜಗತ್ರಯಕ್ಕೆ ಗುರುವಾಗಿವನಾಭುವನಾವಳಿಗೊಳ್ಪನೀ ।
ವಗಣಿತದಾನಿಯಾಂಭುವನಶೀಕ್ಷಕನೀತನೆತತ್ಸುರಕ್ಷಕಂ || ಬಗೆವಡೆಮುಕ್ತಿ
ಗಾನರಸನೀತನೆಭಕ್ತಿಗೆಪಟ್ಟಬದ್ಧನಾಂ । ಸೊಗಯಿಪಭಕ್ತವತ್ಸಲನಿವಂಘನ
ಭಕ್ತಿನಿಧಾನನದ್ರಿಜೇ .... ||೪೩||

ಶಾ || ಭಕ್ತಪ್ರಾಣನಿವಂಸರೋಜಮುಖಕೇಳ್ ಭಕ್ತಾಂಗನಾಸಂತ
ತಂ || ವ್ಯಕ್ತಂಜಂಗಮನೀತನೀ ಭುವನಕಾಂಲಿಂಗಂ ದ್ವಿತೀಯೇಶ್ವರಂ ।
ಸೂಕ್ತಂಮೇಣಿವನೀಶ್ವರಂ ಬಗೆವೊಡಾಂಮದ್ಭಕ್ತಿಯಿಂದಪ್ಪ ಸ । ನ್ಮುಕ್ತಿ
ಶ್ರೀನೆನೆದಾಕ್ಷಣಂದೊರಗುಮಿಾ ನಂದೀಶ್ವರಂಪಾರ್ವತೀ || ೪೪ ||

ಕಂ || ವಸುಧೆಯೊಳಿಶಂಭುನಾಮಂ । ಮಿಸುಪುದುಕೇಳೆನುಗೆಜಸ್ರ
ಮಿಾವೃಷಭೇಂದ್ರಂ || ಗೆಸೆಗುಂ ದ್ವಿತೀಯಶಂಭು । ಪ್ರಸರದ್ಘನನಾಮಮು
ತ್ಪಳಪ್ರಭನಯನೇ .... || ೪೫ ||

ಕಂ || ಯನೆಗರ್ಥಪ್ರಾಣಾದಿಯ । ನನವದ್ಯಭರ್ಕ್ತರಿವರೊಳಿಂದೆ
ಡೆಯೊಳ್ ಚಿ || ದ್ಘನಮಹಿಮನೀವೃಷೇಂದ್ರಂ । ಮನದೊಲವಿಂದೀವ
ನಾವಗಂ ವನಜಮುಖೀ .... ||೪೬||

ಕಂ || ಮನ್ಮಹಿಮೆಯನವನರಿವಂ । ಸನ್ಮತಿಮೇಣಿವನಮಹಿಮೆಯಂ
ಮೃಗಧರ ಭಾ || ಸ್ವನ್ಮುಖಿಯಾನರಿವೇಂ ಹಿಮ । ವನ್ಮಹಿಧರಪುತ್ರಿ
ಪೆರರವೇನರಿದಪರೇ .... || ೪೭ ||

ಕಂ ॥ ಆವಂಬಸವಾಕ್ಷರಮಂ । ಭಾವಂಮಿಗೆ ನುಡಿವನವನ ಪದ
ನೆಮೆ ಸದನಂ ॥ ದೇವಿಯುಮುಗೆಂಮುಪತ್ರ್ಯವು । ಧಾವಳಿಗಿದು ನಂಬಿ
ಪನ್ನಗಾಯತವೇಣೀ .... ॥೪೮॥

ಉ ॥ ವೃ ॥ ಶ್ರೀಗುರುಲಿಂಗಜಂಗಮವಿಭೂತಿಶಿವಾಕ್ಷಿಪದಾಂಬು
ಶೀಷವೇ । ದಾಗಮುಸಿದ್ಧಮಂತ್ರವರಭಕ್ತಿಸಮನ್ವಿತನಾಗಿತನ್ಮಹೀ ॥ ಭಾಗ
ದೊಳಿರ್ಪನಾವನವನೀ ಬಸವೇಶ್ವರನಂಶನುಕ್ಕ್ಯ ಮ । ಲ್ಲಾಗಳುಮೆನ್ನೊ
ಳಿರ್ಪತೆರದಿಂದೆಸೆವಂಬಸವಂಸುಭಕ್ತರೋಳ್ .... ॥೪೯॥

ವ ॥ ಎಂದಗಜಾನಂದನೊದವೆ ಸಿದ್ಧರಾಮುತ್ರಿದ್ಧಿಯಿಂ ಮಣಿಯೆ
ಬಸವನ ನಿಜಸ್ವರೂಪಮನೊರೆದನಿತರೊಳ್ಳಂಸಹೃದಯನಳಿನದೊಳೊಳಗೆ
ಬೆಳಗುವಾಬಸವನಂನೋಡಿ ಮರ್ತ್ಯಲೋಕದೊಳ್ಮದ್ಭಕ್ತರೆನಿಬರೊಳರೆಂದು
ಬೆಸಗೊಳೆಕೇಳ್ದು ಕೈದಾವರೆಗಳಂ ಮುಗಿದು—

ಕಂ ॥ ಸರ್ವೇಶಭಕ್ತನೆನಿಸುವ । ನೋರ್ವನುಮಣಮಿಲ್ಲ ಮಹಿ
ಯೊಳಾನೇಭಕ್ತಂ ॥ ಸರ್ವರ್ಭಕ್ತರ್ಮನಸಿಜ । ಗರ್ವಾಪಹಸಿಮಗೆ ಸ್ವಮ
ರೆನಿಪ್ಪುದರಿಂದಂ .... ॥೫೦॥

ಆವಾವಭವದೊಳಾದೊಡ।ಮಾವಗಮಗಜೇಶಕೇಳ್ಸಾದತ್ರಯಸಂ॥
ಸೇವನೆಯೆಸಾಲ್ಗು ಮಿದುಪರಿ । ಭಾವಿಸೆಕ್ಕೈವಲ್ಯಸುಖದಿನಗ್ಗಳಮುತ್ತೆ ॥೫೧॥

ಖಗಮೃಗಪಿಪೀಲಿಕಾದಿಯೊ । ಳೊಗೆದೊಡಮಾ ಶರಣವಿರತಿಸವಿದೊ
ಕ್ಕುದನುಂ ॥ ಡಗಲದಸವಿದೊರೆಕೊಂಡೊಡೆ । ಮಿಗೆಸಂಸೃತಿಲೇಸುಗಡ
ಧನಂಜಯನಯನಾ .... ॥೫೨॥

ಮ ॥ ಸ್ರ ॥ ವೃ ॥ ಎನೆಕೇಳ್ದಾನಂದದಿಂದಾಬಸವನನಭವಂ ಸತ್ಕೃ
ಪಾಪೂರಿತಾಲೋ । ಕನದಿಂದಂ ನೋಡಿತಾಂತೋರಿಸಿ ಬಳಿಕದನಂತೆಲ್ಲಮಂ
ಕಂಡು ಸದ್ಭ ॥ ಕ್ತನಿಯುಕ್ತಂ ಸಿದ್ಧರಾಮಂ ಪೊಗಳ್ದಿರಗುತೆ ಬೀಳ್ಕೊಂಡು
ಭೂಲೋಕಕೆಳ್ತಂ । ದನಸಮ್ಯಂ ಸ್ವರ್ಣವಲ್ಲೀಪುರಮನೊಲವಿನಿಂಪೊಕ್ಕು
ಭಕ್ತಾಳಿಗಾಗಳ್ .... ॥೫೩॥

ಕಂ ॥ ಶಿವಲೋಕದೊಳಂ ಬಸವಂ । ಶಿವಹೃದಯಾಂಬುಜದೊ
ಳಿರ್ದಪಂ ಕಂಡೆನೆನು । ತ್ತವಿಕಲಮತಿಯುಲ್ಲಮುಮಂ । ವಿವರಿಸೆಕೇ
ಳ್ದಲ್ಲಿ ಶರಣರುತ್ಸಹಮಾಂತರ್ .... ॥೫೪॥

ವ|| ಅಂತು ಸಮುತ್ಸುಕಾಂತರಂಗರಾದ ಶರಣರ್ಬಸವನೆಂತಿರ್ದಪ ನೆಂದು ಬೆಸಗೊಳೆ.

ಚ|| ವೃ|| ನಿಜಹೃದಯಾಂಬುಜಾತಮನಲರ್ಚಿವೃಷೇಂದ್ರನನಿಲ್ಲಿನೋ ಡಿಯುಂ | ಗಜಹರಮಾನಸಾಂಬುಜದಿನೆಂತೆಸೆದಿರ್ದನೆನುತ್ತೆ ತೋರಿಸು || ತ್ತ ಜರಸನಾಮಯುಂನೆಗಳ್ದ ತದ್ವ್ಯನವೃತ್ತಮನೆಯ್ದೆ ಪೇಳ್ದನ| ತ್ರಿಜಧರಭಕ್ತರೋ ಳ್ನೃಪತಿಕಂಡೆನಿದೆಲ್ಲಮನಲ್ಲಿಚೆಚ್ಚರಂ || .... ||೫೫||

ವರಗುರುಸಿದ್ಧರಾಮ ವಿಭುವಿಂದರಿದೆಂ ನೃಪಕೇಳ್ ವೃಷೇಂದ್ರನೇ| ಳ್ತ್ರರದಮಹತ್ವಮುಂ ಬಗೆವೊಡಿಂತುವಿರಾಜಿಸಿಪೆಂಪನಾಳ್ದ ಭಾ || ಸುರಬಸವಂ ತ್ವದೀಯಸಭೆಯಲ್ಲಿರುತಂ ಪಿಡಿದೆತ್ತಿದಂ ನಿಜ | ಸ್ಮರಣದಿನೆನ್ನನೋರ್ಗ್ಗುಡಿ ಸದಂದದಿಸೆಂದಬುದಿದೊಂದುಚೋದ್ಯಮೇ || ||೫೭||

ವಚನ || ಎಂದುವೃಷೇಂದ್ರವೃತ್ತಾಂತಮನುಸುರೆಭೂಪಂ ಕೇಳ್ದು ಮೆಚ್ಚಿ ಗೋಪಾಂಗನೆಗನರ್ಘ್ಯಮಣ್ಯಾಭರಣ ದಿವ್ಯಾಂಬರಂಗಳನಿತ್ತು ಸರ್ವ ಮಯನಣುಗಂ ಬಸವರಾಜಂ ಸರ್ವಮಯನೆನಿಪ್ಪುದಿದಾವ ಕೌತುಕಮೆಂ ದುನಿರ್ಧರಿಸಿ ಸಭಾಸದರೊಡನೆ ಮುಗುಳ್ದು ಪೊಗಳ್ದಗಣಿತಾನರ್ಘ್ಯಮಣಿ ಭೂಷಣಂಗಳಂ ಸಮರ್ಪಿಸಿ ಬಸವಂಗೆ ಕರಾರವಿಂದಮಂ ಮುಗಿದು, ನಿಜ ಗೃಹಕ್ಕೆಬೀಳ್ಕೊಡಲೊಡನೆ.

ವೃ|| ಮ|| ಸ್ರ|| ಕವಿಗಳ್ಕೈಯೆತ್ತಿ ಕೈವಾರಿಸೆಬುಧನಿವಹಂನಾಡೆಕೊಂ ಡಾಡೆಬಂದಿ | ರ್ದವನೀಶರ್ವಿಸ್ಮಯಾಂತಃಕರಣರೆರಗೆಮಾದೇಶ್ವರರ್ಮಾಣ ದತ್ಯು | ತ್ಸವದಿಂದಾಲಿಂಗಿಸುತ್ತಂಪರಸೆಪರಮಸದ್ಭಕ್ತಿ ಸಂಪತ್ತಿಸಂಪೂ | ರ್ಣವಿಳಾಸಂಬಂದುಶುದ್ಧಾಂತದೊಳೆಸೆದ ನಿಳಾಭಾಮಿನೀಭಾಗಧೇಯಂ ||

ಮಲ್ಲಿಕಾಮಾಲಾ || ಅಂಬುಜಾನನೆ ಕಂಬುಕಂಧರೆಕುಂಭಿನೀಧರನಂ ದಿನೀ | ಶಂಬರಾಹಿತಶಾಸನೆಪ್ರಿಯೆಶುಂಭದಾನವಮರ್ದಿನೀ || ಶಂಬಪಾಣಿ ವಿಧಾತೃವಿಷ್ಣುಕುಟುಂಬಿನೀ ಪರಿಪಾಲಿನೀ | ತುಂಬುರಾಜಜಗಾನಲೋಲೆ ಮುದಂಬೆರಕ್ಷಿಪುದೀಶ್ವರೀ || .... ||೫೮||

ಗದ್ಯ॥ ಇದು ವಿನಮದಖಿಳ ಸುರಾಸುರೇಂದ್ರ ಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿವಿಸಿತ ಪರಮಶಿವಲಿಂಗ ಪಾದಾರವಿಂದ ಪರಾಗಭಸಿತಭಾಸುರ ಲಲಾಟಪಟ್ಟ ಸರಸಜನ ಮಾನಿತೋಭಯ ಕವಿತಾವಿಶಾರದ ಶ್ರೀಷಡಕ್ಷರಿ ದೇವಭಕ್ತಿ ವಿರಚಿತ ಶ್ರೀಮದ್ಬಸವರಾಜ ವಿಜಯ ಮಹಾಪುರಾಣದೋಳ್ ಬಸವ ಸರ್ವಗತತ್ವಕಥನಂ ಸಪ್ತಮಾಶ್ವಾಸಂ ಸಮಾಪ್ತಂ.

ಅಂತು ಆಶ್ವಾಸ ೭ಕ್ಕಂ ಪದನು ೫೫೮ಕ್ಕಂ ಮಂಗಳಂ.

೮ನೇ ಆಶ್ವಾಸ.

ಜಂಗಮಾಯುಧನ ವಸ್ತ್ರದಾನದಕಥೆ

ನಾಂದಿ॥ ಲಲಿತಪದವೃತ್ತ ॥ ಮಾಚವಿಭುಸನ್ನುತಸದಾಚರಣವಾದಿ ಮದಮೋಚನಸಮರ್ಥವರಬಾಚಯುದಯಾರ್ದ್ರ । ಲೋಚನಸಮಕ್ಷ್ಯೆ ಯಮಿಗೋಚರಪದಾಬ್ಜ ಶಿವವಾಚಕಸಮನ್ವಿತಚರಾಚರಸುರಕ್ಷಾ ॥ ಪೇಚರಪರಿಸ್ತುತಕಳಾ ಚತುರಧೈರ್ಯ ವಿಜಿತಾಚಲವಿತರ್ಜಿತ ವಿರೋಚನ ಜಮಾಯಾ। ಮೋಚಕಸುತತ್ವನಿಧಿ ಸೂಚಕವಚಸ್ಕಪೊರೆಕೀಚಕರಿ ವುಪ್ರಿಯುಸುವಾಚಬಸವೇಶಾ ॥ .... ॥೭॥

ಕಂ॥ ಶ್ರೀಪರ್ವತೇಂದ್ರತನಯಾ । ಲಾಪಸುಧಾ ಪೂರ್ಣಕರ್ಣನಭವಂಘನ ಚಿದ್ರೂಪಂ ವಿಧುರೋಪಂ ಗಿರಿ । ಜಾಪಂ ಪೊರೆಗೆಮ್ಮ ನಾವಗಂ ಶಿವಲಿಂಗಂ ॥ .... ॥೧॥

ಚ॥ ವೃ॥ ಬಸವಾಧೀಶ್ವರನೊಂದುವಾಸರದೊಳೆಲ್ಲಾಮಂತ್ರಿಗಳ್ಕೂಡಿರಂ । ಜಸಿಧಾತ್ರೀಶನನೇಮದಿಂಬಹುಬಲಕ್ಕೋರಂದದಿಂಜೀವಿತ॥ ಪ್ರಸರಂತಿರ್ದಲೊಡರ್ಚುತೊಪ್ಪಿರೆಬಳಿಕ್ಕಂತಲ್ಲಿಗೇಳ್ತಂದುಧ । ಟ್ಟಸುತಂನಿಂದು ಭುಜಂಗಜಂಗಮನದೋರ್ವಂತಪ್ಪುಪಾಧೀಶನಂ ॥ ॥೨॥

ಕಂ|| ಪೇೞಿಗೆದೀವಿದಪೊಂಗಳ | ಜಾಳಿಗೆಗಳಕುಡುಕುಡಲ್ಲದೊಡೆಬಿಡೆನಾನೆಂ || ಬಾಳಾವಂಗೇಳ್ದಿಲ್ಲಮ | ನಾಳೋಚಿಸದಿತ್ತ ನಂದವಂಗೆನೃಪೇಂದ್ರಂ || .... ||೩||

ವಚನ || ಅಂತಿಯ್ಯಲೊಡಮುಳ್ಳಜಂ ಬಟ್ಟು ಕರಿಯಕೇಶವಂ ತಾಳಿಮರಸಂತಸವನುಗ್ರಚಂಡಿ ಮೈಲಾರಂಮ ಮಂಚಿಗಂ ಕುಂದತಮಿಯೆಂಬರೆಲ್ಲಮೆಳಂಗೊಂಡು ಕೊಂಡೆಗಕ್ಕೆ ನಾಲಗೆ ತಿಂತೆಮಸಗೆನರೇಂದ್ರನೆಡೆಗೆಯ್ದಿನಿಂದೆರಗಿ ಕರಂಗಳಂ ಮುಗಿದು.

ಕಂ|| ಕೇಳರಸನಿನ್ನಪೊಸಪೊಂ | ಜಾಳಿಗೆಗಳನೊಡದುಮುದ್ರೆಯಂವಿಟಭಕ್ತಂ || ಕೇಳಿಬಸವಂಣನಿತ್ತಂ | ಪೇೞಿಗೆಬರಿದಾದುದೊಗೆದುದೆಮಗಧಿಕಭಯಂ || .... ||೪||

ವಚನ|| ಎಂದು ಪಿಸುಣರ್ ಪಿಸುಣಾಡೆನೃಪಂ ಕೇಳ್ದು ಕನಲ್ಕೆಗೊಂಡು ಬಸವರಸನಂಬರಿಸಿ ||

ಚ|| ವೃ|| ಸ್ಥಿರಗುಣಿಯೆಂದು ಸತ್ಯನಿಧಿಯೆಂದು ಪರಾರ್ಥಮನೆಂತುಮೊಲ್ಲದ | ತ್ಯುರುಶುಚಿಯೆಂದುನಂಬಿನಿನಗಾನೆನಗುಳ್ಳದನೆಲ್ಲಮುಂಸಮು ||ದ್ಧರಿಸೆನುತಿತ್ತುದಕ್ಕೆಫಲಮಾದುದುಲೇಸನೊಡರ್ಚಿದೈಗುಣಾ | ಕರನಿನಗಾರ್ಸಮಾನರೊಡೆದೆನ್ನಯಮುದ್ರೆಯೆನಚ್ಚಪೊಂಗಳಂ || || ೫ ||

ಕಂ || ಬೇಡಿದಭುಜಂಗಭಕ್ತಂ | ಗಾಡಂಬರದಿಂದೆಕೊಟ್ಟೆನಿನ್ನಿಚ್ಛೆಯೊಳಿಂ || ನಾಡಲದೇಂಪರಧನಮುಂ | ನೀಡುನ್ನಿನ್ನಂತೆಕೊಡುವದಾನಿಗಳೊಳರೇ || .... ||೬||

ಇಂದಿತ್ತೆಪೊಂಗಳಂಬಗೆ | ಬಂದಂತಿರೆಬಸವನಾಳೆಬೇಡಿದಭಕ್ತಂ ||
ಗಂದಮ್ಮಿಗೆಮದ್ರಾಜ್ಯಮ | ನೊಂದಿನಿಸುಳಿಯದವೊಲೀಯಲುಳ್ಳವನಲ್ತೆ||
ಪಳಿಗಂಜದೆಮ್ಮನರಪತಿ| ಮುಳಿದವನೆಂದೆಣಿಸದ್ಯಧನಮನದೆಂತುಂ||
ಕೊಳಲೊಲ್ಲೆನೆರಬನೇಮಮ | ನೆಳಸದೆಪಾಳ್ಗೆಯ್ದೆ ಕೋಶಮಂಬಸವೇಶಾ||

ವ|| ಎಂದುನುಡಿದ ರಸನಾಗ್ರ ಹೋಕ್ತಿಗೆ ಮಹಿಮಾರರಂ ಮುಗುಳ್ನಗೆನಕ್ಕು.

ಕಂ|| ಎಲೆನೃಪತಿಸೀತಿಡಪ್ಪಿದ | ಪಲವುಂನುಡಿಗಳನದೇಕೆನುಡಿದಪೆಭುವನಾ || ವಳಿಗರಸನಪ್ಪಶಿವನಂ| ನಲಿದರ್ಚಿಪಶರಣರಸ್ಯಧನಕೆಳಸುವರೇ||

ಚ|| ವೃ|| ಸುರಭಿಸುರದ್ರುಮಂಸುರಸುರತ್ನಮಿದೆಲ್ಲಮುಮಿಯ್ಯಲಾ
ರದ | ತ್ಯುರುತರಸಂಪದಸ್ಥಿತಿಯನೀವಮಹೇಶ್ವರಭಕ್ತಿಯಾಂತಸ | ತ್ಪುರು
ಷನದೆಂತುಪೇಳ್ವರಧನಕ್ಕೆಳಸಿರ್ಪನಪಾರದುಗ್ಧಸಾ | ಗರದಿವಿಪಾರಿಪಂಚಿಕಿ
ಗುವೆಂಚೆಯವಾರಿಗೆಚಿತ್ತವಿಮಾಯ್ತುವದೇ || .... ||೧೦||

ಉ|| ಸಾರಸುಧಾಮರೀಚಿರುಚಿಯಂತೆಗೆದೀಂಟುವಜೊಂನಪಕ್ಕಿವಿ |
ಸ್ತಾರತಮಸ್ಸಮೂಹಮನದೆಂಬರೆಪೀರ್ವುದೆಚೂತಪಲ್ಲವೋ || ದಾರರಸಂ
ಗಳಂಸವಿವಕೋಗಿಲೆಮೆಲ್ವುದೆವೇಣುಪತ್ರಮಂ | ಮಾರಹರಪ್ರಸಾದಭಜ
ಕಂಕವದರ್ಪನೆಲೋಗರ್ಥಮಂ || .... ||೧೧||

ಚ|| ಸಸಿಬಿಸಿಯಾದೊಡಂತರಣಿತರ್ಗಿದೊಡಂಘನಕಾಂಚನಾದ್ರಿಕಂ|
ಪಿಸಿದೊಡಮೌರ್ವ[illegible]ಬ್ಧಿ ಬಿಸುಪಾರಿದೊಡಂ ನಿಗಮೋಕ್ತಿ ಯೋಳೊತ್ತದ ||
ಕ್ಕೆಸಗಿದೊಡಂಕಡಲ್ಬರೆತೊಡಂಗಗನಂಪಗಲಿಟ್ಟೊಡಂದಿಶಾ | ವಸನನಭಕ್ತ
ರಸ್ವಧನಕೊಲ್ದಳುಪರ್ಸತತಂಮಹೀಪತೀ || .... ||೧೨||

ಕಂ|| ಇದುನನ್ನಿಂನಿಂನಭಂಡಾ | ರದಲಿಕ್ಕದವಸ್ತುವಂವಿಚಾರಿಪುದ
ಣುಮಾ || ತ್ರದಧನಮರೆಯಾದೊಡನಾಂ| ಮದನಾರಿಯಭಕ್ತನಲ್ಲ ಬಿಜ್ಜ
ಳನೃಪತೀ .... ||೧೩||

ಅನರೊಡವೆಯನಪರ್ಗಿತ್ತಂ | ಶಿವನರಿಪಂಸಿಂನಪಸ್ತುವಿತ್ತವನಲ್ಲ ||
ಲ್ಲವರೆಂತುಕೊಳ್ವರಾನೆಂ | ತುವಿಚಾರಿಪ್ಪೊಡೀವೆನರಸನಿನ್ನಯಧನಮಂ||೧೪||
ಈಗಳೆನಿನ್ನಯಸಂಶಯ | ಪ್ರೋಗುಂಪರಿವಂತೆತೋರ್ಪೆನೆಂದಾಬಸವಂ||
ಬೇಗದೊಳೆತರಿಸಿದಂಭಾಂ |ಡಾಗರದಪೊನ್ನಪೆಟ್ಟಿಕಾಸಮುದಯಮಂ||೧೫||
ಕರಯಿಸಿದಂಗಣಕಾಳಿಯ | ನರಸಸಸಂದೆಗದಕೀಲಸುರ್ಚವತೆರದಿಂ||
ಭರದಿಂಕೀಲ್ಗಳಪಿಡಿದು | ಪ್ಪರಿಸುವಪೇಳಿಗೆಯಪೊಂಗಳಂಕಾಣಿಸಿದಂ ||೧೬||

ವ|| ಅಂತು ತನ್ನತೇಜಃ ಪುಂಜದಂತೆ ಬರೆಪಲೆಕ್ಕಗರ್ಗಳಂ ಮಿಕ್ಕ ಪೊಂಗಳಂ ತೋರಿಸೆಬಿಜ್ಜಳಂ ಸಭಾಸದರೊಡನೆ ಕಂಡು ಕೌತುಕಂಗೊಂಡು ಪಿಸುಣ್ಗೆಡೆವಖಳರಂ ತರ್ಜನಂ ಗೆಯ್ದು ಮತ್ಪುರದೊಳಿಂ ಸಾವನಾದೊಡ ಮಿಂತುಬಸವನಂ ಕೂರ್ತುಪಿಸುಣ್ಗೆಡೆಯುಜಿ ಹ್ವಾಫಿಗೆದನಂ ಗೈಸಿದಪನೆಂದು ಪೂಣ್ದುನುಡಿದು ಬಸವನುಬಿನಿಯಂಬಗೆದಂಮ ಕೀರ್ತಿಸಾಗಳ್.

ಮ || ಸ || ವೃ || ಮುಂನೋರ್ವಂ ಭಕ್ತನತ್ಯಂನುಧುರೆಯಧಿಪಸಾಂ

ಡ್ಯಂಗೆಸನ್ಮಂತ್ರಿಯಾಗಿ | ದ್ದೌಂನತ್ಯಂಮಿಕ್ಕವಂಭಾಸುರಹಯಚಯಮಂ
ಕೊಳ್ಳೆನುತ್ತಿತ್ತಗಣ್ಯಂ || ಪೊನ್ನೆಲ್ಲಂತೀರೆ ಕೊಟ್ಟಾಶರಣಗಣಕೆಮೇಣ್ಜಂಬುಕ
ವ್ರಾತಮುಂವ್ಯ | ತ್ಪನ್ನಂಭಾಸ್ವತ್ತುರಂಗೋತ್ಕರಮನೆಸಗಿಕೂರ್ತಿತ್ತನಾ
ಚೊಕ್ಕನಾಥಂ .... ||೧೮||

ಕಂ || ಅದರಿಂಶಿವಭಕ್ತರ್ಗಿಂ | ತಿದುಘನಮಲ್ತೆಂದು ಶರಣರುಲಿ
ಯುತ್ತಿರೆಸ || ನ್ಮುದಮುಲರೆಕೈಮುಗಿದುಭೂ | ಸುದತೀಶಂ ಬಸವ ರಾಜ
ನಂಕೀರ್ತಿಸುತ .... ||೧೯||

ದಿನಮಣಿಗೆದೀವಿಗೆಯನಾ | ಘನರೋಹಣಗಿರಿಗೆರನ್ನಮಂಕೊಡುವವೊಲಾ||
ಜನಪತಿಬಸವಂಗಿತ್ತಂ|ಕನಕಾಂಬರಮುಂಮನೊಜ್ಞಮಣಿಭೂಷಣಮಂ||೨೦||

ವ|| ಅಂತಿತ್ತುಸತ್ಕರಿಸಿ ವಿನಯದಿಂ ತನ್ಮಂದಿರಕ್ಕೆ ಬಸವನಂಬೀ
ಳ್ಕೊಟ್ಟು ತಾನುಮಂತಃಪುರಂಬೊಕ್ಕಿರ್ದನಾಗಳ್.

ಉ || ವೃ || ಪಲ್ಲವಜಂಪಮಂಪಣವಧೂಟಿಯುಗೇಹದೊಳಿರ್ದುಬಿಯ್ಯ
ಕಿಂ | ದಿಲ್ಲಧನಂಗಳಂಬಸವನಿತ್ತಪನೀಗಳೆಬೇಡಿತಪ್ಪುದೆಂ || ದಲ್ಲಿಯಚೇಟಿ
ಯಂಕಳುಪೆತದ್ಗೃಹಕ್ಕೈದುತೆಮೂತಿಕಂಡಳಾ | ಫುಲ್ಲಸರೋಜನೇತ್ರೆಬಸವಾಂ
ಗನೆಯುಟ್ಟಮನೋಜ್ಞಚೇಲಮಂ .... ||೨೦||

ವ|| ಅಂತುಕಂಡದರ ಚೆಲ್ವಿಂಗೆ ಬೆರಗುವಟ್ಟು ತಲೆದೂಗಿಪಣಮಂ
ಬೇಳ್ಪುದ ನುಳಿಮ ತನ್ನೆರೆಯಳಿರ್ದ ಗೃಹಕ್ಕೆ ಜಪದಿಂ ಮುಗುಳ್ದೆಳ್ತಂದು ಸ
ಡಗರಿಸಿನಿಂದು.

ಮ || ವೃ || ನಿನಗೇನೆಂದಪೆನಕ್ಕಚಿತ್ರತರಮುಂಗನಿಗಾಂಬಿಕಾದೇವಿ
ಯು| ಟ್ಟನವೀನಾಂಬರದಂದಮಂಪೊಗಳ್ವೊಡಾನೆಯ್ದೆಂನಯುಂಕಾಂತೆಚೆ ||
ಲ್ವಿನಲಂಪಪ್ಪಿದತದ್ದುಕೂಲಕೆಣೆಯಿಲ್ಲೆಲ್ಲಿಯುಂದಿವ್ಯವ | ಸ್ತ್ರನಿಕಾಯಂಗ
ಳೊಳೆಯ್ದೆನೋಳ್ಪುಡೆವಲಂನಿನ್ನಾಣೆಚಂದ್ರಾನನೇ .... ||೨೧||

ವ || ಅಂತು ಮಲ್ಲದೆಮ್ಮವರ್ಪಲ್ಲವ ಜಂಗಮಾಳಿಯನುಪಾರ್ಜನಂಗೆ
ಯ್ದೊದವಿಸಿರ್ದ.

ವೃ || ಪಳಿಪಟ್ಟಾವಳಿಮೇಘರಂಜಿತವ ರಾಜಂಪಿಂಜರಾಂಗಂಲತಾ |
ವಳಿಚಿತ್ರಾವಳಿದೇವಪಟ್ಟೆಕುರುವಿಂದಾಭಂಕುರಂಗಾಕ್ಷಿಪಿಂ || ಗಳಿಚಂದ್ರಾತ

ಪಮಿಂದ್ರಗೋಪಮುಮರಾಂಗಂಚೀನಿಚಿತ್ರಾಂಬರಂ । ತಳಿರ್ವಣ್ಣಂವಣಿಪಟ್ಟೆ
ರುದ್ರತಿಲಕಂಕಾಂಭೋಜಿಗೌರಿಪ್ರಿಯಂ .... ||೨೨||

ಭಾವಜವಲ್ಲಭಂದಸರಿದಾಸಣಪಟ್ಟೆತಮೂಲಪಚ್ಚೆನೇ । ತ್ರಾವಳಿರಾಜ
ಶೇಖರಮುಗಾವಳಿಮಾವಲಮಾನೆನಚ್ಚೆ ಸೂ ॥ ತ್ರಾವಳಿಪಚ್ಚೆ ಪಣ್ಣಮುದಯಾ
ರುಣಮುಂಜನರೇಖೆಕಾಲಹಂ । ಸಾವಳಿದೇವತಾವಳಿಶುಕಾವಳಿಗುರ್ಜರಿಕಾಂ
ಚನಾಂಬರಂ .... ||೨೩||

ಕಂ ॥ ಇಂತಿವುಮೊದಲಾದಂಬರ । ಸಂತತಿಸಿರಿಯುಲ್ತದಕ್ಕೆ ಭಾಮಿ
ನಿಭಾವಂ ॥ ತಾಂತಳರ್ದುಬೇಡೆಶಿವಗಣ । ಚಿಂತಾಮಣಿಬಸವನೀವನಂಬರ
ಮನದಂ .... ||೨೪||

ಮ ॥ ವೃ ॥ ಎನೆಕೇಳ್ದಾಪಣಕಾಂತೆದೂತಿಗೆಪಸಾಯಂಗೊಟ್ಟುತಜ್ಜಂ
ಗನಾ । ನನಮುಂಪ್ರೇಮದಿನೋಡಿಬೋಸರಿಸಿಮುಂದಸ್ಮೇರಮುಂಬೀರಿಮು ॥
ದ್ದಿನಿವಾತಿಂಪ್ರಿಯುಬೇಡಿತಪ್ಪಸವನಿಂತುಂದಿತ್ತುಗಂಗಾಂಬೆಯು।ಟ್ಟನವೀನಾಂ
ಬರಮುಂಕರಂಮೆರೆಯಿದೆಂನೋಳ್ಪಂದಸಂಪ್ರೀತಿಯಂ .... ||೨೫||

ವ ॥ ಎನೆಪಟ್ಟೆದಚರಮುಲ್ಲಾಸಂಬೆತ್ತಂತೆಗೆಯ್ವೆ ನಿದಾವಗಹನಮುಂ
ದಾಕ್ಷಣಂ ಬಸವನೆಡೆಗೆಳ್ತಂದು.

ಚ ॥ ವೃ ॥ ಕೊಡುಬಸವೇಶನಿನ್ನಸತಿಯುಟ್ಟತಿನೂತನದಿವ್ಯವಸ್ತ್ರಮುಂ
ಬಿಡದೆನುಗೆಂದಡುಕ್ಕಿವಿಸಿದೇವಚರೇಂದ್ರಮಹಾಪ್ರಸಾದಮೆಂ ॥ ದುಡುಪತಿ
ವಕ್ತ್ರೆಯುಂಬರಿಸಿದಂನಿಜವಲ್ಲಭೆಯುಂಸಭಾಸ್ಥಳ । ಕ್ಕಡರ್ದನುರಾಗದಿಂಬಸವ
ನಾಗಳೆಭಕ್ತಿಯುದೇನಳುಂಬಮೋ .... ||೨೬||

ಮ ॥ ಸ ॥ ಮುಡಿಗಂಪಿಂಗಾರ್ದುಸಾರ್ತಂದೆರಗೆಪರಮೆಗಳ್ಮಂದಯಾ
ನಕ್ಕೆರಾಗಂ । ಬಡೆದಾದಂಬಂದೆಪಿಂದೆಯ್ತ ರೆಸಮುದಮರಾಳಾಳಿವಕ್ತ್ರೇಂದು
ವಿಂದಿ ॥ ಕಿಡೆಬೋಲಾಪಾಂಗರುಕ್ಚಂದ್ರಿಕೆನಿಜಪೃಥುವಕ್ಷೋಜಭಾಗಕ್ಕಳುಂ
ಬಂ । ನಡುಮೆಲ್ಪಿಂಬಳ್ಕೆಬಂದಾಬಸವನಿದಿರೊಳಾದೇವಿನಿಂದಿರ್ದಳಾಗಳ್ ॥

ಮ ॥ ರತಿಯುಂಗೆಲ್ವಮನೋಜರೂಪಪತಿಯಾಲಿಂಗಾರ್ಚನಾಸಕ್ತಸ।
ನ್ಮತಿಯುಂಪೂರ್ಣಕಳಾವಿಳಾಸಪತಿಯುಂಮಾಂಗಲ್ಯಸಾಕಲ್ಯಸನ । ಗತಿಯುಂ
ಶ್ರೀವೃಷಭೇಂದ್ರನಾತ್ಮಸತಿಯುಂನೋಡುತ್ತೆಸಂಪ್ರೀತಿಯಿಂ ॥ ನುಡಿದಂಭಾ
ವಿಸಿಭಕ್ತಿಯಿಂಕುಡುಕೊಡೀವೇಶಂಗೆನೀನುಟ್ಟಚೆ । ಲ್ವಡರ್ದೀದಿವ್ಯದುಕೂ

ಲನುಂಜವದಿನೆಂದುದ್ವೀತಲಜ್ಜಂ ಮಹಾ ॥ ನೃಡಭಕ್ತಿಸ್ಥಿರಚಿತ್ತನೀಳ್ದುಬಸವಂಗಂಗಾಂಬಿಕಾದೇವಿಯು । ಟ್ಟುಡೆಯಂ ಮುಟ್ಟಶರಂಗನೀಳ್ದುಸೆಳೆದೊಟ್ಟುತ್ತಿರ್ದನಾಸ್ಥಾನದೋಳ್ .... ॥೨೯॥

ಕಂ॥ ಶಳೆದೊಡೆಬೆಳೆದುದುಮುತ್ತಂ । ಶೆಳೆದೊಡೆಮುತ್ತಂತೆಬೆಳೆಯುತಿರ್ದುದುರುಚಿಮಂ ॥ ಜುಳವಸನಂ ಬಸವನಕ್ಕೈ । ದಳಸೋಂಕಿನಮಹಿಮೆಮಹಿಗೆಸಾಧಾರಣಮೇ .... ॥೩೦॥

ಬಸವೇಶಕರಸವಿಸಾರಣ । ದೆಸಕದಿಕುಮುದಾಕ್ಷಿಕೋಕಕುಚೆಬಿಸಜಸಮು ॥ ಲ್ಲಸಿತಾನನೆಗಂಗಾಂಬಿಕೆ । ವಸನತರಂಗಪ್ರತಾನಮಂತಳೆದೆಸೆದಳ್ .... ॥೩೧॥

ಚ ॥ ವೃ ॥ ಧರಿಸಿದಭೂಷಣಾವಳಿಯುಮುತ್ತುಮುಗುಳ್ನಗೆಗಣ್ಣರ್ದರಲ್ಕರತಲದೊಳ್ದಿ ಳಿರ್ಕುರುಳಬಂಬಲೆತಳ್ತಿವಿಂಡುಲೋಹಿತಾ ॥ ಧರಮೆಳೆನುಣ್ದಳಿರ್ಪಲಮುರೋಜಮುದಾಗಿರೆನವ್ಯಕಲ್ಪವಲ್ಲರಿಯವೊಲಾವೃಷೇಂದ್ರವಧುವಿತ್ತಳನಂತವಿಚಿತ್ರವಸ್ತ್ರಮಂ .... ॥೩೨॥

ಕಂ॥ ಸೆಳೆಮಿಂಚಪ್ಪಿದಶಾರದ । ಜಳಧರಮೆಂಬಂತೆಪಂಚರಂಗಮದರ್ಸಿತೋ ॥ ಜ್ವಳವಸನಂಕಂಗೆಸದುದು । ನಳಿನಾಕ್ಷಿಯಘನನಿತಂಬಗಿರಿಕಂಧರದೊಳ್ .... ॥೩೩॥

ವ ॥ ಅಂತೊಪ್ಪುವಂಬರದೊಟ್ಟಲಂ ದೇವಯಥೇಷ್ಟಂ ಕೊಳ್ವುದೆಂದಾ ಪಲ್ಲವಚರಂಗೆಮುನಂದಣೆಯ ಸಮರ್ಪಿಸೆ ಸರ್ವಜನಂ ಕಂಡು ವಿಸ್ಮಯಂ ಕೊಂಡಾಡುತ್ತಿರೆ ಶರಣರ್ಸಾದರಮಭೀಕ್ಷಿಸೆ.

ಚ॥ ವೃ ॥ ಪೊಡವಿಯೊಳಿಂತಿದೊಂದರಿದದೆ ಭಕ್ತಜನಕ್ಕೆ ತಪಸ್ವಿಬೇಡೆಮುಂ । ನಿಡುಗುಡಿನಾಥನೀಯನೆನಿಜಾಂಗನೆಯುಟ್ಟನವೀನಚೇಲಮಂ ॥ ತಡೆಯದೆಪಂನೆರಳ್ಬರಿಸಮುಂದಮುರಲ್ದಿಸಿನೆಯ್ದುವಸ್ತ್ರಮಂ । ಕುಡನೆಚರೋತ್ತಮಂಗೆಳಸಿಜಾಡರದಾಸನತೀವಭಕ್ತಿಯಿಂ ॥ ॥ ೩೪ ॥

ವು॥ ಪಸೆನಿಂದಾತ್ಮಜೆಯುಂದ ಮಾಳ್ದಮುಡಿಯಂ ಕೊಯ್ದಾಯನೇಬೇಡೆತಾ । ಪಸನಾಥಂಗುರೆಮಾನಕಂಜನವನೀಶಂ ಸಿಂಧುಬಲ್ಲಾಳನಂ ॥ ದೊಸೆದಾತ್ಮಾಂಗನೆಯಂ ಸಮರ್ಪಿಸನೆಕೂರ್ತ್ಯೈಯ್ಯಂಗೆಭೂಭಾಗದೋಳ್ । ಪಸರಂಬೆತ್ತಳಿಸಾರೆಪಲ್ಲವಚರೇಂದ್ರಂಗಳ್ಕರಿಂಪೊಂಗಳಂ ॥ ॥೩೫॥

ಕಂ|| ಮೊನೆಯಧರನೀಯನೇಬಹು | ಧನಧಾನ್ಯಾವಳಿಯನೊಪ್ಪಿಸ
ಸೆಬಲ್ ಬರಮೋಳ್ || ಘನಶರಣತತಿಗೆಗುಣನಿಧಿ | ಯೆನೆಪಿಡಿಗುಡಿಯಲ್ಲಿ
ಗೊರೆವಮೇರ್ಮಾಡಿಕರಂ || .... || ೩೬ ||

ವಚನ || ಎಂದೆಣಿಸುತ್ತಂ ಗಣಮಹಿಮೆಯನಣಿಯರಂ ಪೊಗಳು
ತ್ತಮಿರೆ.

ಕಂ|| ಆದಿತ್ಯಾಂಬರದೊಟ್ಟಲ | ನಾದೇವಂಕೊಂಡುಬಸವನಂಪರಸಿ
ಮಹಾ || ಮೋದಂಮಿಗೆ ಪೋದಂಸವಿ | ನೋದಂಗಣಕಾಲಯಕ್ಕೆ ಸಂ
ಭ್ರಮದಿಂದಂ || .... ||೩೭||

ಪರಮಪತಿವ್ರತೆಯರಕುಲ | ಗುರುಬಸವನಭಕ್ತಿಯಿಂದೆಸುತುನೋಂ
ಸತಿಯೋ || ಸರಿಸದೆಸಭೆಯೊಳ್ಮಹಿಮೆಯ | ನಿರದಾಂತೆಳ್ತಂದುದೇವಿಗೃ
ಹಮಂಪೊಕ್ಕಳ್ || .... ||೩೮||

ವ || ಆನಂತರಮಾ ಬಸವರಾಜಂ ಗಣಸಮೇತಂ ನಿಜಾಂತಃಪುರಂ
ಬೊಕ್ಕು ಸುಖಮಿರ್ಪಿನಮಲ್ಲಿಗೋರ್ವ ಪಲ್ಲವಚರನೆಳ್ತಂದುಮಾಯಾದೇವಿಯ
ಮಣಿತಾಟಂಕಮಂ ಕಂಡುಬೇಡೆ

ಕಂ || ಘಳಿಲನೆರಮಣಿಯಕಿವಿಯೊಳ್ | ಥಳಥಳಿಪಮಣಿಪ್ರಕಾಶ
ಮಂಡಿತಕನಕೋ|| ಜ್ವಲಕುಂಡಲಮಂ ತೆಗೆದಾ | ಗಳೆಕೊಟ್ಟನವಂಗೆಭಕ್ತಜ
ನಮಂದಾರಂ .... ||೩೯||

ವಚನ|| ಅಂತಿತ್ತು ಬಸವಂ ಶಿವಗಣಗೋಷ್ಠಿಯೊಳಿರುತ್ತಮಿರ್ಪಾ
ಗಳ್.

ಕಂ || ಎನ್ನಣುಗನನೆನ್ನಂಬಸ | ವಂನಿಜವಿತರಣದೆತೇಜದಿಂಗೆಲ್ದನೆ
ನು || ತ್ತಂನಾಣ್ಚುತಧೋಮುಖನಾ | ದಂನಿಜಮೆನೆಸೂರ್ಯನಿಳಿವನಸ್ತಾಚ
ಲದೋಳ್ .... ||೪೦||

ಇನವಿರಹಿನಿಪದ್ಮಿನಿಜೀ|ವನಮುರೆಇಜಕಂಠಗತಮುದಾಗಿರೆಮೂರ್ಛಾ
ವನತೆಮುಗುಳ್ವವಕಣ್ಗಂ | ದೆನಿಸಿದುರ್ಮದುತುಂಬಿವೆರಸಿಮುಗಿದಂಭೋಜಂ

ಅರಿರಾಜಂಬಂದಪನೆಂ | ನರಸಂಪಡುಗೆಡಲೊಳಿದನೇಗೆಯ್ದಪೆನೆಂ||
ದರವಿಂದಿನಿಯುಂಮಳಮ | ಬ್ಬರದಿಂಕಣ್ಮುಚ್ಚಿದಂತೆಮುಗಿದುದುನಳಿನಂ||

ಪವನಪಣಿಗ್ಸರನಳಿವಾ |ನವಮಣಿಗಳಪಸರಮಿಕ್ಕಿಪಗಲಳಿಯೆಸಮಂ||
ತವನಮರೆನಳಿನಮೊಂಬೊ|ಪ್ಪುವಕಟ್ಟಸೆಯೊಳಗೆತೀವಿಕಟ್ಟಿದನಾಗಳ್ ||೪೧||

ಪಗೆಯುಕೆಳಗೊಂಡಪದ್ಮಿನಿ । ನಗೆಗುಂದಿದಳವನಂತೆಕೋಕಾನೀ
ಕಂ ॥ ಬಗೆಗುಂದಿದುದೆಂದಣಕದೆ । ನಗುವಂತೆವೊಲಲರ್ದುದುತ್ಪಳಂತಿಳಿ
ಗೊಳದೊಳ್ .... ॥೪೪॥

ಸ ॥ ವೃ ॥ ತಾರಾಮಾರ್ಗಸ್ಥಳೀಭಾಮಿನಿಮಲಿನತಮಸ್ತ್ರಸ್ಕರಂಬದ್ಧ
ಚಕ್ಷು । ಸ್ಸಾರಶ್ರೀಹಾರಿಯೆಳ್ತಂದಪನುತೆಭಯುಂಬಟ್ಟುಮುಂಕಂಡುಪದ್ಮಾ
ಗಾರಂಮುಚ್ಚಿರ್ದುದಂಪದ್ಮಿನಿದಿನಮಣಿಯುಂಬೇಗದಿಂಕಟ್ಟುತಂಸಂ । ಧ್ಯಾ
ರಾಗಾರನ್ಯುರಕ್ತಾಂಬರದಿನಪರರತ್ನಾಕರಕ್ಕಿಟ್ಟಳಾಗಳ್ .... ॥೪೫॥

ಕಂ ॥ ಭುವನೋತ್ತರದೇಶದೊಳಾ । ಡುವಮಿಾನ್ಗಳ್ಗೆಳಶಿಕಾಲಧೀವ
ರನಾಗಳ್ ॥ ತವಕದಿಬೀಸಿದಕಾರ್ಬಲೆ । ಭುವನಮನಾವರಿಸಿದಂತೆಕವಿದು
ದುತಿಮಿರಂ .... ॥೪೬॥

ವ ॥ ಆಗಳ್

ಮ ॥ ಸ ॥ ವೃ ॥ ನವಸಂಧ್ಯಾರಾಗರಕ್ತಾಂ ಬುಜನಿವಹಮನೊಲ
ರ್ಪಿಸುತ್ತೊಂದಲರ್ಕಂ ।ದೆವಿಯತ್ಪದ್ಮಾಕ್ಷನಸ್ತಾರುಣನಿಜನಯನಾಂಭೋ
ಜದಿಂದಸ್ತಭೂಭೃ ॥ ಚ್ಛಿವಲಿಂಗಾರಾಧನಂಗೆ ಯ್ದೊಲಿಸಿಪಡೆದಚಕ್ರಂಬೊ
ಲಿಂಬಾಯ್ತುಲೋಕ । ಸ್ತವನೀಯಂಪ್ರಾಂಶುದ್ರುಪ್ಯತ್ತಿಮಿರದನುಭವದ್ರಾ
ವಕಂಚಂದ್ರಬಿಂಬ .... ॥೪೭॥

ಅಮೃತಕರಂಚಕೋರತತಿಗಭ್ರಸರೋವರಕಬ್ಜನಾನಿತಾ । ರಮಣಿಗೆ
ರಾಜನುತ್ಪಳಿನಿಗೊಪ್ಪುವಚಂದ್ರನಿದಿರ್ಚಿದಂಥಕಾ ॥ ರಮೆನಿಪರಕ್ಕಸಂಗೆವಿ
ಧುನಲ್ತೆಗಡರ್ಪೆನಿಸಿರ್ದತಾರಕಾ । ಪ್ರಮುದೆಗೆಮುಚ್ಚುಗಾಣೆಪಕಳಾನಿಧಿಯಾ
ದಮೃಗಾಂಕನೊಪ್ಪಿದಂ .... ॥೪೮॥

ಪಶಿದಚಕೋರಚಾತಕಚಯುಂನಲಿದೀಂಟವಧೂಪಲಂಗಳಿಂ । ದೊಸ
ರ್ದಜಲಂಪೊನಲ್ಪರಿಯೆಸಾಲ್ವಿಡಿದುಯ್ಯಲನಾಡುವಂಗನಾ ॥ ವಿಸರದತೋರ
ಸೋರ್ಮುಡಿನವಿಲ್ನೆಗೆದಾಡೆಸುಧಾಂಶುಬಿಂಬಮೆಂ । ಬಸದೃಶಗೌರನೀರದ
ಮದೇಂಸುರಿದತ್ತೊಸುಧಾಂಶುವೃಷ್ಟಿಯಂ .... ॥೪೯॥

ಹರಿಹರಿದದ್ರಿಕುಂಭದಿನೊರಲ್ದೊಗೆದಿಂದುವೆನಿಪ್ಪಗಸ್ತ್ಯನ । ಚ್ಚರಿಮಿ
ಗೆನೀಳ್ದತನ್ನಕರದಿಂಮೊಗೆದಂಥತಮಸ್ಸಮುದ್ರಮಂ ॥ ತುರಿಪದಿನೀಂಟುತಾ
ಗೆಳೆಡೆಸಿಲ್ಕಿದಮುತ್ತುಗಳಂತೆರಳ್ವಿಪು । ಷ್ಕರದೆಡೆಯುಲ್ಲಿತೂಂತಿರಿದವೋಲ್ತು
ರುಗಿರ್ದುದುತಾರಕೋತ್ಕರಂ .... ॥೫೦॥

ಮೃಗಭೂಕಾಶ್ಮೀರ ದಿವ್ಯಾಗರುಮಲಯಜ ಮುಖ್ಯಾನುಲೇಪಂಗಳಂ ಕಂ|ಪೊಗೆವುದ್ಯತ್ಪುಷ್ಪಮಾಲಾವಳಿಯನಮಲತಾಂಬೂಲಭೂಷಾಂಬರಶ್ರೇ|| ಣಿಗಳಂವೇಶ್ಯಾರತಂಕೆಯ್ದುವವಿಟಚರಸಂದೋಹಕ್ಕೊಲ್ದೀವುತಂಕ್ಕೈ | ಮಿಗೆ ಕಣ್ಗೊಪ್ಪಿರ್ದನಾವೇಳೆಯೊಳೆವಿತರಣಾನಂದಸಾಂದ್ರಂವೃಷೇಂದ್ರಂ ||೫೧||

ರಥೋದ್ಧತವೃತ್ತ| ಸೋಮಧಾಮರುಚಿರೋಚನಾಂಚಳೇ | ಭೀಮ ವಾಮವಪುರನ್ವಿತೋಜ್ವಳೇ || ಹೇಮಧಾಮಸುಭೂಜಾತಿಮಂಜುಳೇ | ಶ್ರೀ ಮಹೋಮೆಜಯುಸರ್ವಮಂಗಳೇ .... ||೫೨||

ಗದ್ಯ|| ಇದು ವಿನಮದಖಿಳ ಸುರಾಸುರೇಂದ್ರ ಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿವಿಸಿತ ಪರಮಶಿವಲಿಂಗ ಪಾದಾರವಿಂದ ಪರಾಗಭಸಿತಭಾಸುರ ಲಲಾ ಟಪಟ್ಟ ಸರಸಜನ ಮಾನಿತೋಭಯ ಕವಿತಾವಿಶಾರದ ಶ್ರೀಷಡಕ್ಷರಿ ದೇವಭಕ್ತಿ ವಿರಚಿತ ಶ್ರೀಮದ್ವೃಸವರಾಜ ವಿಜಯ ಮಹಾಪುರಾಣದೋಳ್ ಬಸವ ಸರ್ವ ಗತತ್ವಕಥನಂ ಸಪ್ತಮಾಶ್ವಾಸಂ ಸಮಾಪ್ತಂ.

ಅಂತು ಆಶ್ವಾಸ ಲಕ್ಕಂ ಪದಸು ೬೧೦ಕ್ಕಂ ಮಂಗಳಂ.

೮ ನೇ ಆ ಶ್ವಾ ಸ.

ಮುಗ್ಧಸಂಗಯ್ಯನಕಥೆ

ನಾಂದಿ || ಕಂ || ಶ್ರೀಗೌರಿಪ್ರೇಮಸುಧಾ | ಸಾಗರಪೂರ್ಣೇಂದುಸ ಸ್ಮಿತಾಮಳವದನಾ || ಭೋಗೀಶ್ವರಧರ | ನಾಗಮುನುತನೀಗೆಸೌಖ್ಯಮಂಶಿವ ಲಿಂಗಂ .... ||೧||

ಗುಣನಿಧಿಬಸವಂವಿಟಚರ | ಗಣಮಂಗಣಿಕಾಲಯಕ್ಕೆಕಳುವುವಪದ ದೋ || ಶ್ರ್ರುಣುತಮಹಿಮಾಕರಂಚಿ | ನ್ಮಣಿಮುಕುರಂಬಂದನೋರ್ವನಚಳ ಶಿವೈಕ್ಯಂ .... ||೨||

ಸರ್ವೇಂದ್ರಿಯಲಿಂಗಯುತಂ| ದುರ್ವಿಷಯವಿದೂರನನ್ಯಲೌಕಿಕವಿಮು ಖಂ || ದರ್ವೀಕರಧರಶರಣನ | ಖರ್ವಗುಣಂಮುಗ್ಧಸಂಗನೆಂಬಮಹಾತ್ಮಂ||

ವ || ಅಂತೆಳ್ತಂದಲ್ಲಿ ಕುಸುಮಾನುಲೇಪನ ತಾಂಬೂಲಾದಿವೆರಸು ಸೂಳೆಗೆಯ್ತಕ್ಕೆ ಪೋಪಚರನಿಕರಮುಂ ನಿರೀಕ್ಷಿಸಿ, ಶೂಲಿಪೂಜೆಗೆ ಪೋಪಂದ ಮೆಂದು ಬಗೆದು ತಾನುಂ ಪೋಗಳೆಳಸಿ ಮುನ್ನೆಂದುಮನಂಗ ಕೇಳಿಯನರಿ ಯದ ಮುಗ್ಧಂ ಮುಗ್ಧಸಂಗಯ್ಯಂ ಬಸವನಿದಿರ್ಗೆವಂದಿ ವಂದಿರೊಡನಾನುಂ ಸೂಳೆಗೆಯ್ತಕ್ಕೆ ಪೋದಪೆನೆನ್ನಂ ಕಳುಪಲ್ವೇಳ್ಕು ಮೆನೆಕೇಳ್ದುಬಸವಂ ತನ್ಮು ಗ್ಧತೆಗೆ ಮುಗುಳ್ನಗೆನಕ್ಕು.

ಕಂ || ಪೋದಪಿರೆವೋಗಿವೆಂದ | ತ್ಯಾದರದಿಸುಗಂಧಮಾಲ್ಯಭೂಷ ಣರುಚಿರಾ || ಚ್ಛಾದನವಿಭೂಷಣಂಗಳಿ | ನಾದೇವನನೊಲ್ದುತಾನೆಸಿಂಗರಿ ಸುತ್ತಂ .... ||೪||

ಚ || ವೃ || ಕುಸುಮವಿಲೇಪನಾದಿಬಹುವಸ್ತುಗಳಂಮಿಗೆಕೊಟ್ಟುನ ಣ್ಪುವೆ | ತ್ತಿಸೆವನನೋರ್ವನಂಚರನನೊಲ್ದನುಯಾಯಿಯನಿತ್ತುಜಾಣ್ಮೆರಂ|| ಜಿಸುವಮಹೇಶಭಕ್ತಿಯುತೆಯಾದಪಣಾಂಗನೆಯಾಲಯಕ್ಕೆತಾ | ನೊಸೆದು ವಿನೋದದಿಂಕಳುಪಿದಂಬಸವಂಘನಮುಗ್ಧಸಂಗನಂ ||೫||

ವ || ಅಂತುಕಳುಪೆ ಕಡುಸಡಗರಂಬೆತ್ತು.

ಚ || ವೃ || ತಳಿರ್ವಿಳಾಸಿನೀಜನದಕಾಂಚಿಯಗೆಜ್ಜೆಯಪಿಂಡುಗಂ ಕಣಂ | ಗಳಸೊಗಸಾಂತನೇವುರದತುಂಬಿತುರುಂಬಿದಪೂಗೆಮೇಲವಂ || ಡಳಿಪಳಿವಿಂಡಿನಿಂಚರಮೆತೆಕ್ಕನೆತೀವಿದಸೂಳೆಗೇರಿಕಂ | ಗೊಳಿಸಿರೆನೋಡು ತಂನಡೆದನೀಶ್ವರಪಾದಸರೋಜಷಟ್ಪದಂ .... ||೬||

ಚ || ಪಳುಕಿನಭಿತ್ತಿಬಿಜ್ಜರದಸೆಜ್ಜೆವಿಧೂಪಲರಮ್ಯಕುಟ್ಟಿಮ | ಸ್ಥಳ ಮಮರೇಂದ್ರನೀಲಮಯವೇದಿಕೆಪಚ್ಚೆಯಬಳ್ಳಿಮಾಡವು || ಗ್ಗಳಿಸಿದಪದ್ಮ ರಾಗದಕನತ್ಕಳಶಂಪೊಸಪೊನ್ನಘಂಟಿಕಂ|ಗೊಳಿಸುವವಿದ್ರುಮಾವಳಿಯತೋ ರಣವೊಪ್ಪುವಸೂಳೆಗೇರಿಯೊಳ್ .... ||೭||

ಇದುಮುದನೇಂದ್ರಜಾಲಿಕನೊಡರ್ಚಿದಕೌತುಕಮೆಂದುನಿಂದುನೋ| ಳ್ಪುದುವಿಟರಾಜರಮ್ಯಮಣಿಹರ್ಮ್ಯದಮೇಲೆನವೀನ್ನಶಂಖದ || ಗ್ರದೊಳೊಗೆ ದಿರ್ದಪಂಕಜದೊಳುಳ್ಳಲರ್ದುತ್ಪಳದೊಳ್ಪೊದಳ್ದತು| ಳ್ಕಿದತಿಳಿಜೊನ್ನಮುಂ ಪೊರೆಯನಪ್ಪನಿಲುಂಬದಭೃಂಗಮಾಲೆಯುಂ .... ||೮||

ವ || ಮತ್ತಮಲ್ಲಿ ನಿಜಸಖಿಗೆ ವಿದಗ್ಧೆ ಬುದ್ಧಿಪೇಳ್ದಳದೆಂತೆನೆ:

ಚ || ವೃ || ಪೊಸಸರದಲ್ಲಿಪಾಡುಪಿರಿದೀವನಕೇಳಿಯೊಳೊಂದುಸದ್ರ
ವಂ | ಮಿಸುಗಿರೆಕಾಮಧರ್ಮಗುಣವೃತ್ತಿಯನಾಳ್ದಿರಸಾರಗಂಧಮಂ || ಬಿಸು
ಡುಮನೋಜ್ಞಪದ್ಮಸುಮನೋರುಚಿಯಂಪಡೆಪಾರುಗೆಯ್ತ್ತಮಂ | ಪೊಸ
ಯಿಸಿಸೋಂಕಿಕಾದಲರೊಳಿಂಬರಿದೊಂದುಮದಾಳಿಸೌಖ್ಯಮಂ ||೯||

ವ || ಇಂತನೂನಶೋಭಾವರೇಣ್ಯಮಾದ ಮದನಮದ ಮಧುಕರ ಮಾಲಾತಿಮಾಲೆಯಂತೆಸೆವ ಗಣಿಕಾವಾಟಮಂ ಪೊಕ್ಕು ತಂಸಿತಂಬಿನಿಯ ಮಣಿಮಯಮಂದಿರ ಬಂಧುರಾಂಗಣಮನವಂ ಪುಗುತಂದಾಗಳ್.

ಚ ವೃ || ಅಳಿಕುಳಕುಂತಳಂಪೆರೆನೊಸಲ್ಕುಮುದೇಕ್ಷಣಮಬ್ಜವೈರಿ
ಮಂ | ಡಳವದನಂಪ್ರವಾಳಮಧುರಾಧರಮಂದದಕಂಬುಕಂಠಿಮ || ಜ್ವಳ
ಕಳಶಸ್ತನಂಸವಲಿತಾತನುಮಧ್ಯಮಿಭೇಂದ್ರಕುಂಭಮಂ | ಜುಳಕಟಿಬಾಳೆ
ಸುಹೊಡೆವಿರಾಜಿಪಕಾಮಿನಿಕಂಡಳಾತನಂ .... ||೧೦||

ವಿಳಸತ್ಸೀಮಂತರತ್ನ ಸ್ಫುಟಫಣಮಣಿ ವೇಣೀಲತಾಭೋಗಿತಸ್ಮಂ|
ಜುಳಪಾದೋದ್ಯನ್ನಖಪ್ರದ್ಯುತಿಸುಗೆಗೆರಗಿರ್ದಂತೆಚೆಲ್ವಾಗೆನೇತ್ರಾ || ಚಳತೇ
ಜಃಪುಷ್ಪದಿಂಪೂಜಿಸಿದವರಪಣಸ್ತ್ರೀಯಭೋಳೇಂದುಗತ್ಯ | ಜ್ವಳಭಸ್ಮಜ್ಯೋ
ತ್ಸ್ನೆಯಂಸಂಗಳಿಸಿಪರತಿದಂಮುಗ್ಧಸಂಗಾರ್ಯನಾಗಳ್ .... ||೧೧||

ವಚನ|| ಅನಂತರ ಮಾ ವಾರಂಗನೆ ಕೈಗೊಟ್ಟು ಬಿಜಯಂಗೆಯ್ಸಿ ನಿಜನಿಕೇತನಮನೊಳಪೊಗಿಸೆ ಮುಗ್ಧದೇವಂ ನಿರೀಕ್ಷಿ ಪಾಗಳ್ಕುಸುಮಶರ ಕೇಳಿ ನಿಳಯಾಂತರಾಳದೋಳ್ನೆಗಳ್ತೆವೆತ್ತ ಸುವರ್ಣಮಯಮಂಜುಳ ಪಂಜ ರಾಂತ ರಾರ್ಚಿತ ಮೃದುಮಧುರ ವಚನಚಯರುಚಿರತರ ಸುಭಗತನುಶುಕ ಶಾರಿಕಾನಿಕಾಯಮುಂ, ವಿಶದಶಶಿ ಮಣಿಮಯಕುಟ್ಟಿಮಸ್ಥಳ ಪ್ರತಿಬಿಂಬ ಕದಂಬಡಂಬರ ದ್ವಿಗುಣಿತ ವಿಳಾಸ ವಿಶಾಲರುಚಿ ಶಾಲಿಸಾಲಭಂಜಿಕಾ ನಿಕುರುಂಬಮುಂ, ಮದಮಧುಕರಪ್ರಕರ ಝೇಂಕೃತಿಸಂಕಲಿತ ವಿತತಾ ಮಂದ ಮರಂದರಸ ರಜೋರಾಶಿರಂಜಿತ ಕುಸುಮ ಮಾಲಾಸಂತಾನವಿತಾ ನಮುಂ, ಚಂಚತ್ಕಾಂಚನ ಪೀಠಿಕಾರೂಢ ವಿಮಳ ಹಿಮಮಿಳಿತ ಮಧುರ ತರ ತಾಂಬೂಲಪರಿಕರ ಮಿಳಿತ ಮಣಿಮಯಪಾತ್ರ ವರ್ಗಮುಂ, ಕಮನ ಕಮಳಕುಮುದ ಕಲ್ಹಾರೋಶೀರ ಕರ್ಪೂರ ಸುರಭಿತ ಶಿಶಿರಮಧುರ ಸಲಿಲ ಸಂಭೃತ ಕನಕ ಭೃಂಗಾರುವಾರಮುಂ, ಶ್ಲಕ್ಷ್ಣತರಭಿತ್ತಿ ಚಿತ್ರಿತ ಚಿತ್ರತರ

ಚಿತ್ರಸಂದೋಹಮುಂ, ಗೃಹಮಧ್ಯಕುಡ್ಯ ಮಂಡಿತಾನರ್ಘ್ಯಮಣಿಮಯ ಸರ್ವಾಂಗದರ್ಶಕ ದಿವ್ಯರುಚಿನರ್ಮದರ್ಪಣಮುಂ, ಮೃಗಮದಕಾಶ್ಮೀರ ಯಕ್ಷಕರ್ದಮರಸಭರಿತ ಕರಿವಿಷಾಣ ಕರಂಡಕಾಸಮುದಯಮುಂ, ದ್ರಾಕ್ಷಾದಾಡಿಮ ಕಪಿತ್ಥಫಲಪಾನ ಖರ್ಜೂರರಸಾಯನ ಪುಂಡ್ರೇಕ್ಷುಖಂಡ ಕದಂಬಕಲಿತಕಾಂಚನ ಮಯಪಾತ್ರಪ್ರಕರಮುಂ, ವೀಣಾವೇಣು ವಲ್ಲಕೀಕುಸುಮ ಮಾಲಾತಾಲ ವೃಂತಾಕ್ಷಫಲಕಮಣಿಪಾದುಕಾದಿ ಪರಿಕರಪ್ರಸರಮುಂ, ಕಂಗೊಳಿಸಿರ್ದುದಲ್ಲಿ.

ಚ ॥ ವೃ ॥ ವಿಮಳಮರಾಳಮೃದುತಳ್ಪವಿಭಾಸಿಮಣಿಪ್ರತಾನಸಂ ।
ಕ್ರಮಿತವಿತಾನಮಂಜುಳಮಮಂದಸುಗಂಧಲತಾಂತಮಾಲಿಕಾ ॥ ಸಮುದ
ಯಶೋಭಿಹೇಮಮಯಕಾಂಡಪಟಪ್ರವಿರಾಜಮಾನಮಂ । ದಮನಮದರ್ಪ
ಪ್ಪಿತೋರಿದುದುಕಾಂಚಮಂಚಮದೊಂದುಚೆಲ್ವಿನಿಂ ॥ ॥೧೨॥

ವ॥ ಆ ಮನೋಜ್ಞಸುವರ್ಣ ಪರ್ಯಂಕಮಂ ಶಂಕರ ಸಮರ್ಚನೋಚಿತ ಮಂಟಪಮಕ್ಕುಮೆಂದದನೇರಲೊಲ್ಲದೆ ತನ್ನಿಕಟದೊಳ್ಹಾಸಿರ್ದ ಮಣಿಕಂಬಳಾಸನದೊಳ್ಕುಳ್ಳಿರ್ದು ಪರಿಮಳಾಂಬುವಿಂ ನಿಜಪಾದಪ್ರಕ್ಷಾಳನಂಗೆಯ್ದು ಪಾದೋದಕಂ ತಳೆದು ಭಕ್ತಿವೆರಸಿ ನಿಂದಿರ್ದ ಗಣಿಕಾಂಗನೆಯಾನನಮನವಲೋಕನಂಗೆಯ್ದು.

ಕಂ ॥ ಎಲೆಭಕ್ತೆನಿನ್ನಮಯ್ಯೋ । ಳ್ಸಲಲಿತಭಸಿತಾನುಲೇಪನಂರು
ದ್ರಾಕ್ಷಾ ॥ ವಲಿಕೊರಲೊಳ್ಕಿರದೊಳ್ಜಡೆ । ನೆಲಸದಬಗೆಯೇಂಮೃಗಾಕ್ಷಿ
ಪೇಳೆನಗೀಗಳ್ ॥ .... ॥೧೩॥

ವ॥ ಎಂಬತನ್ಮಗ್ಧೋಕ್ತಿಗೇಳ್ದು ವಿದಗ್ಧೆ ಮಂದಸ್ಮಿತೆಯಾಗಿ.

ಕಂ॥ ಪಳದಿಯಬಣ್ಣದಭಸಿತಮ । ನಿಳೆಯೊಳ್ದ್ವೀಪಾಂತರಾಗತವ
ನನವರತಂ ॥ ತಳದಿರ್ಪೆಂ ನೋಡೆಂದಾ । ಗಳೆತನ್ನೊಡಲಿನರಿಶಿನವನವ
ಳ್ತೋರಿಸಿದಳ್ ॥ .... ॥೧೪॥

ವೃ ॥ ಕ್ಷೀರಾಂಬೋಧಿಯತೀರದೊಳ್ಜನಿಸಿನುಣ್ಪೆಂದಾನೆನಂದೋರ
ದಾ । ಕಾರಂತಳ್ತಿರಿಂಜಿಪಾಬಿಳಿಯರುದ್ರಾಕ್ಷಾಳಿಯಂತಾಳ್ದೆನಂ ॥ ದಾ
ರಾಜಾನನೆತೋರಿಸುತ್ತೆಸೆವಮುಕ್ತಾಹಾರಮಂಮುಗ್ಧಸಂ । ಗಾರಾಧ್ಯಂಗೆ
ಶಿವಪ್ರಸಾದಕುಸುಮಂದಾಳಲ್ಕಜಾರ್ಗಂಗಳಂ ॥ ॥೧೫॥

ಕಂ॥ ಉಳಿಸಿನಿಮಿರ್ಚಿದಜಡೆಯಂ । ತಳೆದಿರ್ಪೆನಿದೊಂದನೀಕ್ಷಿಸೆಂ

ದೊಲವಿಂದಂ ॥ ಕಳಭನೃದುಮಯಾನೆನಿಜಮಂ । ಜುಳಷಟ್ಪದನೀಲವೇಣಿ
ಯಂ ಕಾಣಿಸಿದಳ್ ॥ .... ॥೧೬॥

ಭವಿದೃಷ್ಟಿಪಾತಮೆಸ್ನವ । ಯುವನಿವಹಮುಸಂಟಿದಂತೆ ಸರ್ವಾಂಗ
ಕ್ಕೊ ॥ ಪ್ರುವಕೌಪೀನಸಮನಾಂತೆಂ । ವಿವರಿಪುದೆಂದುಟ್ಟಪಟ್ಟೆಯಂ ತೋರಿ
ಸಿದಳ್ ॥ .... ॥೧೭॥

ಪರಮಶಿವಭಕ್ತಿಭಾಸುರ । ಗಿರಿಜಾತೆಯುಸಾಂಪ್ರದಾಯದಿಂಬಂದು
ದುಬಂ ॥ ಧುರಶಿವಲಾಂಛನಮಿದನಾಂ । ಧರಿಸಿರ್ದಪೆನೆಮ್ಮವರ್ಗಮವನೀ
ತಳದೊಳ್ ॥ .... ॥೧೮॥

ಸಾರಶ್ರೀಗಿರಿಯೊಳ್ದ್ರಾ । ಕ್ಷಾರಾಮದೊಳೆಸೆವಕಾಂಚಿಯೊಳ್ನೆಲ
ಸಿರ್ಕ್ಕುಂ ॥ ಗೌರೀಧೃತಶಿವಲಾಂಛನ । ಧಾರಣದಿಸುಮೇಶಸಂಭ್ರಮಯಂ
ಭಜಿಯಿಸುತಂ ॥ .... ॥೧೯॥

ಯಮುಗನವರತಂ ಕೇಳ್ದಂ । ಗೆಮುನಿವಹಂಪ್ರಾಣಮವರಸೇವಾರತಿ
ಸಂ ॥ ಭ್ರಮಮಲ್ಲದೆಪೆರತೊಂದು । ದ್ಯಮಮಲ್ಲಿದುನನ್ನಿಯಂದವಳ್ನುಡಿ
ಯಲೊಡಂ ॥ .... ॥ ೨೦ ॥

ಬಗೆಗೊಂಡುಕೇಳ್ದನೋಡು । ತ್ತಗಲದೆಶಿವಶಿವವಿಚಿತ್ರಮಿಾಲಾಂಛ
ನಮಿಾ ॥ ಸುಗುಣೆಯುಚರಿತ್ರಮೆಂದಾ । ಮುಗುಧಂಸಾಶ್ಚರ್ಯಮುದಮನಾ
ಳ್ದಿಸೆದಿರ್ದಂ ॥ .... ॥೨೧॥

ವಚನ॥ ಅಂತೆಸೆದಿರ್ದನಿತರೊಳ್ ಲಿಂಗಾರ್ಚನೆಗೈಯಲುಜ್ಜುಗಿಸಿದ ಮುಗ್ಧಸಂಗಮ ದೇವನಿಂಗಿತಮನರಿದಾವಂದಿದ ನಾದೊಡೆ ಮಿಾ ದೇವಂಗೆ ಸಂತಸನುನೊಡರ್ಚುವುದೆ ಕಜ್ಜಮೆಂದುನಿರ್ಧರಿಸಿ ತತ್ಪೂಜಾನಿಯೋಗಕ್ಕೆ ಜೇಗದಿ ನಾ ವಾರಾಂಗನೆ ನಿಯಾಮಿಸಿ ಸಾದರಂಮಿಗೆ ಸಂಭ್ರಮಿಸಿ ಮೃಗಮದಾ ಮೋದೆಯೆಂಬವಳ್ಪ್ಕಾಂತೆ ಗನುಲೇಪನಂ ಗೊಳಿಪಂತೆ ಸುರಭಿಜಳಮಿಳಿತ ಗೋಮಯಾನುಲೇಪನಂಗೆಯ್ದು ಚೌಕಮಂ ರಚಿಯಿಸೆಯುಂ, ಶಶಿಲೇಖೆಯೆಂಬವಳ್ಮಹೀಲತೆ ಪೂತುದೆನಿಸಿ ಮೌಕ್ತಿಕ ಚೂರ್ಣದಿಂ ವಿವಿಧ ಕುಸುಮಾಕೃತಿ ಕಲಿತರಂಗನಲ್ಲಿಯು ನೊಡರ್ಚೆಯುಂ, ತರಂಗಿಣಿಯುಂಬವಳ್ಮುಗ್ಧಸಂಗಮ ದೇವಂಗೆ ಧರಾವಧುಭಕ್ತಿಯಿಂ ಕಳಸಂಬೊತ್ತಳೆನಿಸಿ ಸುರಭಿಶೀತಳ ಮಧುರವಾರಿ ಪೂರಿತಕನಕಕಳಶಮನಮರ್ಚೆಯುಂ, ಗೌರಿಯೆಂಬವಳ್ ರವಿಬಿಂಬಮನಧಃಕರಿಪ ಕಾಂತಿಮಯ ಕನಕಚಷಕ ಸಂದೋಹ

ಮಂ ಪೊಂಬರಿವಾಣದೊಳಿಂಬುಗೊಳಿಸಿಯುಂ, ವಸಂತಲತಿಕೆ ಯೆಂಬವಳ್ ದರದಳಿತ ಕಮಳಕುಮುದ ಕಲ್ಹಾರ ವಕುಳ ತಿಲಕ ಕಿಂಶುಕ ಮಲ್ಲಿಕಾ ಚಂಪಕಾದಿ ಕುಸುಮಬಿಲ್ವಾದಿ ಪಲ್ಲವ ಪ್ರತಾನಮುಂ ಸರಂಗೊಳಿಸಿ ಕರಂಡಕಂ ದೀವಿಪಿಡಿದುನಿಲೆಯುಂ, ಕಾಶ್ಮೀರಮಂಜರಿಯುಂಬವಳ್ ಹಿಮಕಾಶ್ಮೀರಮಲಯಜಂಗಳಿಂ ಘಟ್ಟಮುಗುಳ್ದಿದ ಘಟ್ಟಯಂ ಶುಕ್ತಿಯೊಳಿರಿಸಿ ಕೆಲದೊಳಿದೆಯುಂ, ನಕ್ಷತ್ರಮಾಲೆಯೆಂಬವಳ್ ಧವಳಾಕ್ಷತೆಗಳಂ ಪರಿಸರದೊಳಿರಿಸೆಯುಂ, ಜ್ಯೋತಿಷ್ಮತಿಯೆಂಬವಳ್ಪೇರುರಿಯಾರತಿಯು ನೋರಂತೆ ಪಿಡಿದು ಬೆಳಗೆಯುಂ, ಸುರಭಿಯೆಂಬವಳ್ಸುಗಂಧ ಧೂಪಧೂಮುಮುಂಪರಪೆಯುಂ, ಹೋಳಿಕಾದೇವಿಯೆಂಬವಳ್ಮಧುರತರೋಪಹಾರಮಂ ನೆಗಳ್ಚಿ ಗಢಣಿಸೆಯುಂ, ಕಲಾಮಾಲಿನಿಯೆಂಬವಳ್ ಕರ್ಪೂರ ತಾಂಬೂಲಮಂ ಸಮರ್ಪಿಸೆಯುಂ, ಭಾನುಮತಿಯೆಂಬವಳ್ಸಾರ ನೀರಾಜನಮನೆತ್ತಿ ನೀರಾಜಿಸಿಯುಂ, ಸಂಗೀತಮಂಗಳೆಯೆಂಬವಳ್ಸಂಗೀತಮಂ ಪಾಡೆಯುಂ, ತಾಳವಿದ್ಯಾಧರಿಯೆಂಬವಳ್ ತಾಳಮನೊತ್ತೆಯುಂ, ಚಮತ್ಕಾರಿಣಿ ಯೆಂಬವಳ್ಮೃದಂಗಮಂ ಬಾಜಿಸೆಯುಂ, ಭರತಭಾರತಿಯೆಂಬವಳ್ನವೀನ ಮೆನಿಸಿ ನರ್ತಿಸೆಯು, ಮಾಪಣಾಂಗನೆ ಪರಮಭಕ್ತಿಯಿಂ ವಿವಿಧೋಪಚಾರಮನಿಮಿರ್ಚೆಯು, ಮನುಪಮಾನಂದರಸನಿಮಜ್ಜಮಾನ ಸಂಮುಗ್ಧದೇವಂ ಶಿವಲಿಂಗಪೂಜೆಯಂ ನೆಗಳ್ಚುತ್ತಮಿರೆಯಿರೆ.

ವೃ|| ಉ|| ಕೂಜತ್ಕಾದಂಬಚಕ್ರಪ್ರಮುಖವಿರವನಿರ್ನಿದ್ರಕಂಜಾತ
ಪುಂಜ । ಭ್ರಾಜದ್ಗಂಧಾನುಬಂಧಂರತಿರಮಣರಣಶ್ರಾಂತ ಕಾಂತಾಕದಂ
ಬೋ || ರೋಜಶ್ರೀಖಂಡಮಿಶ್ರಶ್ರಮಜಲಕಣಿಕಾಹಾರಚೋರಂಪಣಿಸ್ತ್ರೀ।
ರಾಜದ್ಧಂಮಿಲ್ಲಮಾಲಾಸ್ಖಲಿತಗತಿಯುತಂಮಾರುತಂತೀಡಿತಾಗಳ್ ||೨೨||

ಕಂ|| ಸರ್ವಸ್ವಾಪಹರಂರವಿ । ಪೂರ್ವಾಶೆಯೊಳೆಯ್ದಿರಾಜವಸುಗೈ
ದಪನೆಂ || ದುರ್ವಿಗೆಕೂಗಿಟ್ಟಪುದೆನೆ । ಕೊರ್ವಿದಕಕ್ಕುಟನಿಕಾಯಮೆಂ
ಕೂಗಿದುದೋ || .... ||೨೩||

ಚ|| ವೃ|| ಬಿರಿವಸರೋರುಹಂಮುಗಿವಕೈರವಪಂಙ್ತಿಕುಕಿಲ್ವಪಕ್ಕಿಗಾ
ಪರಿಪಮುದಾಳಿಯಂಕುರಿಪಮೆಲ್ಲಲರೊಂದುವಜೋಡುವಕ್ಕಿಮೈ || ಗರೆವುದು
ರಾಜರಂಜಿಸುವಸಂಜೆಯುಡಂಗುವಜೊನ್ನದೇಳ್ಗೆ ಕಾ । ತರಿಪಚಕೋರಮು
ರ್ಬಿಳಿವಸಾಗರಮೊಪ್ಪುದುಸುಪ್ರಭಾತದೊಳ್ || ||೨೪||

ಅಳಿಶಿಶುಗಳ್ಗೆ ಕೋರಕಪಯೋಧರಮಂ ಪಡೆದಿತ್ತು ಪದ್ಮತಂ | ಡುಲ
ಮನೆಕೊಟ್ಟು ವೀಚಿಭುಜದಿಂದೆಳೆಯೆಂಚೆಯನಪ್ಪು ಪದ್ಮಿನೀ || ದಳಮೆನಿಪೊಂ
ದುತೆಗೊಟ್ಟಿಲೊಳೆಪಟ್ಟರಿಸುತ್ತೆ ರಥಾಂಗಶಾಬಮಂ | ಗಳಿಲನೆತೂಗುತಂಸರಸಿ
ಪೋಲ್ತ್ತಳನೇಕಸುತೋಪಯುಕ್ತೆಯಂ || .... ||೨೫||

ಕಂ || ಉದಯಗಿರಿಶೃಂಗದಂದಾ | ಗ್ರದೊಳೆತ್ತಿದದಿವಸರಮೆಯರು
ಚಿಮಯಮಾಣಿ || ಕ್ಯದಸತ್ತಿಗೆಯೆನಿಸಿದುದು | ವಿದಕೆಂಬೆಳಗಡರ್ದುವಿ
ಸುವದಿನಮಣಿಬಿಂಬಂ .... ||೨೬||

ಮ || ವೃ || ಶ್ರುತಿನಾದಂಚರಣಾಯುಧಧ್ವನಿಶಿವಾಗಾರಾಳಿತುರ್ಯಸ್ವ
ನಂ | ತತತೂರ್ಯಸ್ವನಮಿಂದುಸಿಂಧುಜಲಮಗ್ನಂನಾಳಿಕಾಪಾತ್ರಮು || ಗ್ಗತ
ಭೃಂಗೀಶುಭಶೋಭನಂನೆರೆಯೆತಾಕ್ಕೈಗೊಡಿವಳ್ಪದ್ಮಿನೀ | ಸತಿಸಂಧ್ಯಾರುಚಿ
ಜಾರೆಕಾಂಡಪಟದಂತಾರಾಗಮಾರ್ತಾಂಡನೋಳ್ ||೨೭||

ಕಂ || ಹರಿಣಾಂಕಂತೆಗೆದೋಡು | ತ್ತಿರೆಪಶ್ಚಿಮಗಿರಿಯಮರೆಗೆಗಗ
ನಾಟವಿಯೊಳ್ || ನೆರೆದುಡುಗಳನಿಟ್ಟೊರಸುತೆ | ಪರಿಮರುಬಿಯಧರ್ಕಳಂ
ತಿರರ್ಕಕರಂಗಳ್ .... ||೨೮||

ವ || ಆಗಳ್ಮಗ್ಧಸಂಗಮದೇವನುಷಃಕಾಲ ಶಿವಪೂಜಾನಂತರ ಮ
ಲ್ಲಿಂದೆಳ್ದು ಬಸವನೆಡೆಗೆಳ್ತಂದು ತನ್ಮಾನಿತಂ ಸಂಭ್ರಮಂಮಿಗೆಗಡಣಸಮು
ದಯಕ್ಕೆನಗೆಯಂಪಸರಿಸಿ.

ಮ || ವೃ || ಅದನೇವೇಳ್ವುದೊಸೂಳಿಗೆಯ್ತ್ತದೆಪೊದಳ್ದಾನಂದದೊಂ
ದಂದವಮಂ | ಮದನಾರಾತಿಯೆಬಲ್ಲನೆನ್ನೊಡನೆನೀನ್ನೈತಂದುದಿಲ್ಲೈಯುತ ||
ಳ್ವಪೆನೀಂಬಂದೊಡೆತತ್ಸುಖಂನಿನಗಮುಕ್ಕುಂನಿನ್ನಸಾವೇಳೆಯೋ | ಳ್ಪದಪಿಂ
ದಾಂನೆನೆದೆಂವೃಷೇಂದ್ರಗಣಿಕಾಸದ್ಭಕ್ತಿಯತ್ಯದ್ಭುತಂ ||೨೯||

ಚ || ಪಳದಿಯಬಂಣದುಜ್ವಲವಿಭೂತಿವಿಲಿಪ್ತಸುಧಾಬ್ಧಿತೀರದೋ |
ಳ್ಬೆಳೆದಮರ್ದಂಗದಿಂದೊಗೆದನೂತ್ನಶಿವಾಕ್ಷಯಮಾಲೆದೀರ್ಘಕಂ || ತಳ
ಕೃತಮಾದುದೊಂದೆಜಡೆಬಾಹ್ಯಜನೇಕ್ಷಣಮಂಟದಂತೆಮ್ಯೆ | ಯ್ಯೊಳೆಬಿಗಿದು
ಟ್ಟಕಾಪುಶಿವಲಾಂಛನಮಾಕೆಗದೇನಳುಂಬಮೋ || ||೩೦||

ಕಂ|| ಆವಶಿವಾಗಮವಚನದಿ | ನಾವಘನಿರ್ಧರಿಸಿತಳೆದಳೋಬೆಳ
ರ್ವಣ್ಣಂ || ತೀವಿದರುದ್ರಾಕ್ಷೆಯಮಣಿ |ಯಾವಗಮೆಸೆದಿರ್ಪುದವಳನಾಸಾ
ಗ್ರಮದೊಳ್ || .... ||೩೧||

ಮ|| ಸ|| ವೃ|| ಗಿರಿಜಾತಾಸಾಂಪ್ರದಾಯಾಗತನವಶಿವಚಿನ್ಹಂದದಿಂ ತೆಲ್ಲಮೆಂದಾ |ದರದಿಂತದ್ವೇದಶ್ರೀಪೇಳ್ದ ಳ್ಬಳಿಕಮವಳಪೂಜಾಲಸನ್ಮಂಟಪಂ ಬಿ|| ತ್ತರದಿಂಕಣ್ಗೊಪ್ಪುತಿರ್ಕುಂಸಕಲಪರಿಜನಂಶೈವಚಿನ್ಹಾಂಕಿತಂಕೇ| ಳಿರು ಳೆಲ್ಲಂಸೂಳೆಗೆಯ್ವೆಂಬಸವತವೆತದಾವಾಸದೋಳ್ಪ್ರೀತಿಯಿಂದಂ || ೩೨ ||

ಕಂ|| ಪಗಲಿರುಳೆನ್ನದೆರಾಗಂಮಿಗೆಸೊಗಸಿಂಸೂಳೆಗೆಯ್ದ ಸುಖಮೊಂ ದೆವಲಂ || ಸೆಗಳ್ದಿರೆಮಿಕ್ಕಸುಖಂಗೆ || ಳ್ಸೊಗಯಿಸುವವೆಬಸವಭಕ್ತಸಂತ ತಿಗಳೆಯೋಳ್ || .... ||೩೩||

ಆವಂಗುರುಚರಭಕ್ತನ | ದಾವಂಶಿವಸುಪ್ರಸಾದಭಾಜನನಾಪಂ || ಪಾವನಸಗುಣಸಂಯುತನವ | ನೀವಿಧದಿಂಸೂಳೆಗೆಯ್ದ ನಾಗನೆಮುನ್ನಂ||೩೪||

ಎನಿತೆನಿತುಕಾಲಮುಂನಿಂ| ಮನದೊಲವಿಂಸೂಳೆಗೆಯ್ತ ಮುಂನೆಗಳ್ದಿಯೊ ಪೇ|| ಳ್ವನಗಂತಲ್ಲದೊಡಕ್ಕುಮೆ | ಘನತರಶಿವಭಕ್ತಿ ಸಂಪದಂಬಸವೇಶಾ ||

ವಚನ|| ಎಂದಿಂತೆಲ್ಲಮುನಂಗಳನಲ್ಲದೆ ಪೆರತೊಂದನರಿಯುದಮುಗ್ಧಂ ಮುಗ್ಧಸಂಗಯ್ಯನಿವಂಗಿದು ಯುಕ್ತಮೆಂದು ತತ್ಪ್ರಭಾವಮಂ ಪೊಗಳು ತ್ತಿರೆ ಚನ್ನಬಸವನಾಶ್ಚರ್ಯಂಮಿಗೆ ಕೇಳ್ದು ಪುರಾತನದೊಳಿವನಂತಪ್ಪ ಮುಗ್ಧ ಭಕ್ತರೊಳರೆ ಬೆಸಸಿಮೆಂದಾಬಸವಂ ಗಿರಿಗಿ ಕೈದಾವರೆಗಳಂ ಮುಗಿದುಭಕ್ತಿ ಯಿಂ ಬೆಸಗೊಳಲೊಡನೆ.

ಕಂ|| ಧರೆಯೋಳ್ಕಂನೊಳರೆನ್ನುಯ|ಪುರಾತನರ್ಮುಗ್ಧರಭವಬೋ ಧವಿದಗ್ಧರ್ || ಕರುಣಾಕರರೆಂದಾಬಸ | ವರಸಂತತ್ಕಥೆಯನೊರೆಯಲು ದ್ಯುತನಾದಂ || .... ||೩೬||

ವ|| ಅದೆಂತೆನೆ.

ರು ದ್ರ ಪ ಶು ಪ ತಿ ಗ ಳ ಕ ಥೆ.

ಕಂ|| ವಸುಧೆಗೆತೊಡವೆನಿಸುತೆರಂ | ಜಿಸುವೆಲಿಯುರೆಂಬಪೊಳಲೊ ಳೊಪ್ಪುವನೋರ್ವಂ|| ಪೊಸತೆನಿಪರುದ್ರಪಶುಪತಿ | ವೆಸರಿಂದೆಗುಣಪ್ರಯು ಕ್ತನೀಶ್ವರಭಕ್ತಂ || .... ||೩೭||

ಅವನೊಂದುದಿನದೊಳೋರ್ವಂ | ಶಿವನನಿಕೇತನದೊಳೋದಲಧಿಕಂ ಭುವನ || ಸ್ತವನೀಯಶಿವಪುರಾಣಮು | ನವಿಕಳಮತಿಯೊಲ್ದುಕೇಳುತಿರ್ದಂ ಸಭೆಯೋಳ್ || .... ||೩೮||

ಮ||ಸ್ರ|| ವೃ|| ಸುರರೆಲ್ಲಂಕೂಡಿಭೋಗೀಶ್ವರಗುಣಮಿಳಿತಂಮುಂದರಂನುಂ

ತುಗೋಲಾ | ಗಿರಿದುಗ್ಧಾಂಬೋಧಿಯಂಮೇಣ್ಕಡೆಯಿಕಡೆಯೊಳಂಭೋಧ
ರಶ್ಯಾಮಘೋರಂ || ಗರಳಂಪುಟ್ಟರ್ದುಸರ್ವಾಮರರಸಳುರ್ದುದೆಂಬಂತೆ
ಕಂಡಂತದಂ ಶಂ | ಕರನಾಗಳ್ನುಂಗಿಲೋಕಾವಳಿಯಪ್ಪೊರೆದನೆಂಬುಕ್ತಿಯುಂ
ಕೇಳ್ದನಾಗಳ್ || .... ||೩೯||

ವ|| ಅಂತದಂಕೇಳ್ದುಬೆದರಿಬೆಬ್ಬಳಿವೋಗಿ ||

ಕಂ|| ಹರಹರಪರನುಂಡನೆತ | ದ್ಗರಳಮನಿದುನಿಜಮೆಪೇಳ್ವುದೆನಲ
ಧಿಕಂಬಿ || ತ್ತರಿಸಿದನದುನಿಜಮಾ ಶಂ | ಕರನುಂಡಂಘೋರಗರಳಮಂಶ್ರು
ತಿಸಿದ್ಧಂ || .... ||೪೦||

ಮ || ಎನೆಕೇಳ್ದಕ್ಕಟಕಟ್ಟೆನೆನ್ನಶಿವನೆಂನಾತ್ಮೇಶನೋವ್ರೋ ಪೊಕಂ |
ಮನೆಹಾಲಾಹಲಮುಂ ಮರುಳ್ತನದಪೆರ್ಚಿಂನುಂಗಿದಂನುಂಗಿ ಜೀವನಮುಂ
ಕೊಂಡುಳಿದಪ್ಪನೆಂತೊ ಗತಿಯಾರ್ತಂಸಂಪ್ರಿಯುಂನಂಬಿನಚ್ಚಿನಿತಾಂತಂಬಿಡ
ದಿರ್ದದಂಗೆನಗೆನುತ್ತಾಕ್ರಂದನಂಗೆಯ್ವುತಂ || || ೪೧ ||

ಜಂ|| ಅತಿಸುಕುಮಾರಸೋಮಧರನೆತ್ತ ಭಯಂಕರಕಾಲಕೂಟಮುಂ|
ಮತಿಮಿಗೆಪೀರ್ವುದೆತ್ತ ಸುಧೆಯುಂ ತೆಗೆಮುಂಬಮರಾಳನೆತ್ತಮಾ | ರುತಸಖ
ನಾಳ್ದಪಳ್ಳುರಿಯುನೀಂಟುವುದೆತ್ತನಿಪೀತಚಂದ್ರಿಕಾ | ಮೃತಸುಚಕೋರನೆ
ತ್ತಬಿಸಿಲಂಕುಡಿದಂದಮುದೆತ್ತಲೋಕದೊಳ್ || .... ||೪೨||

ಮ || ಗರಳಜ್ವಾಲೆಯಧೂಮರಾಜಿಪುಗೆ ಕಣ್ಣಿಂತಿರ್ದುದೋಪಾಣಿ
ಪಂ| ಕರುಹಂಮೇಣ್ಪಿಡಿದೌಂಕಿದಂದೆನಿತುತಾಂಕಂದಿರ್ದುದೋನುಂಗೆನುಂ||
ಣ್ಗೊರಲುಂಜಿಹ್ವೆಯುಮಾವಿಷಾಗ್ನಿಯುರಿಯಿಂದೇನಾದುದೋಕುಕ್ಷಿಯೊ |
ಳ್ಬರದಿಂಪ್ರೊಕ್ಕುಮಡಲ್ತಿಸಿತ್ತೆಸಗಿತೋಸಂತಾಪಮುಂದೇವನಾ || ||೪೩||

ಚ|| ಗರಳಮನುಣ್ಬುದಂಬಿಡಿಸದೇಕೆನಗಾತ್ಮಜೆಸುಂಮುನಿರ್ದೆರು|ದ್ರ
ರಿಗಣವರ್ಯರೇವಿಷಮನೀಂಟುವವೇಳೆಯೊಳೆತ್ತಳಯ್ಯೊಪೋ || ದಿರಿಕರಿವಕ್ತ್ರ
ಷಣ್ಮುಖರೆತಂದೆಬಿಸಂಗೊಳೆನೋಡುತಿರ್ಪುದೇ | ಪರಿಹೃತಿಗೆಯ್ಯದಕ್ಕಟಪ
ರಾಙ್ಮುಖನಪ್ಪುದೆವೀರಭದ್ರನೀಂ || .... ||೪೪||

ಕಂ|| ಸುರರೆಲ್ಲರಳಿದೊಡೆಂಪು | ಟ್ಟರೆನಿನ್ನುಂಕಣ್ಣೊಳೊಗೆವರೇಮೃತಿ
ಗಂಜು || ತ್ತಿರದ್ದ್ಯೆಯೊವಿಷಮವಿಷಮುಂ | ಪುರಹರನೀನುಂಡೆಯೆಂತುಜೀವಿ
ಪೆಯುಕಟಾ || .... ||೪೫||

ಜರೆದೋಗಂಮೃತಿನಿನ್ನಯು | ಶರೀರಮಂನೋಂಕದಂತೆನಿಮುತಿಯೊ

ಳಾನೊ || ಲ್ದಿರದೆಸಗಿದಪೆಂಪಂಚಾ | ಕ್ಷರಜಪಮುಂಕೇಳ್ವೆನೆಂತೊವಿಷಮಿಾಂ ಟಿದುದಂ || .... ||೪೬||

ವ || ಎಂದುನೊಂದು ಪಲುಂಬಿಪಳಯಿಪಿಸುತ್ತೆ ಸ್ವಾಳ್ದಂ ಗರಳಂ ಗೊಂಡನೆಂಬುದನಾಲಿಪುದರಿಂ ಮರಣಮೇಲೇಸೆಂದು ರುದ್ರಪಶುಪತಿಯು ಗಾಧಕೂಪದೊಳ್ಬೀಳ್ವನಿತರೋಳ್ ತದ್ಭಕ್ತಿಭಾವಕ್ಕೆ ಶಂಕರಂ ಪ್ರಮಥರು ದ್ರಾದಿಗಣ ದಿವಿಜಗಣಸಮೇತಂ ಪ್ರಸನ್ನನಾಗಿ ಕರತಳದಿಂಪಿಡಿದು, ನೆಗಪಿ ಬೋಳೈಸಿ ಮೆಚ್ಚಿದೆನೊಚ್ಚತಂಪರಮಂ ಬೇಡೆನೆ ಭಕ್ತಂಪದಾರವಿಂದಕ್ಕೆರಗಿ ಕರಾಂಜಲಿಗೆಯ್ದು.

ಕಂ|| ಆವಾವವರಮನೊಲ್ಲೆನು | ಮಾವರನೀಂಪೀರ್ದವಿಷಮನು ಗುಳುಗುಳುಗುಳ್ದಂ || ದೀವರದಕೋಟಿಯುಂನೀಂ | ಭಾವಜಹರನೆಟ್ಟನೆನಗೆ ಕೊಟ್ಟಪನಲ್ತೆ || .... ||೪೭||

ಫಣಿಧರನೀಂಬಿಸಮುಂಡುದ | ನಣುಮಾತ್ರಂ ಕೇಳಲಾರೆನುಗುಳು ಗುಳೆಂದಾ || ಗುಣನಿಧಿಹರಿವಿಧಿಮುಖಸುರ | ಗಣಮಗಿವಿನಮುಸುರೆಶಂಕ ರಂನಗುತಿಂದಂ || .... ||೪೮||

ನಂಜಿನಭಯಮೆನಗುಂಟೆಂ | ದಂಜದಿರೆಲೆಮಗನೆನೋಳ್ಪುದೆನ್ನಯು ಕೊರಲೋಳ್ || ರಂಜಿಸುವಂಜನವರ್ಣದ | ಮಂಜಿನಸಿರ್ಪನಿಯೊಲಿಸೆವ ಹಾಲಾಹಲಮಂ || .... ||೪೯||

ವ|| ಏಗೆಯ್ವುದೆನ್ನ ನಿದೆಂದಭವಂ ನುಡಿಯುಲೊಡಂಕೇಳ್ದು ರುದ್ರು ಪಶುಪತಿತದ್ಗರಳಶೀಕರಮುನಭೀಕ್ಷಿಸಿ ||

ಕಂ|| ಇದುದಿನದಿನದೋಳ್ಬೆಳೆಬೆಳೆ | ದುದರಮನೊಳಪುಗದೆಮಾಣ್ಬ ಪುದೆಪೊಕ್ಕಾಗಳ್ || ಪದುಳಮಿರವೀಯುದೇನಿಂ | ನದಯಾನಿಧಿಬಿಟ್ಟುಕಳೆ ಯುದೀಗಳೆಗರಮುಂ || .... ||೫೦||

ಬಿಡದೊಡೆಕೇಳೆನ್ನಸುವಂ | ಬಿಡುವೆಂಬಿಡದೊಡಮದೆಂತುನೋಳ್ಪೆ ನೊನಿನಗ || ಪ್ಪಡಲಳವನೆಂದುಕೂರಸಿ | ಪಿಡಿದಂವ್ಯತಿಗೆಮರರಳ್ಕೆಪೊಗಳೆ ಗಣಂಗಳ್ || .... ||೫೧||

ವ|| ಅಂತುತನ್ನಂ ಪರಿಚ್ಛೇದಂಗೆಯ್ಯಲುಜ್ಜುಗಿಸಿದ ಭಕ್ತವರನನೇಹ ದಬಗೆಗೆಮೆಚ್ಚಿ ಮದನಹರಂ ಕಾರುಣ್ಯದಿ ನಿರೀಕ್ಷಿಸುತ್ತಮಿಮಂ ವಿಷಮುನು ಗುಳದಿರೆ ಸಾಯದಿರಂ ವಿಷಮನುಗುಳೆ ಭುವನಂ ಬೇಯುಧ್ಥಿರದೇ ಗೆಯ್ವೆ

ನೆಂದು ಭಕ್ತಹಿತಭುವನಹಿತ ಕಾರ್ಯದ್ವಂದ್ವದೊಳಾಂದೋಳಿಪ ಮನಮನೊಂದೆಡೆಗೊಂದಿಸಿ ನೆನೆದುಭಯಹಿತಾರ್ಥನಾಗಿ ಶಿವನಿಂತೆಂದಂ.

ಕಂ|| ಪ್ರಮಥವರರಾಣೆನಿನ್ನಾ|ಣೆನುಗನೆಗರಳದವಿಷದಿನಳಿಯೆನಳಿಯೆ ನಿಜಮೌ || ರ್ಗನುಹಾಶಿಖಿನಿಂದಿದಪುದೆ | ಹಿಮಕಣದಿನೆನುತ್ತೆ ಶಂಭುನಂಬುಗೆಗೊಟ್ಟಂ || .... ||೫೨||

ವ || ಅಂತು ನಂಬುಗೆಯಿತ್ತುದುಮಂ ನಂಬದೊಡೆನ್ನ ಬಲದತೊಡೆಯನೇರಿ ಕೊರಲಂ ನಿಚ್ಚಂ ನಿರೀಕ್ಷಿಸುತ್ತಿರೆಂದು ನುಡಿದೊಡಂಬಡಿಸುತಾತನನಂ ಕಾಲಂ ಕಾರನಂ ತಂಕರಂನನಾಡೆ

ಕಂ|| ಕರವಾಲನನುರ್ಚಿಪಿಡಿದೀ|ಶ್ವರನಂಕಮನೇರಿಕೊರಲನೀಕ್ಷಿಸುತುತ್ಕಂ || ಧರರುದ್ರಪಶುಪನಿರ್ಪಂ | ಗರಳಂಮಿಡುಕಿದೊಡೆಮಡಿವೆನೆಂದತಿನುಗ್ರಂ || .... ||೫೩||

ಪರರುದ್ರಪಶುಪತಿಯಸ | ಚ್ಚರಿತಮನಿಂತೊರೆದುಚನ್ನಬಸವಂಗಗುಣಾ || ಕರಬಸವಂಮುಗುಳ್ನೋರ್ವನ | ಶರಣನಸತ್ಕಥೆಯನೊರವೆನೆಂದಿಂತೆಂದಂ || .... ||೫೪||

ತಿರುನೀಲಕ್ಕನಕಥೆ

ಕಂ || ತಿರುನೀಲಕ್ಕನೆನಿಪ್ಪೀ | ಶ್ವರಭಕ್ತಂದ್ರವಿಡದೇಶದೊಳ್ನೆಲಸಿರ್ಪಂ || ಪರಮಗುಣಾನ್ವಿತನಾತನ | ತರುಣಿಸುಶೀಲಾಭಿಧಾನದಿಂಕರಂಗೊಳಿಪಳ್ || .... ||೫೫||

ವೃ|| ಪರಮಾನಂದದಿನೊಂದುವಾಸರದೊಳಾಭಕ್ತಂಶಿವಾಗಾರದೊಳ್ ಶ್ವರಲಿಂಗಾರ್ಚನಮಂನೆಗಳ್ಚುತಿರೆ ತಲ್ಲಿಂಗಾಗ್ರದೊಳ್ವತ್ತಿಮೇ || ಣ್ಪರಿತಪ್ಪೊರ್ಣಂದುತಲಂದಿಯಂಜವದಿನಾಗಳ್ಕಂಡುತತ್ಕಾಂತೆಬಾ | ಯೆರವಿಂತೂಂತಿರಿದಳ್ಭಯಾಕುಲಿತೆಗಂಡಂಕಂಡನಾಕಜ್ಜಮಂ || ||೫೬||

ಚ|| ಎಲೆಎಲೆದೋಷದೂಷಿತೆದುರಾತ್ಮಿಕೆಲಿಂಗದಪಾವನಾಂಗಮಂ | ಕೊಲಗವೆಬಾಯಯುಗುಳ್ದಿಡಿಯೆ ತೂಂತಿರಿದಪೆವಂಕೆಪಾರೆನು || ತ್ತಲೆದರಿದಾಕೆಯಂನಿಳಯದಿಂಪೊರಗಿಕ್ಕಿನಿರೀಕ್ಷಿಪಾಗಳಾ | ಲಲನೆಬಿಗಿರ್ತುತೂಂತಿರಿಯೊದಿರ್ದತದಿಯ್ಯಕಳೇವರಾರ್ಥದ್ಯೋಳ್|| .... ||೫೭||

ಕಂ|| ಕರ್ಪೂರದ ಮಣಿಗಣಮನೆ | ತೋರ್ಪನೆನೆಸ್ಫೋಟಿ ಕಂಗಳಿರಿಕಾಣುತ್ತಂ || ಸರ್ಪಧರ ಭಕ್ತನುತ್ಸವ | ಮಿರ್ಪಡಿಗೆ ವಿಷಾದದಿಂದೆ ಬಿಸುಸುಯಿಸ್ದಾಗಳ್|| .... ||೫೮||

ತೂಂತಿರಿದುಹಿತಮನೆಸಗಿದ|ಕಾಂತೆಯಕಡೆನೊಂಕಿಪೊಲ್ಲದೆಸಗಿದೆನೆಂದಾ||
ಚಿಂತಾಭರಿತಂಭರದಿಂ| ತಾಂತರುಣಿಯಪೊರೆಗೆಬಂದುಪೊಡಮಡುತೆಂದಂ||
ಪರಮಶಿವಭಕ್ತಿನಿನ್ನಯ | ಪರಿಯಂಮುನ್ನರಿಯದಕಟಜಡಿದೆಂಪಡಿದೆಂ
ತರಳಾಕ್ಷಿನಿನಗೆತಪ್ಪಂ | ಕರಮೆಸಗಿದೆನೆನ್ನವೋಲ್ದುರಾತ್ಮಕರೊಳರೇ ||೬೦||
ಪೆರೆದಲೆಯ ನಂಗದೋೞ್ತೊಂ | ತಿರಿದೆಡೆಯೊೞ್ಣೀ ಮೃಗಾಕ್ಷಿಪುಗುೞಿಲ್ಲು ೞಿದಾ || ತೆರಪಿನೊಳೊಗೆದುದು ಬಂದದ | ನುರೆತೂಂತಿರಿ ದೊರಶಿಕಳೆಕಳಾ ಧರವದನೆ|| .... ||೬೧||
ಮ|| ವೃ|| ಎನೆಕೇಳ್ದಾತನಕಾಂತೆನೊಂದುಮನದೋಳ್ ಮದ್ದೇವದೇವಂಗೆನೋ | ವೆನಿತಾಯ್ತೋಪುಗುೞಿಂದೆ ಕೆಟ್ಟೆನಿನೆಯುಂ ಕೋಪಾತುರಂಬೈದೊಡಂ || ಮುನಿಸಿಪ್ಪೊಯ್ದೊಡವೋವೊ ತೂಂತಿರಿಯ ದಾನೇಕಿಲ್ಲಿಗೆಳ್ತಂದೆನೆಂ | ದುನಿತಾಂತಂಪೊನಲಾಗೆಕಣ್ಬನಿಯುಳುತ್ತೈತಂದುತಲ್ಲಿಂಗದಾ ||೬೨||
ಮ|| ಕೆಲದೋೞ್ನಿಂದು ನಿರೀಕ್ಷಿಸುತ್ತೆನಿಬಿಡ ಸ್ಫೋಟಂಗಳಂಕಂಡುಕಾ | ದಲನುಂತಾನುಮುಮಂದಶೋಕರಸದೊಳ್ತೆಂಕಾಡುತಂಪುಷ್ಪಕೋ || ಮಲಲಿಂಗಾಂಗದೊಳಾಯ್ತುಬಲ್ಪುಗೞಿದೆಂನಿಂಮುಂನಮೇಗೆಯ್ವೆನೆಂ | ದು ಲಸತ್ಪುಡ್ಗದಿತಂನಗೊಕ್ಕರಿಯೆಕೂರ್ಪಿಂಮೆಚ್ಚಿದಂಶಂಕರಂ || ||೬೩||
ವ|| ಅಂತು ಮಾಹೇಶ್ವರಂ ದಿವಿಜ ಗಣಗಣೇಂದ್ರಸಹಿತಂ ತನ್ಮುಗ್ಧಭಕ್ತಿಗೊಲವಿಂ ಪ್ರತ್ಯಕ್ಷಮಾಗಿ ವರಮನಿತ್ತು ಪೆಂಬೇಡಿಮೆನೆ ಜಾಯಾಪತಿಗಳ್ಸಾಷ್ಟಾಂಗಮೆರಗಿ ಬದ್ಧಾಂಜಲಿಗಳಾಗಿ.
ಕಂ|| ಇಂನೆಮಗೆಬೇರೆವರಮೇಂ | ನಿನ್ನಯತನುಸುಖ ದೊಳಿರೆನಿರೀಕ್ಷಿಪುದೆವರಂ || ಭಿನ್ನವರಂಗಳನರ್ತಿಸೆ| ನಿನ್ನಂಘ್ರಿಯನೊಲ್ಲದಿರ್ದರಾಗೆವೆನಿಜದಿಂ||
ಭವಭವದಂಘ್ರಿಸ್ಮರಣಮ | ದವಿರತಮಿರ್ಕೆಮಗೆನಿನ್ನಗಣಮುಂನೀನುಂ|| ಪ್ರವಿತತಸುಖಮಿರ್ಪುದೆಬೇ | ೞ್ವವರಂಬೇರಿಲ್ಲಬಾಲಚಂದ್ರಾಭರಣಾ ||೬೪||
ವ|| ಎಂದುಬಿನ್ನೈಸಲೊಡನೆ.
ತರಳವೃತ್ತ|| ಹರಿವಿರಿಂಚಿಪುರಂದ ರಾದಿಗಳಂದುತಂ ನಿಜಭಕ್ತಿಗ | ಚ್ಚರಿಯನಾನೆಗಣಾಳಿಸಂತಸಮೊಂದಿಕೀರ್ತಿಸೆಸತ್ಕೃಪಾ || ಶರಧಿಯಲ್ಲಿ ಮುಳುಂಗಿಸುತ್ತಪರಂಮಹಾನಿಜಮೋಕ್ಷಭಾ | ಸುರಸುಖಾಸ್ಥಿತಿಯಿತ್ತು ಮಂನಿಸಿದಂ ಮನೋಭವಮರ್ದನಂ || .... ||೬೬||
ವ|| ಇಂತೆಂದು ಕಥೆಯನುಸುರ್ದುನುತ್ತಂ ಕೇಳ್ವುದೆಂದಿಂತೆಂದಂ.

ಕೋಳೂರು ಕೊಡಗೂಸಿನಕಥೆ.

ಮ|| ವೃ|| ವಿಳಸದ್ಬಾಹ್ಯವನೋಪವನ್ಯಪರಿಖಾ ಪೂರ್ಣಾಂಬುಜಾತಾಂಬುಜೋ | ತ್ಪಲಕಲ್ಹಾರ ಸುಗಂಧಿಚುಂಬಿತನ ಭೃಂಗದ್ರಾಕ್ಷಸಾಲಂಸಮು || ಜ್ವಲರತ್ನಾಲಯ ಹರ್ಮ್ಯವಂಟಪ ಶಿವಾಗಾರಾಮಿತ ಶ್ರೀಯುತಂ | ಕಳಿಪೆತ್ತಗ್ಗಳವಾಗಿರಂಜಿಪುದು ಕೋಳೂರೆಂಬಸತ್ಪಟ್ಟಣಂ ||೬೭||

ಆಪಟ್ಟಳದೊಳಗಿರ್ಪಂ | ಗೋಪಧ್ವಜಪಾದಪೂಜಕಂಮೃದುಮಧುರಾ ಳಾಪಂಸದ್ಗುಣನಿವಹಕ | ಳಾಪಂಶಿವದೇವನೆಂಬಭಕ್ತನದೊರ್ವಂ ||೬೮||

ಅವನತನುಜಾತೆ ಸೌಂದರಿ | ಕುವಲಯದಳನಯನೆ ಕೋಮಲಾಂಗಿ ಸುಧಾಪೂ || ರ್ಣವವಿನಯವಾಣಿಮೃದುಳ | ಸ್ಮಿತವನರುಹವದನೆ ಕನ್ನೆಕಂಗೊಳಿಸಿರ್ಪಳ್|| .... ||೬೯||

ವ|| ಆ ಶಿವದೇವನೊಂದುದಿನಂ ದೇವಕಾರ್ಯನಿಮಿತ್ತಂ ಗೃಹಿಣಿವೆರಸಿನೆರೆಯೂರ್ಗೆ ತೆರಳಲುಜ್ಜುಗಿಸಿ ತನೂಜೆಯಂ ಕರೆದು, ಮೃದವಿಗಲ್ಲಂ ಪಿಡಿದು ಮುದ್ದಿಸಿನಿಡುನೇಹದಿ ನಿರೀಕ್ಷಿಸಿ ಮನೆಗಾಪಿಂಗಿರಿಸಲೆಂದಿಂತೆಂದಂ.

ಮ|| ವೃ|| ಮಗಳೆಮನೋಜ್ಞಮಾತೆನುಡಿದೊರ್ಮೆಯುಮಾಡಿದಿರಕ್ಕಮಕ್ಕಳೊಳ್ | ಬೊಗದಿರುಪಿತ್ತಿಲೋವರಿಯನೋರ್ವಳೆಪ್ರೋಗದಿರೆತ್ತಲುಂಮನಂ | ಬುಗುವದುಕೂಲಮಂವಿಸುನಿಬೊಂಬೆಯನೊಪ್ಪವಭೂಷಣಂಗಳಂ | ಬಗೆವಿಂಗಿತಂದುನಾಳೆನಿನಗಿತ್ತಪೆನಾಂಮನೆಗಾದಿರೊಪ್ಪದಿಂ ||೭೦||

ಕಂ|| ಶಿವನಿಳಯಕ್ಕೈದಿತನೂ|ಭವೆನೀಂಪ್ರಸ್ಥೈಕಮಿತದಕಪಿಲೆಯಪಾಲಂ|| ಶಿವಲಿಂಗಕೆಪ್ರೊಳ್ತರಿದೊ|ಪ್ಪವತೆರದಿಂಸಲಿಸಿಸಲಿಪುದೆನ್ನಯವ್ರತಮಂ||

ವ|| ಎಂದುಮಗಳ್ಗೆ ಬುದ್ಧಿಪೇಳ್ದು ನಿಜರಮಣಿವೆರಸಿ ಬೇರೂರ್ಗಮಂಪ್ರೋದಾಗಳ್ ಪರಿಮಳೋದಕದಿಂ ಜಳಕಂಬೊಕ್ಕು ದಣಿಂಬಮನುಟ್ಟು. ನೊಸಲೊಳ್ಭಸಿತಮಂತಳೆದು ಶಿಂಗರಿಸುತಂ ಶಿವನಿಯಮಿತ ಕಪಿಲಾಕ್ಷೀರಮಂಕಂಮನಿಸಿದಪ್ಪಂತೆಕಾಸಿ, ಬಳ್ಳದಿನಳೆದುಪೊಯ್ದುಪೊಂಬಟ್ಟಲ್ಗೀವಿ ಧವಳವಸ್ತ್ರಮನಿರ್ಮಡಿಕೆಯಿಂಮುಸುಂಕಿ ಸಡಗರದಿಂ ದೇಳ್ತಂದು ಶಿವಾಲಯಂಬೊಕ್ಕು. ಕಲ್ಲಿನಾಥನಂ ಕಂಡೆರಗಿ ಮುಂದೆಪಾಲ್ಬಟ್ಟಲನಿಟು ದೇವಪಶಿದೆಪಾಲ್ನುಡಿವುದೆಂದುಸುರ್ದು, ಕೊಡಗೂಸುಕಂಭಮಂ ಮರೆಗೊಂಡುನಿಂದಿರ್ದನಿಸಾನುಂಬೇಗದಿಂಮರಳ್ದುನೋಳ್ಪಿ ನವಿಾಪಾಲ್ಬಟ್ಟಲಿರ್ದಂತಿರೆ ಪೆಳರ್ದುಮನಂನೊಂದುಮರುಗಿ.

ಕಂ|| ದಡದಡಿಪೆದೆ ಬಿಸಿಮುಸಗುವ । ನಿಡುಸುಯ್ಕಂಪಿಪಗೆರಂಗಳಿ
ಪ್ಪೋರ್ಗಿಡಿದಬಾ || ಯ್ಗುಡುಗುಡನೆಸುರಿದಕಣ್ಬನಿ । ಯೊಡನಿರೆ ಕೊಡಗೂಸು
ನೋಡಿಲಿಂಗಮನಾಗಳ್|| ... . ||೭೨||

ಏಂಕಾರಣಮೀಪಾಲಂ । ನೀಂಕುಡಿಯದೆಸುಮ್ಮನಿರ್ಪ ಯುಕಟಿಕಟಿ
ನಗಾ || ಟಂಕಮನಾಗಿಪುದುಚಿತಮೆ । ಶಂಕರನೀಪೇಳ್ವುದೆಂದುಮುಗುಳ್ದಿಂ
ತೆಂದಳ್ || .... ||೭೩||

ಮ|| ವೃ|| ಪಶಿವೇನಾದು ದೊದೇವಕೇಳ್ನಿನಗೆ ಪಾಲೇಂಕೌಯುದೋ
ಪ್ಪೊತ್ತಿತೋ । ಬಿಸುಪಾರಿರ್ದುದೊಕಂಪುನಾಗದೊತಸತ್ತ್ವಂಪೇರದೋಕಣ್ಗೆ
ರಂ || ಜಿಸದೋಮೇಣ್ಪೊಗೆಸುತ್ತಿದತ್ತೊಪೆರರಿಂ ಕಣ್ಣಂಜಲಾದತ್ತೊಬ ।
ಲ್ಬಿಸಿಯಾಗಿರ್ದುದೊವಿಾಸಲೋಸರಿಸಿತೋಪೇಳೀಂಟದಿರ್ಪಂದಮಂ ||೭೪||

ಕಂ|| ಮನಮೊಳಸಿನೋಡಿದೆನೆನ । ಲ್ಗೆನೆಯುಂಬೇಕ್ಕೈರ್ಯುದ್ಧತಂದೆನೇ
ಪಾಲನಿದಂ || ಮನೆಯಲ್ಲಿ ತಡಂಗೆಯ್ದನೆ । ನೆನೆದೆನೆಪೆರ ತೊಂದನೇಕೆನುಡಿ
ಯೆಪುರಾರೀ * * * * ||೭೫||

ಬಿಸುಪಾರಿರ್ದೊಡೆಸವಿಸವು । ನಿಸುಗುಮೆಬಗೆವಂದುಜವದಿನೀಂಟಿ
ಯ್ಯಸುಧಾ || ರಸಮಂನೀಂಬಯುಸಿದುದಂ । ಬೆಸಸೀಗಳೆನಿನಗೆ ಪೋಗಿತಂ
ದಪೆನಭವಾ ||೭೬||

ಪೊಸಸಕ್ಕರೆಯುಂನವಮಧು । ರಸಮುಂಸರುನೆಯ್ಯ ನೆಸೆವಕದಳೀಫಲ
ಮುಂ || ರಸನೆಯುಳಸಿದುದನೆನ್ನೋ । ಳ್ಬೆಸಸೀಗಳೆನಿನಗೆತಂದಪೇಂಶಶಿಮೌಳಿ||

ಪುರಿಗಡುಬುತರಗುಚಕ್ಕುಲಿ । ಕರಂಜಿಕಾಯ ತಿರಸಂಚಿಗುಳಿಲಡ್ಡು
ಗೆಸ || ಕ್ಕರೆಪೇಣಿಯೊ ಳವುಮನ್ನಂ । ದಿರದೋಳ್ನೀಂಬಯು ಸೆಪೋಗಿತಂದ
ಪೆನೀಗಳ್|| ||೭೮||

ಪಾಲೊಡನಾರೋಗಿಪೆನೆನೆ । ಲೀಲೆಯೊಳಾಂಪೋಗಿತರ್ಪೆನೋಗರ
ಮನಿವ || ಳ್ಬಾಲಕಿವುಸಿನುಡಿದವಳೆಂ । ದಾಳೋಚಿಸದಿರುಪರೀಕ್ಷಿಸೆನ್ನಯ
ಗುಣಮಂ|| ||೭೯||

ಮಲ್ಲಿಕಾಮಾಲಾ|| ಎನ್ನಮಾತನು ಪೇಕ್ಷೆಗೆಯ್ಯ ದೆಪಾಲನೀಂಟದ ಡೈ
ಯ್ಯಕೇ । ಳ್ನಿಂನನಾಂಕರದೊಯ್ವೆನೊಪ್ಪುವವೀರಭದ್ರನತೇಗೆಸರ || ಪನ್ನ
ಮುದ್ಗುರುಪರ್ವಕೆನ್ನಯುತಂದೆನಾಳೆನಗೀವರ । ತ್ನೋನ್ನತಾಭರಣಂಗಳಂನಿನ
ಗೀಪೆನಿಂದುಕಳಾಧರಾ|| ||೮೦||

ವ|| ಎಂದಡಿಗೆರಗಿಮರುಗಿ ಬಾಯುಳಿದು ಪಲವಂದದಿನೊಡಂಬಡಿಸಿ ದೊಡಂತುಟವಿಡುಕದುಗ್ರಂ ಸುಮ್ಮನಿರೆ ಮನಂನೊಂದು ತಲ್ಲಣಿಸಿ ಮಲ್ಲಣಿಗೊಂಡು.

ಮ|| ವೃ|| ಸುಡಿಯಂಪಾಲ್ಗುಡಿಯಂ ಮಹೇಶನಕಟಂನೇಗೆಯ್ವೆನೆಂ ದಳ್ತುಬಾ| ಯ್ವಿಡುತಂಸುತ್ರನೆ ಸುಯ್ವುತಂಸುಗಿಯುತಂಬೇಳಾಗುತಂಬೆರ್ಚಿಸ್ವೆ || ಗೆಡೆಯುತ್ತಂಬಿಡದೇಳ್ವುಡೆಂಡೆಣಿಸುತಂಬಾಯಾರುತಂಬಳ್ಕುತಂ|ಸೆಡೆ ಯುತ್ತಂಕೊಡಗೂಸುಕೋಟಲೆಗೆಪಕ್ಕಾಗಿರ್ದಳಾವೇಳೆಯೊಳ್|| ||೮೧||

ಷಾಧಿಪಂಗೆ ನಾನಾಮಧುರತರ ಫಲಮನೀವ ನಾಕದ್ರುಮಂಗಳುಂ, ತತ್ತ್ವ
ಮಯಂಗೆ ತಾಂಬೂಲಂಗೊಡುವ ಪೂಗಾದಿವಿಟಪಿಗಳುಂ, ನಿಜನಾಮಂಗಳಿಂ
ಲಿಂಗಪ್ರತಿಷ್ಠೆಗೆಯ್ದು ಭಕ್ತಿಮಿಗೆ ಗಿರೀಶಾಯನಮೋಯೆಂದು ಗಿರಿಲಿಂಗಮಂ
ಪೂಜಿಪಗಿರಿಗಳ ತೆರಳ್ಕೆಯುಂ, ವೃಕ್ಷೇಶಾಯನ ಮೋಯೆಂದು ವೃಕ್ಷಲಿಂಗಮ
ನೋಲಗಿಪವೃಕ್ಷಂಗಳಪಙ್ತಿಯುಂ, ಪಕ್ಷಿಪತಯೇನಮೋಯೆಂದು ಪಕ್ಷಿಲಿಂ
ಗಮನಾಸೇವಿಪಮೃಗಂಗಳ ಜುಂಗುಳಿಯುಂ, ನಾಗನಾಥಾಯನ ಮೋಯೆಂ
ದು ನಾಗಲಿಂಗಮಂ ಭಜಿಪನಾಗಂಗಳ ತಂಡಮುಮಂ, ಅಳಿನಾಯಕಾಯ
ನಮೋಯೆಂದಳಿ ಲಿಂಗಮನಮರ್ಚಿಪ ಪಳಿಗಳ ಬಳಗಮುಂ, ಜಲವರೇಣ್ಯಾಯನ
ಮೋಯೆಂದು ಜಲಲಿಂಗಮಂ ಯಜಿಪ ಕೊಳಂಗಳೊಬ್ಬುಳಿಯುಂ, ತೀರ್ಥಾ
ಧಿಪತಯೇನಮೋಯೆಂದು ತೀರ್ಥಲಿಂಗಮನಭಿವಂದಿಪ ತೀರ್ಥಗಳ ತಿಂತಿಣಿ
ಯುಂ, ಮುನಿಪಾಲಕಾಯನಮೋಯೆಂದು ಮುನಿಲಿಂಗಮಂ ಜಾನಿಪ ಮುನಿ
ಪಳವೊತ್ತಮುಂ, ಶಬರರಾಜಾಯನಮೋಯೆಂದು ಶಬರಲಿಂಗಮಂ ಸಪ
ರ್ಯೆಗೆಯ್ವ ಶಬರರವಂಗಡಮುಂ, ಮತ್ತಂ ವನಸಲಿಲಕೇಳಿಗೆಯ್ದು ಪರಿದು ನೆರೆ
ದುಬಿನದಿಪ ಗರುಡಗಂಧರ್ವ ಕಿನ್ನರಕಿಂಪುರುಷ ದಂಪತಿಗಳ ಮೊಗ್ಗರಮುಂ,
ಮಂದ್ರಾದ್ರಿಗಳಳ್ಕೆ ಘೋರತಪಂಗೆಯ್ವ ಸಂಯಮಿಗಳ ಸಾಲ್ಗಳುಂ, ತರುಗಿ
ರಿಗಳ್ನೀಡುವ ಫಲನಿರ್ಝರಾವೃತ ಭಿಕ್ಷೆಯಂ ಕೈಕೊಂಡು ಸಂತವಿರ್ಪತ
ಸ್ವಿಗಳ ಬಂಬಲುಂ, ಅನ್ಯೋನ್ಯ ವೈರಮನುಳಿದೊಂದೆಡೆ ಯೊಳೊಡನಾಡುವ
ನಾನಾಮೃಗಂಗಳ ತಿಂತಿಣಿಯುಂ, ಗಿರೀಶಲಿಂಗಪೂಜೋತ್ಸವಕ್ಕೆಳಸಿ ಷಡಗರ
ದಿಂ ಬರ್ಪದಿಕ್ಪತಿಗಳೋಳಿಯುಂ, ಹರನಿದಿರೊಳ್ನರ್ತನಂ ಗೆಯ್ವ ನಿರ್ಜರೀನಿ
ರ್ಜರರ ಪಾಳಿಯುಂ, ಜಲರುಹಾದಿಜಲೋದ್ಗಮದಿನೀಶನಂ ಪೂಜೆಗೆಯ್ದು
ಮಣಿವಜಲಕನ್ಯಕಾಜಲಪುರುಷರಗೊಂದಣಿಯುಂ, ಮಪೂರ್ವವಸ್ತುವನಭವಂ
ಗೆಕಾಣ್ಕೆ ಗೊಟ್ಟು ನಮಿಪಬಿಡಕನ್ಯಕಾಬಿಲಪುರುಷರಸಂದಣಿಯುಂ ಮನವರ
ತಮಿಂತು ಹಾದ್ಭುತರಸಮನೊದವಿರಂಜಿಸೆ, ಚದುರ್ದಶಭುವನಸ್ಥಿತಿಯನೆಲ್ಲ
ಮನಲ್ಲಿಯೆ ತೋರಿಸಲಾರ್ಪ ಬಿಲ್ವವನದಪೇರ್ಮೆಯಂ ನಡೆನೋಡಿ ನುತಿಯಿ
ಸುತ್ತ ಮಲ್ಲಲ್ಲಿಸಲ್ಲೀಲೆಯಿಂ, ಲಿಂಗಪೂಜೆಗೆಯ್ವುತ ಮಡಿಗಡಿಗೆನಮಿ ಸುತಂ
ಮಾದಿರಾಜಂ ಬರುತ್ತಮಿರೆ ಮತ್ತಮಲ್ಲಿ.

ಕಂ|| ವರಮಹಿಮಯುತರನಾದಿಯ | ಪಿರಿಯರ್ನಿಜಲಿಂಗಸಂಗದೇ

ಹೇಂದ್ರಿಯರ | ಚ್ಚರಿಮಿಗೆಕಂಗೊಳಿಸಿರ್ದ | ರ್ಕರುಣಾಭರಣರ್ಮುನೀಂ ದ್ರರಪಗತತಂದರ್ .... ___ .... ||೪೩||

ತರಳ ವೃತ|| ಜಡೆಗೆಸೋಂಕಿಡು ವಕ್ಷಮಾಲೆಯಕೌಪನವಲ್ಕಲವಸ್ತ್ರ ದಿಂ | ಪಡರೆಸೆಯ್ವವಿಭೂತಿಲೇಪನಮಸಾಂಪಶಾಂಭವಯೋಗೆಮಂ || ಪಡೆವ ಸಾರಶಿವಾಗಮಶ್ರುತಿಕೇಳ್ವಕಂದಫಲಂಗಳಂ | ಬಿಡದೆತರ್ಪಕುಮಾರತಾಪಸ ಬೃಂದಮೇನೆಸೆದಿರ್ದುದೋ ___ ___ ||೪೪||

ಮ|| ವೃ|| ಮಳೆಗಾಲಂಗಳೊಳಿಂಬುವೆತ್ತವಟಭೂಜಛ್ಛಾಯೆಯೋ ಳ್ಮಂಜುಮಂ | ಜುಳವಾಗೊಪ್ಪುವವಾಗೆಯೊಳ್ಪೊಳೆ ಪುಳಿಲ್ದಾಣಂಗಳೊಳ್ಜ ಲ್ಪಿಪಿ || ಲ್ಛಿಳಿಲಿಂಬುಗ್ರನಿದಾಘದೋಳ್ಪುದಿದಪಂಚಾಗ್ನಿಪ್ರದೇಶಂಗಳೋ | ಳ್ಕಳಿವೆತ್ತುಗ್ರತಪಂಗಳಂತಳೆದಪದೇನೊಪ್ಪಿರ್ದರೋತಾಪಸರ್ ||೪೫||

ಮ|| ಚರಣಾಂಗುಷ್ಠಮನೂರಿಧಾತ್ರಿಯೊಳೆಬಾಹುದ್ವಂದ್ವಮೂರ್ಧ್ವ ಕ್ಕೆಸಂ | ದಿರೆಸಿಂದುಗ್ರತಪಂಸೆಗಳ್ವನೆರೆಮೇಗಸ್ಕೊತ್ತಿಪಾದಂಗಳಂ || ಶಿರ ಮಂಸೂಜಿಯಮೇಲೆಸಾರ್ಚತಪಮಂಮಾಳ್ಪಸ್ವಭಾವಂವಪುಃ | ಕರಣವ್ಯಾ ವೃತಿಶೂನ್ಯವಾದಮುನಿಸ್ಪಂದಂಬೀರಿತಾಶ್ಚರ್ಯಮಂ ||೪೬||

ಕಂ|| ತನುವಂಪುತ್ತಡರ್ದಿರೆಮೇ | ಲೆಸಿತಾಂತಂಜಿಡೆಮುಡಲ್ತಲತೆ ಯಪೊಲಿರೆಚ || ದ್ಯನಶಿವನಂನೆನೆವಗ್ಗವ | ಮುನಿಗಳ್ಕಿರುವೆಟ್ಟನಂತಿರೇನೊ ಪ್ಪಿದರೋ ___ ___ ___ ||೪೭||

ಮ|| ಸ|| ವೃ|| ತನುವೃತ್ತಂನೇತ್ರ ದೋಳ್ನೇತ್ರದಗತಿವಿಳಸತ್ಪ್ರಾಣ ದೋಳ್ಪ್ರಾಣಜಾತಂ | ಮನದೊಳ್ತನ್ಮಾನಸಂ ಬುದ್ಧಿಯೊಳಮುದ್ರ್ದಮಹಾ ಬುದ್ಧಿಚಿತ್ತಾಗ್ರನೊಳಿಂ || ಪಿನಚಿತ್ತಂತಾನಹಂಕಾರದೊಳೊದವಿದಹಂಕಾ ರಮಾಜೀವನೋಳ್ಜೀ | ವನಖಂಡಜೋತಿಯೊಳ್ಸಂದಳಿಯೆಮಿಸುಪಯೋ ಗೀಶ್ವರರ್ಕಣ್ಗೆಪಂದರ್ ||೪೮||

ಮ|| ಹರಿಯೋಶ್ಚಲ್ಯಮ ನಾಡುವಾನೆವುಲಿಯೋಳ್ಕೇಳಾ ಪಮಂತಾ ಳ್ದುಸಂ |ಚರಿಪುದ್ಯಂನ್ಮೃಗರಾಜಿಬರ್ಹಿಯಲಸಲ್ಲಾಸ್ಯಂಗಳಂಸಾರ್ದುನೋ ಳ್ಪುರಗಶ್ರೇಣಿನಖಾಗ್ರದಿಂಶರಭಕಂಡೂವಾರಣಂಗೆಯ್ವುಕೇ | ಸರಿವೃಂದಂಭ ಯಮಿಲ್ಲದಿರ್ಕುಮನಿಶಂತತ್ತಾಪಸಾವಾಸದೋಳ್ ||೪೯||

ವ|| ಮತ್ತಮೊಂದುರುಚಿರಪ್ರದೇಶದಲ್ಲಿ.

ಡಂ|| ವೃ|| ಸುರಕುಜಮೂಲದೋಳ್ಮಿಸುಪಚಂದ್ರಶಿಲಾತಳಪುಷ್ಪತಳ್ಪ

ದೋೞೆದೆಸೆದಿರ್ದಭಸ್ಮರಜಮುಂಘುಸೃಣಾರುಣರೇಣುವಂಸಡಿ ॥ ಲ್ದರೆಯೆಡೆಯೊಕ್ಕಕಕ್ಕೆಯುರಲುಂನರುಮಲ್ಲಿಗಮಾಲೆಯುಂಕ್ಷಮಾ । ಧರತನಯಾಮುಹೇಶರೊರಗಿರ್ದುದನೇಂಪಿಸುಣಾಡಲಾರ್ತ್ತುವೋ ॥೫೦॥

ಕಂ॥ ಕರಮಿಂತುಸಂತತಂಭಾ । ಸುರಮುಹಿಮೆಯುನಾಳ್ದಗಿರಿಯನೀಕ್ಷಿಸಿಸಿರಿದ ॥ ಚ್ಚರಿವಡುತೆಮಾದಿರಾಜಂ । ಗುರುವಂಮಿಗೆಕಾಣ್ಬತವಕದಿಂಬರ್ಪಾಗಳ್ .... ॥೫೧॥

ಮ॥ ಸ್ರ॥ ವೃ॥ ಹರತೇಃಪುಜಪೂರ್ಣಾಕೃತಿಯೊಶಿವವಿರಾಣ್ಮೂರ್ತಿಯೋಭಸ್ಮಧಾತ್ರೀ । ಧರಮೋಶ್ರೀಪರ್ವತಾಗ್ರಸ್ಥಿತಮುನಿಜನಪುಣ್ಯಾಸ್ಫುರದ್ರಾಶಿಯೋಯಂ ॥ ಬಿರವಂಕೈಕೊಂಡುಮಾರ್ಗಂಬೀಡಿದುಮಹೀನಭೋಭಾಗಮುಂಮುಟ್ಟಯೋಗೀ । ಶ್ವರನುತ್ತುಂಗಾಂಗನಡ್ಡಂಗೆಡದಿರೆಪದಪಿಂಕಂಡನಾಮಾದಿರಾಜಂ .... ॥೫೨॥

ವ॥ ಅಂತುಕಂಡು ಮುಂದಣ್ಗೆ ಪೋಗಲಳವಲ್ಲದೆ ವಿಸ್ಮಿತಾಂತಃಕರಣನೀಮಹಾ ಮಹಿಮ ನಿರವಂ ಪರೀಕ್ಷಿಪೆನೆಂದು ತನ್ಮಸ್ತಕಾಗ್ರದತಲ್ ವರುಷತ್ರಯುಂ ನಡೆದಂತಂಗಾಣದ ತ್ತಲ್ಪಾದಾಬ್ಜಮುಂಕಂಡು ಪೊಡಮಡುವುದನುಳಿದಿತ್ತಲೇಳ್ತಂದು ದಸರಾಧಮೆಂದು ಬಗೆದು ಮಗುಳ್ದಾಮಸ್ತಕದಿಶಾಭಾಗದಿಂ ಪದನಳಿನದಿಶಾಭಾಗಕ್ಕೆ ವರ್ಷಾಷ್ಟಕಂಬರಂ ನಡೆಗೊಳುತುಂ, ತದಂಘ್ರಿಯುಂಕಾಣದತಿಚಕಿತನಾಗಿ ಕಾರ್ಪಣ್ಯಮನಾಳ್ದುನಿಂದು.

ಕಂ॥ ಮನುಮುನಿಗಳರಶಿಕಾಣದ । ಘನಮಹಿಮಭವನ್ಮಹತ್ವಮುಂಪರಿಕಿಪೊಡಾ ॥ ನೆನಿತರವಂ ಕಾಣದೆಪದ । ವನಜಮನೆನಗಿಲ್ಲಿತೋರಿಪೊರೆಕರುಣಾಬ್ಧೀ ॥ .... ॥೫೩॥

ವ॥ ಎಂದು ಭಯಭಕ್ತಿಯಿಂ ಪೊಗಳ್ದು ಪಕ್ಷದ್ವಯಂಬರಂ ದಂಡಪ್ರಣಾಮಂಗೆಯ್ದಿರುತ್ತಮಿರೆ ಶಿವಯೋಗಿಮಲ್ಲಿಕಾರ್ಜುನಂ ಪ್ರಸನ್ನನಾಗಿ ತನ್ನಮುನ್ನಿನ ದೇಶಿಕಾಕೃತಿಯುಂತಾಳ್ದು ಕರಾಂಬುಜದಿಂದೆತ್ತಿ ಗಾಢಾಲಿಂಗನಂಗೆಯ್ದು ಕೃಪಾದ್ರಾರ್ಲೋಕನದಿ ನಭೀಕ್ಷಿಸಿ ॥

ಕಂ॥ ಕರುಣಾಮೃತರಸಮೊಗೆದು । ಬ್ಬರಿಸೆಪುಖಾಂಬುಜದಿತುಳ್ಕಿದಂತಿರೆದಶನ ॥ ಸ್ಫುರಿತರುಚಿಮುಡಿದನಾಮು । ಲ್ಲರಸಂಮಾದರಸನೊಡನೆನೆಸುನಗುತಾಗಳ್ ॥ .... ॥೫೪॥

ಪ್ರಾಜ್ಯತರಮಾದನಿಜಸಾ । ಮ್ರಾಜ್ಯಮನುಳಿದರರೆಘೋರವಿಪಿನಾಂತ

ರದೋಳ್ ॥ ಪೂಜ್ಯಪುತಿಬಂದೆನಿನ್ನವೊ । ಲೀಜ್ಯಾಮಂಡಲದೊಳಧಿಕಸಾಹಸಿಯಾವಂ ॥ —— —— ॥೫೫॥

ವ॥ ಎಂದು ಪೊಗಳ್ದವನಂ ನಿಜಾಶ್ರಮಕ್ಕೆ ಕರದೊಯ್ದು ಲಿಂಗಾರ್ಚನಂಗೆಯ್ಸಿ ಶಿವಯೋಗಿವರೇಣ್ಯನು ನಿಜಪ್ರಸಾದಾಮೃತದಿಂ ತೃಪ್ತಿವಡಿಸಿ ಶಿವಾನುಭಾವಪ್ರಸಂಗದಿಂ ಕಿರಿದು ಪೊಳ್ತಂಕಳೆದು ಮತ್ತಮಿಂತೆಂದಂ ॥

ಕಂ॥ ದಿನವೊಳವುನಿನಗೆಮನುಜಾ । ವನಿಯೋಳ್ಕೆಲವಿನ್ನುಮಂತರಿಂಧಾತ್ರಿಗೆಪಾ ॥ ವನಶೀಲಪೋಗುತದ್ವ । ರ್ತನೆಯಿಂನಡೆದಿಲ್ಲಿಗೆಯ್ದುಲಕ್ಕುಂಬಳಿಯಿಂ ॥ —— —— ॥೫೬॥

ವ ॥ ಎನೆಮಾದಿ ರಾಜನಾನುಡಿಗೇಳ್ದು ಮನದುಬ್ಬೆಗಳಿಂ ಮಗುಳ್ದಿಂತೆಂದಂ ॥

ಕಂ॥ ಬಡತನವಡಸಿದಮನುಜಂ । ಕಡವರಮುಂಕಂಡುಬಿಡುವನೇಯುತ್ನದಿನಿಂ ॥ ಮುಡಿಗಂಡಮೇಲಿತೊರೆದಾ । ವೆಡೆಗಾದೊಡಮೆಯ್ದಲಾರ್ಪನೇಗುಣಭರಣಾ ॥ —— ॥೫೭॥

ಎನೆಲೇಸೆನುತ್ತೆಮಗುಳ್ದಾ । ತನಮನಮುಂನೋಡಲೆಳಸುತಲ್ಲಿಂದೊಡಗೊಂ ॥ ಡನುನಯದಿಂಬಂದುಬಬರ್ೂ । ರನಗದವೊದಲೋವರಿಯೊಳೆಕುಳ್ಳಿರಿಸಲೊಡಂ ॥ .... ॥೫೮॥

ಪರಶಿವಯೋಗದೊಳಾಮಾ । ದರಸಂಬೊಬ್ಬುಲಿಯನೆಳಲೊಳಿರೆಕಡೆಸರಿದಾ ॥ ಗುರುಮಲ್ಲಿಕಾರ್ಜುನಂತಾ । ನಿರದಾಗಳ್ಗೋಪರೂಪಮುಂಕೈಕೊಂಡಂ ॥ .... ॥೫೯॥

ವ॥ ಅದೆಂತೆನೆ.

ಚ॥ ವೃ ॥ ಬಿರಿವಡಿಡೊಂಕುವೆತ್ತಬೆರಲೋರೆಯಿಪೇರ್ದೊಡೆವಕ್ರಮಧ್ಯಮು । ಬ್ಬರಿಸಿದಪೇರ್ಬಸಿರ್ನಸುಕುಮುಂಗಿದಬೆನ್ನೆಡೆದೆಳ್ದಬೀಸುದೋ ॥ ಳ್ನೆರೆನೆಗೆದಿರ್ದಗೋಣ್ಬರೆತಮೋರೆಮುರುಂಟದಕರ್ಣಮುರ್ವಿಕೆ । ಕ್ಕರಿಸಿದಕಣ್ತುರಂಟುದಲೆಪಾವಸೆವಲ್ಕಿಗೆಗಂಟುವುಬರ್ುಗಳ್ ॥ ॥೬೦॥

ಕಂ॥ ನೊರೆವಾಯ್ಜೋಲ್ದುಟಪೆಮರ್ೂ । ಗರಲ್ದಕೆವಿಮ್ಮಾಸೆಕೆವರ್ದಪರಿಗಡ್ಡಂಕ ॥ ಬರ್ುರರುಚಿಯನುಗುಳ್ವಕಾರೊಡ । ಲಿರೆಮೆರೆದುಕರಾಗ್ರದಲ್ಲಿಮುಳ್ಗತ್ತಿಗೆಯಂ ॥ .... ॥೬೧॥

ತಿರಿಯುಂಚಟೆಯಂಘಟೆಮಂ । ಪರಶುವನಿರದಾಂತುಕುರಿದೊವಲ್ಲಿದಿ

ಪೆಗಲೋ ॥ ಳ್ಕರಮೆಸೆಯೆಬೊಂಕದೊಳ್ನೇ । ಲ್ದಿರೆಕಚ್ಚೆಯಿರುಂಕಿಕೌಂಕು
ಳೋಳ್ಕುರಿಮುರಿಯಂ ॥ ॥೬೨॥

ಕೋಲಂಬೀಸುತೆಶೀಳಿಡು। ತಾಲಿಸುತತ್ತಿತ್ತ ವಿಾಕ್ಷಿಸುತೆಕೆಕ್ಕುತೆಪೇ।
ರ್ಗಾಲಡ್ಡ ನೊಡ್ಡಿ ನಿಲುತಂ। ಕೌಲೇಯಮನಲ್ಲಿಕರೆಯುತಂಸಡೆತಂಡಂ॥೬೩॥

ಮಲ್ಲಿ॥ ಧೊಪ್ಪುಧೊಪ್ಪನೆಕಲ್ಗಳೀದಿಡುತೋಡುವಾಡುಗೆಳಂಕರಂ।
ತಪ್ಪುವಂತಿರೆಮೆಲ್ಲಮೆಲ್ಲನೆಬಂದುಸಾದರಸಾರ್ಮ್ಯನಿ ॥ ರ್ದೊಪ್ಪುವೆತ್ತಮರ
ಕ್ಕೆನೋಡುತವಂನೆತಣ್ಣೆಳಲಾಗಿರಾ । ಜಪ್ಪತತ್ಕುಜಶಾಖೆಯಂತರಿದಂಕರಾಗ್ರ
ಕುಠಾರದಿಂ ॥ .... ॥೬೪॥

ವ॥ ಅಂತುತರಿಯುತ್ತಮಿರ್ಪ ಕಾಟಕೋಟಾಗ್ರಜನಂತಿರ್ದ ಕಪಟ
ಗೋಪರೂಪತಾಪಸೇಶ್ವರನಂ ಸಕಳೇಶದೇವಂ ಕನಲ್ದು ನೋಡಿ ॥

ಮತ್ತೇ॥ ವೃ॥ ಮದಮತ್ತಾಧಮುಖುಲ್ಲಗೊಲ್ಲಸದೆ ದಾಂಕುಳ್ಳಿರ್ದ
ಭೂಜಾತಮ । ಲ್ಲದೆಭೂಜಾತಮರಣ್ಯದೊಳ್ತಿರಿಹಡೇನಿಲ್ಲಾದುದೇಪಾಪಿಪೆ॥
ರ್ಚಿದಕೊರ್ಬಿಂದಿದನೇಕೆನೀಂತರಿದಪ್ಪೆಮಾಣ್ಮಾಣದಿರ್ದಂದುತ । ಳ್ವದೆಶಾ
ಪೋಗ್ರತರಜ್ವಲಜ್ವಲನದಿಂನಿನ್ನಂಗಮಂಸುಟ್ಟಪೆಂ ॥ ॥೬೫॥

ವ॥ ಎಂದವಾದಿ ರಾಜನ ಮಾತಂಕೇಳ್ದು ಕಪಟಪಟುವುಲ್ಲರಸ ಮಾ
ಹೇಶ್ವರನಟ್ಟಹಾಸಂಗೆಯ್ದು ॥

ಕಂ॥ ಅಮುಮುದಯಾಪರವಿಳಸಿತ । ಯಮನಿಯಮಕಳಾಪಭಾಪು
ಜಾಗುರೆಘನವಿ ॥ ಕ್ರಮುಭಲರೆಶಾಂತಿಯುತಸಂ । ಯಮಿಗಳ್ನಿನಿನ್ನನ್ನರೊಳ
ರೆಧರಣೀತಳದೋಳ್ ॥ .... ॥೬೬॥

ಮ ॥ ವೃ ॥ ನಿಸಗೀಭೂರುಹಮಲ್ಲದನ್ಯತರುವೆನ್ನಿಲ್ಲಾದುದೇಕುಳ್ಳಿರ
ಲ್ । ಘನಕಾಂತಾರದೊಳಿತ್ತರಾರ್ನಿಸಗಿದಂನಿಂ ಶಾಖಿಯುಂಸಾಕಿದಾ ॥
ತನೊಕಾಡಿಂತಿದುನಿನ್ನದೋಬರಿದೆ ಕೋಪಂಗೆಯ್ವೆನೀಂಪಾಪಿಯ । ಲ್ತೆನಿ
ತಾಂತಂಮುಳಿದೆನ್ನನೆಂತುಸುಡುವ್ಯೆಕೋಪಾಗ್ನಿಯಿಂತಾಪಸಾ ॥ ॥೬೭॥

ಕಂ॥ ಮಳೆಮುಂಜುಗಾಳಿಬಿಸಿಲುಪ। ಟಳಕಳ್ಕದೆಮಾಳ್ಪನಿನ್ನತಪಮೆ
ತ್ತನಿರಾ ॥ ಕುಳಮಿಾತರುವಿಸಬಳಿನೆಳ । ಲಳಿಪೆತ್ತ ವಿಚಿತ್ರಮಲ್ತೆನಿನ್ನಯ
ಚರಿತಂ ॥ .... ॥೬೮॥

ತನುಪಂಬಡಿದೊಡಮೆಂಶುಂ । ವ್ಮುನಿಯುರ್ಮುನಿವರರುದಗ್ರಶಾಂತ

ರ್ಮನಿದ್ಯೆ || ಬನದಗೆಮಂತರಿದೊಡೆದು | ಜನತಾಪಸಸಿನ್ನವೋಲ್ದುರಾತ್ಮಕರೊಳರೇ || .... ||೬೯||

ಕಂ|| ಕೋಪಾಗ್ನಿಯಿಂದೆಬೆಂದಪೆ | ಶಾಪಾಗ್ನಿಯಿನೆನ್ನನುರುಪಲೆಳಸಿರ್ಪತಪೋ || ಲೋಪಮಿದರಿಂದಮೆಂಬುದ | ನೇಪೊಳ್ತುಂತಿಳಿಯಿಮೂಢಜನಕುಲತಿಲಕಾ || .... ||೭೦||

ಕಂ|| ಕಪಟಿಯುಜಪಮಂ ಕೋಪಿಯುಂ | ತಪಮುಂಪಿಶುನನನೃದೂಕ್ತಿಯುಂ ಪರನಿಂದಾ || ಲಪಿತನವಿದ್ಯೆಯುಮುಗ್ಗದ | ಕೃಪಣನಸನ್ಮಾನಮುಂನಿರರ್ಥಕಮಲ್ತೆ || .... ||೭೧||

ಮ|| ವೃ|| ವಿನಯಾರಣ್ಯದವಾನಲಂಕಮಸುಖಾಜೋತ್ಸ್ನಾದಿನೇಶಾತಗೆಂ | ಘನಸಂತೋಷರಸಾಂಬುರಾಶಿಬಡಬಜ್ವಾಲಾಕಲಾಪಂವಿವೇ || ಕನಗಾಗ್ರಸ್ಫುಟಮೇಘವಸ್ಥಿಯೆನಿಪೀಕೋಪಾಗ್ನಿಪೀರ್ಗುಂತುನೋ| ವನಜಾತಾಂಚಿತಸ್ಮರಂದರಸಮುಂಕಾಯ್ಪೇರಿತಜ್ಜೀವನಂ || ||೭೨||

ಕಂ|| ಹೃದಯಾಲವಾಲದೊಳ್ಪು | ಟ್ಟದವಿಮಲಜ್ಞಾನಲತೆಗೆಶಮಜಳಮಂಸೂ || ಸದೆಕೋಪಶಿಖಿಯುನುರುಪಿದೊ | ಡದುಸುಖರಸಮೋಕ್ಷಫಲಮನೇನಿತ್ತಪುದೆ || .... ||೭೩||

ಚ|| ವೃ|| ಧನವನಿತಾನಿಕೇತನಮನೊಲ್ಲದೆಬಿಟ್ಟು ವಿರಕ್ತಿವೃತ್ತಿಯಿಂಮನದೊಳೆಶಂಕೆಗೆಯ್ದುಶಿವಯೋಗಸುಖಂಬಡೆಯಲ್ಕೆಬಂದುಕಾ || ನನದೆಡೆಗೀಶ್ವರಾಂಘ್ರಿಯುಗಮಂ ಸಲೆಜಾನಿಸುತಿರ್ದುಮಿಲ್ಲಿಕೆಂ| ಮುನೆನೆಳಲಾಸೆವೆತ್ತುಮುಳಿಪಾಂತಪೆನಿನ್ನವೊಲಾರೊ ಗಾವಿಲರ್ || ||೭೪||

ಕಂ|| ಸೋಲಮಿದೆಂಬರ್ಕಬ್ಬಿನ | ಕೋಲೊಂದಿನಿಸುಳಿಯೆತರಿಯೆಕರ್ಬಿನಪೊರೆಯುಂ || ಲೀಲೆಮಿಗೆತಾಳ್ದಶೀಲದ | ಜಾಲದೊಳಿನಿಸುಳಿಯೆಸೋಲಮಲ್ಲದೆಪೆರತೇಂ || .... ||೭೫||

ಕಡುಬಾಸೆಗೆಯ್ದುರಣದೊ | ಳ್ತೊಡಂಕಿಸೋಲ್ತಿಸಿಯನಿಟ್ಟುಬರ್ಪನತೆರದಿಂ || ನುಡಿಯಂತೆನಡೆಯಲರಿಯದ | ಜಡರಂನೃಡಭಕ್ತರೋಲ್ವರೇ ವಸುಮತಿಯೋಳ್ || .... ||೭೬||

ಶಿವಭಕ್ತಿಗೆಶಿವಯೋಗಕೆ | ಶೈವವ್ರತಕ್ಕಮುಳತರಶಿವಜ್ಞಾನಕೆಶಾಂ|| ತಿವಿಹಿತಮದಿಲ್ಲದಿರಿಕೆ|ಳ್ಗೆವಶೋನವ್ಯಂಜನೋಪಮಾನಮುದಕ್ಕುಂ ||೭೭||

ಎನೆಕೇಳ್ದುಪಾದಿರಾಜಂ | ಮುನಿಸಳಿದುಬಿಗುರ್ತುವಿಸ್ಮಯಂಬಡೆ

ಯುತೆನೋ ॥ ಳ್ವನಿತರೊಳಿಮಲ್ಲಿಕಾರ್ಜುನ । ಮುನಿಪಂತಾಂಮುನ್ನಿನಂದ
ಮಂಕೈಕೊಂಡಂ ॥ .... ॥೭೪॥

ವ॥ ಅಂತವಂಗೊಲ್ಲವರಿಜನುಳಿದು ಗುರುರೂಪಂ ಕೈಕೊಂಡಿರೆ ಮಾ
ದಿರಾಜಂಕಂಡು ನಾಣ್ಚಿತನುಜರಿಯೆ ಮನಂಕದಡಿ ಶೋಕಾಶ್ರುಕಣಕಲಿತ
ಮುಖನಾಗಿ ತಲೆವಾಗಿ ತಲ್ಲಣಂಬೆತ್ತು ॥

ಮ ॥ ವೃ ॥ ಎನಗೇಕಪ್ಪುದುಶಾಂತಿಸ್ಥೈರಣೆಮಹಾಸದ್ಭಕ್ತಿಸಂಪತ್ತಿ
ಪಾ । ವನವೈರಾಗ್ಯಮುಪಕ್ವದುರ್ಮತಿಗೆದುರ್ದಾಂತಂಗೆತಾಳ್ದಪ್ಪುದೇ ॥ ತನಿವ
ಣ್ಣೊಪ್ಪಮನಚ್ಚಪೂಮಿಡಿವಲಂಕೊಯ್ದುಕ್ಕೆತಾನಂಚೆಚಿ । ದ್ಘನಸಾರಾಮೃತ
ಮಿಾಶನೊಲ್ಮೆವಡೆದರ್ಕಕ್ಕುಂಪೆರರ್ಗಕ್ಕುಮೆ .... ॥೭೯॥

ಕಂ॥ ಸಕಳೇಶನಿಮ್ಮಕಾರು । ಣ್ಯಕಟಾಕ್ಷಮದೊಂದದೆನಗಬರ್ಗು
ಮೆಶಾಂತಿ॥ಪ್ರಕಟಸುಖಂಶರಣಾಗೆನು। ತ್ತಕಳಂಮಲ್ಲಿಕಾರ್ಜುನಂಗೆರಗಿರ್ದಂ॥

ವ॥ ಆಗಳಾಶಿವಯೋಗಿ ಯಾತನಂತೆಗೆದೆತ್ತಿ ಬಿಗಿಯಪ್ಪಿ ಪೈದಡವಿ
ಮನ್ನಿಸಿ ॥

ಉ॥ ವೃ॥ ನಂದನ ಕೇಳಪಕ್ವಮತಿನೀನಣಮಲ್ತು ಮದೀಯದರ್ಶ
ನಂ । ಕುಂದದಪಕ್ವದುರ್ಮತಿಗದೇಂ ದೊರೆಕೊಳ್ಗುಮೆನೀಂಥಂತ್ರಿಗೆ ॥
ಯ್ದೆಂದೊಡೆಪೋಗೆನೆಂದನುಡಿಗಾಂನೆಗಳ್ದೆಂನವಿನೋದಮಿಂತಿದಾ । ವಂದ
ದಿನಾದೊಡಂಥರೆಗೆನೀನಿರದೆಯ್ದುವಕಜ್ಜಯುತ್ತಮಂ ॥ ॥೮೧॥

ವ॥ ಅದೇಂಕಾರಣಮೆಂಬೆಯಪ್ಪೊಡೆ ॥

ಕಂ॥ ಹರನಿತ್ತನಿರೂಪದೆಭಾ । ಸುರವೃಷಭಂಬಸವರೂಪದಿಂಬಂದೀ
ಗ॥ ಧರೆಗೆಸೆದಿರ್ಪಂಭಕ್ತಿಯ।ಪರಿಯಂಪ್ರಕಟಸುತಭಕ್ತಜನಮಂದಾರಂ॥

ಆತನಪೊರೆಗೆಯ್ದಿಕರಂ । ನೂತನಗೀತಾಮೃತಾಂಬುನಿಧಿಯೊಳಗವ
ನಂ ॥ ಪ್ರೀತಿಯೊಳೋಲಾಡಿಸೆವಿ । ಖ್ಯಾತಸುಖಂಬೆತ್ತುಭಕ್ತಿಯುಂಪ್ರಕ
ಟಿಸುತಂ ॥ .... ॥೮೩॥

ಶ್ರೀವೀರಶೈವದೇಶಿಕ । ಭಾವಮನಾಳ್ದೆಸೆದುಚರಿಸುತಂಬರ್ಪುದುನೀ।
ನ್ನೈವತ್ತುವರುಷಕಿಮ್ಮಪ । ದಾವಾಸಕ್ಕೆಂದುನುಡಿದು ಮಗುಳ್ದಿಂತೆಂದಂ ॥

ಸ್ಥಿತಿನಿನಗೆಸಪ್ತಶತಪರಿ । ಮಿತವತ್ಸರಮಿಳೆಯೊಳು ಳಿದುದೈವತ್ತುಸ
ಮು॥ ನ್ನತವತ್ಸಮುದುಕಳೆದೊಡೆ ।ಸುತನಿನ್ನಂಬರಿಸಿಕೊಳ್ವೆನೆನ್ನೆಡೆಗೊಲವಿಂ॥

ವ|| ಎಂದು ಸಿರಿಮಹಾಪ್ರಸಾದಮೆಂದು ನಿಜಾನುಜೆಯುಂ ಕೈಕೊಂಡುಮಾದಿ ರಾಜನಂನಿನ್ನಮನೋರಥಮನೆರೆಯಿಸಲೊಡಂ.

ಶಾ|| ವೃ|| ಶ್ರೀಯುಂಬೇಡಮಡನ್ಯ ಕಾಂತೆಘನದೀರ್ಘಾಯುಷ್ಯಮುಂ ಬೇಳ್ಪೆನೇ | ಮಾಯಾಮಂದಿರಮಿಂದ್ರಭೋಗಮುಚಿತಂ ಕೈವಲ್ಯಮುಂ ಬೇಳ್ಪೊಡಾ || ನ್ಯಾಯಾತೀತಮೆನಿಪ್ಪ ಶಂಭುಪದಮಿಂತನ್ಯಾರ್ಥಮುಂಬೇಡುವ |ನ್ಯಾಯಕ್ಕಾಂಬಗೆವಾರೆನೆಂದೆರಗಿಬೀಳ್ಕೊಂಡಂ ಮಹಾಭಕ್ತಿಯಿಂ ||೮೬||

ವ|| ಅನಂತರಂ.

ಮ||ಸ್ರ||ವೃ||ವಿಮಳಸ್ವಾಂತಾಬ್ಜ ದೋಳ್ಭಾಸಿಸುತೆಮಿಸು ಪತದ್ವೇಶಿಕ ಶ್ರೀಪದಾಂಭೋ | ಜಮನಾಗಳ್ಬಂದುಕಲ್ಯಾಣಮನತಿಜವದಿಂಬೊಕ್ಕು ಲಿಂಗಾರ್ಚನಾಸಂ || ಭ್ರಮದೊಳ್ತಳ್ತಿರ್ದ ಭಾಸ್ವದ್ಬಸವನಿದಿರೊಳಾಲಿಂಗದೊಳ್ಬಂಜೆಸಿರ್ದಂ | ಪ್ರಮಥೇಂದ್ರಾಚಾರಸಾರಪ್ರಥಿತಗುಣಗಣಭ್ರಾಜಿತಂಮಾದಿರಾಜಂ ||೮೭||

ಉ|| ಸಂಗಮದೇವನೋಳ್ಪೊಳೆವಜಂಗಮ ಮೂರ್ತಿಯನೀಕ್ಷಿಸುತ್ತೆ ಸಾ | ಷ್ಟಾಂಗಲಸತ್ಪ್ರಣಾಮಮನೊಡರ್ಚುತೆಮೆಲ್ಲನೆನೋಳ್ಪವೇಳೆಯೊ || ಳ್ಮಂಗಡೆನಿಂದುಮಾದರಸನಾಮುಜಾಂತಿಕೆನೋಡಿವಿಸ್ಮಯಾ | ಲಿಂಗಿತಮಾನಸಂಬಸವನೊಲ್ದೆರಗಿರ್ದನಮಂಗೆಭಕ್ತಿಯಿಂ .... ||೮೮||

ವ|| ಆಗಳ್ || ರಥೋದ್ಧತ್ತವೃತ್ತಂ || ಮಾದಿರಾಜವಿಭುತದ್ವೃಷೇಂದ್ರನಂ | ಮೋದದಿಂದೆಬಿಗಿಯಪ್ಪಿಸಾರಸಂ || ಪಾದಮೊಂದೆಕ್ಕಸೆಗೆಯುದ್ಧಸರ್ವತ | ತ್ವಾದಿಚತ್ಸುಖಮುನೀಯತೊಪ್ಪಿದಂ .... ||೮೯||

ಮ||ಸ್ರ|| ವೃ|| ಪದೆದಾಗಳ್ಮಾದಿರಾಜಾರ್ಯನಪದತಳಮುಂಪೂಜಿಸುತಂ ವಿಳಾಸಾ | ಕೃದಕಾರುಣ್ಯರ್ದ್ರತದ್ವೀಕ್ಷಣಸುಚಿವಿಳಸಚ್ಚಂದ್ರಿಕಾಸಾರದಿಂ ಸಂ || ಮುದಮುಗ್ಧಾಂಭೋಧಿಮ್ಮೈಪೆರ್ಚಿರೆನಲಿಯೆಹೃದಿಂದೀವರಚಿತ್ಕಳಾಸಂ| ಪದಮುಂಕೈಕೊಂಡುಕಣ್ಗೊಪ್ಪಿದನತುಳಶಿವಾದ್ವೈತವಿದ್ಯಾಸಮುದಂ ||೯೦||

ಕಂ|| ಹರರೂಪಮಾದಿರಾಜನ | ಚರಿತ್ರಮುಂಪೇಳ್ವಕೇಳ್ವಪಠಿಸಿದಸುಜನರ್ || ಪುರುಷಾರ್ಥಚತುಷ್ಟಯಮುಂ | ಪರಭಕ್ತಿಜ್ಞಾನವಿರತಿಯಂಸಲೆಪಡೆವರ್ .... ||೯೧||

ಲಲಿತಪದವೃತ್ತ || ಭಾರ್ಗವಶುಕಾದಿಮುನಿವರ್ಗನುತಶಾಂಭವಸು| ಮಾರ್ಗಗಚರಿತ್ರಹೃತದುರ್ಗತಿಸಮಸ್ತ || ಸ್ವರ್ಗಭವನಾರ್ಚಿತನಿಸರ್ಗಗುಣ

ರಂಜಿತಯು । ಜುರ್ಗತ್ತಮುಹಾಮನುವಪುರ್ಗುಣವಿದೂರ । ನರ್ಗಳಚಿದಾತ್ಮ ವಿಧುಮಾರ್ಗಣ ಹೃತೇಂದ್ರಪರ । ದುರ್ಗಯುಮದರ್ಪಹರ ಭರ್ಗಹೃದಯಾಬ್ಜಾಂ । ತರ್ಗತಲಸನ್ನಿಗಮನಿರ್ಗಕರನಾಳ್ವುದಪ । ವರ್ಗಸುಖಮನ್ನುತಬುಧರ್ಗೆಬಸವೇಶಾ .... ॥೯೨॥

ಶಿಖರಿಣೀವೃತ್ತ॥ ಶಿವೇಸರ್ವಾಧಾರೇಶಶಧರಕಲಾಭೂಷಣಧರೇ ।ಸುವರ್ಣಾಂಭೋಜಾಭಸ್ಫುರಿತವದನೇಕುಂದರದನೇ ॥ ಹವಿರ್ಭೋಕ್ತ್ರಾರಾಧ್ಯೇಪರಹೃದಯಹರ್ಷೋದಯಕರೀ । ಭವಾನೀಕಲ್ಯಾಣೀಭುವನಜನನೀಪಾಲಿಸಿಳೆಯಂ .... ॥೯೩॥

ಗದ್ಯ॥ ಇದು ವಿನಮದಖಿಳ ಸುರಾಸುರೇಂದ್ರ ಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ ಪರಮಶಿವಲಿಂಗ ಪಾದಾರವಿಂದ ಪರಾಗಭಸಿತಭಾಸುರ ಲಲಾಟಪಟ್ಟ ಸರಸಜನ ಮಾನಿತೋಭಯ ಕವಿತಾವಿಶಾರದ ಶ್ರೀಷಡಕ್ಷರ ದೇವಭಕ್ತಿ ವಿರಚಿತ ಶ್ರೀಮದ್ಬಸವರಾಜ ವಿಜಯ ಮಹಾಪುರಾಣದೊಳ್ ಸಕಳೇಸಮಾದಿ ರಾಜಕಥಾಭಿವರ್ಣನ ಮೇಕಾದಶಾಶ್ವಾಸಂ ಮಹಾ ದೇವಿ ಕಥಾವರ್ಣನಂ ದಶಮಾಶ್ವಾಸಂ ಸಮಾಪ್ತಂ.

೧೨ ನೇ ಆ ಶ್ವಾ ಸ.

ಮಡಿವಾಳ ಮಾಚರಸರ ಕಥೆ.

ನಾಂದಿ ॥ ಲಲಿತಪದವೃತ್ತ ॥ ಕುಂಜರಮಹಾದನುಜಭಂಜನಪದಾಂಬುಜಕ । ತಾಂಜಲಿಸುಭಕ್ತಗಣರಂಜನನಿತಾಂತ । ಪ್ರಾಂಜುಳಯಶೋಭನ ಸಂಜಯದೃಗರ್ಚಕಪ । ತಂಜಲಿಮುನಿಸ್ತುತಸಮಂಜಸಗುಣಾಕ ॥ ಮಂಜುಳಕಟಾಕ್ಷರುಚಿ ಸಂಜನಿತಲೋಕಗುಣಪುಂಜಯುತಭಕ್ತಪವಿಪಂಜರಸದರ್ಪ । ವ್ಯಂಜಕವಚಸ್ಕಪೂರೆಕಂಜಭವವಂದ್ಯಭವಕುಂಜದವಪಾವಕನಿರಂಜನವೃಷೇಂದ್ರಾ .... ॥೧೧॥

ಸಜ್ಜನಸಮುಚ್ಚಯಪಿಜ್ಜಳಸಮಾರಚಿತ | ಮಜ್ಜನಸಿಜಾಂಘ್ರಿವಿಸಮಜ್ಜನಸಮೂಹಾ | ಪಜ್ಜಳದಮಾರುತಮರುಜ್ಜನಕಶಿಷ್ಯಪರಿ | ಷಜ್ಜಲಜಭಾನುಭವರಜ್ಜುಕರವಾಲ || ರುಜ್ಜಳಧಿಬಾಡಬಗಜಜ್ಜರತಾರಕಲ | ಸಜ್ಜಪನಿಯುಕ್ತ್ರಮುದವಜ್ಜನವಿದೂರ | ಪ್ರಾಜ್ಞನಿತತತ್ವಕುಲಬಿಜ್ಜಳಪರಿಸ್ತುತಪಿ | ಲಜ್ಜಖಲಭಂಜನಸಸಜ್ಜಬಸವೇಶಾ .... ||೧||

ಕಂ|| ಶ್ರೀಕಲ್ಯಾಣೀರಮಣನಿ | ಳಾಕುಶಶಿಖಿಪವನಗಗನರವಿಶಶಿಪುರುಷಾ|| ನೇಕತನುಚಾರುಚಂದ್ರಕ | ಲಾಂಕಂಪೊರೆಗೆಮ್ಮನಾವಗಂಶಿವಲಿಂಗಂ||

ಉತ್ಸಾಹವೃತ್ತಂ || ಸಾರಸಾರಸಾರಿವಾಯುಮಿತ್ರಮಿತ್ರನೇತ್ರಜಂ | ಭಾಭಾರತೀರಮೇಶಸೇವಿತಾಂಘ್ರಿನಿತ್ಯಸಾ || ಕಾರಕಾರಣಾತ್ಮದೇವರಕ್ಷಿಸೆನ್ನನಕ್ಷಯೋ | ದಾರದಾರಣಾಸುರೇಂದ್ರಶೈಲಶಂಬಶಂಕರಾ .... ||೨||

ಚಂ||ವೃ|| ಸುರಚಿರನಂದನಾಳಿನವಶಾಲಿವನಾವಳಿಪಂಕಜಾಕರೋ | ತ್ಕರತಟಿನೀಪಶುಪ್ರಕರಮಾಹಿಷಮಂಡಿತಸಂಪದಾಸ್ಪದ || ಸ್ಫುರಿತಪುರೀಕದಂಬವಿಳಸಜ್ಜನರಂಜೀತದೇಶಮುಖ್ಯಬಂ | ಧುರತರಮಾಗಿಪಿಪ್ಪಲಿಗೆಯೆಂಬುಪುರಂಮೆರೆಗುಂವಿಳಾಸದಿಂ .... ||೩||

ಉ|| ಆಪುರದಲ್ಲಿಪೇರ್ಮೆಗೆರಂಜಿಪನೋರ್ವನಪೂರ್ವವೃತ್ತಮು | ರ್ವಿಪರಿಪಾಲನಾರ್ಥಮೊಗೆತಂದಮಹೇಶ್ವರದಿವ್ಯಮೂರ್ತಿದಿ || ಗ್ವ್ಯಾಪಿಯಶಸ್ಕನಸ್ಖಲಿತಸದ್ಗುಣಖಾಷಣನರ್ದಿತೇಷಣಂ | ಚಾಪಲವಾದಿಭಂಜನನನಂಜನನೀಶ್ವರಭಕ್ತಿರಂಜಿತಂ .... —— ||೪||

ಮ|| ವಿಲಸದ್ವೀರಶಿವೈಕ್ಯಮಾರ್ಗನಿರತಂವಿಜ್ಞಾನಸಂಪನ್ನನು | ಜ್ವಲವೀರವ್ರತನಿಷ್ಠನಪ್ರತಿಮವೈರಾಗ್ಯಸ್ವಭಾಗ್ಯಂಸಿರಾ || ಕುಲಚಿತ್ತಂನಿರವದ್ಯಹೃದ್ಯಚರಿತಂನಿರ್ಧೂತತಾಪವ್ರಜಂ | ಕಲಿಕಾಲುಷ್ಯನಿವಾರಕಂಶುಭಕರಂ ಕಾರುಣ್ಯರತ್ನಾಕರಂ ||೫||

ಮ|| ಜಿತಕಾಲತ್ರಯಕರ್ಮನೂರ್ಮಿರಹಿತಂನಿರ್ಮಾಯನಂಗೇಂದ್ರಿಯೋ | ನ್ನತಲಿಂಗಾನ್ವಿತನಾತ್ಮದರ್ಶನಸಭಾಪಾಲಂಸದಾಜೋತಿವಿ || ಶ್ರುತತೇಜೋಮಯನ ಪ್ರಮೇಯರಜಕತ್ವಚ್ಛನ್ನರುದ್ರಂಪ್ರತ | ರ್ಜಿತಮಾದ್ಯದ್ಭವಿಸಂಗನೂರ್ಜಿತನಯೋನಿಪ್ರೋದ್ಭವಂಮಾಚಯಂ || ||೬||

ಬಸವಾಧೀಶನಭಕ್ತಿವಾರಿಧಿಗೆ ಚಂದ್ರಂಬರ್ಪವೋಲ್ತದ್ಗುಣಪ್ರಸರಾಕರ್ಣನಕರ್ಣನಾತ್ಮಪುರದಿಂ ಕಲ್ಯಾಣಕೇಳ್ತಂದುವಂ || ದಿಸುತಾತಾಣದೊ

ಳಿರ್ದಜಂಗಮಚಯಕ್ಕಾನಂದದಿಂನಾಡೆಪ್ಪೂ | ಜಿಸಿಕೊಂಡಲ್ಲಿವೃಷೇಂದ್ರಸಿಂ
ದೆಮೆರೆದಿರ್ದಂಮಾಚಿದೇವಾಹ್ವಯಂ ॥ ॥೭॥

ವ॥ ಅಂತಿರ್ಪುದು ಮಾಚಿದೇವನೆನ್ನ ದಾಸೋಽಹಂ ಭಾವಕ್ಕೆ ತಕ್ಕಕ ಜ್ಜಂಗೆಯ್ವೆನೆಂದು ಭಕ್ತಿಮಿಗೆ ಶಿವಗಣದ ಮಾಸಿದಂಬರ ಕದಂಬಮ ಸರು ಣೋದಯದಿಂ ಮುನ್ನಮೆಕೊಂಡು ಪೋಗಿತಾಂ ಬೇರೆನೆಗಳ್ದ ದೀರ್ಘಿಕೆಯ ತಿಳಿನೀರಿಂತೊಳೆದು ವಿಮಳಂಗೆಯ್ದೊಣಗಿಸಿ ಮಡಿಕೆಗೊಳಿಸಿ ಘಟ್ಟನೆಗೆಯ್ದು ಪೊರೆಗಟ್ಟಿಪೊತ್ತುಜಂಗಮಹಿಮಾಚಲದಂತೆ ರಾಜವೀಧಿವಿಡಿದೂ ॥

ಚಂ॥ ವೃ॥ ಭವಿಜನಮೆಳ್ತರುತ್ತಮಿರೆತನ್ನಿದಿರೋಳ್ಜಯಘಂಟಕಾಲ
ಸ | ದ್ರವಮನೊಡರ್ಚುತಂಜಡಿದುಚಿಂಮುತೆಕೈಯನಿಶಾತಖಡ್ಗಮಂ॥ಶಿವ
ಗಣದಂಬರಪ್ರಜಮನಂಟದೆಸಾಶೊರ್ಲಗಂಟದಾಗಳಾಂ | ತವಿಪೆನೆನುತ್ತೆ
ಸಾರುತಧಟಂನಡೆತಂದುವಿಳಾಸದೇಳ್ಗೆಯಿಂ ॥ ॥೮॥

ಕಂ॥ ಅಂಬರಮನೆರೆದಭಕ್ತಕ | ದಂಬಕ್ಕಂಬರಮನೇನನಾದೊಡೆ
ವಿಾಯು ॥ ತ್ತಂಬಸವನೀಕ್ಷಿಸುತ್ತೆಮು | ದಂಬಡೆಮೆರೆದಿರ್ದನಮಿತಮಹಿ
ಮಾವರಣಂ ॥ .... ॥೯॥

ವ॥ಆಗಳಾಮಾಚಿದೇವನ ಮಹಿಮೆ ಗಂಡು ಭಕ್ತಗಣಂತಲೆದೂಗಿಬೀಗಿ॥

ಕಂ॥ ಪುಲಿಯುಡುಪನೆಂಬರಜಕನ | ಸಲಲಿತತರಭಕ್ತಿಯೊಳ್ಳಿತಾದು
ದುಮುನ್ನಂ ॥ ನಲಿಕಾಳಿಯೊಳೊಡರ್ಚಿರ್ದಂ | ಮಲಹರಸದ್ಭಕ್ತಿಮೆರದು
ದೀಗಳ್ಧರೆಯೋಳ್ ॥ .... ॥೧೦॥

ಮಡಿವಾಳಮಾಚಿದೇವನ | ಬೆಡಂಗುವಡೆದೆಸೆವಭಕ್ತಿಯಾಭಕ್ತಿಯಿ
ನು ॥ ಗ್ಗಡಮಾದುದಿವನಸಾಸದ | ವೊಡರ್ಪುಪೊಪತೆಂದು ಪೊಗಳೆಭಕ್ತ
ಸಮಾಜಂ ॥ .... ॥೧೧॥

ಕಂ ॥ ಕೋಕಕಾಳಿಗೆನಯಮಂಸಲೆ | ಘಾಕಾಳಿಗೆಭಯಮನೆಸಪರವಿ
ಯವೊಲೆಗಣಾ ॥ ನೀಕಕ್ಕೆನಯಮನಾಭವಿ | ಲೋಕಕ್ಕತಿಭಯಮನೆಸಗಿ
ಕರಮೆಸೆದಿರ್ದಂ ॥ ॥೧೨॥

ವ॥ ಆ ಪ್ರಬಳತಮೋಹರ ಪ್ರತಾಪಶಾಲಿಯಪ್ಪ ಮಾಚಿದೇವನಂತಿರುತ್ತಮಿರ್ದೊಂದುದಿನ ಮೆಂದಿನಂತೆ ವಸನವಿಸರಮಂಪೊರೆಗಟ್ಟಿ ಪೊತ್ತುನಡೆವಾಗಳ್ಬೀದಿಯೊಳ್ಮದಾವಿಳಸಮಾನ ಸಂಭವಿಯೊರ್ವನಂ ಬರಕದಂಬಮಂ ಸೋಂಕೆಕುಪಿತನಾಗಿ ॥

ಕಂ|| ಬಡಿವಲಗನೆತ್ತಿ ಭೋಂಕನೆ | ಪೊಡೆದಾತನತಲೆಯುನಾಗಸಕ್ಕಿರದಿಟ್ಟಾ || ಮುಡಿವಳ್ಳಮಾಚಿದೇವಂ | ನಡೆತಂದುಗಣಾಂಘ್ರಿಸೇವೆಗೆಯ್ಯುತ್ತಿರ್ದಂ || —— ||೧೩||

ವ|| ಆಗಳಾಪುರದಖಿಳಜನನಿವಹಂಕಂಡು ಕಡುಕನಲ್ದು ಮಂತಣಂಗೊಂಡು ಗುಜುಗುಜಿಸುತಂ ಪರಿತಂದು ಮಣಿದೀಳ್ವರಾಜಪುತ್ರರ ಮೌಲಘೃಣಿಗಣದಿಂ ಪಜ್ಜಳಿಪಬಿಜ್ಜಳ ನೋಲಗಮಂಪೊಕ್ಕು ತುಳಿಲ್ಗೆಯ್ದು ಕರಂಗಳಂಮುಗಿದುನಿಂದು ||

ಚ|| ವೃ|| ಧರಣಿಪನಿನ್ನಪಟ್ಟಣದೊಳುದ್ಧತನೋರ್ವನಖರ್ವಗರ್ವನಿ | ಷ್ಠುರನೆಸೆದಿರ್ದಪಂಕಜಕನದ್ಭುತಮಾತನವೃತ್ತಮಾರುಮಂ|| ಪುರದೊಳಿಬೀದಿಯೋಳ್ಳುಳಿಯಲೀಯನುದಗ್ರಕೃಪಾಣಪಾಣಿಯುಂ | ಬರಚಯಮುಂಟಿದಾತನಕರುತ್ತಿರಿದಪ್ಪೆನೆನುತ್ತೆ ಸಾರುತಂ || .... ||೧೪||

ಕಂ|| ಮೃಡಭಕ್ತನೆಂಬಗರ್ವದ | ಪೊಡವೃತಲೆಗೇರಿಬಿಡವನೆಂತಪ್ರಭುಮಂ || ಕಡುಸಾಸಿಗಳಂ ಪೆರರಂ | ಮಡಿವುನಮೃಡಭಕ್ತಿಯೊಳವೆವಸುಧಾತಳದೊಳ್ || .... ||೧೫||

ಉ|| ವೃ|| ಅಂಗಡಿಯೆತ್ತಿಕಟ್ಟದುದುಕೆಟ್ಟುದುಮಾರುವಸಂತೆಮತ್ತಮಾ | ತಂಗತುರಂಗಗೋಶಕಟಸಂತತಿಯುದ್ಭುತಮೆಂತೊಗೆಂಟನೋ || ಳ್ಚಿಂಗೊಡುತೋಡುಗುಂಪಿವದಿಸಾರಜಕಂಬರೆಬರ್ಪನೋರ್ವನಂ | ಮುಂಗಡೆಯುಲ್ಲಿಖಿಷ್ಗದಿಕರುತ್ತಿರಿದಾಗಸಕೆತ್ತಿಚಿಮ್ಮಿರಂ || ||೧೬||

ಕಂ|| ಪೆಣನಡುಬಯಲಾದುದೊತಾಂ | ನೊಣೆದನೊಸುಂಗಿದುದೊಗೆಗೆನೆಮುಕಾಣಿಸದೇ || ನಣಕಮೊರಜಕನಬಗೆತ | ಲ್ಲಣಮನಿದಂತವಿಸಿನೃಪತಿವೊರೆವುರಜನಮುಂ || —— ||೧೭||

ವ|| ಎಂಬ ಪಿಶುನ ದುರಾಲಾಪಮುನರಸನಾಲಿಸಿ ಕೋಪಾವೇಶ ಪಾಟಲಕಟಾಕ್ಷನಾಗಿ ಬಸವಾಮಾತ್ಯನಾನನಮುನಭೀಕ್ಷಿಸಿ ||

ಕಂ|| ರಾಕ್ಷಸನೋ ಮನುಜರೂಪತ | ರಕ್ಷಂವೊಖಲರಜಕನೀಶಭಜಕನೆನುತ್ತಂ || ಭಕ್ಷಿಸಿದಪನಿದಿರ್ಗೆಯ್ತಂ | ದಾಕ್ಷಣಮುಪರಾಧರಹಿತರಂವೊಸವರಂ || —— ||೧೮||

ಕಂ|| ಜನಪತಿಯಾದೆನ್ನತ್ತಣೆ | ನಿನಿಕು ಭಯಮಿಲ್ಲದನುಮುರಜಕಂ

ಮೆಯ್ಗೆ || ಬೆಸಸಪೆರ್ಚುಕೆಯಿಂ ಕೊಂದಪ | ನೆನಿಮಿತ್ತಂ ಸಾರ್ದನೆರದಸೀ ಪುರವರದೊಳ್ || .... ||೧೯||

ಕಂ || ಪಳಿಗರ್ಪಣಮಂ ಕರ್ಚುವ ಚಳಕದಕರಮೆತ್ತ ಶಸ್ತ್ರಚಾಳನವಿದ್ಯಾ || ಬಳಮೆತ್ತ ಲಿವಂ ಮನುಜಾ| ವಳಿಲಯಕರರಜಕರೂಪರಂಕ್ಷಸನಲ್ತೆ ||

ಉ || ವೃ || ಚೋಳವರಾಳಕೇರಳಕಳಿಂಗತುರುಷ್ಕವಿದರ್ಭಪಾಂಡ್ಯಪಾಂ| ಚಾಳಮುಖಾವನೀಪತಿಗಳಳ್ಕಿ ಮದಾಜ್ಞೆಗೆ ಬಾಳ್ವುದಾವಗಂ || ಕಾಳಗಕಾಂಪಶೂರರಣಮಿಲ್ಲಮಿವಂ ಕಡುಕೊರ್ಬಿ ತನ್ನ ತೋ | ಳ್ಬಾಳವಿಡಾಯುಮಂ ಮೆರೆಯಲಾಟಪನೆಮ್ಮೊಳದೆಂತೊ ಸಾಹಸಂ || ||೨೧||

ಕಂ|| ಅರಿಯದವನಂಟವಸನಂ | ಕರೆಗೊಳ್ವುದೆನುಂಗಲಕ್ಕಮೇಪೇಳವನಂ || ನೆರೆಸೊರ್ಕಿದಸಗನಘಟಂ | ಮುರಿಯದೆಬಿಡೆನೆಂದು ಬಿಜ್ಜಳಂ ಘೂರ್ಮಿಸುತಂ || .... ||೨೨||

ಮ|| ವೃ|| ನಿಜಸಿಂಹಾಸನದಿರ್ಕೆಲಂ ಬಡಿದು ಸಿಂದುದ್ವೃತ್ತ್ಯಪಾಸೋಲ್ಲಿಸ | ದ್ಭುಜರಂಧೀರಭಟರ್ಕಳರಚಿಸಿಸಿದಂ ನೀಮೆಯ್ದಿ ಕೂರ್ಪಿಂದೆತ ದ್ರುಜಕಂಬರ್ಪೆಡೆಗಾಂತುಗರ್ಜಿಸುತೆಮುನ್ನಂ ಗಿದ್ದನಂತಳ್ವದೊ | ಟ್ಟಜೆಯಿಂ ಕಾರೆನುತಾರ್ದು ಕೊಲ್ವುದೆನುತಂ ಕೋಪೋಜ್ವಳಂ ಬಿಜ್ಜಳಂ || ||೨೩||

ವ|| ಇಂತೆಂದು ಗಳವುವ ಬಿಜ್ಜಳನಂ ವೃಷೇಂದ್ರನಭೀಕ್ಷಿಸಿ ||

ಕಂ|| ಎಲೆನೃಪತಿ ಖಲರಕಾಕರ | ಮಲಿನಾತ್ಮರಮಾತುಗೇಳ್ದು ಮರುಳಾದೆಮುದಾ || ನಿಲಮಾನಸಮೇಲರಿಯದೆ | ಪಲವಂಗಳಪಿದಪೆಬಲ್ಲರೊಲ್ವರೆನಿನ್ನಂ || .... ||೨೪||

ಅಸಗನಿವನೆಂದು ಬಗೆದೇ | ಳಸುಪ್ರೈತಿಳಿವಿಲ್ಲದರಸಕೇಳಸಗನೆತಾಂ || ರಸೆಯುನಡಿಸೋಂಕನಿಂಪಾಲಿ| ಸಲೆಯಿದರುದ್ರಮೂರ್ತಿಯಾಲಾಚಯ್ಯಂ||

ಅವನೇಕುಲಹೀನನುಮೇ || ಣವನೆಕುಲಾನ್ವಿತನುವನೆತದುಭಯಭಾವಂ || ಸವನಿಸದಸರ್ವಗತನುಂ| ಪ್ರವಿದಿತಸಾಕ್ಷಾನ್ಮಹೇಶ್ವರಂ ಮಾಚಯ್ಯಂ||

ವ|| ಮತ್ತಮಾ ಮಾಚಿಪೇನನವಿರಳ ಮದ ಮಿಳಿತ ನಳಿನಭವ ಜಟಾಘಟಿತ ಯಜ್ಞಸೂತ್ರಮನುರದೊಳಳವಡಿಸಿ ಕರತಳದೊಳ್ ತತ್ಕರೋಟಭಿಕ್ಷಾಪಾತ್ರೆಯುಂ ತಳೆದು, ಭುವನಭವನದೊಳ್ಭಿಕ್ಷಾಟನಂಗೆಯ್ವ ಮಹಾಬ್ರಾಹ್ಮಣನುಂ, ಸಂಪೂಜ್ಯಮೋಕ್ಷ ಸಾಂಬ್ರಾಜ್ಯಲಕ್ಷಣ ವಿಚಕ್ಷಣನೆನಿಪ ಕ್ಷತ್ರಿಯನುಂ, ಚಪಲತರಕರ್ಮೋರ್ಮಿಮಾಲಾಕುಲಭವ ಸಮುದ್ರದೊ

ಳ್ಜೀವವಸ್ತು ನಿಬಿಡಿತತನುಹಿತ್ರಿ ಸಮುದಯಮುಂ ತಿರುಗಿಸುಪ್ಪುದರಿಂ ಸೃಶ್ಯ ನುಂ, ಮಾಯಾಧರಿತ್ರಿಯೊಳ್ಜೀವಸಸ್ಯಂಗಳಂ ಬೆಳಯಿಸಿ ಕಾಲಮರಿದು ಕೊಯ್ದುಕಿಕ್ಕ ರಾಸಿಗೆಯ್ವುದರಿಂದನುಪಮಾನಶೂದ್ರನುಂ, ನಾದಬಿಂದು ಪಕಲ ದೊಳಾದಿ ಶಕ್ತಿಚಕ್ರನು ಸಮರ್ಚಿ ಕಳಾದಂಡದಿನಾಜಾಂಡ ಭಾಂ ಡಂಗಳಂತಿರುಪಿ ನಿರ್ಮಿಸಪ ಘಟಕಾರನುಂ, ಪ್ರಳಯಜಲಧಿಯೊಳಳವಿಗಳಿ ವಳವಿನಿಂ ವಿಹರಿಪ ಸಮದ ಮತ್ಸ್ಯಕೂರ್ಮಂಗಳನಾದಿ ಭೂತಾಧಾರ ಕಪಿ ನಿತ ಮಿಳಿತ ಸೃಪಪರಿನಟ ಸಂಘಟಿತಘಣಿಪಗುಣನಿಯುತ ತ್ರಿವಿಕ್ರಮಕಂಕಾ ಳ ದಂಡಮೆಂಬಗಾಳಮನಿಟ್ಟು ಸೆಳೆಪವಾಗುರಿಕನುಂ, ಮೃಗರೂಪನಾಳ್ದು ನೆಳಿನಜನಶಿರಮ ನೆಚ್ಚುರುಳ್ಚಿದತುಳ ಬಲಕಿ ರಾತನುಂ, ಸಕಲಜಗಂನಿಲಯ ನಿಸಪ ನಿರ್ಮಾಣಕರ್ಮ ಕರ್ಮಠನೆನಿಸಿಪ ಕಂಮರನುಂ, ವಿಮಲ ದೀಕ್ಷಾನಲನಿ ನಾತ್ಮಕನಕ ಮಲಿನಮನಪ್ರೋಹಿಪ ಹೇಮಕಾರನುಂ, ಲೋಕೇಶಕೇಶನವಾ ಸವಾದಿ ಪಶುಪ್ರಕರ ಪಾಲನಂ ಗೆಯ್ವಗೋವಳನುಂ, ಪ್ರಕೃತಿ ಸೂತ್ರಮಂ ಪಿಡಿದು ಸರೋರಗ ದಿವಿಜರೆಂಬ ಬೊಂಬೆಗಳ ನಾಡಿಪಸೂತ್ರಿಕನುಂ, ಏಕಾ ರ್ಣವದೊಳಕ್ಕಿನಾಕಿಜನಮೆಂಬವಸನನುಂ ವಿಲಯಸಮಯದೊಳೊಗೆ ವರ ಜಕನುಂ, ತಾನೆ ನಿಜವೆನಿಸಿರಂಜಿಪನವಂ ಗೊಂದು ಜಾತಿಕಲ್ಪನೆಗೆಯ್ವುದ ವಿವೇಕ ವಿಳಸಶಮಕ್ಕು, ಮಾಮಹಾತ್ಮನೆಪೆಂಪ ಸಭಿವರ್ಣಿಪೊಡನಂತಾನಂ ತರ್ಗಮಾದೊಡ ಮಶಕ್ಯಮುಂತುಮಲ್ಲದೆಯುಂ ॥

ಕಂ॥ ಹರನಾತ್ಮಲೀಲೆಯಿಂದಂ । ಕಿರಾತನೆನಿಸಿರ್ದನೆಂದುಪಾರ್ಥಗಿಹಿ ತಾರ್ಥಂ ॥ ಶರಣಹಿತಾರ್ಥಂಮಾಚಯ । ವರರೂಪಂತಾಳ್ದುರಜಕನೆನಿಸಿ ದನಲ್ತೆ ॥ .... ॥೨೭॥

ಮ॥ ವೃ॥ ಕರಿಚರ್ಮಾಂಬರಧಕ್ತರಂಬರಮನೆಲ್ಲಾಗಳ್ಸಮುತ್ಸಾಹ ದೆ । ಳ್ತರದಿಂದಂತೊಳದೀವನಸ್ಯವಸನವ್ರಾತಂಗಳಂಮುಟ್ಟಿನಾ ॥ ದರದಿಂ ದಂಕೊಡುವಂಚರಪ್ರಜಕೆಭಾಸ್ವದ್ವಸ್ತ್ರಮಂಬಾಹ್ಯದು । ರ್ನರರಂಟುತ್ತಿರೆ ಸ್ವೈರಿಸಂಶರಣವಾಸಶ್ರೇಣಿಯುಂಮಾಚಯರ ॥ ॥೨೮॥

ಕಂ॥ ನಿಟಿಲನಯನಸ್ವರೂಪಂ । ಪಟುಭುಜಬಲಮಹಿತಮಾಚಿದಾ ಸಮಹಿಮೋ ॥ ತ್ಕಟತೆಯನರಿವೊಡೆಸಾಧ್ಯಮೆ । ಕುಟಲಾತ್ಮರ್ಗೆಕೆಸೃಪತಿ ನಿನ್ನಯಭಟರಂ ॥ .... ॥೨೯॥

ಕಳುಪಿದಪೆಮುಳಿದುತರಗೆಲೆ । ಗಳನುರಿಯೆಡೆಗಟ್ಟುನಂತಿರಾತನಬಳಿ

ಗಾ||ಬಲವದ್ವಿಕ್ರಮನೀಖಿಳ|ಬಲಮುಂಬರಿಗೆಯ್ವನೊಂದೆನಿಮಿಷದೊಳೆಘಟಿಂ||

ಮ|| ಸ್ರ|| ವೃ|| ಮುಳಿಸಿಂದಂಚಾತುರಂಗಂಬೆರಸುನೃಪತಿನೀನಾಂ ತೊಡರಿದೋರ್ಬಳಪ್ರೌ | ಜ್ವಳನಾಮಾಜಯ್ಯನೇಂಲೆಕ್ಕಿಪನೆಬರಿದೆಸಂರಂಭ ದಿಂಸೈನ್ಯಮಂನೀಂ|| ಕಳುಪುತ್ತಂಮೂಸಭಂಗಂಬಡೆಯುದಿರಪನೊಳ್ಗೆಲ್ಲಮಂ ಕೊಳ್ವರಾರ್ತ್ವ|ದ್ಬಳಮಂಪಾಳ್ಗೆಯ್ದಣಂತಾಳದಿರಪಯಶಮುಂಬಿಜ್ಜಳಕ್ಷೋ ಣಿಪಾಲ || .... ||೩೧||

ವ|| ಎಂಬುದು ಮಾಬಿಜ್ಜಳಂ ಕೇಳ್ದು ರೋಷೋಸ್ಮಿಷಿತಹಸಿತ ಶಾ ರ್ಯೋಕ್ತಿಮುಖರಮುನಾಗಿ.

ಕಂ|| ಸಮಯಾಭಿಮಾನಜನಿತ | ಭ್ರಮೆಯಿಂಕಾಲಣಕಥಾಳಿಯುಂಕ ಲ್ಪಿಸುತ || ಕ್ರಮಮನೊರೆಯುದಿರೆನುತಿದು | ರ್ದಮನರಪತಿಬಸವನುಕ್ತಿ ಯಂಪಾಸುತಂ .... ||೩೨||

ಕಂ|| ಪೊಡಕರಿಸಿವೆಕಳೆತುದೆರ್ದೆನೆಲ | ದೆಡೆಯೋಳ್ಕಡೆಗಂಣೊಳುರೆ ತಳಿತರ್ುದುಕೊಂಕಿಂ || ಕುಡಿಗೊಂಡುದುಪ್ರುರ್ಬಿನೊಳಲ | ರ್ವಡೆದುದುವ ದನದೊಳೆಕೋಪಲತೆಭೂಭುಜನಾ .... ||೩೩||

ಶಾ|| ವೃ|| ದೀನಂದಾನವಿಧಾನವಾಣಿಗೆಮುನಂದಂಪ್ಪನೇಸತ್ಕೃಪಾ| ಹೀನಂಶಾಂತಿಸುಷೋಕ್ತಿಗೆಳ್ವನೆಮುನೋಜೋನ್ಮಾವೈರಾಗ್ಯಸಾ || ಕ್ಯಾನೀ ಕಕ್ಕೆ ಸಡಿಲ್ವನೇಶಿರಿಗರಂಸೋಂರ್ದತದ್ಬಿಜ್ಜಳೋ | ರ್ವೀನಾಥಂಬಸವೋ ಕ್ತಿಭ್ರಮಹಿಮಾಲಾಪಕ್ಕೆ ಮುಯ್ಯಾಂಪನೇ ||೩೪||

ವ|| ಎನಿಸಿತದ್ವಚನಮು ನೇಳಿದಂ ಗೆಯ್ದು ದುರ್ಣಯ ಧುರೀಣಂ ತ ನ್ನನುನ್ನಣೆಯ ಮಾವುತನನಭೀಕ್ಷಿಸಿ.

ಚ|| ವೃ|| ತೊಡದೊರ್ಡೆಜಂಭಭಿದ್ಗಜಮನಾದೊಡೆಮರ್ದಿಸಲಾರ್ಪ ಶಕ್ತಿಸಂ | ಗಡಪಿವನೀಲಭೂಧರಸಮಾನಮುದೀಯಹಸ್ತಿಯಂ || ಕಡುಪಿನೊ ಳಾತನೆಯ್ದುವೆಡೆವಟ್ಟೆಯೊಳಾರ್ದಿದಿರಾಂತುನೂಂಕಿಮು | ನೆಡೆಗವನಂಪಡ ಲ್ವಿಡಿಸಿಮರ್ದಿಪುದೆಂದನವದ್ಯಮಾನಸಂ .... ||೩೫||

ವ|| ಎಂದನರೇಂದ್ರ ನನುಜ್ಞೆಯು ನಾಧೋರಣಂತಾಳ್ದಿಭೇಂದ್ರಮಂ ಪಣ್ಣಿಗೆಯ್ದೇರಿಮಿಾರಿಪರಿಯಿಪಲಗಳ್.

ಮ|| ಸ್ರ|| ವೃ|| ಮದವದ್ದಿಗ್ದಂತಿಗಳ್ಕುಂಬಿಡೆರ ವಿರಥದಶ್ವಪ್ರಜಂಬೆ ರ್ಚೆಕಲ್ಪಾಂ |ತದನೇಘಧ್ವಾನಮೆಂಬಂತಿರೆಪಟುನಿನದಂಬೃಂಹಿತಂಗೆಯ್ದು

ಚಂಚ | ದ್ದ್ರದನಾಗ್ರಪ್ರಾಂಶುಮಿಂಚಂಜಡಿಯೆಪೊಡೆದುನುಗ್ಗೊರ್ತ್ತ್ರಶಂ
ಕೇಗಳಂಪಾ | ಯ್ದುದುಕೋಪಾಟೋಪದಿಂದಂತಕನುಹಿಪನಿಭಂಭೂಮಿ
ಭೃತ್ಕುಂರೇಂದ್ರಂ .... ||೩೬||

ವ|| ಅಂತೆಳ್ತ್ತರ್ಪ ಸಿಂಧುರೇಂದ್ರಮನಸೆದು ತನ್ನ ಮೇಲ್ವರಿಯಿ ಪಾಟೋಪಮಂ ತೊಟ್ಟನೆ ಕಟ್ಟದಿರೋಳ್ಕಾ ಚಿದೇವಂ ಕಂಡು ರೋಷಭೀಷಣ ಕಲ್ಪಾಂತ ಭೈರವಾಕೃತಿವಡೆದು ನೆರೆದಬಲಂ ಝಲ್ಲೆನೆಕೆದರೆ ಪ್ರಳಯಜಳಧರನಿರ್ಘೋಷಮನೇಳಿಸಜಯಘಂಟಿಕಾರವಮಂ ನೆಗಳ್ಚಿ ತಾಂಪೊತ್ತಂಬರಭಾರಮನಂಬರಕೇತ ನುತ್ತಮಾಂಗದೋಳ್ಪೂರಿಸುವಂತೆ ಜಯಘಂಟೆಯನಲ್ಲಿ ಚರ್ಗತಂಬರಕೆನೆಗಪಿನಿಲಿಸಿ ಬಾಹಾಸ್ಫಾಲನಂಗೆಯ್ದು ನಿಲ್ಲಿಲ್ಲಿ ಮತಂಗಜರಿಗರ್ಜಿಸಿ ವಿಜೃಂಭಿಸಿ.

ಮ||ಸ್ರ|| ಸ್ರ||ಕಡುಪಿಂದಗ್ರಪ್ರದೇಶಕ್ಕೊಗೆದುನೆಗೆದುಮೇಲ್ವಾಯ್ದು ಪಾದಾ
ಗ್ರದಿಂದಂ | ಕೆಡಪುತ್ತಂಜೋದನಂ ಮುಂಬರಿವಕರಿಯಶುಂಡಾಗ್ರಮಂ ಕೈ
ಗಳಿಂದಂ |ಪಿಡಿದೊತ್ತುತ್ತೆತ್ತ ತಾಳ್ದಪ್ಪಳಿಸಿಪೊಡೆದುದಂತಂಗಳಂ ಕೀಳುತಂಷೀ
ಳಿಪೆಶೀಳ್ದಂಶೀಳ್ದವೋಲುಜ್ಜ್ವಟಕಟಮುಹಾದೈತ್ಯನಂ ನಾಟದೇವಂ||೩೭||

ಮತ್ತಂ|| ಚಂ|| ಕರಿಹರಿದಂಷ್ಟ್ರಮಂ ಮುರಿದ ಷಣ್ಮುಖನಂದನುನಾ
ಳ್ದಮಾದ್ಯದು | ದ್ವಿರದದಂಗಳಂ ಮುರಿದನುಗ್ರಸ್ವಸಿಂಹಸನಂದುಶೀಳ್ದ
ಭಾ || ಸುರತರಭೇಂದ್ರನೇಳ್ಗೆಯವಿಳಾಸಮನಾಂತುಗಜೇಂದ್ರಕಾಯಮಂ|
ಭರದಿನಡರ್ದ್ದುಸೀಳ್ದ ನಿಜತರ್ಜದರುತ್ತಿ ರಿಚಂಡವಿಕ್ರಮಂ ||೩೮||

ಮ||ವ|| ಅಗಳಾಮಾನವೇಂದ್ರನ ಮದಗಜಮಂ ಸದೆವಂತೆ ಮದಗಜಮಂ ಮಾಟದೇವನಾರ್ಪಿಂ ಸದೆಯೆ ಭಕ್ತಪ್ರಜಂ ಕಂಡು ನಣ್ಪಿನೆವಳ ಕೊಂಡು ಕೊಂಡಾಡುತ್ತಮಿರೆ.

ಮ||ಸ್ರ|| ಜನಮಂ ಕೇಳ್ದನಿತೆಲ್ಲಮಂ ಬಗಿಭಯಕ್ಕಿಂ ಬಾಗೆಲಜ್ಞಾನತಾ | ನನ
ನಾಗಿರ್ಪುದುಮೆಂದನಲ್ಲಿಬಸವಂ ಸೀಕೆಳದಾಂಪೇಳ್ದಮಾ || ತನಿಳಾಧೀಶಮ
ದಾಂಧಗಂಧಗಜಮಂ ನೀಗಾಡಿದಂಸ್ಮಾನಹಾ | ನಿಸಿತಾಂತಂ ನಿಸೆಗಾಮದಕ್ಕಟ
ದುರಾತ್ಮಾಲಾಪಮೇಗೆಯ್ಯುದೋ. .... ||೩೯||

ಕಂ|| ಅನುಜಗುರುವಿನಯುಪಚನಮ | ನನಾದರಂಗೆಯ್ದು ಕೆಡರೆಮು
ನ್ನಧರೆಯೊಳ್ || ದನುಜಾಧಿಪನುನುಜಾಧಿಪ | ರಿಸಿಸುವದಶಕಂಠಕಾರವ
ಮರ್ಗಿರ್ಪತೆಂಬಿಂ .... ||೪೦||

ಶ್ರೀಮದತಿಮಿರಾಂಧರ್ಗೆಮ | ಹಿಮಹಿತಬುಧೋಕ್ತಿದೀಪಮುಪ್ಪ
ದಿಚಿಸ್ರಂ || ತಾಮದನೊಲ್ಲದಡವರ್ಗೆಧ | ರಾಮಾನಿನಿಯರಸಸುಪಥಮುಂ
ಕಾಣಿಪುದೇ ... . ||೪೧||

ರಾಜದ್ವೇಷಂ ಮಧುಪಸ|ಮಾಜಾತಪ್ರೀತಿತನ್ನಸಂಗಗುಣದೆನೀ||ರೇಜ
ಕ್ಕೊಳವೆನಿಸಿದಲ| ಕ್ಷ್ಮೀಜಾಯೆಗೆಕೂರ್ತವಂಗೆಮತಿಸಮನಿಪುದೇ ||೪೨||

ನರರೂಪರುದ್ರನೆನಿಸುವ | ಹರಭಕ್ತರಮಹಿಮೆ ಮತ್ತ ಜನಬುದ್ಧಿಗೆ
ಗೋ || ಚರಿಪುದೆದಿನಕರಕಿರಣೋ | ತ್ಕರಮಧಮದಿನಾಂಧದೃಷ್ಟಿಗೇಂಕಾ
ಣಿಪುದೇ ... ... ||೪೩||

ಮೃಡಭಕ್ತರಳವನರಿಯದ | ಜಿಡಮತಿಗಳಮಾತುಗೇಳ್ದು ಮಾನಚ್ಯು
ತಿಯಂ || ಪಡೆದೆಗೆಡಮಾಚಿದೇವನ | ತೊಡಕಿಂನಂ ಭಕ್ತರಳವದೇಂ
ಕೇವಳಮೇ ... ... ||೪೪||

ಮ|| ವೃ|| ಧರಣೀಪಾಲಕಕೇಳ್ ಧರಾತಳದೊಳಂದಂಬೆತ್ತತದ್ರಾ
ವಿಡೋ | ರ್ವರೆಯೊಳ್‌ಪೇರ್ಮೆಯನಾಳ್ದತಾಳ್ಕುಸೊಬಗಂಸೌಂದರ್ಯದಿಂ
ಗೋತ್ರಭಿ || ತ್ಪುರಮುಂತಾಂಪಳಿಕೆಯ್ದುಕಂಗೊಳಿಪುದೇದ್ಯದ್ವಜ್ರವಿಸ್ತಾರ
ಗೋ | ಪುರನಾನಾಮಣಿಹರ್ಮ್ಯಶೋಭಿಕರವೂರೆಂದಂಬಸತ್ಪಟ್ಟಣಂ ||೪೫||

ಕಂ|| ಅದನಾಳ್ವನಭವಭಕ್ತಂ | ಮುದವದ್ರಿಪುದರ್ಪದಂತಿದಳನನೃ
ಗೇಂದ್ರಂ || ಸದಮಳಗುಣನಿಧಿವಿಶದಾ | ಭ್ಯುದಿತಯಶಂಚೋಳರಾಯನೆಂ
ಬನರೇಂದ್ರಂ ... . ||೪೬||

ವ|| ಆಪುರವರದೊಳ್ಮತ್ತೋರ್ವನ ಸಮನಯನಪರಾವತಾರನೆನಿಸಿ.

ಚ|| ವೃ|| ಪರಮಗುಣಾಕರಂಪ್ರಬಳಶೈವ ಮತಾಂಬುಜಭಾನುಸತ್ಯ
ಸಂ | ಗರನಭವಾಂಘ್ರಿಭಕ್ತಸಹಿತಾಚಲಶಂಬ ನಮುಂದಶಕ್ತಿವಿ || ಸ್ಫುರಿತ
ಸಹಾಸ್ತ್ರಕರ್ಮ ಸುರರೀಕೃತಸುವ್ರತ ಸನವಾದಿವಾ | ರ್ಧರಪವಮಾನ ನಾ
ನತಜನಾಮರಭೂಜ ನತರ್ಕ್ಯವಿಕ್ರಮಂ ... ||೪೭||

ಚ|| ಗುರುಚರಭಕ್ತಿತತ್ಪರ ಸುಪಾತ್ತವಿಭೂತಿಶಿವಾಕ್ಷಮಾಲಿಕಾ | ಭ
ರಣ ಸಜೇಯುನಂಗಗುಣವರ್ಜಿತ ಸೂರ್ಜಿತಲಿಂಗನಿಷ್ಠನೀ || ಶ್ವರಭಜಕಾಪ
ಕಾರಿಹರನ್ಯೈಕದೃಢವ್ರತಸಂಗತಂ ಕೃಪಾ | ಕರನಿರಿವತ್ತನೆಂಬಶರಣಂ ಶರ
ಣಾಗತವಜ್ರಪಂಜರಂ .... ||೪೮||

ವ|| ಒಪ್ಪುತ್ತ ಮಿರ್ಪಿನ ಮಲ್ಲಿ

ಉ|| ವೃ|| ಚೋಳನೃಪಾಲಪಟ್ಟಗಜ ಮದ್ರಿಸಿಭಂಪುದಮಾಂತು ಶೃಂ
ಖಲಾ | ಜಾಲಮನೊತ್ತಿ ಕೀಳ್ದು ತಡೆವಗ್ಗದ ಜೋಧರನಿಕ್ಕಿ ಮೆಟ್ಟಿ ಮು ||
ತ್ತಾಳಿಗಳಂ ಪಳಂಚಳಿದು ಕರ್ಸದಿನುತ್ಕಟ ಕೋಪದಿಂ ಮಹಾ | ಭೀಳತೆ
ವೆತ್ತು ಸೈಪರಿದು ದಾಪೊಳಲುಜ್ವಳ ರಾಜವೀಥಿಯೊಳ್ ||೪೯||

ವ|| ಆವೇಳೆಯೊಳದ್ಭುತಂಮುಸಗೆ.

ಚಂ|| ವೃ|| ನಡೆನಡೆ ಪಿಂಗುಪಿಂಗು ಕಡೆಗೋ ದಿರದೋಡು ಗಜಂಗೆ
ಜಂ ಕರಂ | ಪಿಡಿದುದು ಪೊಯ್ದು ದೆತ್ತಿದುದು ಪೊತ್ತಿದುದೊತ್ತಿದು ದತ್ತ
ಮಿತ್ತಲುಂ || ಕೆಡಪಿದು ದಿಟ್ಟುದಿಟ್ಟೊರಸಿ ಕೊಂದುದು ಸೀಳ್ದುದುತೂಳ್ದ
ದೈಯುಜೆಂ | ಗೊಡುವಜನಂಗಳಂಜವದಿನೆಂಬ ರವಂ ಪಿರಿದಾಯ್ತು ವೀಥಿ
ಯೊಳ್ ... ... ||೫೦||

ವ|| ಆಸಮಯದೊಳ್ ಶಿವಭಕ್ತನೋರ್ವಂ ಶಿವಪೂಜೆಗೆ ಪೂದಿರಿಯ
ಲೆಳಸಿ ಪುಷ್ಪವಾಟಿಯುಂಪೊಕ್ಕು.

ಮ|| ವೃ|| ಎಲರಲ್ಲಾಡದಮುಂಜುಪೊಯ್ಯದಳಿಕಂಪಂ ಪೀರದಿರ್ಪಾ
ರದು | ಳ್ಳಲ ಗೋರ್ಪ್ಪಂಗೆಡದರ್ಚವೊಗ್ಗೆಯೆನಿ ಪಂದಂ ದಾಳನಾಚತ್ರ
ಕೋ || ಮಲಭಾಸ್ವದ್ದಳ ಚಾರುಕೇಸರ ಸುಗಂಧಾಕೀರ್ಣನಪ್ಯೋದ್ಗಮಾ|
ವಲಿಯುಂ ಕೊಯ್ದು ಕರಂಡಕಂ ಜಡಿಯೆ ತೀವುತ್ತಂ ಸಮುತ್ಸಾಹದಿಂ||೫೧|

ಕಂ|| ಹರಪೂಜೆಗೆಯ್ವಪೊಳ್ತೋ | ಸರಿವುದೆನುತ್ತವ ನತೀವ ಜವ
ದಿಂತಾಳ್ದಾ || ಕರಡಗೆಯಲರಂ ಭಕ್ತಂ | ಪುರವೀಥಿಯೊಳೆಯ್ದೆ ಬರ್ಪಸಮ
ನಂತರದೋಳ್ ||೫೨||

ಉ|| ವೃ|| ಕಟ್ಟದಿರಲ್ಲಿಕಂಡು ಕರಿಕಾಯ್ದು ವಿಜೃಂಭಿಸೆಬರ್ಪಭಕ್ತ
ನಂ | ಮುಟ್ಟಕರಾಗ್ರದಿಂ ಕೆಳೆದು ಸುತ್ತಿನಭಸ್ಥಳಕಿಟ್ಟುತಿವ್ರದಿಂ || ನೆಟ್ಟ
ನೆಕೊಂಬನೊಡ್ಡಿನಿಲೆ ತಪ್ರದನಾಗ್ರದಿ ಸೀಳ್ದುರಕ್ತಮಂ | ದಿಟ್ಟಣಿಸುತ್ತಸೂ
ಸೆಹರಣಂಗಳೆವಾಗ ಳಪಂವಿಷಾದದಿಂ .... ||೫೩||

ಚ|| ಪುರಹರ ಪಾರ್ವತೀಶ ಪರಮೇಶ ಮದೀಶ ಮಹೇಶ ಪಾಹಿಯೆಂ
ಬರವಮ ನಾಲಿಸುತ್ತಗಿದು ಕೆಟ್ಟೆನಿದೆಲ್ಲಿಯಭಕ್ತರೋದನ || ಸ್ವರಮೆನುತ
ಲ್ಲಿಗೆಯ್ದಿ ಜವದಿಂದಿರಿವತ್ತ ನಿಳಾತಳಕ್ಕೆಬೀ | ಳ್ದುರುಳ್ದಮಹೇಶಭಕ್ತನ ನಿ
ಭೇಂದ್ರಮ ನೀಕ್ಷಿಸಿತಕ್ಷ್ಣಣಾರ್ಧದೋಳ್|| ||೫೪||

ಮ || ಸ್ರ || ಪಟುಕೋಪಾಟೋಪದಿಂ ಗರ್ಜಿಸಿ ಘುಡುಘುಡಿಸು

ತ್ತಾರ್ದು ಹೋನಿಲ್ಲೆನುತ್ತಾ । ರ್ಭಡಿಸುತ್ತಂ ಪೊಕ್ಕು ಮೇಗಣ್ಗೊಗೆದು ನೆಗೆ
ದು ತತ್ಕಂಠಮಂ ಮೆಟ್ಟಿನಿಂದು॥ ತ್ಕಟಸುತ್ತಂ ಚೋದನಂ ಪೊಯ್ದೊದೆದು
ಬಿದುಮದಿಬೋಳ್ಸಸಮಂತಾಗಶೈಲ । ಸ್ಫುಟಿಕಾಯೋಗ್ರೇಭಮಂ ಕೈಗೊ
ಡಲ್ಲಿಯು ನಘಟೆಂಶೀಳ್ದು ಸುಗಾಪ್ರಸತಾರಂ ॥ ೫೫ ॥

ಚ ॥ ಕೆಡೆದುದು ಸಿಂಧುರಂ ಧರಣಿಯೋಳ್ ಹರಿಪೊಯ್ದೊಡೆ ನೀಲಪ
ರ್ವತಂ । ಪವುಲಿಡುವಂದದಿಂ ಶರಣನಿಂತೇಸಗಿರ್ದುದನೆಲ್ಲಮಂ ಮಹಾ ॥
ಮುವುಪಥಭಕ್ತ ಜೋಳವಿಭುಕೇಳ್ದಗಿದೇಳ್ತರುತಲ್ಲಕಂಡುಸಂ । ಗಡಪನರೇಂ
ದ್ರರಚ್ಚರಿಯನಾಳೆ ತದಂಘ್ರೀಗೆ ವೈಯ್ಯನಿಕ್ಕಿದಂ ॥೫೬॥

ವ ॥ ಅಂತು ವೈಯಿಕ್ಕಿಪೊಗಳ್ದು ಕೈಯಂಮುಗಿದುನಿಂದು ಕಿಂಕರ
ತೆಯುನಪ್ಪು ಗೆಯ್ದು

॥ವೃ॥ ॥ಉ॥ ಶ್ರೀವರ ಪಾಗ್ವರ ಪ್ರಮುಖ ನಿರ್ಜರ ರಾದೊಡಮೊ
ರ್ಮೆ ತೀವ್ರಗ । ರ್ವಾವಿಳರಾಗಿ ಮೂರ್ಛಲೆಯ ಶಿಕ್ಷಿಸಲಾರ್ಪರ್ಥಟುಳ್ಳವಂ
ಗೆದಂ ॥ ತಾವಳಮರ್ದನಂ ಪಿರಿಧೆ ಕೆಳ್ಳಿ ನಗಂತರಿಸಂತದಿರ್ಕೆವಾ । ದೇವ
ನಭಕ್ತನಂಮಡಿಪಿತಕ್ಕಟ ದುಷ್ಟಮದಾಂಧಮದ್ಗಜಂ ॥೫೭॥

॥ಕಂ॥ ಪಿಗೆಯ್ವನಿದಕೆಪೇಳ್ಗಣ । ಸಾಗರ ಸದ್ಭಕ್ತವೃತಿಗೆ ಮೇಣೆ
ನ್ನನುವಂ ॥ ನೀಗೆಸರಿಬರ್ಕುಮೆಂದು । ಸುದಾರ್ಗಳೆ ಬಾಯ್ಬುಳಿಯದಿರ್ಕು
ಮೆ ನಿಜದಿಂದದಂ ॥೫೮॥

ಎನ್ನಗಜ ಘಸಗಿದೀತ।ಪ್ಪೆನ್ನದು ವಲಮುಳಿದು ಶುದ್ಧನಪ್ಪಿನೆನುತ್ತಂ॥
ಸನ್ನುತಗುಣನಿಧಿ ಚೋಳಂ । ತನ್ನಯಶಿರಮರಿದುಕೊಳ್ವ ಸಮಯದೊ
ಳಾಗಳ್ ॥ .... ॥೫೯॥

ಮ॥ ವೃ॥ ಸುರಗಂಗಾ ಶಶಭೃತ್ಕಪರ್ದ ನನಲಾದಿತ್ಯೇಂದುನೇತ್ರಂ
ಮಹಾ । ಗರಳಗ್ರೀವ ನಹೀಂದ್ರಭೂಷನಗಜಾಸಂಯುಕ್ತನುಗ್ರದ್ವಿಪಾ॥
ಸುರಚರ್ಮಾಂಬರನನ್ವಿತಾಭಯವರ ಶ್ರೀಪಾಣಿಪದ್ಮಂಪ್ರಭಾ । ಕರಕೋಟಿ
ಪ್ರಭ ನಕ್ಷಪಾದ ನನಘಂ ಪ್ರತ್ಯಕ್ಷ ನಾದಂಮೃಡಂ ॥ ॥೬೦॥

ವ ॥ ಅಂತು ಶಿವಂ ಪ್ರಸನ್ನನಾಗುತ್ತಿರೆ ಪತ್ತವವೀರಪ್ರತಕ್ಕಂ
ಚೋಳಭೂಪನ ಭಕ್ತಿ ಪ್ರತಕ್ಕಂ ಮೆಚ್ಚಿ ಗಣನಿವಹದೊಳ್ಪರೆಶಿವಂ
ಪೊಗಳೀರ್ಪರಂಬಿಗಿಯುಪ್ಪಿ ಮುಂಪಾಡಿ ಮುಡಿದಭಕ್ತಂಗಂ ಗಜಾಘೋರಣ
ಗಂ ಹರಣಮಂ ಕರುಣಿಸಿ ಸುರಕುಜಕುಸುಮವರ್ಷಂ ಭೋರೆಂದು ಸುರಿಯೆ.

ಸುರದುಂದುಭಿ ನಿರ್ಘೋಷಂ ದಿಗಂತಕೆ ಧೀಂಕಿಡೆ ಬೇದ ಮಣಿ ಪುಷ್ಪಕದೊಳ್ಕುಳ್ಳಿರಿಸಿ ಕೂರ್ಮೆವೆರಸಿ ಕೈಲಾಸಕ್ಕೆ ಕರೆದೊಯ್ದು ಸಣಗೆ ಭೆಯೋಳ್ಸುಖಿಸಿರಿಸಿ ಮೆರೆದಿರ್ದನಾಚೋಳೋರ್ವಿಪಂ ಭಕ್ತನಂ ನಿಜ ಗಜಂಮಡಿಸಲೊಡಂ ಭೃತ್ಯಾಪರಾಧಾತ್ಸ್ವಾಮಿನೋದಂಡಯೆಂಬ ನಯ ಮಂಬಿಡಿದು ನಿಜಪ್ರಾಣಮಿತ್ತನೆಂಬಾಗಳಾಂ ಬೇಡೆಂದು ಸಾರಿದೊಡಂ ವಿಾರಿ ಮದೋದ್ರೇಕದಿಂ ಮುಂಗಾಣದೆ ಭಕ್ತವಧೆಗೆಳಸಿ ಮತ್ತಗಜ ಮನಟ್ಟಿದ ನಿನಗಾದ ಶಿವದ್ರೋಹಕ್ಕೆ ನಿಷ್ಕೃತಿಯಾವುದೆಂದು ಮೂದ ಲಿಸಿ ಮತ್ತಮಿಂತೆಂದಂ ||

ಕಂ|| ಧರಣಿಯೊಳತುಳಿತಶೋಭಾ | ಕರಮಿದೆ ಪೆರತಿಲ್ಲವೆಂಬ ಪೇ
ರ್ಮೆಗಡಪಾ | ಗಿರೆ ಬಾಹೂರೆಂಬಮಹಾ | ಪುರವದರೊಳ್ಮೆರೆವನೋರ್ವ
ನಚಳಶಿವೈಕ್ಯಂ || .... ||೬೧||

ಮಾಲಿನೀವೃತ್ತ || ಕಲುಷಕುಜಕುಠಾರಂ ಕಾಲಕರ್ಮಾತಿದೂರಂ |
ವಿಲಸಿತಗುಣಧಾಮಂ ವೀರಶೈವಾಬ್ಧಿಸೋಮಂ || ಸುಲಲಿತಶುಭರೂಪಂ
ಶುದ್ಧವಿದ್ಯಾಕಲಾಪಂ| ವಿಲಯರಹಿತಭಾವಂ ವಿಶ್ವದೊಳ್ಬೊಂಮಿದೇವಂ||

ಶಾ || ವೃ || ವೀರಾಚಾರವಿಹಾರ, ನಾರ್ಯನನಘಂ ಪ್ರಧ್ವಸ್ತಪಾಶಂ
ಮಹಾ | ಕಾರುಣ್ಯಾಕರ ನಪ್ರಮೇಯಮಹಿಮಂ ನಿರ್ಧೂತದೋಷಂಗು
ಣಾ|| ಧಾರಂ ದಿಕ್ತಟಪೂರ್ಣಕೀರ್ತಿಮಹಿಮಂ ಸದ್ಭಕ್ತಸಂದೋಹಮಂ|
ದಾರಂ ಶ್ರೀಗುರುಲಿಂಗಜಂಗಮಪದಾಂಭೋಜಾತಪೂತೋತ್ಸವಂ ||೬೩||

ವ || ಎನಿಸಿ ಪೆಂಪುವೆತ್ತಾಬಾಹೂರ ಬೊಮ್ಮಿದೇವಂ ಸ್ವಲೀಲೆಯಿ ನೊಂದು ಕುಸುಮಾರಾಮಮಂ ನೆಗಳ್ವಿ ಪೂಗಿಡುಗಳ ನಾದರಂಬೆತ್ತೋವಿ ಬಕವಕುಳತಿಲಕಚಂಪಕ ಕೇಸರಕರವೀರ ಕರ್ಣಿಕಾರ ಕಲ್ಹಾರಕಮಳಕು ಮುದ ಪುನ್ನಾಗ ಜಾತಿಯೂಥಿ ಕಾಮಾಲತೀಮಲ್ಲಿಕಾದಿ ಕುಸುಮಸಮುದ ಯಮನಲ್ಲಿ ತಿರಿದತಿಚಿತ್ರಮಪ್ಪಂತೆ ಮೆರೆವಿಂಡೆದಂಡೆಚೆಂಡುಪಳಂ ಸಮೆದು ಶಿವಭಕ್ತರ್ಗೆ ಕಾಣ್ಕೆಗೆಯ್ದುದರಿನೊದವಿಸಿದ ವಿತ್ತದಿಂ ಪಿಂಗದೆ ಜಂಗಮಾ ರ್ಚನೆಗೆಯ್ಯುತ್ತ ಮಿಾ ನಿಯಮದಿನನವರತ ಮೆಸೆದಿರ್ದನಂತುಮಲ್ಲದೆ ||

ಮ|| ವೃ|| ಪರವಾದಿವ್ರಜಮೆಯ್ದೆ ವಾದಿನೆ ಬಲಂಬೆತ್ತೀಶಭಕ್ತರ್ಂ ಜ
ಗೆ | ದ್ದುರುಮೆಂದಂದು ಕರಂ ಪ್ರತಿಷ್ಠಿಸಿದ ನಿಕ್ಷುವ್ರಾತಮಂ ಪೇರ್ಮೆತ||

ಳ್ತಿರೆ ತಾಮೇಯಿಸಿ ಕಲ್ಲಸಂದಿಗೆಜಸಂಚೆತ್ತೊತ್ತಿಪ್ಪಿದಂಜೋಳಪಂ । ಪರಲಿಂ
ಗಾಕೃತಿಗೆಯ್ದು ದಲ್ನುಡಿಸಿದಂಸದ್ಭಕ್ತಸಾರಾನ್ವಿತಂ ॥ ॥೬೪॥

ವ॥ ಇಂತು ನಿರುಪಮ ನಿಜಪ್ರಭಾವಂ ಮೆರೆಯುತ್ತಂ ಬೊಂಮಿಡೇವನೆ ಸೆದಿರ್ಪಿನ ಮಲ್ಲಿಮತ್ತಮೊಂದುದಿನ ದೊಳದ್ಭುತಂ ಮಸಗೆ ನರೇಂದ್ರನೋರ್ವಂ ಪರನೃಪಾಲನ ಮೇಲಿದಂಡೆತ್ತಿ ಬರುತ್ತಮಾಪುರ ಬಹಿರ್ವಳಿಯ ಪುಷ್ಪಾರಾಮ ನಿಕಟ ತರಂಗಿಣೀತಟ ದೋಳ್ಪಾಳೆಯಂ ಗೆಯ್ದಿರ್ಪಿನ ಮಾನ್ಯಪನ ಪಟ್ಟಗಜಂ ಸಪ್ತಮದಾವಸ್ಥೆಯಿಂ ಮುಂಗಾಣದೆ ತಂಗನೆಕಸಲ್ದು ದಿಕ್ಕುಂಭಿಗಳಳ್ಕಿಬೃಂಹಿತಂ ಗೆಯ್ದು ನಿಗಳಮಂ ಪರಿದುನಿಟ್ಟೋಟದಿಂ ಬೀದಿವರಿ ದಾರೆಕಾರರನಟ್ಟಿ ಮಾವುತನಂ ಕೆಡಪಿ ಕಟ್ಟುಬಟ್ಟೆಯ ನೊಳಕೊಂಡು ಮಾಮಸಕಂಮಸಗಿ ಕೋಲಾಹಲಮನೆಸಗಿ ತಡೆಯಲೊಡರ್ಚ ದರನಡಂಗೆ ಪೊಯ್ದು ಕಾಲೊಗೆದ ನೀಲಾಚಲದಂತೆ, ಪೊಡವಿಯೊಳಡಿ ಗೊಳ್ವಕಲ್ಪಾಂತ ಮೇಘದಂತೆ, ಬರಿಕೆಯ್ವಡೆದಾದಿವ ರಾಹಸಂತೆ, ವಿಜೃಂಭಿಸಿ ತನ್ನಿದಿರೋಳ್ಪರಿದುತುಡುಂ ಕಲನ್ವಳಿಪಿಸ ಮಾಬೊಮ್ಮಿದೇವಂ ತೊಟ್ಟನೆಕಂಡದಿರದಿದಿರ್ವರಿದು ಸಿಹ್ಮನಾದಂ ಗೆಯ್ದು ಗರ್ಜಿಸಿ ದಕ್ಷಿಣಕರಾಗ್ರಮಂ ನೆಗಪಿಹೋಹೋಯೆಂದು ನಿವಾರಿಸಿ ॥

ಚ॥ ವೃ॥ ಕೆಡೆಕೆಡೆಯೆಂದು ನಿಂದೊದರಿ ಕೇಳ್ದಳರ್ದಟ್ಟಿಗೆಮಾಂತು
ಕುಂಭಮಂ । ಕೊಡಪುತೆ ಗಾಲ್ಗಳಿಂಬೆದಿರ್ದು ಸುಂಡಿಲನೆತ್ತಿಯೊಳಿಟ್ಟು
ಮುಂಬರ ॥ ಲ್ಬಡೆಯದೆ ಕರ್ಣವಿಾಳ್ದಿಳಲಿ ಕಣ್ಮುಗಿಯುತ್ತಿರೆ ಘೀಳಿಡುತ್ತ
ಸೊ।ರ್ಕುಡೇಗಿ ಕುಮುಂಗಿ ಪಿಂದೆಗದು ಬೀಳ್ದು ಪೊರಳ್ದುದು ಮತ್ತ ಕುಜರಂ॥

ವ॥ ಆ ಮದಗಜ ಮಿಂತುತರಂಗಿಣೀ ತಟದೋಳ್ಕೆಡೆದು ಮಡಿಯೆ ದೂತ ಭೂತಳಾಧಿಪವಿರ್ದಲ್ಲಿ ಗತಿವೇಗದಿಂಪರಿತಂದೀವೃತ್ತಾಂತಮೆಲ್ಲಮಂ ವಿಸ್ತರಂಪೇಳೆಕೇಳ್ದು ॥

ಮ॥ ವೃ॥ ಜನಪಾಲಂ ಮಿಗೆ ಭೀತಿವಟ್ಟುನಡೆತಂದಂ ಭಕ್ತನಿರ್ದಲ್ಲಿ
ಗಾ । ಳ್ತಿನಮಂ ತಾಂ ತಳೆದಂಘ್ರಿಪಂಕಜಕೆ ಮೆಯ್ಯಯಂಸಾರ್ಚಿ ಕುಂಬಿಟ್ಟು
ಡೇ ॥ ವ ನಿತಾಂತಂ ಮದಮತ್ತಮತ್ಕರಿಕೃತಂ ತಪ್ಪೆಂನದೋರಂತೆ ತ। ನ್ನ
ನಿದಂನೀಂಕ್ಷಮಿಸೆಂದು ಮುತ್ತಮೆರಗಿರ್ದಂ ದೀನನಮ್ರಾನನಂ ॥೬೬॥

ಕಂ॥ ಎರಗಿದರಸುಗೆಸ ಮೌಳಿಯ । ಸುರೆಪಿಡಿದೆತ್ತುತ್ತೆ ಪರಸಿಸ್ತುತಿ

ದಾಸೆಯುನೆ॥ಟ್ಟರಿಸುತಸುವಿತ್ತು ಬಳ್ಳಿದ॥ ರಿರಿಯುಂಕೃಪೆಗೆಯ್ದುಜೊಮ್ಮದೇ
ವಂ ಮೆರೆದಂ ॥ .... ॥೬೮॥

ಕವಿಗಳ್ಬುಧಭೂರ್ಭುಜ । ರವಿಕಲಮತಿಸುಜನರೆಯ್ದೆ ಚಿತ್ರಮಿದೆಂ
ದು ॥ ತ್ಸವಮಾಂತುಪೊಗಳೆಮುಹಿಮಾ।ರ್ಣವನಿಂತೆಸಗಿರ್ದ ನರಸಕೇಳದಧಿಂ॥

ಕಂ॥ ಮರೆವೊಗೆಕಾವರಿದಿರ್ಜದೊ । ಡಿರಿವರ್ಪದಕೆರಗೆಭವಮುನಳಿಪ
ರ್ಬಡದೆ॥ ಟ್ಟರೊಳೊಂದಿಭಜಿಸೆವಾಳ್ದ । ರ್ತರಿಸಂದಪವರ್ಗಸುಖಮುನೀ
ಶ್ವರಭಕ್ತರ್ ॥ ——— ——— ॥೬೯॥

ಚ॥ ವೃ॥ ಧರಣಿಪಕೇಳನಾದಿಪುರುಷಂ ಕಲಿಕಾಲಕಪರ್ದಿ ಸಾಹಸಾ॥
ಭರಣ ನಯೋನಿಜಂ ಮನುಜನಲ್ತು ವಿಚಾರಿಸೆ ಮಾಚಿದೇವನಾ ॥ ವರಗುಣ
ಶೀಲನಂಘ್ರಿಯ ನೊರಲ್ದುಶರಣ್ಬೊಗುಭೂಪ ನಿನ್ನನು । ದ್ಧರಿಸುವ ನೀನ
ನೀಂತಮು ನಲ್ಲ ಧೊಡಪ್ಪುದುಕಾರ್ಯವಿಪ್ಲವಂ ॥ .... ॥೭೦॥

ವ॥ ಎಂದು ವೃಷೇಂದ್ರನ ಸತ್ಯಾಲಾಪಮುಂ ಬಿಜ್ಜಳನಾಕರ್ಣಿಸಿ ॥

ಕಂ॥ ನರನಾದೊಡೆ ಮಾಚಯ್ಯಂ । ಗಿರಿನಿಭಕರಿಯಿಂ ಕರಾಗ್ರದಿಂ
ಕೊಲ್ವನೆ ತಾಂ ॥ ಪರಮೂಪನಕ್ಕುಮಿಾ ಬಸ । ವರಸನ ನುಡಿನಿನ್ನಿಯೆಂದು
ನಂಬಿದನರಸಂ ॥ .... ॥೭೧॥

ವ॥ ಆಗಳಿಂತು ವಿಚಾರಿಸಿ ನಂಬುಗೆವೆತ್ತು ನಾಣೆಲಿತನಂ ಮಿಕುಮಂ
ತ್ರಿಮಂಡಲಿಕ ದಂಡನಾಥರೊಡ ನೇಳ್ತರೆ ನಡೆತಂದು ಮಾಚಿದೇವನಿದಿರೊ
ಳವನಿವಿನಿಹಿತೋತ್ತಮಾಂಗನಾಗಿ ಪೊಡಮಟ್ಟರೆ ಬಸವರಸನಾ ವೀರಾವತಾ
ರನ್ನಧಿದಾವರೆಗೆರಗಿ ಕರಾಂಜಲಿಗೆಯು ಭಯಭಕ್ತಿವೆರಸು ಕೀರ್ತಿಸಿ ದೇವಬಿ
ನ್ನಪಮಿಂತೆಂದಂ

ಚ॥ ವೃ॥ ಜಡಮತಿಮುನ್ನಮಾಂಜಡಿದು ಜೇಡೆನೆಕೇಳದೆ ತನ್ನದಂತಿ
ಯುಂ । ಬಿಡದವಿಚಾರದಿಂ ಕಳುಪಿ ನೀಗಿದಬನ್ನದೆ ಲಜ್ಜೆಗೆಟ್ಟನಿಂ ॥ ಮುಡಿ
ಯೆಡೆಗೆಯ್ದುಲಳ್ಕುತ ಭಯಂಬಡೆಯಲ್ಕ ಪರಾಧಿಯುತ್ತ ಸ್ಪೈ । ಗೆಡದೆರಗಿರ್ದ
ಪಂನಿಮುಗೆಬಿಜ್ಜಳನುಜ್ವಳಶೌರ್ಯಭೂಷಣಂ ॥೭೨॥

ಚಂ॥ ಎಣೆಪೊಡಜಾಂಡಮಂಡಲದೊಳೀತ್ವನ ಸನ್ನಿಭ ನಿನ್ನೊಳಾರ್ಪಿ
ನಿಂ । ಸೆಣಸಿಬದುಂಕಲಾರ್ಪ ಕಲಿಯಾವ ನಜೇಯ ಪರಾಕ್ರಮೈಕಭೂಷಣ
ನಿನಗೀನ್ನೃಪಂ ತೃಣಕಣೋಪಮನೀತನೊಳೇಕೆ ಸಾಹಸೋ । ಲ್ಬಣದ ಬೆಡಂ
ಗು ಪಿಸ್ಕರಕೆಪಾಶುಪತಾಸ್ತ್ರಮದೇಕೆಲೋಕದೊಳ್ ॥೭೩॥

ಕಂ|| ಪ್ರಣುತಗುಣಭರಣ ಭಯದಿಂ | ಪ್ರಣಾಮಮೆಸಗಿರ್ದ ಭೂಪ ನಪರಾಧಮನಿಂ || ದಣಿಯರ ನಘಿನವಭಾಳೇ | ಕ್ಷಣಸ್ಮರಿಸಿ ಕರುಣಿಸೆಂದು ಮುಗುಳ್ದಿರಗಿರ್ದಂ .... ||೭೪||

ಮ|| ಸ || ವೃ|| ಬಸವಾಧೀಶ ಪ್ರಗಲ್ಭ್ಯಾಮಳವಿನಯ ಸಮಾಲಾಪ ಚಂದ್ರಾತಪಂ ಮಾಂ||ಚಿಸೆತಚ್ಚೈತ ಸ್ಫುರತ್ಸ್ವಾರ್ಯಮಣಿಜನಿತಕೋಪಾಗ್ನಿಯಂ ಶಾಂತಿವೆತ್ತಾ || ರಸೆಯಾಣ್ಮಂ ಗಿತ್ತು ತಾನೊಳ್ದ ಭಯ ಮನಳಿದಿದಾರ್ಸನೆ ಯಂ ಗಂಗಳಂಬಂ | ಧಿಸಿರಕ್ತಾರೇಣುವಂ ಮೇರ್ಣ್ತಳೆ ದಮಗೊಳಿಸುತ್ತೆತ್ತಿದಂ ಮಾಚಿದೇವಂ .... ||೭೫||

ಚಂ || ಅನಿತರೊಳಲ್ಲಿ ಪೂರ್ವದಿನದಲ್ಲಿ ರಿದಾಗಸವಟ್ಟೆಗಿಟ್ಟ ಪೆಂಪಿನ ಪೆಣನದ್ಭುತಂ ಮಸಗೆ ನೋಳ್ಪಜನಾವಳಿಭೀತಿವಟ್ಟುರ್ಭು||ಲ್ಲನೆಕೆದದೊರ್ಳ್ ಡೆಭೋಂಕನಿಳೆಯೊಳ್ಬಡಲಿಟ್ಟುದುತಾನದಕ್ಕೆಜೀ | ವನಪ ನಮರ್ಚಿಮಾಚಿಘ ಭಕ್ತಮಹೋತ್ಸವಮಂ ನೆಗಳ್ಚಿದಂ .... ||೭೬||

ಮ || ಇದು ಚಂದ್ರಾತಪದೊಟ್ಟಿಲೋ ಗಗನಗಂಗಾಜಾತ ಶುಭ್ರಾಂಬುಜಾ | ತವ ಸಂಜಾತವೊ ಶಾರದಾಂಬುದದಪಿಂಡೊ ನೋಳ್ಪೊಡೆಂದೆಂಬ ಸಂ || ಪದಕಿಂಬಾಗಿನಭೋಂತದೋಳ್ಮಿಸುಪ ವಾಸೋಭಾರಮಂಬೆಂಸೊಳಾಂ| ತುದಿತೋತ್ಸಾಹದಿ ನೆಂದಿನಂತೆ ಪದೆದೆಳ್ತಂದಂ ಗಣಾಗ್ರೇಸರಂ||

ವ || ಅಂತೆಳ್ತಂದು ತನ್ನಡಿದಾವರೆಯನೋಲಗಿಸಿ ಬಂದಾವೃಷೇಂದ್ರನಂ ಬೀಳ್ಕೊಟ್ಟಾಮಾಚಿದೇವಂ ನಿಜಮಂದಿರಂಬೊಕ್ಕು ಶರಣಸಪರ್ಯೆಯಿಂ ಸುಖಮಿರ್ದನಾಬಿಜ್ಜಳಂಮಾಚಿದೇವನಮಹಿಮೋನ್ನತಿಗೆ ವಿಸ್ಮಯಂಬಟ್ಟು ನಿಜಮಂತ್ರಿಮಂಡಲಿಕರೋಳ್ಪೊಗಳುತ್ತಂಬಂದು ನಿಜಾಲಯಂಪೊಕ್ಕಿರ್ದನಾಪ್ರಸ್ತಾವದೋಳ್.

ಮ|| ಸ್ರ|| ವೃ|| ಬಗೆದಂದಾ ಮಾಚಿದೇವಂ ನೆಗಳ್ದ ಘನತರಾಚಾರಮಂ ಭಾವಿಸುತ್ತಂ | ಪೊಗಳುತ್ತಂ ಭಕ್ತಸಂದೋಹದೋಹದೊಳವ ನಳವಂಬಂದು ಶುದ್ಧಾಂಗಮಂ ತಾಂ || ಪುಗುತಂ ದೋರಂತೆ ನಾನಾರ್ಥಮ ವಮಿತಚರಶ್ರೇಣಿಗೊಲ್ದೀಯುತಂಕ್ಕೈ | ಮಿಗೆ ಕೂರ್ತಾರಾಧಿಸುತ್ತಂ ಮೆರೆದನತುಳ ಕಲ್ಯಾಣಕಲ್ಪವೃಕ್ಷಮಾಜಂ .... ||೭೮||

ಕಂ|| ಪರಮಗುರು ಮಾಚಿದೇವನ | ಚರಿತ್ರಮಂ ಕೇಳೆ ಪೇಳೆ ಬಿತ್ತ

ರಿಸೆ ಸುಪ್ರೋ॥ತ್ತರ ಪರಿಣತಿ ದೊರೆಕೊಳ್ಗುಂ । ಧರಿತ್ರಿಯೊಳ್ ಸುಜನ ವಿತತಿ ಗಭವನೆ ಕೃಪೆಯಿಂ .... ॥೭೯॥

ಲಲಿತಪದವೃತ್ತ॥ ಕುಂಜರಮುಹಾದನುಜಭಂಜನಪದಾಂಬುಜಕೃತಾಂಜಲಿಸುಭಕ್ತಗಣರಂಜನನಿತಾಂತ । ಪ್ರಾಂಜುಳಯಶೋಧನಧನಂಜಯುದ್ವಗರ್ಜಕಪಶಾಜಲಿಮುನಿಸ್ತುತಸಮಂಜಸಗುಣಾಂಕ॥ಮಂಜುಳಕಟಾಕ್ಷರುಚಿಸಂನಿಶಲೋಕಗುಣಪುಂಜಯುತ ಭಕ್ತಪವಿಪಂಜರ ಸದರ್ಥವ್ಯಂಜಕವಚಸ್ಕಪೂರಿಕಂಜಭವವಂದ್ಯಭವಕುಂಜದವಪಾವಕನಿರಂಜನವೃಷೇಂದ್ರ ॥೮೦॥

ಶಿಖರಿಣೀವೃತ್ತ॥ ಮುರಾರಾತಿ ಬ್ರಹ್ಮಾದ್ಯಮರ ಸಂಸೇವಿತಪದೇ । ಸುರಾರಾತಿಧ್ವಂಸಸ್ಫುಟಪಟಿಕಶೋರಾಯುಧಧರೇ ॥ ಪರಾರಾತಿಸ್ವಚ್ಛಸ್ಮಿತಮುಖಿಸ್ವದಂಭೋಜನಿಲಯೇ । ಪುರಾರಾತಿ ಪ್ರೇಮಾಸ್ಪದೆನಗೆತ್ತನೂಜೇಜಯುಜಯಾ .... ॥೮೧॥

ಗದ್ಯ॥ ಇದು ವಿನಮದಖಿಳ ಸುರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ
ಪರಮಶಿವಲಿಂಗ ಪಾದಾರವಿಂದ ಪರಾಗಭಸಿತಭಾಸುರ ಲಲಾ
ಟಪಟ್ಟ ಸರಸಜನ ಮಾನಿತೋಭಯ ಕವಿತಾವಿಶಾರದ
ಶ್ರೀಷಡಕ್ಷರ ದೇವಭಕ್ತಿ ವಿರಚಿತ ಶ್ರೀಮದ್ವೃಷಭರಾಜ
ವಿಜಯ ಮಹಾಪುರಾಣದೊಳ್ ಸಕಳೇಶಮಾದಿ
ರಾಜಕಥಾಭಿವರ್ಣನ ಮೇಕಾದಶಾಶ್ವಾಸಂ
ಮಹಾ ದೇವಿ ಕಥಾವರ್ಣನಂ
ದಶಮಾಶ್ವಾಸಂ ಸಮಾಪ್ತಂ.

ಮಾಚಯ್ಯಬಸವೇಶ್ವರದೇವ ಸಂವಾದಕಥನಂ.

ನಾಂದಿ|| ಲಲಿತಪದವೃತ್ತ|| ಲಾಟಮಗದಾಂಧ್ರಕವರಾಟವಿಷಯಾಧಿಪಕಿ | ರೀಟತಟರತ್ನರುಚಿಪಾಟಲಿತಪಾದ || ಸ್ಫಾಟಿಕಸುಪೀಠಭೃತಕಾಟನೆಪದಾರಿನ್ವಿತ | ತಾಟಕವಿನುತ್ಯನೃಪನಾಟಕಸಹಾಯ || ಡಾಟಪರವಾದಕುಜಪಾಟನಪಟಿಷ್ಠಮುನಿ| ಕೋಟಿಹೃದಯಾಂಬುರುಹಕೋಟರಗಭೃಂಗಾತಾಟತನಟಶ್ರುತಿಸುಘೋಟಕಮತಾದ್ರಿಮಣಿ | ಕೂಟಪೂರೆನನ್ಯಶಶಿಜೂಟಬಸವೇಶಾ ||

ಲಲಿತಪದವೃತ್ತ|| ದುಷ್ಟಜನದರ್ಪಹರಶಿಷ್ಟಜನರಕ್ಷತಸು | ಧಿಷ್ಟಜನಸನ್ನುತನತೇಷ್ಟದಪದಾಜ್ಞೋ || ತ್ಕೃಷ್ಟಗಣಸೇವ್ಯಹೃತದುಷ್ಟಮಕರಧ್ವಜವಿ || ಶಿಷ್ಟಮುನಿಮಾನಸಸುಹೃಷ್ಟಮೃದುಭಾಷಾ | ನಷ್ಟಪರಿವಾದಪರಿಕುಷ್ಟಪರಮೇಶಲಸ || ದಷ್ಟದಿಗಧೀಶನುತಸೃಷ್ಟಜಗದಂಡ | ಕ್ಲಿಷ್ಟಮತಿಸಾಧುಪರಿಪುಷ್ಟಸಕಲಾರ್ಥಪೂರೆ | ವಿಷ್ಟಪಕದಂಬಕವಿಶಿಷ್ಟಬಸವೇಶಾ||

ಕಂ|| ಶ್ರೀಮ ದಗರಾಜ ತನುಜಾ | ವಾಮಾಂಗಂವಾಸುದೇವನುತನತನುಹರಂ || ಭೀಮನಭಿರಾಮ ಸೋಮಕ | ಳಾಮಕುಟಂಮಾಳ್ಕೆ ಸೌಖ್ಯಮುಂಶಿವಲಿಂಗಂ .... ||೧||

ಮ|| ವೃ|| ಗುರುರೂಪಂ ಕರುಣಾಬ್ಧಿ ಮಾಚವಿಭು ಎಂತೊವೃತ್ತಮಿದೊರ್ಂದು ವಾ | ಸರದೋಳ್ಭಕ್ತನದೋರ್ವ ನೋಡೆ ಬಸವಾಗಾರಾಗತಂ ಬೇಡುವೀ || ಶ್ವರಭಕ್ತಪ್ರಜು ಮಿದದಿಂತು ಬಡವಾದೆಂಮಾಣದಾನೆಂಬ.ನಿ | ಷ್ಠುರ ತದ್ಗೀತಮ ನಾಲಿಸುತ್ತೆಮುಳಿಸಂತಾಳ್ದಾತ್ಮಕರ್ಣಂಗಳಂ||

ಕಂ|| ಕರತಳದಿ ನೊತ್ತಿಕೊಳುತಂ | ಹರಹರದುರ್ವಚನಮನಿದನೇಂಕೇಳರೆ ಶಂ || ಕರಶರಣ ರೆಮ್ಮಮುಂ ದಿದ | ನೊರೆಯದಿರೆಂ ದೆಯ್ದೆಜಡಿದುಮಗುಳ್ದಿಂತೆಂದಂ .. .... ||೩||

ಏನೆಂಬೆನಿದಂ ಶರಣ | ರ್ದೀನರ್ಗಡಬೇಳ್ಪ ವಸ್ತುವಂಕೊಡುವ ಮಹಾ ||
ದಾನಿಗಡ ಬಸವನವುಮ ಮ | ಹೀನ ಸದ್ಭಕ್ತಿಭಾವಮಿಂತಿರವೇಡ||೪||

ಮರೆದನೆತನ್ನಯಭಾಷೆಯ | ತೆರನಂಕಡುಚಾಗಿಯೆಂಬಬಿಂಕಂಮನದೋ || ಳ್ಗರಿಪಟ್ಟತೆಭಕ್ತಿರಸಂ | ಬರೆತುದೆಬಸವಂವಿವೇಕಮುಂನೀಗಿದನೆ||

ಆತನಗೀತಮನಾತನ | ಮಾತಂಸಲೆಮಾಣ್ಬುದೆಂಮೊಳೆಂದುಸಿರ್ದು

ಕರಂ || ಪಾತಕಿಮಿಗೆ ತಳರ್ದನಾವಿ | ಖ್ಯಾತಂ ನಿಜಕಾಯಕಕ್ಕೆ ಮಾಚಯ
ದೇವಂ .... ||೬||

ಮ|| ಸ್ರ|| ವೃ|| ಬಸವೇಶಂ ಮಾಚಿದೇವಂ ಮುಳಿದಬಗೆಯ ನಾಕ
ರ್ಣಿಸುತ್ತಂ ಮಹಾಸಾ | ಧ್ವಸದಿಂ ಮುಂಗೆಟ್ಟು ಚಿತ್ತಂಕದಡೆ ನಡುಗಿತ
ನ್ಮಾರ್ಗಮಂ ಪತ್ತಿ ಸದ್ಭ || ಕ್ತಸಹಾಯಂ ನಿಂದು ನಿಂದೊಲ್ದಡಿಗಡಿಗೆಳೆ
ಯೊಳ್ಮುಂಬಿಡುತ್ತಿಯಿರ್ದ್ದ ತತ್ಪಾ | ದಸರೋಜಂಗಂಡು ತಾಂ ಸೈಗೆಡೆದು,
ಪೊಗಳ್ದು ಕಾರ್ಪಣ್ಯಮಂ ಬೀರುನಾಗಳ್ .... ||೭||

ಮ|| ಸ್ರ|| ಕೃತಪಾಪಂ ದುಷ್ಟಲಾಪಂ ಕುಟಿಲಮತಿಯುತಂ ಕ್ರೂ
ರ ಸತ್ವಂ ತಜೋರಂ | ಪ್ರತಸೂನ್ಯಂ ವಾತ್ಯಮಾನ್ಯಂ ವಿಕೃತಿಶತ ಸಮಾಶ್ಲಿಷ್ಟ
ನೀಷ್ಠಾಚಿದಷ್ಟಂ || ಧೃತಿದೂರಂ ಧೂರ್ತಪಾರಂ ಸಮುದಕುಮತಿ ಮೃಗ್ಯಂ
ಸದಾಮುಂದಭಾಗ್ಯಂ | ತತಮೋಹಂ ತಾಮಸಾಹಂಕೃತಿ ಯುತನೆನಿಸಿರ್ಪ್ಪಂ
ಪರಂದುಷ್ಟನಾಮಂ .. .. ||೮||

ಮ|| ಅರಿಷಡ್ವರ್ಗದ ದೂಸರಿಂ ಕೊರಗಿದೆಂ ತಾಪಾಗ್ನಿಯಿಂ ಕಂದಿ
ದೆಂ | ಕರಮಾಶಾಗ್ರಹದಿಂದೆ ಕಟ್ಟುವಡೆದೆಂ ಕ್ಲೇಶೌಘದಿಂ ಕುಂದಿದೆಂ || ಪ
ರಿಣದೊಳ್ವರ್ಮಿಪಯೋಧಿಯೊಳ್ಮುಳುಗಿದಂ ಕೂರ್ತ್ತನ್ನಿ ನಿನ್ನಾದೊಡಂ | ಕರು
ಣಾಸಾಗರ ನೋಡಿ ರಕ್ಷಿಪುದಘಧ್ವಾಂತಪ್ರಭಾವಲ್ಲಭಾ ||೯||

ಕಂ|| ಕೊಳ್ಳಿಯೊಳ್ತಂಪನಗ್ಗದ | ಮುಳ್ಳೊಳ್ಮಾರ್ದವಮನೆಲವ
ದೊಳ್ಸಫಲಮಂ || ಪೊಳ್ಳೊಳ್ಪುರುಳಂ ನೋಳ್ಪವೊ | ಲೊಳ್ಳಿತ್ತ ಸಮಾಣ
ದೆನ್ನೊಳರಸಿದೊಡುಂಟೇ ... . ||೧೦||

ಕಂ|| ಅರಿಯುದೆ ನೆಗಳ್ದೀ ತಪ್ಪಂ | ಮರೆವುದು ರಕ್ಷಿಪ್ಪುದೆನ್ನನೆಂದಂ
ಘ್ರಿಯುಂ || ಕ್ಕೆರಗಿದ ಬಸವನ ನೀಕ್ಷಿಸಿ | ಬಿರುವಾತಿಂ ಜರೆದು ಮಾಚಿದೇ
ವಂ ನುಡಿದಂ .... ||೧೧||

ಮ|| ವೃ|| ಎಲೆದುರ್ದಾಂತ ಮದಾಂಧ ಕೊರ್ಬಿದೆಗಡಾ ಸದ್ಭಕ್ತ
ರೀಂದೀನರೇ | ನೆಲನೊಳ್ನೀನೆ ಧನಾಢ್ಯನೆ ಬಡತನಕ್ಕಿಂಬಾಡೆ,ಯೆಂತೆಂತು
ಜೇ || ಳ್ಪಲಸದ್ಭಕ್ತವಿತಾನಮುಲ್ಲದವಲಂ ನೀನರ್ಥಮಂ ಜಂಗಮಾ | ವಲಿ,
ಗೊಲ್ದೀಯದೊಡೀವರಾರಮಮ ನಣ್ಪಿಂದಂ ವದಾನ್ಯೋತ್ತಮರ್ ||೧೨||

ಮ|| ಕೊಡುವಾತಂ ಕಲಿದೇವನರ್ಥತತಿಯಿಂ ಕೊಂಬಾತನುಂ ತಾ,
ತಾನೆಬೇ | ಕೊಪ್ಪಿಡೆಯುಗ್ರಾನಿರದೀವನಲ್ತು ನಿಜದಿಂದೆಂಬೋಧಮುಸ್ತದ್ಭಾವ

ಮಾ ॥ ನೃಡಭಕ್ತಂಗಿರವೇಳ್ಕುಮಲ್ಲದೊಡಹಂಕಾರಾನ್ವಿತಂಭಕ್ತಿನೊ|ಳ್ಪೊಡೆ ತಾಂ ರಾಜಸಮಿಾಶನೊಲ್ಮೆಗದುದೂರಂ ಶುದ್ಧಮೆಂತಪ್ಪುದೆಯ್ ||೧೩||

ಮ|| ಸ್ರ|| ಸುರರತ್ನಂತಾನೆ ಕಾಲ್ಗರ್ಚುವ ಶಿಲೆ ಸುರಧೇನುವ್ರಜಂ ಗೋಕುಲಂತ | ತ್ಸುರಭೂಜಶ್ರೇಣಿ ಪಿತ್ತಿಲ್ಬನಮುರು ಕನಕಕ್ಷ್ಮಾಧರಂ ಕೇಳಿಶೈಲಂ || ಸುರಪಂಭೃತ್ಯಂ ಧನೇಶಂ ನವನಿಧಿವಿಲಸ| ತ್ಕೋಶಮಂ ಪಾವನಪ್ಪಂ | ತಿರೆ ಮಾಳ್ಪರ್ತ್ತಂ ಮನೆಂದುಂ ಭಜಿಪಸುಜನ ಸಂತಾನ ಕೊಲ್ದೀಶ ಭಕ್ತರ್ || .... ||೧೬||

ಕಂ|| ಶಿವಗಣಕೆನೀಂಕೊಡುವ ದಂ | ತಿ ವಾಜಿ ವಸು ವಸನ ವಿಸರ ವನಿತಾಮಣಿಗಳ್ || ವಿವರಿಪೊಡೆವಾಳ್ತಿಸರಿ | ದ್ಧವಂಗೆ ಮುಗಿಲೀವ ಪನಿಗಳಂತಿರೆ ಧರೆಯೊಳ್ || ....: .... ||೧೫||

ಕಂ|| ನಡೆನೋಡು ಬಸವಶರಣರ | ಬಡತನಮಂ ತೋರ್ಪೆನೀಗಳೆಂದಾಕ್ಷಣದೊ || ಳ್ಮಡಿವಳ್ಳಮಾಚಯಂತ | ನ್ನಡಿದಾವರೆಯಿಂದೆನೀರ್ಗಳಂಕೆದರಲೊಡಂ || .... ||೧೬||

ಕಂ|| ನವ ಜಲಕಣ ಗಣಮದು ಮಣಿ | ಪವಳಂ ಪೊಸಮುತ್ತುಪುಷ್ಯರಾಗಂ ವಜ್ರಂ || ಪವಿಧರಮಣಿ ವೈಡೂರ್ಯಂ | ತವೆ ಗೋಮೇಧಿಕಮುದಾರಮರಕತ ರತ್ನಂ || .... ||೧೭||

ವ|| ಎನಿಪ್ಪ ಮಣಿಗಣದ ರಾಶಿಯಾಗಿ ನಿಜರುಜಿಯಿಂ ತರಣಿಕಿರಣಮನಧಿಃಕರಿಸಿ ಧಳಧಳಿಸಿಪೊಳೆಯೆಮತ್ತಮಾಗಳ್ ||

ಕಂ || ಪ್ರಮಥಪ್ರಸಾದಲಬ್ಧಂ | ಸುಮನೋ ಮಹಿಜಾತಜಾತಸುಮನೊವರ್ಷಂ || ಸುಮನೋಜ್ಞಮಾಗಿಮೇಲಿಳಿ | ಯೆಮಹೋತ್ಸವಮಾಂತು ಪೊಗಳೆಭಕ್ತಕದಂಬಂ || .... ||೧೮||

ವ|| ಆಗಳ್ಮಹೀಪತಿ ಮಾಚಿದೇವ ಮಹಿಮಾ ಲೋಕನೋತ್ಸುಕಂ ಮಂತ್ರಿಮಂಡಲಿಕರ್ವೆರಸಿ ಬಂದು ನಿರೀಕ್ಷಿಸಿ ವಿಸ್ಮಯಂಬೆತ್ತುಪೊಗಳುತ್ತಿರೆ ತನ್ಮಹಿಮೆಯಂ ನುತಿಸಲೀಶ್ವರಂ ಪಲ ವರಿಜುವಡೆ ದೇಳ್ತಂದ ನೆನಿಸಿ ಗಣನಿವಹಂನೋಡಿ ಕೊಂಡಾಡೆ ರಂಜಿಪ ಕಲಿಕಾರಣರುದ್ರನಪ್ಪ ಮಾಚಿರಾಜನ ಪದಸರೋಜಕವನತನಾಗಿ ಸಾತ್ವಿಕಂನಿಮಿರೆಬಸವಂ ಭಯಭಕ್ತಿವೆರಸಿಕೀರ್ತಿಸಿ ||

ಚ|| ವೃ|| ಪರಸಮಯಾತಿಭೀಮ ಪಟುಸಾಹಸಧಾಮ ಪರಾಪ್ತಕಾ

ಮ ಭಾ | ಸುರಗುಣರತ್ನಹಾರ ಭವಿಮೇಘಸಮೀರ ಭವಾಪಹಾರ ಕಾಂ||
ಕರಮತಸಿಂಧುಚಂದ್ರ ಶಮನಾದ್ರಿಮಹೇಂದ್ರ ಶಿವಾಂಗರುದ್ರ ಸ | ದ್ವರದ
ಕೃಪಾಸಮುದ್ರ ವಸುಧಾತಳರುದ್ರ ವಿನಿದ್ರ ವೈಭವ || ||೧೯||

ಕಂ|| ಶರಣಾಗತರಕ್ಷಣ ತ! ತ್ಪರ ಪರಮಾರಾಧ್ಯಮಾಚಿದೇವ ಮಹ
ತ್ವಾ||ಕರ ಕರುಣಾನಿಧಿ ಕರುಣಿಸಿ | ಪರಿಭವಸಾರದಿ ನೆನ್ನನುದ್ಧರಿ ಸಭವಾ||

ಮ|| ಸ್ರ|| ವೃ|| ಪಶುಪಾಂ ದೇವೇಶಕೇಳ್ನೀಂ ಪಶುಪತಿ ಖಲನಾಂ
ಸಾಧುನೀಂ ಕ್ರೋಧಿಯಾಂ ಪೂ | ರ್ಣಶಮಾಂಕಂ ನೀಂ ಸದಾದುಷ್ಕೃತ
ಶತಕರನಾಂ ಧರ್ಮಿನೀಂ ಘೋರಮಾಯಾ|| ವೃತನಾಂಮಾಯಾವಿನೀಂ ಚಿದ್ರ
ಸವಿರಹಿತನಾಂ ಜ್ಞಾನಿನೀಂ ಪಾಪರಾಧಂ | ಶಿಶುಪಾಂಮೇಣ್ತಂದೆನೀಂ
ಲೋಭದನೆಲೆನನೆಯಾಂ ದಾನಿನೀಂ ಮಾಚಿದೇವ || ||೨೦||

ಶಾ|| ಖ್ಯಾತಂ ಲಕ್ಷಚತುಷ್ಟಯಂ ಮಿಸುವ ತೊಂಭತ್ತಾರುಸಾಹಸ್ರ
ಮುಂ | ಗೀತವ್ರಾತಮನೆಯ್ದೆ ಪಾಡಿದೆ ನರಜ್ಯಾಕ್ರಂದನಂ ಗೆಯ್ದುವೊ||ಲ್ಪಾ
ತಾಹಂಕೃತಿ ಯಾದೆನಾ ನದರಿನೆಲ್ಲಂ ಮೋಘಮಾದತ್ತು ತ | ದ್ಗೀತಂನಿಮ್ಮ
ಡಿ ಯೊಲ್ಮೆಯಿಲ್ಲದೊಡೆ ಪೇಳೇಗೆಯ್ವೆನೆಂತಿರ್ಪೆನೋ || ||೨೧||

ವ|| ಎಂದಾಂನೆಗಳ್ದ ಶತಾಪರಾಧಮುಂ ಕ್ಷಮಿಪುದೆಂದು ಪೊಡಮಟ್ಟಿ
ರ್ಪ ಬಸವರಾಜನಂ ಮಾಚಿದೇವಂಕೃ ಪಾವಲೋಕನದಿನಭೀಕ್ಷಿಸಿ ತೆಗೆದು
ಬಿಗಿಯಪ್ಪಿ ಮನ್ನಿಸುತ್ತಮಿರ್ಪಾಗಳ್ ||

ಕಂ|| ತೊಳೆವಾತ ನಂಬರಕ್ಕೆಂ | ಮುಳಿವನೆ ಮಲಿನಕ್ಕೆ ಮುಳಿವನ
ಲ್ಲದೆ ಸುಗುಣನೋ || ಜ್ವಳ ಬಸವನಭಕ್ತಿಗೆ ನಿ | ರ್ಮಳತೆಯನಾಗಿಪೊಡೆ
ಮುಳಿವನೀ ಮಾಚಯ್ಯಂ || .... ||೨೨||

ಚ|| ವೃ|| ಕಡಿದೊಡೆಕರ್ಬು ಸಿಯ್ಯನಿನಿದೀಯದೆ ಮಾಣ್ಬುದೆ ದಿವ್ಯ
ಚಂದನಂ | ಪಿಡಿದಮರ್ದೊತ್ತಿ ತೆಯ್ದೊಡೆಸುಗಂಧಮನಾನದೆ ಕಾಸಿವನ್ನಿ
ಯಿಂ || ಬಡಿದೊಡೆ ಕಾಂತಿಯುಂ ಪಡೆಯದೆ ಕನಕಂಕಡುಕಾಯ್ದು ಮಾಚ
ಯಂ || ಜಡಿದೊಡೆ ಭಕ್ತಿಯುಜ್ವಳತೆಯಂ ಬಸವಂತನೆ ಬೀರದಿರ್ಪನೇ ||

ವ|| ಎಂದು ಶಿವಗಣಸಂದೋಹಂ ಬಣ್ಣಿಸುತ್ತಮಿರೆ. ವೃಷೇಂದ್ರನಂ
ನೋಡಿ ಮಾಚಿದೇವನಿಂತೆಂದಂ ||

ಕಂ || ವಿನಯಂಶಮೊದಮೆ ನಿರ್ಪಂ | ಚನೆ ದಾರ್ಢ್ಯಂ ಸತ್ಯಮಾ

ಜರ್ಗಮಂ ನಿರ್ಮದಭಾ ॥ ವಸಿ ದಾಸ್ಯಂ ಭಯ ಮಸುನಯ । ಮನವದ್ಯಂ
ಭಕ್ತಿಲಕ್ಷಣಂ ಬಸವೇಶಾ ॥ .... ॥೨೫॥

ಕಂ॥ ಮದಮದು ಭಕ್ತಿಗೆಕಂಟಕ। ಮದನಳಿಯು ಲ್ಸೇಳ್ಕು ಮದರಿ
ನೆಮ್ಮಯಶರಣ ॥ ಮರ್ದನಾರಿಯ ಪದಭಕ್ತರ । ಮದಮಂಮುನ್ನಳಿದು
ಭಕ್ತಿಯುಂಪ್ರಕಟಿಸಿದರ್ ॥ .... ॥೨೬॥

ಕಂ॥ಎಂತೆನೆಪೇಳ್ವಪೆ ನಸನೀ ।ಕಾಂತೆಯುಸೀಮಂತರತ್ನಮೆನಿಸಂಗೊ
ಳಿಸುಂ ॥ ಕಾಂತೆಮಿಗೆನವಿಲೆಯುಂಬ ಪು । ರಂತಾನಳಕಾಭಿರಾಮ ಗುಣಪ
ರಿಮಿಳಿತಂ ॥ .... ॥೨೭॥

ಕಂ॥ ಆಪುರದೊಳೆಸೆವ ನೋರ್ಪನು । ಮಾಪತಿಸದಭಕ್ತ ನಮಿತ
ಶಿವಸುಖಭರಿತಂ ॥ ತಾಪಸನುತಸುಜ್ಞಾನಕ । ಲಾಪಂ ಮೃಡರೂಪ ನಪ
ಗತಾಖಿಲ ತಾಪಂ ॥ .... ॥೨೮॥

ಚ॥ ವೃ॥ ಭವಮೃತಿಕಾಲಕರ್ಮರಹಿತಂ ಹರಿಧಾತೃಮುಖಾಸ್ಯದೈ
ವಗ । ರ್ವವನದವಾಗ್ನಿ ಚಂಡಭುಜದಂಡನಖಂಡಗುಣಾಂಕ ನದ್ರಿಜಾ ॥
ಧವಮತಪಾರಿಜಾತ ನಭವಾಗಮಧೀರ ನತರ್ಕ್ಯವಿಕ್ರಮಂ। ಭವಿಮತಪದ್ಮ
ಷಂಡಕಳಭಂ ನರಭೀಮಸಮುಗ್ರವಿಗ್ರಹಂ .... ॥೨೯॥

ಕಂ॥ ಶಂಕರಕಿಂಕರಜನತಾ ॥ ಶಂಕರಸಘುಚಯುಭಯುಂಕರಂಪರಿಹೃ
ತಮಾ॥ಯಾಂಕುರನಿರ್ಗಂಪೆಸರಿಂ।ಶಂಕರ ದಾಸಯ್ಯನೆಂಬ ನೆಚಳಶಿವೈಕ್ಯಂ॥

ತರಳವೃತ್ತ ॥ ಜಡಯುಶಂಕರದೇವದಿವ್ಯಸಮಾಸ್ಥಿತಂ ಮೆಂದಿರ್ಪ
ನೋ । ಳ್ಪಡರೆ ಸೂಚಿಯುಕಾಯಕಂ ಕ್ರಿಯೆಯೊಪ್ಪೆ ಮೇಣದರಿಂದ ತಾಂ ।
ಪಡೆದು ತಂದೊಡಸ್ವೈದು ಮಾನಸುಧಾಸ್ಯದಿಂ ದರಿದೆಂಬಿನಿಂ । ಮೃಡನಭ
ಕ್ತಸಮಸ್ತಕಾದೊಡಮಲ್ಲಿ ತೃಪ್ತಿಯನಾಗಿಸಂ .... ॥೩೧॥

ವ॥ ಆನವರತ ಮಾಮಹಿಮಾನ್ವಿತ ನೀ ನಿಯಮದಿ ನಿರೆಯಿರೆ ತದ್ದ
ರ್ಶನೋತ್ಕಂಠೆಯಿಂ ಜೇಡರದಾಸಯ್ಯನೆಂಬ ಪರಭಕ್ತನೋಳ್ತಂದವ ನದಿ ಗ
ಮನತನಾಗಿ ಶಿವಾನುಭವಗೋಷ್ಠಿ ನಿರ್ದನಂತರಂನಿಜಭವನಕ್ಕೆೞ್ತಂದು ನಿಜ
ರಮಣಿಯೊಡನುಂಮುಳಿಸುತಿಂತೆಂದಂ

ಕಂ॥ ಹರಭಕ್ತನಾಗಿಯುಂ ಶಂ । ಕರದಾಸಂ ಬಡತನಕ್ಕೆಪಕ್ಕಾಗಿ
ರ್ಪಂ ॥ ತರಳಾಕ್ಷಿಕಳುಪ್ರಧಾನ್ಯೋ । ತ್ಕರಮಂ ಪಸಿದಿರ್ಕೆಮಾತಸಲ್ಲದೊ
ಡೀಗಳ್ ॥ .... ॥೩೨॥

ವ || ಎಂದು ಬೆಸಸೆತದ್ವಾಕ್ಯೆಯೆನಿಪ ದುಗ್ಗಳದೇವಿ ತಳ್ವದೆಧಾನ್ಯ ಮಂಕಳುಪೆ ಶಂಕರದಾಸಯ್ಯನದಂಕಂಡು ಮುಗುಳ್ನಗೆನಕ್ಕು ||

ಮ|| ಸ್ರ|| ವೃ|| ಒದವಿರ್ದತ್ಯಂತಭಾಗ್ಯಂಮಿಸುಗೆ ಮೆರೆವದಾಸಯ್ಯನೆನ್ನಿಮ್ಮೀದರಿದ್ರ | ತ್ವದ ಪಾಂಗಂಕಂಡುತಾನೇಂಕರುಣಿಯೊ ಮರುಕಂಬೆತ್ತುಧಾನ್ಯಂಗಳಂ ತ || ಳ್ವಡೆ ತ್ತಂದಿತ್ತಂ ಮೊದಲ್ಧಾನ್ಯದ ಘನನಿಧಿಯಂ ವಸ್ತ್ರಮುಂಕೊಟ್ಟು ಕೊಂಡಂ | ಪಡೆವಾ ನಿನ್ನೇನನೀವೆಂಕೃಪಣ ನಮುಮನ ದ್ಭಕ್ತನಿಂತಾಗವೇಡ || .... ||೩೩||

ವ|| ಎಂದುರೋಡಾಡುತ್ತೊಂದು ಮುಷ್ಟಿಯೊಳಾನೆಲ್ಲನೆಲ್ಲನು ನಡಸಿಪಿಡಿದು ಪೊಡವಿಯೊಳಿಡೆ ಗೃಹದೊಳಿರ್ದಕ್ಷಯನಿಧಿ ತಕ್ಷಣದೊಳಡಂಗೆಕಂಡುಬೆಬ್ಬಳಿ ವೋಗಿ ತಳಮುಳಗೊಂಡು ಕಳವಳಿಪ ನಿಜಪತಿಯಂನೋಡಿ ದುಗ್ಗಳಾಂಬೆಯಿಂತೆಂದಳ್ ||

ಕಂ|| ಸರಿಬೆಸದಾಡಮನೇಂಕೇ | ಸರಿಯೊಡ ನಾಡಿದರುಮೊಳರೆ ಶರಣನಪರಿಯಂ || ಪರಿಕಿಸದೆ ಕಳುಪಿ ಧಾನ್ಯಮ | ನುರುಮುದದಿಂ ನಿಧಿಯು ನಿಂತು ನೀಗಿದೆಯಕಟ .... ||೩೪||

ಕಂ|| ತಂದ್ವೈದು ಮಾನ ಧಾನ್ಯದೊ | ಳಿಂದುಧರಾರ್ಚಕ ಸಹಸ್ರಮಂ ತಣಿಪಿದಪಂ || ಕುಂದದೆ ಶಂಕರದಾಸನ | ಮಂ ದಿಟದಿಪ್ರಿಯದರಿದ್ರನೇನಾದಪನೇ .... ||೩೫||

ಉ|| ವೃ|| ಅತನಪೇರ್ಮೆಯಂ ಪೊಗಳಲಾರ್ಸೆರೆವ ನಿಜರೂಪದಿಂದೆ ಸಂ | ಪ್ರೀತಿಯೊಳೀಶನೆಯ್ದಿ ವರಮುಮಿಗೆಬೇಡೆನೆನಕ್ಕುದೇವ ಮು||ತ್ತಾತಭವತ್ಪದಾಬ್ಜನಿಧಿ ಸನ್ನಿಧಿವೆತ್ತಿರೆ ಬೇರೆಬೇಳ್ಪನಿ | ಖ್ಯಾತವರಂಗಳುಂಟೆ ವರಮಿತ್ತಪೆನೆಂದೆನೆ ಬೇಡನಿಂತಿವಂ .... ||೩೬||

ಉತ್ಸಾಹವೃತ್ತ|| ಎಂಬಲಜ್ಜೆ ನಿನ್ನಚಿತ್ತಕಾಗದಂತೆಬೇಳ್ಪೆನೋ|ಲ್ದಂಬಿಕೇಶರಾತ್ರಿಯಲ್ಲಿ ಸೂಜಿಕಣ್ಗೆಸೂತ್ರಮಂ || ಇಂಬುನೆತ್ತು ಕೋಯು ಲೀಕ್ಷಿಸುತ್ತೆ ಕಾಣ್ಬ ಮಾಳ್ಕೆಯಿಂ | ದಂಬಕಪ್ರಕಾಶ ಮೊಂದನೀಯೆ ಸಾಲ್ಗು ವಿಶ್ವರಂ .... ||೩೭||

ವ|| ಎಂಬಭಕ್ತಸುಕ್ತಿಗೆ ಶಂಭುಸಂಭ್ರಮಿಸು ತಿರುಳೋಳ್ಪರ್ಬಿದ ಮರ್ಬಿನುರ್ಬ ನಳಿವ ಳವ ನಲಂ ಗಲ್ಲದಿಲೆಂದು ನಿಟಿಲತಟದೊಳ್ಪಾವಕಾಕ್ಷಿಯುಂದೇವದೇವಂ ಕರುಣಿಸೆ ಕೈಕೊಂಡು ನಿಲಯಕಾಲದೊಳ್ಪುಳುಘುಳಿಪ

ಕಾಲಾಗ್ನಿರುದ್ರನಂತೆ ಪರದೈವಕೋಲಾಹಲಂ ಪರವಾದಿ ಜನಮದ ಮದ
ಗಜ ವಿಡುವಿದಳನ ಕಂಠೀರವಂ ಹರಸಮಯಂ ನಲಿಯೆ ಪರಸಮಯಂಬೆ
ದರೆ ಸಂಭ್ರಮದಿಂ ನಡೆಗೊಂಡು ಪರದೈವನಿಕೇತನಂಗಳ ನಳವಿಯೊಳ್ನಿಂದು
ನಿಜನಿಟಿಲತಟಘಟಿತಪಟುತರ ವಿಕಸ್ವರವೀತಿಹೋತ್ರ ವಿಲೋಚನದಿಂ ಮು
ಳಿದು ಘುಳುಘುಳಿಸಿ ಘಳಿಲನುರುಪುವಾಗಳಸವಸದಿ ನಲದಾಗಲಯುಮುರಿ
ಯೆ ಸರಭಸಂಪರಿವ ಬಳಾರಿ ಮಾರಿಮಾತೃಕ ನಿಕಾಯಮುಂ, ಆಳ್ಕಿರಿದುಬ
ಳ್ಳಿನರಿವದಳ್ಳುರಿಯುಳುರ್ಕೆಯಿಂ ಗೋಪುರಂತೇಳ್ದು ಸಿಕ್ಕಿವಿಡೆ ಮುಕ್ಕೊಡೆ
ಖಿಳಿಲೆನೆ ಸಿಡಿಯೆ ಪೆಳರ್ದು ನಡುಗಿ ಬಾಯಿಡುವ ಮಾಳವಿವೆರಸು ದಿಟ್ಟೋ
ಟದಿ ನೋಡುವ ಮೈಲಾರನುಂ ಪ್ರಚುರಕಚನಿಚಯಂ ಗರಿಗರಿಲ ನುರಿಯೆ
ತಳನುಳಗುಗೊಂಡು ತಲೆಗೊಡಪಿ ಕಡೆವರಿವೇಕ ನಾಥೆಯುಂ, ಬಿಗಿದುಟ್ಟ
ಗಟ್ಟಣಿಗೆ ನಿಂದುರಿಯೆ ಕೇಸುರಿವೆಳಗು ನಿತಂಬಮಂಡಳಮನಳು ದುರ್ಗಮಾ
ಸುರಿಕೆಮಗೆ ತಳಿರುಟ್ಟ ಪುಳಿಂದಿಯುರ ವಿಭ್ರಮಂದಳೆದು ಮೊರೆಯಿಡುತೆ ಪರಿ
ವ ಯಕ್ಷಿಣಿಯರುಂ, ಕರತಳದ ಪಿಂಛಗುಚ್ಛ ಮುರಿವರಿದುಬೇಯೆ ಭೋಂ
ಕನೆ ಬಿಸುಟು ವಿಸಟಂಬರಿವ ನಗ್ನಾಂಗಜಿನಪ್ರಕರಮುಂ ದಾವಾನಲಂ ಕೊಂ
ಡಕಾಳ್ಗೊರಡಂತೆ ಶಿಖಿಶಿಖಾ ಕಬಳಿತಾಂಗನಾಗಿ ಬಿಗುರ್ತು ಹಾಹಾರವಂ
ಪೊಣ್ಮೆ ನುಂನುಂ ಡಜಾರಕ್ತರಸಮಂ ಕಾರುತ್ತಂ ಪಾರುವ ಪ್ರೇತರಾಜನು
ಮಿಂತು ಪಲಾಯನಂ ಬೆತ್ತು ತಲ್ಲಣಿಸಿ ಮಲ್ಲಳಿಗೊಳ್ವ ಸಕಲದೇವತಾ ನಿಕು
ರುಂಬಮೆಲ್ಲ ಪುಲ್ಗಚ್ಚಿ ಪಲ್ಗಿರಿದು ಕೃತಾಂಜಲಿಪುಟಂಬೆರಸು ನಿಜಚರಣ ನಳಿ
ನಮಂ ಶರಣ್ಬೊಗೆ ತಜ್ಜಗದ್ಗುರು ನಿಶ್ಯಂಕಶಂಕರ ದಾಸದೇವನಭಯಮನಿ
ತು ಕರುಣಿಸೆ ತದ್ದೇವತಾನಿವಹಮಾ ಘನಮಹಿಮನಂಘ್ರಿಯ ನೋಲಗಿ
ಸಲೆಳಸಿ

ಸ್ರ|| ವೃ|| ಮೈಲಾರಂ ಛತ್ರಮಂ ಮಾಳವಿಮಣಿಮಯ ತತ್ಪಾದುಕಾ
ದ್ವಂದ್ವಮಂ ತಾಂ | ಬೂಶೋದ್ಯತ್ಪೇಟಿಯಂ ಬ್ರಾಹ್ಮಿಕೆ ಭಸಿತ ಮಿಳತ್ಪಾ
ತ್ರೆಯಂ ಬ್ರಹ್ಮರಕ್ಷಃ || ಪಾಲಂ ಸೂಚೀಗುಣಂ ತೀವಿದಕರಡಿಗೆಯಂ ಡಾಕಿನೀ
ಶಕ್ತಿ ಶೌರ್ಯ | ಶ್ರೀಲೊಲಂ ಭೈರವಂ ಶೂಲಮನೆ ತಳೆದುತತ್ಸೇವೆಗೆಯ್ಯುತ್ತ
ಮಿರ್ದರ್ .... ||೩೮||

ಉ|| ಚಾರುತರಾಲಯಾಂ ಕಣರಜಂ ಡೆಗೆವ ಳ್ಮಸಣಬ್ಬೆಸುತ್ತುವ |
ಳ್ಕಾರಿರುಪ್ಪುದುಂಬಳಸಿ ತದ್ಗೃಹಮಂ ಘನಕಾಳರಾತ್ರಿಯಾ || ಭೈರವಿ ತ

ರ್ವ ಳಿಂಧನಮ ನೊಳ್ದುರುಗಾವ ಳೊರಲ್ದು ಚಂಡಿಕಾ | ನಾರಿ ಕುಮಾರಿ
ಮಾರಿ ಮಿದಿವರ್ ನಮನೆಲ್ಗಳ ನಲ್ಲಿಪಾಡುತಂ ॥೩೯॥

ಮ॥ ಚಳಿಯುಂಗೆಯ್ವ ವಳೀಕನಾಥೆ ಸಲಿಲಬ್ರಹ್ಮಾಣಿನೀರ್ದಪ್ಪಳು |
ಜ್ವಲಚಾಮುಂಡಿಕೆ ಕಾವಳಾಲಯದ ಬಾಗಿಲ್ವಾಡಮಂ ಚಾರುಕಾ ॥ ಹಳಿ
ಯಂ ಕಾಟಕಮೋಟಕ ಮರ್ದಡಿಯಿಪರ್ಕರ್ಪರಂಗಳಂ ದೆತ್ತುಮಂ | ಜುಳ
ಭಾಷಂ ಮಿಗೆಯೋಗಪೀಠಸಿಷಹಂ ಬಾಳ್ಗುಂತದೀಯಾಜ್ಞೆಯಿಂ ॥೪೦॥

ವ॥ ಸಂತತಮಿಂತೆಸೆವಶಂಕರದಾಸನ ನಿರಂಕುಶಮಹಿಮೆಯುಂ ಜಗ
ದೇಕಮಲ್ಲನೆಂಬ ಭೂವಲ್ಲಭಂ ಕೇಳ್ದಕ್ಕಜಂಗೊಂಡು.

ಕಂ॥ ಫಣಿಧರನಿಂ ಪಡೆದಂಗಡ | ಪಸುಗಂಣ್ಣಂ ಸುರರ ಸುರುಪ್ರಪಂ
ಗಡ ಪರರಂ ॥ ಗಣಿಸಂಗಡ ಸೋಳ್ಪಿಂತ | ಸ್ಥಣಕಮನೆ ಮುರ್ಕ್ರಿಯೊಳಿರ್ಪದಾ
ಮೋದರನಂ .... ॥೪೧॥

ಕಂ॥ ಸುಟ್ಟೊಡೆತನ್ನಯಮಹಿಮೆಯ | ಕಟ್ಟುಬರ್ಪ್ಪ ಯರಿಯಲಕ್ಕುಮೆಂ
ದಾಗ್ರಹಮಂತೊಟ್ಟುಕಿರ್ಪಂಚಲೋಹದೆ | ದಿಟ್ಟಂ ಮಾಡಿಸಿದ ಸುಗ್ರದಾ
ಮೋದರನಂ ॥೪೨॥

ಕಂ॥ ಸ್ಥೂಲಮಹಿಗ್ರಹಕೆತಾ | ಕ್ಕಾಲಯಮಂ ನೆಗಳ್ದರನ್ನದೊಡವಿಟ್ಟು
ಮಹೀ ॥ ಪಾಲಂ ಪೂಜಿಸಿ ಸಂಭ್ರಮ | ಲೋಲಂ ಮುದಮತ್ತು ಚಿತ್ರವಿ
ರ್ಪನ ಮಿತ್ತಲ್ .... ॥೪೩॥

ಶಂಕರದಾಸಂ ಪ್ರೈರಿಭ | ಯಂಕರನಾವಾರ್ತೆಯಂ ಸಮಾಕರ್ಣಿಸಿನಿ
ಶ್ಯಂಕಮತಿ ಯವರ್ಪಪೆಸಿ ಕ | ರಂ ಕಾಯ್ಬಿಂದಲ್ಲಿಗೆಯ್ದಿ ಲುಜ್ಜ
ಗಿಸಿರ್ದಂ .... ॥೪೪॥

ವ॥ ಅಂತೆನರಮಾ ದಾಮೋದರ ಮಂದಿರಾಂತರಾಳದೊಳ್.

ಚ॥ ವೃ॥ ಸೊಡಗರ್ಗಡಿ ನಂದಿಪತ್ತು ಪಗಲೂಳ್ದುದುಜಂಬುಕ ರಾ
ಜಿ ಗೋಪುರಂ | ನಡುಗಿದು ದೇಳ್ಗೆಪೆತ್ತ ಕಳಸಂಮುರಿದೀಳ್ದುದುಗಾರುಡ
ಧ್ವಜಂ ॥ ಕೆಡೆದುದುಸಾಲಭಂಜಿಕೆ ಗಳಿಕ್ಕಿದುಮತ್ರುಮನಲ್ಲಿಕೋಪ್ರಕೀ | ಳ್ದ
ಡಿಗಡಿ ಗಾಡುತಿರ್ದುದು ಮುಗಿಲ್ಮಿಗೆಸೂಸಿತು ರಕ್ತವೃಷ್ಟಿಯುಂ ॥೪೫॥

ವ॥ ಇಂತುತ್ಪಾತಶತಂ ನೆಗಳ್ವಿನ ಮಾ ಶಂಕರದಾಸ ನಧ್ವರಮರ್ದ
ನಕ್ಕೆ ತಳರ್ದ ವೀರಭದ್ರನಂತೆ ವೀರಗಣಪರಿವೃತನಾನಗರಿಗೆಳ್ತಂದು ತದಾ
ಲಯಪ್ರತೋಳಿಕೆಯುಂ ಪೊಕ್ಕು ಮಿಕ್ಕ ಮಾಮಸಕಂ ಮಸಗಿ ಪೊಂದೆಳೆ

ಮನಗಲೆ ನೂಂಕಿಪರಿಸದೊಳ್ಳಿಂದು ಮುಳಿಸಿಂನಿಟಲ ತಟಿಶಿಖಿನಯನನುಂ ನಸುದೆರೆಯಲೊಡನೆ.

ವೃ॥ ಚಟಚಟನಿಸ್ವನ ನ್ನಿಮಿರೆ ಕೆಂಗ್ಗಿಡಿಸೂಸೆ ಪೊದಳ್ದುಪೊಣ್ಮುತು ತ್ಕಟಿಸಿ ಕಡಂಗಿ ಪೊಂಬೆಳಗನಾ ಳ್ದುರಿಮಾಲೆಯನಪ್ಪಿ ಲೋಹಸಂ ॥ ಘಟ್ಟಿ ತಮುಕುಂದವಿಗ್ರಹಮ ನೊತ್ತಿ ತುಡುಂಕೆಮುಸುಂಕಿಪಾಯ್ದು ತತ್ಪಟುನಿಟ ಲಾಕ್ಷವಹ್ನಿಪರಿಯಿಟ್ಟುದು ಸುಟ್ಟುದು ತತ್ಕ್ಷಣಾರ್ಧದೊಳ್ ॥೪೬॥

ಕಂ॥ ಜಲದಧಿಪತಿ ಹರಿಯಂಗಂ । ಜಲಮಯಮಾಗುತ್ತೆ ವಹ್ನಿದೇ ವತೆಯೊಳ್ಳಿ॥ ಶ್ಜಲನೊಂದಿ ತೋರ್ಪವೋಲು । ಜ್ವಲಿಸಿತು ಕರಗಿದ ತದುಷ್ಣ ಲೋಹಾಂಗರಸಂ .... ॥೪೭॥

ವ॥ ಅಂತು ಹರಿಯಂಗಮೆಲ್ಲ ಮುರಿಗಣ್ಣುರಿಯಿ ಸುರಿಗೊಂ ಡರಗಿ ನಂತೆ ಕರಗಿಪೋಗೆ ಶರಣಜನಂ ನಲಿಯೆ ಪರಸಮಯಂ ಕೊರಗೆ ಬೆದರಿ ವಿಸ್ಮ ಯಂಬಟ್ಟು ಜವದಿನೇಳ್ತಂದವನತನಾಗುತೆ ಭಯಂಬಡೆ ದಿರ್ದನಂತಪ್ಪಪೇ ರ್ಮೆಗಡರ್ಪಾಗಿ ಹರಿಮುಖ್ಯಪರದೈವ ಕೆವೇಲಾಹಲನೆಂಬ ಬಿರುದಾಂತು ಮೆರೆವ ಶಂಕೆರಾವತಾರ ಶಂಕರದಾಸಯ್ಯಂಗೆ ಡಾರಿದ್ರ್ಯಾತಂಕಮೆಂದು ಶಂಕೆವೆತ್ತು ಭೋಂಕನಹಂಕಾರದಿಂದೆ ಧಾನ್ಯರಿಗಳಂ ಕಳುಪಿ ಸಿತ್ಯನಿಧಿಯಂ ನಿರರ್ಥಂನೀಗಾಡಿದ ಮರುಳರ್ಗೆಮಗೆತಚ್ಚ ರಣಮೇಶರಣಮೆಂದೀರ್ವರೇಕಚಿ ತ್ತರಾಗುತ್ತಡಿಗಡಿಗೆ ಪೊಡಮಡುತ್ತಮ ವರ್ಗಸಿಯಿಸಿರ್ದ ಮಠಕ್ಕೇಳ್ತಂ ದೊಳಗಣ್ಗೆ ಪೊಕ್ಕ ನೋಳ್ಪಿನಮಾಗಳ್

ಮ॥ ವೃ॥ ಜಲಮುಂ ತಾರೆಲೆ ಕಾಳಿಪಾದ್ಯಕೆ ಸರಾಗಂ ಗೆಯ್ದು ಸ ತ್ಪುಷ್ಪ ಸಂ । ಕುಳಮುಂ ಗಂಧಮ ನಲ್ಲಿನೀನಿರಿಸು ಲಂಕಾದೇವಿ ನೀಂಪೂಜೆ ಸುಜ್ಜ್ವಲಜಾಲೇಂದ್ರದೇವಿಗ ದುರ್ಗೆಯನಿ ಕ್ಕೋರಂತೇ ನೀಂಭೂತಿಯಂ। ನಲವಿಂ ಶಾರದೆ ನೀಡುಹಿಂಗುಲೆ ಕುಡೀಕರ್ಪೂರತಾಂಬೂಲಮುಂ ॥೪೮॥

ಕಂ॥ ಮೆಲ್ಲನೆ ವೀಜನಮುಂ ಪಿಡಿ । ದಿಲ್ಲಿ ಕರಬಂಬೀಸು ಮಾಣಿಕಾ ದೇವಿಯೆನು ॥ ತ್ತಲ್ಲಿ ನೆರೆನೆರೆದು ಸೇವಿಪ । ಸಲ್ಲಲಿತಂಶಕ್ತಿವೃಂದಮೇನೊ ಪ್ಪಿದುದೋ .... ——— ॥೪೯॥

ಮ॥ ಸ್ರ॥ ವೃ॥ ಪ್ರಣುತಶ್ರೀವಾಣಿಯ ಕ್ಕಂಕಣಝಣಝಣಿತಂಪೊ ಣ್ಮೆಕೈಗಣ್ಮೆ ಲೋಲೇ । ಕ್ಷಣಧಾಮಂ ನಿಂದು ಬೀಸುತ್ತಿರೆ ಚಮರರುಹ ದ್ವಂ ದ್ವಮುಂಪಾಡೆತದ್ಯ ॥ ಕ್ಷಿಣಿಯಕರ್ಣೋತ್ತಾರ್ಡೆ ಕಾಳೀವಧು ಪೊಗಳೆ ಮಹಾ

ಭೈರವಂ ಜಟ್ಟಿಗೆಂ ಜೋಗಿಣಿಯರ್ಕಂಬಾದಿ ವಾದ್ಯಧ್ವನಿಯು ನೆಸಗಿಪೇರೋ ಲಗಂ ತೋರಿತಾಗಳ್ .... ||೫೦||

ಕಂ|| ಅಣಿಮಾದ್ಯಷ್ಟ ವಿಭೂತಿಗ | ಳಣಿಯುರವೋಲಗಿಪದಿವ್ಯ ಸಿ ಹ್ಮಾಸನದೊಳ್ || ಮಣಿದೇಳ್ವ ನಿರ್ಜರರರಸು | ದಣಿಯೊಳ್ಕಣ್ಗೆಸೆವ ಸರ ರೆಶಂಕರದಾಸಂ .. .. ||೫೧||

ವ|| ಅಂತೆಸೆವಶಂಕರದಾಸಯ್ಯಂಗೆದಂ ಡಪ್ರಣಾಮಂಗೆಯ್ದು ಕಾರ್ಪ ಣ್ಯದೋರಿ ಕೈಮುಗಿದುನಿಂದು

ನಿರೋಷ್ಠ್ಯವೃತ್ತ|| ಶರಣಶರಣ್ಯಾ ಶಾಂತಶಶಿಶೇಖರ ಸಂಗತಚಿತ್ತಚೇ ತನಾ | ಧರಚರ ಸಂಚಯಾಂಘ್ರಿಸರಸೀಜ ಸದಾರ್ಚಕ ಸಾರಸತ್ವಸಂ ||ಗರ ತತ ಸಾಹಸಾಂಕಗಣರಂಜನ ನಿರ್ಜಿತಕಾಲನೀತನಿ | ರ್ಜರತತಿ ಲಜ್ಜಧೀರಜ ಯಶಂಕರದಾಸ ಜಗತ್ರಯಾಧಿಕಾ ||೫೨||

ವ|| ಎಂದುಸನ್ನುತಿಗೆಯ್ದು

ಮ|| ವೃ|| ಕರುಣಾಸಾಗರಜೀಯ ದಿವ್ಯಮುಹಿಮಾಲಂ ಕಾರ ಭಾಳೇ ಕ್ಷಣಂ | ಕರದಾಸಾರ್ಯ ಭವನ್ಮಹತ್ವಮ ನದೆಂತುಂಕಾಣದಜ್ಞ ರ್ಗೆನೀಂ ||ಶರ ಣಾಗೊಲ್ದಿ ಮಗನ್ಯಥಾಗತಿವಿಹೀನರ್ಗೆಂದು ಬಾಯ್ಬಿಟ್ಟು ತ | ಚ್ಚರಣಾಂ ಭೋರುಹಯುಗ್ಮದೊಳ್ಕೆಡೆದರಾ ದುರ್ಗಾಂಬೆಯುಂದಾಸನುಂ ||೫೩||

ವ|| ಎರಗಿ ನಿಧಿಬಯಲಾದಂದದು ನರುಪೆ ಶಂಕರ ದಾಸಂ ದರಸ್ಮಿತಾ ಸ್ಯನಾಗಿ ||

ಕಂ|| ಶರಣಾರ್ಥಿರವಂಗೊಡುತಂ | ಶರಣಂ ನಡೆನೋಡಿ ನುಡಿದ ನೆಮುಗಾದೆಡರಂ || ಪರಿಹರಿಸಿ ಧಾನ್ಯಮಿತ್ತು | ದ್ಧರಿಸಿದೆ ನಿನ್ನಂತಿರಾಪ್ತರ ತಮ ರೆಮಗೊಳರೇ ||

ಕಂ|| ಇನ್ನೆವರ ಮೆನ್ನೆಡರ ನೆಲೆ | ನಿನ್ನವೊಲಾ ರ್ಪರಿದರಯ್ಯ ಕಡು ಬಡತನದಿಂ|| ದನ್ನವೆವ ಭಕ್ತತತಿಗೆಜ | ಗನ್ನುತ ನೀಂಬಗೆವೊಡಮರಭೂ ಹರುಹಮಲ್ತೆ ||

ಕಂ|| ಜಲನಿಧಿಯೆನಿಪಕ್ಷಯ ನವ | ಜಲನಿಧಿಯುಂ ಪಡೆದು ಜಲನೀ ಪಬ್ಧದವೊ || ಲ್ಸಲೆನೀಂ ಧಾನ್ಯದನಿಧಿ ವಡೆ| ದಲಸದೆ ಧರೆಗೀವ ಧಾನ್ಯವುಂ ಘನಮುಹಿಮಾ || ||೫೬||

ಮ|| ವೃ|| ಎನಗಿನ್ನುಂಧಾನ್ಯಮಂ ಕೊಟ್ಟಪ ನತುಳ ವದಾನ್ಯೋತ್ತ

ಮಂ ನನ್ನಿಯಿಂದಂ । ನೆನೆವುತ್ತಿರ್ಪನ್ನೆಗಂ ನಿನ್ನಯನಿಧಿ ಬಯಲಾಯ್ತುಕ್ಕ
ಟಾದೇವನೇಂಕೊಂ॥ ಡನೊ ಚೋರರ್ಬಂದು ಕಳ್ದೊಯ್ದರೊ ಧರಣೀತಳಂ
ನುಂಗಿತೋಖೇಚರರ್ಕೆಂ । ಮನೆ ಕೊಂಡೇಂಪೋದರೊ ತನ್ನಿಧಿಯನುಸಿರ
ದೇಕಿರ್ದಪೆಯಭಕ್ತವರ್ಯಾ ॥ .... ॥೫೭॥

ಕಂ॥ ಮೃಡನಿತ್ತಕ್ಷಯನಿಧಿಯಂ । ತಡಂಗೆನೀಂಸುಮ್ಮನಿರ್ಪುದೇಂ
ತನ್ಮೃಡನಂ ॥ ತಡೆದೀಗಳ್ಕೊಟ್ಟಲ್ಲದೆ । ಬಿಡೆನೆನೆಮುಗುಳ್ದೀವನಲ್ತೆ ನಿನಗಾ
ನಿಧಿಯಂ ॥ .... ॥೫೮॥

ಬಡತನದಿ ನ್ನವೆದಪೆ ನೆಂ । ನಡಿ ವಿಡಿದೊಡೆ ನಿನಗದೇನ ನಿತ್ತಪೆನಿ
ನ್ನಂ ॥ ಬಿಡದೊಂದಂಬರಮಂ ನೀಂ । ಮೃಡಂಗೆನೆಯ್ದಿತ್ತುಪಡೆವುದಕ್ಷ
ಯನಿಧಿಯಂ ॥ .... ॥೫೯॥

ಒಂದಂ ಕೊಟ್ಟೆರಡಂ ಕೊ । ಳ್ವಂದದ ವಿಕ್ರಯದ ಜಾಣ್ಮೆ ನಿನ
ಗೊಪ್ಪುಗುಮೇ ॥ ನೆಂದರಿಯೆ ನದಂ ನಿನಗಾ । ವಂದದಿ ನೊಲ್ದೀಶನೀ
ವನೆನಗಿತ್ತಪನೆ ॥ .... ॥೬೦॥

ಭಯಭಕ್ತಿಭರಿತ ಚರಿತಂ । ನಯವಿನಯಸಮೇಶನಖಿಳವಾನ್ಯವ
ದಾನ್ಯಂ ॥ ಕ್ರಯವಿಕ್ರಯ ಪ್ರಕ್ರಿಯ ನಿ । ರ್ಣಯ ನಿಪುಣಂ ನೀನೆದಾಸ
ನಿನಗೆಣೆಯಾವಂ ॥ .... ॥೬೧॥

ವ॥ ಎಂದು ವಿಡಂಬಿಸಿ ನುಡಿದು ಖನಿತ್ರಮಂ ಕೈಯೊಳಿತ್ತು ಭೂತ
ಳಮನಿದನೀಗಳಗುಳೆಂದು ಚರ ಚರಣ ರಜಮ ನಲ್ಲಿತಳಿದು, ಶಂಕರದಾಸಂ
ದಾಸಂಗೆಬೆಸಸೆ, ತದಾಜ್ಞೆಯಂಕೈಕೊಂಡಾ ಧರಿತ್ರಿಯ ನವನಗುಳ ಲೊಡ
ನಪರಿಮಿಲಿ ಪೊನ್ನರಾಸಿಪೊರಸೂಸೆಕಂಡು ॥

ಕಂ॥ ಪಿರಿದದ್ಭುತ ಮೊಗೆಯೆ ಭಯ । ಸ್ಫುರಿತಾಂತಃಕರಣರಾಗಿ
ದುರ್ಗಾಂಬಿಕೆಯುಂ ॥ ವರದಾಸ್ಯೆಯ್ಯನು ಮಾಶಂ । ಕರದಾಸಯ್ಯಂಘ್ರಿ
ಪಿಡಿದುಪೊಡಮಟ್ಟಿರ್ದರ್ ॥ ——— ॥೬೨॥

ಕಂ॥ ದೇವ ಭವದೀಯ್ಯಮಹಿಮೆಯ । ನೀ ವಸುಮತಿಯಲ್ಲಿನೋ
ಳ್ಪೊಡಾನೆ ನಿಸರವಂ ॥ ಪಾವನಮೂರ್ತಿ ಕೃಪಾಕರ । ಭಾವಜ ಪುರಹರ
ವಿಲಾಸ ಶಂಕರದಾಸಾ ॥

ಚ॥ ವೃ॥ ಪರಶಿವಮೂರ್ತಿ ನಿನ್ನನಖಿಳೋನ್ನತಭಾಗ್ಯ ಸಮುಗ್ರನೆಂ

ದು ನಿ। ರ್ಧರಿಸದೆ ಪೋಣಕಿಂಚನ ನೆಸುತ್ತವಿವೇಕದಿ ವಿತ್ತಪೆಂಗೆಪೊಂ॥ ನೊರೆಯನಹೀಶ್ವರಂಗೆಪೊಸಟಿಕ್ಕಿಯನೀವವೊ ಲಲ್ಪಧಾನ್ಯಮುಂ। ಸರಭಸ ಮಿತ್ತು ಮಾಡಿದಪರಾಧ ಮದಂ ಕ್ಷಮಿಸಾರ್ಯಶೇಖರ॥ ॥೭೪॥

ಕಂ॥ ಪತುಪಾಂ ಪತ್ನಿ ನೀಂನಿಮ್ಮಯ ।ಶಿಶುಪಾಂಸಲೆ ತ್ರಂದೆನೀಂಮ ಲೀಮುಸಮುತಿಯಾಂ ॥ ಕುಶಲಮತಿ ನೀನದಾನಿಯಾಂವಿತರಣೆನೀಂ॥೭೫॥

ವ॥ ಎಂದತಿದೈನ್ಯದಿಂ ವನಿತೆವೆರಸಿ ಸರ್ವಾಪರಾಧಮುಂ ಸೈರಿಪುದೆಂ ದಡಿದಾವರೆ ಗೆರಗಿರ್ದ ದಾಸಯ್ಯನಂ ಶಂಕರದಾಸಯ್ಯಂ ಕರುಣಾರ್ದ್ರಕ ಟಾಕ್ಷದಿಂ ನಿರೀಕ್ಷಿಸಿ ಮನ್ನಿಸಿ ತೆಗವೆತ್ತು ಅಭಯ ಮಿತ್ತು ಮುನ್ನಿನಂತೆ ರಕ್ಷ ಯನಿಧಿಯುಂ ಕರುಣಿಸಿ ದಂಪತಿಯುಂ ಭಕ್ತಿಸುಖದೊಳಿರಿಸಿದ ನದುಕಾ ರಣದಿಂ॥

ಕಂ॥ ಶರಣರೊಳಿ ಮದ ಮದಾಗೆನು। ಧರೆಯೊಳ್ಭಕ್ತಂಗೆ ಭಕ್ತಿ ಚಂದ್ರಿಕೆಗದು ವಾ ॥ ರ್ಧರಪಟಲ ಮದಳಿದೊಡೆ ಸುಖ। ಶರನಿಧಿವರ್ಧಿ ಪುಮುಕೇಳ್ಗುಣಾರ್ಣವಚಂದ್ರಾ॥ ॥೭೬॥

ಸ್ರ॥ ವೃ॥ ಇಂತೆಂ ದಾಮಾಚಿದೇವಂ ಪದೆದೊರೆದ ಮಹಾಭಕ್ತವೃ ತ್ತಾಂತಮುಂ ಕೇ। ಳ್ದಂತಿಂತೆಂ ದೂಹಿಸಲ್ಬಾರದ ಘನಸುಖಮುಂ ತಾಳು ಸದ್ಭಕ್ತಿಯುಕ್ತ ॥ ಸ್ವಾಂತಂ ತತ್ಪಾದ ಪದ್ಮಕ್ಕೆರಗಿ ನುತಿಸುತಂ ರಂಜಿಸಿ ರ್ದಂದಿಗಂತಾ। ಕ್ರಾಂತ ಸ್ವಚ್ಛಪ್ರಭಾ ಭಾಸುರ ಯತ ನವನೀಮಾನಿನೀ ಮಾನನೀಯುಂ॥ ॥೭೭॥

ಲಲಿತಪದವೃತ್ತಂ॥ ಸಜ್ಜನ ಸಮುರ್ಚ್ಯ ಚರಪಜ್ಜಳಸಮಾರಚಿತಮು ಜ್ಜನನಿಜಾಂಘ್ರಿವಿನಮಜ್ಜನ ಸಮೂಹಾ। ಪಜ್ಜಲದಮಾರುತ ಮರುಜ್ಜ ನಕಶಿಷ್ಟಪವಿಷಜ್ಜಲಜಭಾನುಭವರಜ್ಜು ಕರವಾಲ, ರುಜ್ಜಲಧಿಬಾಡಬಜಗಜ್ಜ ಠರತಾರಕಲಸಜ್ಜಪನಿಯುಕ್ತಮುಪಮಜ್ಜನವಿದೂರ। ಪ್ರೊಜ್ಜನಿತತ್ವಕುಲಬಿ ಜ್ಜಳಪರಿಸ್ತುತವಿಲಜ್ಜಖಲಭಂಜನನಸಜ್ಜಬಸವೇಶಾ॥

ಚ॥ ವಿಲಸಿತ ಕುಂದಸುಸ್ಮಿತೆ ಮುಕುಂದ ಸಮರ್ಚಿತೆ ನೀಲವೇಣಿ ಮಂ। ಜುಳತರ ಪದ್ಮಪಾಣಿ ಮಕರಧ್ವಜ ಪಾಲಿನಿ ಕಚ್ಛಪಾಂಘ್ರಿ ನಿ॥

ಕ್ಷ್ಮಲ ವರಧಾತ್ರಿ ಶಂಭುನಿಧಿ ಯೆಂದೆನಿ ಪಗ್ಗದನೂನಕಾಂತಿ ಸ। ಲ್ಲಲಿತ ತ ನೂವಿರಾಜಿತೆ ಮಹೇಶ್ವರಿ ರಕ್ಷಿಪುದೆನ್ನ ನಕ್ಕರಿಂ ॥

ಗದ್ಯ॥ ಇದು ವಿನಮದಖಿಳ ಸುರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ
ಪರಮಶಿವಲಿಂಗ ಪಾದಾರವಿಂದ ಪರಾಗಭಸಿತಭಾಸುರ ಲಲಾ
ಟಪಟ್ಟ ಸರಸಜನ ಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರದೇವ ಭಕ್ತಿ ವಿರಚಿತ ಶ್ರೀಮದ್ವೃಷಪರಾಜ
ವಿಜಯ ಮಹಾಪುರಾಣದೊಳ್ ಶಂಕರದಾಸದೇವ
ಕಥಾವರ್ಣನಂ ತ್ರಯೋದಶಾಶ್ವಾಸಂ
ಸಮಾಪ್ತಂ.

೧೪ ನೇಯ ಆಶ್ವಾಸ.

ದಭ್ರ ಭಕ್ತ ಕಥನಂ

ನಾಂದಿ॥ ಲಲಿತಪದವೃತ್ತ॥ ಶುಂಠಶಿಶುಮಾರಮದಲುಂಠನಸಮರ್ಥ ದಶ। ಕಂಠನತಭೂಭೃದುಪಕಂಠತತಲೀಲೋ॥ತ್ಕಂಠಭೃಗುಗಾರ್ಗ್ಯಹರಕಂಠ ಸನಕಸ್ತುತವಿ। ಕುಂಠಿಸುಮನಃ ಪ್ರಿಯಸುಕಂಠಸುರಗೇಯಾ॥ ಶುಂಠಿತ ದುರೀಹವಿಷಂಕಂಠಕೃತಚಾರುತರ। ಕಂಠಿಕಗಜಾಸ್ಯಪಿತಕಾರವರವಂದ್ಯಾ। ಶುಂಠನಿಜಶೌರ್ಯಪ್ರೋರಟಂಠಣಿತನಾದಕಲಕಂಠರುಚಿನೀಲಗರಕಂಠಬಸವೇಶಾ॥ ದಂಡಧರಬಾಧಿತಪ್ಸ್ವ ಕಂಡುಭವರಕ್ಷಪರಿಪಾಂಡುರಕಳೇವರ ಪಿಚಂಡಭೃತ ವಿಶ್ವಾ। ಜಾಂಡಘನಕುಂಡಲಿಪಕುಂಡಲಮನೋಜ್ಞ ತ್ರಪಕಾಂಡವನ್ಮೃಡಪ್ರ ಯುತಚಂಡಗಣನುತ್ಯಾ॥ ಪಂಡಿತಜನಾಂಬುರುಹಷಂಡರವಿದೃಪ್ತರಿಪುಖಂ ಡನಜಗದ್ಭರಣಶೌಂಡನಖಿಲಾಶಾ। ಖಂಡಿತಸುಕೀರ್ತಿಮಹಿಮಂಡಲಮಹೇ ಶಪೂರಿಮುಂಡಿತಮಹಾಗುಣಕರಂಡಬಸವೇಶಾ॥

ಕಂ॥ ಶ್ರೀದೇವೀವಾಸ ಹ।ರ್ಷೋದಯ ಕರರೂಪ ನನಘ ನನವ ಧಿ ಮಹಿಮಂ॥ ವೇದಸ್ವ ನಖಿಳ ಜಗದು। ತ್ಪಾದಕ ನಿಮಗೀಗೆಸೌಖ್ಯಮಂ ಶಿವಲಿಂಗಂ .... ॥೧॥

ಅಲಘುತರವಿಕ್ರಮಂ ಮಂ।ಜುಲ ಗುಣನಿಧಿ ನಾಚಿದೇವನಿನ್ನು ಕೇಳಿ

ದೊಳವಿಂ ದುಸುರ್ದಂಶುಭನಿ | ಶ್ಚಲಮತಿ ಬಸವಂಗೆ ಭಕ್ತ ಸೋರ್ವನ ಕ ಥೆಯಂ ||೨||

ವ|| ಅದೆಂತೆನೆ.

ಮ || ವೃ || ಅವನೀಭಾಗ ದೊಳೇಳ್ಗೆವೆತ್ತ ಜಸಮಂ ದಾಳ್ದೊಪ್ಪು ಗುಂ ಸಂಪದ | ಪ್ರವಿರಾಜದ್ಗೃಹರಾಜಿ ದಿವ್ಯಮಣಿಹರ್ಮ್ಯವ್ರಾತ ವಿಭ್ರಾ ಜಶಾಂ || ಭವಗೇಹವ್ರಜ ಶೋಭಿ ಸದ್ಯಕನಕಪ್ರಾಕಾರ ಕೀರ್ಣಾಂಶುನೀ | ಡೆ ವಿಯಲ್ಲಕ್ಷ್ಮಿಗೆ ಕಾಂಚಿಯಂ ಮಿಸುಪ ಕಾಂಚೀನಾಮ ಚಂಚತ್ಪುರಂ||

ಕಂ|| ಘನಮೋಕ್ಷಶ್ರೀಗೆ ತವ | ರ್ಮನೆ ಭರಣೀಯುಕ್ತ ಚೈತ್ರವಾಸ ರ ಮಧ್ಯ || ದಿನದೊಳ್ ಶ್ರೀವೃಷಘಂಟಾ | ನಿನಾದಮಂ ಕೇಳಿವೇಳ್ಗೆ ವೆತ್ತೆಸೆದಿರ್ಕುಂ || .... ||೪||

ವ|| ಮತ್ತಮಾಪಟ್ಟಣ ಮಯೋಧ್ಯೆಯಾಗಿಯು ಮಲಂಕಾರಾತಿವಿ ಭವಾನ್ವಿತಮುಂ, ರಾಜಹಂಸ ಸಮುಂಚಿತಮಾಗಿಯು, ಮಂದಕಾರಾತಿ ರುಚಿರಮುಂ, ಕಮಳಾಭಿರಾಮಮಾಗಿಯು, ಮಜಡಾಶ್ರಯಮುಂ, ಗುರು ಬುಧಕವಿವಿಲಸಿತಮಾಗಿಯು ಮನವಗ್ರಹವಿಳಾಸತಮು ಮನಂತಭೋಗಿ ಲೋಕಾಶ್ರಿತಮಾಗಿಯುಂ, ನಾಕಲೋಕವಿ ರಾಜಿತಮು ಮಖಿಲವರ್ಣಸಂ ಪೂರ್ಣಮಾಗಿಯು ಮಪವರ್ಗಾವಹಮುಂಪರಸಹಕಾರಾ ಳಿಮಂಡಿತಮಾಗಿ ಯು ಮೇಕಾಂಬ್ರವಲ್ಲಭಸಲ್ಲಲಿತಮೆನಿಸಿರ್ದುದಂತುಮಲ್ಲದೆಯುಂ.

ಚ|| ವೃ|| ಸುರಪುರದಂತೆ ದಿವ್ಯಸುಮನೋ ಗಣನಂದನ ಭಾಸಿ ದೈ ತ್ಯಸಂ | ಹರಪುರ ದಂತನಂತ ಬಲತಾರ್ಕ್ಷ್ಯ ವಿರಾಜಿತ ಮಂಬುಜಾರಿ ಶೇ ಖರ ಪುರದಂತೆ ವೀರಗಣನಾಯಕಶಕ್ತಿ ಧರಾಂಚಿತಂ ಧನೇ | ಶ್ವರಪುರದಂ ತೆ ಪುಣ್ಯಜನ ಸನ್ನಿಧಿ ರಂಜಿತಮಾಯ್ತು ತತ್ಪುರಂ ||೫||

ಕಂ|| ಆಪಟ್ಟಣದೊಳ್ವಿನಯಕ | ಲಾಪಂ ಕುಲದೀಪ ನಭವ ಲಾಂ ಛನಧರ ಸೇ || ವಾಪರ ನಿರ್ಜಂದುರಿತ ದು | ರಾಪಂ ಶಿರಿಯಾಳನೆಂಬ ನತಿ ಸಂಪದದಿಂ .... ||೬||

ಮಂಗಳಮಯೆಮಾನಿನಿ ಚರ | ಲಿಂಗಾರ್ಚನ ನಿರತೆ ಚತುರೆ ಪತಿಭ ಕ್ತಿಸಮಾ || ಲಿಂಗಿತೆ ಕಂಗೊಳಿಸಿರ್ದ | ಳ್ಚಂಗಳೆಯೆನಿಸಿರ್ದತಂನಿತಂಬಿನಿಜ ಸದೊಳ್ .... ||೭||

ಆದಂಪತಿ ಗಳ್ಗರ ಸುತ | ನಾದಂ ಚೀಲಾಳನೆಂಬ ನಿಳೆಯೊಳ್ಖ್ಯಾ ತ್ಗೆಂ||ಬಾ

ದಂ ನಿಜವಿಮಳ ಗುಣಾ | ನೋದಿತ ಪಿತೃಹೃದಯ ನಮಿತ ರುಚಿಮಯು
ಕಾಯಂ .... ||೮||

ಅನುದಿನಮೆಳಸಿದ ರುಚಿಭೋ | ಜನದಿಂ ಜಂಗಮಸಹಸ್ರಮುಂ ತಣಿ
ಪುದೆ ಪಾ || ವನಚರಿತ ರ್ಸಲೆಭಜಿಸುತೆ | ಮನಸಿಜಹರನಂ ವಧೂವರರ್ಮೆ
ರೆದಿರ್ದರ್ —— —— ||೯||

ವ|| ಅಂತವರನವರತಮಿಂ ತುಚರಲಿಂಗ ಸಮರ್ಚನೋತ್ಸವ ಪರಾ
ಯಣರೆಸೆದಿರ್ಪನ್ನೆಗಂ.

ಮ|| ಸ್ರ|| ವೃ|| ವರುಣಾಶಾಕುಂಭಿ ಕುಂಭತ್ಕರಟ ತಟಗಳದ್ದಾನೆ
ಧಾರಾತಿಸಾರ | ಭ್ಯ ರಸಾಶ್ಲಿಷ್ಟಂ ಪ್ರತೀಚ್ಯಂಬುಧಿ ಚಳ ದಚಳಸ್ಪರ್ಧಿ ಕ
ಲ್ಲೋಲಮಾಲಾ || ಸ್ಫುರದು ದ್ಯನ್ನರ್ತಕೀ ನರ್ತಕ ನಮುಪಮ ನೀಪ ಕ್ಷ
ಮಾರು ಟ್ಪ್ರಸೂನೋ | ತ್ಕರ ಧೂಳೀಭೂತಿ ಭಾರಂ ಸುಳಿದುದಸದಳಂ
ಪಶ್ಚಿಮಾಶಾ ಸಮೀರಂ .. .. ||೧೦||

ಚ|| ಕಡವಲರೇರಿಕೋರ್ವಿದುದು ಕೇತಕಿವೂತುದುಸೋಗೆರಾಗಮಂ
ಪಡೆದುದು ನಣ್ಪನಪ್ಪಿದುದು ಚಾದಗೆ ಬೆಸಗೆಬೀತು ದಂಚೆಬ || ಲ್ಪುಡಿಗ
ಬಿಗುರ್ತು ಪಾರಿದುದುನೊಲ್ಲೆ ಮುಗುಳ್ದುದು ಬಳ್ಳಿಮಿಂಚು ಸಂ | ಗಡಿಸಿ
ಪಳಂಚಿ ಮಿಂಚಿದುದು ಬಲ್ಮುಗಿ ಲೇಳ್ದುದು ದಿಕ್ಪ್ರತಾನದೊಳ್ ||೧೧||

ಚಂ|| ವೃ|| ವಸುಧೆಯ ರಾಜಹಂಸ ತತಿಯುಂ ನಿಜಗರ್ಜಿತ ಮಾತ್ರ
ದಿಂದೆ ಪಾ | ರಿಸಿ ದನಿತ್ತೈದ ದಭ್ರದೊಳೆ ಕ್ಕೈ ದೆಗೆವಂತಿರೆ ರಾಜಹಂಸರಂ ||
ದೆಸಗುತೆ ತನ್ನಿದಾಘ ವಿಭುವಂ ಸಡೆ ದೇಶ್ವೆಸೆಯೊಳ್ ಸ್ವತೇಜಮಂ | ಸಪರಿ
ಸಿದಂ ತಟಚ್ಛಲದಿ ನಂಬುಧರಾಗನ ಭೂಮಿಪಾಲಕಂ ||೧೨||

ಕಂ|| ಪೊರೆವತ್ತಿಸಿದನೊ ಪಳೆ ಯಂ | ಬರಮಿದು ನೆರೆಪರಿಗು ಮೆಂ
ದು ಬಿದಿನವನೀಲಾಂ || ಬರದಿ ನೆನೆ ತೀವಿಕವಿದಂ | ಬರ ಮನದಂ ನೀಲ
ಜಲದ ಮೇಂರಂಜಿಸಿತೊ .. .. ||೧೩||

ಕಂ|| ನಿಯುತದಿ ನಮರ್ದಿನೊ ಳಮರ್ದೆ | ನ್ನಯ ಜೀವನಮಂ ಮ
ರಾಳನಿದು ಬೀರ್ಪಡಿಕುಂ || ನಯರಹಿತ ಮೆಂಬಮುಳಿಸಿಂ | ಪಯೋಧರಂ
ಗರ್ಜಿಸುತ್ತ ದಂಪಾರಿಸುಗುಂ ||೧೪||

ಕಂ|| ಎಳೆಮಿಂಚು ಬಳ್ಳಿಮಿಂಚು | ಝಳಿಸುವ ಸೆಳೆಮಿಂಚು ತೋ

ರಮಿಂ ಚಸಿಮಿಂಚನ್ನಳಿಸುವ ಗೊಂಚಲ್ಮಿಂ ಚ | ಗ್ಗಳಿಸಿದ ಕುಡಿಮಿಂಚು
ಮಿಂಚಿದವ್ರಕಾರ್ಮೊಗದೊಳ್ ||೧೫||

ಚ|| ವೃ|| ಛಿಟಛಿಟಲೆಂಬ ಗರ್ಜನ ಮೊಡಂಬಡೆ ಮಿಂಚುವ ದಂಷ್ಟ್ರ
ದಂತೆಮಿಂ | ಚಳವಡೆ ಶಕ್ರಗೋಪತತಿ ಸೂಸುವ ರಕ್ತ ಕಣಂಗಳಾಗೆ ಕಂ ||
ಗೋಳಿಸೆಕರಾಂತು ಚಕ್ರಮೆನೆ ಮೇಲೆ ಘನಾಗಮು ಪಾಲನೇತ್ರ ನಿ | ರ್ದಳಿತ
ತಂಕ ॥ ಳ್ಕನೆಚಂಚತ್ಖಡ್ಗದಿಂದಾತ್ಮಶಿರಮನರಿದಿತ್ತೀಶ್ವರಂಮೆಚ್ಚಿತಜ್ಜೀ ।
ವನಮುಂಕೂರ್ತೆತ್ತಿ ಮೋಕ್ಷಂಬಡೆದೆಸೆದಷಗಲ್ತೋಳನಾಳಪ್ಪೆನೆಂದುಂ ॥೫೫॥

ಮ ॥ ಸ್ರ ॥ ನಿಜದಾಸೀಪುತ್ರನೋರ್ವಂ ಕೆಲಸ ಕಲಸುತೇಳ್ತೋಡಿಭ
ಸ್ಮಾಕ್ಷಮಾಲಾ । ಭವನಂಬೆತ್ತಂಗದೋಳ್ಜಂಗಮತತಿಯೊಡನೇಳ್ತಂದುಕಾ
ಲ್ನೀಡೆಹಸ್ತಂ ॥ ಬುಜದಿಂತಾಂಕರ್ಚುವಾಗಳ್ ಜಲಮನೆರೆಯದಾಕಾಂತೆ
ಮಲ್ಲಂಗಡೀತಂ । ನಿಜದಿಂಮುಚ್ಚೇಟಿಯುಪ್ಪಾಸಿರಿಗಿಯಣುಗನಂ ದೇಳಿದಂಗೆ
ಯ್ದೊಡಾಗಳ್ ॥ ——— ॥೫೬॥

ಉ ॥ ಜಂಗಮುದಲ್ಲಿಪೂರ್ವಕುಲನಾಮುಮನೆತ್ತಿದಳೀಕೆಯೆಂದು ತಂ।
ನಂಗನೆಯೊಪ್ಪೆವಾಳ್ದನಳಿತೋಳ್ಗಳನಾಗಳೆಕಾಯ್ದು ಖಂಡಿಸು ॥ ತ್ತಂಗಜ
ವೈರಿಯುಂ ಪಡೆದುಮೆಚ್ಚಿಸಿ ತತ್ಕೃಪೆಯಿಂಗೆಣತ್ವದೊ । ಳ್ಸಂಗತಮಾದಭ
ಕ್ತಕಲಿಕಂ ಬಸಸಿಂಬಕ ಸಪ್ಪೆನಾವಗಂ ॥ .... ॥೫೭॥

ಚಂ ॥ ಧರಣಿಯೊಳೊಪ್ಪುತಂ ಹರಚರಾಂಘ್ರಿಸಮರ್ಚನಸೌಖ್ಯದಿಂ
ದೆತಾ । ನಿರಿಪುರವೈರಿಬಂದೊಸೆದು ಜಂಗಮರೂಪದೊಳೊರ್ಮೆತಂನಭಾ
ಸುರತರಮಾದಕಚ್ಚಟಮನೊಪ್ಪದೆ ಬೈತಿಡುನಾಳೆಕೊಳ್ವೆನೆಂ । ದಿರಿಸುತದ
ಶ್ಯಮಾಗಿಸುತಮಂಮುಗುಳೆಯ್ದುತೆಬೇಡೆನೋಡುತಂ ॥ ॥೫೮॥

ಉ|| ಪೇಳಿಗೆಯಲ್ಲಿಕಾಣದೆ ಮಹಾಭಯಮಾಳ್ದಿರೆ ಕಂಡುಕಾಡುತಂ
ಕೇಳಿಸಗಿಂದಿದಕ್ಕೆ ಪಡಿಕಚ್ಚುಟ ಮಿದ್ದಪುದಂಬರಂಗಳಂ || ಪಾಳಿಯೊಳಿಂತಿ
ದಕ್ಕೆಸರಿದೂಗಿಸಮುಪ್ಪಿರ್ಪುದೆಂದುತಾಪಸಂ| ಪೇಳೆಕಡಂಗಿಕಚ್ಚುಟಮನೊಂ
ದೆಡೆವಟ್ಟೆಯೊಳಂಬರಂಗಳಂ || ——— ||೫೯||

ಉ|| ಒಂದೆಡೆವಟ್ಟೆಯಲ್ಲಿರಿಸಿತೂಗೆ ಸಮಾನಮದಾಗದಿರ್ದ ಡೋ |
ರಂಗದಿವಿತ್ತವಸ್ತುಚಯಮುಂಸತಿಯುಂಸುತನಂನಿಜಾಂಗಮುಂ || ಕುಂದದೆ
ತೂಗಿತೋಡೆಸಿಸಿ ಮೆಚ್ಚಿಸಿ ಶಂಭುವನ್ನೈದೆಮೋಕ್ಷದೊ | ಳ್ನಿಂದುವಿರಾಜಿಸಿ
ರ್ದಮರಸೀತಿಯುಭಂಟರಭಂಟನಪ್ಪನಾಂ || .... ||೬೦||

ಮ|| ಚರಲಿಂಗಾಂಘ್ರಿಸಮರ್ಚನಕ್ಕೆಧನಮೆಲ್ಲಂತೀರೆ ದಾರಿದ್ರ್ಯ
ದಿಂ | ದಿರುತಂ ಪೇರ್ಮಳೆಯಲ್ಲಿ ವೃದ್ಧಚರನೇಷಂಬೊತ್ತು ಕಾಲಾರಿನ||
ಟ್ಟಿರುಳೊಳ್ಬಂದು ನಿಜಾಲಯಕ್ಕೆಛಳಿಯಿಂದಂ ಕಂಪಿಸುತ್ತಾರ್ತಿರ್ನ್ವೆ| ತ್ತಿರಿಕಿ
ಚ್ಚಿಂ ಪಟುಗೆಯ್ದು ತನ್ನಗುಡಿಲಂಕಿಳ್ತಿಕ್ಕಿಪೊತ್ತಿಕ್ಕುತಂ || ||೬೧||

ಚಂ|| ಉರುಪಿದೊಡಲ್ಲಿಕಾದುರಿಯ ನಾಚಳಿಯುಂಡಲೆಯುಂ ತೆರಳ್ಚಿ
ತ | ದ್ವರಮುನಿಭಕ್ತ ಕೇಳ್ವಸಿದೆ ಸಂಬಕಳಂ ತುರುಗಾವಸೂನುಗೆಂ || ದಿರಿಸಿ
ಮದು ಳ್ತ್ವಿಡಿಕ್ಕೆನೆನಿಜಾಂಗನೆಯಿಲ್ಲನೆಕೇಳ್ದುಸಟ್ಟಿರು| ಳ್ಸುರಿವತಿವೃಷ್ಟಿಯೋ
ಳ್ತಳರ್ದು ತನ್ನಯುಗರ್ದೆಗೆತೆಲ್ವನೆಲ್ಗಳಂ || .... ||೬೨||

ಕಂ|| ತಂದುಪುರಿದೊಳ್ದುಮಿದಿದವ | ದಂದೋದನಮೆಸಗಿತಳ್ವದು
ಣಲಿತ್ತೊಲಿಸು || ತ್ತಂ ದಭವನನುರುಮುಕ್ತಿಗೆ | ಸಂದೆಸೆವೆಳೆಯಾಂಡಗು
ಡಿಯಮಾರನಮುಗನಾಂ || .... ||೬೩||

ಉ||ವ|| ದಾನವಿಧಾನದಿಂ ನಿಗಮುಸಮ್ಮತಿಯಿಂ ಸಲಿತೋರ್ಪದೃಷ್ಟ
ಸಂ | ತಾನದಿನಾಗಳುಂ ಭವಿಗಳಂ ಶಿವಭಕ್ತರನೊಲ್ದುಮಾಡುತಂ || ತಾ
ನೊಸೆದಾಳ್ದಧಾರುಣಿಯೊಳಿಲ್ಲದರಂ ತರಿದಿಕ್ಕುತಂ ಪೊದ | ಳ್ದೀನಿಯುಮಂ
ಕರಂ ತನಗೆಶಾಶ್ವತಮಾಗಿರೆ ಬಾಳ್ವಕಾಲದೊಳ್ .... ||೬೪||

ನಿಕ್ಕುವಮೀತನಪ್ಪರಿಯು | ದೊಕ್ಕುಳಮಾಸರಿವೆನೆಂದು ಚಂದ್ರ
ಧರಂ ತಾ || ಳ್ದೊಕ್ಕಲಿಗಸರಿಜನಾತ್ಮಪು | ರಕ್ಕೆಯ್ದುತೆ ಪೊರೆಗೆಬಂದುನಿಂ
ದಸನಸದಿಂ .... ||೬೫||

ಕಂ|| ಬಿಟ್ಟಿಪೊರೆ ತೆರಿಗೆಸುಂಕಂ | ಕೊಟ್ಟಣಮಾಕಾಣ್ಕೆ ಖಾಣಕದ್ದಾಯ
ಮೊಳಂ||ಕೊಟ್ಟುತಳರಿಂದುನಿಂನವ | ರಟ್ಟೆಕರಂಕಟ್ಟುಕುಟ್ಟುಬಾಧಿಸರೆನ್ನಂ||

ಚ|| ವೃ|| ನಿನಗಿದುಧರ್ಮವೇನೃಪತಿಯೆಂದಳಲಿಂಮೊರೆಯಿಕ್ಕೆನೋಡಿ ಕಾ | ಪಿನವರನೆಂತಿವಂಕಳೆಯುತೆಂಮುಡಿಗೆಯ್ದಿದನೆಂದುಪಿಸ್ಕಯಂ || ಜನಿಯಿಸೆಗೌಡಕೇಳ್ನಿನಗೆ ಕೊಟ್ಟಪೆನೀಗಳೆಸರ್ವಮಾನ್ಯಮಂ | ಘನಶಿವಭಕ್ತನಾಗಿರೆನೆ ಕೇಳೆಲೆಭೂಪತಿಯೆಮ್ಮಜಾತಿಯೋಳ್ .... ||೬೭||

ವ|| ಶಿವಭಕ್ತಸ್ಥಿತಿಯಾಂತುಬಾಳ್ವರಣಮಿಲ್ಲಾಂಭಕ್ತನೆಂತಪ್ಪೆನಂ ಜುವೆನೀಭಕ್ತಿಗೆನುತ್ತವಂ ನುಡಿಯೆನಿನ್ನಂಬಾಳಿಪೆಸಂಬು ಶಾಂ || ಭವದೀವಾಕ್ಷಾವಿಧಿಯಾಂತುಬಾಳ್ನಿನಗೆ ಧ್ಯಾದ್ರುದ್ಯರಾಜ್ಯಂಗಳಂ | ಜವದಿಂದೀವೆನೆನುತ್ತೊಡಂಬಡಿಸುತಾತಂ ಕೇಳದಿರ್ಪ್ಪಂದನುಂ .... ||೬೮||

ಉ || ಕಂಡತಿಕೋಪದಿಂಜಡಿದು ಕೂರಸಿಯುಂಪೊಡೆದಿಕ್ಕೆಭೋಂಕನಾ | ಖಂಡಶಶಾಂಕಮೌಳಿನಿಜರೂಪಮನಾಳ್ದು ಪೊದಳ್ದುಪೆುಚ್ಚಿಭೂ ||ಮಂಡಲಪಾಲಬೇಡು ವರಮಿತ್ತಪೆನೆಂದೆನೆಬೇಡತದ್ವರಂ | ಮಂಡಿತಲಿಂಗಮಂತಳೆ ನಿಜಾಂಗದೊಳಂಗಜಮಾನಮರ್ದನಾ ||೬೯||

ಕಂ|| ಎಂದುಶಿವಲಿಂಗಮಂ ಬಿಡ | ದಿಂದುಧರಂಗೊಲ್ದು ಧರಿಸಿಗಣಸಂಕುಳದೊ || ಳ್ಸಂದಗಣನಾಥಭಕ್ತನ | ಚಂದಳಿರಡಿಗೆರ್ಪ್ಪನಾಂಪಕಿಂಕರನಪ್ಪೆಂ .... ||೭೦||

ಚಂ|| ವೃ|| ಮಿಸುಪಚಿದಂಬರಾಖ್ಯಪುರದೊಳ್ ಶಿವಲಿಂಗನಿಕೇತನಕ್ಕೆಬಂ | ದೊಸೆದಭಿವಂದಿಸುತ್ತೆಸಲೆಪೋಗುವನೇಮದೊ ಳೊಪ್ಪುತೊಂದಿರುಳ್ಮಸಗಿಮುರ್ಬಿನೊಳ್ಪುರಹರಾಲಯದಿಂಮನೆಗೆಯ್ದುವಾಗಳಾ| ಗಸಕಡದೊರ್ಪ್ಪುವುಪ್ಪರಿಗೆಇಂಗಣಿಕಾಂಗನೆಯೆಂಜಲಂಬುವಂ .... ||೭೧||

ಉತ್ಸಾಹವೃತ್ತಂ|| ಮೇಲೆಚೆಲ್ಲೆ ಸೀಕರಾಳಿಪಾರ ಸೀಲಕಂಠಕಂ|ಕಾಳಪಾಪೆಯೆಂಬ ಸೊಲ್ಲನಾಲಿಸುತ್ತೆ ಭೀತಿಯಿಂ || ಬಾಲೆಬೇಗಬಂದು ಬೀದಿಗೊಲ್ದುವಂದಿಸುತ್ತೆ ತಂ | ನಾಲಯಕ್ಕೆ ಕೊಂಡುಪೋಗಿದಿವ್ಯಗಂಧ ತೈಲಮಂ ||೭೨||

ಉ|| ವೃ|| ಪೂಸಿವಿಲಾಸದಿಂದೆ ಜಳಕಂಬೊಗಿಸುತ್ತೆಸುಗಂಧಚಂದನಂ ಪೂಸರಮುಂಬರಾಭರಣಮೆಂಬಿವನರ್ಪಿಸಿ ದಿವ್ಯವೀಟಿಕಾ || ವಾಸಿತವಕ್ತ್ರನಂ ನೆಗಳ್ದು ಸೈರಿವು ದೆನ್ನಪರಾಧಮಂ ಭವ | ದಾಸಿಗಡಾ ನೆನುತ್ತೆರಗಿಭೀಳ್ಕೊಡೆ ಬರ್ಪನಮಾತ್ಮಗೇಹದೊಳ್ .... ||೭೩||

ಚ|| ಪ್ರಿಯೆಮಿಗೆನೋಡಿ ತನ್ನಪೊಸವೇಷಮುನಕ್ಕಟ ಪೊಳ್ತುಪೋದು

ದ | ನ್ನೆಯುಮನದೆಂತುಸ್ವೈರಿಪೆನಿದೆತ್ತಣ ದುಜ್ವಲವೇಷದೇಳ್ಗೆಯೆ ‖ ಲ್ಲಿಯುದ ಡರ್ದಂಗರಾಗದಿನಿಗಂಪ್ರೊಸೆದಾವಳೊಳಿರ್ದುಬಂದೆನಿ | ನ್ನೆಯುಮತಮಿಂದು ಕಾಂತಫಲಮಾದುದುಸನ್ನಿಯೆಸುತ್ತೆ ಕಾಯ್ಪಿಸಿಂ .... ‖೭೪‖

ಮ‖ ಮಣಿಮಂಚಾಗ್ರಕೆಬಾರದಿರ್ಪ್ಪಬಗೆ ಗಂಡೋರಂತೆ ಬಾರೆಂದು ಸಂ | ದಣಿಪಳ್ಕವಿರ್ಗೆ ತತ್ಕರಂಬಿಡಿದು ತಾಂಮೇಲ್ವಾಯೆ ನೀಂ ಮುಟ್ಟದಿ ರ್ಪಣಿರಾಡ್ಭೂಷಣನಾಣೆಯೆಂದೆನೆ ಕರಂಕೈವಿಟ್ಟು ತತ್ಕಾಂತೆಯೋ | ಳ್ಪ್ರಣ ಯಂ ಮಾಣ್ದುಳಿದಿರ್ದುವತ್ಸರಮುದೆಂಬತ್ತಾಗುತಿರ್ಪ್ಪನ್ನೆಗಂ ‖೭೫‖

ಮ‖ ಸ್ರ‖ ಹರನಾಗಳ್ಜಂಗಮಾಕಾರಮನೆತಳೆದು ತನ್ನಿಷ್ಟೆಗೊಳ್ದಿ ಯ್ದುತಂ ಕಂ | ರ್ಪರಮೊಂದಂಜೋಕೆಯಿಂ ಬೈತಿಡುವುದೆನುತೆಕೊಟ್ಟೈದು ತಂಮಾಯುಮುಪ್ಪಂ ‖ ತಿರೆಗೆಯ್ದೋರಂತದಂತಾಂಮರುದಿನಮೊಸೆದೆಳ್ತಂದು ತಾರೆಂದುಬೇಡು | ತ್ತಿರೆಬೇಗಂಮುನ್ನಬೈತಿಟ್ಟೆಡೆಯೊಳರಸುತಂ ಕಾಣದು ದ್ಭೀತಿಯಿಂದಂ .... ‖೭೬‖

ಮ‖ ಸ್ರ‖ ನಡುಗುತ್ತಿರ್ಪ್ಪಂನಮೇಂಪೋದುದೆ ಕಿತವ ಲಸ್ವರ್ಪರಂ ಜೋಕೆಯಿಂ ಬೈ | ತಿಡುನೀನೆಂದಿತ್ತೊಡಂವಂಚಿಪುದೆಜಗದೊಳಾರ್ವಿಪ್ಪ ವರ್ನಿನ್ನನಿಲ್ಲಿಂ ‖ ದೊಡೆ ಸೋಲ್ಲಂನಂಬಲಿಂತಕ್ಕು ಮೊಕುಡುಕುಡುಮತ್ತಾ ತ್ರೆಯುಂ ನಿನ್ನನೆಂತುಂ | ಬಿಡೆನೆಂದಾಸ್ಫೋಟಸುತ್ತಂ ಪಿಡಿದಿಡುತಿದಿರೋ ಳ್ತಜ್ಜನಂಗೆಯ್ವುತಾಗಳ್ ‖೭೭‖

ಮ‖ ಸ್ರ‖ ಶಪಥಂಗೆಯ್ದಲ್ಲದೆಂ ತುಂಬಿಡೆನೆನುತಘಟಂ ದೀರ್ವರುಂ ತೀರ್ಥವಾರಿ | ಸ್ನಪನಂಗೆಯ್ವುತ್ತೆ ವಾರ್ಧಿಕ್ಯಮನಳಿದೊಲವಿಂಯೌವನಂ ಗೊಟ್ಟುಕಾರುಂ ‖ ನೃಪರಂ ಪ್ರತ್ಯಕ್ಷನಾಗುತ್ತಿಳೆಯೊಳಿರಿಸುತೆಂಭತ್ತುಸಂವ ತ್ಸರಂ ಸೌಖ್ಯಪದಂಕೈಗನ್ಮೆ ಮೇಣ್ಪುಷ್ಪಕದೊಳಿರಿಸಿಕೊಂಡೊಯ್ವುತಂಕೂ ರ್ಮೆಯಿಂದಂ ‖೭೮‖

ಕಂ‖ ಪರಮಗೆಣಗದಮನಾಪುರ | ಹರನೀಯೆ ತದಿಯ್ಯಭುವನದೊ ಳ್ಮೆರೆದಲಸ ‖ ತ್ತಿರುನೀಲಕಂಠನಾಹೇ | ಶ್ವರಂಗೆ ಡಿಂಗರಿಗನಪ್ಪೆನಾನನ ವರತಂ ‖೭೯‖

ಮ‖ ವೃ‖ ಮುದದಿಂವಿಕ್ರಮಚೋಳನೋರ್ಮೆಗುಡಿಯುಂಸೌವರ್ಣ ದಿಂಮಾಡುತಂ | ತದರೊಳ್ಶಂಕರನಂಪ್ರತಿಷ್ಠಿಸೆಕರಂಕಂಡಂತು ಟಾತ್ಮೀ

ಯ್ಯಪ್ಪ ॥ ತ್ಪದದೊಳ್ದೀಗುಲಮುಂ ನಿರ್ಮಿಸಿಶಿವಲಿಂಗಸ್ಥಾಪನಂಗೆಯ್ದುತ | ಳ್ಪದೆ ಕೈಲಾಸಕೆವೋದಪೂಸಲವ ರಾಧೀಶಂಗೆತೊಳ್ತಾದಪೆಂ ॥೮೦॥

ಕಂ॥ ಒದವಿದಸಾಮ್ರಾಜ್ಯದ ಸಂ | ಪದಮುಂ ತೊರೆದತಿವಿರಕ್ತಿಯಿಂ ಶಂಕರನಂ ॥ ಪದೆದೊಲಿಸಿ ಮೆರೆವಮುಹಿಮಾ | ಸ್ಪದ ಕರಿಪಾಲಾಖ್ಯಭಕ್ತನ ನುಚರನಪ್ಪೆಂ .... ॥೮೧॥

ಕಂ॥ ಮಿಸುಪಂತರಂಗದೊಳ್ಗಾ | ನಿಸುತಂ ಭವಹರನ ನೆಸಗಿಮಾನ ಸಪೂಜಾ ॥ ವಿಸರಮುನೊಲಿಸಿದ ಸಂವಿ | ದ್ದ್ರಸಿಕನ ತಿರುಕುರುಪೆಯಂಘ್ರಿ ಸೇವಕನಪ್ಪೆಂ .... ॥೮೨॥

ಕಂ॥ ಚರಭಕ್ತಿವಿಡಿದು ರೋಹಿಣಿ | ವೆರಸಿಮುಹೇಶ್ವರನ ಸಳ್ಕರಿಂ ದೊಲಿಸಿಶುಭಾ ॥ ಕರಮುಕ್ತಿವಡೆದು ರಂಜಿಪ | ತಿರುಮೂಲನ ಚರಣನಳಿನ ಷಟ್ಪದನಪ್ಪೆಂ .. ॥೮೩॥

ಕಂ॥ ವಂಚಿಸದೆಚರಸಹಸ್ರಕೆ | ಸಂಚಿತಧನಮಿತ್ತು ತೃಪ್ತಿವಡಿಸುತೆ ನಿಚ್ಚಂ ॥ ಪಂಚಮುಖನೂರ್ಗೆನಡೆದಸ | ಮುಂಚಿತಚಿರುವುಲಿಯನಾಥ ನನುಚರನಪ್ಪೆಂ ॥೮೪॥

ಕಂ॥ಪೊಸತೊಂದುಪೊನ್ನನನು | ಮುಸಮಾಕ್ಷನಿನೊಲ್ದುಪಡೆದು ಗಣತತಿಯಂಪೂ ॥ ಜಿಸಿ ಸಂದ ಚಿರುತೊಣೆಯರ | ಮಿಸುಪಡಿದಾವರೆಯ ಲೆಂಕನಪ್ಪನಜಸ್ರಂ ॥೮೫॥

ಉ॥ ವೃ॥ ಭೂತಭವದ್ಭವಿಷ್ಯ ದಭವಾಂಘ್ರಿಸರೋರುಹಭಕ್ತಿತತ್ಪರ ವ್ರಾತದಭೃತ್ಯನಪ್ಪೆ ನೆನುತಂ ತಿರುಪಾಡುಗಳಿಂದೆ ಪಾಡುತಂ ॥ ಭೂತಳದಲ್ಲಿ ಸ್ಯೆಗೆಡೆಯುತಂಮುಗಿಯುತ್ತೆ ಕರಾರವಿಂದಮುಂ ॥ ಭೀತಿಸಮೇತಭಕ್ತಿರಸದಿಂಮಿಗೆನಾಂದತಿದೈನ್ಯವೃತ್ತಿಯಿಂ .. ॥೮೬॥

ಪಥಾತ॥ ಭವದನುಚರಭೃತ್ಯಭಕ್ತದಾಸಂ | ಶಿವಗಣವೃಂದಮೆಮಾಣದಪ್ಪೆನಪ್ಪೆಂ ॥ ಪ್ರವಿದಿತಕೃಪೆಗಯ್ವುದೆನ್ನೊಳೆಂದಾ | ಸವಿನಯಸೌಂದರನೊಲ್ದು ಕೀರ್ತಿಸುತ್ತಂ .... ॥೮೭॥

ಕಂ॥ ಪುರಹರನಪಿಂತೆ ಮೆಲ್ಲನೆ | ಬರುತಿರೆ ಮೆರೆಮಿಂಡ ನೊಲ್ದು ಶಿವಗಣಸಹಿತಂ ॥ ಕರುಣಿಸುತ ಭಯಮು ನಿತ್ತಾ | ದರಿಸುತೆ ಸೌಂದರನ ನಭವನಂಘ್ರಿಗೆಮಣಿದಂ .. .. ॥೮೮॥

ವ॥ ಅಂತುಮಣಿದು ಪರಮೋತ್ಸವಂಮಿಗೆ ಭಕ್ತಿವೆತ್ತುಕೊಂಡಾಡಿ

ಪಾಡುತ್ತಮಿರೆ ಶಿವಂನೋಡಿ ಕಾರುಣ್ಯಮಂನೀಡಿ ಮಣಿಪುಷ್ಪಕಮಂಬರಿಸಿ ತತ್ಸಹಚರ ಗಣಸಮೇತಂ ಕುಳ್ಳಿರಿಸಿಮೆರೆವಿಂಡದೇವನಂ ಕೈಲಾಸಕ್ಕೆ ಕರೆದೊಯ್ದು ನಿತ್ಯತ್ವಮನಿತ್ತು ಮನ್ನಿಸುತ್ತಮಾಗಳ್

ಕಂ॥ ಮನಸಿಜಹರನಾಮೆರೆವಿಂ । ಡನ ಮಹಿಮೆಯನಲ್ಲಿಪೊಗಳು
ತಂಗಣತತಿಯೊ ॥ ಳ್ಪಿನದಂಮಿಗೆನಿಜಭದ್ರಾ । ಸನದೊಳ್ಗಿರಿಜಾತೆವೆರಸು ಸು
ಖದಿಂದಿರ್ದಂ .. .. ॥೮೯॥

ಮ॥ ಸ್ರ॥ ವೃ॥ ಅದರಿಂದಂಭಕ್ತರೊಳ್ಸಲ್ಲದು ಮುದಮೆನುತಂ ಮಾ
ಚಯಂಪೇಳೆ ಕೇಳ್ದು । ತ್ಯುದಿತೋತ್ಸಾಹಾನ್ವಿತಂ ತತ್ಪದನಳಿನ ನಮಸ್ಕಾರ
ಮಂ ಮಾಡಿತೋರ್ಪ್ಪ ॥ ಗ್ಗದ ತತ್ಪಾದಾಂಬುಜಾಂಬು ಪ್ರಭವ ನವಮಣಿ
ಶ್ರೇಣಿಯಂ ಮಾಣದೀ ಯು । ತ್ತೊದವಿದಾನಂದದಿಂ ಜಂಗಮತತಿ ಗೆಸೆ
ದಂಭಕ್ತಿಸಾಂದ್ರಂವೃಷೇಂದ್ರಂ . .. ॥೯೦॥

ಲಲಿತಪದವೃತ್ತಂ॥ ಕುಂಠಶಿವಮಾದಮುದಲುಂಠನಸಮರ್ಥದಶಕಂಠನ
ತಭೂಭೃದುಪಕಂಠತತಲೀಲೋ । ತ್ಕಂಠಭೃಗುಗಾರ್ಗ್ಯಹರಕಂಠಸನಕಸ್ತು
ತವಿಕುಂಠಿಸುಮನಃಪ್ರಿಯಸುಕಂಠಸುರಗೇಯೂ ॥ ಕುಂಠಿತದುರೀಹವಿಪ್ರಕಂ
ಠಕೃತಚಾರತರಕಂಠಿಕಗಜಾಸ್ಯಶಿತಿಕಂಠರಥವಂ ದ್ಯಾಕುಂಠನಿಜಶೌರ್ಯಪ್ರೋಟೆಟಂ
ಠಣಿತನಾದಕಲಕಂಠರುಚಿನೀಲಗರಕಂಠಬಸವೇಶಾ ॥೯೧॥

ಪ್ರಭಾತವೃತ್ತ॥ ನಮದಮರವಧೂಟಕಾಳಕಾಳಿ । ಭ್ರಮರವಿರಾಜಿ
ತಪಾದಪದ್ಮಯುಗ್ಮೇ ॥ ಹಿಮಗಿರಿತನುಜಾತೆರಕ್ಷಿಸೆನ್ನಂಹಿಮಕರಶೇಖರಧ
ರ್ಮಪತ್ನಿಗೌರೀ ॥೯೨॥

ಗದ್ಯ॥ ಇದು ವಿನಮದಖಿಳ ಸುರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ
ಪರಮಶಿವಲಿಂಗ ಪಾದಾರವಿಂದ ಪರಾಗಭಸಿತಭಾಸುರ ಲಲಾ
ಟಪಟ್ಟ ಸರಸಜನ ಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರದೇವ ಭಕ್ತಿ ವಿರಚಿತ ಶ್ರೀಮದ್ಬಸವರಾಜ
ವಿಜಯ ಮಹಾಪುರಾಣದೋಳ್ ಮೆರೆವಿಂಡ
ಕಥಾವರ್ಣನಂ ಷೋಡಶಾಶ್ವಾಸಂ
ಸಮಾಪ್ತಂ.

ಕಿನ್ನರಿಬ್ರಹ್ಮಯ್ಯನಕಥೆ.

ಶ್ರೀ ಗುರುಬಸವಲಿಂಗಾಯನಮಃ

ಲಲಿತಪದವೃತ್ತ॥ ತಪ್ತಕನಕಪ್ರಭನಿಗುಪ್ತ ನಿಜಮಾನಸಸುಜಪ್ತಶಿವ ಮಂತ್ರತನುಲಿಪ್ತಸಿತಭಸ್ಮಾ । ಪ್ರಾಪ್ತಶಿವಭಾವಜಿತದೃಪ್ತಕರಣೇಂದ್ರಿಸ ಮಾಪ್ತಬಹುಕೃತ್ಯಪರಿತೃಪ್ತಚರಲಿಂಗೆ । ಕ್ಷಿಪ್ತಮದಸತ್ವಗುಣಲುಪ್ತಜಡಭಾ ವಚಿದಸುಪ್ತರುಚಿದೀಪವರಿದಿಪ್ತಕುರುಣಾಶಾ । ವ್ಯಾಪ್ತಶಿವಕೀರ್ತಿಪೊರೆಸ ಪ್ತಹಯಚಂದ್ರಪವನಾಪ್ತನಯನಾಂಕಧರಗೋಪ್ತಬಸವೇಶಾ ॥೧॥

ಲಲಿತಪದವೃತ್ತಂ॥ ವಾಸ್ತವಗುಣಾಕರನಿರಸ್ತ ನಿಖಿಲಾಮಯಪರಾ ಸ್ತಪರವಾದಯಮಿಶಸ್ತಶಿವಯೋಗಾ । ಭಸ್ತನಿಜಭಾವನನವಚಸ್ತುತಮಹಾ ಗಮನುಹಸ್ತಿತಿಜಿತಾರ್ಕನಿಗಮಸ್ತವವಿಲೋಲಾ ॥ ಧ್ವಸ್ತಕಲಿಕಲ್ಮಷಸಮ ಸ್ತಬುಧಸನ್ನುತಯಶಸ್ತುತದಿಂಗಂತಸುರಮಸ್ತಕಸಮೂಹ । ನ್ಯಸ್ತಪದಪಾ ಲಿಸುನಿರಸ್ತಮಯಸಾರಗುಣವಿಸ್ತರಲಸದ್ವರದಸ್ತಬಸವೇಶಾ ॥

ಕಂ॥ ಶ್ರೀ ಮದಗಜಾಭುಜಾಸುಮ ॥ನೋಮಾಲಾಲಂಕೃತಾತ್ಮಕಂ ಧರನಭವಂ ॥ ಭೀಮಾಂಧಕಾರಧ್ವಂಸಿ ಮ । ಹಾಮಿಹಿರಂ ಪೊರೆಗೆಭಕ್ತರಂ ಶಿವಲಿಂಗಂ ॥೧

ಮ॥ ವೃ॥ ಧರಣೀಭಾಗದೊಳೇಳ್ಗೆವೆತ್ತಸೆವ ಪೂಡೂರೆಂಬಸದ್ಗ್ರಾಮದೊ । ಳ್ಪರಭೀಮಂ ದುರಿತಾಮಯಾರಿ ಸುಜನಸ್ತೋಮಸ್ತುತಂ ಸತ। ಸಂ ॥ ಗರ ನಂಗೆಂದ್ರಿಯಲಿಂಗ ಸಂಗತ ಸುದಾರಸ್ಸಾಕಾರ ವೀರವ್ರತಾ । ಚ್ಯರಣಂ ಕಿನ್ನರಬೊಮ್ಮದೇವನೆಸೆದಂ ದುರ್ದಾಂತವಾಗ್ಭಂಜನಂ ॥೨॥

ಶ॥ ಸರ್ವಪ್ರಾಣಿದಯಾಕರಂ ನಿಜಮತಾಂಭೋಜಾತಪದ್ಮಾಕರಂ ॥ ದುರ್ವಾರಾಹಿತಭಂಜನಂ ಶರಣಚೇತೋರಂಜನಂ ಭಕ್ತಕ ॥ ಲ್ಪೋರ್ವೀಜಂಭುವನೈಕಪೂಜ್ಯ ನೆನಘಂಸದ್ಭಕ್ತಿಯುಕ್ತಂ ಸದಾ । ಖರ್ವಶ್ರೀಗುಣಮಂಡನಂ ಶುಭಕರಂ ಸಂಗೀತವಿದ್ಯಾಧರಂ ॥೩॥

ಚಂ॥ ಸಕಲಕಳಾಪ್ರವೀಣ ನಕಳಂಕಗುಣಾಂಕ ಸುನೌತ್ರಜಂಗಮ । ಪ್ರಕರ ಸಮರ್ಚನಕ್ಕೆತನುವಂ ಮನವಂಧನಮಂ ನಿವೇದಿಸು ॥ ತ್ರಕುಟಿಲ ವೃತ್ತನಿಪ್ಪೃನಮುಪಾತ್ತ ಧನಂವ್ಯಯಮಾಗೆಕೊಂಕದು। ತ್ಸುಕಮತಿ ಚೆನ್ನಕಿ ರಿಯಿಸದ್ರಿಜೆಯಾಣ್ಮನಮುಂದೆಲೀಲೆಯಿಂ .... ॥೪॥

ಮ|| ಪಿಡಿದೋರಂತಿರೆ ಜೇನಸೋನೆ ಕದೆದತ್ತೆಂಬಂತೆ ರಾಗಂಗಳಿಂ ಕಡುಪಿಂಕೇಳಿಸೆ ತಾನಲೋಲ ನಗಜೇಶಂ ಮೆಚ್ಚಿ ಸಂಪ್ರೀತಿಯಿಂ | ಕುಡೆಪೊನ್ನಂ ಪಣಪಾಗಮುಂಪಡೆದು ಸಿಚ್ಚಂಜಂಗಮಶ್ರೇಣಿಯುಂ | ಬಿಡದಾರಾಧಿಸುತಿರ್ದ್ದ ನನ್ಯಸಮುಯಾಹುಂ ಕಾರತಂಕಾಹರಂ ||೫||

ವ|| ಅಂತಿಪ್ಪಿನಮಾಗಳ್

ಬಸವನಭಕ್ತಿ ಶಶಾಂಕ | ಪ್ರಸರತ್ಪ್ರಭೆ ತೀವೆಕಂಡುತದ್ದರ್ಶನಕೆಂ||
ದೊಸೆದೇಳ್ತಂದ ಕಿನ್ನರ | ನಸದೃಶಕಲ್ಯಾಣಪಟ್ಟಣ ಕ್ಕಮಸಂಯದಿಂ ||೬||

ವ|| ಅಂತೇಳ್ತಂದು ಬಸವನ ಶಿವಲಿಂಗದೊಳ್ಬಿಂಸೆ ಬಸವಂಕಂಡು ಸಮುತ್ಸುಕಚಿತ್ತನಪ್ಪನಿತರೊಳ್ ಕಟ್ಟದಿರೊಳ್ಪ್ರಸನ್ನನಾಗೆ ಸಾಷ್ಟಾಂಗಮೆರಗಿ ತನ್ನನುನ್ನತಾಸನದೊಳ್ಮೂರ್ತಿಗೊಳಿಸಿ ಯಥೋಚಿತಸತ್ಕಾರಂಗೆಯ್ದು ಪೂಜಿಸಿ ಪಾದೋದಕ ಪ್ರಸಾದಂಗೊಂಡುಕೃತಾರ್ಥಭಾವಮನಪ್ಪುಗೆಯ್ದರೇ

ಕಂ|| ಕಿನ್ನರಬೊಮ್ಮಂ ಬಸವನ | ಸನ್ನುತ ಶಿವತತ್ವರಸ ದೊಳೋಲಾಡಿಸುತಂ || ಮನ್ನಣೆವೆತ್ತು ಶಿವೈಕ್ಯನ | ಮುನ್ನತರೊಳ್ಕೂಡಿ ಮೆರೆಯುತಿರ್ದ್ದೊಂದುದಿನಂ .... ,||೭||

ಕಂ|| ಪರಮತ್ರಿಪುರಾಂತಕನುಂ | ದಿರಗೋಪ್ರಾದಲ್ಲಿಬಿನದದಿಂದೇಳ್ತಂ | ದರದಿಂಕುಳ್ಳಿರ್ದಂಸುರ | ವರಹರಿದದ್ರಿಯೊಳಿತೊಳಪ ರವಿಬಿಂಬದವೋಲ್ .. .. ||೮||

ವ|| ಆಸಮಯದೊಳೋರ್ವವಿಟಂ ವೇಶ್ಯಾಲಯದಪರ್ಬಕ್ಕೆ ವಧಿಸಲ್ತಬಲ್ಗುರಿಯುಂ ಬಿಲ್ತುಗೊಂಡು ಪುರವೀಥಿಯೊಳ್ಬರ್ಪಾಗಳಾಕುರಿ ಸೇಣಂಪರಿದು ನಿಟ್ಟೋಟದಿನರತುತ್ತಂ ಪರಿತಂದುಶಿವಾಗಾರಮುಂ ಪುಗೆವುಗೆ ಪೆಂಬತ್ತಿ ಪಿಡಿಯಲಡಪಡಿಪಾ ಬೊಜಗನ ತವಕಮುಂ ಕಾರುಣ್ಯನಿಧಿ ಕಿನ್ನರೈಯಂಕಂಡು

ಕಂ|| ಬಿಡುಬಿಡು ಪಿಡಿಯದಿ ರೆಲೆಯೆಲೆ | ಜಡಮತಿ ಸಾವಿಂಗೆಪೆಳರ್ದ್ದ ಪೊಕ್ಕುದು ಬಂದೀ || ಗುಡಿಯುಂಕುರಿಯಿದು ಬೆರಯುಂ | ನುಡಿ ಕೊಟ್ಟಪೆನೆರಡುಮುಡಿಯ ನಾದೊಡಮೀಗಳ್ ||೯||

ಕಂ|| ಸರಿಸಕಲಜೀವರಾಶಿಗೆ | ಮರಣಭಯುಂಮಗನೆ ಸುಗಿದು ಪೊಕ್ಕದುಕುರಿ ಶಂ || ಕರಶರಣರ್ಕ್ಕರೆಪೊಕ್ಕುದ | ನಿರದೀವರೆ ಗಾಂಪ ಪಿಡಿಯದಿರ್ಬಡುಕುರಿಯುಂ ||೧೦||

ಕಂ|| ಬಳಿವಳಿಪಿನಿಂದೆಸೆಳೆದಪೆ | ತಳರದೆ ಪೆರತೊಂದು ಬಿಳ್ತ್ರಕುರಿ
ಯಿಳಿಯದೆ ನಿಂ | ನಳಗಂಟಲೊ ಳಿಲಿಖಳಕುಲ | ತಿಲಕ ಬಿಡೀಕುರಿತ್ತ್ರಮ
ನೀವೆಂ .... ||೧೧||

ವ|| ಎನೆಕೇಳ್ದು ದುಷ್ಟಭುಜಂಗೆ ನಟ್ಟಹಾಸಂಗೈದು

ಕಂ|| ಅರರೆ ಬಲವಂತ ಚಾಗಿಗೆ|ಳರಸ ದಯಾಪರ| ರರದಾರೊ ನಿನ್ನ
ವೊಲೆ ವಸುಂ || ಧರೆ ಯೊಳರಿದರಿದು ನಿನ್ನಯ | ಪರಿಕುರಿಯುಂಬಿಡಿಸಲಿಂ
ದುಬಗೆದಂದಿರ್ದೈ ||೧೨||

ಪುಗುಗುಂಪೆರರಂಗಣಮುಂ | ಪುಗುಗುಂಪರಗೃಹಮುನೊರ್ಮೆದೇವಾಲಯು
ಮುಂ || ಪುಗುಗುಂಕುರಿಪಿಡಿಯದಿರೆನೆ | ಜಗದೊಳ್ಬೆಲಿಗೊಟ್ಟುಕೊಂಡರೇಂ
ಬಿಟ್ಟಪರೇ ||೧೩||

ನರರಹರಣಕ್ಕೆಬೆಲೆಸಾ | ಸಿರಪೊನ್ಗಡಜೀವಮೆಲ್ಲಸರಿಗಡ ನೀಂಸಾ ||
ಸಿರಪೊನ್ನನಾದೊಡಂಸಾ | ದರಮಿತ್ತು ಪಶುವಬಿಡಿಸಲಾರ್ಪವನಲ್ತೆ||೧೪||

ವ|| ಎಂದವಂ ಕಟಕಿಯುಂ ಗಳಪುತ್ತಿಂನ್ನ ವಳಾಂತಳ್ವಿನವನೆಂದುಮು
ಳಿಯುದಿರಳೆಂದಜಪಶುವನವಂ ಜವದಿಂಸೆಳೆಯುಲೊಡನೆ

ಕಂ|| ಗಳಪದಿರು ಪಲವನೆಲೆ ಪೊ | ನ್ಗಳನೀವೆಂ ಪಿಡಿ ಸಹಸ್ರಮುಂ
ಕುರಿಯುಂ ಕೊ || ಟ್ಟಳುಪಿದೊಡೆ ಬಿಡೆಂ ಮಗುಳ್ದೀ | ಗಳೆ ಶಿವನುಂಡಿಗೆಯು
ನೊತ್ತಿಬಿಡುವೆ ನನೂನಂ .... ||೧೫||

ವ|| ಎಂದುಸಹಸ್ರವಿತ್ತಮುಂತರಿಸಿ ಬೊಮ್ಮದೇವಂ ಕುಡಲೊಡನ
ವಂ ಕೊಂಡುಕುರಿಯನುಳಿದು ಪಿರಿದುಬೆಲಿವಡೆದೆನೆಂದುತ್ಸವಿಸಿ ಮಗುಳ್ದೊಂ
ದುಕುರಿಯುಂಬಿಲ್ತುಕೊಂಡು ಗಾಣಿಕ್ಯನಿಕೇತನಕ್ಕೆತಂದು ಕುರಿಯುಂತೋರಿ
ಸಾಸಿರ ಪೊಂಜಾಳಿಗೆಯುಂ ಮುಂದಿಟ್ಟಾದವೃತ್ತಾಂತದಾದ್ಯಂತಮ ನವಂ
ಪೇಳೆಕೇಳ್ದುಪಣಾಂಗನೆ ಕನಲ್ದು ಪೊಂಜಾಳಿಗೆಯುಂ ನೂಂಕಿಕಳೆದು

ಕಂ|| ಪೊಲ್ಲದುಗೆಯ್ದೆ ಯಿದೇತರ | ಬಲ್ಲತನಂ ಪಿಟರೊಳೆಂತುನಗೆಗೆ
ಡೆಯಾದೈ || ಖುಲ್ಲಪಡೆದೆನ್ನಬಳಿಯೊ | ಳ್ನಿಲ್ಲದೆತೊಲಗೆಂದು ಗಜರಿಗರ್ಜಿ
ಸುತಾಗಳ್ .... ||೧೬||

ಕಂ|| ಗಳಿಸಾಳಿವೇಣ್ಗಳೆನ್ನಂ | ಪಳಿವಂತಿರಿ ಮಾಣದೆಮ್ಮಗೃಹದೇವ
ತೆಯು || ಮುಳಿವಂತೆಮಾಡಿದೈಚೀ | ಖಳ ಪಣದಳಿಯಾಸೆಗಾಗಿ ನೀಗಿದೆ
ಕುರಿಯಂ .... ||೧೭||

ಕಂ|| ಪಣಮೆಂಬಾಳ್ತಿಯೆ ಪೇಳೆನ | ಗಣಿಯರ ವಿಾಬೀದಿಬೀದಿಯೊ
ಳ್ಬಿತ್ತಿಪ ನಿ || ಟ್ಟಣಸಿರೆ ಪೊನ್ನಂ ಮತ್ಪುರ | ಗಣಿಕಾತತಿಯೆಲ್ಲ ಬಲ್ಲುದೆನ್ನ
ಯಪೆಂಪಂ ||೧೮||

ಚಂ|| ವೃ|| ಅದುಗೃಹದೇವತಾಬಲಿಗೆ ನೇಮಿಸಿತಂದುದು ಬೇಗಪೋ
ಗಿಸೀ | ನದ ನೊಸೆದಿತ್ತವಿತ್ತ ತತಿಯುಂಮುಗುಳ್ತಿತ್ತದರಿಂದೆ ತಂದೊಡ || ಲ್ಲ
ದೆಪೊಸರ್ಬಮುಂ ನೆಗೆಳ್ವುದಾ ಗದು ಮದ್ಗೃಹದೇವತಾಳಿ ಕಾ | ಯ್ದುದು
ಪೆರತೊಂದು ಬಲ್ಗುರಿಯನಿಕ್ಕುತೆ ಪಲ್ಲವಮಾಡೆ ಪರ್ವಮುಂ ||೧೯||

ವ|| ಎಂದವಳಾಕ್ಷೇಪದಿಂ ಗಳಪೆ ಕಾಮಾಂಧಂ ಮುಂದ ಪ್ಪನರ್ಥ
ಮುಂ ಲೆಕ್ಕಿಸದೆ ದೇಗುಲಕ್ಕೆಪರಿತಂದು ಲಿಂಗಮುದ್ರಾಂಕಿತ ಭಾಗಮುನ
ವನಡಸಿ ಪಿಡಿಯಲೊಡನೆ ಕಿನ್ನರಯ್ಯಂ ಕೆರಳ್ದುನೋಡಿ

ಕಂ|| ಪಿಡಿಯದಿರೆಲಿಖಳ ಕುರಿಯಂ | ಬಿಡುಬಸವಾಧೀಶನಾಣೆಕ
ಡುಪಾತಕ ನೀಂ || ಬಿಡದೊಡೆ ನಿನ್ನಯತಲೆಯಂ | ಪೊಡೆಯದೆ ಬಿಡೆನೆಂ
ದುಶರಣನುದ್ಘೋಷಿಸಿದಂ .... ||೨೦||

ವ|| ಮತಂ ಚ||ವೃ ಎಲವೊಮದಾಂಧ ಸಿಹ್ಮಶಿಶು ಕೈಗೊಳಗಪ್ಪುದೆ
ವಸ್ಯದಂತಿಗು | ಜ್ವಲತರಲಿಂಗಮುದ್ರೆ ವಡೆದುಕುರಿ ನೀಂಪಿಡಿಯಲ್ಕೆಸಾಧ್ಯ
ಮೇ || ತೊಲಗುಶಿವೈಕ್ಯರಲ್ಲಿ ಶರಣಾಗತಪಂಜರರೇಬ ಪೇರ್ಮೆಯಾ | ಸಲೆ
ಬಿರುದುಂಟು ಕೇಳ್ಮರಿಗೆಬಂದುನೀವನೆ ಧೀರಕಿನ್ನರಂ .... ||೨೧||

ಕಂ|| ಪಡಪಡ ನೀನಲ್ತೆಲೆ ನೀಂ | ಬಿಡದಾರಾಧಿಸುವ ನಿನ್ನಗೃಹದೇ
ವತೆಯ || ಪ್ಪಿಡಿದೀಕುರಿಯಂ ಸೆಳೆದೊಡ | ಮುಡಿಯಿಡದೆ ಕರುತ್ತರಿದು
ಕೆಡುವುವೆನೀಗಳ್ .... ||೨೨||

ವ|| ಎಂದುಮುಟ್ಟಮೂದಲಿಸಿ ನುಡಿಯೆ ಖಲಂಕೇಳ್ದು ಕೆರಳ್ದು ಕೂರ
ಸಿಯುಸೆತ್ತು ತಿದಿಚ್ಚಿರ್ನಿಲೆ ಕಿನ್ನರಯ್ಯಂಕೆಂಡುಕೋಪಾಟೋಪಮುಂತಾಳ್ದು
ಕರತಳಕರಾಳಖಡ್ಗ ಮುಂಜಡಿದಡಸಿನೋಡಿ

ಕಂ|| ಕೆಡೆಕೆಡೆಯೆನುತ್ತೆಗರ್ಜಿಸಿ | ಪೊಡೆದ ನಡಾಯುಧದೆಕಿನ್ನರಂತ
ಚ್ಛಿರಮುಂ || ಕೆಡೆಯೆ ಕಬಂಧಂ ತಲೆಯದು | ಸಿಡಿಯೆ ಪುರಾಂತಕನಗುಡಿ
ಯ ಪೊರಗಣ್ಗಾಗಳ್ .... ||೨೩||

ವ|| ಅಂತುಪೊಡೆದು ಕೆಡೆದ ಮುಂಡಮುಂ ದೇಗುಲದಪೊರಗಣ್ಗೆ ಬಿ
ಸುಡಿಸಿಕಿನ್ನರೇಂದ್ರಮಿರ್ಪ್ಪನೆ ಮಾದುರಾತ್ಮಕನ ಬಂಧುಗಳ್ನೆರೆದುಸಂದಣಿಸಿ
ಬಿಜ್ಜಳನಸಭೆಗೆಯ್ದಿ ಮೊರೆಯಿಟ್ಟುಮುರುಗಿ

ಚ॥ವೃ॥ ಧರಣಿಪಬಿನ್ನಪಂ ಕುರಿಯನೊಂದನಿವಂ ಬೆಲೆಕೊಟ್ಟುಕೊಂ
ಭೂಸುರವುರ ವಿಧೀಯೋಳ್ತೆರ್ವವೇಣೆಯೊಳ ಕುರಿಪೊಕ್ಕು ದೀಶಮುಂ ॥ ದಿ
ರಮುನದಂ ಕರಂ ಪಿಡಿಯೆ ಮಟ್ಟದಿರಿಂ ದಪರಾಧಮೇನು ವೊಂದಿರಸೇವೀ
ತನಂತರಿ ದುರುಳ್ಚಿದನುಗ್ರತವೆತ್ತು ಕಿನ್ನರಂ .... ॥೨೪॥

ವ॥ ಎಂದಾರುಂಡಮುಂಮುಂಡಮುಮುಂದಿಟ್ಟುಮೊರೆಯಿಡೆ ಧರಾಧ
ಪಂಕೇಳ್ದು ಬಸವರಸನಮುಖಾರವಿಂದಮುಂನೋಡಿ

ಚಂ॥ವೃ॥ ಪರಮುದಯಾಪರ ಸ್ವಕತನೀತಿಯುತ ಹರ್ಗರಭಕ್ತರಿಂದು
ಸಾದರಮೆನಗೆಂದ ನಿನ್ನನುಡಿತಪ್ಪುಗುಮೇ ವೃಷಭೇಂದ್ರನಿನ್ನ ಕಿನ್ನರವಿಭುದೇ
ಗುಲಕ್ಕೆಕುರಿಪೊಕ್ಕೊಡೆ ತನ್ನದದೆಂತೊ ಕೊಂಡವಂಕರಮುದನೀಳ್ದು ಸಂದೆಳೆ
ಯೆ ಕೆಮ್ಮನೆಕೊಂದನುದಗ್ರವೃತ್ತಿಯಿಂ .... ॥೨೫॥

ಕಂ॥ ದುರಿತಕ್ಕಳ್ಕದೆ ಪಳಿಗುಂಧರೆಯೆಂಬುದನಿಂಬುಗೆಯ್ಯರೆಂತಪ್ಪರು
ಪರಿಕಿಸೆತಪ್ಪಿಲ್ಲದೆಯುಂಹರಭಕ್ತರ್ಕೊಲ್ವ ರಿವರನಾರ್ಬ್ಬಾಧಿಪರ್ಬ್ರೋ ॥೨೬॥

ಕಂ॥ಅರಸುತನಂ ತನುಗಾದಂತೆರೆ ಪರರಂಕೊಲ್ವ ರಣಕಿಪ ರ್ಗರಮತ
ಮುಂಪರದೈವಂಗಳಸಳಿವರ್ಪರಪ್ರಮಾಣೋಕ್ತಿಶಿಪ್ರಮುಂಪಳಿಕ್ಕೆವರ್ ॥೨೭॥

ಮ॥ವೃ॥ ಮಗನಂಶೀಳ್ವುದುಮುಂಭ್ರಿಯಿಂದೊದೆಯುದು ಮ್ಮಾಂಸಾ
ರ್ಪಣಂಗೆಯ್ವುಬಗೆಬೆಚ್ಚಿರ್ಗಂಬಿರುಗಲ್ಗಳಿಂದಿದುವುದುಂ ಮೇಣ್ತೊಂದೆಯ ಕೊ
ಲ್ವುದುಂಸೊಗಯಿಪ್ಪಾತ್ಮವಧೂಟಯುಂಕೊಡುವುದುಂ ದುರ್ಜಾತಿಯೊಳ್ಬಾ
ಳ್ವುದುಂಜಗದೋಳ್ಭಕ್ತರನೀತಿಯೆಂಬರಿದನಾವಂನಚ್ಚುವಂಮುಚ್ಚುವಂ॥

ಕಂ ॥ ಅರಸಗ್ಗಾರ್ಗಜ್ಞಾಭಂಗಮೆ । ಮರಣೋಪಮುಮಲ್ತೆಶರಣರೆ
ನ್ನಾಜ್ಞೆಯನೊ ॥ ತ್ತರಿಸಿನಡೆದಪರಿದೇ ಕೆಮ | ಗರಸುತನಂ ಬಸವನೀನೆ
ಕೈಕೊಳ್ವುದಿದಂ ॥ ——— ——— ॥೨೯॥

ವ॥ ಎಂದರಸಂವಿರಸಂನುಡಿಯೆ ಬಸವಂಕೇಳ್ದು ಮುಗುಳ್ನಗೆನಕ್ಕು॥

ಕಂ॥ ಶಿವಧರ್ಮಮಾರ್ಗಮುಂ ಮಿ | ರುವರಲ್ತಲ್ತೆಮ್ಮಶರಣರವ
ನಿಪಮೇಲಂ ॥ ವಿವರಿಸದೆಕಾರ್ಯಹಾನಿಯು | ನವಧರಿಸದೆ ಬಾಯ್ಗೆಬಂದ
ವೊಲ್ನುಡಿದಪುದೇ ॥ .... ॥೩೦॥

ಚ॥ ವೃ॥ ಕಿರುಕುಳನಲ್ತು ಕಿನ್ನರಮಹಾವಿಭು ಶಂಕರರೂಪನಲ್ತೆತ |
ಪ್ಪಿರಗದೆ ಕೊಲ್ವನೇ ಪೆರನ ನೆಳ್ತಿರದೀದುದೆನುತ್ತೆಪೇಳೆ ಕೇ ॥ ಳ್ದಿರಗದೆ ಕ

ಟ್ಟುಕೊಟ್ಟಗೆಯೊಳೆಂಬ ಪೊಲ್ಲೀಖಳರುಕ್ತಿಗೇಳ್ದುಮೇ | ಅರಿಯದಕಾರ್ಯ ಮಂ ನುಡಿವೆಬಲ್ಲವರೊಲ್ವರೆ ನಿನ್ನನುರ್ವಿಪಾ ॥ .... ॥೩೧॥

ಕಂ॥ ಕಳುಪಾತನಲ್ಲಿ ಗೆಲಿಮುಂ | ಜುಳಮುತಿ ಮಂತ್ರಿಗಳೆ ನರಸಬ ಳಿಕವನಿವಂ ॥ ತಿಳಿ ತಪ್ಪೆಳ್ಳನಿತಾದೊಡ | ಮಿಳೇಶ ಕೇಳ್ಕಿನ್ನಲ್ಯ್ಯಸೋ ಳ್ಪೊರ್ದುಗುಮೇ ॥ ——— ॥೩೨॥

ವ ॥ ಎನಲೊಡನಾ ನುಡಿಯನಿಂಬುಗೆಯ್ದು ಬಿಜ್ಜಳಂ ತಂನನುಂ ನೆಡೆಯ ಮಂತ್ರಿವರರಂ ಕಳುಪಲೊಡನವರ್ಬಂದು ಕಿಂ ನರನಂ ಕಂಡುಪ್ರೊ ಡಮುಟ್ಟುನಿಟಿಲತಟಘಟಿತ ಕರಪುಟರಾಗಿ ॥

ಮ॥ ವೃ ॥ ಅಮರ್ದೆತ್ತಬಿಲಮೆತ್ತ ಭಾನುಕಿರಣಂ ತಾನೆತ್ತ ಮರ್ಜಿ ತ್ತ ಜಂ | ದ್ರುಮಯೂಖಾವಳಿಯೆತ್ತ ಚಕ್ರಜಯಮೆತ್ತಂಭೋಧಿಯೆತ್ತ ಲ್ಪಕ ॥ ದ್ದ್ರಮಪಾರ್ಪಿಗತಭೇಕಮೆತ್ತ ಶರಣರ್ನಿಮೆತ್ತ ದುರ್ನೀತಿದುರ್ಮದ ಮದೋಷಾತ್ತ ಜನೌಘಮೆ ತ್ತರಿಯೆವಾವಿಂತಪ್ಪಸಂಬಂಧಮುಂ ॥೩೩॥

ವ॥ ಳೀವನೀನೋಳ್ಪೊಡೆ ಮಹಾನುಭಾವಂ ಸ್ವತಂತ್ರಶೀಲಂ ಶಿವಾ ನಂನರಸ ಸಮಾಸ್ವಾದನ ತೃಣೀಕೃತ ಜಗದ್ವ್ಯಾಪಾರಂ ಭವಭಾರಿಯಪ್ಪ ಲೌಕಿಕನರಾಕ ಜನದೊಡನೆ ವಿವಾದಮನೇಂ ಕಾರಣಂ ತಗುಳ್ದಿರಿಯದಂ ತಿಳಿಯಲರಸನೆಂಮುಂ ನಿಂಮುಲ್ಲಿಗಟ್ಟದ ನೆಂದವಪ್ಪೇಳೆ ಕಿಂನರೇಂದ್ರ ನ ಮಂದಿರೊರೆಯ ನಾಕರ್ಣಿಸಿ ॥

ಮ ॥ ವೃ ॥ ಪಲವಾಳಾಪಮೊಳೇನು ಪಾಪಿಕುರಿಯಂತಪ್ಪಾರ್ಗಳು ದ್ಯದ್ಭಯಾ | ಕುಲಮೇಷಂ ಪರಿದೀಪ್ರರಾಂತಕನಗೇಹಂ ಬೊಕ್ಕುದಾಂತ ಪ್ಮದಾ ॥ ವಿಲಚಿತ್ತಂಬಳಿಮಂದಿದಂಪಿಡಿಯೆ ಲಿಂಗಾಗಾರಮುಂ ಪೊಕ್ಕು ದಂ ॥ ಕೊಲಲೇನಕ್ಕುಮಿಬೇಡಕೊಂಡಬೆಲಿಯುಂ ನೀಂಪೇಳ್ವುದಾನಿತ್ತಪಂ॥

ಕಂ॥ ಇರ್ಮಡಿಮೂರ್ಮಡಿಪೊಂಗಳ | ನೋರ್ಮೆಯೆ ಪಿಡಿಕೊಡು ವೆನಿಲ್ಲಬಿಡು ಮೇಷಮನೆಂ ॥ ದೂರ್ಮೊದಲೆನುಡಿದೆ ನಾದು | ಪ್ಪರ್ಮ ವಿಲ ನೆನ್ನನಣಕಿಸುತ್ತಿಂತೆಂದಂ ॥ .... ॥೩೪॥

ಕಂ॥ ಉತ್ತಮಗುಣಗಣಪುರುಷಕು | ಲೋತ್ತಂಸಂ ಪ್ರಾಣಿಗುಣದ ಯಾಪರ ನೀತಂ ॥ ಮತ್ತಿನ್ನದೆಸಾವಿರಪೊ | ನ್ನಿತ್ತಾದೊಡ ಮರರೆ ಕುರಿಯ ಬಿಡಿಸದೆಮಾಣಂ ॥ .... ॥೩೬॥

ವ ॥ ಎಂದವ ನಾಳವಾಡಿ ನುಡಿಯಲಾಕ್ಷಣಮೇ ಸಾಸಿರಪೊಂಗಳಂ

ತರಿಸುತೆಣಿಸಿಕೊಟ್ಟು ನೀಂಮುಗುಳ್ದಳಿಪಿ ದೊಡಾನೆಂತುಂಬಿಡುವ ನಲ್ಲೀ ಕುರಿಗೆ ಲಿಂಗಾಂಕಿತಂಗೆಯ್ದು ಬಿಡುವೆನೆನೆಖಳನೊಡಂಬಟ್ಟು ಪೊಂಗಿ, ಕಿರಿ ದುಪ್ಪೊಳ್ತಂಕಳೆದು ಮುಗುಳ್ದಲ್ಲಿಗೇಳ್ತಂದಳುಪಿ ಕುರಿಯಕೊರಲ್ಗೆ ನೇಣಂ ಬಂಧಿಸಿ ಪಿಡಿದೆಳೆಯೆಕಂಡೂ ||

ಚ|| ವೃ|| ಎಲೆಎಲೆದುಷ್ಟ ನೀಂಬಿಡುಬಿಡೀಕುರಿಯಂ ಪಿಡಿವಂದಮೆಂತೊ ಮುಂ | ಬೆಲೆಗೊಳುತಿತ್ತು ಮತ್ತಳಿಪಿನೀಂ ತೊಲೆಗೆಂದೆನೆ ಕೇಳ್ತನೆನ್ನ ನೇ || ಲಲಗನವಂ ಬಳಿಕ್ಕಮುವನಂ ಕಡಿದಿಕ್ಕಿದೆ ನಾರೊಳಾಯ್ತು ತ | ಪ್ಪಲಸದೆನೋ ಡಿಮಿಂತಿದಕೆ ಸಾಕ್ಷಿವರತ್ರಿಪುರಾಂತಕೇಳ್ವರಂ || ||೩೭||

ವ|| ಎಂಬುದು ಮವಕೇಳ್ದು ವಿಸ್ಮಯಂಬಟ್ಟು ಸಭೆಯೊಳಿರ್ದ ಬಿಜ್ಜಳಂಗೇಳ್ತಂದೆರಗಿ ಮೇಷವೃತ್ತಾಂತಮನಾ ತ್ರಿಪುರಾಂತಕನ ಸಾಕ್ಷಿಯ ನಾಸಟಿವ ವಿಸ್ತರಂಪೇಳೆ ಕೇಳ್ದು ಪರಿಹಾಸಂಗೆಯ್ದು ||

ಚಂ|| ವೃ|| ಪ್ರಕಟತಲಿಂಗಸಾಕ್ಷಿಯನವಂ ನುಡಿಯಿಪ್ಪುದು ಮಸ್ಮನಕ್ಕಿಕಾ | ತುಕಮಿದನ್ನೆಯ್ದೆ ನೋಳ್ಪೆನೆನುತೇಳ್ದು ಸಭಾಸೆರೆಯ್ದೆ ಪಿಂತೆಪಾ || ಠಕರೊಲವಿಂದ ಮುಘ್ಘಡಿಸೆ ಮುಂದೆ ತ್ರತಾನಕ ರಾವಮುಣ್ಮೆ ಬಂ| ದಕುಟಿಲ ಭಕ್ತನಿರ್ದ ಶಿವಮಂದಿರಮಂಪುಗುತಂದನುರ್ವಿಪಂ || ||೩೮||

ವ || ಆಗಳಾಬಸವ ರಾಜಂ ಕಿಂನರೇಂದ್ರನಿರ್ಪೆಡೆ ಗೇಳ್ತಂದೆರಗಿಕರಾರವಿಂನೆಮುಂ ಮುಗಿದುನಿಂದು ||

ಉ|| ವೃ|| ಸಾರವಿಚಾರಧೀರ ಶಿವತತ್ವಸುಧಾರಸರಾಜಹಂಸ ವಿ | ಸ್ತಾರಯಶೋಂಕ ಯೋಗಿಜನವಲ್ಲಭ ಭಕ್ತಿಲತಾಂತುಗಂಧ ಗಂ|| ಭೀರ ಗುಣಾಭಿರಾಮ ಮಹನೀಯಕೃಪಾಕರ ಸುಪ್ರತಾಪತೇ | ಜೋರಮಣೀಯ ದೇವ ಜಯಕಿಂನರಬೊಮ್ಮನಿಸರ್ಗವೈಭವಾ || ||೩೯||

ನಿರೋಷ್ಠ್ಯವೃತ್ತ|| ಚ|| ಚರಚಣಾರ್ಚನಾಂಚಿತ ಚರಾಚರಲಕ್ಷಣಶೀಲ ಸತ್ಯಸಂ | ಗರ ಘನಸತ್ಕಳಾನಿಧಿ ದಯಾದರ್ಸಸಾಗರ ದಾನಶೀಲಶಂ|| ಕರಶರಣಾಳಿ ಸಂಗತಕಥಾ ಕಲನಾದರಸಾರಚಿದ್ಘನ | ಸ್ಥಿರತರಚಿತ್ತಧೀರಜಯ ಕಿನ್ನರನಾಯಕಶಾಂತಿದಾಯಕಾ || .... ||೪೦||

ವ|| ಎಂದು ಕೂರ್ಮೆಯಿಂ ಕೊಂಡಾಡಿ ಪಾಡಿ ತತ್ಪ್ರಸನ್ನತೆವಡೆದು ಬಸವರಸನಿರ್ಪುದು ವಗಳಾಕಿನ್ನರ ವಿಭು ಮಂದಸ್ಮಿತ ಮುಖಾಂಬುಜಂ ಸಮಸ್ತಭಕ್ತಜನಂ ಸಂಭ್ರಮಿಸೆ ನೆರೆದಜನಂ ನೋಡುತ್ತಮಿರೆ ತನ್ಮಾಡಿ

ಬೀಯ ಗಮನಿಕ್ಕಿ ಕೆತ್ತ್ರಿಪುರಾಂತಕನಿಕಾಂತಕ ಪಾಟಪುಟಿನು ನೋೞಿನೋೞಿ ದಿ ನ್ನಸು ನೋೞಿಡಲೊಡನೆ ||

ಕಂ|| ಪುರವೈರಿ ಪೇಳರ್ದು ನಿಜಮಂ | ದಿರದ ಕವಾಟದೊಳೆ ತಳ್ತ್ತ ಬೀಯಗನು ನದಂ || ಪರಿಹರಿಸಿ ತೆಗೆದುಗಳಿಲನೆ ಸರಭಸ ಮಾಜವಳಿವಡಿಯ ನೇಂಬಿರ್ಚಿದನೊ || .... ||೪೧||

ಶಾ|| ವೃ|| ದಾಸಯ್ಯಂಗಂ ದುಮೇಶಂ ಪಡಿದೆರೆದ ನೆಸಿಪ್ರುಕ್ತಿಯಂ ಪ್ರೊ || ಲ್ಲಾಸಂ ಕೈಗಣ್ಮೆ ತಾನೇ ಪಡಿದೆರೆದನಿದಾಶ್ಚರ್ಯ ಮಿಾಲಿಂಗಮುಂ ಸ | ತ್ತ್ರ್ಯಸನ್ನಂಸಾಕ್ಷಿಯಂ ದಲ್ಸುಡಿಯಿಸದಿರ ನೆಂದುರ್ವಿಕೊಂಡಾಡೆ ಭಕ್ತರ್ || .... ||೪೨||

ಚ|| ಮೃಡನಸಮಿಾಪದೊಳ್ನಿಲಸಿ ತನ್ನಕರಾಗ್ರಕರಾಳಖಡ್ಗಮಂ | ಜಡಿದು ಕಡಂಗಿನಿಂದು ಹರಭಕ್ತರಪಾದಸರೋಜರಾಜಿಯಂ || ಬಿಡದೊಲ ವಿಂಡೆ ಜಾನಿಸುತಭೀಕ್ಷಿಸಿ ಲಿಂಗಹು ಸಲ್ಲಿಭಕ್ತರು | ಗುಡಿಸುತ ಘೇರವಂ ಗೊಡೆ ಸಮುಕ್ಷದೊಳೀಕ್ಷಿಸೆ ಭೂಭುಜಾದಿಗಳ್ || .... ||೪೩||

ಮ || ಪರಮೇಶಾನ ಪುರಾರಿ ಸೌಂದರಗಣೇಶಂಗೆಂದು ಕಾಂತಾಪ ಯೋ | ಧರದೊಳ್ನೀನುಲಿದಂ ತಿರುಂಪಿಯೊ ಳಿಪಾದಂಗೆಯ್ದುದಾಸಂಗೆ ಶಂ || ಕರಮಾತಾಡಿದಮಾಳ್ಕೆಯಿಂ ನೆಗಳ್ದಬೊಮ್ಮಯ್ಯಂಗೆಚೋಳಂಗ ಳು |ತ್ಕರದೊಳ್ನಿಂದುಸಿದ್ಧಂತೆ ದೇವನುಡಿನೀಂ ಸತ್ಯಾರ್ಥಮಂಸಾದರಂ ||

ವ|| ಎಂದು ವಿಜೃಂಭಿಸಿ

ಕಂ|| ಅತಿನಿಷ್ಠೆ ನಿಮಿರೆ ಶೌರೋ | ನ್ನತಿಯಿಂಹರಹರ ಪುರಾಂತಕಾ ಯೆನೆ ಭಕ್ತಂ | ವಿತತಮುಹಾಧ್ವನಿಯೊಂ ದ| ದ್ಭುತಮೊಗೆಯೆ ಪುರಾರಿ ತಳ್ವ ದೋಯೆನುತಿರ್ದಂ ||೪೪||

ವ|| ಆ ನಿರಂತರ ಮಹಾಧ್ವನಿ ದಶದಿಗಂತ ಮನಳುರ್ದು ಮುಕ್ಕಳಿಸಿ ಮುಸುಂಕಲೊಡನೆ

ಮ|| ವೃ|| ಕಡೆಲೇಳುಂ ಕದಡೇಳ್ದು ಮುಳ್ಕಿದು ದಹೀಂದ್ರಂ ಬಳ್ಕಿ ದಂ ಕೂರ್ಮನು | ಕ್ರುಡುಗಿರ್ದಂ ಕುಲಭೂಧರಂ ಕೆಡೆದು ದಾಶಾದಂತಿ ಬಾಯ್ಬಿಟ್ಟುದಂ || ಮುಡುಜಾಲಂ ಬಿಡದುಳ್ಕಿದತ್ತುಧರೆಯಲ್ಲಾಡಿತ್ತು ನಂ ದಿದ್ರುದಾ | ಬಡಬಂ ನಿಂದುದು ವಾಯುವಸ್ತಮಿಸಿ ತರ್ಕಂದಿಗ್ವರರ್ಬೆ ಚ್ಚಿದರ್ .... ||೪೬||

ಮ|| ಭ್ರಮೆಯಿಂದಂ ಬೆಗಡೊಂದಿ ಬಳ್ಪುಡುಗಿ ಬೇಗಂ ಹನ್ಮದಂ ಬೋದುದೆಯ್ದೆ ಮದೇಭಾಶ್ವ ನರಾದಿಜೀವನಿವಹಂ ಲೋಕಪ್ರಜಂ ಬೆರ್ಚ್ಚಿದ || ತ್ತಮರಶ್ರೇಣಿ ಬಿಗುರ್ತ್ತುದಂದು ಳಿದರುದ್ಯಲ್ಲಿಂಗಸಂಯುಕ್ತರಾ | ಪ್ರಮಥ ಸ್ಸರ್ವಮ್ಮದಮಾದಮಾಂತರೆಮ್ಮದಿನಮಾದತ್ತೆಂದು ಲೀಲೋತ್ಸುಕರ್||

ಚ|| ಕುಣಿವ ಕುಕಿಲ್ವ ಕೂಗಿಡುವ ರಾಗಿಪರಂಚಿಪ ಜೋಲ್ವ ತೇಲ್ವ ಸಂಡಣಿಪ ಕಂಡಂಗು ವಚ್ಚರಿಯೊಳಾಡುವ ಪಾಡುವ ಸುತ್ತಿ ಬರ್ಪ ಮೇಣ್ಮಣಿವ ಮರಲ್ವ ಕೀರ್ತಿಸುವಪೊಂಪುಳಿಪೋಪ ವಿನೋದಕೇಳಿಯೊ | ಳ್ದಣಿಯದಭಕ್ತವೃಂದಮೆಸೆದಿರ್ದುದು ಕಿನ್ನರನಗ್ರದೇಶದೋಳ್ || ||೪೮||

ಕಂ|| ಇರುಳುಂ ಪಗಲುಂ ಪುರರಿಪು | ಮೊರೆಯುತ್ತಿರೆ ಸಪ್ತದಿವಸ ಪರಿಯಂತರ ತ || ದ್ಧರಣಿಪಮುಖ್ಯಮೂರ್ಛೆಯೊ | ಳಿರೆ ಜಗದುದ್ಧರಣಶೀಲನೀಕ್ಷಿಸಿ ಬಸವಂ || .... ||೪೯||

ಕಂ|| ಕರುಣಾನಿಧಿ ಕಿನ್ನರಪದ| ಸರಸಿರುಹಕ್ಕೆರಗಿ ಮುಗುಳ್ದು ಕೈಮುಗಿಯುತೆಸಾ || ದರದುಚಿತವಚನರಚನೋ| ತ್ಕರಮುಮರ್ದಿರೆ ಭಕ್ತಿವೆತ್ತು ಕೀರ್ತಿಸುತಿರ್ದಂ || ||೫೦||

ಉ|| ವೃ|| ಮಂಗಳಲಿಂಗಸಂಗತ ನಿಜಾಂಗಜಿತಾಂಗಜ ತುಂಗದುಷ್ಟಮಾ | ತಂಗ ಮತಂಗಜಾಹಿತ ಪತಂಗಚ ಭಂಗಚಿದಂಗಜಂಗಮೋ || ತುಂಗ ಭುಬಂಗರಾಜಧರ ಭಕ್ತಹೃದಂಬುಜಭೃಂಗ ಸದ್ದಯಾ | ಪಾಂಗ ಶಿವಾಂತರಂಗಗಣಪುಂಗವ ಸಾಂಗಸಮರ್ಚನಪ್ರಿಯಾ ||೫೧||

ಕಂ|| ಶ್ರೀಕರಮಹಿಮಾಕರ ಪರ | ಭೀಕರ ನತಪನಜ ವಸಧಿವಾಕರಗುಣಿರ || ತ್ನಾಕರ ಬುಧಾಂಬುರಾಶಿಸು | ಧಾಕರದರ್ವೀಕರೇಂದ್ರಧರವರಚರಿತಾ || ||೫೨||

ವ|| ಎಂದು ಸನ್ನುತಿಗೆಯ್ದು ||

ಕಂ|| ಕಿನ್ನರಪತಿಸಖಸನ್ನಿಭ | ಕಿನ್ನರಪತಿನಿಮ್ಮಮಹಿಮೆಯಂ ತಿಳಿಯದೆಸೊ || ಕ್ಕಿನ್ನರಪತಿಮುಖರಳಿದ | ಕ್ಕಿನ್ನರಪತಿಕರಿಸುತಿವರಪೊರೆಗುಣನಿಳಯ || .... ||೫೩||

ವ|| ಎಂದು ವೃಷೇಂದ್ರಂ ಬಿನ್ನವಿಸೆಕೇಳ್ದು ತತ್ಕರಾಗ್ರದೋಳ್ಕರಾರ್ಪಣಂಗೆಯ್ದು || ....

ಕಂ|| ನಗುತೆಪುರಾಂತಕಸದಿರೋ | ಕ್ಕಿಗೆನಿಂದು ಪುರಾರಿಸಾಲ್ಗು ಮೋ೯ಹೋ೯ಯೆನುತಂ || ನೆಗಪಿಕರಮಂನಿವಾರಿಸೆ | ಸುಗುಣಾಂಕಂ ಶಂಭು ಭೀಮರವಮುಳಿದೆಸೆದಂ || .... ||೫೪||

ವ|| ಆಗಳ್ ||

ಕಂ|| ಮೊದಲಂತೆ ಲೋ೯ಕಮೆಲ್ಲಂ | ಪದುಳಂ ಮಿಗೆಬಾಳ್ದುದವನಿಪಾಲಾದಿಗಳೊಂ | ದಿದಮೂರ್ಛೆ ತಿಳಿಯೆಬಿಡದೇ | ಳ್ದುದಿತೋ೯ತ್ಸವಕಿನ್ನರೇಂದ್ರನಡಿಗೆರಗಿರ್ದರ್ || .... ||೫೫||

ಉ || ವೃ || ಮಂಗಳಸತ್ವರೂಪ ಮಹಿಮಾರ್ಣವ ಮಾನಸನಿದಾನಚಿಲ್ಲತಾ | ಲಿಂಗಿತ ಕಲ್ಪಭೂಜ ಕರುಣಾಕರ ಕಾಮವಿದೂರಲಿಂಗಸಂ || ಗಾಂಗದಿಗಂತಪೂರ್ಣ ಸಿತಕೀರ್ತಿವಿರಾಜಿತ ಕಿನ್ನರೇಂದ್ರದೀ | ನಂಗೆನಗಿತ್ತು ನೀ. ಸಭಯಮಂ ಕೃಪೆಯಿಂದೊರೆಸದ್ಗುಣಾಕರಾ || ||೫೬||

ಮ|| ಕಪಟಾಲಾಪನ ನಜ್ಞಭಾವಯುತನಂ ದುರ್ದಾಂತನಂಧೂರ್ತನಂ | ಚಪಲಸ್ವಾಂತನ ನಲ್ಪಚೇತನನ ನನ್ಯಾಯಾಧ್ವಸಂಚಾರನಂ || ಸುಪಥತ್ಯಾಗಿಯ ನಸ್ವಿತಾಪಜಯುನಂ ನಿರ್ಲಜ್ಜನಂ ನೀ೯ಚನಂ | ಕೃಪೆಯಿಂದೆನ್ನ ನೊರಲ್ದುರಕ್ಷಿಸು ನಿತಾಂತಂ ಕಿನ್ನರಾಧೀಶ್ವರಾ || ||೫೭||

ವ || ಎಂದಾಂನೆಗಳ್ದ ಶತಾಪರಾಧಮಂ ಸೈರಿಪುದೆಂದು ಬಿಜ್ಜಳಂ ಸಾಷ್ಟಾಂಗಮೆರಗಿ ಮಗುಳ್ದಿಂತೆಂದಂ ||

ತರಳವೃತ್ತ|| ಮದನಮರ್ದನನಾಂತು ಮಸ್ತಕವಲ್ಲಿ ನಿನ್ನ ನಿಜಾಜ್ಞೆಯಂ | ಪಡೆದುನೀ೯ಂ ಕರದಾಗೆಳೋ೯ ಯೆನುತಿರ್ದನಣ್ಮುತೆ ಹೋ೯ಯೆನು || ತ್ತೊವರೆ ನಿಂದನದೆಂತೊನಿನ್ನಯಪೇರ್ಮೆ ಧಾತ್ರಿಯೊಳದ್ಭುತಂ | ವಿದಿತಮಿಂತಿದು ನಿನ್ನನಾಫಣಿ ರಾಜನಾರ್ಪನೆಬಣ್ಣಿಸಲ್ || ||೫೮||

ಕಂ|| ಉಗ್ರಪ್ರತಾಪನಿನ್ನಸ | ಮಗ್ರಪ್ರೇರಣೆಯಿನಳಿದುದುಳಿದುದುಜಗಮಾ || ರ್ಯಗ್ರಣಿನೀ೯ನೆಜಗತ್ರಯ | ನಿಗ್ರಹಸಮನುಗ್ರಹಕ್ರಿಯಾಧಾರೀ೯ಯಂ || .... ||೫೯||

ಚ|| ಪಶುಮರಿವುಗೆಕಾಯ್ದೆತ್ತನರ | ಪಶುವಾಂಮರೆ ಯೊಕ್ಕನೊಲ್ದುಪೊರೆದೆನ್ನಂ ನೀ೯ಂ || ಪಶುಪಾವತಾರನೆಂಬವ | ನಶೇಷಭುವನದೊಳೆದೇವಮೆರೆಯಲ್ವೇಳ್ಕುಂ || .... ||೬೦||

ಕಂ॥ ವಿರಹಿತಮನುಷ್ಯಧರ್ಮಂ । ಪರಿಗಳಿತಾಶಂ ಸದೇಕನಿಧಿಯೆನಿಸಿ ದಕಿ ॥ ನ್ನರನಾಥಕೇಳ್ವಿನಗೆಶಂ । ಕರಮಿತ್ರಶತೆಪುಣ್ಯಜನನಿಷೇವ್ಯತೆಚಿತ್ರಂ ॥

ವ॥ ಎಂದು ಮಗುಳ್ದುಮಗುಳ್ದೆರಗಿ ಪೊಗಳ್ವ ನರೇಂದ್ರನಂ ಕೃಪಾ ಪಾಂಗದಿ ನಭೀಕ್ಷಿಸು ತಭಯಮುಂ ಕರುಣಿಸಿ ॥

ಕಂ॥ ಪೆರೆದಲೆಯನಶರಣರೊಳೆಲೆ । ಕರೆಮರೆಯಿಲ್ಲದೆಸವೋತ್ತರಂ ಗುಡದೆಸುಖಂ ॥ ನೆರೆಬದುಕುಪೋಗೆನುತೆನೆಲ । ದೆರೆಯನಬೀಳ್ಕೊಟ್ಟು ಮುಡಿದಕುರಿವಾನಿಸನಂ ॥ .... ॥೬೨॥

ಅಸುವೀಯುತೆತ್ತುತಿಂತಿದು । ಪೊಸತೆಂದಾಪೌರರೆಯ್ದೆಕೊಂಡಾಡ ಗಣ ॥ ಪ್ರಸರಂಮುದಮಾಳ್ದಿರೆನೆಗ । ಳ್ದಸಮಂನಿಜಗೃಹಮನೆಯ್ದಿದಂಗುಣ ನಿಳಯಂ ॥ ——— ॥೬೩॥

ವ ॥ ಅಂತೆಯ್ದಿಕಿನ್ನರೈಯ್ಯಂ ಮುನ್ನಿನಂತೆ ನಿಜಮಹಿಮೆವೆತ್ತೊಪ್ಪು ತ್ತಿರ್ದನಾಪ್ರಸ್ತಾವದೊಳ್ ॥

ಮ॥ ಸ್ರ॥ ವೃ॥ ಪೊಗಳುತ್ತಂಕಿನ್ನರೇಂದ್ರಂ ನೆಗಳ್ದ ಘನತರಾಶ್ಚರ್ಯ ಮಂ ಭಕ್ತರೊಳ್ವಂ । ದಿಗಳಿಂ ಕೊಂಡಾಡೆ ಸುತ್ತಂಶರಣನತುಳಸಾಮ ರ್ಥ್ಯಮಂ ಸಂಭ್ರಮಂಪೆಂ ॥ ಪೊಗೆವನ್ನಂಬಂದುಪೊಕ್ಕಂ ನಿಜಭವನಮನಾ ಮ್ನಾಯಗೇಯಂ ವಿಮಾಯಂ । ಸುಗುಣಾಲಂಕಾರ ವೀರವ್ರತ ಹಿತಚರಿತಂ ವೀರಶೈವಾಬ್ಧಿಚಂದ್ರಂ ॥ .... ॥೬೪॥

ಕಂ॥ ಘನಮಹಿಮಕಿನ್ನರೇಂದ್ರನ । ವಿನುತಚರಿತ್ರಮನದಾವನೋ ದುವನಾವಂ ॥ ವಿನಯದಿಕೇಳ್ವನವಂನೆ । ಟ್ಟನೆಪಡೆವಂಸುಖಮನೈಹಿಕಾ ಮುಷ್ಮಿಕವಮಂ ॥ .... ॥೬೫॥

ಕುಷ್ಠಮುಖದುಸ್ಸಹ ಬಲಿಷ್ಠ ಗದಮರ್ದನ ಗರಿಷ್ಠ ನಿಜಪಜ್ಜಲ ಯುಧಿಷ್ಠರನ ರಾಜ್ಯಾಧಿಷ್ಠಿತ ಜಗತ್ರಯ ವರಿಷ್ಠಗರುಡಾಂಕಪರಮೇ ಷ್ಠಿನುತಭರ್ಗಪದನಿಷ್ಠಜನಲೋಲಾ ॥ ಶ್ರೇಷ್ಠಸುಕವಿಪ್ರಕರಷಷ್ಠಗಣ ವೃಂದ । ಜ್ಯೇಷ್ಠಪರಿತರ್ಜಿತಲಘಿಷ್ಠ ಮತವಾದಿಕುಲಸುಷ್ಠುವಚನೋ ತ್ಕಶಮಹಿಷ್ಠಬಸವೇಶಾ ॥ .... ॥೬೬॥

ಪ್ರಭಾತವೃತ್ತ ॥ ಶರಣಾಗತಾರ್ತಿಹರಣಾತಿರಂಜನೇ । ತರವಾರಿ ದ್ರುಪ್ತಸುತವೈರಿಭಂಜನೇ । ಕರಿಮುದಯಾನೆಹರಿಚಂದನಾರ್ಜುನೇ । ಪರಿ ಪಾಲಿಸೆನ್ನಗಿರಿ ರಾಜನಂದನೇ ॥ — ॥೬೭॥

ಗದ್ಯ|| ಇದು ವಿನಮದಖಿಳಸುರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ
ಪರಮಶಿವಲಿಂಗ ಪಾದಾರವಿಂದ ಪರಾಗ ಭಸಿತ ಭಾಸುರ
ಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರ ದೇವಭಕ್ತಿ ವಿರಚಿತ ಶ್ರೀಮದ್ಬಸವರಾಜ
ವಿಜಯ ಮಹಾಪುರಾಣದೊಳ್ ಕಿನ್ನರೇಂದ್ರ
ವೈಭವಕಥನಂ ಸಪ್ತದಶಾಶ್ವಾಸಂ
ಪರಿಸಮಾಪ್ತಂ.

ಕಲಕೇತಬ್ರಹ್ಮಯ್ಯನ ಕಥೆ

ನಾಂದೀ || ಲಲಿತಪದವೃತ್ತ || ತ್ಯಕ್ತಕರಣೇಂದ್ರಿಯನಿಯುಕ್ತವಿಷಯಭ್ರಮಸದುಕ್ತಪರಮಾರ್ಥಪರಿಭಕ್ತಪರವಾದ | ಪ್ರಾಕ್ತನಮಹೇಶಪದಭಕ್ತಕರುಣಾಮೃತನಿಷಿಕ್ತಸುಯಶೋಭರಿತದಿಕ್ತಟಕವಿಂದ್ರಾ || ವ್ಯಕ್ತರುಚಿಸಾದಪದಸೂಕ್ತಮಣಿಭೂಷಣನಿಷಕ್ತನಿಜಕರ್ಣಪರಿಭುಕ್ತಗರಮಾನೋ| ದ್ರಿಕ್ತಮದವಾರಣವಿರಕ್ತಹಿತರಕ್ಷಿಸುನಿರುಕ್ತಶಿವತತ್ವಪರಮುಕ್ತಬಸವೇಶಾ || ಶಾಂತನಿಜಮಾನಸ ನಿಶಾಂತಪರಿವರ್ಜಿತಲತಾಂತಶರನಿರ್ಜಿತ ಕೃತಾಂತಶಿವಯೋಗಾ | ಶ್ರಾಂತಸುಖಯುಕ್ತನಿಗಮಾಂತಚಿದಭಿಜ್ಞಭವತಾಂತನತರಕ್ಷಶಶಿಕಾಂತಧವಳಾಂಗಾ | ದಾಂತಪರಮೇಶಪರಿಚಿಂತನಪರಾಯಣನಿತಾಂತಶಿವಮಂತ್ರಕಲಿತಾಂತರನಿರುದ್ಧ | ಸ್ವಾಂತಶಿವಲಿಂಗಜಯಸಂತತಕೃಪಾಕರನಿರಂತೆಗಣನಂದನವಸಂತಬಸವೇಶಾ ||

ಕಂ|| ಶ್ರೀಮದಮಳಾಂಬಿಕಾಮುಖ | ತಾಮರಸದ್ಯುಮಣಿ ಗುಣಗಣಾಭರಣ || ಸ್ತೋಮಪರಿವೃತ ಸಶೇಷಭ | ವಾಮಯಹರ ನೀಗೆಸೌಖ್ಯಮಂ ಶಿವಲಿಂಗಂ || .... ||೧||

ವ|| ಮತ್ತಮಭಿನವವಿಭವಂ ಬಡೆದೆಸೆವ ಕಲ್ಯಾಣನಗರದಲ್ಲಿ ||

ಮ|| ವೃ|| ಸ್ಥಿರಚಿತ್ತಂ ಜಂಗಮಶ್ರೀಪದಭಜಕ ಸುದಾತ್ತಸ್ವತಂತ್ರಂ ಯಶೋಭಾ | ಸುರನಾದ್ಯಂ ಭಕ್ತನಂಗೇಂದ್ರಿಯಗುಣರಹಿತಂ ಲಿಂಗನಿಷ್ಠಾಪರಂಶಾಂ || ಕರಮಾರ್ಗೈಕಪ್ರದೀಪಂ ಕ್ಷಪಿತದುರಿತನುದ್ವಿೀತಮೋ

ಹಂ ಕೃಪಾನಿ | ರ್ಭರಚಿತ್ತಂ ಸ್ವರ್ಗಲೋಷ್ಮವ್ರಜಸಮುಮತಿಲಿಂಗಾಧಿರೂ
ಢಾಭಿಮಾನಂ || .... ||೨||

ಶಾ || ಜೀವನ್ಮುಕ್ತನಶೇಷಭಕ್ತನಿವಹೋಲ್ಲಾಸಪ್ರದಂ ಶುದ್ಧಧ |
ರ್ಮಾವಾಸಂ ವಿಮದಂ ತೃಣೀಕೃತಜಗಜ್ಜಾಲಂ ಸುಲೀಲಾಸ್ಪದಂ || ಶ್ರೀ
ವೀರವ್ರತಸಂಪದಂ ತ್ರಿವಿಧಶೇಷಾಸ್ವಾದನಾನಂದಸ | ದ್ಭಾವಂ ತಾಂ ಕಲ
ಕೇತಬೊಮ್ಮವೆಸರಿಂಮೊಪ್ಪಿರ್ದನತ್ಯೂರ್ಜಿತಂ || .... ||೩||

ವ|| ಅಂತಭಿನವ ವೀರಭದ್ರನೆಂಬಂತೆಸೆದು

ಕಂ|| ಮುಂದಲೆಯೊಳೊಲೆವಮುಡಿ ನೊಸ | ಲಂಪದ ಸಿತರೇಖೆಬಿ
ಗಿದುಟ್ಟಪಸು || ಪೊರ್ಂದಿದ ವಸನಂ ಕರ್ವದ | ಕೆಂದಳಿರವತಂಸಮೆಸೆಯೆ
ಕಿರುಗೆಜ್ಜೆಗಳಂ .. .. ||೪||

ಉ|| ವೃ|| ಒಂದಡಿಯೋಳ್ತೊಡರ್ಚಿ ಪೆರತೊಂವಡಿಯೋಳ್ ಝುಣ
ರೆಂಬಚೆಲ್ವಪೊಂ | ನಂದುಗೆಯಿಕ್ಕಿ ವಾಮುಕರದೊಳ್ಪಲ ದಕ್ಷನಜಾಸ್ಯಶೃಂಗ
ನೆಂ || ಬಂದಮುನಾಳ್ದಬಲ್ಲಗರ ಕೋಡನಮರ್ಚಿ ಮುಕುಂದನಸ್ಥಿ ದಂ|ಡಂ
ದಳೆದಂತೆ ದಕ್ಷಿಣಕರಾಗ್ರದೆಡಂಗೆಯನಾಂತುಲೀಲೆಯಿಂ ||೫||

ಮ|| ಸ್ರ|| ತಿರುಪುತ್ತಂಚಚ್ಚರಂ ಘಲ್ಘಲಕೆನೆ ಪಲಕಂದೇಶಿವೆದ್ತೋ
ಜೆಚೆಲ್ವಾ | ಗಿರೆ ಮಂದಸ್ಮೇರಮಂ ಬೀಲುತೆ ಝುಣಿಝುಣನಿಕ್ವಾಣಮಂಸೂ
ಸೆಪಾದ || ಸ್ಫುರಿತಂ ಮಂಜೀರಮುಯ್ಯಾರದೆ ನಡೆತರುಶಂ ಭಕ್ತರಾವಾಸಕ
ತ್ಯಾ | ದರದಿಂ ನಿಂತೀಕ್ಷಿಸುತ್ತಂ ಸರಸಮೃದುರವಂ ದೋರುತಂ ಪಾಡು
ತಾಗಳ್ .... ||೬||

ಚ|| ಪರಮತಗರ್ವಗಂಧಗಜಭಂಜನಕೇಸರಿ | ಬಂದ ನಂಬಿಕಾ |ವ
ರಶರಣಪ್ರತಾನಪದಪದ್ಮಪುರಂದಮುದಾಳಿ ಬಂದನೀ || ಶ್ವರಮತಪಂಕಜಾ
ಕರಮರಾಳಕಿಶೋರನೊರಲ್ದು ಬಂದನ | ಧ್ವರಹರಭದ್ರದಂತಿಪತಿಬಂದನಿ
ವಂಕಲಕೇತಬೊಮ್ಮಯಂ .. .. ||೭||

ವ|| ಎಂದುವಿಳಾಸದಿನುಲಿಯುತ್ತಂಮತ್ತಮಿರದೆ

ಕಂ|| ಬಂದಂಭಕ್ತರಮುದ್ದಿನ | ಕಂದಂ ತ್ರಿವಿಧಪ್ರಸಾದಸೇವಾನಿರ
ತಂ || ಬಂದಂಪ್ರಮಥರಲೆಂಕಂ | ಬಂದಂಭೃಂಗೀಶನಣುಗ ನೀಕಲಕೇತಂ||

ಕಂ|| ಚಂಗಳೆಯುಮುಗಂಡುಗ್ಗಳೆ | ಯಂಗಳಮಂ ಬೇಹರಿಪ್ಪಕಿಂಕರ

ನಾದ ॥ ಯ್ಯಂಗಳಭೃತ್ಯಂಭೋಗನ । ಡಿಂಗರಿಗಂಬಂದನಿಂಮೆನೋಡಿರಿ ಶರಣರ್ .. .... ॥೯॥

ಕಂ॥ ಎಂದುಲಿದುಪಾಡಿನಟಸುತೆ । ಕುಂದದೆತಾಂಪ್ರಸ್ತಯುಗಳದ ಳತೆಯಧಾನ್ಯಂ ॥ ದಂದೆನಿತುಬಂದೊಡಂಚರ । ವೃಂದಮನದರಿಂದೆತಣಿಪುತೆ ಸೆದಂಭಕ್ತಂ ॥೧೦॥

ವ॥ ಅಂತಿರ್ಪ್ಪನ ನೊಂದುವಾಸರಂ ನಿಜಗೃಹಬಹಿರ್ದೇಶ ಭಾಸುರ ವೇದಿಕಾಗ್ರದೊಳ್ಳಿವ ಭಕ್ತನೋರ್ವಂ ಪಥಶ್ರಾಂತಿಯಿಂ ಕಗೆಟ್ಟು ಪಟ್ಟಿರ್ಪ್ಪ ನಮಾತನಂ ಕಲಕೇತಯ್ಯಂಕಂಡು ನೀನಾರೇಂ ಕಾರಣಂಬಂದೆ ಯೆಂಬುದು ಮಾಭಕ್ತಂ ತದ್ದಯಾರ್ದ್ರ ಕಟಾಕ್ಷವೀಕ್ಷಣ ಸಾಂದ್ರಚಂದ್ರಿಕಾ ನಿರಸ್ತ ಪ ಥಶ್ರಮಭರನಾಗುತಿಂದೆಂದಂ

ಕಂ॥ ಹರಭಕ್ತಭೃತ್ಯನಾಂ ಕಿ । ನ್ನರಬೊಮ್ಮನಪೊರೆಗೆ ಪೋಗುತಿನ ಗಾದೆಡರಂ ॥ ಪರಿಹರಿಸಲೆಂದುಬಂದೆಂ । ನಿರವದ್ಯಚರಿತ್ರನಾತನೇಂಜಾ ವಳನೆ ॥೧೧॥

ಪಡೆದಂಸೌಂದರನೆಂಬ । ರ್ಪ್ಪಡಿಹೊಂನ್ಂಮುಂನೆಮುಭವನಿಂಕಿನ್ನರ ನಾ ॥ ನೃಡನಿಂದನುದಿನವಿಗಾಗಳ್ । ಪಡೆವಂಪೊಸಪೊನ್ನನೆಂದೊಡೇಂವಣ್ಣಿ ಪುದೋ ॥೧೨॥

ವ॥ ಎಂದು ಕಿನ್ನರೇಂದ್ರನಂ ಗೃಹಮೆನಿತು ದೂರ ಮಾಂಪೋಗಲ್ವೇ ಳ್ಕುಮೆನೆ ಕಲಕೇತೈಯ್ಯಂ ಕೇಳ್ದು ಕಲುಷಿತಕಟಾಕ್ಷನಾಗಿ

ಚಂ॥ ವೃ॥ ನುಡಿಯದಿರೆನ್ನಮುಂದೆ ಬಿಡುಕಿನ್ನರಬೊಮ್ಮ ನಪೇರ್ಮೆ ಯುಂಧನಂ । ಬಡೆವಳಿಪಿಂದೆ ಪೂಜಿಪನುಮಾಧಿಪನಂಸಲೆಕೂಲಿಗೆಯ್ವನಂ ॥ ಪಡೆವನೆಧಾನ್ಯರಾಶಿಯನಿದೇತರಭಕ್ತಿಯುಮಂಪಣಂಗಳಂ । ತಡೆಯದೆಕೊಳ್ವ ನತದೆವಿಶುದ್ಧಸುಭಕ್ತಿಸುಖಕ್ಕೆಸಲ್ವನೇ ॥೧೩॥

ಕಂ॥ ಗಣಿಪೊಡಜಹರಿಗಳ್ಳಿರಿ । ತೃಣಕಣಕೆಣೆಯಲ್ತೆಭಕ್ತಿಸಾಂಮ್ರಾ ಜ್ಯಪರಾ ॥ ಯಣಶರಣಗಣಕೆತಾನೆನೆ । ಪಣದಾಸೆಗೊರಲ್ದುಭಜಿಪುದೇಂಭ ವಹರನಂ ॥೧೪॥

ಕಿಂನರಿಯನೊಲ್ದುನುಡಿಸುತೆ । ಮುಂನಣೆಗೆಯ್ದಾಡಿಪೂಜಿಸಿಪಡೆವಂ ॥ ಪೊಂನಂಪಣಮುಂಪಾಗನು । ನುಂನತಮತಿಯಾತನಂತೆಪಡೆದದುಮೊಳರೆ ॥ ನೃಡನಂಕರದೋಯೆನಿಪುದು । ಪಡೆವುದುಪೊಸಪೊನ್ನನೆರಡುಕಜ್ಜ

ಮನೀತಂ ‖ ಬಿಡದಭ್ಯಾಸಿಸಿದನಿವಂ | ಪೊಡವಿಯೊಳೇಂಮುನ್ನನಂಬಿಯೊಡ ನಾಡಿದನೊ ‖೧೭‖

ವ‖ ಎಂದು ಕಿಂನರ್ಯ್ಯನಂ ವಿಡಂಬಿಸಿ ನುಡಿದು

ಕಂ‖ ಎಲೆಭಕ್ತಕಿಂನರ್ಯ್ಯನ | ನಿಲಯಂಕಡು ದೂರಮಲ್ಲಿಗೆಂತೆ ಯ್ದುವೆನೀ ‖ ನಲಸಿಕೆವೆತ್ತಿರ್ದ್ದಪೆಸಂ | ಚಲಿಸದೆನಿನಗೀವೆನರ್ಥಮಂಕೊಳ್ಳೆ ನುತಂ .... ‖೧೭‖

ಮ‖ ಸ್ರ‖ ವೃ‖ ಕಲಕೇತಬ್ರಹ್ಮದೇವಂಪಿಡಿವತಗರಬಲ್ಗೋಡನಲ್ಲಾ ಡಿಸುತ್ತಂ | ನಲವಿಂದಂಜಾಡಿಸುತ್ತಂಬಿದಿರೆ ಪಳಚನತ್ಯದ್ಭುತಂ ಪೊನ್ನೆಪೂ ಣ್ಗೋರ್ ‖ ಜ್ವಲತೇಜಂಪೊಂನದೆತ್ತಂ ಸುರಿದುದಸದಳಂ ಸಿಹ್ಮಕಾವುತ್ರವ ಕ್ತ್ರೋ | ಚ್ಚಲಿತಂ ಮುನ್ನುಂಗಿದರ್ಕಾಂಗದ ಪೊಸಕಡಿಗಳ್ಗೂಸುವೊಂದಂ ದದಿಂದಂ ‖೧೮‖

ವ‖ ಅಂತಳುಂಬಂ ಸೂಸಿ ರಾಶಿಯಾದ ಪೊಂಗಳನಾಭಕ್ತಂ ಕಂಡು ಕುತೂಹಲಮಾನಸಂ ತಂನಮನಂ ದಣಿವನಿತು ಪೊಂನಂತಂನವಪನದಿಂ ಮೊಟ್ಟೆಗಟ್ಟ ಸಡಗರಂಮಿಗೆ ಪೊತ್ತುಪೊರಲಾರ ದೆಡವೆಗಲ್ಗಂ ಬಲವೆ ಗಲ್ಗಂ ಪಚ್ಚಿಪಲ್ಲಟಿಸಿ ತಳೆದುದಡದಡಿಸುತೇಳ್ತಂದು ಬಸವನರಮನೆಯ ಮೊಗಸಾ ಲೆಯೊಳಿಳುಪಿ ಬಸವಳಿದು ಬಳಲ್ದು ಬಸವ ರಾಜನೆಡೆಗೇಳ್ತಂದುನಿಂದು ಕಲ ಕೇತದೇವನೆಂದುದುಮಂ ತಾನೆಂದುದುಮ ನಿನಿಸುಳಿಯದೆಲ್ಲಮನುಸಿರ್ದ್ದ ವನಿತ್ತಪೊನ್ನಪೊರೆಯಂ ಪೊರಲಾರೆ ನದಂ ಪೊರಲೋರ್ವನತಿಬಳನಪ್ಪಚರನಂ ಕೊಡುವುದೆಂದು ಬೇಡೆಬಸವಂ ಕೇಳ್ದು ಶಿರಮಂತೂಗಿ

ಮ‖ ವೃ‖ ಪಿರಿದುಂವಿಸ್ಮಿತನಾಗಿ ಕೋಡಿವನಕೈಯ್ಯೊಳ್ಪಿಂದುದಕ್ಕುಂ ಚರಾ | ಚರದೊಳ್ತಾನೆವದಾನ್ಯವರ್ಯ ನಿವನೇ ಸಾಮರ್ಥ್ಯಮಂ ಬಣ್ಣಿಸ ‖ ಲ್ಕುಠಗಾಧೀಶಸಹಸ್ರಮುಂನೆರೆಗುಮೀ ಭೂಭಾಗಸಾಕ್ಷಾನ್ಮಹೇ | ಶ್ವರನೀ ತಂ ಕಲಕೇತಬೊಮ್ಮನೆನುತಂ ಕೊಂಡಾಡಿದಂ ಕೂರ್ಮೆಯಿಂ ‖೧೯‖

ವ‖ ಅಂತುಕೊಂಡಾಡಿ ಮುದಂಬಡೆದಾಭಕ್ತಂಕೆ ಪೊನ್ನಪೊರೆಯಂ ಪೊರಲನುಚರನನಿತ್ತು ಕಳುಪಿ ಘಳಿಲನೇಳ್ದು ತದ್ದರ್ಶನೋತ್ಕಂಠೆಯಿಂ ವೃ ಷೇಂದ್ರಂಬಂದು ಕಲಕೇತದೇವನಂಕಂಡು ಸಾತ್ವಿಕಭಕ್ತಿಯಿಂಸಾಷ್ಟಾಂಗ ಮೆರಗಿ

ಕಂ‖ ಅಣಿಮಾದಿಸಿದ್ಧಿಪದಕಾ | ರಣಮಲ್ತೆ ಭವತ್ಪದಾಬ್ಜಮೆಲೆದೇ

ಪಗಣಾ ॥ ಗ್ರಣಿಭುವನತ್ರಿತಯಧೊಳಾ । ರೆಣೆವರ್ಪ್ಪರ್ನ್ನಿನಗೆನುಹಿಮೆಯೊ ಳ್ಪಿತರಣದೋಳ್ ॥೨೦॥

ವ॥ ಎಂದು ಪಲವಂದದಿಂಸನ್ನುತಿಗೆಯ್ದು ಕೃತಾಂಜಲಿಪುಟನಾಗಿರ್ದ ಬಸವನಾನನಬಿಸರುಹಮನಭೀಕ್ಷಿಸಿಮಂದಸ್ಮಿತಾಸ್ಯನಾಗಿ

ಉ॥ ವೃ॥ ಎನ್ನನಿದೇಕೆಬಂಣಿಪೆವೃಷಾಧಿಪ ನಿನ್ನಯಕಿನ್ನರೇಂದ್ರನಂ । ಸನ್ನುತಿವೆತ್ತು ಕಿನ್ನರಿಯ ಬಾಜಿಸಿಪೂಜಿಸಿ ನಿಚ್ಚನಿಚ್ಚಮುಂ ॥ ಪೊನ್ನನುಮೇ ಶನಿಂಪಡೆಯಲಾರ್ಪ್ಪನೆ ಮೇಣವನಂತೆವಿತ್ತ ಸುಂ । ಪನ್ನತೆಯುಂಟೆ ಪೇ ಳೆನಗೆಸುಮ್ಮನೆ ಪೇರ್ಮೆಯನುಂಟುಮಾಡುವೆಯ್ ॥೨೧॥

ಕಂ॥ ಸಿರಿಯುಂಪಡೆದರ್ಗಡಸೌಂ ॥ ದರಕಿನ್ನರರೀರ್ವ್ವರಭವನಂಭಜಿಸಿ ವಸುಂ ॥ ಧರೆಯೊಳಿವರಂತೆ ಭಕ್ತ್ರೋ । ತ್ಕರದೊಳ್ಪಿಸರ್ವೆತ್ತು ಪೇರ್ಮೆವ ಡೆದರುಮೊಳರೆ ॥೨೨॥

ಮೃಡನಂಘ್ರಿಪೂಜಿಯುದು ಕೈ । ಯ್ಯೊಡನೆಕರಂಫಲಿತಮಾಯ್ತು ಕಿನ್ನ ರಪತಿಗೀ ॥ ಪೊಡವಿಯೊಳದರಿಂ ದೃಸಿರಿ । ಪಡೆದಂ ಶಿವನಂಘ್ರಿಭಜನಮಿಂ ತಿರವೇಡ ॥೨೩॥

ಚ॥ ವೃ॥ ಉದಯದೊಳೇಳ್ದು ಬೈಗೆವರೆಗ ನ್ನೆಗಳ್ದಂ ಮಿಗೆತೊಳ್ತು ಕಜ್ಜಮಂ । ಮದನವಿರೋಧಿಯಿಂ ಪಡೆದುದಿಲ್ಲರೆವಾಗನು ನಾದೊಡಂ ಸ ಮಂ ॥ ತೊದವಿದ ಮದ್ದರಿದ್ರತೆಯಡಂಗಿದುದಿಲ್ಲ ಕಟಲ್ಪಧಾನ್ಯಮ । ಲ್ಲದೆಪೆ ರತಾವುದುಂದೊರೆಯ ದೆನ್ನಯಪೂಜೆನಿರರ್ಥಮುರ್ವಿಯೊಳ್ ॥೨೪॥

ಕಂ॥ ತ್ರೈಲೋಕ್ಯಪತಿಯನಭವನ । ನೋಲಗಿಸಿಯುಮಾಂದರಿದ್ರ ನಾಗಿರ್ಪ್ಪೆಂವೀ ॥ ಣಾಲಲಿತರವದಿಮೆಚ್ಚಿಸಿ । ಶೂಲಿಯನಾಕಿನ್ನರಂಕರಂಸಿ ರಿವಡೆದಂ ॥೨೫॥

ವ॥ ಎಂದು ಕಲಕೇತದೇವಂ ಕಟಕಿವಾತಂನುಡಿದು ಮತ್ತಮಿಂ ತೆಂದಂ

ಕಂ॥ ಹರನಂಕರೆದೋಯೆನಿಸಿದ । ಪರಿಯಂ ಕೇಳ್ದೆಳಸಿನೋಡಲ್ಪೈ ಯ್ದಿದಮಾಹೇ ॥ ಶ್ವರತತಿಯಪೂಜೆಗಾಕಿಂ । ನರಂಗೆಶಿವನಿತ್ತವಿತ್ತಮೇಂ ಸಾಲ್ದಪುದೆ ॥೨೬॥

ಮ॥ ವೃ॥ ಹರನಂಪೂಜಿಸಿ ಲಜ್ಜೆಗೆಟ್ಟೊರೆದು ಭಾಗ್ಯಂಗೊಳ್ವನಲ್ಲೈತ ಯಶಂ । ಕರದಾಸ್ಯೆಯ್ಯನಭೃತ್ಯ ನಾಂಬಸವ ತತ್ಪಾದಾಂಬುಜಧ್ಯಾಸ ನಿ ॥

ರ್ಭರ ಭಾವಂಮಿಗೆಮಾಳ್ಪಕಾಯಿಕದಿ ನಲ್ಪದ್ರವ್ಯಮುಂಟಿಂ ತದಂ । ತರ
ವೇಳ್ಕಿಂನರನಂಸಹಸ್ರಶಕಟವ್ರಾತಂಗಳಂಕೊಟ್ಟನೆಂ ॥೨೭॥

ವ॥ ಎಂದಾಶರಣವರೇಣ್ಯಂ ನಗೆನುತ್ತಂ ಕರತಳದಿಂ ಮೃತ್ತಿಕೆಯಂ
ಪಿಡಿಪಿಡಿದಾಡಲೊಡ ನನಿತುಂ ಸುವರ್ಣಮಯಮಾಗೆ ಕಂಡು ಬಸವಂಬಿಸ
ವಂದಂ ಬಡೆದುಕೀರ್ತಿಸುತ್ತಿರ್ಪನ ಮಿತ್ರರ್ಗಲ್ ಕಿನ್ನರೈಯ್ಯ ನದನೆಲ್ಲಮಂ
ಕೇಳ್ದು ಪಿರಿದುಭೀತಿತಾಳ್ದು ಪರಿತಂದು ಕಲಕೇತಬ್ರಹ್ಮದೇವ ನಡಿದಾವರೆ
ಯೊಳ್ಕೆಡೆದು

ಚಂ॥ ವೃ॥ ಶರಧಿಯಮುಂದೆ ಪಲ್ವಲದಪೇರ್ಮೆಯೆಸಿಹ್ಮದಮುಂದೆ
ಪುಲ್ಲಿಯ । ಳ್ತರಮೆ ಸುರಾವನೀರುಹದಮುಂದೆ ಕರಂಜದಕೊರ್ವೆ ಚಾರು
ಚಂ ॥ ಡರುಚಿಯುಮುಂ ಮಿಾಂಬುಳುವಿನೇಳ್ಗೆಯೆಸತ್ವಮಹತ್ವಸಾರಭಾ ।
ಸುರತರನಿನ್ನಮುಂದೆನೆಗಳ್ದಿನ್ನಯತೇಜಮೆ ಪೇಳ್ದಯಾಕರ ॥೨೮॥

ವ॥ ಎಂದುಕಿಂಕರತೆಯ ನಪ್ಪುಗೆಯ್ದಿರಗಿರ್ದ ಕಿನ್ನರೈಯನಂ ಕಾರು
ಣ್ಯದಿಂ ನೋಡಿತೆಗೆದುಬಿಗಿಯಪ್ಪಿಮನ್ನಿಸಿ

ಕಂ॥ ಸಿರುಪಾಧಿನಿಷ್ಪ್ರಪಂಚ । ಸ್ಥಿರಭಕ್ತಿಯ ಕೀಲನುಸುದುರ್ಗ
ಲಿಂಗಾಂಗಪರಿ ॥ ಸ್ಫುರಿತಸುಯೋಗದಮರ್ಮವ । ನೊರೆ ದಳವಡಿಸುತ್ತೆ
ಕಿನ್ನರೈಯ್ಯಂಗಾಗಳ್ ॥೨೯॥

ಚ॥ ವೃ॥ ಕರೆದೊಡಗೊಂಡುಪೋಗಿ ನಿಜಮಂದಿರದೊಳ್ ಶಿವಪೂಜ
ಗೆಯ್ಸಿಭಾ । ಸುರಪರಮಪ್ರಸಾದ ಪರಿತುಷ್ಟಿಯನಾಗಿಸಿ ದಿವ್ಯಭೂಷಣಾಂ॥
ಬರತತಿಯಿಂದಲಂಕಲರಿಸಿ ಸತ್ಕ್ರಿಯೆಯನ್ನೆಗಳ್ದಾ ಮಹಾತ್ಮನಾ । ದರಿಸು
ತೆಕಿನ್ನರೇಂದ್ರವೃಷಭಾಧಿಪರಂ ಕಳುಪುತ್ತೆಲೀಲೆಯಿಂ ॥೩೦॥

ಕಂ॥ ಎಂದಿನತೆರದಿಂ ಮಹಿಮೆಯ । ನಂದಂದಿಂಗಿಳೆಯೊಳೊಲ್ದು
ಬೀರುತೆ ಪರಮಾ ॥ ನಂದಮಿಗೆ ಭಜಿಸುತೆಚರ । ವೃಂದವ ನೊಪ್ಪಿರ್ದನ
ಲ್ಲಿಕಲಕೇತಾರ್ಯಂ ॥೩೧॥

ಕಲಕೇತಬೊಮ್ಮದೇವನ । ವಿಲಸತ್ಕಥೆಯಂ ಬಿಳಾಸಮಮದೊರ್ಗ
ದೆಮನಂ ॥ ನಲಿದೊಡನೆಕೇಳೆಮನುಜಾ । ವಲಿ ಶಂಕರನೀವ ನಭಿಮತೇಷ್ಟ
ಮನನಿಶಂ .... ॥೩೨॥

ಮ॥ ಸ್ರ॥ ವೃ॥ ಪದಪಿಂದಂ ಕಿನ್ನರಾರ್ಯಂಗೆರಗಿ ಕಳುಪುತಂ ತನ್ನಿಶಾಂ
ತಕ್ಕೆ ಕೈಗ । ಣ್ಮದನಣ್ಪೇತನ್ಮಹತ್ವಸ್ಥಿತಿಯೆನುಕೆ ನಿಜಸ್ವಾಂತದೊಳ್ಭಾವಿಸು

ತ್ತಂ || ಮುದದಿಂಕೊಂಡಾಡುತಂಭಕ್ತರೊಳಿತಳದುಶುದ್ಧಾಂತ್ರಮನುಂಪೊಕ್ಕು
ಭಕ್ತ್ಯಾ | ಘದಭಾಗ್ಯಂ ರೂಪುಗೊಂಡಂತೆಸೆದ ನೆಭವಪೂಜಾವಿತಂದ್ರಂ

ಲಲಿತಪದವೃತ್ತ|| ಕ್ಷೋಣಿಜನರಕ್ಷಣಧುರೀಣಖಲದುರ್ಮದಕರೇಣುನಿ
ಶಿತಾಂಕುಳಸದೇಣಧರಲಕ್ಷ್ಮಾ | ಪ್ರಾಣಸುರವಂದ್ಯಪದಶೋಣಸರಸೀರು
ಹವಿಷಾಣದಳಿತಾಸುರಸವೀಣಮುನಿನುತ್ಯಾ || ಪ್ರೀಣಿತಮಹಾಗಣಪುರಾ
ಣಪರಿಸನ್ನುತಪ್ಪ ತಾಣವಕಲಂಕಸುಮಬಾಣಮದಭಂಗಾ | ಕ್ಷೀಣಬಲರಕ್ಷಿ
ಪುದುಪಾಣಿನಿಕಣಾದಸುತವಾಣಿವರದಾಭಯುದಪಾಣಿಬಸವೇಶಾ ||೩೪||

ಲಲಿತಪದವೃತ್ತ|| ದಂಡಧರಬಾಧಿ ತಮ್ಮಕಂದುಭವದಕ್ಷಪರಿಪಾಂಡು
ದಕಳೇವರಸಿಚಂಡಭೃತವಿದ್ಯಾ | ಜಾಂಡಘನಕುಂಡಲಿಪಕುಂಡಲಮುಸೋ
ಜ್ಞ ತತತಾಂಡವನ್ನೃಡಪ್ರಯುತಚಂಡಗಣನ್ನತಾ || ಪಂಡಿತಜಾನಾಂಬುರು
ಹಷಂಡಮುದದೃಪ್ತರಿಪುಖಂಡನಜಗದ್ಭರಣಶೌಂಡನಿವಿಲಾಶಾ | ಖಂಡಿತಸು
ಕೀರ್ತಿಮಹಿಮಂಡಲಮಹೇಶಪ್ರೋರಿಮಾಡಿತ ಮಹಾಗುಣಕರಂಡಬಸವೇಶಾ||

ತೋಟಕವೃತ್ತಂ || ಮುರಶಾಸನವಾಗ್ವರವಾಸವಭಾ | ಸುರಮೌ
ಳಿವಿರಾಜಿತಪಾದಯುಗೇ || ಪರಮೇಶ್ವರಪಾವನರೂಪಿಣಿನೀಂ | ಪೊರೆಯೆ
ನ್ನನಿಳಾಧರರಾಜಸುತೇ || .... , ... ||೩೬||

ಗದ್ಯ|| ಇದು ವಿನಮದಖಿಳಸು ರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ
ಪರಮಶಿವಲಿಂಗ ಪಾದಾರವಿಂದ ಪರಾಗ ಭಸಿತ ಭಾಸುರ
ಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರ ದೇವಭಕ್ತಿವಿರಚಿತ ಶ್ರೀಮದ್ವೃಸವರಾಜ
ವಿಜಯ ಮಹಾಪುರಾಣದೊಳ್ ಕಲಕೇತಬ್ರಹ್ಮ
ವೈಭವವರ್ಣನಮಷ್ಟಾದಶಾಶ್ವಾಸಂ
ಪರಿಸಮಾಪ್ತಂ.

ಮೋಳಿಗೆ ಮಾರ್ಯ್ಯನ ಕಥೆ.

ನಾಂದಿ|| ಲಲಿತಪದವೃತ್ತಂ || ಸತ್ಯಮಯವಾಕ್ಯಶುಭಕೃತ್ಯಚರಲಿಂಗೆಪದಭೃತ್ಯನಿಗಮಾಗಮ ವಿನುತ್ಯಮಹಿಮಾಂಕಾ | ಮಾತ್ಯಕುಲಶೇಖರವಿಭೂತ್ಯಧಿಕಭಕ್ತಹಿತದೈತ್ಯಕುಲವಿಸ್ಫುಟಿತಚೈತ್ಯಗೃಹವೃಂದಾ || ಶ್ವೈತ್ಯರುಚಿರಾಂಗಶಿತನುತ್ಯನಘನಪದ್ಮಭವಸೂತ್ಯನಿಸಿಗೇಯತತದೈತ್ಯಮದಭಂಗಾ | ದಿತ್ಯಶತದೀಪ್ತಿಯುತಯತ್ಯಮಳ ಚಿತ್ತಮಣಿಭಿತ್ಯನುಗಬಿಂಬಪೊರೆನಿತ್ಯಬಸವೇಶಾ ||

ಲಲಿತಪದವೃತ್ತಂ || ಪಾರ್ಥಿವಸಮರ್ಚಿತಚತುರ್ಥಮಹನೀಯ್ಯಪುರುಷಾರ್ಥದಪವಿತ್ರಿತಸುತೀರ್ಥಪದಧೂತಾ | ಸರ್ಥಮತರಂಜಿತಸದರ್ಥಪರಮಾಗಮಪರಾರ್ಥಪರಿಪಾಲನಕೃತಾರ್ಥಿಜನಪಕ್ಷಾ || ಪಾರ್ಥಪಟುಕೋಪದಕದರ್ಥನಖಿಲಾಹಿತ ಸದಾರ್ಥಿತಗಣೋತ್ಸವಸದರ್ಥಿಜನದಾಸಂ | ಪ್ರಾರ್ಥಿತಸುರದ್ರು ಪೊರೆಸಾರ್ಥ ನಿಗಮಸ್ತುತಸಮರ್ಥಿತ ಮಹಾವ್ರತಸಮರ್ಥಬಸವೇಶಾ ||

ಕಂ|| ಶ್ರೀಕರಹಿಮಾದ್ರಿತನಯಾ | ಲೋಕನರುಚಿಚಂದನಚ್ಛಟಾಲಿಪ್ತಾಂಗಂ || ಸ್ವೀಕೃತನಿಗಮಂಪಾಲಿತ | ಲೋಕಂಪೊರೆಗೆಮ್ಮ ನಾವಗಂ ಶಿವಲಿಂಗಂ || .... ||೧||

ವ|| ಮತ್ತಮಾ ಕಲ್ಯಾಣಸಂಪದಂ ಚಿತ್ತಕಲ್ಯಾಣ ಪುರದಲ್ಲಿ ||

ಮ || ವೃ || ಶರಣೇಚ್ಛಾಪರಿಪಾಲಕಂ ವಿಧಿನಿಷೇಧಾತೀತವೃತ್ತಂ ಶುಭಾ | ಕರಸೌಶೀಲ್ಯಸಮನ್ವಿತಂ ವಿಮಳಚಿತ್ತಂ ಷಟ್‌ಸ್ಥಲಜ್ಞಾನತ || ತ್ಪರ ಸುದ್ಧೂತದುರೀಷಣಂ ದುರಿತದೂರಂ ಪ್ರಾಣಲಿಂಗೈಕ್ಯಭಾ | ಸುರ ನತ್ಯಂತವಿಶುದ್ಧಕೀರ್ತಿ ಚರಪಾದಾಂಭೋಜಪೂಜೋತ್ಸವಂ || ||೨||

ಕಂ|| ಜಿತರಿಪುಷಡ್ವರ್ಗ ನಪಾ | ಕೃತಭವಿಸಂಸರ್ಗ ನಮಳಗುಣಭೂಷಣ ನ || ರ್ಥಿತಮಾಯಾಮಯ ಸುರರೀ | ಕೃತ ಸುವ್ರತ ಸಪ್ರತರ್ಕ್ಯ ಮಹಿಮಾಧಾರಂ || .... ||೩||

ಉ|| ವೃ|| ಏಳಿಸಿಬೋಗಪ್ಪೊಗಪಸು ರಾಗಮ ನುದ್ಗ ಶಿವಾನುಭಾವದೊ | ಳ್ಮೇಳಿಸಿ ಚಿತ್ತಮಂ ನಿಜಪದಾನತರಂ ಶಿವಭಕ್ತಿಭಾಗ್ಯದೋ || ಳ್ಬಾ

ಳಿಸಿ ಕರ್ಪೂರವಾಸನೆ ತೀಡಂಕದಪಾಂಗನಮುಚ್ಚರ್ತಾಗಳುಂ | ಮೋಳಿಗೆಮಾ
ರಸೀಶ್ವರಕುಮಾರ ಸಪಾಕೃತಸಾರನೊಪ್ಪಿದಂ ||೪||

ಚಂ|| ಅನುದಿನಮುಗ್ರಕಾನನಕೆಪೋಗಿ ಕುಠಾರದಿ ನಿಂಧನಂಗಳಂ |
ಮನದೊಲಬಿಂದೆ ತಾಂ ಕಿರಿದುಬಲ್ಪೊರೆಗಟ್ಟಿಪೊದಳ್ದು ಪೊತ್ತುನೆ || ಟ್ಟನೆ ತ
ರುತಲ್ಲಿಮಾರಿ ದೊರೆದರ್ಥದಿ ಜಂಗಮಕೋಟಿಬಂದೊಡಂ | ಘನಮಹಿಮಂ
ಸುತೃಪ್ತಿಯನೊಡರ್ಚುತೆ ಮೋಳಿಗೆಮಾರನಿರ್ಪಿನಂ ||೫||

ಕಂ|| ಬಸವಗೃಹದಿವ್ಯಭೋಜನ | ವಿಸರದಿ ಸುರಿತಣಿಯ ದೆಯ್ದಿ ಜಗ
ಗಮುನಿವಹಂ || ಮಿಸುಪಂಬಳಕಮನಾರೋ | ಗಿಸಿತಣಿಗುಂ ಮಾರದೇವನಿಲ
ಯದೊಳನಿಶಂ ||೬||

ವ|| ಅಂತಾರೋಗಿಸಿದ ಚರಲಿಂಗನಿಕರಮೊಂದುದಿನಂ ಬಸವನಗೃಹ
ಕ್ಕೇಳ್ತಂದು ತಮ್ಮ ಪಾರವಿಂದಮನಭೀಕ್ಷಿಸಿ

ಚ|| ಎಲೆಬಸವೇಶ ನಿನ್ನಗೃಹದೊಳ್ಸಮೆದಿರ್ಪ ನವೀನಸಾರಮಂ | ಜು
ಲಕರಷಡ್ರಸಾನ್ನತತಿನೋಳ್ಪೊಡೆ ಮೋಳಿಗೆಮಾರದೇವನಾ || ನಿಲಯದೊ
ಳಿಂಬುವೆತ್ತು ಮಿಸುಪಂಬಕಳಕ್ಕೆಣೆಪಾರದಾಪಗಂ | ನಲಿವದನುಂಡ ಮದ್ರ
ಸನೆಗಸ್ವರಸಂ ವಿರಸಂ ಧರಿತ್ರಿಯೊಳ್ ||೭||

ವ|| ಎಂದುಮತ್ತಮಿರದೆ

ಚ|| ವೃ|| ಅನದಿನಮಾತ್ಮಕಾಯಕದಿನೋರ್ಕೊಳಗೆಂಬರೆ ಬತ್ತಮಂ
ತಮಂ | ಮನೆಗಿರದೊಲ್ದು ತಂದದರಿನಚ್ಚರಿವೆತ್ತೆನಿತಲ್ಲಿಬಂದೊಡಂ || ಘನಚ
ರವೃಂದಮಂ ತಣಿಪುಗುಂ ನೆಗಳ್ದಾತನಭಕ್ತಿಯುಂದಮಂ | ಮನಸಿಜವೈರಿ
ಯೋರ್ವನರಿವಂ ಪೊಗಳಲ್ಪಿರರೇಂಸಮರ್ಥರೆ ||೮||

ವ|| ಎಂದು ಮಗುಳ್ದು ಮಗುಳ್ದುಬಗೆವೆರ್ಚೆ ಪೊಗಳ್ವಿನಂ ಬಸವಂ
ಕೇಳ್ದು ವಿಸ್ಮಯಾಂತಃಕರಣನಾಗಿ ತದ್ಭಕ್ತನಂ ನೋಡಲೆಳಸಿ ಗುಪ್ತಾಕಾರ
ದಿಂ ಸಲ್ಲೀಲೆಯಿಂ ಮೆಲ್ಲನೇಳ್ತಂದವನಂಗಣಮಂ ಪೊಗುತಂದು ಮಾರದೇ
ವನ ರಾಣಿಯುಂಕಂಡು ಭಕ್ತಿಯಿಂ ಶರಣೆಂದುಕರಾರವಿಂದಮಂ ಮುಗಿಯ
ಲೊಡನೆ ||

ಕಂ|| ಶರಣೆಂದು ಮಗುಳ್ದು ಭಾಮಿನಿ | ಭರದಿಂದಂತಂದು ಪಾದ್ಯಜ
ಲಕಲಶಮನಾ || ವರದಿಂದೀಳ್ದು ಕೊಳುತ್ತಂ | ಕರದಿಂಪಡಿಮೊಳೆಯುತೆ
ಯ್ದಿದಂ ತದ್ಗೃಹಮಂ .... ||೯||

ವ|| ಅಂತೆಯ್ದಿ ಸಲ್ಲೀಲೆಯಿಂಗೆ ಮೆಲ್ಪಸೆಯೊಳ್ಕುಳ್ಳಿರ್ದು ಲಿಂಗಾರ್ಚನಂ ಗೈದನಂತರಂ ||

ಮ|| ಸ್ರ|| ವೃ|| ಪಸಿವಾದತ್ತಿಮ್ಮ ದೇವರ್ಗೆಲೆಜನನಿ ಧಿವದ್ಗೇಹದಲ್ಲಿರ್ದಪೊಲ್ಪಂ | ತಸದಿಂ ನೈವೇದ್ಯಮಂ ನೀಂಗಡಣಿಸೆನೆ ಮುದಂಬೆತ್ತು ತತ್ಕಾಂತೆಯಾರೋ || ಗಿಸಲಿತ್ತಾಹಾರಮಂ ತಾಂಸವಿಸುತೆ ನಿಜಲಿಂಗಕ್ಕೆ ಮೇಣಚ್ಚಪೊಂಗಳ್ | ದ್ವಿಸಹಸ್ರಂದೀವಿದೊಳ್ಗಾಳಿಗೆಗಳನೆರಡಂ ತಳ್ವದೊಳ್ಪಿಂದಮಾಗಳ್ .... ||೧೦||

ಕಂ|| ತೆಗೆದಾರುಂ ಕಾಣದವೊಲ್ | ಸೊಗೆಯಿಪ ಮಜ್ಜನದಪಾತ್ರೆ ಮುಡಿಯೊಳಲಂಪಿಂ || ಸುಗುಣಾಭರಣಂ ಬಸವಂ | ಮಿಗೆಬೈತಿಡುತೇಳ್ದು ಜನನಿಶರಣೆನುತಾಗಳ್ .... ||೧೧||

ಮ|| ವೃ|| ಪೊರಮಟ್ಟಂಗಣಕೆಯ್ದಿ ನಿಂದುಗೃಹಮಂ ನೋಡುತ್ತೆ ಮೆಯ್ಯಾವೃತ | ಳ್ಕರೊಳಾನಂದಿಸಿ ನೋಳ್ಪೊಡಿಂತಿದು ಮಹಾಮೋಹಾಂಧಕಾರಕ್ಕೆನೇ || ಸರಬಿಂಬಂ ಪರಮುಕ್ತಿ ಭಾಮಿನಿಗೆ ಜನ್ಮಸ್ಥಾನಮುನ್ಮೀನಮಾ | ವರನೆಂದುಂ ನೆಲೆಗೊಂಡತಾಣಮಿದು ಜನ್ಮಾಂಭೋದ ಜಂಝಾನಿಲಂ ||

ವ|| ಎಂದು ಭಕ್ತಮಂದಿರಮಂ ಪೊಗಳ್ದು ಮತ್ತಮಿರದೇ ||

ಮ|| ಸ್ರ|| ವೃ|| ಇದನಾವಂನೋಳ್ಪನಾಮಾನವನದುರಿತಮುಳ್ಳಾಡದೇನಿರ್ಕುಮೋ ಮೇ | ಣಿದನಾವಂಸಾರ್ವನೊಲ್ದಾನರನಘನಸುಖಂಸಾರದೇಂಪೋಕುಮೋ ಮ || ತ್ತಿದನಾವಂಬಂಣಿಪಂತಳ್ತವನನುರುಕಳಾಸಂಪದಂ ಪೊರ್ದದೇಂಮಾಂ | ಣ್ಬುದೆ ಬಂದೀಗೇಹದನ್ನಂಬಡೆದಮನುಜನೇನಾಗನೇಬಂಧಮುಕ್ತಂ .... ||೧೩||

ವ|| ಎಂದು ಬಸವರಾಜಂ ಭಕ್ತಿಯಿಂ ಕೀರ್ತಿಸುತ್ತ ನಿಜಗೃಹಮನೆಯ್ದಿದನಾಪ್ರಸ್ತಾವದೊಳ್ ||

ಉ|| ವೃ|| ನೇಸರಬಿಂಬಮುಂಬರದ ಮಧ್ಯಮನೆಯ್ದಿದಪೊಳ್ತಿನೋಳ್ಪನುಂ | ಲ್ಲಾಸದಿಪೊತ್ತುಬಿಣ್ಪೆನಡುಗರ್ಬಿನಬಲ್ಪರೆಯಿಂಗಿರೀಂದ್ರಕ || ನ್ಯಾಸಹಚಾರಿಯಂನೆನೆವುತಂನೆನೆವುತ್ತೆ ಸುಖಾಶ್ರುವಿನ್ನಿಜಾ | ವಾಸಮನೆಯ್ತೆ ನಿಂದಿಳುವು ತಿಂಥನಭಾರಮನಲ್ಲಿಮಾರಯುಂ ||೧೪||

ಚಂ|| ನಿಜವಧುವಂ ಪ್ರಿಯಂತೊಳೆಯೆ ಬಂದೊಳಪೊಕ್ಕು ಪೊವಳ್ದ ಭಕ್ತಿಯಿಂ | ಸುಜನವರೇಣ್ಯ ನರ್ಚಿಸಿತರಪ್ರಜಮಂ ಶಿವಲಿಂಗಮೂರ್ತಿಯಂ

ಭಜಿಯಿಪವೇಳೆಯೊಳ್ಮಿಸುಪ ಪೊಂಗಳಜಾಳಿಗೆಗೆಂಡು ಬಂದರಾ | ಭುಜಗೆ ಧರೈಕಭಕ್ತ ರಣಮೆಲ್ಲಿಯುವೀಪೊಸಪೊನ್ನ ನೀವಿಗಳ್ ||೧೫||

ವ|| ಎಂದು ವಲ್ಲಭೆಯಂ ಬೆಸಗೊಳಲೊಡನೆ ||

ಕಂ|| ಆನರಿಯೆನವನಕುರುಪಂ| ಭೂನುತಕೇಳೊರ್ವನೆಯ್ದಿ ಭಕ್ತಂ ನೆಗಳ್ದೀ ॥ ಸ್ನಾನದೊಳೆಲಿಂಗಪೂಜೆಯ | ಸಾನಂದದಿ ನೆಸಗಿತಳರ್ದನೆಂದವಳೆಂದಳ್ ||೧೬||

ವ|| ಎಂದ ವಲ್ಲಭೆಯುಸೊಲ್ಲಂನೋಳಗೆ ಮಾರದೇವಂಕೇಳ್ದು ಬಂದವಂಬಸವನೆಂದು ನಿಜಾಂತರಂಗದೊಳ್ನಿರ್ಧರಿಸಿ ||

ಉ|| ವೃ|| ಮಂದಿರಕಿಂದುಬಂದು ಪದೆದಿಂತು ಶಿವಾರ್ಚನೆಗೆಯ್ದು ಪೋದನಾ | ರೆಂದೆನವೇಡ ತಾನೆಬಸವಂ ಸತಿಸಂದೆಗಮೇ ದರಿದ್ರಭಾ || ವಂದಳೆದಿರ್ದ ಭಕ್ತತತಿಗರ್ಥಮನೀಯಲುಮೊಪಲುಂ ಸಮ | ರ್ಥಂದಿಟತವತನಲ್ಲದಿಳೆಯೊಳ್ಪೆರನಾವನೊನೋಡೆನಾಡೆಯುಂ ||೧೭||

ಮ|| ಬಹುಪುಣ್ಯಾಧಿಕರಾದ ಭಾಗ್ಯನಿಧಿಗಳ್ದಾರಿದ್ರ್ಯದಿಂನೋವರಂ| ಮಹಿಯೊಳ್ಪಾಲಿಪುದೇಂವಿಚಿತ್ರಮೊ ಮಹಾಭಾಗ್ಯಾಧಿಕಂ ತಾಂಗಡೀ || ಸಹಜಾತ್ಯಂತ ದರಿದ್ರಭಾವಹತರಾದೆಮ್ಮಂಕರಂ ಸತ್ಕೃಪಾ | ಮಹಿತಂ ನೊಡಿವೃಷೇಂದ್ರನಿತ್ತುತಳರ್ದಂದಾನೋನ್ನತಂಪೊಂಗಳಂ ||೧೮||

ಕಂ || ಕೇಳವಿಪೆಂಳದೆ ಪೊಸಪೊಂ | ಜಾಳಿಗೆಗಳ ನಿಂತುಟರಿಸಿಪೋದಂಬಸವಂ || ಪೇಳವನಲ್ಲದೆ ಘನಕರು | ಣಾಳುಕರಂ ದಾನಿಯಾವನೀವಸುಮತಿಯೊಳ್ .... ||೧೯||

ಕಂ|| ನುಡಿಯುಲರಿದಾದ ಬಡತನ | ಮೆದೆಗೊಂಡಿರ್ದೆಮ್ಮೊಳಲ್ಲದಾರೊಳ್ಮರೆವಂ | ಕಡುಬಾಗಿತನದ ತನ್ನಯ | ಬೆಡಗ ನೀಬಸವನಮನು ದಾನನಿದಾನಂ .... ||೨೦||

ಕಂ|| ದೊರೆಗುಮೆಮಗೆಮ್ಮಲಿಂಗಂ| ಕರುಣಿಸುತೊಲ್ದಿತ್ತಕಾಯಿಕದಿನರ್ಥಸಮು || ತ್ಕರಮಿಂತುಟಪ್ಪಪೇರ್ಮೆಯ | ಪರಿಯುಂತಾಂಬಲ್ಲನಲ್ಲದಾನೆತ್ತರಿವೆಂ .... ||೨೧||

ವ || ಎಂದು ವಿಡಂಬನಂಗೆಯ್ದರಳ್ಪೊಂಜಾಳಿಗೆಗಳನೀರ್ವರ್ಮಾಹೇಶ್ವರರ್ಗ್ಗಿತ್ತುಮುಣಿದು ಮತ್ತಮಿರದೇ ||

ಮ|| ವೃ|| ಅದನೇಪೇಳ್ವುದೊವೋಳಗಯ್ಯನ ಮಹಾಮಾಹಾತ್ಮ್ಯ

ಮಂ ಜಂಗಮಾ | ಘದಪಾದಂದೊಳೆದಂಬುವಂತ್ತಳೆದು ಕಾಷ್ಟವ್ರಾತಮ
ನ್ನೊಳ್ಪುದುಂ || ಪದೆದೆತ್ತಂಜವದಿಂ ಸುವರ್ಣಮಯಮಾದತ್ತಂ ತದಂ ಖಂ
ಡಿಸು | ತ್ತೊದವದ್ದಳ್ಕರಿನಿತ್ತನೆಂದು ಚರಸಂದೋಹಕ್ಕೆಭಕ್ತೋತ್ತಮಂ||

ವ|| ಅಂತು ಥಳಥಳಿಸಿ ಪೊಳೆವಕನಕಕಾಷ್ಟಂಗಳಂ ಕಡಿಕಡಿದು ಸಾ
ಸಿರಪೊನ್ನತೂಕದಕಡಿಗಳಂ ಸಮರ್ಪಿಸೆ ಕೈಕೊಂಡು ಕೊನೆದು ಕೊಂಡಾಡಿ
ಜಂಗಮಸಮೂಹಂ ಬಸವನರಮನೆಗೇಳ್ತಂದು ಸಡಗರಿಸುತ್ತಮಾಭಕ್ತನ
ಮಹಿಮೆಯಂ ಪಸರಿಸುತಾ ತನೆಸಗಿದಂದಮನೊರೆದೊರೆದು ಮಗುಳ್ದು ಕೀ
ರ್ತಿಸುತ್ತಮೆರೆ ಬಸವಂಕೇಳ್ದು ಭೀತಿಗೊಂಡು ಬೆರಗುವಟ್ಟು ವೇಗದಿಂಮಾ
ರಿದೇವನೆಡೆಗೇಳ್ತಂದು ಶರಣೆಂದು ಸಾಷ್ಟಾಂಗಮೆರಗಿ ಕಿಂಕರತೆಯಸಪ್ಪುಗೆ
ಯ್ದು ಕಾರ್ಪಣ್ಯಂದೋರಿ ಕರಾರವಿಂದಮಂ ಮುಗಿದುನಿಂದು ||

ಕಂ|| ಶರಣಾಗತಾರ್ತಿಹರಶಂ | ಕರರೂಪತರಣ್ಯ ಶಾಂತಿಭೂಷಣ ಮ
ಹಿಮಾ || ಕರ ತತ್ವಾರ್ಥಪ್ರದ ಶುಭ | ಕರ ರಕ್ಷಿಪುದೆನ್ನನೆಂದು ಬಸವಂ
ಪೊಗಳ್ದಂ .... ||೨೩||

ವ|| ಅಂತು ತನ್ನನುತಿಗೆಯ್ವ ಬಸವರಸನಂ ಮಾರಿದೇವನಭೀಕ್ಷಿಸಿ ||

ಕಂ|| ಕಡುಸಿರಿವಡೆದ ವದಾನ್ಯಂ | ಬಡವನನಿಂತೇಕೆಪೊಗಳ್ದಪಯ್ನೀ
ನೆನ್ನಂ || ಪೊಡವಿಯೊಳಿದುಯುಕ್ತಮೆಪೇಳ್ | ಬಿಡದರ್ಥಿಗಳಂವದಾನ್ಯ
ರೇಂಪೊಗಳ್ದಪರೆ .... ||೨೪||

ಕಂ|| ಮುನ್ನೆಂದುಮರಿಯದೀಪೊಸ | ಪೊನ್ನೊಪ್ಪವಜಾಳಿಗೆಗಳ ನೀ
ಗಾನರಿದೆಂ || ನಿನ್ನಯಕೃಪೆಯಿಂ ಬಡತನ | ಮನ್ನೀಗಿದೆನೆನಗೆ ನೀನೆಮಾ
ನ್ಯವದಾನ್ಯ .... ||೨೫||

ಮ|| ವೃ|| ಅತಿದಾರಿದ್ರ್ಯದೊಳಿರ್ಪ ನೀಬಣಗುಳಿಕ್ತಂ ಮಾಣದಿಂದೆ
ಯ್ದಿ ಸಂ | ನ್ನುತಕಾರುಣ್ಯದಿ ಪೊನ್ನಜಾಳಿಗೆಗಳಂ ತಂದಿತ್ತೆನಿನ್ನಂತಿ ರಾ ||
ಪ್ತತಮರ್ಪೇಳೆನಗಾರೊಧಾತ್ರಿಯೊಳೆ ನಿನ್ನಂಪೋಲ್ವನಾವಂ ವದಾ | ನ್ಯತೆ
ಯೊಳ್ಪೀನೊಸೆದೀಯ್ವುದಂದು ಬಡವರ್ಗಾರೀವರರ್ಥಂಗಳಿಂ ||೨೬||

ಕಂ|| ಕೋಡಮುದುನಿನ್ನಶಿರದೊಳ್ | ಮೂಡಿದುದೆಲೆಬಸವ ಬಡವ
ರಿರ್ದೆಡೆಗೆಮುದಂ || ಗೂಡಿಗೆಮಿಸುತ್ತೆಧನಮಂ | ನೀಡುವೆ ನಿನಗೆಣೆಯೆ
ಸುರರಮುರನುಂಮಣಿಯುಂ .... ||೨೭||

ಮ|| ವೃ|| ಎನಗಿತ್ತಂತೆವೊಲಾರ್ಗೆಕೊಟ್ಟೆಧನಮಂ ಭಕ್ತರ್ಗೆಪೇ

ಳ್ಮಾಚಿದೇ । ವಸ ಕಟ್ಟಳ್ಕರಪಾತ್ರಸಾಂ ಬಿಡದಿರ್ನಿನ್ನೊಳ್ಮಾಣದಿಂತ್ರಪ್ಪಸ ॥ ದ್ಭನಕಾರುಣ್ಯಮಸಯ್ಯನೀಂಪಿರಿದುಭಾಗ್ಯಂಬೆತ್ತಪಂನಿನ್ನಕೂ। ರ್ಚನಪಾಂಗಪ್ರಭೆಯೆನ್ನಮೇಲಿರೆ ನಿತಾಂತಂಭಾಗ್ಯದಿಂಬಾಳ್ದಪೆಂ ॥೨೮॥

ವ॥ ಎಂದು ಪೊೞಿಗೈಯ್ಯದಾಳವಾಡಿನುಡಿಯೆ ಬಸವಂ ಭಯಂಬಡೆದಂತಂತೆಕಂಪಿಸಿ ಬೆಮರ್ತು ಬೆಬ್ಬಳಿಪ್ರೋಗಿ

ಕಂ॥ ಗಾವಿಲ ನೊಳಧಮನೋಳ್ಗ । ರ್ವಾವಿಲನೊಳ್ಖಲನೊಳಳಿಪನೊಳ್ದುರ್ಜನದೋ ॥ ಷಾನ್ವಿತನೊಳೆನ್ನೊಳಮಳಗು । ಣಾವಳಿಯುಂದೇವನೋೞ್ಪುದೇಘನಮಹಿಮಾ .... ॥೨೯॥

ಉ॥ ವೃ॥ ಸಿದ್ಧರಸಂಪರೀಕ್ಷಿಪುದೆ ಲೋಹದದುರ್ಗುಣಮಂ ಸುವರ್ಣಭಾ । ಸ್ವದ್ಧರಣೀಧರಂ ಬಗೆವುದೇ ಮಿಗೆಕಾಗೆಯದುಷ್ಟವೃತ್ತಿಯಂ ॥ ಶುದ್ಧತರಪ್ರಕಾಶಮತಿನೀಂಬಿಡದೆಂನೊಳನೇಕದೋಷ ಸಂ। ಬದ್ಧನೊಳೊಳ್ಪನೀಕ್ಷಿಪುದೆ ಪೊೞಿಗೆಮಾರಮಹಾಕೃಪಾಕರಾ .... ॥೩೦॥

ಚಂ॥ ಕಲರವಮುಂಟೆ ದರ್ದುರದೊಳಂಬಿಲದೊಳ್ನವನೀತಮುಂಟೆಸತ್ಫಲತತಿಯುಂಟೆ ಶಾಲ್ಮಲಿಯೊಳಿಂಗಳ ರಾಶಿಯೊಳುಂಟೆ ತಂಪುಕ ॥ ಜ್ಜಲದೊಳಮುಂಟೆ ಶುಭ್ರತೆಪಲಾಂಡುವೊಳುಂಟೆ ಪಟೀರಸೌರಭಂ । ಜಲರುಹಮುಂಟೆಕುಂಪಟೆಯೊಳೆನ್ನೊಳೆ ಸದ್ಗುಣಮುಂಟೆಧಾತ್ರಿಯೊಳ್ ॥೩೧॥

ಕಂ॥ ಪಸಿದಂಪ್ರಭುವೆಂದಾಳೋ । ಚಿಸಿ ತಣಿಪರ್ ಬಗೆದೆನ್ನಯ್ಯಮುನ್ನಂನಿನ್ನಂ ॥ ವಸುರಹಿತನೆಂದುನೆನೆದೆಂ । ವಸುಧೆಯೊಳಿಂದೆನ್ನಪ್ರೊಲ್ವಗಾಂಪರುಮೊಳರೆ .... ॥೩೨॥

ಗತಿಯುಂಮತಿಯುಂಹಿತನುಂ । ಪಿತನುಂಗುರುಸಂಗಮೇಶನುಂ ನೀನೆಸಗೆ ॥ ನ್ನತಿಶಯಕತಾಪರಾಧಮ । ನತರ್ಕ್ಯಮಹಿಮಾಬ್ಧಮರೆದುಪಾಲಿಪುದೆನ್ನಂ .... ॥೩೩॥

ವ॥ ಎಂದಭಯಮಂಬೇಡಿಭಯಭಕ್ತಿಯಿಂದಡಿಗೆರಗಿರ್ದ ಬಸವನಂ ಮಾರಿದೇವಂ ಕಾರುಣ್ಯದಿಂನೋಡಿ ತೆಗೆದೆತ್ತಿಬಿಗಿಯಪ್ಪಿ ಸಮುಚಿತವಿನಯಮಂಮೆರೆದು ಮನ್ನಿಸಿನಿಜಕೃಪಾಸುಧಾತರಂಗಿಣಿಯೊಳವಗಾಹಂಗೆಯಿಸಿ

ಕಂ॥ ಸರಸಮಧುರೋಕ್ತಿಯಿಂ ಬಸ । ವರಸನಬಗೆಗಿತ್ತು ಮುದಮನೆಂದಿನತೆರದಿಂ ॥ ಗುರುಪೊೞಿಗೆಮಾರೈಯ್ಯಂ । ಕುಣಾನಿಧಿ ಭಕ್ತಜನಯುತಂಸುಖಮಿರ್ದಂ .... ॥೩೪॥

ವ|| ಆನಂತರಂ

ಮ||ಸ್ರ||ವೃ|| ನಲವಿಂದಂಮಾರಿದೇವಂಗೆರಗಿ ನುತಿಸಿ ಬೀಳ್ಕೊಂಡುಹೃತ್ಪದ್ಮದೊಳ್ತ|ದ್ವಿಲಸತ್ಸಾಮರ್ಥ್ಯಮಂಭಾವಿಸುತೆ ಪೊಗಳುತಂಭಕ್ತಸಂದೋಹದೊಳ್ನಿ||ರ್ಮಲಚಿತ್ತಂ ಭಕ್ತಿಯುಕ್ತಂ ಸಿರ ಪನುಮುಹಿಮಂ ಭವ್ಯಸೇವ್ಯಂ ಭವೌಘಾ | ಚಲಶಂಬಂ ಬಂದು ಪೊಕ್ಕಂ ನಿಜಗೃಹಮುನವಂಶೈವವಿದ್ಯಾಸಮುದ್ರಂ ||೩೫||

ಕಂ|| ರಸೆಗೆಸೆವವೋಳಿಗೈಯುನ | ಮಿಸುಪಚರಿತ್ರಮುನದಾವನೋದುವನಾವಂ || ಪಸರಿಸಿಕೇಳ್ವನವಂಗೊ | ಲ್ದಸಮಾಕ್ಷಸಾಳ್ಪಸಭಿಮತಾರ್ಥಮುನನಿಶಂ ||೩೬||

ಲಲಿತಪದವೃತ್ತ || ಗೂಢಶಿವತತ್ವನಿಧಿಗೂಪ ದಕಂಕಣನಿಗೂಢಶಿವಮಂತ್ರಪರಿಲೀಢನವಶಾಸ್ತ್ರ | ರೂಢಮತಿಸಂಯುತಸಮೂಢಘನಸಾರರುಚಿಮೂಢಮತಿವರ್ಜಿತನವೋಢಸುರಸೇವ್ಯಾ || ಗಾಢರಿಪುವರ್ಗಹರಬಾಢದುರಿತಾರ್ದನಸದೂಢನೃಡಶಶ್ವದವಗಾಢಶಿವಧರ್ಮ | ಪ್ರೌಢಬುಧನುತ್ಯದ್ವಗಪೋಡಭವರಕ್ಷಿಪುದುರೂಢಶಶಿಭೃನ್ಮತನಿರೂಢಬಸವೇಶಾ ||೩೭||

ಲಲಿತಪದವೃತ್ತ || ಸ್ವರ್ಣಗಿರಿಮಂದಿರೆ ಸುವರ್ಣರುಚಿಭಾಸುರೆಸುವರ್ಣರಥವಂದಿತೆಯಜುರ್ನತಪದಾಬ್ಜೇ | ತೂರ್ಣಗಸಖೇಕ್ಷಣೆವಿಕೀರ್ಣಮದಿರಾಮುದವಿಘೂರ್ಣಿತವಿಲೋಚನಸದೂರ್ಣಯದುರೀಹೋ || ದೀರ್ಣದನುಜಾತಹರೆಕರ್ಣರಿಪುರೋಪಡೆ ಗುಣಾರ್ಣವ ಶಿವೈಕ್ಯಮತನಿರ್ಣಯಧುರೀಣೇ | ಪೂರ್ಣಗುಣಭೂಷಣೆವಿತೀರ್ಣಭುವನವ್ರಜಸುಕರ್ಣೆಪರಿಪಾಲಿಪುದಪರ್ಣೆಬಿಡದೆನ್ನಂ ||

ಗದ್ಯ|| ಇದು ವಿನಮುದಖಿಳಸು ರಾಸುರೇಂದ್ರ ಮುಕುಟತಟಘಟಿತ
ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ
ಪರಮಶಿವಲಿಂಗೆ ಪಾದಾರವಿಂದ ಪರಾಗೆ ಭಸಿತ ಭಾಸುರ
ಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರ ದೇವಭಕ್ತಿವಿರಚಿತ ಶ್ರೀಮದ್ಬಸವರಾಜ
ವಿಜಯ ಮಹಾಪುರಾಣದೊಳ್ಮೋಳಿಗಮಾರಿ
ದೇವ ಮಹತ್ವಕಥನ ಮೇಕೋನವಿಂಶ
ತ್ಯಾಶ್ವಾಸಂ ಪರಿಸಮಾಪ್ತಂ.

ಕನ್ನಡಬ್ರಹ್ಮಯ್ಯನ ಕಥೆ.

ನಾಂದಿ || ಲಲಿತಪದವೃತ್ತ || ಮುಂದರಧರಾಧರಸುಮಂದಿರನುಸೋಪರಮುಕುಂದಚತುರಾನನಪುರಂದರಹುತಾಶಾ | ಮುಂದಯುಮುಖ್ಯಸುರವೃಂದಪರಿಪೂಜಿತಸನಂದಸನಕಾರ್ಚಿತಸದಿಂದುಧರಭಕ್ತಾ || ನಂದಕರಚಿದ್ವ್ರಸಮುರಂದಮುದಷಟ್ಪದಸುಕುಂದಹಿಮುಹೀರಶಶಿಚಂದನಸಿತಾಂಗ| ಸ್ಕಂದನತಭಾಸರದವಿಂದಪದಪಾಲಿಪುದನಿಂದಿತಕೃಪಾಸಲಿಲಕಂದಬಸವೇಶಾ||

ಕಂ|| ಶ್ರೀಕುಧರಪತಿಸುತಾಸುಖ | ಮಾಕಂದವಸಂತಸಿಂತಕಾಂತಕನಭವಂ || ಲೋಕೇಶಕೇಶವಾದಿದಿ ! ವೌಕಸ್ತುತಿನೀಗೆಸೌಖ್ಯಮುಂಶಿವಲಿಂಗಂ .... ||೧||

ಆಕಲ್ಯಾಣದೊಳಿರ್ಪಂ | ಶ್ರೀಕಲ್ಯಾಣೇಶವಿಮುಳಪದಭಕ್ತನಘಾ || ನೀಕವಿರಹಿತಚರಿತ್ರನ | ಸ್ತೋಕಯುಶೋಧವಳಿತಾಶನಸುಪಮುಮುಹಿಮಂ||

ಮ || ವೃ || ಮುದನಾರಾತಿಪರೈಕಭಕ್ತಪದಪೂಜಾಲೋಲ ನೌದಾರ್ಯಶಾ | ಲಿ ದಯಾರಾಶಿ ಮಹಾದ್ಭುತೋನ್ನತಚರಿತ್ರಂ ಸಾರವೀರವ್ರತಾ || ಸ್ಪದನುಂ ನಿದ್ರುಸುಬೋಧನರ್ದಿತವಿಮೋಹಂ ಸಂತತಾನಂದಿಕ | ನ್ನಹಬ್ರೊಹ್ಮಯ್ಯನವಂಚಕಪ್ರಥಿತಸಮ್ಯಗ್ಲಿಂಗನಾರಾಧಕಂ ||೩||

ಕಂ|| ವಿತತಬಹಿರಂತರರ್ಚನ | ಚತುರಂ ಜಂಗಮುಸಮರ್ಪಿತಾಂಗಪ್ರಾಣಾ || ರ್ಥತತಿಜಿತಮಾಯುನಮುಳಿನ | ಮತಿ ಶಿವಲಿಂಗಾಭಿಮಾನಮಾನಿತವಿಭವಂ .... ||೪||

ವ|| ಎನಿಸಿ ರಂಜಿಸಿ|| ಮ|| ವೃ|| ಬಳಪಂಕತ್ತಿಗೆಚಂಡುಕತ್ತರಿಮಣರ್ಣಮುಳ್ಮಾಸಸೂತ್ರಾಂಕುಶಂ | ಸೆಳೆಗೋಲಕ್ಷತೆನಾರಸಂಪವನವಸ್ತ್ರಂರುದ್ರಭೂಭೂತಿನಾ || ಯ್ಗುಳಬಾಯುಟ್ಟನಮುರ್ದ್ದಿದೃಶ್ಯತಿಲಕಂ ದುತ್ತೂರಬೀಜಾಳಿಕಾ | ಕಳಿವರ್ಣೋರ್ಪಳಮುಂಜನಂಭ್ರಮುರಪೂರ್ಣೋದ್ಯತ್ಕರಂಡೌಷದಂ||

ಕಂ|| ಒಂದಟ್ಟೆಯುಕೆಪ್ಪರ್ನಲ | ವಿಂದಂಮೆಟ್ಟುತ್ತೆ ನೀಲಿಗಪ್ಪಡದುಡಿಚೆ || ಲ್ವೊಂದಿರೆಸಾಧನಮಿದನೋ | ರಂದದಕ್ಕೈಕೊಂಡುಗಾಢಮಿರದೇಳ್ದಧಟಂ .... ||೬||

ಉತ್ಸಾಹವೃತ್ತಂ|| ಯೋಗಚೂರ್ಣಯೋಗವರ್ತಿಯಿಂ ಕಠಾಗ್ರದಲ್ಲಿಕಾ | ಳ್ವಾಗಳಂತೆಬಂದುನಿತ್ತಮುಳ್ಳರಾಲಯುಂಗಳಂ || ರಾಗಿಸುತ್ತೆಸಾದರ್ದ

ಸೊಪ್ಪುಳಾಲಿಸುತ್ತೆಸೋಡಿಸಂ | ಯೋಗಿಸುತ್ತೆ ತಕ್ಕುದೆಲ್ಲಮಂಕಡಂಗಿಜಾಣ್ಮೆಯಿಂ ॥ ——— ॥೭॥

ಮ॥ ಸ್ರ॥ ವೃ॥ ನೆಲಗಂನಂ ಗೋಡೆಗಸ್ನಂ ಮಿಸುಗುವಗುಳಿಗಂನಂ ದೃಢದ್ವಾರಬಂಧ | ಸ್ಥಳದೊಳ್ದಂನಂ ದಲಿಂತೆಂಬವರೊಳದಕೆತಕ್ಕಂದದಿಂ ಕಂನಮಂತೋ ॥ ಡಿಲಸತ್ಸಾಮರ್ಥ್ಯಯುಕ್ತಂ ಪುಗುತೊಳಗದುಭಕ್ತಾಲಯಂನ್ಯೆಜಮಾದಂ | ದೊಲವಿಂದಂ ದೀಪಮಂತಾಂ ಬೆಳಗುತವರನೊಲ್ದೆಬ್ಬಿಸುತ್ತೊಳ್ಪಿನಿಂದಂ ॥ .... ॥೮॥

ಮ॥ ಸ॥ ಪದಪಿಂದಂತತ್ಪದಾಬ್ಜಕ್ಕೆರಗಿಗಿರಿಶಸದ್ಭೃತ್ಯಭೃತ್ಯಂಪೆಸರ್ಗಂ | ನದಬೊಮ್ಮಂಬಂದೆನಾನೆಂದರುಪಿಪಡೆದು ಪಾದಾಂಬುಶೇಷಂಗಳಂಸಂ ॥ ಮುದದಿಂದಂಸೇವಿಸುತ್ತೆಯ್ದುವಸದುಭವಿಗೇಹಂದಲಾದಂದುಬಾಜರ್ಗೆ | ತ್ತೊದವಿದ್ದರ್ಥಂಗಳಂಕೊಂಡೆಸೆದುತಳರ್ದುತದ್ವಿತ್ತದಿಂಮುತ್ತಮಾಗಳ್ ॥ .... ॥೯॥

ಕಂ॥ ಬಂದಚರಲಿಂಗಮಂ ನಲ | ವಿಂದಂ ಪೂಜಿಸುತೆ ಸುಖದೊಳಿರೆಭಕ್ತಂಮ ॥ ತ್ತೊಂದುದಿನಂಬಹುಜಂಗಮ| ವೃಂದಂಬಂದತ್ತುತದ್ಗೃಹಕ್ಕೊಲವಿಂದಂ ॥ .... ॥೧೦॥

ವ॥ ಅಂತು ಬರೆಕಂಡು ಸಡಗರಂಗೊಂಡು ಬಹುಧನದಿನಲ್ಲದೀಬಹುಳಜಂಗಮ ಸಪರ್ಯೆಸಾಂಗಮಾಗದರಮನೆಯುಂ ಕನ್ನಮಿಕ್ಕಿ ಬಹುವಸ್ತುವಂ ತರ್ಪೆನೆಂದುಜ್ಜುಗಿಸಿ ಗೃಹಮಂ ಪೊರಮಟ್ಟು ರಾಜವೀಧಿಯೊಳ್ಬಪ್ಪಾಗಳಿದಿರೋಳ್ಕಂಡು ತನಗೆರಗಿನುತಿಪ ಬಸವರಸನಂನೋಡಿ ॥

ಮ॥ ಸ॥ ವೃ॥ ಚರವೃಂದಂಬಂದುದಿಂದೆನ್ನಯಗೃಹಕ್ಕೆ ವೃಷಾಧೀಶತತ್ಪೂಜೆಗುರ್ವೀ | ಶ್ವರಗೇಹಂಬೊಕ್ಕು ಕನ್ನಂದೆಗೆದುಬಹುಧನಂದರ್ಪ್ಪೆನೆಂದೆಯ್ದಿದೆಂ ತ ॥ ದ್ವರಕೋಶಾಗಾರಮಂತೋರೆನಗೆ ದೊರೆಯುದಸ್ಯಾಲಯಂಬೊಕ್ಕೊಡರ್ಥೋ | ತ್ಕರಮಾಗಳ್ಪೋಪಮೋಳ್ಕತ್ತಿಗೆ ವಿಡಿನಜೆಯಿಂದಾಡಿಪಂ ಬೊಮ್ಮಿದೇವಂ ॥ .... ॥೧೧॥

ವ ॥ ಎನೆಕೇಳ್ದನುಚಿತಮಿದೆನ್ನದೆ ಭಕ್ತರೇನೆಂದೊಡಂ ಮಾರ್ನುಡಿಗೊಡದ ಭಾಷೆತನಗುಂಟಪ್ಪುದರಿಂ ಮಹಾಪ್ರಸಾದಮೆಂದೊಡಗೊಂಡು, ಪೋಗಿ ನಿರ್ಭೀತಿಯಿಂ ಮಧ್ಯಂದಿನ ದೊಳರಮನೆಯುಂಪೊಕ್ಕು ಬಹುವಸ್ತುವಿರ್ದ ಭಾಂಡಾಗಾರಮಂ ಬಸವಂ ತೋರಲೊಡನೆ ತತ್ಕಳದೊಳಿರ್ದ

ತನ್ನ ಕನ್ನಗತ್ತಿಗೆಯುಂ ಕೊಂಡಗುಳಿಗಂನಮುಂ ಸಮೆದೊಕ್ಕಮಣ್ಣಿಣ ಪುಡಿಯೆಲ್ಲಂ ಪೊನ್ನಪುಡಿಯಾಗುದುರುತ್ತಮಿರೆ ತಳ್ವದೊಳಪೊಕ್ಕು ಮಿಕ್ಕು ಕೆಲಪಲದ ಪೇಳಿಗೆಯುಂನೋಡಿ ತೆಗೆದಳುಂಬಂ ಪೊನ್ನಪೊರಿಗಟ್ಟಿ ಕೊಂಡುಪೋಪಿನಂ ಕಾಪಿನಚರರ್ಕ್ಕಂಡು ಭೂಪನಿರ್ದೆಡೆಗೆ ಸರಭಸಂಪರಿದು ಪೋಗಿ ತದ್ವೃತ್ತಾಂತಮನೆಲ್ಲಮಂಪೇಳೆ ಕೇಳ್ದುಬಿಜ್ಜಳಂ ಕೊಪೋಜ್ವಳಭೀಷಣೇಕ್ಷಣನಾಗೀ ||

ಮ|| ವೃ|| ಸ್ಥಿರಸತ್ಯವ್ರತನೀತಭಕ್ತನೆನಗಾಪ್ತಂಧರ್ಮಯುಕ್ತಂಗು
ಣಾ | ಕರನೆಂದಾಂಸಕಲಾಧಿಪತ್ಯಪದದುಂ ಕೃಪಾಚರ್ಮತಂನಂಬಿಸ|| ಚ್ಚರಿ
ಮೋಸಂನೆಗಳ್ದಂಗಡಾಬಸವನೇನೆಂಬೆಂಪಗಲ್ಬಂದುತ | ಸ್ಕರರಿಂತೋಡಿಸಿ
ಕಂನಮುಂಕಳಿಸಿದಂಪುತ್ಕೋಶವಿತ್ತಂಗಳಂ || .... ||೧೨||

ಉ|| ಬೇಡಿದೊಡೀಯೆನೇತನಗೆಭೂರಿಧನಂಗಳನೇಕೆಕನ್ನಮುಂ | ತೋ
ಡಿಸಿಕೋಶವಿತ್ತತತಿಯಂಬರಿಗೆ ಯ್ದನಕಾರ್ಯಮೆಂಬುದಂ || ನೋಡದೆದು
ರ್ಯಶಸ್ಥಿತಿಗೆಭಾಜಕನಾದನಜಸ್ರಮೂಂಕರಂ | ಮಾಡಿಪಲೇಸನೊತ್ತರಿಸಿದಂ
ಗಡತಂನನದೆಂತುನಂಬುವೆಂ .... ||೧೩||

ಕಂ|| ಹರಣಂಗೋಳಿಪುದಿವಂಗೆ | ಚ್ಚರಿಯಲ್ತರ್ಥಾಬಹಿಶ್ಚರಾಃಪ್ರಾ
ಣಾಯೆಂ || ಬೊರೆಯುಂಟಪ್ಪುದರಿಂತ | ಸ್ಕರರಿಂಮಹ್ದನಮುನಿಂತುಕಳಿಸಿದ
ಕಥದಿಂ .... ||೧೪||

ವ|| ಅದುಕಾರಣದಿಂ ಬಸವಸಚಿವನೊಡನಾಟಮೆಮಗೆ ಸಾಲ್ಗುಮೆಂದು ರೋಷಾವೇಶ ನಿಯ್ಯದನಲ ಕಣಗಣಕಟಾಕ್ಷನಾಗಿಭಾಂಡಾಗಾರದೆಡೆಗೆಳ್ತಂದು ಕಂನಂದೆಗೆದತಾಣಮುಂ ಮಾಣದವಂ ನಿಂದುನಿರೀಕ್ಷಿಪಾಗಳ್ ||

ಕಂ|| ಇದುಶರಣಚರಣಕನಕಾ | ಬ್ಜದರಸಮೋಗ್ರ್ಮಡಿಸಿತೆನಿಸಿಕೋಶ
ಶ್ರೀಯ್ಯಂ || ಗದಕುಂಕುಮರಜಮುದಿರ್ದಪೊ | ಲೊದವಿದನವಕನಕರಜಮು
ದೇಂರಂಜಿಸಿತೊ —— ||೧೫||

ವ|| ಅಂತೆಸೆದುಪರಿದು ಪರಿಸಿದ ಕನಕರಜೋರಾಜಿಯುಂ ರಾಜೇಂದ್ರನಭೀಕ್ಷಿಸಿ ಕೋಪಮನುಳಿದು ವಿಸ್ಮಯಾತಃಕರಣನಾಗಿ ತಲೆಯಂತೂತ ಬಸವನಂಬರಿಸಿ||

ಕಂ|| ಏನಿದುವಿಚಿತ್ರತರಮಿಡಿ | ದೀನೆಲದೊಳಗೊಕ್ಕ ಕನಕರಜಮೆ
ತ್ತಣದಿಂ || ತೇನೆಸಗಿದೆಪೇಳೆನಗೆನಿ | ದಾನಮುನೆಲೆಬಸವಬಂದದೋರನ
ದಾವಂ .... — ||೧೬||

ವ|| ಎಂದಾನೃಪಂ ಬೆಸಗೊಳೆನಸುನಗುತೆ ಬಸವರಸನಿಂತೆಂದಂ||

ಕಂ|| ವಿದಿತಸುಗುಣಾಂಕನೆಲೆಭೂ | ಸುದತೀಶವಿರಾಜಿಸಿರ್ಪನೀಪುರ
ದೋಳ್ಕಂ || ನದಬೊಮ್ಮನೆಂಬಸವನ | ಗ್ಗದಪೆಂಪಂಪೊಗಳಲೀಶ್ವರಂಗ
ಮಶಕ್ಯಂ .... ||೧೭||

ಮ || ವೃ || ಸುರಭೂಜಂಗಳಮೂಲಮಾತನಪದಾಂಗುಷ್ಠದ್ವಯಂ
ಸಾರಸಿ | ರ್ಜರಧೇನುವ್ರುಜಜನ್ಮಭೂಮಿಮುವನುದ್ಯದ್ವೀಕ್ಷಣಂ ದಿವ್ಯಭಾ ||
ಸುರಚಿಂತಾಮಣಿಗೇಹಮಾತ್ತನಕರಂ ಸಂಪೂರ್ಣಸುಜ್ಞಾನದಾ | ಕರಮಾ
ದೇವನವಾಜನ್ಮಗದಭೈಷಜ್ಯಾಶ್ರಯಂತತ್ಸದಂ || ||೧೮||

ಕಂ|| ಆತನಪಾದಸ್ಪರ್ಶಂ | ಖ್ಯಾತಘನಸ್ಪರ್ಶವೇದಿಯಾತನಮುಳಿ
ಸು || ತ್ಪಾತಲಯಕಾಲಮಾತನ | ಚೇತೋದಯೆಮುಕ್ತಿಮೂಲಕಾರಣ
ಮಳಸಾ || ——— ——— ||೧೯||

ಅಣಿಮಾದಿಸಿದ್ಧಿಗಳತಿಂ | ಥಿಣಿಯುನವಂಸೇವಿಪರ್ಗೆಸುರಭಿಶರಣಾ ||
ಗ್ರಣಿಯಿಂತುಪೆಂಪುಮಿಗೆಸಂ|ದಣಿಸಿರೆಯುಂಧರೆಯೊಳಸಮುಲಿಂಗಸಮರ್ಥಂ||

ಉ|| ವೃ|| ಕನ್ನಮನಿಕ್ಕಿತಂದಧನದಿಂಸಲೆಜಂಗಮುಪಾದಪೂಜೆಯಂ|
ಚೆನ್ನೆನೆಮಾಳ್ಪನಂತದುನಿಜವ್ರತಮಾತ್ಮಮಹತ್ವದಿಂದವಂ || ಪೊನ್ನನದೆಂತು
ಮಾರ್ಜಿಸನಿಳಾಧಿಪಕೇಳ್ಕಿವಭಕ್ತಿಯೆತ್ತಚಾ | ರ್ಯನ್ನೆಗಳ್ವಂದಮೆತ್ತಪರಮಾ
ರ್ಥವಿರೋಧಮಿದೆಂಬೆಯುಪ್ಪೊಡಂ || .... ||೨೦||

ಕಂ|| ಶಿವಭಕ್ತಿಯುಕ್ತನೂಲ್ದಿವ | ಗುವದುಷ್ಕರ್ಮಂಸುಕರ್ಮಫಲಮ
ನೆಮೂಳ್ಕು || ಶಿವಭಕ್ತಿವಿರಹಿತರ್ಗದು ವಿವರಿಸೆನಿಜ ಫಲಮೆನಿಪ್ಪದುಃಖ
ಮನೀಗುಂ .... ||೨೧||

ವ|| ಅದೆಂತೆನೆ

ಮ|| ವೃ|| ಧರೆಯೊಳ್ನರ್ಮಜನಾಡಿಜೂದವವನೀಸೌಭಾಗ್ಯಮಂನೀ
ಗಿಸೋ | ದರಯುಕ್ತಂವನವಾಸಿಯಾದನೆಸೆಗುತ್ತಾಜೂದನೆಯ್ದಿರ್ದನೀ||
ಶ್ವರನಾವಾಸಮುಮೂರ್ಖನಾಥದಿಭುರಾಮುಂಬೇಂಟಯಿಂಜಾನಕೀ | ವಿತ
ನಾವಸ್ಥೆಯನಾಂತನಾಳ್ದನದರಿಂದಂಕಂಣಪಂಮುಕ್ತಿಯಂ ||೨೨||

ಚ|| ಧನವನಿತಾವಿಮೋಹಿತರಿಳಾಧಿಪರಂದಳಿದಕ್ಕೆಲಂಬರಾ | ಘನ
ಧನಕಾಮಿನೀತತಿಯನೊಂದಿದಸೌಂದರನಾಳ್ದನಾಮಹೇ||ಶನಪದಮಂತೊದ
ಳ್ನುಡಿದಪೂಜ್ಯತೆಯಾಳ್ದನಜಂಧರಾಧಿಪಾ | ಪರಚಿರುತೊಂಡನಾಡಿಪುಸಿಯಂ
ಪುರವೈರಿಯಲೋಕಮೆಯ್ದಿದಂ .... ||೨೪||

ಮ|| ಮುನಿಪನಾಂಡವ್ಯನೊಡರ್ಚಿ ಹಿಂಸೆಯನಪಂ ಶೂಲಕ್ಕೆ ಪಕ್ರ್ಯದ
ನಾ | ಘನಚಂಡೇಶ್ವರನಿಕ್ಕಿ ತಂದೆಯನು ನಾಥೀಶಪ್ರಸಾದಕ್ಕೆ ಭಾ || ಜನನಾ
ದಂಕುರಿಗಳ್ದ ಶೂಲಕಿಳಿದಂ ಕೇಳ್ಮ್ಯದ್ರಕಂ ಮಾರ್ಗತಾ | ಡನದಿಂದಂ ಕಲ
ಪತ್ತಿ ಭಕ್ತ ಸಿಳೆಯೊಳ್ನಾರ್ದಂ ಶಿವಾವಾಸಮಂ ||೨೫||

ಮ|| ಸ್ರ|| ಧರೆಯೊಳ್ರಾಜ್ಯಾಂ ತದೋಳ್ಕೆಳ್ಳ ರಕಮವನಿಪರ್ಗೆಂಬ
ವೇದೋಕ್ತಿಯುಂ ವಾ | ಕರಿಸುತ್ತಂ ಪ್ರಾಜ್ಯಸಾಂಮ್ರಾಜ್ಯಮನಿರದೊಲವಿಂ
ಪಾಲಿಸುತ್ತಿರ್ದ ಗೌರೀ || ಪರಸಂಮ್ಯಗ್ಭಕ್ತಿಯಿಂ ಮುಕ್ತಿಯೊಳೊಡೆವೆರಪ
ರ್ಚೆರಮಾಧೀಶಚೋಳಾ | ದ್ಯರಣಂಕರಾತ್ರಿರೀಶ್ವರಾರ್ಥಂನೆಗಳ್ದನಿಖಿಲದು
ಷ್ಕರ್ಮಮುಂ ಶೈವಧರ್ಮಂ .... ||೨೬||

ಮ|| ಇದು ಸತ್ಯಂ ಶಿವಭಕ್ತ ಸಂತತಿಗೆ ಧರ್ಮೋಧರ್ಮತಾಂ ಯಾತಿಯುಂ
ದೊದರುತ್ತಿರ್ಪ ದುಶ್ಶೈವತಂತ್ರಮುಪರಿಂ ಧಾತ್ರೀಶಕೇಳೆಂ ಮುಕಂ || ನದಚೊಂ
ಪ್ಯೊಯ್ಯನವೃತ್ತಿ ಸಾಧುಚರಿತಂ ದುಷ್ಕರ್ಮಮಲ್ತಲ್ತುದು | ರ್ಮದನೋಹ
ಸ್ಪೃಹೆಯುಲ್ಲದಪ್ರತಿಮನಂ ಪೇಳ್ಬನ್ನೆ ಸಲ್ಕಕ್ಕುಮೇ ||೨೭||

ಮ|| ಸ್ರ|| ಹರಭಕ್ತರ್ಮಂದಿರಕ್ಕೆಳ್ತರೆಪಗಲಿರುಳೆಂ ದೆನ್ನದಾವೇಳೆಯೊ
ಳ್ನಂ | ಪರಿಸುತ್ತಂ ಬಂದು ಕನ್ನಂ ದೆಗೆದಮುಕರಣಾವಾಸಮಂ ದಾಗೆಸಾದಾ||
ದರದಿಂ ಕುಂಬಿಟ್ಟು ಪೋಪಂ ಪೆಸರನರು ಪುತನ್ಯಾಲಯುಂ ತಾನದಾಗು | ತ್ತಿರೆ
ಕೊಂಡರ್ಘ್ಯಾಘಮುಂ ತೊಳ್ದ ಪರಮುರಿತಮುಂ ಧನ್ಯರಂ ಮಾಡಿಪೋಪಂ ||೨೮||

ಚಂ|| ನರಪತಿನೋಡು ಮುಟ್ಟದಿಡೆ ಮುಟ್ಟದ ತಾಣವೊರಲ್ದು ಕನ್ನಮಂ
ಶರಣನೊಡರ್ಚೆ ತಳ್ತಿಳಿದ ಭಿತ್ತಿಯು ಮುತ್ತೊರೆವೆತ್ತ ಕಾಂತಿಭಾ || ಸುರತರನವ್ಯ
ಹೇಮಮಯಮಾಗಿ ವಿರಾಜಿಪುದಿಂತಿದಲ್ತೆ ತ | ದ್ಗುರುವಿಳಸನ್ಮಹತ್ವಕೆನಿದರ್ಶ
ನಮುರ್ವಿಯೊಳದ್ಭುತಾಸ್ಪದಂ .... ||೨೯||

ಕಂ|| ಇಂತತುಳಮಹಿಮೆಯುಳ್ಳಂ | ಗೆಂತುಂ ದುರ್ಲಭಮದಾವುದಾ
ತ್ರಂ ನಿನ್ನಂ || ಸಂತಸದಿ ಸಲಪಲೆಯ್ದಿ ದ ಸಂತಲ್ಲದೆ ಬಂದನಲ್ತು ವಿತ್ತಸ್ಪ್ರಹೆಯಿಂ

ಕಂ|| ಜನಪತಿ ನಿನ್ನಯ ಕೋಶದ | ಧನಮುನದಂಕನರ್ಮದಿಲ್ಲ ತೋ
ರ್ಪನದಂನೆ || ಟ್ಟನೆ ನೋಳ್ಪುದೀಗಳೊಲ್ದಿಂ | ದನವದ್ಯಂ ತಾನೆ ಬರಿಸಿದಂ ಕರ
ಣಿಕರಂ .... ||೩೦||

ವ|| ಅಂತು ಬರಿಸಿ ಬಸವಂ ಲೆಕ್ಕಮಿಸಿತೆಂದೋದಿಸಿ ಪೊಂನಪೇಳಿಗೆಗ
ಳಂತೆಗೆಮು ಕೋರಿಸೆಮುಂ ನಿರ್ಪೊಂಗಳಂ ಮಡಿಸಿ ಸೇರ್ದರೆ ಬಿಜ್ಜಳಂಕಂಡು ||

ಕಂ|| ತಲೆದೂಗಿವಿಸ್ಮಯಂಬಡೆ | ದೊಲವಿಂಕೊಂಡಾಡುತಿರ್ದನಿತ್ತ ಲ್ಮಹಿಮೋ | ಜ್ವಲಗುಣಿಕಂನದಬೊಂಮಂ || ನಿಲಯಕ್ಕೆಳ್ತಂದನಧಿಕಸಂ ಭ್ರಮದಿಂದಂ .... ||೩೨||

ವ|| ಅಂತೆಳ್ತಂದುತಂನಕಂನದುಪಕರಣಮಂತಂ ದಧನನಿಚಯಮನಿ ದಿರ್ದಂದಡಿಗೆರಗಿರ್ದ್ದನಿಜಾಂಗನೆಯಕರ ದೊಳಿತ್ತವಳ್ವೆರಸುಚರ ಲಿಂಗಪೂಜೆ ಯಂರಚಿಸಿಪೊರಮಟ್ಟುಧನ ಕನಕಮಣಿಭೂಷಣಂಗಳನಳುಂಬಸಮರ್ಪಿಸಿ, ಷಡ್ರಸಸಮಂಚಿತಂದಿವ್ಯಾಂನದಿಂತೃಪ್ತಿಪಡಿಸಿಭಕ್ತಿಮಿಗೆತತ್ಪ್ರಸಾದಮನಾ ಸ್ವಾದನಂಗೆಯ್ದುತತ್ಕಾರುಣ್ಯಸುಧಾಶರಧಿಯೊಳೋಲಾಡಿಪಾಡಿ

ಕಂ|| ಪರವಯನಂದಮನಾಳ್ದೊ | ಪ್ಪಿರುದಿರ್ದ್ದಂಜಂಗಮಾಂಘ್ರಿಪೂ ಜೋತ್ಸವತ || ತ್ಪರನಾಕಂನದಬೊಂಮಯ | ನುರುತರಶಿವಭಕ್ತಭಾಮಿನೀ ಮುಖಮುಕುರಂ .... ||೩೩||

ಮ|| ವೃ|| ಅರಸಂಗಾದವನೇಕಮಂತೆಮುರ್ದುತನ್ಮಾಹತ್ಮ್ಯಮಂಮ ತ್ತೆಬಿ | ತ್ತರಿಸುತ್ತಂತದಿಳಾಪತಿಪ್ರಣುತನಲ್ಲಿಂದೇಳ್ದುಕಾರುಣ್ಯಸಾ | ಗರನಾ ಕನ್ನದಬೊಂಮಿದೇವನಪದಾಂಭೋಜಂಗಳಂಜಾನಿಸು | ತ್ತಿರದೆಳ್ತಂದೆಸೆದಿ ರ್ದ್ದನಾತ್ಮಗೃಹದೋಳ್ಸಿದ್ಧಾಂತವಿದ್ಯಾಧರಂ ||೩೪||

ಕಂ|| ಪದೆದಿಳೆಯೊಳಾವನೀಕಂ | ನದಬೊಂಮಾರ್ಯನಚರಿತ್ರಮಂಕೇ ಳ್ಪನವಂ | ಮದನಾರಿಯಕೃಪೆಯಿಂತ | ಪ್ಪದೆಪಡೆವಂಸರ್ವಸಿದ್ಧಿಸೌಖ್ಯೋ ದಯಮಂ .... ——— ||೩೫||

ಇಂದ್ರವಜ್ರಾವೃತ್ತಂ|| ಪ್ರಣೀತವೇದಾಗಮಶಾಸ್ತ್ರಸಂಕುಳೇ | ಕ್ಷಣ ದ್ಯುತಿಪ್ರಾಂಜುಳವೀಕ್ಷಣಾಂಚಳೇ || ಮಣಿಪ್ರಭಾಭೂಷಿತಹೇಮಕುಂಡಲೇ ಗುಣಾಭಿರಾಮೇಜಯಸರ್ವಮಂಗಳೇ .... ||೩೬||

ಗದ್ಯ|| ಇದು ವಿನಮದಖಿಳಸುರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತರುಚಿನಿಚ ಯತರುಣಾತಪಪರಿಲಸಿತ ಪರಮ
ಶಿವಲಿಂಗ ಪಾದಾರವಿಂದಪರಾಗ ಭಸಿತ ಭಾಸುರಲಲಾಟ
ಪಟಸರಸಜನಮಾನಿ ತೋಭಯಕವಿತಾವಿಶಾರದ ಶ್ರೀ
ಷಡಕ್ಷರದೇವಭಕ್ತಿವಿರಚಿತ ಶ್ರೀಮದ್ಬಸವರಾಜವಿ
ಜಯಮಹಾ ಪುರಾಣದೋಳ್ ಕನ್ನದಬೊಮ್ಮಿ
ದೇವಮಹತ್ವವರ್ಣನಂವಿಂಶತ್ಯಾಶ್ವಾಸಂಪರಿ
ಸಮಾಪ್ತಂ.

ಶ್ರೀ ಬಸವಲಿಂಗಾಯನಮಃ

ಮುಸುಟಿಯ ಚೌಡ್ಯೆಯನಕಥೆ

ನಾಂದಿ॥ ಲಲಿತಪದವೃತ್ತಾ॥ ಶ್ರೀದಸಹಪೀಲನವಿನೋದಗುಣರತ್ನ ವಿಸರೋದಧಿಮಹೇಶಕೃತವೋದತತಮಾಯಾ । ಮೋದನಸುರೇಂದ್ರನತ ಪಾದಸರಸೀಜಕೃತವೇದಜಗತೀನುತಶುಭೋದಯಚರಿತಾ ॥ ಮೇದುರಗುಣಾಕರಶಿಲಾದಸುತಸಂತತಮಹೋದಯಪರಾಪ್ತಪರವಾದಗಣವರ್ಯಾ|ಹ್ಲಾದಕರರಕ್ಷಿಸಘಕಾದಳಗಜೇಂದ್ರಭುವನೋದರಲಸತ್ಪ್ರಣವನಾದಬಸವೇಶಾ

ಲಲಿತಪದವೃತ್ತ॥ ಚಿದ್ರುಮಣಶ್ಶೈವಶುಭಮುದ್ರಭುವನಾವನವಿನಿದ್ರಭವಭಕ್ತಪರಿಷದ್ರಸಮನೋಜಾ । ಪದ್ರವವಿದೂರತತಭದ್ರಬಹುಜನ್ಮಗರವಿದ್ರವಕರಾಮಿತದಯಾರ್ದ್ರಸುಕಟಾಕ್ಷ ॥ ಕ್ಷುದ್ರಮತಿಭಂಜನಲಸದ್ರವಿಶತಪ್ರಭಹರಿದ್ರುಹಿಣಕಾಮಿತಸುರದ್ರುನಿಭವಿದ್ಯಾ । ವಿದ್ರುಚಿರಸದ್ಗುಣಸಮುದ್ರಪೂರಿಯನ್ನನಘವದ್ರಹಿತಭಾಮಿಹಿತರುದ್ರಬಸವೇಶಾ ॥೨೯॥

ಕಂ॥ ಶ್ರೀಮದಿಳಾಧರತನಯಾ । ಕೋಮಳತರಬಾಹುಕನಕಚಾಂಪೇಯಲಸ ॥ ದ್ದಾಮಾನ್ವಿತಗಳಸಮರಲ । ಲಾಮಂಪೊರೆಗೆಂಮನಾವಗಂ ಶಿವಲಿಂಗಂ .... ॥೧॥

ಕಂ॥ ವಸುಧಾಲಲನೆಯಮಲಯುಜ । ರಸತಿಲಕದತೆರದಿಸಾಧರುಚಿಯಿಂತೊಳಗು ॥ ತ್ತಸದೃಶವೈಭವದಿಂದಂ । ಮುಸುಟಿಯೆನಿಪ್ಪೊಂದುಪುರವರಂಸೊಗಯಿಸುಗುಂ —— —— ॥೨॥

ಕಂ॥ ಆಪುರದೊಳೆಸೆವನಖಿಳಕ । ಳಾಪಂಡಿತನಪ್ರತರ್ಕ್ಯಮಹಿಮಾಕರನು ॥ ವೀರಸಾವನಪದನುಜ್ವಳ । ರೂಪಂಸಲೆ ಮುಸುಟಜೌಡನೆಂಬ ಶಿವೈಕ್ಯಂ .... ॥೩॥

ಚ॥ ವೃ॥ ಶರಣಶರಣ್ಯನಾರ್ಯಸನಘಂಸಫಲೀ ಕೃತಸತ್ಯವಾಕ್ಯನೀ । ಶ್ವರಮತಕಲ್ಪಭೂಜನನವದ್ಯಗುಣಾಂಬುಧಿಗಾಢಶೌರ್ಯಬಂ ॥ ಧುರನನಿಮಿತ್ತಸಾಧುಜನಬಂಧುವಿಶಾಲಯಶೋವಿಭಾಸಿ ಶಂ । ಬರಹರದರ್ಪಸರ್ಪಶಿಶಿದುರ್ಮತಗರ್ವಘನಪ್ರಭಂಜನಂ ॥ .... ॥೪॥

ಮ॥ ನಿರಪಾಯಂಗಿರಿಶಪ್ರಸಾದರಸಿಕಂವೀರವ್ರತಾಲಂಕೃತಂ । ಪರಮಾನಂದಪುಯಂಚ ರಾಚರಚಯಾಭೀತಿಪ್ರದಾನಾದರಂ ॥ ಕರುಣಾಶಾಲಿ

ನಿರಸ್ತ ಕರ್ಮತತಿಶಾಪಾನುಗ್ರಹೋದ್ದಾಮಶ | ಕ್ತಿರಸಾಭಾಗಸಮಾಗತೇಶನ
ಮೃತಾಪಾಂಗಂ ಪ್ರಬೋಧಾಸ್ಪದಂ || ||೫||

ಕಂ|| ದೃಷ್ಟಾದುಷ್ಟಫಲೋದಯ | ದೃಷ್ಟಿಸದಾಮೋಘಸತ್ಕ್ರಿಯಾ
ತರ್ಪಣ ಸಂ || ತುಷ್ಟಶಿವ ನವನತಪ್ರಕ | ರೇಷ್ಟಪ್ರದ ನತುಳವೀರರಸಪರಿ
ಪೂರ್ಣಂ .... ||೬||

ವ|| ಎಂಬನೆಗಳ್ತೆಗಡಪ್ಪೆನಿಸಿ

ಉ||ವೃ|| ಗೊಳಿತಪಸ್ವಿಭಕ್ತರಿಳೆಯೊಳ್ಕ್ಮತಿಯೊಂದಿರೆಜೀವವಿಾಯುತಂ
ಬಾಳಿಪಮಾರ್ಗಕಢ್ಯನಿಸಿದಳ್ಪುರಿಪೇರ್ವಳೆಮಲ್ಗಿಸುತ್ತದಂ || ಪಾಳಿಯಿನಲ್ಲಿ
ನಾಡೆನಡೆಯುಜ್ಜುಗದೊಳ್ಪಥಂಗೊಳುತ್ತೆಭ | ಕ್ತಾಳಿಯಭೀಷ್ಟಮಂಸಲಿ
ಸುತಂಮೆರೆದಿರ್ದನವಂವಿಳಾಸದಿ .... ||೭||

ಕಂ|| ಇರೆಬಸವಭಕ್ತಿಕುಸುಮದ | ಪರಿಮಳಮೇಣ್ದೆಸೆಗೆತೀವೆಜನ
ಮುವನಂದಾ || ದರವಿಾಕ್ಷಿಸಲ್ಕೆಶಿವಗಣ | ವರರೊಡನೇಳ್ತಂದನತುಳಸಂಭ್ರ
ಮದಿಂದಂ .... ||೮||

ವ|| ಅಂತೇಳ್ತಪ್ಪಾಗಳಾ ಮಾರ್ಗದಲ್ಲಿ

ಚಂ|| ವೃ|| ಖರಕರರೋಚಿಯುಚ್ಚ್ರದಳರುವ್ರಜದಾಲಯಮಂಧಕಾ
ರಬಾ | ಗೆರಮುಹಿವೃಂದದಿಕ್ಕೆಮೃಗರಾಜಿಯಕಾಯ್ದುಳಿಪಕ್ಕಿವಿಂಡಿನೋ || ವ
ರಿನೆಲೆದಾವಪಾವಕನಭೋಜನಶಾಲೆಕಿರಾತಕೋಶಮಂ | ದಿರಮೆನಿಸಿರ್ದುದೇ
ಳ್ಗೆವಡೆದೊಪ್ಪುವಕಾನನಮೊಂದಗುರ್ವಿನಿಂ ||೯||

ವ|| ಅಂತೆಸೆವಕಾನನದಂತ ರಾಳದೊಳ್ ಚೌಡದೇವಂ ನಡೆತರುತ್ತ
ಮಿರೆಯಿರೆ

ಕಂ|| ಮಿಸುನಿಯಪೊಸಚಂಡುಗಳಂ | ತೆಸೆವಿಟ್ಟಯಪಣ್ಗಳಿದಿರೊಳಿ
ದಿರೆಕಂಡಾತಾ || ಪಸರೆಂಮುಲಿಂಗಕೊಲ್ದ | ಪ್ಪಿಸಲ್ಕೆಬಯಸಿರ್ದೆವೆಂಬನು
ಡಿಗೇಳ್ದಾಗಳ್ .... ||೧೦||

ಚ|| ವೃ|| ನಸುನಗುತೆಯ್ದಿಕೂರಸಿಯನಾತರುಮೂಲದೊಳೂರಿನಿಂದು
ನಿಟ್ಟ | ಸಿಪೊಸಪಣ್ಗಳಂಸವಿವುದಿನ್ನೆನೆಚೌಡಯನಲ್ಲಜಂಗಮ || ಪ್ರಸರಮೊ
ರಲ್ದುಪಣ್ದಿರಿಯುತಿತ್ತುಶಿವಂಗಮೃತೋಪಮಾನಮಿಾ | ರಸಮೆನುತಂಪ್ರಸಾ
ದಫಲಸೇವನೆಗೆಯ್ದುದಮೇನನೆಂದಪೆಂ .... ||೧೧||

ಕಂ|| ಇನಿಮಾವಿನತನಿವಣ್ಣಂ | ಮನದೊಲನಿಸೇವಿಪಂತಿರಿಟ್ಟಯಪ

ಣ್ಣಂ ॥ ಘನಜಂಗಮತತಿಸೇವಿಸು । ತನುನಯದಿಂತಣಿದುಪೊಗೆಳ್ದುದಾಗು ಣನಿಧಿಯಾ .... ॥೧೨॥

ವ॥ ಆಗಪನಾಂತರಾಳಮಂ ಕಳಿಮಚೌಡದೇವಂ ನಿಜಲಿಂಗಮಧ್ಯ ದೊಳ್ಪೊಳೆಯೆ ಬಸವನರಿದೊಸಗೆಮಿಗೆ ಗುಡಿಗಟ್ಟಿ ಸಡಗರದಿನಿದಿರ್ಗೊಂ ಡು ಸಾಷ್ಟಾಂಗಮೆರಗಿ ವಿಜಯಂಗೈಸಿತಂದು ಸಮುಚಿತಸತ್ಕಾರಪೂರ್ವಕಂ ಪೂಜಿಸಿಪೊಗಳ್ದು ತತ್ಕಾರುಣ್ಯಮಂಪಡೆದು ನಿಜಗುರುಸಂಗಮೇಶನೆಂಬ ಭಾ ವದಿಂ ನಂಬಿನಲಿದು ಭಕ್ತಿಯಿಂ ಭಜಿಯಿಸುತ್ತಮಿರೆ

ಕಂ॥ ಪರಮಾನಂದದಿನಾಚೌ । ಡರಸಂಬಸವನ ಸುಭಕ್ತಿಯಂಕೈ ಕೊಳುತಂ ॥ ಸುರುಚಿರಕಲ್ಯಾಣದೊಳೊ । ಪ್ಪಿರುತಿರ್ದಂ ವೀರವೃತ್ತಿತನಗೆ ಸೆವಿನಗಂ .... ॥೧೩॥

ವ॥ ಅಲ್ಲಪೆರತೊಂದು ದಿವಸಮಾರ್ಯಗೃಹ ವಿವಾಹ ನಿಮಿತ್ತಮವರಿಂ ಪ್ರಾರ್ಥಿಸಲ್ಪಟ್ಟು ಪರಮೋತ್ಸವಂಮಿಗೆ ಚೌಡೆದೇವಪೊರಮಟ್ಟು ರಾಜವೀ ಧಿಯೋಳ್ಬರ್ಪಾಗಳೆತ್ತಿಟ್ಟನೆಕಟ್ಟದಿರೊಳಾಡಿ ಪಾಡುವ ಭಕ್ತಜನದಮಧ್ಯ ದೊಳೆತಿಬರ್ಪನಾನಾವಿಧ ಕುಸುಮಮಾಲಿಕಾ ಮುಕುರಕಿಂಕಿಣೀಚಾಮರ ಚಿತ್ರಾಂಬರಪ್ರಕರದಿ ನಲಂಕೃತಿವೆತ್ತಿಸೆವ ವಿಮಾನದೊಳಿರ್ದ ತಾಪಸಶಬ ಮಂಕಂಡುಬಳಸಿರ್ದಭಕ್ತರೊಡನೆ ॥

ಉ॥ವೃ॥ ತಾಪಸವರ್ಯನಿಂ ಪರಕೆಯಾನದೆಪೋಪೆನೆ ಮಂಗಳಾರ್ಥಮಾ ದೀವಯಣಕ್ಕಿಪಂ ಬೆರಸಿದಲ್ಲದೆಪೋದಪೆನೆಂತೊಕೇಳಿಮೆಂ ॥ ದಾಪಟುವಿಕ್ರ ಮಂಜಡಿದುಚಿಮ್ಮುತೆಕೈಯ್ಯನಿಶಾತಖಡ್ಗಮಂ । ಭಾಪೆನುತಾರ್ದುಪೊಬ್ಬಿರಿ ಮಮುಂಗೆಡೆಸಾರ್ದುಕಡಂಗುತುಬರ್ಪತಂ ॥೧೪॥

ಚಂ॥ ಒಸಗೆಯದೇಂತಪಸ್ವಿಶರಣಾರ್ಥಿಯೆನುತ್ತಿರೆಜೀವರಿಕ್ತತಾ ।ಪ ಸತನುಜೀವನಂಬಡೆದುಕೇಳ್ದುಸದಾಶಿವಮುಸ್ತುತೇಯೆನು ॥ ತ್ತುಸುರಿಕಡಂ ಗಿಚೌಡವಿಭನಕ್ಕುನಿರೀಕ್ಷಿಸಿತಾಪಸೇಂದ್ರನಿ । ನೊಸೆದಿಳಿನಂದಿವಾಹಮುಳಿ ಧೀನರವಾಹನಮೇರಿಬರ್ಪುದೇಂ .... ॥೧೫॥

ಕಂ॥ ಅರಧಿಪೊಸಜೋಹಮಾಳ್ದಂ । ತಿರೆ ನಿಂನಂನಗರಿ ನಗರದವರೆಲ್ಲ ರೆನು ॥ ತ್ತುರವಣಿಸಿಚರಣತಳಮಂ । ಶರಣಂಪಿಡಿನಲುಗೆತಾಪಸಂಸಂಭ್ರ ಮದಿಂ .... * ॥೧೬॥

ಮ॥ ವೃ॥ ಇಳೆಯೊಳ್ಬಂಮಿಕ್ಕಿಬೇಗಂತೆಗೆದುಬಿಗಿದುತಳ್ಕೈಸೆಕೊಂ

ಡಾಡೆದೇವಾ । ವಳಿಮರ್ತ್ಯಶ್ರೇಣಿಚೌಡಪ್ರಭುಮುದದಿನವಂಗೊಡಿವೈವಾಹ ಸನ್ಮಂ ॥ ಗಳಕಾರ್ಯಕ್ಕೊಲ್ದು ಬರ್ಪಾಪಥದೊಳೆಸೆದುದುದ್ದಂಡಶಾಖಾಕದಂಬೋ । ಜ್ವಳಪೂರ್ಣೋದೀರ್ಣಶುಂ ಭತ್ಫಲಕುಲವಿ ಲಸಛ್ಛಾಯಕಂಪ್ಲಕ್ಷವೃಕ್ಷಂ * * * .... ॥೧೭॥

ವ॥ ಅಂತೊಪ್ಪುವ ಪೇರಾಲಮರದ ಬಳಿಗೊಂಡು ಸಾರ್ದುತುರುಗಾವಕಿರುಕುಳರ್ನೆರೆದೆರಳ್ಬ ಲಮಾಗಿನಿಂದು ಪರಿವರಿದಾಡಲೆ ಸುತೀಬಸವನಾಲಮೆಮುಗಂ ನಿಮುಗಂ ಮಧ್ಯಸ್ಥಮಿದಂ ಮುಟ್ಟಿಗೆಲ್ಲಮಲ್ಲದೊಡೆ ಸೋಲಮೆಂಬಸೊಲ್ಲಂಕೇಳ್ದುಚೌಡವಿಭುನಿಂದಾಗೋವಳರಂಕೈವೀಸಿ ಕರೆದೀವಟವೃಕ್ಷಕ್ಕೆ ಬಸವನಾಲಮೆಂಬಪೆಸರೇಂಕಾರಣಂಬಂದುದೆಂದು ಬೆಸಗೊಳ್ವಿನಮಾತುರು ವಳರೋಳ್ಪಿರಿಯ ನಾದೋರ್ವನಿಂತೆಂದಂ

ಉ॥ ವೃ॥ ಕೇಳಿಲಿದೇವಸ ಪ್ತದಿವಸಂ ಬರಮಿಾಪ್ರೊಲದಲ್ಲಿಮುನ್ನಿರ । ಲ್ಗೋಳಿಗಳೆಯ್ದಿಕಾದುತಿರೆಮೇಣದರೊಳ್ನೆಗಳ್ದೊಂದುನೊಂದುರ ॥ ಕ್ತಾಳಿಪೊದಳ್ದುಸೂಸೆ ಮಡಿದತ್ತದನೀಯೆಡೆಯಲ್ಲಿತಾಪಸ । ರ್ಪೂಳೆವವಟಾಂಕುರಂನಿಮಿರ್ದುಪೇರ್ಮರನಾದುದಿದೆಂದುನಲ್ಮೆಯಿಂ ॥೧೮॥

ಉ॥ ತನ್ನಪಿತಾಮುಹಂತನಗೆಪೇಳ್ದನೆಸುತ್ತಿದನೆಮ್ಮತಂದೆಪೇ । ಳ್ವಂನಿಜಮಂತರಿಂಬಸವನಾಲಮಿದೆಂದೆನಿಸಿರ್ದುದುರ್ವಿಯೋ ॥ ಳ್ಬೆನ್ನೆಸೆವೀಘಳಂಸವಿಯೆಮಾಂಸದಮಾಳ್ಕೆಯೊಳಿರ್ಪುದಯ್ಯಕೇ । ಳ್ನನ್ನಿಯಿದಲ್ತೆಸೀಳ್ದಿಡೆಯಪಾಲ್ಪುರಿದಪ್ಪುದುರಕ್ತದಂತೆವೊಲ್ ॥೧೯॥

ವ॥ ಎಂದವನುಸುರ್ವಿನಂಬಳಸಿರ್ದಭಕ್ತಜನಂಕೇಳ್ದುಬಹುಕಾಲವ್ಯತೀತವೃತ್ತಾಂತಮಿದರೊಳೆಸಪುಜ್ಜುಗಮೇಂಮುಡ ಣ್ಗೆಬಿಜಯಂಗೆಯ್ವಿಮೆನೆಚೌಡದೇವಂನಕ್ಕುದೃಢತರವೀರವ್ರತಪರಾಯಣ ಗ್ಗೆಚಿರಂತನಮೆಂಬಶಂಕೆಯಿಂಬಸವನಳಿವಂಕೇಳುಪೇಕ್ಷಿಸಿಪೋಗೆತಪ್ಪ ್ರತಭಂಗ ಮಾಗದೆಂತಿರ್ಕ್ಕಮದುಕಾರಣದಿನೀಗಳ್

ಕಂ॥ ಮೃಡಭಕ್ತರಘನಕೃಪೆಯಿಂ । ಪಡೆದಪೆನೀಬಸವನಸುವನೀಮುದುವೆಗಿವಂ ॥ ಬಿಡದೊಡನೇಳ್ತಂದಲ್ಲದೆ । ನಡಯುಂನಿಜಮೆಂಮುನಿಂಮುಬೊಬ್ಬಿಡುತಘಟಂ .... ॥೨೦॥

ಕಂ॥ ನೆರೆಗಲಿಕುರುಳ್ಗಿಚಿಂಮುತೆ । ಮಿರುಪಶಿಯುಂಪಟಮುಟೀಜಮೂ

ಲದೊಳೂರ್ದು ॥ ತ್ತುರಿಸಿಂದುವೃಷಭಪೊರಮ್ಡುಜವದಿಂದಮಂಬುದುಂತ
ಕ್ಷಣದೊಳ್ * * ॥೨೧॥

ಚ॥ ವೃ॥ ಛಿಟಛಿಟಲೆಂದುಬೇರ್ಸಿಡಿಯೆ ಪಣ್ಗಳಿಳಾಗ್ರದೊಳಲ್ಲಿಸೂಸೆ
ತ । ಪ್ವಟತರುಕಂಪಿಸುತ್ತಿರೆಧರಾತಳಮಿರ್ಬಗೆಯಾಗೆಪೊಣ್ಮುತು ॥ ತ್ಕಟಸಿಕ
ಡಂಗುತುರ್ಬಿಕೆಲಿಯುತ್ತಿರಣತ್ಕೃತಿಯುಣ್ಮೆತೀವ್ರದಿಂ । ಪುಟನೆಗೆದೇಳ್ದು
ದಂದುಬಸವಂಬಿಸವಂದಮದಾಗೆನೋಳ್ಪರೊಳ್ ॥೨೨॥

ಮ॥ ಸ್ರ॥ ತನಗಂದೋರಂತೆಕೈಗೆಯ್ದುರಶಿನಮುಲರೊಳ್ಪಾಸಿಗೆಂಪೂಸ
ರಂಚಂ । ದನಲೇಪಂಭೂತಿಭೂರಿಸ್ವನಕನಕಲಸದ್ಘಂಟಿಕಾಕಿಂಕಿಣೀಮಾ ॥
ಲಿನಪೀನಂಚೇಲ ಮಾದಂಮಿಸುಗೆ ಮೆರೆದುದುದ್ವೃತ್ತ ಕುದ್ಬಂಧುರಂಮಂ ।
ಜುನಿಜಾಂಗಂತುಂಗ ಶೃಂಗಂಮಿಳದರು ಣಿಮಚಂಚ ತ್ಕಟಾಕ್ಷಂಮಹಾಕ್ಷಂ॥

ಮ॥ ಸ್ರ॥ ಮುಲೆಯುತ್ತಂ ಪುತ್ತನೊಲ್ದೀಡಿರಿಯು ತಗಿಯುತಂಬಾಲ
ಮಂಬೀಸುತಂಸಂ । ಚಲಿಸುತ್ತಂಚಲ್ಲದಿಂದಂನೆಗೆಯುತೆಕೆಲನಂನೋಡುತು
ರ್ಬುತ್ತಿಪುಲ್ಲಿಂ ॥ನಲಿಗುತ್ತುರ್ಕತ್ತಿತ್ತಮಿತ್ತಂಪರಿಯುತೆನೆಳಲಂಕಂಡುಮೇಲ್ವಾ
ಯ್ವುತುಂಕೋ । ಡಲುಗುತ್ತಂಘೂರ್ಮಿಸುತ್ತಂಕೆಲಿಯುತೆಸೆದುದಾಮೋದ
ಸಾಂದ್ರಂವೃಷೇಂದ್ರಂ ॥೨೪॥

ಚ॥ ಪೆರದನಿಯಾಗೆಕೇಳ್ದು ಕಿವಿಯಾಡಿಸುತಂ ಮೊಗಮೆತ್ತಿಮೇಲಿಮೇ
ಲ್ಕಿರಿಯುತೆಮೂತ್ರಮಂಬಿಡುತೆಗೋಮಯಮಿಕ್ಕುತೆವೃಕ್ಷಪೂರ್ಣಮಂ ॥ಪ
ರಿಯುತೆಶೃಂಗದಿಂಬಳಸಿಸುತ್ತು ತೆನೆ ಕ್ಕುತೆವಿವಾಸಿಸುತ್ತಿಪ । ಲ್ದಿರೆಯು ತೆಪಾ
ಯ್ವುತಂಮೆರೆದುದಾಶರಣಂನಲವೆರ್ಚಿವುಂಗಸಂ ॥೨೫॥

ವ॥ ಅಂತು ನಿಜಲೀಲೆಯಿಂನಿಕಟದೊಳ್ಬಿನದಿಪ ವೃಷಭೇಂದ್ರನಂಛಾ
ಡದೇವಂಮಿಗೆನೋಡಿ ಮೈದಡಪಿ ಕೊರಲಂ ಬಿಗಿಯಪ್ಪಿ ರಾಗಿಸುತ್ತಂಮು
ತ್ತಮಿರೆ

ಮ॥ ಸ್ರ॥ ವೃ॥ ಜಲವಿಂತತ್ಪಾದಮಂತಾತೊಳೆದುಕುಸುಮಗಂಧಾ
ಕ್ಷತಾಮೋದಧೂಪ್ರೋ । ಜ್ವಲದೀಪಾನೀಕದಿಂದರ್ಚಿಸಿಮದುರಸುಧಾಜ್ಯಾ
ದಿಸಂತರ್ಪಣಂಗೆ ॥ ಯ್ದುಲರ್ದಿತ್ತ್ತೋರಂತೆಪುಷ್ಪಾಂಜಲಿಯನೆಲೆವೃಷಾಧೀಶ
ನೀಂಬಪ್ಪುದೆಮ್ಮೊ । ಳ್ವಿಕಸತ್ಕಲ್ಯಾಣಕಾರ್ಯಕ್ಕೆನುತೆತಳರ್ದಸುಕ್ಷ್ನಾನ್ವಿತಂ
ಚಾಡದೇವಂ .... ॥೨೬॥

ವ|| ಅಂತು ಶಿವಗಣಾವೃತಂ ಮಾರ್ಗಮಂ ಪತ್ತಿಕಿರಿದುದೂರಂ ಪೋಗೆಮುಂಗಡೆಯೊಳ್ ||

ಚ || ವೃ || ಘುಳುಘುಳಿಸುತ್ತೆಬರ್ಪತೆರೆಯಿಂನೊರೆಯಿಂಕಳಹಂಸಪಙ್ತಿಯಿಂ | ಜಳರುಹರಾಜಿಯಿಂಸಿಡಿವ ಸೀರ್ಪನಿಯಿಂನೆಗೆತಿರ್ಪಮೀನ್ಗಳಿಂ || ಸುಳಿಗಳಬಂಬಲಿಂಮಕರಿಕರ್ಕಟಕಾದಿ ವಿಚಿತ್ರಸತ್ವಸಂ | ಕುಳದಿನಲಂಪುವೆತ್ತುಪೊಳೆಯೊಪ್ಪಿದುದಿದಿರ್ದೊರೆಯೆಂಬನಾಮದಿಂ || ||೨೭||

ಉ || ಶ್ರೀಯುತಪಂಕಜಂ ವದನಮಾರಡಿಮಾಲೆಕಚೌಘಮುಲ್ಲಸತ್ತೋಯಜರೇಣುಪೀತವಸನಂಪುಳಿನಂಜಘನಂಚಳೋರ್ಮಿವೃ || ತ್ತಾಯುತಬಾಹುತಳ್ತಸುಳಿನಾಭಿಪಯುಶ್ಚರಮುಕ್ತಿಯಾಗೆನಾ | ರಾಯಣಿಯಂತೆಚಕ್ರಜಲಜಾಂಕೆನದೀವಧುಕಣ್ಗೆತೋರಿದಳ್ || .... ||೨೮||

ವ|| ಅಂತೆಸೆವಡ್ಡಂಬರಿವ ಬೃಹತ್ತರಂಗಿಣಿಯ ಸಾರ್ಕೆಗೆ ಸರಭಸಂ ಪರಿತಂದು ಚೌಡದೇವಂನಿಂದು ವಿಜೃಂಭಿಸಿ ||

ಚ || ವೃ || ಉಡುಗೆಲೆನಿನ್ನಬಿಂಕವತರಂಗಿಣಿಭಕ್ತರಮುಂದೆಮುನ್ನಮೇಂ | ಕುಡಿಯನೆಕುಂಭಜಂಶರಣನೋರ್ವಮೆಯನಿನ್ನಯಕಾಂತನಾದಪೇ|| ರ್ಗಡಲನದಿರ್ಕೆನಾವಿಕನಮುಂದಲೆಗಾಶಿವದಾಸನಣ್ಮಿಪಾ | ಯ್ದೊಡನೆಮಹಾನದೀಮದನುನಳ್ಗಿಸಿಕಾಲ್ನಡೆಯಿಂದಮೆಯ್ದನೆ || ||೨೯||

ವ|| ಅದಲ್ಲದೆಯುಂ ||

ಚ|| ವೃ || ಪುರಹರನಂಗಜೇಶಮುಸಣಯ್ಯನೆನಿಪ್ಪಮಹಾತ್ಮನಳ್ಕರಿಂ | ದುರುನಿಜಭಾವದಿಂಕುರುವದೊಳ್ಭಜಿಸುತ್ತಿರೆನೀಂನವಾಂಬುನಿ || ರ್ಭರತೆಯಿನೆಯ್ದುತಿರ್ದೆಸೆಗೆಖಂಡಿಸಿದಂತೆವೊಲಾಂತುಭೀತಿಯಿಂ | ಪರಿದೆಗಡಂದುನೀಂಕೊಡುಕೊಡಧ್ವನುನಿಂದೆಮಗೆಂದುಕಾರ್ಯದಿಂ || ||೩೦||

ಮ|| ಮೊನೆದೋರುತ್ತೆಕೃಪಾಣಮುಂಜಡಿದುಚಿಂಮುತ್ತೆತ್ತೆಕಂಡಳ್ಕಿಭೋಂಕನೆ ಭಾಗದ್ವಯಮಾಗಿ ತಾಯ್ಮಣಲದೆತ್ತಂತೋರೆಪಾಯ್ವಂಬುನಿಂ || ಧುನಿತಾಂತಂಮೆರೆದತ್ತು ತನ್ನದಿನೆಭೋಮಾರ್ಗಕ್ಕೆ ದಿಂಕಿಟ್ಟುತ | ದ್ವನಕೀರ್ತ್ಯಂಗನೆಯಂಬರಾಂಬರದಭಾಸ್ವಂನೀವಿಯೆಂಬಂತೆವೋಲ್ ||

ಕಂ|| ಶರಣಂಗೆಧರಾವಧುಸಾ | ದರಮಿಕ್ಕುವಧವಳವಸನದೊಪ್ಪುವಪೊಸಸೀ || ಗುರಿಯೆನಿಸಿನಿಮಿರ್ದನದಿಯಂ | ಬರನಡಿಯೊಳ್ಮಾಡಲೆಳಸಿನೆಗೆದವೊಲೆಸೆಗುಂ || .... ||೩೧||

ಪ್ರೌಢವಿಯೊಳಿಕಡಿಯೆಪೊಳೆಯಿ । ರ್ಕಡಿಯುಕ್ಕುಮೆಯೆಂಬಗಾದೆ ಯುಂವಾಣಿಸಿದಂ ॥ ಕಡುಗರ್ವಿಜೌಡಯ್ಯನೆನು । ತ್ತೊಡನೆಗೆಣಪ್ರತತಿಯೊ ಳ್ಳಿಪ್ರೊಗಳ್ದತ್ತಾಗಳ್ ॥ ——— ——— ॥೩೩॥

ಚಂ ॥ ವೃ ॥ ಕುಣಿವಕುಕಿಲ್ವರಾಗಿ ಸುವತೂಗುವಬೀಗುವಸುತ್ತಿಬ ರ್ಪ್ಪಸಂ । ದಣಿಪನಿರೀಕ್ಷಿಪಳ್ತಿವಡೆದಾಡುವಪಾಡುವನಲ್ಕೆದೋರ್ಪ್ಪಸಂ ॥ ದಣಿಯುರಮುರ್ವಿಕೀರ್ತಿಸುವಪೊಂಪುಳಿಯಾಂಪಮುರಲ್ವಭಕ್ತಿಯಿಂ । ಮಣಿ ವಕಡಂಗುವದ್ಭುತವಿಳಾಸಮನಾಳ್ದುದು ಭಕ್ತಸಂಕುಳಂ ॥೩೪॥

ವ॥ ಅಂತು ಸಮುತ್ಸವಿಪಶರಣಗಣಂಬೆರಸು ॥

ಉ॥ ವೃ॥ ಮುಂದೆವೃಷೇಂದ್ರನುಂತಪಸಿಯುಂನಡೆಯುತ್ತಿರೆನಂದಿ ಕೇತನಂ । ಚಾಂದಳಪಲ್ಲಿಮಿಳ್ಳಿರಿಯೆಮುಂಗಳತೂರ್ಯರವಂಜಯಸ್ವನಂ ॥ ಕುಂದದೆಕೂಡಿಘೂರ್ಜಿಸೆಮಹೋತ್ಸವಮಾಳ್ದಿರೆಭಕ್ತರಾಗಳಾ । ನಂದದಿತ ತ್ತರಂಗಿಣಿಯನುಣ್ಮಣಲೊಳ್ನಡೆದಂಗಣಾಧಿಪಂ ॥ .... ॥೩೫॥

ವ॥ ಅಂತು ಪಿರಿದುಸಡಗರಂಮಿಗೆ ನಡೆತಂದಾರ್ಯನಗರಿಯುಂ ಪೊಕ್ಕು ತನ್ಮನೋರಥ ಮನೊದವಿಸಿಪರಿಣಯ ಮಹೋತ್ಸಾಹಮುಂ ನೆಗಳ್ಚಿ ಮಗು ಳ್ದಾಪೊಳೆಯಪುಳಿನತಳದೊಳ್ಶರಣಗಣಸಮೇತಮೆಳ್ತಂದು ಮುನ್ನಿನಂತಿರಾ ನದಿಯುಂಪರಿತುಲ್ಮಿರವಿಸಿ ಪರಿಯಿಸಿವಿತತಾದ್ಭುತಚರಿತ್ರಂ ಚೌಡರಾಜಂ ಕಲ್ಯಾಣಪುರಮುಂ ಪೋಗುತಿರ್ಪ್ಪಾಗಳ್ ॥

ಕಂ ॥ ಗುಡಿಗಟ್ಟಿಪೌರಭಕ್ತ । ರ್ಗಡನದಿನಿದಿರ್ಗೊಳೆತಪಸ್ವಿವೃಷಭ ಸಮೇತಂ ॥ ನಡೆತಂದನಮುಮನೋಳ್ಪವ । ರೊಡನರಿದರಿದೆಂದುಪೊಗಳು ತಿರೆಚೌಡಾರ್ಯಂ ॥ ——— ——— ॥೩೬॥

ವ॥ ಆಗಳೋರ್ವಳ ಪೂರ್ವ ಲಾವಣ್ಯ ಕಾರುಣ್ಯ ರೂಪವತಿ ಸುದತಿ ರಾಜವೀಥಿಯೊಳೈತರುತಂ ಕಂಡಿದಿರ್ವಂದು ಪಾದನಳಿನಂಪಣೆಸೋಂಕೆಪ ಣಿಯಲೊಡನೆ ॥

ಕಂ॥ ಯುವತಿನಿನಗಕ್ಕೆದೀರ್ಘಾ । ಯುವೆನುತ್ತಂಪರಶಿಪರಮಸಂ ಭ್ರಮದಿಂದಂ ॥ ವಿವಿಧೋತ್ಸವಮುಂಶಿವಗಣ । ನಿಪಹದೊಳೊದವಿಸುತೆನಿ ಜಗೃಹಕೇಳ್ತಂದಂ ॥

ವ ॥ ಅಂತೆಳ್ತಂದು ಚೌಡರಾಜನೆಂದಿನಂತೆ ಶಿವಾನುಭವಗೋಷ್ಠಿ ಯೊಳಿಪ್ಪಬಿಬಿರ್ಪಂ ನೆಗನಾಪರಕೆಗೊಂಡ ತರುಣಿಮರಣಮನೆಯ್ದಲೊಡ

ನೆಪಿರಿದು ಶೋಕಂಬಡೆದವಳ ತಂದೆತಾಯ್ಗಳ್ಕರುದಿನಂ ತತ್ಕಳೇವರಮುಂ ತಂದ್ದು ಶರಣಸಿದಿರೊಳಿರಿಸಿ ಪದಕಮಲದೊಳ್ಕೆಡೆದು ಕಣ್ಬನಿಕಾಳ್ಪುರಂಮ ಸಗೆ ಹಾಹಾರವಂ ಪೊಣ್ಮೆ ಮೊರೆಯಿಟ್ಟುಮರುಗಿ ||

ಕಂ|| ಎಲೆದೇವನಿಂನೆನಿಮ್ಮಯ | ನಳಿನಾಂಘ್ರಿಗೆಮಣಿದುಧುರಕೆವ
ಡೆದೆಳ್ತಂದೀ || ಲಲನೆಯಿರುಳಳಿದಳೀಕೆಗೆ | ನಲವಿಂದಸುವಿತ್ತುಪೊರೆದಯಾ
ಳುಗಳರಸಾ || .... ||೩೮||

ಕಂ|| ಅನಿಮಿತ್ತಬಂಧುವಿನಯಾಂ | ಬುನಿಧಾನಮುಹತ್ವಮುಹಿತ್ರಮು
ತ್ತನುಜಿಗೆಜೀ || ವನಮುಂನೀವಿತ್ತೆಂಮಯ | ಮನದಳಲಂಪರಿವುದೆಂದುಮು
ಗುಳ್ದಿರಗಲೊಡಂ || .... ||೩೯||

ಕಂ|| ಪರಮುಕೃಪಾನಿಧಿಯವರಂ | ಕರುಣಾಲೋಕನದಿನೋಡಿಸಂತಸ
ಮಿಡುತಂ || ಕರತಳದಿಜಡಿದುತಂನಯ | ಕರನಾಳಂಮುಟ್ಟಸುತ್ತೆ ಶಿಬಿಕೆಯು
ನಘಟಂ ....

ಕಂ||ಪೆಸರ್ವಿಡಿದುಕರೆಯುತಳೇ|ಳ್ಬಿಸಜಾಕ್ಷಿಯೆಸುತ್ತೆ ಕರೆಯಲೊಡನಾಕ್ಷಣ
ದೆ || ಳ್ಪೊಸನುಲಿಗಳ್ಭಿಟೆಭಿಟೆರವ | ಮೆಸೆಯೆಕರಂಶಿಡಿಯೆಸಿಬಿಕೆಆಂದವಳೇ
ಳ್ದಳ್

ಕಂ|ನಿದ್ರೆತಿಳಿದೆಳ್ವವೋಲ್ಮುಂ| ನಿದ್ರೇಕ್ಷಣೆಯೇಳ್ದುಚಾಡದೇವನಪದಖಾ||
ಸ್ವದ್ರಾಜೀವಕೆಮಣಿಯಸ| ಮುದ್ದ್ರುಚಿಯಿಂನಲಿದರಾಗಳಾಕೆಯುಪಿಯರರ್||

ವ||ಅಂತುನಲವೇರಿನಮಿಸಿಕರಾಂಜಲಿಯುಂ ನೊಸಲೊಳಮುರ್ಚಿನಿಂದು

ಕಂ|| ಪರಸಿದರೇಂಪ್ರಾಣಮುನೀ | ವರೆಧರೆಯೊಳಗೆಂಬನುಡಿಯನಿಲ್ಲೆ
ನಿಸಿಮೊದ || ಲ್ಪರಸಿದೆಮುದವಳಸುವಂ | ಬರಿಸಿದೆಗಡದೇವನಿನ್ನಪೋಲ್ವರು
ಮೊಳರೇ ||೪೩||

ಕಂ|| ದೇವಭವದಕ್ಷಿರುಚಿಸಂ | ಜೀವನದಿಂಪಡೆದೆಮುಡಿದಮುಗಳಸು
ವನಿಳಾ|| ಪಾವನಕರುಣಾವರ್ಷದಿ|ತೀವಿದಮುನ್ಮನದಬೇಗೆಯುಂಮಳ್ಗಿಸಿದೈ||

ಕಂ||ಪ್ರತ್ಯುಪಕೃತಿಯಿದಕಿಲ್ಲಿದು|ಸತ್ಯಂಪ್ರಾಣೋಪಕಾರಕದರಿಂಭುವನ||ಸ್ತು
ತ್ಯಸಲೆನಿಮ್ಮಭೃತ್ಯರ | ಭೃತ್ಯತೆಯಿಂಬಾಳ್ವೆವೆಮ್ಮನುದ್ಧರಿಸೊಲವಿಂ ||೪೫||

ವ|| ಎಂದುಸಾಷ್ಟಾಂಗಮೆರಗಿರ್ದದಂಪತಿಯುನಾಕನ್ನಿಕೆಯುಂಕಾರು ಣ್ಯದಿಂನೋಡಿಲಿಂಗಾಂಗಸಂಯುಕ್ತರಂಮಾಡಿ ಮುಗುಳ್ದು ಶತಾಯುರ್ಜೀವಿತ್ವ ಮುಂಕರುಣಿಸಿಕಳುಪಿಮುಹಾನುಭಾವನೊಪ್ಪಿರ್ದನಾಗಳ್

ಚ||ವೃ|| ಅಳಿದತಪೋಧನಂಗೆವೃಷಭಂಗೆನರಾಂಗಿಗಿಜೀವಮಿತ್ತುತಾ| ಸುಳುಪಿದನೀಧರಿತ್ರಿಯೊಳಿಚೌಡಮಹಾವಿಭುಚಿತ್ರಮೆಂದುನಿ | ಶ್ಚಳಮತಿ ಸೂರಿಗಳ್ಪದೆದುಬಣ್ಣಿಪಕೀರ್ತಿಯವಾರ್ತೆಲೋಕದೊ | ಳ್ಬೆಳದಿರೆಕೇಳ್ದಸೂ ಯೆಗೊಳುತನ್ಯಮತಸ್ಥಿತರೊಂದುಗೂಡುತಂ ||೪೬||

ಉ|| ಪ್ರಾಣಮನಿತ್ತುಗೋಳಿಗೆತಪಸ್ವಿಗೆಕನ್ನೆಗೆತನ್ನಬಿಂಕಮಂ | ಕ್ಷೋ ಣಿಯೊಳಿಯ್ದೆಬೀರಿದಪನನ್ಯಮತಂಗಳಲಿಕ್ಕಿಸಂಪರಿ || ತ್ರಾಣಪರಾಯಣಂಧ ರೆಯೊಳೋರ್ವನೆತಾಂಗ ಡತನ್ನಪೇರ್ಮೆಯಂ | ಮಾಣಿಪೆವೆಂದೆನುತ್ತೆಕಪಟಸ್ಥಿತಿ ಯುಂಬಗೆಗೊಂಡುದುರ್ಬುಧರ್ ||೪೭||

ಮ|| ತೃಣಮಂತೀವಿತಪಸ್ವಿಯಾ ಕೃತಿಯನಾಗಳ್ಗೋಣಿಯಂಮಾಡು ತಂ | ಫಣೆಯೋಳ್ಪೂಸಿವಿ ಭೂತಿಯಂತೊಡಿಸಿರು ದ್ರಾಕ್ಷಾಳಿಯಂಶೈವಲ || ಕ್ಷಣಮಂಸಾರ್ಚ್ಚಜಟಾಳಿಯಂರಚಿಸಿಕೌಪೀನಾನ್ವಿತಂಗೆಯ್ದನಿ | ರ್ಗುಣರಂ ದಂತವನೊಂದುಪಾಳ್ಗುಡಿಯೊಳೋರಂತಿಟ್ಟುಕೌಟಲ್ಯದಿಂ ||೪೮||

ಮ|| ಸ್ರ|| ನಗುತಂನಾನಾ ಜನಂತೀಪಿದವಿ ಪಣಿಗಳೊಳ್ಬಲ್ಲಿದಂಶೈವ ಮಾರ್ಗಾ | ಸುಗನೋರ್ವಂಬೀಳ್ದು ದೇವಾಲಯದೊಳಿಮಡಿದಂತಾಪಸಂ ಮಾಣದಾದೇ || ಸಿಗನಂಗಂಬಾತುನಾರುತ್ತ ಕಟಕೆಡೆದುತಾನಿರ್ಪುದಾರಂಸಾ| ಕ್ಕೆಗೆಸಾರನ್ಸೋಡರೆತ್ತುಪ್ಪುರದೊಳಿಭವಭಕ್ತರ್ಕಳಾಶ್ಚರ್ಯಮಲ್ತೆ ||೪೯||

ಮ|| ತನುಗೇಂಬಾರದೆನಾಡೆನಾಳೆ ಮರಣಂಸಾವೆಲ್ಲಜೀವರ್ಗೆತಾಂ | ಸಮಮೆಂಬೊಳ್ನುಡಿಸತ್ಯಮಲ್ತೆ ಶಿವಭಕ್ತಂಶೈವಮುದ್ರಾಂಕಸಂ || ಯಮ ದೀನಂಮೃತನಾಗನೋಡರವನುದ್ಯದ್ವಿದ್ಯಸಂಪಂನನಾ | ಗೆಮುಹೊತ್ಸಾಹದಿ ನರ್ಥದಾಸೆಗಳಿದಾಗಳ್ಬಾರದೇಂಪೋಪರೇ ||೫೦||

ಕಂ|| ಬಡತಪಸಿಮಡಿದನಕ್ಕಟ | ನಡೆನೋಳ್ಪವರಾರುಮಿಲ್ಲಮಾತ ನಪೆಣನಂ || ವೃಡಭಕ್ತರೆತ್ತಗೊಲ್ಲ | ಪೊಡವಿಯೊಳಿಮಭಕ್ತನೀತಿಯೇ ಬಗೆವಾಗಳ್ .... ||೫೧||

ಕಂ|| ಮಡಿದತಪಸ್ವಿಗೆಮೌನಂ|ಪೊಡವಿಯೊಳಸುವಿತ್ತನೀತನಳಿದಿರ್ಪು ದನಾ || ಕಡುಚಾಗಿಚೌಡಯ್ಯಂಕಂ.| ಡೊಡೆಹರಣಮನೀ ವನರಿಯದಿರ್ದ್ದ ಪನಲ್ತೆ .... ||೫೨||

ವ|| ಆತಂಗಾಮಾದೊಡಮಿಾಕುಣಪಮಂ ತೋರಿದಪನೆಂದೊಂದು ವಿಮಾನಮಂ ರಚಿಸುತದರೊಳಿಟ್ಟುಬಾಧಿಸಿ ಬಡತಪಸಿಗಳುಮಂ ಗೊರವರು

ಮಂ ಕೆಲಂಬರಂನೆರವುತವರ್ಗ್ಗಳಿನಾಮಾಡಮುಂ ಪೊರಿಸಿಕೊಂಡು ಚೌಡದೇವನ ಗೃಹದಮುಂದಣ ಬೀದಿಯೊಳಾ ಧೂರ್ತಧುರಂಧರರ್ಪಲವಂದದಿಂಪರಿಹಾಸೋಕ್ತಿಗಳನಾಡುತ್ತಂ ಬರುತ್ತಮಿರೆ ಚೌಡದೇವ ನದಂಕಂಡು ಕೃತಕಶಬಮೆಂದರಿದವರದುಶ್ಚೇಷ್ಟೆಯಸಭೀಕ್ಷಿಸಿಮುಗುಳ್ನಗೆನಕ್ಕು

ಕಂ॥ ಘನಮುಹಿಮಾಂಬುಧಿದೂಷಕ | ಜನವನಧರಚಂಡಮಾರುತಂಚೌಡಾರ್ಯಂ ॥ ತನುಪೊಂಪುಳಿವೋಗುತ್ತಿರೆ | ಬಿನದದಿದಡೆನೋಡಿಕನೋಡಿತನ್ನೊಳಂದಿಂತೆಂದಂ .... ||೫೩||

ಚಂ॥ ವೃ॥ ವನಜವಾಂಡಭಾಂಡಚಯ ಮಂಪಡೆಯಲ್ಕೆಪಲ್ಸಮರ್ಥರೆಂ | ದೆನಿಪಮಹೇಶಭಕ್ತವರಗ್ಗ್ರೀಕಪಟಾಕೃತಿಗಂಗೆಮಿತ್ತುಜೀ ॥ ವನಮನಮುಚ್ಚುಗಂದಮಿದುಲಕ್ಷ್ಯಮೆಮಾಣದೆಮಾಳ್ಪೆನಿಂತುಟೆಂ | ದನವಧಿಶೌರ್ಯನಣ್ಮಿನೆನೆದಾದ್ಯಗಣಾಂಘ್ರಿಸರೋಜರಾಜಿಯಂ ||೫೪||

ಚ|| ಕರತಳಖಡ್ಗ ಮುಂಜಡಿದುಚಿಂ ಮುತೆತಾಪಸಜೀವನೋದಯ | ಕ್ಕಿರದಿದುಕಾಮಿಂಚೆನಿಸಿಲಂಘಿಸಿಮಾಡದಮುಂದೆಪಾರರ ॥ ಚ್ಚರಿವಡೆನಿಂದುಕೃತ್ರಿಮತಪಸ್ವಿಯಕ್ಕೈವಿಡಿದೆತ್ತುತೀಳ್ಗಣಾ | ಕರಜವದಿಂದನೊಂದುಸುರಿಚೌಡಮಹಾಪ್ರಭುತತ್ಷಣಾರ್ಧದೋಳ್ ||೫೫||

ಮ॥ ಸ್ರ॥ ತನುಭಾವಂತ ವಂಬಡೆದುಮಹಿಗೆದುಂಮಿಕ್ಕಿವೈಯಿಕ್ಕಿಚೌಡಾ | ರ್ಯನಪಾದಾಂಭೋರುಹಕ್ಕಾಕಪಟತಪಸಿದೇವೆಶನಿಂಮಿಾಕೃಪಾಲೋ ॥ ಕನದಿಂದಾಂಪುಟ್ಟದೆಂಕೇಳೆನಗೆಪಿತನುಮಾಚಾರ್ಯಮುಂಲಿಂಗಮುಂನೀ |ನೆನಿತಾಂತಂಸತ್ಯಮೆನ್ನಂಪೊರೆಯುದೆನುತೆಕೊಂಡಾಡಿದಂಭಕ್ತಿಯಿಂದಂ

ವ|| ಇಂತುಕರಕಂಜಮುಂಮುಗಿದು ದೈನ್ಯಂಮಿಗೆ ಪೊಗಳ್ವತಾಪಸನಂಚೌಡದೇವಂಕೃಪಾವಲೋಕನದಿ ನಭೀಕ್ಷಿಸಿ ಶಿವದೀಕ್ಷೆಯಿಂ ಕರುಣಿಸಿಚಿರಂಜೀವತ್ವಮನಿತ್ತು ರಕ್ಷಿಸಿನಿರರ್ಗಳ ನಿಜಪ್ರಭಾವಮಂಬೀರುತ್ತಮಿರ್ಪಿನಮಾಗಳ್

ಚ|| ವೃ॥ ಪರಮತಮತ್ತವಾದಿತತಿಯಚ್ಚರಿವಟ್ಟುಪೊದಳ್ದಭೀತಿಯೊಳ್ಪೊರೆದೊಡಲಂಧರಿತ್ರಿಯೊಳೆಸಾರ್ಚಿಸಮಸ್ಕೃತಿಗೆಯ್ದುದೇವಚೌ ॥ ಡರಸಚರಾಚರಪ್ರಕರಪಾಲಕಪಾಲಿಪುದೆಂಮಸಜ್ಜರಂ | ದುರಿತನಿಯುಕ್ತರಂಪಶುಗಳಂಗುಣಹೀನರನೆಂದುದೈನ್ಯದಿಂ .. ||೫೭||

ಚ|| ಅಭಯಮ ನೊಲ್ದುಬೇಡಿಮ ರಿದಾಮುದಮತ್ತರತಪ್ಪನಾಗಣ |

ಪ್ರಭುಪದದೀಕ್ಷಿಸುತ್ತೆ ಕೃಪೆಯಿಂದಭಯಂಗೊಡುತನ್ನ ದರ್ಶನ ‖ ಪ್ರಭವಜ
ಡತ್ವಮುಂಬಿಡಿಸಿಸೈವಮುತಸ್ಥಿತಿಯನ್ನೆಗಳ್ವಿಸ । ದ್ವಿಭವದಿನೊಪ್ಪಿದಂಮುಸುಟಿ
ಚೌಡಮಹಾತ್ಮನಿಳಾತಳಾಗ್ರದೊಳ್ .... ‖೫೮‖

ಮ‖ ಸ್ರ‖ ಇಳೆಯೊಳ್ ಶ್ರೀಚೌಡದೇವಂಮುನಿಪವೃಷಭಕನ್ಯಾಗತ
ಪ್ರಾಣಮುಂಕೊ । ಟ್ಟೆಳಿಪರ್ಕೈಗೆಯ್ದು ಮಾಯಾಮುನಿಗೆಹರಣಮುಂಸಾರ್ಚಿ
ಭೂಸುತ್ಯನಾಗಿ ‖ ದಳವಂಕೇಳ್ದಿನಣ್ಪಿಂದೆರಗಿನುತಿಸುತಾನಂದಮುಂತಾಳ್ದು
ಭಕ್ತಾ । ವಳಿಯೊಳ್ಕೈರಿಡಾಡುತ್ತಂ ತನ್ಮಹಿಮೆಯನೆಸೆದಂಭಕ್ತಿಸಾಂದ್ರಂ
ವೃಷೇದ್ರಂ .... ‖೫೯‖

ಕಂ‖ ಮುಸುಟಿಯಚೌಡೈಯ್ಯನಸ । ಲ್ಲಸಿತಚರಿತ್ರಮನದಾವನೋ
ದುವನಾವಂ ‖ ರಸೆಯೊಳ್ಕೇಳ್ವನವಂಸಂ । ತಸದಿಂಪಡೆವಂಚಿರಾಯುವಂ
ಘನಸುಖಮುಂ ‖೬೦‖

ಲಲಿತಪದವೃತ್ತ‖ ಶಾಂತನಿಜಮಾನಸ ನಿಶಾಂತಪರಿವರ್ಜಿತಲತಾಂತ
ಶರನಿರ್ಜಿತಕೃತಾಂತಶಿವಯೋಗಾ । ಪ್ರಾಂತಸುಖಯುಕ್ತನಿಗಮಾರಿತ ಚಿದ
ಭಿಜ್ಞ ಭವತಾಂತನತರಕ್ಷಶಶಿಕಾಂತದ್ರುವಳಾಂಗಾ ‖ ದಾಂತಪರಮೇಶಪರಿಚಿ
ತನಪರಾಯಣನಿತಾಂತಶಿವಮಂತ್ರ ಕಲಿತಾಂತರನಿರುದ್ಧ ಸ್ವಾಂತಶಿವಲಿಂಗಜ
ಯಸಂತತಕೃಪಾಕರನಿರಂತಗಣನಂದನಗೆಸಂತಬಸವೇಶಾ ‖೬೧‖

ಉ ‖ ವೃ ‖ ಶುಂಭನಿಶುಂಭಭಂಜನೆ ಕದಂಬಕದಂಬನಿವಾಸೆಕುಂಭಿ
ರಾ । ಟ್ಕುಂಭಪಯೋಧರೋಜ್ವಲೆಚಿದಂ ಬರರೂಪಿಣಿಕಂಬುಕಂಠಿವಿ ‖ ಶ್ವಂ
ಭರಜಂಭವೈರಿಪದಾಂಬುಜೆಶಂಭುಸಂಭ್ರಮಾ । ರಂಭಣಶುಂಭದಂಬಿಕೆಮು
ದಂಬಿಕೆಪಾಲಿಪುದೆಂನಶಾಂಭವೀ ‖೬೨‖

ಗದ್ಯ‖ ಇದು ವಿನಮದಖಿಳಸು ರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ
ಪರಮಶಿವಲಿಂಗ ಪಾದಾರವಿಂದ ಪರಾಗ ಭಸಿತ ಭಾಸುರ
ಲಲಾಟಪಟ್ಟ ಸರಸಜನಮಾನಿಕೋಭಯಕವಿತಾವಿಶಾರದ
ಶ್ರೀಷಡಕ್ಷರ ದೇವಭಕ್ತಿವಿರಚಿತ ಶ್ರೀಮದ್ಬಸವರಾಜ
ವಿಜಯ ಮಹಾಪುರಾಣದೊಳ್ಮೋಳಿಗಮುಸು
ಟಿಚೌಡದೇವಮಹತ್ವಕಥನ ಮೇಕವಿಂ
ಶತ್ಯಾಶ್ವಾಸಂ ಪರಿಸಮಾಪ್ತಂ.

ಶ್ರೀಬಸವಲಿಂಗಯನಮಃ

ಸುರಗಿಯ ಚೌಡದೇವನಕಥೆ.

ನಾಂದಿ|| ಲಲಿತಪದವೃತ|| ಸಿಂಧುರ ಮಹಾಸುರಜಲಂಧರಸ್ಮರಗಾರಿ ಸಮುಹಾಂಧಕಮದಪ್ರಹರಸಿಂಧುಧರಲೀಲಾ | ಸಿಂಧುಹಿಮದೀಧಿತಿಕಬಂಧ ಜಮುಖೋಗ್ರ ಸುಸುಗಂಧಭರಮಾಲ್ಯನಿಜಕಂಧರಶುಭಾಂಗಾ || ಬಂಧುರಜ ಗತ್ರಯಧುರಂಧರಪದಾನತಭವೇಂಧನಹುತಾಶವಿಧಿಕಂಧರಕರಾಶಾ | ಬಂಧ ಹರವರರಕ್ಷಿಸಘಕಂದರಚಯಪ್ರಬಲಗಂಧವಹಭಕ್ತಗಣಬಂಧುಬಸವೇಶಾ||

ಲಲಿತಪದವೃತ|| ಸಿದ್ಧಸರಮಾಗಮನಿಬದ್ಧ ಶಿವತತ್ವರುಚಿವರ್ಧಮು ನಿಸೇವ್ಯಜಿತಜೌದ್ಧಮುಖವಾದಾ | ಶ್ರದ್ಧಜನದುರ್ಲಭನಿರುದ್ಧಕರಣೇಂದ್ರಿ ಯನಿಸಿದ್ಧತನುವರ್ತನವಿವೃದ್ಧಶಿವಯೋಗಾ || ಚಿದ್ಘನಯಶೋರುಚಿಪಿಸ ದ್ಧದಶದಿಕ್ತಟವಿಪದ್ಧರಣಿಭೃತ್ಕುಲಿಶಭೃದ್ಧರಪದಾಬ್ಜಾ | ನದ್ಧನಿಜಚಿತ್ತಜ ಗದುದ್ಧರಣಶೀಲಪೊರೆಯುದ್ಧಪರಭಂಜನವಿಶುದ್ಧಬಸವೇಶಾ ||

ಕಂ|| ಶ್ರೀಶಾಂಭವೀಮುಖಾಕ್ಷಿ ಕು | ಶೇಶಯಕುಮುದಾನುರಂಜ ನಾಕ್ಷಿದ್ವಯನಾ || ಕಾಶಮಣಿಜಾತಹರನಖಿ | ಳೇಶಂಪೊರೆಗೆಂಮನಾವಗಂ ಶಿವಲಿಂಗಂ .. .... ||೧||

ವ|| ಮತ್ತಮಾಪುರದಲ್ಲಿನೆಗಳ್ದು

ಚಂ|| ವೃ|| ನಿರುಪಮದಿವ್ಯಮೂರ್ತಿನಿಜಲಿಂಗೆಸಮಂಚಿತಮರ್ಮವೇ ದಿಸ | ದ್ಗುರುಚರಲಿಂಗಭಕ್ತ ನಘಮೂರನುದಾರ ಸಪಾರಪುಣ್ಯಕೀ || ರ್ತಿ ರುಚಿರನುಜ್ವಳಪ್ರಬಳಶೌರ್ಯನಪಾಸ್ತಕಳಂಕನೊಪ್ಪುಗುಂ | ಸುರಗಿಯಚೌಡ ದೇವನೆನಿಸಿಪ್ಪಮಹಾತ್ಮನನೂನವೈಭವಂ ||೨||

ಮ|| ಜಿತಸಂಸಾರವಿಕಾರಸಂಚಿತ ಮಹಾವೀರವ್ರತಾಧಾರ ನೂ | ರ್ಜಿತಲಿಂಗಪ್ರಣಯಪ್ರಸನ್ನಕರಣಂ ಲಿಂಗಾಭಿಮಾನಕ್ರಿಯಾ || ಶ್ರಿತನುರ್ವಿ ವಿನುತಂ ಪ್ರಸಾದಯುಗಸೇವಾನಂದಯುಕ್ತಂ ಕೃಪಾ | ನ್ವಿತಚಿತ್ತಂಗುಣ ಶಾಲಿಯಷ್ಟವಿಧಸದ್ಭಕ್ತಿಕ್ರಮಭ್ರಾಜಿತಂ ||೩||

ವ|| ಎಂಬನೆಗಳ್ತೆವೆತ್ತು

ಚಂ|| ವೃ|| ಅನುದಿನಮೊಲ್ದುತನ್ನಮನೆಗೆಯ್ದಿದ ಜಂಗಮಲಿಂಗಸಂ ಚಯ | ಕ್ಕನುನಯದಿಂನಮಸ್ಕರಿಸಿಪೂಜಿಸಿದಿವ್ಯರುಚಿಪ್ರಸನ್ನಭೋ || ಜನನ

ವಶಾಕಪಾಕ ಪರಮಾನ್ನರಸಾಯನಖಾದ್ಯಮುಖ್ಯಮನದೊಲವಿಂ ನಿವೇದಿಸಿ
ಕರಾಂಜಲಿಗೆಯ್ದು ಪೊಡೆಗೆಳ್ದ ಭಕ್ತಿಯಿಂ ||೪||

ವ|| ರಸಾಸ್ವಾದ್ಯಸ್ಯ ಜಿಹ್ವಾಗ್ರಾವ ಸ್ವಾಮಿಕಮುಖೋದ್ಭವ, ಯೆಂದು ಭವದ್ವಾಕ್ಯಮುಂಟಪ್ಪುದವರಿಂ ದೇವನೀಂ ಭಕ್ತರೂಪದಿಂ ಭುಂಜಿಪುದೆಂದು ಬಿನ್ನಪಂಗೆಯ್ದು ತಣಿಪಿನೋಡಿ ಪರಮಾನಂದಮನಾಳ್ದನಂತರಂ ಪರ್ಯಘ್ರಾಜಿನಾಸ್ತರಣದೊಳ್ಪೂರ್ವಾಭಿಮುಖನಾಗಿ ಕುಳ್ಳಿರ್ದು ನಿಜೇಷ್ಟಲಿಂಗಮುಂ ಪೂಜಿಸಲೆಂದು ಪಜ್ಞಿಸಸಜ್ಜೆಯಿಂ ಕರಾಂಬುಜಕ್ಕೆ ಬಿಜಯಂಗೆಯ್ಸಿ, ತಲ್ಲಿಂಗಮುಂ ನೋಡಿ ಜಲಾಭಿಷೇಕದಿಂ ಮುನ್ನವೆ ಸುಖಬಾಷ್ಪ ಜಲಕಲ್ಲೋಲದಿನಭಿಷೇಕಂಗೆಯ್ದು ಧೂಪಾರ್ಪಣದಿಂ ಮುನ್ನಮೆ ಚಿದಗ್ನಿವಿನಿಹಿತವಾಸನಾಧೂಪಧೂಮಮುಂ ಬೀಸಿ, ಮುನ್ನವಾಕ್ಮೇಂದ್ರಿಯಾರ್ಪಣಮುಂ ನೆಗಳ್ದು, ಗಂಧಾರ್ಪಣದಿಂ ಮುನ್ನಮೆ ಚಿದನುಭವ ಸುಗಂಧಾನುಲೇಪನಮುನ್ನಿಮಿರ್ಚ್ಚಿ, ನೀರಾಜನಾರ್ಪಣದಿಂ ಮುನ್ನಮೆ ಯಾತ್ಮಾಂತರಜ್ಯೋತಿಯುಂ ಬೆಳಗಿ, ನೈವೇದ್ಯಾರ್ಪಣದಿಂ ಮುನ್ನಮಾತ್ಮನೈವೇದ್ಯಮುಂ ನಿವೇದಿಸಿ, ತಾಂಬೂಲಾರ್ಪಣದಿಂ ಮುಂನಮೆ ಯನುರಾಗರಸತಾಂಬೂಲಮುಂ ಸಮರ್ಪಿಸುತ್ತನಂತರಂ, ಸಾಂಗಮೆನೆ ನೈವೇದ್ಯಾಂತ ಬಾಹ್ಯಪೂಜೆಯನೊಡರ್ಚುತಾಗಳ್

ಚಂ|| ವೃ|| ಮಿರುಗುವಖಡ್ಗಮಂತೆಗೆದು ತನ್ನಯದಕ್ಷಿಣಭಾಗದಲ್ಲಿ ಕಿಳ್ತಿರಿಯಿನಮರ್ಚ್ಚಿ ಸಾರ್ಚಿ ನಿಜಲಿಂಗಮನೀಕ್ಷಿಸಿ ಪೋಜ್ಯವಸ್ತುವಂ || ನೆರೆಗಲಿ ನಿಷ್ಠೆಯಿಂ ಕರದಿ ಸತ್ಕಬಳಾಕೃತಿಗೆಯ್ದು ನೀಡೆ ನೀಳ್ದಿರಕದೆ ತಂ ಭುಕ್ತಿಕೊಳುತೆ ಭುಂಜಿಸುತಿರ್ದನುದಾತ್ತಲೀಲೆಯಿಂ ||೫||

ವ|| ಅಂತು ನಿಜೇಷ್ಟಲಿಂಗಂ ಕರಾಗ್ರದಿಂ ಕಬಳಂಗೊಂಡು ಚರಲಿಂಗವಾರೋಗಿಪುತಾರೋಗಿಸೆ ಕಂಡು ಕಳಿಯೇಮಿರಿ

ಕಂ|| ಅನುದಿನವೀ ತೆರದಿಂ ನೆಟ್ಟನೆ ಕಾಲತ್ರಯದೊಳ್ ಭವನಂ ತಣಿಪುತೆಪಾ || ವನತತ್ಪ್ರಸಾದಮುಂ ತಾಂ | ಮನದೊಲವಿಂ ಸೇವಿಸುತ್ತ ಮಿರ್ಪನವಾಗಳ್ ||೬||

ಕಂ|| ಹರಭಕ್ತರಲ್ಲಿ ಕಂಡಾ | ಸುರಗಿಯ ಚೌಡಯ್ಯನೆಸಗಿದುಜ್ಜುಗಮನಸಪಂ ಪಿರಿದಾನಂದಮನಾಳ್ದಾದರದಿಂ ಬಗೆವೆರ್ಚ್ಚಿ ತವೊಲ್ಮಂದಿಂ ತೆಂಪರ್ ||೭||

ಉ|| ವೃ|| ಮಿರಿದ ಭಕ್ತಿಯಿಂದೆ ಕಲಿಕಾಲಮಹೀಪತಿ ನಿಚ್ಚನಿಚ್ಚಮಿಂ ಪೇಳಿದ ಭಿನ್ನಸೂಕ್ಷ್ಮಧವಳಾನನಶಾಲಿಸುತಂಡುಲಾಳಿ ಮುನ್ನೂರನಿತ್ತು

ಖಂಡಂಗೆ ಮುದಂಮಿಸುವೋದವುಂನಿಮಿರ್ಚ ಸೊಂಪಾರದಶಾಕಪಾಕತತಿ ಯುಂಸವೆುದಲ್ಲಿಮನೋನುರಾಗದಿಂ ...... ||೮||

ಕಂ|| ಮೂವತ್ತುಕೊಳಗವೆುಸಂ | ತೀವಿದ ಬಹುವಿದರಸಾನ್ನತತಿಯ ನೊಡರ್ಚು || ತ್ತಾವಿಭುಸಹಸ್ರಮಣಿಪಾ | ತ್ರಾವಳಿಯೊ ಳುಮೇಶ್ವರಂಗೆ ಗಡಣಿಸುತೊಲವಿಂ ...... ||೯||

ಮ|| ವೃ|| ಕರವಾಳಂಕರದಲ್ಲಿತಾ ಳ್ದಿಳಲೆವಿಟ್ಟೋರಂತೆ ಚೆಲ್ವಾದವೊಂ | ದೆರೆಯೆನ್ನಿಂದೊಡ ನಾಲಿಸುತ್ತಿರೆ ಮಹೇಶಂಭಕ್ಷ್ಯಬೋಜ್ಯಾನ್ನಸಾಧುರುಚಿಸ್ಫೀತ ರಸಾಯನಂಗಳನೊರಲ್ದಾಸ್ವಾದನಂಗೆಯ್ವುಭಾ | ಸುರನಾದಂಕಿವಿಗಿಂವನೀಯೆಸವಿದಂತಾನೊಂದುಭೂಭಾಗದೊಳ್ ||೧೦||

ಕಂ|| ಮನ್ನಣೆವೆತ್ತೊಪ್ಪುವಭ ಕ್ತಂನಿಜಜಿಹ್ವೆಯೊಳೆಸವಿಯುನೀಯುತೆಮುಗುಳ್ದಾ || ಚನ್ನೆಯನುಂಬ ಕಳವಂ | ತಾನ್ನಲಿದೊಡನುಣಿಸಿದನಭವಾನೀಪತಿಯಂ ||೧೧||

ಶಾ|| ವೃ|| ದ್ರಾಕ್ಷಾರಾಮವೆುನಿಪ್ಪತತ್ಪುರದೊಳಿರ್ಪಳ್ಬೋಳಿಕಾದೇವಿರು | ದ್ರಾಕ್ಷಾಕಾರ ಲಸತ್ಕಳೇವರೆ ಯಲಂಪಿಂ ಪುಳ್ಗಿಯುಂಬ್ಬಂದುಜಿ || ಹ್ವಾಕ್ಷೇಪಂಸವಿಯಾಗೆ ಪುಳ್ಗಿಯನದಂ ತದ್ವಸ್ತ್ರದಿಂಮುಚ್ಚಿ ಭಾ | ಳಾಕ್ಷಂಗೀಯುದೆನುತ್ತೆ ಚೇಟಿಯಕ ರಾಂಭೋಜಾತದಿಂದಟ್ಟಿದಳ್ ||೧೨||

ಮ|| ಜವದಿಂ ಬಂಡವಳಂಗೆಜಾರಿಯ ನಿವಾಸಕ್ಕಳ್ಕರಿಂ ದೇವದೇವ ವರೇಣ್ಯೋತ್ತಮ ಭೀಮನಾಥ ಪದೆದೆಂಮಕ್ಕಂ ಕರಂಪುಳ್ಗಿಯುಂ || ಸವಿಯುತ್ತಿರ್ದನಿದಾಗೆ ನಿನ್ನನೆನೆದೆಂನಿವಂಟ್ಟಿದಳ್ಬಟ್ಟಲೋ | ಳ್ತವೆತಂದಿರ್ದಪೆನೆಂಬುದುಂತರುಣಿ ತಾರೆಂದೀಶ್ವರಂ ಪಾತ್ರೆಯುಂ || ||೧೩||

ಕಂ|| ಪ್ರಣಯದಿನೀಳ್ದುಕೊಳುತ್ತಂ | ಫಣಿಕಟಕಂ ಸವಿದುಪುಳ್ಗಿಯಂಬಟ್ಟಲನಂ || ಗಣಕಿಟ್ಟಂಕ್ರೀಂಕಾರ | ಕ್ವಣಿತಂಕೈಗೆಣ್ಮೆನೋಳ್ಪರರಿದೆಂಬಿನೆಗಂ || .... ||೧೪||

ಕಂ || ಎಂದೆಂಬಕಥೆಯನಾಲಿಪೆ | ವಿಂದಿಳೆಯೊಳ್ಕಂಡೆ ವಮುಮಚೌಡಯ್ಯಂನ || ನ್ನಿಂ ದಭವಂಗೂಡಿದ ಸುಣಿ | ಸಂಧಿಟಮಿದನೆಂದವರ್ಕರಂಕೀರ್ತಿಸಿದರ್ || .... ||೧೫||

ವ|| ಆಗಳ್ ||

ಕಂ|| ಬಸವರಸನೆಯ್ದಿನಿಜಪದ | ಬಿಸಜಕೆ ಪೊಡಮಟ್ಟು ನಲಿದು

ಪೊಗಳುತ್ತಿರೆ ಸಂ ॥ ತಸಮುಲರ್ದು ಜಸದಿನೊಪ್ಪಿದ । ನೆಸಪೃಕಕಲ್ಯಾಣನೆ ಗರದೊಳ್ ಚೌಡಾರ್ಯಂ ॥ .... ॥೧೬॥

ರತೋದ್ಧತವೃತ್ತ॥ ಮತ್ತಪೋರ್ವನಸಮಾನಸಲ್ಲಿದ । ದ್ವ್ಯತ್ರನೀತ ಪದಭಕ್ತಿತತ್ಪರಂ ॥ ಮತ್ತವಾದಿಜಯೆಹೃದ್ಭಯಂಕರೋ ದಾತ್ತಶೌರ್ಯನಿಧಿ ಲೋಕಪಾವನಂ ॥ .... ॥೧೭॥

ಚಂ ॥ ವೃ ॥ ಅನಘನನಾಮಯಂ ವಿಲಯದೂರ ನಪಾರಕೃಪಾಬ್ಧಿ ಚಂದ್ರಿಕಾ । ರ್ಜನನಿಜಕೀರ್ತಿಪೂರಿತ ದಿಶಾಂತನನಂತನುಪತ್ಯಶಾಲಿ ಸ ॥ ಜ್ಜನನುತಿಪಾತ್ರ ನುಜ್ಜ್ವಳಚರಿತ್ರ ಸುದಾತ್ತಕಿರಾತರುದ್ರನೆಂ । ದೆನಿಸಿತೆಲುಂ ಗುಜೊಮ್ಮವೆಸರಿಂದೆಸೆದಿರ್ಪನಖರ್ವವೈಭವಂ ______ ॥೧೮॥

ಕಂ॥ ಕಲಿಕಲುಷಹರಂ ಜಂಗಮ । ವಿಲಸತ್ಪದಭಕ್ತ ನಜಿತನನುಪ ಮ ಸುಗುಣೋ ॥ ಜ್ವಲ ನಮಿತಚಿದ್ಘನಾಸ್ಪದ । ದಲಘುತರಂ ವಿಧಿನಿಷೇಧ ವಿರಹಿತಚರಿತಂ .... ॥೧೯॥

ಕಂ॥ ಬೆಂಬಿಡದೆ ಸುರಿಯೆಸಂತಸ । ಗಂಬನಿವುಳಕಂ ಗಳುಣ್ಮೆ ಪರವ ಶಭಾವಂ ॥ ಮುಂಬರಿಯೆ ಪೂಜಿಸುತೆ ನಿಟ । ಲಾಂಬಕನಂ ಭಕ್ತಿಭಾವದಿಂ ಜೊಂಮ್ಮಯ್ಯಂ .... ॥೨೦॥

ಚರಲಿಂಗದಾಸಭಾವ । ಸು ರಿತಂ ಸುಖಿಮಿರ್ದನಿತ್ತಲತಿರುಚಿರ ಶ್ರೀ ಗಿರಿಯೊಳವಿಳಸಮಾಧಿಯೋಳಿರುತೆಶಿವಾನಂದನೆಂಬಮುನಿವರನೊರ್ವಂ ॥೨೧॥

ತೆಲುಗು ಜೊಂಮ್ಮಯ್ಯನ ಕಥೆ

ಚಂ॥ ವೃ॥ ಪವನಖರಾಳಿ ಚೀರ್ವರಿಯೆ ಪಾಣಿನಖಾವಳಿ ನೀಳ್ದುಬಳ್ಳಿ ಳಂ । ಪುದಿದಿರೆ ಬೆಳ್ಳಿವಳ್ಳಿಗಳ ಪೋಲದರುಜ್ಜ್ವಳರೋಚಿಸುತ್ತಲುಂ । ಪದದು ಮುಸುಂಕೆ ಕೇಶಚಯಮುಂ ಗಮನಾವರಿಸುತ್ತಿತೋರೆ ಪಿಂಗದೆ ಶಿವಲಿಂಗ ದಂಘ್ರಿಯನೆ ಜಾನಿಸುತಿರ್ದನತೀವಭಕ್ತಿಯಿಂ .... ॥೨೨॥

ಕಂ॥ ಆಮುನಿಯಪಾದಸೇವೆಯ । ನಾವೋದದಿ ನೆಸಗುತಿರ್ಪ ತ ದ್ವರಶಿಷ್ಯಂ ॥ ಭವಿಮುಹಿತ ಕಂದಮಾಲ । ಸ್ತೋಮಂ ದರಲೆಂದು ತಳರು ತಂಕಟ್ಟದಿರೋಳ್ .... ॥೨೩॥

ಮ॥ ಸ॥ ವೃ॥ ಬಿನದಂಬೆತ್ತಿಳ್ತರುತ್ತಂ ಯುವತಿಸಹಿತಂ ಯುವತಿ ಸಹಿತ ಗಂಧರ್ವಸಂದೋಹಮಾ ವಂಪಿನಯೋಗಾರೂಢ ಯೋಗೀಶ್ವರನ ಸು ರುಜಟಾಪ್ರಾಪ್ತತಸ್ಥೈರ್ಯ ಭಾಸ್ವ॥ ತ್ತನುವಂಕಂಡಲ್ಲಿ ಚಿತ್ರಮುನಿಪನೆಸೆದು

ಪಂ ವೃದ್ಧಭಲ್ಲಾಕದಂತೆಂ | ದುನಿತಾಂತಂಪೊಯ್ದು ಕಯ್ಯಂಮಿಗೆ ನಗೆಮು
ಳಿಸಿಂನೋಡುತಿಂತೆಂದನಾಗಳ್ .... ||೨೪||

ಮ|| ಎಳೆದುಶ್ಚೇಷ್ಟ ಕನಿಷ್ಟಮಾನಸ ಮಹಾಕಾಮಾಂಧ ಗಂಧರ್ವ
ಸಂ | ಕುಲಮೇ ಕೊರ್ವಿದಗರ್ವದಿಂ ಘನಶಿದಾನಂದಾಖ್ಯಯೊಗೀಂದ್ರನಂ
ವಿಲಯಾತೀತಶಿವೈಕ್ಯಭಾವಯುತನಂ ಭಲ್ಲಾಕದಂತಿಪನೆಂ | ದುಲಿಯಲ್ತ
ಕ್ಕುದೆ ನೋಡದಾತನಮಹಾಮಾಹಾತ್ಮ್ಯವಿಸ್ತಾರಮಂ ||೨೫||

ಕಂ|| ಪರಮತಪೋಧನನಂ ಬ | ಲ್ಗರಡಿಯವೊಲೆನುತ್ತೆ ನುಡಿದಕ
ತದಿಂಧರೆಯೋ || ಳ್ಕರಡಿಗಳಾಗಿರಿ ನೀವೆನು | ತಿರದಿತ್ತಂಘೋರಶಾಪಮಂ
ಮುನಿತನಯಂ || .... ||೨೬||

ವ|| ಎನೆಕೇಳ್ದುಗಂಧರ್ವರ್ ನಡನಡುಗಿಬೆಬ್ಬಳೆವೋಗಿ ಪರಿತಂದು
ಪದದೋಳ್ಮೈಯ್ಯಿಕ್ಕಿನಿಂದು ಕೈಯ್ಯಂಮುಗಿದು ||

ಮ|| ವೃ|| ಬಕವೃಂದಂಬಲ್ಲುದೇ ಹಂಸನಮಹಿಮೆಯ ನಂ ಭೋಜ
ಸೌರಭ್ಯಮಂಭೇ | ಕಕದಂಬಂಬಲ್ಲುದೇ ಭಾನುವಿನಘನಲಸತ್ತೇಜಮಂಬ
ಲ್ಲುದೇ ಭಾನುವಿನಘನಲಸತ್ತೇಜಮಂಬಲ್ಲುದೇಕೌ || ಶಿಕಯೂಥಂಸಾರ
ಕಂಠೀರವದಳವನದೇಂಬಲ್ಲುದೇ ಳೀವಪೇಳ್ಗಂ | ಬುಕಸಂಘಂ ಶಂಭುಭ
ಕ್ತ್ಯೋನ್ನತಿಯಬಗೆಯನೇಂಬಲ್ಲರೇ ದುರ್ಮದಾಂಧರ್ || ||೨೭||

ಕಂ|| ಅದರಿಂದಾವರಿಯದೆ || ಡಿದ ತಪ್ಪಂಮರೆದು ದೇವನೀವಿತ್ತೀ
ಶಾ || ಪದ ಮೋಚನಮಂಪರಿಪೂ | ರ್ಣದಯಾನಿಧಿಕರುಣಿಸೆಂದುಮುಗು
ಳ್ದೆರಗಿರ್ದರ್ .... ||೨೮||

ವ|| ಆಗಳಾತಾಪಸಕುಮಾರಂ ತಾನಿತ್ತಮಂದಿರಶಾಪಂ ಪರಿಪಡುವಂ
ದಮನೆನೆದು ||

ಕಂ|| ಎಲೆಗಂಧರ್ವರೆ ಧರೆಯೊ | ಳ್ತೆಲುಂಗಜೊಮ್ಮಣ್ಣನೆಂಬಕಾರಣ
ಪುರುಷಂ || ವಿಲಸತ್ಕಲ್ಯಾಣಪುರ | ಸ್ಥಲದೊಳ್ಕಂಗೊಳಿಪ ನಮಿತಮಹಿ
ಮಾವರಣಂ || .... ||೨೯||

ಕಂ|| ಅವನಕರದಿಂದೆವೃತಿಸಂ | ಭವಿಸೆವಲಂ ನಿಮಗೆಶಾಪಮೋ
ಚನಮಕ್ಕುಂ || ಶಿವಕರದಿನಳಿನದಾನವ| ನಿವಹಕ್ಕೆಂತಂತೆಮೋಕ್ಷಗತಿದೊ
ರೆಕೊಳ್ಗುಂ || .... ||೩೦||

ಕಂ|| ನಿಯತಂಕಲ್ಯಾಣದಸಾ | ರ್ಣಯೊಳೊವ್ಪುವ ಕಾಡೊಳೆಯ್ದಿ

ಕರಡಿಯರೂಪಿಂ ॥ ಭಯಮಿಲ್ಲದೊಗೆಯುದೆಂದಾ । ದಯಾಕರಂ ಬೆಸಸೆ
ಬಂದುಪುಟ್ಟಿದರವರೊಳ್ ॥ .... ॥೩೧॥

ವ॥ ಅಂತವರ್ಭಲ್ಲೂಕಾಕೃತಿಯಿಂ ತದ್ವಿಪಿನಾಂ ತರಾಳದೊಳ್ತೆಲುಂಗೆ
ಜೊಂಮ್ಮೈಯನ ಬರಸಂಬಯಸುತ್ತಮಿರ್ಪ್ಪನದೊಂದುದಿವಸಂ

ಉತ್ಸಾಹವೃತ್ತ ॥ ಆತೆಲುಂಗಜೊಮ್ಮ ನಾಮಹಾವನಾಂತರಕ್ಕೆಸಂ ।
ಪ್ರೀತಿಯಿಂದೆಬಂದುಪುಷ್ಪಪತ್ರಪೂಗಮುಂಪುರಾ ॥ ರಾತಿಪೂಜೆಗೆಂದುಕೊಯ್ವ
ವೇಳೆಯುಲ್ಲಿ ಶಾಪಸಂ । ಜಾತಭಲ್ಲರೂಪರಲ್ಲಿಕಂಡರಾಮಹಾತ್ಮನಂ ॥೩೨॥

ಕಂ॥ ಮುನಿಮುನ್ನಪೇಳ್ದ ಕುರುಪಂ । ನೆನೆದೀತನೆಜೊಂಮಯ್ಯಾಖ್ಯ
ನಪ್ಪಂ ಧಿಟಮೆಂ ॥ ದೆನುತೊಲ್ದು ಸುತ್ತಿಮುತ್ತಿದ । ರನಘನಮುಂದಣ್ಗೆ
ನಡೆಯಲೀಯದೆಕಡುಪಿಂ ॥೩೩॥

ವ॥ ಅವರೊಳೊಂದುಬಲ್ಗರಡಿಮುಂದಣ್ಗೆಬಂದು ಪೊಡಮಟ್ಟುಪೊ
ಗಳ್ದು.

ಚ॥ ವೃ॥ ಕರಡಿಯಡಾಳ್ಕೆಯಿಂ ಮುನಿಪನಿರ್ಪನೆಂದವಿವೇಕಭಾ
ವದೆ । ಳ್ತರದಿ ಮಹಾತ್ಮನಂ ನುಡಿದವಾಚಕದೋಷದಿಶಾಪಮಾಂತುತ ॥
ದ್ವರಮುನಿಪುತ್ರ ನೀಂಕರಡಿಯಾಗಿರುತಿರ್ದಪೆವಿಲ್ಲಿಮುಂದೆ ಗಂ । ಧರರೆನಿಸಿ
ರ್ಪೆವೈಯ ಭವದೀಯಕರಾಗ್ರಶರಾಗ್ರಪಾತದಿಂ ॥೩೪॥

ಚಂ॥ ಮುಡಿಯೆ ವಿಶಾಪಮಕ್ಕುಮೆಮಗುನ್ನತಮೋಕ್ಷಮೆ ಸಾರ್ಗೆಮ
ಲ್ತೆನಿ । ಮ್ಬುಡಿಗೆಳೊರಲ್ದು ಮೇಣದರಿನಾಡುತೆ ಬೇಂಟೆಯನೆಮ್ಮರಕ್ಷಿಸ ॥ ಲ್ಕ
ಡೆಯಲಿವೇಳ್ಕುಮಿಲ್ಲಿಗಿದನರ್ಥಿಪೆವೆಂದೆನೆ ಲೇಸೆನುತ್ತೆ ಪಂ । ಪಡರ್ದಿರೆ ಸಂ
ತಮಿಟ್ಟುರುಚಿರಾಕ್ಷಿಯೊಳೀಕ್ಷಿಸಿ ತತ್ಪ್ರಕಾರಮುಂ ॥೩೫॥

ಮ॥ ನೆನೆಯುತ್ತಂ ನಿಜಮಂದಿರಕ್ಕೆನಲವಿಂಬಂದಂದು ತಾಂ ತಂದ
ವಂ । ಸ್ವನವೀನಪ್ರಸವಂಗಳಿಂಭಜಿಸುತಂ ಭಾಳಾಕ್ಷನಂ ಮಾಣದಾ ॥ ದಿನ
ಮಂ ನೂಂಕಿಪಳಚ್ಚನರ್ಕ್ಕನೊಗೆವಲ್ಲಿಂ ಮುನ್ನಮೇಳ್ದೀಶನ । ಮನವೊಲ್ದ
ರ್ಚಿಸಿ ತತ್ಪ್ರಸಾದರಸಮಂ ಕೈಕೊಂಡು ಸಂಪ್ರೀತಿಯಂ ॥೩೬॥

ಕಂ॥ ಅಳವಡೆವ ಸುರಂಗಿಯುಮಂ । ತಳೆದೊಳ್ಗರ್ಪಿಡಿದ ಚಂದಿ
ಯುಂಸುತ್ತಿ ಶರಾ ॥ ವಳಿವುದಿಪಬೆನ್ನಪೊಸಬ । ತ್ತಳಿಕೆ ವಿರಾಜಿಸೆ ಮಯೂ
ರಪಿಂಛಾಂಚಿತಮುಂ ॥೩೭॥

ಮ॥ ಸ್ರ॥ ಧನುವಂಕೈಕೊಂಡು ಗೇಣಂತಳೆದು ಕಟಿಯೊಳೋರಂತೆ

ಮೆಟ್ಟುತ್ತೆ ಕೆಪ್ಪರ್ಣಂ | ಸುದಿಗೆಳ್ಪಿಂಡೆಯ್ದೆ ಕೂರ್ಪಿರ್ಣಂದೊಡವರೆ ಕಲಿವೇಡ ಕ್ಕರ್ಣಳೆಳ್ತಂದುತತ್ಕಾ | ನನಮುಂತಾಂಪೊಕ್ಕುಮಿಕ್ಕೀಕ್ಷಿಸುವಸಮಯುದೊಳ್ಪಿಂಡುಪಿಂಡಾಗಿಧಲ್ಲೂ | ಕನಿಕಾಯಂಬದುಸಾರ್ದ್ರವ್ವಳಿಸಿ ಬಳಸೆ ಕಂಡು ಬಿರ್ಣದಂಜೊಂಮಿದೇವಂ ||೩೮||

ವ|| ಅಂತುರ್ಬಿಚಂಡಧನುರ್ದಂಡಮಂ ಜೇವಡೆದು ಕೂರ್ಗಣೆಯಂ ತೊಡರ್ಚಿ ತೆಗೆನೆರೆದುನೀಡಡಿಗೊಂಡು ನಿಂದಾಗಳ್ನೆರೆದ ಕಿರಾತರಣ್ಮಿ ಕೊರಲ ಹಾಸಮುಂಸಡಿಲ್ಚಿ ಚಟುಂಕುದೋರಿ ಬಿಡಲೊಡನೆ ಜವಂಮಿಗೆಗಜಂಗಳಂ ಪಾಯ್ವುಸಿಂಗಂಗಳಂತೆ ಮುಂಕೊಂಡು ತುಡುಂಕುವಜಾಯಿಲಂಗಳ್ಗೆ ಮೆಯ್ಗೊಡದೊಡಮುರಿದು ಪರಿಪರಿದಿಸುವ ಬಿಯುದರಂಬಿಗೆ ಸಿಲ್ಕದೆ ಕಟ್ಟದಿರೊಳ್ಪಾಯ್ದು ತನ್ನಕೂರ್ಗಣೆಗೊಡಲನೊಪ್ಪಿಸಿಸಡಗರಂಮಿಗೆಭಲ್ಲೂಕಂಗಳ್ನಿರೀಕ್ಷಿಸಿ.

ಕಂ|| ನೆರನೆಚ್ಚು ಕೆಡಪಿದಂ ಕರೆ | ಮರೆಯಿಲ್ಲದ ಶರಣನೊಲ್ದವಂತತ್ಷಣದೊ || ಳ್ಪರಿವಡೆತತ್ತಮಮಿರುಗುತೆ | ಮೆರೆದರ್ಮಣಿಭರಣಭೂಷಿತರ್ಗಂಧರ್ವರ್ .... ||೩೯||

ಚಂ|| ವೃ|| ಮಣಿದವನಂಘ್ರಿಪಂಕಜಕೆ ದೇವಭವತ್ಕೃಪೆಯಿಂದೆಪ್ಪೋದುದಿಂ | ದಣಿಯುರವೇಂಮಚಾಡ್ಯತನು ವೂರ್ವತ್ರಮುಷ್ಟಿತಿಯಾಂತೆವೆಂದುಸಂ || ದಣಿಸಿದಭಕ್ತಿಯಿಂ ಪೊಗಳ್ದುಬಂದವಿಮಾನಮನೇರಿ ಗಂಧರ | ರ್ಫಣಿಪತಿಭೂಷನಿಪ್ಪ ಪುರಿ ಯ್ದಿನಿರಾಜಿಸಿದ ರ್ವಿನೋದದಿಂ ||೪೦||

ವ|| ಅಂನೆವರಮಿತ್ತಲ್

ಕಂ|| ಪ್ರತಿದಿನಮಿಾತೆರದಿಂ ಸಂ | ಸುತಮುಹಿಮಂ ತಪ್ತಭಲ್ಲಮಂತವಿಸಿನಿಜ || ಸ್ಥಿತಿಗೊಳಿಸಿ ಕಳುಪುತಂವಸು | ಮತಿಯೊಳ್ಮೃಗಯಾವಿನೋದಮಂತಳೆದೆಸೆದಂ ||೪೧||

ಕಂ|| ಅರಸಂಕಿರಾತಮುಖದಿಂ | ಶರಣನ ಪರಿಗೇಳ್ದುನೋಡಲೆಳ್ತಂದುವನಾಂ || ತರಕದನನೆಲ್ಲಮನೀಕ್ಷಿಸಿ | ಪುರಜನದೊಡನಾಳ್ದುಚೋದ್ಯಮಂ ಕೀರ್ತಿಸಿದಂ ||೪೨||

ವ|| ಆಗಳ್ತನ್ನಹಿಮೆಯುಂಬಲ್ಲ ಮಹಾತ್ಮರಾತೆಲುಂಗಜೊಂನ್ಯೆಯ್ಯನನಭೀಕ್ಷಿಸಿ ಮುದಂಬಡೆದು

ಚಂ|| ವೃ|| ಪರಮವಿವೇಕಮೆಂಬ ಪೊಳೆವಿಟ್ಟಯೊಳಿಟ್ಟು ವಿಮೋಹಷಿಹ್ಮಮಂ | ನಿರುಪಮುಸಂವಿದುಜ್ವಳಕೃಪಾಣದಿ ಖಂಡಿಸುತಜ್ಞಭಾವಸಿಂ ||

ಘುರಪುನಡರ್ತರ್ಜ ಶೀಳ್ದು ಹರನಿಷ್ಠೆಯೆನಿಪ್ಪಸಿತಾಸಿಯಿಂದೆಸಂ | ಸರಣಚ ಮೂರುವಂ ದುರಿತಬದ್ಧಿಯನಿಕ್ಕಿವಿಲೋಕನಾಸ್ತ್ರದಿಂ ||೪೩||

ಮ|| ನಿರಹಂಕಾರಮೆನಿಪ್ಪ ಬಲ್ಸುರಗಿಯಿಂ ಪೊಳ್ದುಸ್ಮದೋದ್ರೇಕಸೂ ಕರನುಂ ಜ್ಞಾನಮೆನಿಪ್ಪಡಾಯುಧದಿ ಪೊಯ್ದಾಶಾಲುಲಾಯೌಘಮುಂ || ವ ರವೀರವ್ರತಶೂಲದಿಂ ದಿರಿದಸದ್ವ್ಯಾಪಾರಭಲೂಕಮುಂ | ಸ್ಥಿರವೈರಾಗ್ಯಕು ಠಾರದಿಂ ತರಿಯುತಕ್ಷ್ಣೋದ್ರೇಕ ಸಾರಂಗಮುಂ ||೪೪||

ವಿತತಮುಪತ್ತ್ಯಮೆಂಬಗದೆಯಿಂ ಸದೆದುದ್ಧತವೃತ್ತಚಾಪಲಾ | ನ್ವಿತಪ ರಪಾದಿಪಾರವೃಗವೃಂದಮ ಸುರ್ವಿಯೊಳಿಂತುಬೇಟೆಯುಂ || ಪ್ರತಿದಿನಮಾ ಡುತಿರ್ಪನೆನುತಂಪದಪಿಂಪೊಗಳುತ್ತವಿರ್ಪಿನಂ | ಸುತಮುಹಿಮಾಂಕಜೊಂ ಮವಿಭುರಂಜಿಸುತಿರ್ದನುದಾತ್ತಲೀಲೆಯಿಂ ||೪೫||

ಮ|| ಸ್ರ|| ಬಸವೇಶಂಬಂದು ಜೊಂಮುಪ್ರಭುವಿನಡಿಗೆವೈಯಿಕ್ಕಿದೇ ವೇಶ ನಿಂನಂ | ಖ್ರುಸರೋಜಾಘಾತದಿಂದಂ ಮಡಿದಪ್ರುಳುಗಳು ಮೋಕ್ಷ ಮುಂಸಾರ್ಗುಮೆಂಬಂ || ದೊಸೆದಾದಂ ನಿನ್ನಕೈಯ್ಯಿಂದಳಿವ ಮೃಗಗಣಂಶಂ ಕರಾವಾಸಮುಂ ಸಾ | ರ್ವೆಸಕಂ ತಾಂಚೋದ್ಯಮೇಪೇಳೆನುತ ಪೊಗಳುತಿ ರ್ದ್ದಂಗಣಾಂಭೋಧಿಚಂದ್ರಂ ||೪೬||

ಪ್ರಿಯಂವದಾವೃತ್ತಂ|| ಸುರಗಿಚೌಡವಿಭುಸಚ್ಚರಿತ್ರಮುಂ | ಬರೆದೊ ಡೋದಿದೊಡೆಕೇಳ್ದೊಡಳ್ಕರಿಂ || ಧರೆಯೊಳೊಲ್ದುಪಡೆವನಿರಂತರಂ | ನರ ರುಮೇಶಕೃಪೆಯಿಂದಭೀಷ್ಟಮುಂ ||೪೭||

ಕಂ|| ಭೂನುತತೆಲುಂಗಜೊಂಮನ | ಮಾನೋಪಾಖ್ಯಾನಮುಂ ಸ ಮುಂತೋದಿದೊಡೊ || ಲ್ದಾನಂದಿಸಿಕೇಳ್ದೊಡೆಗಿರಿ | ಜಾನಾಯಕನೀವನ ಗ್ಗನಿರುಪಮುಸುಖಮುಂ ||೪೮||

ಲಲಿತಪದವೃತ್ತಂ|| ಕ್ಯಕ್ತಕರಣೇಂದ್ರಿಯುನಿ ಯುಕ್ತವಿಷಯಭ್ರಮ ಸದುಕ್ತಸರಮಾರ್ಥಪರಿಭಕ್ತಪರವಾದ | ಪ್ರಾಕ್ತನಮುಹೇಶಸದಭಕ್ತಕರು ಣಾಮೃತನಿಷಿಕ್ತಸುಯುತೋಭರಿತದಿಕ್ತಟಕನೀಂದ್ರ || ವ್ಯಕ್ತರುಚಿಸಾರಪದ ಸೂಕ್ತಮಣಿಭೂಷಣನಿಷಕ್ತನಿಜಕರ್ಣಪರಿಭುಕ್ತಗರಮಾನೋ | ದಿಕ್ತಮುದ ನಾರಣವಿರಕ್ತಹಿತಪಕ್ಷಿಸುನಿರುಕ್ತಶಿವತತ್ತ್ವಪರಮುಕ್ತಿಬಸವೇಶಾ ||೪೯||

ಪುಷ್ಪಿತಾಗ್ರವೃತ್ತಂ|| ಹರಿವಿಧಿಸು ರಾಜರತ್ನಮೌಳೀ | ಸ್ಫುರಿತಪದಾ

ಬ್ಜಸುರಾಸುರಪೃತ್ಕರಾಳೀ || ಪುರಹರಸುಮನೋಮನೋಜ್ಞಕೇಳೀ | ಪರಿ
ತೆಪಾಲಿಪುದೆನ್ನಭದ್ರಕಾಳಿ ||೫೦||

ಗದ್ಯ|| ಇದು ವಿನಮದಖಿಳಸುರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತರುಚಿನಿಚ ಯತರುಣಾತಪಪರಿಲಸಿತ ಪರಮ
ಶಿವಲಿಂಗ ಪಾದಾರವಿಂದಪರಾಗ ಭಸಿತ ಭಾಸುರಲಲಾಟ
ಪಟಸರಸಜನಮಾನಿ ತೋಭಯಕವಿತಾವಿಶಾರದ ಶ್ರೀ
ಷಡಕ್ಷರದೇವಭಕ್ತಿವಿರಚಿತ ಶ್ರೀಮದ್ವೃಷವರಾಜವಿ
ಜಯಮಹಾ ಪುರಾಣದೋಳ್ ಸುರಗಿ ಚೌಡ
ಜೊಂಮ್ಮೈಯ್ಯ ಕಥಾಭಿವರ್ಣನಂ ದ್ವಾವಿಂ
ಶತ್ಯಾಶ್ವಾಶಂಪರಿಸಮಾಪ್ತಂ
ಶ್ರೀ ಬಸವಲಿಂಗಾಯನಮಃ

ಶಿವಯೋಗನಿದ್ರಾಮುದ್ರೆ.

ಕಂ|| ಶ್ರೀಸರ್ವಮಂಗಳಾಮುಖ | ಭಾಸುರಮಣಿಮುಕುರವೀಕ್ಷ
ಣೋತ್ಸವನಖಿಳಾ || ವಾಸಂತನುರುಚಿಜಿತಕೈ | ಲಾಸಂಮಾಳ್ಕೆಮಗೆಸೌಖ್ಯ
ಮಂಶಿವಲಿಂಗಂ .... ||೧||

ಚಂ|| ವೃ|| ಹರಮತಸಿಂಧುಚಂದ್ರನಕಳಕಂಗುಣಾಂ ಕನಸೂನಭಕ್ತ
ಭಾ | ಸುರಣಸವೇಶ್ವರಂ ಚರಪದಾಬ್ಜಸಮರ್ಚನೆಗೆಯ್ದುನಂತರಂ || ಸುರು
ಚಿರಲಿಂಗಪೂಜೆ ಗೆಯಲುಜ್ಜುಗಿಸುತ್ತೆ ಸುಖಾಸನಸ್ಥನಾ | ಗಿರುತೆ ವಿಭೂತಿ
ಧಾರಣಮನಾಳ್ದು ಶಿವಾಕ್ಷಿಮಣಿಪ್ರತಾನನಮಂ .... ||೨||

ಮ|| ಧರಿಸುತ್ತಂಗದೊಳೊಲ್ಮೆವೆತ್ತು ಶಿವಮಂತ್ರಧ್ಯಾನೆಯುಕ್ತಂ
ಪ್ರಭಾ | ವರಣಂ ಲಿಂಗಮದೆಲ್ದುರಂಜಿಸೆ ಕರಾಂಭೋಜಾತದೊಳ್ನೋಡಿ
ನೋ || ಡಿರುಚಿಸ್ಫೂರ್ತಿಯನಾಳ್ದು ಬಾಳ್ದು ಕರದಿಂದಂ ಸೋಂಕಿಮೆಸೋ
ಕುತಂ ಕರಗುತ್ತಂ ಶಿವಸಂಗಸೌಖ್ಯಸುಧೆಯಂ ತಾನೀಂಟಿ ಮೆಯ್ವೆರ್ಚುತಂ ||

ಮ|| ಅಲರ್ಗಣ್ಣಿಂನಡೆನೋಡಿ ಪಾಡಿ ಪರಮಾನಂದಾಬ್ಧಿಯೊಳ್ಮಾಡಿ
ಮಾ | ಡಿಲಸತ್ಸಂಭ್ರಮಮಾಳ್ದು ತಾಳ್ದುತನುರೋಮಾಂಚಂಗಳಂ ಮಂಗ
ಳಂ || ನೆಲೆವೆಚ್ಚುರ್ತ್ತಿರೆ ಪತ್ತಿಸುತ್ತಿಬೆರಸುತ್ತಾಲಿಂಗದಾಲಿಂಗನಂ | ಜಲಿ
ದೊಪ್ಪುತ್ತಿರೆ ಯೋಗರಾಗರಸದಿಂದಿರ್ದಂ ವೃಷಾಧೀಶ್ವರಂ ||೪||

ಚಂ|| ಒಪವಿಡ ಕಂಪನಂಬಡೆದ ಕಯ್ಯದು ಸತ್ಕ್ರಿಯೆಯಂ ನಿವಿ
ರ್ಚಲೀ | ಯುದ ಮುದಬಾಷ್ಪವಾರಿಯುಪ್ಪೊನಲ್ ಶಿವಲಿಂಗಮನೆಯ್ದೆನೋಡ
ಲೀಯದು ನವಗದ್ಗದಂ ನೆಗಳ್ದ ಸಸ್ತುತಿಗೈಯ್ಯಲೊಡರ್ಚೆ ವಿಘ್ನಮಾದುದು
ತನುವಪ್ಪ ಲೆಳ್ಚರದು ತಾನೆನೆ ಭಕ್ತಿಯುದೇನಳುಂಬಮೊ .... ||೫||

ಕಂ|| ಪಳುಕುಗೊಡದೊಳಗೆ ಪ್ಪೊರಗು | ಜ್ವಳಿಪ ಮಣಿಜ್ಯೋತಿಯಂ
ತೆ ಪ್ಪೊಳಪ್ಪೊರಗೆ ತಳತ್ತಳಿಪ ಶಿವಲಿಂಗದಂಗದ | ಬೆಳಗಿನೊಳೆ ವೃಷೇಂದ್ರನ
ಮದರ್ಿ ಬೆಳಗಾಗಿರ್ದಂ .... ||೬||

ಪರಮಶಿವಲಿಂಗರುಚಿ ಭಾ | ಸುರಚಂದ್ರಿಕೆಯುಳುರೆ ಕಾಯಶಶಿಮಣಿ
ಯೋರ್ವಂ || ತಿರೆ ಬಿಮುರಿರೆ ಸುಖಬಾಷ್ಪಂ | ಸುರಿದುದು ಕಣ್ಣೆಯ್ದಿಲಲರ
ಮಕರಂದದವೊಲ್ .... ||೭||

ಚಂ|| ವೃ|| ಶಿವನೊಳಪ್ಪೊಕ್ಕು ಮಿಕ್ಕಲರ್ದು ಸೊರ್ಕಿನೊಗೆಂಬಡೆ ದು
ರ್ವಿಪರ್ವ ಬಾ | ಹ್ಯವಿಷಯವೃತ್ತಿಯಂ ಮರೆದು ಜುಮ್ಮನೆಕೊರ್ತುಬೆಮ
ರ್ತುನೇತ್ರಸಂ || ಭವಸುಖಬಾಷ್ಪದಿಂ ನೆನೆದು ಪ್ಪೊಂಪುಳಿಪ್ಪೋಗಿಪ್ಪೊದಳ್ದ ಭಕ್ತಿ
ಯು | ತ್ಸವರಸದೊಳ್ಮುಳುಂಗಿಸುಖಮಿರ್ದನೊರಲ್ದು ವೃಷಾಧಿನಾಯಕಂ||

ಕಂ|| ತನ್ನೊಳಗೆಶಿವಂ ಶಿವನೊ | ಳ್ತಾಂನೆಲೆಗೊಂಡೆಸೆನ ನಮಮ ಕ
ನ್ನಡಿಯಿದಿರೊ || ಳ್ಗನ್ನಡಿಯೊಳ್ಮಾರ್ಪೊಳಿಪವೊ | ಲುಂನ್ನತಗುಣನಿಳಯ ನ
ತಗುಣನಿಳಯ ನಭವಗಣಮಣಿಮುಕುರಂ ||೯||

ಪರೆದು ಪಸರಿಸಿದಕಿರಣಮ | ನರುಣಂಬರಸೆಳೆದುಶರಧಿಯೊಳಪ್ಪೊಕ್ಕ
ವೊಲಾ || ಶರಣವರೇಣ್ಯಂಪಸರಿಪ | ಕರಣಮನೊಳಗೆಯ್ದು ಲಿಂಗದೊಳ
ಪೊಕ್ಕಿರ್ದಂ .... ||೧೦||

ವಾಯುಂಜ್ಞಾತೃಜ್ಞಾನ | ಜ್ಞೇಯಮಿದೆಂಬಂತೆ ಮರೆದುನಿಜಹೃದ
ಯಲಸ || ತ್ತೋಯರುಹ ಕರ್ಣಿಕಾಗ್ರದೊ | ಳಾಯತಿಯಿ ವ್ಮಿಸುಪಸಿನ
ನೊಳೊಡವೆರೆದಿರ್ದಂ .... ||೧೧||

ವ|| ಅಂತುಬೆಚ್ಚಂತೆಬೆರಸಿ ಬರ್ಚದಚ್ಚಳಿಯದ ಪರಮಾನಂದಮ
ಯಶಿವಯೋಗನಿದ್ರಾಮುದ್ರಿತನಾಗಿ ಬಸವರಸವಿರ್ಪಿನಮಲ್ಲಿ ಚನ್ನಬಸವೇಂ
ದ್ರಂಬಂದು ನಿಜಗುರುವಿನಿರವಂ ನಿರೀಕ್ಷಿಸಿ ಸಾಶ್ಚರ್ಯಚಿತ್ತನಾಗಿ

ಕಂ|| ನಿದ್ರೆಯುದಿಲ್ಲದಚಿದ್ರಸ | ಮುದ್ರಿತಶಿವಯೋಗನಿದ್ರೆಯುಳವ
ಟ್ಟುದುನಿ || ರ್ಣಿದ್ರಗುರುವಿಂಗೆನಾಯಾ | ನಿದ್ರಾನ್ವಿತಜನಕಿದೆಂತುಮನೋಂ
ಸಂದಪುದೆ .... ||೧೨||

ಚಂ|| ವೃ|| ಇದುತರೆನಿಂದಸಾಗರಮೊ ನೋಡಿದುಮೇಘವಿಹೀನಮಾ
ದಶಾ | ರದವಿಮಳಾಮರಾಧ್ವಮೊ ಪರೀಕ್ಷಿಪೊಡಿಂತಿದುಪರ್ಣಶಬ್ದಮೆ || ಲ್ಲ
ದವಿಳಸನ್ಮಹೀರುಹಮೊ ಪೇಳೆನೆ ನಿಶ್ಚಳಭಾವಮಾಂತಡಂ | ಗಿದ ಕರಣಂಗ
ಳಿಮ್ಮಿಸುಪಯೋಗಮಿದೊಪ್ಪುಗುಮೀನ್ವಪೇಂದ್ರನ ||೧೩||

ಮ|| ಸ|| ವ|| ಎಂದುಮುತ್ತಮಿರದೆ

ವೃ|| ಶಿವಲಿಂಗೈಕ್ಯಾತಿಸೌಖ್ಯಂಬಡೆದು ಮರಪಿನಿಂದಿರ್ಪಲೋಕಗ
ಳಿಂ ನೋಡುವಡಾನಂದಾಶ್ರುಕಾಣ ಲ್ಕಿಡದೆನುತೆ ಮನೋನೇತ್ರದಿಂ ಸೂಳ್ಪ
ನೋ ಶಂಭುವನೀತಂ ತೋಳ್ಗಳಿಂದಪ್ಪಿದೊಡೆ ವ್ಯುದಶಿವಾಂಗಕ್ಕೆಕಂದಪ್ಪು
ದೆಂ ದಪ್ಪುಪೊ ಡಂತರ್ಭಾವಸತ್ಕೋ ಮಲಭುಜದಿನೊರಲ್ದಿರ್ಪನೋ
ದೇಶಿಕೇಂದ್ರಂ ||೧೪||

ವ|| ಅಂತುಮಲ್ಲದೆಯುಮಲ್ಲಿಸೌಕುಮಾರ್ಯಂ ಚಿತ್ತೊಪ್ಪವನಿರುಪಮ
ನಿಜಲಿಂಗಕ್ಕೆಕರತಳಾಸ್ತರಣಂಬೆಟ್ಟಿತಕ್ಕುಮೆಂದು ಬಿಟ್ಟುಕಟಳ್ಕರಿಂಭಕ್ತಿಸಾ
ರಭಪರಿಮಿಳಿತಮೃದುಳತರ ಹೃದಯನಳಿನ ಸುಖಾಸನದೊಳ್ಮೂರ್ತಿಗೊಳಿಸಿ
ಯುಂ, ವಿಳಮುಶೀತೋಷ್ಣಜಲಾಭಿಷೇಕಮುನಡಿಗಡಿಗೊಡರ್ಚೆಕೋಮಲಾಂ
ಗಂ ಬಳಲ್ದಪುದೆಂದು ಹಮುಸಲಿಲದಿ ನಭಿಷೇಕಮುನೆಸಗಿಯುಂ ಇಳಾತಳ
ದೊಳೊಗೆವಕುಸುಮವಿಸರಂ ಕಠಿಣಮೆಂದುಳಿದು ಸುಲಲಿತಸಹಸ್ರದಳಕ
ಮಳಮುಂಸಮರ್ಪಿಸೆಯುಂಅಮಳತನುಧೂಪಧೂಪಮುಂತಾಗೆ ಕಪ್ಪಡರ್ದ
ಪ್ಪುದೆಂದುಪಿಸರ್ಜಿನಿಜಗಜ್ಜಗಿಪಚಿದಗ್ನಿಯೊಳಿಕ್ಕಿದ ದಶೇಂದ್ರಿಯವಿಷಯಂ
ದಶಾಂಗಧೂಪಮುಂಬೀಸಿಯುಂ, ಪೇರುರಿಯನೀರಾಜಮುಂಬೆಳಗೆ ಬಿಸಮು
ಮುಸಗಿದಪುದೆಂದುವರ್ಜಿಸಿ ಜಗದ್ವರ್ತಿವಿಡೆದುಜ್ವಲಿಪ ಶಾಂತಪ್ರಕಾಶಮಾದ
ಖಂಡಾತ್ಮಜ್ಯೋತಿಯುಂಬೆಳಗಿಯುಂ, ಕ್ಷಾರಾಮ್ಲಾದಿರಸಮಿಳಿತಾಹಾರೋ
ಪಹಾರಂ ಕ್ರೂರಮುಕ್ಕುಮೆಂದುತೊಲಗಿಸಿಖೊಸಲೋಸರಿಸದಮಧುರತರನಿ
ಜಪ್ರಾಣನೈವೇದ್ಯಮುಂನೀವೇದಿಸಿಖುಂ ಅಂತರರ್ಚನೆಯನ್ನಿಂತುತೇನತೇ
ನಂನಿಮಿರ್ಚಲೆರಿದುಖಾರಪತಿಯೊಳ್ಮೂಡಿಮುಳುಗಿ

ಕಂ|| ಪೊರಗಂಮರೆದಿರ್ಪನೊ ಕಟ್ಟೆರಕದಿ ನಮರ್ದಪ್ಪೆ ಪುಳಕತತಿ
ನಾಂಟುಗುಮೆ || ನ್ನೆರೆಯುನನೆನುತಾತ್ಮನಿನಳ್ಕರೊಳಪ್ಪಲೊಡರ್ಚಿದಂದ
ಮೋಬಗೆವನೆಯೊಳ್ ||೧೫||

ಕಂ|| ಆಲೋಚಿಪತಾನುಂ ತನ್ನಾಲೋಕಮು ಮೊಡನೆನುಡಿದತಾನುಂ

ನುಡಿಯಂ || ಲ್ಕಿಳಿವಿಂಗೆ ನೆನೆವತಾನುಂ | ಮೇಳಿಸಿಸಿದ ಮನೆಮುಖವನೊ
ಳ್ಬಿ ರ್ದಿರವೊ ——— ||೧೬||

ಕಂ|| ಕುಂದದಪೆರ್ಚ್ಚ ಱದ ಕಡೆವೊದಲೊಂದದ ಡಿತ್ವಲಿಲಪೂರ್ಣನಿರು
ಪಮ ಪರಮಾನಂದಮುಮಂ ಶಂಭುಶರಧಿಯೊಳಿಂದು ಕರಂಮುಳುಗಿದಂದ
ವೋ ವೃಷಭೇಂದ್ರಂ ——— ||೧೭||

ಕಂ|| ಸಕಲಕರಣಾಳಿಪರಿಚಾರಕಜನಮಂ ತೊಲಗಿಸುತ್ತ ಮನೋ
ಗೃಹದೊ || ಳ್ಸಕರಶಿವಪತಿಯೊಳೊಡೆವೆರೆ | ದಕಳಂಕಂ ಸುಖದಸುಗ್ಗಿ ಪ
ಡೆದಿರ್ದಪನೊ ——— ||೧೮||

ವ|| ಅಂತುಮಲ್ಲದೆಯುಮಖಿಳೇಂದ್ರಿಯದಮನಂಗೆಯ್ವುದೆಯಮ
ವಾಗಿಯು ಮೆಲ್ಲಿಡೆಯೊಳ್ನಿಜಪ್ರಾಣಲಿಂಗಮಲ್ಲದೆ ಪೆರತ್ತರಿಯುವ ನಿಯಮ
ಮೆನಿಯಮಮಾಗಿಯುಂ, ಯೋಗನಿದ್ರಾಸೀನತೆಯೇ ಸುಖಾಸೀನಮಾಮ್ಮ
ಗಿಯುಂ, ನಿರತತೆಯಿಂ ನಿಜಮೃದುಶ್ವಾಸಮನೊಯ್ಯನೊಯ್ಯನೆ ಪೂರಿಪುದೆ
ಪ್ರಾಣಾಯಾಮಮಾಗಿಯುಂ, ನಿರ್ವಿಷಯಾಕರಣಾಂತರ್ಮುಖ ಕರಣವೃ
ತ್ತಿಯೆ ಪ್ರತ್ಯಾಹಾರಮಾಗಿಯುಂ, ಶಿವಜಂಗಮಸ್ವಪ್ನದರ್ಶನಮೆಮೂರ್ತಿ
ಧ್ಯಾನಮಾಗಿಯು ಮಿದನೆಡೆವಿಡದೆ ಧರಿಯಿಸಿರ್ಪುದೆ ಧಾರಣಮಾಗಿಯುಂ,
ನಿಶ್ಚಲನಿರುಪಾಧಿಕಭಕ್ತಿಲಬ್ಧ ಶಿವಯೋಗನಿದ್ರಾಸಮಾಧಿಯೆ ನಿರವಧಿಕಸು
ಖೋದಯ ರಕ್ಷಣಾದ್ಭುತಸಮಾಧಿಯಾಗಿಯುನಿಂತು ನಿಜಾನುಭಾವಾ
ಷ್ಟಾಂಗ ಯೋಗಸಂಪತ್ತಿಯುಳವಡಲೊಡನೆ ||

ಕಂ|| ಪರವಶಭಾವಂಮಿಗೆಮ | ದ್ಗುರುನಿಶ್ಚಲನಿರ್ವಿಕಲ್ಪಸುಖದೊ
ಳ್ಸಲಿಸಂ || ದಿರದೆಸೆವಪಾಂಗಚಕ್ರಾಂ | ತರಲಿಂಗಾಲೋಕಸೌಖ್ಯದಿಂದಿ
ರ್ದಪನೊ || .... ||೧೯||

ನಲಿದುರ್ವಿಪ್ರೊಗಳೆ ವರ್ಣಾ | ವಲಿಯೊತ್ತುಗು ಮಮಳಕೋಮ
ಳಾಂಗನ ನೆಂದು || ಜ್ವಲ ಮೃದುಲಹೃದಯವಿಕಸಿತ | ನಲಿನದೊಳೆ ತದ
ರ್ಥರೂಪನಂ ಜಾನಿಪನೊ || ——— ||೨೦||

ಮ|| ವೃ|| ನೆನೆಯುತ್ತಂ ನಿಡುನೇಹದಿಂ ಭ್ರಮರಕೀಟನ್ಯಾಯದಿಂ
ತಾನೆತ| ದ್ಘನಲಿಂಗಾಕೃತಿಯಾಗೆ ತಪ್ಪುಗಮನಾದಿಸ್ವಾಮಿಭೃತ್ಯತ್ವಮೆಂ||
ದೆನಿಪೀಸಂಪದಮೆಂದು ಮುಸ್ಸಿಸೆದುಮೇಣಂಜುತ್ತೆ ಹೃತ್ಪಂಕಜಾ | ನನಲಿಂ
ಗಕ್ಕೆ ಪೊಗಳ್ದ ತಸ್ಮನಮನಿತ್ತಂತಿತ್ತು ನ್ನೈತಿರ್ಪನೊ || ||೨೧||

ಕಂ|| ಪತಿಯುನೆನೆನೆನೆದಡದರಿಂ । ಸತಿತತ್ಪತಿಯಾಗೆ ಪಲಮುದೇಂ
ಪಡೆವಳೆ ತ || ದ್ಧ್ರತಿಸುಖಮುನಂತುಟೀಶ । ಸ್ಮೃತಿಯಿಂ ತಾನೀಶನಾಗೆ
ಫಲಮೇಂಭಕ್ತಂ || .... ||೨೨||

ಮ || ಸ್ರ || ವೃ || ಮನಮುಂಡೂದಟ್ಟಿದೆಂ ಮತ್ಪ್ರಿಯಸಪೂರೆಗೆ
ಮುನ್ನಂಸಪತ್ನಿತ್ವಮುಂ ತಾ । ಳ್ದುನಿತಾಂತಂಕೂಡಿದತ್ತ್ಯಕ್ಕಟ ಮನಮುವ
ನೊಳ್ನಪ್ಪಿದೆಂ ದೊಪ್ಪದಿಂ ಪಾ || ಣಿನಿಪೇಳ್ದಂಸೂತ್ರಮೇಂತಪ್ಪುಗುಮೆ
ಬಳಿಕದಂತಾದೊಡಂ ಗಂಡರಂಪೆ । ಣ್ಣೆನಿಸುತ್ತಂ ಕೂಡುವಸ್ಮತ್ಪತಿಗಿದು
ವಧುವಾಗಿರ್ಪುದಾಶ್ಚರ್ಯಮೇದಲ್ || .... ||೨೩||

ಕಂ|| ಎಂದೆಣಿಸುತೊಡನೆ ತನ್ನೆಡೆ । ವಂದ ಮನಂ ಮುಗುಳ್ದುಪರಿ
ದು ಬೆರಸದಮುನ್ನಂ || ಕುಂದದೆ ನಿಜಪತಿಯೊಳ್ಸಲೆ । ಸಂದಿಲ್ಲದೆ ನೆರೆಯ
ಲೆಳಸಿ ಪುರಿಡಿಸುತಾಗಳ್ || .... ||೨೪||

ಚಂ|| ವೃ || ಹೃದಯಸರೋಜಮೆಂಬ ಮಣಿಮಂಚದೊಳೊಯ್ಯನೆ
ಧಕ್ತಿಮೂತಪಾ । ಸಿದ ನಿಜನಿಷ್ಠೆಯೆಂಬ ಪ್ರುದುತಳ್ಪಮೊಳುಜ್ವಳಿಪಾತ್ಮ
ನಾಥನಂ || ಸದಮಳ ಚಿತ್ಪ್ರಭಾಕ್ಷಿಯೊಳೆ ನೋಡುತೆ ಹಂಕೃತಿಲಜ್ಜೆ ಪಿಂ
ಗೆತ । ಳ್ವದೆ ದೃಢಭಾವಬಾಹುವಿನೊಳಪ್ಪುತಿವಂ ನೆರೆದೊಪ್ಪವಂದವೊ||

ಚ|| ನೆನೆವೊಡೆನಿಳ್ಕದೀಕ್ಷಿಪೊಡೆಸಿಲ್ಕದಕೀರ್ತಿಪೊಡೊಲ್ದುಶಕ್ಯಮೆಂ ।
ದೆನಿಸದ ಕೂಡಲುಜ್ಜುಗಿಸೆ ತಳ್ಕೆಗೆಸಲ್ಲದ ದಿವ್ಯಲಿಂಗಮುಂ || ಘನತರಭಕ್ತಿ
ಯಿಂನೆನೆದಭೀಕ್ಷಿಸಿ ಕೀರ್ತಿಸಿ ಕೂಡಿಮೂಣದಾ । ನೆನಪುನಿರೀಕ್ಷಣಾದಿನುತಿ
ಕೂಟಮಿದೆಂಬಿವಡಂಗೆಲಿಂಗದೊಳ್ || ...... ||೨೬||

ಕಂ|| ತಾನೆಂಬುದಳಿದುಪೊರಗೊಳ । ಗಾನಂದಮುತೀವಿ ಬಾಹ್ಯರ
ತಿಯುರಸುಶಿವಂ || ತಾನಾದನೊತಾನೇಶಿವ । ನೇನಾದನೊಬಸವ ನಮುಮ
ಬಣ್ಣಿಪೊಡಳವೆ || .... ||೨೭||

ಕಂ|| ಸೊಲ್ಲಿಡಬಾರದಪವಣಿಸೆ । ನಿಲ್ಲದತಣಿವಾದುದೊಲ್ಲೆನೆನಿಸದ
ಪೆರತೊಂ || ದೆಲ್ಲಿಯು ಮತಿಶಯವಿಲ್ಲದ । ಸಲ್ಲಲಿತ ಶಿವೈಕ್ಯಸೌಖ್ಯಮುಂ
ತಾಳ್ದಿಹನೊ || .... ||೨೮||

ಕಂ|| ದ್ವೈತಾದ್ವೈತಭ್ರಮಿತರ । ಮಾತು ಮನಂಬುಗದ ನಿಗಮತ
ತಿಯುರಿಯುದವಿ || ಖ್ಯಾತೀತ ವಿಮಳಲಿನಗದೊ । ಳೋತೊಡಗೊಡಿರ್ದ
ಭಾವನೋವೃಷಭೇಂದ್ರಂ || .... ||೨೯||

ವ|| ಅಂತು ಮಲ್ಲದೆಯುಂ ||

ಚಂ|| ವೃ || ರಮಣನಗಲ್ಕೆಯಿಲ್ಲದೊಡ ನಾವಗಮೊಪ್ಪಿರೆಯುಂ ತದಂ
ಗಸಂ | ಗದಸುಖಮಂ ವರಾಂಗಿ ವಿಜನಸ್ಥಲದೊಳ್ಪಡೆವಂತೆ ತಂನೊಳಿಂ ||
ಪಮರ್ದು ವಿಯುಕ್ತನಾಗದೆ ಶಿವಂಸಲೆಪರ್ಶಿಸೆಯುಂ ತದೀಯ್ಯಯೋ | ಗ
ಮಹಿತಸೌಖ್ಯಮಂ ಕರಣಮಿಲ್ಲದವಸ್ಥೆಯೊಳೊಂದಿಪಂದಮೊ ||೩೦||

ವ|| ಮತ್ತಂ ||

ಮ|| ಸ್ರ|| ವೃ|| ಬಲವದ್ಭಕ್ತಾಂಗಮಂಗಂ ತನಗೆನಿಪ ಭವಂಗಂಗೆ
ಮಂ ಭಕ್ತಸತ್ಪ್ರಾ| ಣಲಸತ್ಪ್ರಾಣಂಗೆ ಮತ್ಪ್ರಾಣಮನಮಳಿನ ಭಕ್ತಾ
ಕ್ಷಮಾತ್ಮಾಕ್ಷನಾಗಿ | ಪ್ರಲಲಾಟಾಕ್ಷಂಗೆ ಸ್ವೈಜಾಕ್ಷದುನಳವಡಿಸುತ್ತಿ
ಯುತಾನೆಂಬುಘಂ ತೂ | ಳ್ದೊಲವಿಂತದ್ಭಾವಮಂ ತಾಂಮರೆದುಬೆರೆದ
ನೋಲಿಂಗದೋಳ್ ಶ್ರೀಷೇಂದ್ರಂ || .... ||೩೧||

ಕಂ|| ಪರಿಕಿಪ್ಪೊಡೆಪಾಜ್ಮನಕಗೋ | ಚರಮಿದು ಶಿವಯೋಗನಿದ್ರೆ
ಯಂದೀತೆರದಿಂ || ವರಚನ್ನಬಸವನಾಂಬಸ| ವರಸನ ಬಗೆಗೊಂಡು ಪೊ
ಗಳುತಿರ್ಪನಮಾಗಳ್ || .... ||೩೨||

ಮ|| ಸ್ರ|| ವೃ|| ನಲಿದೋರ್ವಂ ಜಂಗಮಾರ್ಯಂ ಬರುತೆ ಬಸವಸಂ
ದರ್ಶನೋತ್ಕಂಠೆಯಿಂ ತ | ನ್ನಿಲಯದ್ವಾರಕ್ಕೆ ಬಂದಲ್ಲಿಯ ಪಡಿಯರರಿಂ
ಕೇಳ್ದು ತದ್ಯೋಗನಿದ್ರಾ | ಚಲಭಾವಸ್ಫೂರ್ತಿಯಂ ತಾಂಮುಗುಳಲೊಡ
ನಣಂ ಜಂಗಮತ್ರಾಣನಿಷ್ಠೋ | ಜ್ವಲತಾಸಂಪತ್ತಿ ಭಾಸ್ವದ್ಬಸವ ನಸು
ವದೊಂದಾಗಿ ಪೋದತ್ತನೊಸಂ || .... ||೩೩||

ವ|| ಆಗಳಲ್ಲಿರ್ದ ಪರಿಚಾರಕಜನಮದಂಕಂಡು ಪೆಳರ್ದು ತಳಮಳ
ಗುಗೊಂಡು ಸಂದಣಿಸುವಿನ ಮಾಸಂಧ್ಯಾಸಮುಚಿತಲಿಂಗಾರ್ಚನೆಗೆ
ಪರಮಮಾಹೇಶ್ವರಸ್ಸಾರ್ಲ್ವಿಡಿದು ಕುಳ್ಳಿರ್ದು ಬಸವನಿರವಂ ನಿರೀಕ್ಷಿಸಿ ಪಿರಿ
ದದ್ಭುತಮನಾಳ್ದಿದೇಂ ಪ್ರಸ್ತುತಮಿಂತಪ್ಪುದಕ್ಕೆ ಕಾರಣಮಾವುದದನರಿ
ಯಲ್ವೇಳ್ಕುಮೆಂದು ಮಂತಣಂಗೊಂಡು ಸಕಲ ಕರಣಿಕ ದ್ವಾರಪಾಲಾದಿ
ಗಳಂ ಬರಿಸಿ ವಿಚಾರಂಗೆಯ್ದು ಬಸವಭಂಡಾರದ ಕವಳಿಗೆಗಳಂತರಿಸಿ ||

ಮ|| ಸ್ರ|| ವೃ|| ಬಸವಂಕೈಕೊಂ ಶೀಲಸ್ಥಿತಿಯ ಶಪಥಗೀತಂಗ
ಗಳಂ ನೋಡಿವಿಾಕಾ |ಳಸೆಮೇಣ್ತಾಂ ಕಾಣಲಕ್ಕುಂ ಬಳಿಯಿನೆಮಗೆನುತ್ತಿಂ
ತುಪೇಳ್ವಾಗಳೆಯ್ತಂ || ದೊಸೆದಾಮಾಹೇಶ್ವರೌಘಕ್ಕೆರಗಿ ಮುಗಿಯುತಂ

ಪಾಣಿಪದ್ಮಂಗಳಂ ಬೋ । ಧಸುಧಾವಾರಾಕರಂ ಚನ್ನಬಸವವಿಭು ವಿಜ್ಞಾಪನಂಗೆಯ್ದನಾಗಳ್ .... ||೩೪||

ಮ|| ಸ್ರ|| ಹರಪೂಜಾಕಾಲದೊ ಳ್ಮದ್ಗುರು ಪರಮ ಸುಖಾವಾಪ್ತಿಯಿಂ ಯೋಗನಿದ್ರಾ । ಭರಿತಂಸ್ಪೈತಿರ್ಪ್ಪನಂ ಜಂಗಮಮುನಯದಿಂ ಬಂದು ತದ್ವಾರಪಾಲ || ರ್ಭರದಿಂದಂ ಯೋಗನಿದ್ರಾಸ್ಥಿತಿಯನರುಪೆ ಕೇಳ್ದಾಕ್ಷಣಂ ಪೋಗಿಕೂಡೊಂ । ದಿರದೆಯ್ದಿತ್ತಲ್ತೆ ಮದ್ದೇಶಿಕನಸು ಪೊಸತೆಂಬನ್ನೆಗಂ ಭಕ್ತವೃಂದಂ .... ||೩೫||

ಕಂ|| ಗುರುವರನಶಪಥಮುಂಟೇ । ಪರಿಯುನದಂ ನೆನೆಯೆ ಬಿರಿವುದೆದೆಮುಡಿದೊಡೆ ಭಾ || ಸುರ ರಸನೆಶೀಳ್ವುದೆನೆ ಭೀ । ಕರಮದು ನಡೆಯಲ್ಕೆ ಸಾಧ್ಯಮೇ ಪೆರರ್ಗಿಳೆಯೊಳ್ ——— ||೩೬||

ಕಂ|| ಪೊಸತೊಂದುಗೀತಮಂ ತಾಂ । ಬೆಸಸಿದ ನಾಬಸವನಾತ್ಮಶಪಥಕ್ರಮಣೋ || ಲ್ಲಸಿತ ಮದೆಂತೆನೆ ಬತಂ । ತುಸುರ್ವಪೆ ನಾಲಿಪುದು ಶರಣಸಂಕುಳಮಾಗಳ್ .... ||೩೭||

ಮಲ್ಲಿಕಾಮಾಲಾ|| ಪ್ರಾಣಲಿಂಗಮೆ ಧಾತ್ರಿಯೊಳ್ಳವಭಕ್ತಸಂತತಿಗೊಚ್ಚತಂ । ಪ್ರಾಣಮಾಘನಲಿಂಗಮೂರ್ತಿಗೆ ಸದ್ಗುರೂತ್ತಮನಾಗಳುಂ || ಪ್ರಾಣಮಾಗುರು ತಾನೆನಿಪ ಸಜ್ಜಂಗಮಂನಿಜದಿಂದೆ ಮ । ತ್ಪ್ರಾಣಮೆಮ್ಮಯಸಂಗಮೇಶನಿದಕ್ಕೆ ಸಾಕ್ಷಿಸಮಾಹಿತಂ ||೩೮||

ಕಂ|| ವ್ರತಮಿದೆನಗೆಂದು ಪೂಣ್ದಂ । ನುತಮತಿಗೀತಮ ನೊರಲ್ದು ಪಾಡಿದ ನೀಗಳ್ || ಕ್ಷಿತಿಪೊಗಳೆಪಾಡಿದಂದದಿ । ನುತಚರದೊಡನೆಯ್ದಿ ಸಿರ್ದನಸುಂವಂ ಬಸವಂ .... |೩೯|

ಕಂ|| ನೆನೆಯಲ್ನುಡಿಯ ಲೊಡರ್ಚ । ಲ್ಕೆನಿತಾಂತಂಮಾದೃಶರ್ಗೆದೇಂ ಸಾಧ್ಯಮೆದಲ್ || ನೆನೆದಂತೆನುಡಿದು ನುಡಿದಂ । ತೆನಡೆದನೀಗುರುವಿವಂಗದಾರ್ದೊರೆಧರೆಯೊಳ್ ||೪೦||

ಕಂ|| ಬಿರುದಿನಭಾಷೆಯ ಬಲ್ಮೆಯ । ಧುರಂಧರಂ ಭಕ್ತಿನಿಧಿ ಭವತ್ಕಿಂಕರನೀ || ಗುರುಬಸವ ನಮುಮ ಮಗುಳ್ದಾ । ಚರಲಿಂಗದ ಬಳಿಯೊಳ ಸುವಸಲಿಸಿದನಲ್ತೆ ||೪೧||

ವ|| ಎಂದುಕೇಳ್ದು ಶಿವಗಣಂಮೆಚ್ಚಿ ವಿಸ್ಮಯಂಬಡೆಯೆ ಕೊಂಡಾಡೆ ಚನ್ನಬಸವಂ ಮನ್ನಣೆಯುರಂಕರೆದು ಶಿವಭಕ್ತಮುಂದಿರ ಗಳೋಳ್ತಜ್ಜಂಗಮ

ಮಂ ಪುಡುಂಕಿ ತಳ್ವದೆತರ್ಪುದೆಂದು ನಿಯಾಮಿಸಲೊಡನವರ್ಮಹಾಪ್ರಸಾದವೆಂದು ತನ್ಮಂಧಿರಂಗಳೊಳನ್ವೇಷಣಂಗೆಯ್ದು ಕಂಡು ತಜ್ಜಂಗಮಕ್ಕೆ ನಮಿಸಿಜವದಿಂಕರೆದು ತರ್ಪುದುಮಾಗಳ್

ಕಂ|| ಚರಲಿಂಗದೊಡನೆ ಗಮಿಸಿದ | ಹರಣಂ ಬಳಿಸಂದು ಬಂದುನಿಜದೇಹಮನಾ | ಪರಿಸೆಶರಣಾಳಿ ಪಿರಿದ | ಚ್ಚರಿವಡೆ ಬಸವೇಶನಕ್ಷಿದೆರೆದಂ ಕ್ಷಣದೊಳ್ .... ——— ||೪೨||

ಮ|| ಸ್ರ|| ವೃ|| ಬಿಡದೇಳ್ದಾನಂದದಿಂದ ಜರಮುಖಶರಣಾನೀಕಪಾದಾಬ್ಜದೊಳ್ಬ್ಯ | ಗೆಡೆಯುತ್ತಂ ಮುನ್ನಿನಂತರ್ಚಿಸುತೆ ಪೊಗಳುತಂ ತತ್ಪ್ರಸಾದಾಮೃತಂಗೊಂ || ಡೊಡನೊಪ್ಪಿರ್ದಂ ಪ್ರಸನ್ನಪ್ರಕಟ ನಿಜಮಹಾಭಕ್ತಿಸಂಪನ್ನಸದ್ಯ | ಸ್ಮೃಡಭಕ್ತಪ್ರಾಣಮಿತ್ರಂ ಸುಗುಣನಿಧಿಶಿವಾದ್ವೈತವಿದ್ಯಾತ್ಮಸಮುದಂ * * * ||೪೩||

ಲಲಿತಪದವೃತ್ತಂ || ಕೃತ್ತಪರವಾದಮದಮತ್ತಜನಸಾರಶುಭವೃತ್ತಶಿವಸುವ್ರತನಿಮಿತ್ತ ಶಿವಶೇಷೋ | ಪಾತ್ತಸುಲಭೋಗಮೃದುಚಿತ್ತಗಣನಾಯಕನಿವೃತ್ತವಿಷಯಭ್ರಮಸಮಾತ್ತಶಿವಯೋಗಾ || ದತ್ತಶಿವಚಿತ್ತುಖಭಪ್ರೋತ್ತರಣಶೀಲಗುಣವಿತ್ತನಿಧಿಕಾನಕಕುಭೃತ್ತಟವಿಹಾರಾ | ಯತ್ತಮುದಪಾಲಿಸೊಲವೆತ್ತುಬಿಡದೆನ್ನಗೆನಗಿತ್ತು ಮೃಡಭಕ್ತಿಯನುದಾತ್ತಬಸವೇಶಾ ||

ಪುಷ್ಪಿತಾಗ್ರವೃತ್ತ| ಶತಮುಖಮುಖದೇವತಾವಿತಾನ | ಸ್ತುತಭೃತವೈಭವದಿವ್ಯಪಾದಪದ್ಮೇ || ವಿತತಸಿತಗಳಾಂಗಸಂಗತಾಂಗೇ ಸತತಕೃಪಾಕರಿರಕ್ಷಿಸೆನ್ನನಾರ್ಯೇ ||೪೫||

ಗದ್ಯ|| ಇದು ವಿನಮದಖಿಲ ಸುರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ
ಪರಮಶಿವಲಿಂಗ ಪಾದಾರವಿಂದ ಪರಾಗ ಭಸಿತ ಭಾಸುರ
ಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರ ದೇವಭಕ್ತಿವಿರಚಿತ ಶ್ರೀಮದ್ವೃಸವರಾಜ
ವಿಜಯ ಮಹಾಪುರಾಣದೊಳ್ ಬಸವಜಂಗಮ
ಪ್ರಾಣತ್ವಕಥನಂ ತ್ರಯೋವಿಂಶತ್ಯಾ
ಶ್ವಾಸಂ ಪರಿಸಮಾಪ್ತಂ.

ಶ್ರೀಬಸವಲಿಂಗಯುಗಾಮಃ

ಕಿಂನರ ಬಸವಪ್ರಾಣವಾಸಕಥಂ,

ನಾಂದಿ|| ಲಲಿತಪದವೃತ್ತ || ಸಾಧಕಜನಾಂತರವಿಶೋಧಕ ವಿಶುದ್ಧ ಮತಿಬೋಧಕ ದುರೀಷಣನಿಷೇಧಕ ಚರೌಘಾ | ರಾಧಕ ಮದಾಷ್ಟಕವಿ ರೋಧಕ ಮನೋಗತಿನಿರೋಧಕ ಸಚಿತ್ಸದವಬೋಧಕ ಶುಭಾಂಗಾ || ವ್ಯಾಧಿಕಲುಷಪ್ರಕರಬಾಧಕ ವಿಶಾಲತರಮೇಧಕ ನಿಕಕಾಮನಿರುಪಾಧಿಕನಿರಸ್ತಾ ಕ್ರೋಧಕರುಣಾರಸಪಯೋಧಿಕ ವಿನುತ್ಯಪೊರೆ ಸಾಧಿಕಗುಣಾನ್ವಿ ಗುಣಾಧಿ ಕವೃಷೇಂದ್ರಾ ||

ಲಲಿತಪದವೃತ್ತ|| ಮಾನವಪತಿವ್ರತಸಮಾನ ತ್ರಪದಾಬ್ಜಮುನಿಮಾನ ಸಮನೋಜ್ಞತರಮಾನಸಮರಾಳಾ | ಮಾನಜನತಾಪ್ರಿಯವಿಮಾನಗೆಸುರ ಸ್ತುತಸಮಾನರಹಿತಾತ್ಮಮಹಿಮಾನಘಚರಿತ್ರಾ || ಮಾನವವಚೋನಿಗಮ ಮಾನಗದಿತಾರ್ಥವಹಮಾನತತಭಾಸ್ವದನುಮಾನನಯಸತ್ಪ | ನ್ಮಾನಕರರ ಕ್ಷಿಸತಿಮಾನಫಣಿ ರಾಡ್ಪ್ರದುಪಮಾನಭವಮೇಘ ಪವಮಾನಬಸವೇಶಾ||

ಕಂ|| ಶ್ರೀಗೌರೀಕಚಭರಮಾ | ಲಾಗಣಮುಕರಂದ ಸಿಕ್ತಭುಜ ನಜ ರನಜಂ || ಸಾಗರಜಾವರಮುಖಸುರ | ಪೂಗನುತಂ ಮಾಳ್ಕೆ ಸೌಖ್ಯಮಂಶಿ ವಲಿಂಗಂ ||೧||

ಕಂ|| ಮುನ್ನೊಮ್ಮೆ ಬಸವನಸುವಿದು| ಕಿನ್ನರನಸುಗೂಡಿಪೋದುದೆಂ ದದರಿರವಂ||ಚನ್ನಬಸವಣ್ಣನಾಗಳ್|ಬಿನ್ನವಿಸಿದನಖಿಳಶರಣಸಂತತಿಗೊಲವಿಂ

ವ|| ಅದೆಂತೆನೆ

ರಥೋದ್ಧತವೃತ್ತಂ|| ಪ್ರಾಣಲಿಂಗಮೆನಗೀತನೆಂದು ವಿ | ಶ್ರಾಣಸ್ಯೈಕ ನಿಧಿಕಿನ್ನರಯ್ಯನಿಂ || ಮಾಣದೊಲ್ದುಭಜಿಸುತ್ತೆಭಕ್ತಿಯಿಂ | ಕ್ಷೋಣಿಯಲ್ಲಿ ವೃಷಭೇಂದ್ರುನಿರ್ಪ್ಪಿನಂ ||೩||

ಕಂ|| ಹರನಾ ಬಸವನ ನೇಹದ | ಪರಿಯಿಂ ಧರೆಗೆರುಪಲೆಂದು ನೆನೆ ಯುತೆ ತತ್ಕಿ || ನ್ನರನಸುವಂ ತನ್ನೊಳ್ಮಿಗೆ | ಬೆರಸುತಡಂಗಿಸಿದನಾಗಳಾ ಬಸವೇಶಂ ||೪||

ಕಂ|| ಕಾಣುತ್ತೆ ಕಿನ್ನರೈಯ್ಯಂ | ಪ್ರಾಣಂಗಳೆದಿಂದಮುಗೆ ಭಯಂ

ಬದೆದು ಜಗೆ । ತ್ಪ್ರಾಣಪದಂಬಿಸುಸುಯ್ದು । ಕ್ಷೀಣಗುಣಂ ಬಹಳಶೋಕ
ಮಂ ಮಿಗೆತಳೆದಂ ||೫||

ವ|| ಅಂತುತಳೆದ ವಿಗಳಿತ ವಿಷಾದದಿಂ ತಲ್ಲಣಿಸಿಮರುಗಿ

ತ್ರಿಪುದಿ|| ಹಾಮದೀಶ ಯಿದೆತ್ತಡಂಗಿದೆ । ಕಿನ್ನರೇಶಾ ಹಾಗುಣ ।
ಧಾಮ ನೀನಕಟಿಂತುಪೋಪುದೆ । ಕಿಂಕರೇಶಾ ||೬||

ಸಾರವೀರಗಣಾಮರಂಜನ । ಕಿನ್ನರೇಶಾ ಹಾಮದ । ದೂರದುರ್ಮ
ತಗರ್ವಭಂಜನ । ಕಿನ್ನರೇಶಾ .... ||೭||

ಪರಮಕರುಣಾಪಾಂಗಸಿಂಧುವೆ । ಕಿಂನರೇಶಾ ಹಾಮೃದು । ಸರಸ
ಭಾಷಣಭಕ್ತಬಂಧುವೆಕಿಂನರೇಶಾ .... ||೮||

ಕಾಲಕಾಲನುತಾಮರದ್ರುಮ ಕಿಂನರೇಶಾಹಾಶುಭ । ಶೀಲಜಲ್ಪಿತ
ಶಾಂಭವಾಗನು ಕಿಂನರೇಶಾ ____ ||೯||

ಪಂಡಿತಪ್ರಸರ್ವೈಕಪಾಲಕ । ಕಿನ್ನರೇಶಾ ಹಾಗುಣ । ಮಂಡಿತಾಮಳ
ಶಾಂತಿಲೋಲಕ ಕಿಂನರೇಶಾ .... ||೧೦||

ಊರ್ಜಿತಾಖಿಳಯೋಗಿನಾಯಕ ಕಿನ್ನರೇಶಾ ಹಾಬಲ । ನಿರ್ಜಿತಾ
ತುಳ ಪುಷ್ಪನಾಯಕ ಕಿನ್ನರೇಶಾ .... ||೧೧||

ಲಿಂಗಜಂಗಮಭಕ್ತಿಭಾಸುರ ಕಿಂನರೇಶಾ ಹಾಗುಣ । ಸಂಗನೀತಸ
ಮಸ್ತವಾಸರ ಕಿಂನರೇಶಾ ... ||೧೨||

ದುರ್ಮತಾಂಬುಜಮತ್ತವಾರಣ ಕಿಂನರೇಶಾ ಹಾಶಿವ । ಧರ್ಮಸಂ
ಪದಶರ್ಮಕಾರಣ ಕಿನ್ನರೇಶಾ ||೧೩||

ವ|| ಎಂದುಪಲುಂಬಿಪಳಯಿಸಿಮತ್ತಮಿರದೆ

ಮಲ್ಲಿಕಾಮಾಲಾವೃತ್ತ|| ಹಾಮದೀಯಮನೋವನೇರುಹ ವಾಸರಾ
ಜಮರಾಜಹಾ । ಹಾಮದೀಯಸುಬೋಧಸಾರಸವಾಸರೇಶ್ವರಬಿಂಬಹಾ ।
ಹಾಮದೀಯ್ಯವಿಲೋಚನೋತ್ಪಲಚಾರುಪೂರ್ಣಮೃಗಾಂಕಹಾ । ಹಾಮ
ದೀಯವಿವೇಕನಂದನಚೈತ್ರಕಿನ್ನರನಾಯಕಾ ||೧೪||

ಕಂ|| ಕಿನ್ನರಪತಿಯಾಗಿರೆ ಪರ । ಕಿನ್ನರಪತಿಯೊಡನೆಮೇಳಮೆನಿನ
ಗೆಂದಾ ॥ ಪನ್ನಗಧರನಂಭೂಬುಧ । ಸನ್ನುತಮಾದಲಿಸಲೆಂದುಪದೆದೆಯಿ
ದೆಯೋ .. ||೧೫||

ಉ|| ವೃ|| ಕಿನ್ನರವರ್ಯನಿನ್ನನಡೆ ನಿನ್ನಂಯುಮೆಲ್ನುಡಿನಿನ್ನಭಕ್ತಿಸ । ಪ

ನ್ನತೆನಿನ್ನವಿಗ್ರಹದಚೆಲ್ವಿಕೆನಿನ್ನವಿನೋದದೇಳ್ಗೆಕೇ ॥ ಳ್ನಿನ್ನಕಳಾವಿಳಾಸತೆಯಿ ವೆಲ್ಲವುಮೆನ್ನೆದೆಯಲ್ಲಿಬೆಚ್ಚು ನ । ಣ್ಪಿನ್ನೆಲೆಗೊಂಡುತೋರ್ಪುದುಗಡಿಂದಿನನಿನ್ನ ವಿಯೋಗಮುದ್ಭುತಂ ॥೧೬॥

ಉ॥ ಎನ್ನಸುರತ್ನಮೇಸುಡಿಯೆ ಯೆನ್ನಯಕಂಗಳಪುಣ್ಯಮೇ ಪೊದ ಳ್ದೆನ್ನೊಡನೇಕೆನೀಂಮುನಿದೆಯೆನ್ನಯಬಾಳ್ಮೆಗಡರ್ಪೆಸತ್ಕೃಪಾ॥ ಸನ್ನುತೆವೆ ತ್ತುನಾಡೆನಡೆನೋಡೆಭವತ್ಪದಭೃತ್ಯನಾಗಿ ಬಾ । ಳ್ದೆನ್ನೊಳಿದೇಕೆ ನಿರ್ದಯು ತೆಕಿಂನರನಾಯಕ ಮತ್ಸಹಾಯಕ .. ॥೧೭॥

ವ॥ ಎಂಪುಪಲವಂದದಿಂ ಪಳಯಿಸಿ ಶೋಕಾಶ್ರುಕಣಕಲಿತ ವದನ ಮಂಡಲನಾಗಿ ಬಸವರಸಮಿರ್ಪ್ಪಿನಮಾಗ ಳ್ಪಡಿಯರ ಬಾಚೈಯ್ಯನೆಂಬ ಭ ಕ್ತಕಂಚುಕಿ ಶಿವಗಣನಿರೂಪದಿಂ ಪ್ರಮಥಗಣಪಟ್ಟಗಜಮೆನಿಪ ಮಡಿವಳ ಮಾಚಿದೇವನಡಿಗಳೆಡೆಗೆಳ್ತಂದುಭಕ್ತಿಯಿಂ ಪೊಡಮಟ್ಟು ಕಿಂನರೇಂದ್ರಂಪನ್ನ ಗಧರನೊಳೊಡೆವೆರೆದಿರನಂಬಿನ್ನೈಸಿ ಬನ್ನಿಮೆಂಬುದುಂ ಮಾಚಿದೇವಂ ಸ ಮುನ್ನತಚಿತ್ತಂ ಕೇಳ್ದು ಶಿವಗಣನಿವಹಮಲ್ಲಿಬಂದಿರ್ದರ್ಪುದೆ ಬಸವನೇಗೆಯ್ದ ಪಂ ಪೇಳೆಂಬುದು ಮಾತನಿಂತೆಂದಂ.

ಕಂ॥ ಬಂದಿರ್ಪು ದಖಿಳಶಿವಗಣ । ವೃಂದಂ ಮಾದರಸ ಮುಖ್ಯಮಿಾ ಗಳ್ಪದೆ ದೇ ॥ ಳ್ತಂದಾ ಬಸವಂ ಕಿನ್ನರ । ನಂದದ ಕಂಧರಮನಪ್ಪಿಶೋ ಕಿಪನಲ್ತೆ . .. ॥೧೮॥

ಪ್ರಣಯದೆಕಿನ್ನರಬೊಮ್ಮನ । ಗುಣಗಳ ನೆನೆನೆನೆದು ನೊಂದು ಬಿಸು ಸುಯ್ಯುತೆ ಸಂ ॥ ದಣಿಪ ಕಡುಶೋಕದಿಂ ತ । ಲ್ಲಣಿಸಿ ಪಲುಂಬಿದಪನಲ್ಲಿ ಬಸವಕುಮಾರಂ .... ॥೧೯॥

ವ॥ ಎಂದನುಡಿಯಂ ಮಾಚಿದೇವನೇಳಿದಂಗೆಯ್ದು ಮುಗುಳ್ನಗೆನಕ್ಕು

ಕಂ॥ ಕರುಣಾಳು ಬಸವನಲ್ಲದೆ । ಧರಣಿಯೊಳಾರುಂಟು ಶರಣನಳಿ ದೊಡೆ ಶೋಕಾ ॥ ತುರನಾಗಿ ಮರುಗಿದಪ ನೀ । ಧರಿತ್ರಿಯೊಳ್ಭಕ್ತಿಭಾವ ಮಿಂ ತಿರವೇಡಾ ॥೨೦॥

ಕಂ॥ ಚರಲಿಂಗ ಪ್ರಾಣತೆಯದು । ಚಿರವ್ರತಂ ತನಗೆನಿಪ್ಪ ಭಾಷೆಯ ಪರಿಯಂ ॥ ಪರುಠವಿಸಿದ ನೀಗಳ್ಬಸ । ವರಸಂ ಲೇಸಾದುದಮಮ ತಂನ ಚರಿತ್ರಂ .... ॥೨೧॥

ಮ॥ ವೃ॥ ಶಿರಮುಂಪತ್ತುಗುಮೋರ್ಮೆ ಭಕ್ತಿಮದದುದ್ರೇಕಂ ಪೊದ

ಳ್ದಾಗಳು । ಬ್ಬರದಿಂ ಮಾಳ್ಪನನನ್ಯಸಾಧುಶಪಥೋಪನ್ಯಾಸಮಂ ಮುಂದೆಬ॥ ಪ್ಪಿರಸಂ ಕಜ್ಜದಹಾನಿಯುಂಪರಿಕಿಸಂ ಮತ್ತೆಲ್ಲ ಭಕ್ತರ್ಕಳಂ । ತಿರಲೊಲ್ಲಂ ಬಸವಂ ವಿಚಾರಿಸನದೇಕಾತ್ಮೀಯಸಾಮರ್ಥ್ಯಮಂ ॥೨೨॥

ಕಂ॥ ನೆನೆವಂತೆ ಕಿನ್ನರಾಧೀ । ಶನ ಗುಣಮಂ ಪೂಣ್ದು ತನ್ನಭಾಷೆ ಯುಸೀಗ ॥ ಳ್ನೆನೆಯದೆ ಕಣ್ಬನಿಗಳಪೇ । ರ್ವೊನಲಿಂ ನಾಂದಪನೆ ಭಲರೆ ಭಕ್ತವರೇಣ್ಯಾಂ .... ॥೨೩॥

ಕಂ॥ ಪರಭಕ್ತಂಗೆಳಿವೆಂಬುದು । ಪರಮಾರ್ಥಮೆ ಲಿಂಗಯೋಗಿಗೆ ತ್ತಣದಳವೀ ॥ ಪರಿಯರಿದರಿಯದ ಜಡರಂ । ತಿರೆ ತಾಂಬರಿದೇಕೆ ಬಸವನಾಕ್ರಂದಿಪನೊ .. ॥೨೪॥

ಕಂ॥ ಜಂಗಮಮೆನಗಸುವೆಂದು ಕ । ಡಂಗಿ ಕರಂಪೂಣ್ದುಮಾಳ್ಕೆಯುಂಮರೆದೀಗ॥ ಳ್ಪಿಂಗದೆ ಪಳಯಿಸ ಠಕ್ಕಂ । ಗಂಗಜಹರ ಕಲ್ಲಿನಾಥನೇನೊಲ್ದಪನೆ .... ॥೨೫॥

ಕಂ॥ ಅಳಲರಿಯೆ ಸವನಗುಣಸಂ । ಕುಳಮಂ ನೆನೆನೆನೆದು ಪಾಡಿಬಸವರಸನ ಪೋ ॥ ಲ್ಪಳಯಿಸಲರಿಯೆಂ ಬಂದೊಡೆ । ಫಳಮೇನೆನ್ನಿಂದಮಲ್ಲಿಗಾತನೆಸಾಲ್ಗುಂ . . ॥೨೬॥

ವ॥ ಎಂದುಮಾಭಕ್ತಿರಹಿತನ ಸಾರ್ಕೆಗಾಂಬಾರೆನೆಂದ ಮಾಚಿದೇವ ನಾಕ್ಷೇಪವಚನಮಂಕೇಳ್ದು ಪಡಿಯರಂಬಿಗುರ್ತುರ್ಬೆಬ್ಬುಳಿವೋಗಿ ಜವದಿಂಪರಿತಂದು ಗಣಸಭೆಗೆನುಡಿದು, ಮಾಚಿದೇವನೆಂದುದುಮನೆಲ್ಲಮಂ ನಡುಕವ್ಮಿಗೆಬಿನ್ನೈಸೆ ಬಸವರಾಜಂಕೇಳ್ದು ನಿಜಪ್ರತಿಜ್ಞೆಯಂ ನೆನೆದು ಶೋಕಮಂ ಮಾಣ್ದು ಚಿರಗುವಟ್ಟುಕಿನ್ನರಪ್ರಾಣದೋಳ್ತನ್ನಸುವಂ ರಯದಿಂಬಳಿಸಲಿಸಿದಂ ತತ್ಪ್ರಸ್ತಾವದೊಳ್

ಕಂ॥ ಚರಲಿಂಗ ದಸುವಿನೊಡನಸು । ವೆರಸಿದನೀಬಸವ ನಸಮಗುಣನಿದು ಪೊಸತು ॥ ವರ್ರೆಯೊಳ್ಕಂಡದೊಳಂಕೇ । ಳ್ದದೊಳಂ ಕಂಡೆಂದು ಮಾಲಿಸಿಯು ಮರಿದಪೆವೆ ॥೨೭॥

ಕಂ॥ ಮಾಚಯ್ಯಂ ಚೆಸಸಿದುದೆ ಸ । ದಾಚಾರಂ ತನಗೆನುತ್ತೆ ಕಡುಕಜ್ಜಮ ನಾ ॥ ಳೋಚಿಸದೆ ನೆಗಳ್ದಮಹಿಮೆಯ । ಗೋಚರಮನ್ಯರ್ಗೆ ಬಸವದಂಡಾಧಿಪನಾ ॥೨೮॥

ವ॥ ಎಂದಲ್ಲಿಂಘ ಭಕ್ತಸಮುದಯಂ ಬಸವನಂ ಪೊಗಳುತ್ತಮಿರ್ದು

ಪಡಿಯುರ ಬಾಚೈಯ್ಯನಂ ಮಾಚೈಯ್ಯನೆಡೆಗೀಕಜ್ಜಮಂ ಬಿನ್ನವಿಸೆಂದು ಕಳುಪಲೊಡನವಂ ಪುಳಿಲನೇಳ್ತಂದೆರಗಿ ಬಸವನೆಸಗಿದಂದಮಂಬಿನ್ನಪಂಗೆಯ್ಯೆ ಕೇಳ್ದುಮಾಚಿದೇವಂ ಸಂತಸಂತಾಳ್ದು ರೋಮಾಂಚಕಂಚುಕಿತಾಂಗನಾಗಿ||

ಕಂ|| ಗುಡಿಗಟ್ಟಭಕ್ತಜನಮು । ಗ್ಗಡಿಸುತೆ ಕೊಂಡಾಡುತಲ್ಲಿಬಸವನನೊಲವಿಂ || ದೊಡನೇಳ್ತರೆ ಮಾಚಯ್ಯಂ । ನಡೆತಂದಂ ವಿಪುಳಸಂಭ್ರಮಂಬೆರಸಾಗಳ್ .... ||೨೯||

ಮ|| ವೃ|| ವಿಳಸಜ್ಜಂಗಮಜೀವಭಾಪುರೆ ಚರಪ್ರಾಣಾಸ್ವಿತಪ್ರಾಣಮಂ । ಜುಳ ಶೀಲೋಂನತಜಾಗುರೇಶರಣಜೀವಸ್ಥಾಪನಾರ್ಥಸಂ । ಕುಳಭಾಸ್ವದ್ವಸವೇಶ ಭಾಪೆನುತಮಾಚಯ್ಯಂ ಮಹೋತ್ಸಾಹದಿಂ ||೩೦||

ವ|| ಮತ್ತಂ

ಚ|| ವೃ|| ಜಯಬಸವೇಂದ್ರ ಭಕ್ತಿಗುಣಸಾಂದ್ರ ಚಿದಂಬುಧಿಪೂರ್ಣಚಂದ್ರನಿ । ರ್ಲಯನಿಜರೂಪ ನಿರ್ಜಿತಕಲಾಪ ಮಹಾಶಿವತತ್ವದೀಪ ದು || ರ್ಣಯಪರಭಂಗಭಕ್ತಕೃತ ಸಂಗಶಿವೈಕ್ಯಪದಾಬ್ಜಭೃಂಗವಿ । ಸ್ಮಯಕರಕಾರ್ಯವಿಂದ್ಯನಗಧೈರ್ಯಜಗತ್ರಯಧುರ್ಯವಿಗ್ರಹಾ ||೩೧||

ಮ|| ಸ್ರ|| ಚರಲಿಂಗಪ್ರಾಣಿತಾಬಂಧುರ ಜಯಜಯವಿಖ್ಯಾತಲಿಂಗಾಂಗಸಂಯೋ || ಗರಹಸ್ಯಾರ್ಥಾನುಭಾವಪ್ರದ ಜಯಜಯಸದ್ಭಕ್ತಿಸಾಂಮ್ರಾಜ್ಯಧೌರೇ । ಯರಸನಶಾಂತಾವನಾರ್ಥಾಗತ ಜಯಜಯಭಕ್ತಾಬ್ಧಿಸಂಪೂರ್ಣಚಂದ್ರ .... ||೩೨||

ಕಂ|| ನುಡಿಯಲರಿದಾದವಾಕ್ಯಂ । ನುಡಿದೈ ನುಡಿದಂತೆನಡದೆನಿನ್ನಯಪೆಂಪಂ || ಪಡಿಗಟ್ಟನುತಿಸಿದಪೆನೆಂ । ದೊಡೆ ಸಾಧ್ಯಮೆ ಬಸವಭಕ್ತಜನಮುಂದಾರ .... ||೩೩||

ವ|| ಎಂದುಕೊಂಡಾಡಿಪಾಡಿ ನಲವೆಚ್ಚುರ್ತ್ತಮಾಗಳ್

ಮ|| ಸ್ರ|| ವೃ|| ಹರತೇಜಃಪುಂಜಮೋ ಶಂಕರಕರದಕರಾಳಾಸ್ತ್ರಮೋಶೈಲಜೊಧೀ । ಶ್ವರನುದ್ಯದ್ಭಾಳನೇತ್ರಪ್ರಭೆಯೊ ಮೃಡನೆಸಾಮರ್ಥ್ಯಮೋಮನ್ಮಥಾರಾ || ತಿರುಚಿಸ್ಫೂರ್ತಿಪ್ರತಾಪಾಕೃತಿಯೊ ಶಿವನಸಾಕಾರಮೋನೋಡಿಮೆಂಬಂ । ತಿರೆ ಬಂದಂದಿವ್ಯತೇಜೋಮಯತನುಘನಶೌರ್ಯಾಕರಂಮಾಚಿದೇವಂ .... ||೩೪||

ಲಯಗ್ರಾಹಿವೃತ್ತ|| ನೋಡೆಸುಜನಾಳಿರತಿಮೂಡೆ ಶಿವಭಕ್ತತತಿಪಾಡೆಪೊಸಕೇಳಿಕೆಯನಾಡೆಚರಬೃಂದಂ । ನಾಡೆಮಣಿದೀಪ್ತಿತವನೀಡೆನುತೆವಂ

ದಿತಶಿಪಾಡೆ ಪರವಾದಿಜನನೋಡೆ ಯಮುವಕ್ತ್ರಂ ‖ ಖಾಡೆ ಭಯವಿಹ್ವಳತೆ ಗೊಡೆ ಭವಿರಾಜಿಕುಣಿದಾಡೆ ಬುಧಪಾಳಿಬಗೆಕೋಡೆ ಖಲಜಾಲಂ | ತೋಡ ಮರದಿರ್ಪ್ಪ ಶಶಿಡೂಡನಿವನೆಂಬ ಬಗೆಗೀಡೆನಿಸಿ ಶರಣರೊಡನಾಡಿನಡೆತಂದಂ‖

ವ‖ ಅಂತೇಳ್ತಂದು ಮುನ್ನಣೆಯಿಂ ತನ್ನನಿದಿರ್ಗೊಳ್ವ ಶರಣನಮುದಯಂಮಣಿಯೆ ಮಗುಳ್ಕುಮಣಿದಣಿಯರ ಮವರ್ಗೊಡಿ ಗಳಿಲನೇಳ್ತಂದು ಗಣಸಭೆಗೆವೊಡಮಟ್ಟು ತದನುಜ್ಞೆಯಿಂ ಶಿರದೊಳ್ವೊತ್ತು ಸಕಲಶಿವಗಣಚರಣಾರವಿಂದಂಗಳಂ ಮಾನಸದೊಳರ್ಚಿಸಿ ಸಮಗ್ರದೃಷ್ಟಿಯಿಂನಿಂದು

ಮಲ್ಲಿಕಾಮಾಲಾ‖ ಕಿನ್ನರೇಶ್ವರ ನಿನ್ನಸುಪ್ರಿಯಮಿತ್ರನಂ ವೃಷಭೇಂದ್ರನಂ | ಮುನ್ನನಿಂತೊರೆದೆಯ್ದುಲಕ್ಕುಮೆ ಮೇಣ್ಮಹೇಶ್ವರನಾಜ್ಞೆಯುಂ ‖ ನನ್ನಿಯಿಂಪರಿಪೂರ್ತಿಗೆಯ್ಯದೆ ಯೆಂದೊಡೀತನ ನೆಂತುಪೇಳ್ | ನಿನ್ನೊಳಿಂದೊಡಗೂಡಿದ್ದೈಹರನಾದೊಡಂಗಣವೃಂದಮುಂ .... ‖೩೬‖

ಕಂ‖ ವಂಚಿಸುತೆನಿಮ್ಮನೀರ್ವರ | ಸಂಚಿತಮತಿಯುಳಿ ದದೆಂತುಕೊಂಡೊಯ್ವನೊ ನಿ ‖ ಮ್ಮಂಚದುರರೊಳ್ಳುಪರಿಗಣ | ಸಂಚಯದೊಳ್ನಿಮಗಪೇರ್ಮೆ ಕೈಸಾರ್ದಪುದೆ .... ‖೩೭‖

ಕಂ‖ ವಸುಧೆಯೊಳಿ ಬಸವನಿಲ್ಲದೊ | ಡಸಮಾಕ್ಷನ ಮಹಿಮೆಯೊಳವೆ ಶಿವಭಕ್ತಿಯು ಪೆಂ ‖ ಪೆಸೆದಪುತೆಪಗಲಸಿರಿನವ | ಬಿಸಜದಸೊಂಪರ್ಕ್ಕನಿಲ್ಲದೊಡೆಸಮನಿಪ್ಪುದೆ .... ‖೩೮‖

ಮ‖ ಸ್ರ‖ ವೃ‖ ಚರಲಿಂಗಪ್ರಾಣಭಾವಂ ಬಸವನಸುವನೊಲ್ದಿತ್ತನಾತ್ಮಪ್ರತಿಜ್ಞಾ | ಪರಿಪಾಲ್ಯಂ ಯುಕ್ತಮಾತಂಗದು ಪುರಹರನುಂ ನೀನುಮಾತ್ಮೇಚ್ಛೆಯಿಂ ಭ ‖ ಕ್ತರನೊಲ್ದಿಂ ವಂಚಿಸುತ್ತೀಶರಣ ನಸುವ ನೊಯ್ವಂದಮೇಂತಕ್ಕುದೇಕಿ | ಸ್ಮರನೀನೇಳೇಳ್ವೃಷಾಧೀಶ್ವರನೊಡನೆ ಧರಾಚಕ್ರದೋಳ್ಬಾಳಲೀಗಳ್ .... ‖೩೯‖

ವ‖ ಎಂದುಸಂಭ್ರಮಮಂ ವಿಜೃಂಭಿಸಿ ನುಡಿಯಲೊಡನೆ

ಕಂ‖ ತನುವಲಗೆ ಕಿನ್ನರಯ್ಯಂ | ಕನಸಂ ಕಂಡೇಳ್ವತೆರದಿ ನೆಳ್ದೊಪ್ಪಿರೆ ಭೋಂ ‖ ಕನೆಬಸವನೇಳ್ದು ತತ್ಪದ | ವನರುಹದೊಳನರ್ಚಿ ನೊಸಲನವನತನಾದಂ .... ‖೪೦‖

ವ‖ ಅಂತೆರಗುತೀರ್ವರುಂ ಮೊಚಿದೇವಂಗೆ ಮಣಿಯೆತನ್ಮಾಚಿದೇವನವರ್ಗೊಡಿ ಗಣಸಭೆಗೆಮುಗುಳ್ದೆರಗಿ ನಿಂದಾಗಳಾಮಹೇಶ್ವರರಾತನಂನೋಡಿಸಾಶ್ಚರ್ಯಮಾನಸರಾಗಿ ಸಮ್ಮದಂಬಡೆದು

ಮ|| ಸ್ರ|| ವೃ|| ಶರಣಪ್ರಾಣಪ್ರತಿಷ್ಠಾಪರ ಪರಮಶಿವಾದ್ವೈತ ವಿದ್ಯೋಪವಿದ್ಯಾ || ಕರವಿದ್ವದ್ವಂದ್ಯ ವೀರವ್ರತಹಿತಕರ ಕಾರುಣ್ಯವಾರಾಶಿ ವಾದ್ಯ || ತ್ಕರಗರ್ವೋರ್ವಿರ್ಧ್ರ ಸಂಭೇದನಪವಿ ಭುವನಾ ರಾಧ್ಯಭೂರು ದ್ರವಿಶ್ವಂ | ಭರ ಭದ್ರಾಕಾರ ಭೂಭೃದ್ವಿಪದಳನ ಮಹಾಶೌರ್ಯಪಾಚಾರ್ಯ ವರ್ಯಾ || .... ||೪೧||

ಚ|| ಶರಣಗಣಪ್ರಧಾನ ಸರಸೀರುಹಭಾಸ್ಕರ ಭವ್ಯಸೇವ್ಯಶಾಂ| ಕರ ಮತ ಪಾರಿಜಾತ ಜಿತಮನ್ಮಥ ಜನ್ಮಜರಾವಿದೂರ ಸ || ಚ್ಚರಿತಚರಾಚರ ಪ್ರಕರಪಾಲಕ ಜಂಗಮಲಿಂಗಮಂಗಳ | ಸ್ಥಿರತರಭಕ್ತಿಯುಕ್ತ ಗಣಸನ್ನುತ ಸದ್ಗುಣರತ್ನಭೂಷಣಾ || ——— ||೪೨||

ಉ|| ಹಾರಪಟೀರಹೀರಘನಸಾರಸುಧಾರಸಸಾರಸಾತಿಮಂ| ದಾರ ತುಷಾರತಾರಧರಣೀಧರ ನಾರದಗೌರಕೀರ್ತಿವಿ || ಸ್ತಾರ ವಿಚಾರಸಾರ ನಯವಾಕ್ಯವಿಶಾರದ ವೀರಶೈವಗಂ| ಭೀರಮತಪ್ರಶಸ್ತ ಮಕರಾಕರವರ್ಧ ನಪೂರ್ಣಚಂದ್ರಮಾ || ——— ——— ||೪೩||

ಕಂ|| ಬಿಜ್ಜಳಮಾನಸಪತಿಮದ | ಕಜ್ಜಳಸಲಿಲಪ್ರವಾಹಸಾಹಸಭ ರವಿ || ದ್ವಜ್ಜಳಧಿಚಂದ್ರಭಜಕವಿ | ಪ್ರಜ್ಜಳದಪಟಪ್ರಭಂಜನಪ್ರಭವಿಭವಾ||

ಕಂ || ಶೂಲಧರಭಕ್ತನಿವಹಮ | ನೀಲೋಕದ ಸುಜನನಿಕರಮಂ ಪರಮತಮಂ || ಲಾಲಿಸಲುಂ ಪಾಲಿಸಲುಂ | ಸೋಲಿಸಲುಂ ಮಹಿಗೆಬಂ ದಮಹಿಮಾಧಾರಾ || .... ||೪೫||

ಕಂ|| ಬಸವನುಮಂ ಕಿಂಸರನುಮ | ನಸುಸಹಿತರನಿಂತುನೆಗಳ್ದೆ ಶಿವ ಮಹಿಮೆಗೆ ಬೆ | ಳ್ಚಸಮನಮರ್ಚದೆ ಭಕ್ತ | ಪ್ರಸರಕ್ಕೆ ಮಹೋತ್ಸವಂ ಗಳಂಪಡೆದಿತ್ತೈ || ——— ——— ||೪೬||

ಮ|| ವೃ|| ಗಣದುಗ್ಧಾಬ್ಧಿಸುಧಾಂಗ ನಿನ್ನನಯಯುಕ್ತಂ ನಿಷ್ಠುರಂ ವಾಣಿಸಂ | ದಣಿ ಮಾದ್ಯಷ್ಟವಿಭೂತಿ ಸರ್ವಪದಸನ್ಮೋಕ್ಷಂಗಳಂ ಮಾಳ್ಪ ಲ || ಕ್ಷಣಮಾಂ ತೊಪ್ಪುಗುಮುರ್ವಿಯೊಳ್ನುಡಿಯುದೆಂ ಬಲ್ಲರ್ಗೆಮುಂಗೈ ಯ್ಯ ಕಂ | ಕಣಕೇಂ ಕನ್ನಡಿಯುಂಟೆನೋಳ್ಪೊಡಿದೆ ದೃಷ್ಟಾಂತಂ ಪ್ರಪಾ ಧೀಶನಾ || .... ||೪೭||

ಕಂ|| ವಿಮಳಪ್ರತಿಜ್ಞೆಯಿದರಿಂ | ಪ್ರಮಥರ್ಕ್ಕಳಶಾಸನಕ್ಕೆ ಸಸ್ಮ

ದಭಕ್ತಿ ॥ ಪ್ರಮದೆಗೆಸೌಭಾಗ್ಯಂಗುಣ । ಸುಮನೋಮಾಲಿಕೆಗೆ ಕಂಪುನೆರೆ
ದುದು ಪೆರತೇಂ ॥ .... ॥೪೮॥

ಉ ॥ ವೃ ॥ ಎಂದುಮನೋರಥಾಮಹೀರುಹಮಾರ್ಯವರೇಣತಾಳ್ದಿ
ಸೊಂ । ಪಂಮಿಗೆಸತ್ವರಂ ಫಲಿತಮಾದುದು ಜಂಗಮಮಾನಸಾಂಬುಜಂ ॥
ಸಮ್ಮದಸೌರಭಂ ದಳಿದುದೆಂದೊಲವಿಂ ನುತಿಗೆಯ್ವುತಿರ್ಪ್ಪನಂ ॥ ದಿಂಮಿ
ರದಲ್ಲಿಮಾಚವಿಭು ಸುಸ್ಮಿತಲೋಚನದಿಂದೆ ನೋಡುತಂ ॥ ॥೪೯॥

ಕಂ॥ ಬಸವವಿಭುಮುಖ್ಯಶಿವಗಣ । ವಿಸರಮಾನಾತ್ಮೀಯವಿಮಳಕ
ರುಣಾಮೃತಸಾ ॥ ರಸರೋಧಿಯೊಳೋಲಾಡಿಸು । ತೆಸೆದಿರ್ದಂಭಕ್ತಹೃದ
ಯಕುಮುದಶಶಾಂಕಂ ॥ .... ॥೫೦॥

ವ ॥ ಆಗಳಾಭಕ್ತಗಣಂ ನಿಜಸಭೆಯೊಳೆಸೆವ ಬಸವರಸನಂ ನೋಡಿ
ಕಾರುಣ್ಯಮುಂನೀಡಿ ॥

ಮ॥ ಸ್ರ॥ ವೃ ॥ ಪರಮೇಶಂ ತನ್ನೊಳೀಕಿನ್ನರನ ಹರಣಮುಂಕೂಡಿ
ಕೊಂಡಿರ್ಪ್ಪನಂ ತ । ಕ್ಕಿರದಾತ್ಮಪ್ರಾಣಮುಂ ಜೆಂಕೊಳಿಸಿ ಬೆರಸಿದ್ದೈಮ
ತ್ತೆ ತತ್ಪ್ರಾಣಮುಂಮಾ ॥ ಚರಸಾರ್ಥ್ಯಂ ಸತ್ಕೃಪಾವೀಕ್ಷಣದಿ ಬರಿಸೆನೀರೆ
ಜೆನ್ನನೆಯ್ತಂದೆಭಾವು ।ರ್ವರೆಯೊಳ್ನಿಂನರಾರ್ಜಂಗಮಮಿಳಿತನಿಜಪ್ರಾಣರಾ
ಯರ್ಾಬ್ಧಿಚಂದ್ರ .... ॥೫೧॥

ಮ॥ ಸ್ರ॥ ಕುಡಲಕ್ಕುಂಪ್ರೊಂಗಳಂ ಜಂಗಮಕೆ ತನುವನೆಂತೀಯಲ
ಕ್ಕುಂ ವಲಂ ತ । ನ್ನೊಡಲಂ ಕೂರ್ತೀಯಲಕ್ಕುಂ ಮನಮುನಸುಮನೆಂತೀ
ಯುಲಕ್ಕುಂಪ್ರಯತ್ನಂ । ಬಡೆದೀಯಲ್ಬರ್ಕ್ಕುಮಾರ್ಪಿಂ ದಸುವನಸವಸಂ
ವೀರಭೃತ್ಯತ್ವದಿಂದಂ .... ॥೫೨॥

ಕಂ॥ ಬೆಸುಗೆಮಿಗೆ ಜವದಿ ಜಂಗಮ । ದಸುವಿನೊಳಸುವಂ ನಿವೇ
ದಿಸಲ್ಬರ್ಕ್ಕುಮೆ ಪೇ ॥ ಳ್ಬಸವ ಸಚಿವೇಂದ್ರನಿನ್ನವೊ । ಲಸದೃಶ ಮಿದುಭ
ಕ್ತಿಭಾವಮಾರ್ಗಮಶಕ್ಯಂ .... ॥೫೩॥

ಮ॥ ಸ್ರ॥ ವೃ॥ ಘನಲಿಂಗಪ್ರಾಣಯೋಗವ್ರತದಶಪಥಮಿಂತಾಗೆಸಂ
ದಿರ್ಸ್ದಂ ದೊ । ಳ್ಪಿನಸತ್ಯೇಶಂಗೆ ಮೇಣ್ಕೊಂಡಗುಳಿಯ ವಿಳಸತ್ಕೇಶಿರಾ
ಜಂಗಳಾಪಾ ॥ ವನ ಚಂನಯ್ಯಂಗೆಲೋಕೋತ್ತರಗುಣ ಕಮಳಾಂಬಾಪ್ಯೆ
ಗಾತಂಗುಟೂರೋ । ಳ್ಪಿನದಂಬೆತ್ತಿರ್ಪಮಾರಪ್ರಭುಗೆ ಜಗದೊಳೆಂಬುಕ್ತಿ
ಯುಂಕೇಳ್ವಿರೇಗಳ್ .. ॥೫೪॥

ಮ|| ಸ್ರ|| ಚರಲಿಂಗಪ್ರಾಣಭಾವಾವ್ರತಮಿದು ಬಸವಂಗೆಯ್ದೆ ಸಂದೊಪ್ಪಿದತ್ತು | ಧರೆಯೊಳ್‌ಲಿಂಗಾರ್ಪಿತಪ್ರಾಣತೆಯದು ಪೊಸತಲ್ತಲ್ತು ಭಾವಿಪ್ಪೊಡೀ ಭಾ || ಸುರವೃತ್ತಂ ಜಂಗಮಪ್ರಾಣತೆ ಜಗದೊಳಪೂರ್ವಂ ದಲೆಂ ದೊಲ್ದು ಮಾಹೇ | ಶ್ವರವೃಂದಂ ತನ್ನನೊಳಿಎಂಪೊಗಳೆಮೆರೆದನಾನಂದಸಾಂದ್ರಂವೃಷೇಂದ್ರಂ ||೫೫||

ಲಲಿತವೃತಂ|| ತಪ್ತಕನಕಪ್ರಭನಿಗುಪ್ತ ನಿಜಮಾನಸಸುಜಪ್ತಶಿವಮಂತ್ರತನುಲಿಪ್ತಾಸಿತಭಸ್ಮಾ | ಪ್ರಾಪ್ತಶಿವಭಾವ ಜಿತದೃಪ್ತಕರಣೇಂದ್ರಿಯ ಸಮಾಪ್ತ ಬಹುಕೃತ ಪರಿತೃಪ್ತ ಚರಲಿಂಗಾ || ಕ್ಷಿಪ್ತಮದಸತ್ವಗುಣ ಲುಪ್ತಜಡಭಾವ ಚಿದಸುಪ್ತರುಚಿದೀಪ ಪರಿದೀಪ್ತಕರಣೌಶಾ | ವ್ಯಾಪ್ತಸಿತಕೀರ್ತಿ ಪೊರೆಸಪ್ತಹಯಚಂದ್ರಪವನಾಪ್ತನಯನಾಂಕಧರಗೋಪ್ತ ಬಸವೇಶ |೫೬|

ಉತ್ಸಾಹ ವೃತ್ತಂ|| ಚಂಡಭಾನುಮಂಡಲಾಂತರಾಳಮಂದಿರೋಜ್ವಳೆ | ಖಂಡಿತಪ್ರಚಂಡಚಂಡ ಮುಂಡಶೌರ್ಯಮಂಜುಳೆ || ಖಂಡಚಂದ್ರಮೌಳಿಭಾಸುರಾಂಕಪೀಠನಿಶ್ಚಳೇ | ಚಂಡಿಚಾರುಮೂರ್ತಿ ಪಾಲಿಸೆನಸರ್ವಮಂಗಳೇ .... ||೫೭||

ಗದ್ಯ|| ಇದು ವಿನಮದಖಿಳಸುರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತರುಚಿನಿಚಯತರುಣಾತಪಪರಿಲಸಿತ ಪರಮ
ಶಿವಲಿಂಗ ಪಾದಾರವಿಂದಪರಾಗ ಭಸಿತ ಭಾಸುರಲಲಾಟ
ಪಟ್ಟಸರಸಜನಮಾನಿತೋಭಯಕವಿತಾವಿಶಾರದಶ್ರೀ
ಷಡಕ್ಷರದೇವಭಕ್ತಿವಿರಚಿತ ಶ್ರೀಮದ್ಬಸವರಾಜವಿ
ಜಯಮಹಾ ಪುರಾಣದೊಳ್ ಬಸವಕಿಂನರ
ಸಹಪ್ರಾಣಿತ್ವ ಕಥನಂ ಚತುರ್ವಿಂಶ
ತ್ಯಾಶ್ವಾಸಂ ಪರಿಸಮಾಪ್ತಂ

ಶ್ರೀ ಬಸವಲಿಂಗಾಯನಮಃ

ಬಸವಭಕ್ತಪ್ರಾಣಸಖತ್ವ ಕಥನಂ

ನಾಂದಿ ॥ ಲಲಿತಪದವೃತ್ತಂ ॥ ದಾನವರಿಪುಪ್ರಿಯಸ ದಾನವಸುಭಕ್ತಿಯುತದಾನಗುಣಶೀಲವಿವಿ ಧಾನಘುಚರಿತ್ರೇ । ಶಾನಪದಭಾವನವ ಶಾನದವರಪ್ರದದ ಶಾನನಸಮುಚ್ಚ ತದಿಶಾನಟಯಶಸ್ಕ ॥ ಭಾನುಪವನಾಪ್ತಹಿಮಭಾನುನಯನತ್ರಯನಿ ಭಾನುಗತಸತ್ಪಥ ಶುಭಾನುಭವಯುಕ್ತ । ವೀನರಥಶುಪ್ರಭನವೀನಗುಣ ದುಷ್ಟಫಣಿದೀನಭೃತಶಾಂಭವಕವೀನಬಸವೇಶಾ

ಲಲಿತಪದವೃತಂ॥ ಕಿನ್ನರಗಣಾಧಿಪತಿ ಚನ್ನವೃಷಮಾಚವಿಭುಕನ್ನದಗಣೇಶ ಮುಖಸನ್ನುತಶಿವೈಕ್ಯೋ । ತ್ಪನ್ನಸುಖಭಾವಭವಪನ್ನ ಗಖಗಾಧಿಪತಿಪನ್ನತಪಯೋಜಪರಿಷನ್ನವದಿನೇಶ ॥ ಪ್ರೋನ್ನತಗುಣಾಕರವಿಪನ್ನಿ ವಹಸಂಹರಜಗನ್ನಿಕರರಕ್ಷ ಕಲಸನ್ನಿಗಮಸಾರ । ಸನ್ನಮತಿನಿತ್ಯಪೊರೆಯನ್ನ ನೆಲೆದೇವಕೃಪೆಯಿಂ ನಲವನಿತ್ತುಚಿದಭಿನ್ನಬಸವೇಶಾ ॥ ....

ಕಂ॥ ಶ್ರಿಮದಮಳಾಂಬಿಕಾ ದರಹಾಸದ್ಯುತಿ ಮಲ್ಲಿಕಾಮಧುವ್ರತ ಸಭವಂವಾಸಮುಖ ಸುರಹೃದಯೋಲ್ಲಾಸ ಪ್ರದನೀಗೆಸೌಖ್ಯಮುಂಶಿವಲಿಂಗಂ

ವ॥ ಇಂತು ಚಂನ್ನಬಸವಂ ಬಸವವೃತ್ತಾಂತಮುಂಬೆಸಸಿ ಗಣನಿವಹಕಾನಂದಮನೊದವಿ ಸುಖಮಿರುತ್ತಮಿರೆ·ಮತ್ತಮಲ್ಲಿ ॥೫॥

ಮ॥ ಸ್ರ॥ ವೃ॥ ಚರಲಿಂಗೆ ಸ್ವಾಮಿಸುಜ್ಞಾನಮೇ ಸಮುಚಿತಸನ್ಮಂತ್ರಿಯಾಚಾರಮೇ ಭಾಸುರಾಷ್ಟ್ರಂ ಶಾಂತಿದುರ್ಗಂ ವಿಮಳಗುಣಮೆಮಿತ್ರಂಮಹಾಮೂಲಮತ್ರಂ ॥ ಚಿರಕೋಶಂ ಶುದ್ಧಬುದ್ಧಿ ಪ್ರಭೃತಿಬಲಮಿವಿಂತಾಗೆ ಸಪ್ತಾಂಗಮಾಳ್ದು । ಚ್ಚರಿಯಂ ರದ್ಭಕ್ತಿಸಾಂ ಮ್ರಾಜ್ಯಕೆವಿಭುವೆನಿಸುತ್ತೊಪ್ಪುತಿರ್ದ್ದಂವೃಷೇದ್ರಂ ____ ॥೨॥

ಕಂ॥ ಜಿತವುನರ್ಗ ಸುಪಾಯಾನ್ವಿತ ನಧಿಕತಮುಂ ತ್ರಿಶಕ್ತಿತಂತ್ರೋದಿತ ವಿಶುತಗುಣಗಣನಿಧಿ ಯವನೀಶತೆಯಂ ತಳೆಕ್ಕಾಳ್ವುದರಿದೆಜಸವಂ ಬಸವಂ .... ॥೩॥

ಚ॥ ವೃ॥ ಬಸವಪದಾಬ್ಜಪಾಂಶುಧರೆಯಂ ಬಸವೇಶನದಿವ್ಯಕೀರ್ತಿಯೇಣ್ದೆಸೆಯಧಿನಾಥರಂ ಬಸವರಾಜನ ಪಾಂಗದಕಾಂತಿಚಂದ್ರಸಾ ॥ ರಸನಖರೋಚಿಯಂ ಪದೆದು ಸೋಂಕಿದ ಮಾತ್ರದಿಪಾವನತ್ವಮುಂ । ಪೊಸಯಿಸಿ ರಂಜಿಸಿರ್ದುದೆನೆ ತನ್ಮಹಿಮಾಬ್ಧಿಯಪೇರ್ಮೆಯೆಂತುಟೋ ॥೪॥

ವ || ಎನಿಸಿ ನೆಗಳ್ತೆವೆತ್ತು ಬಸವಂ ತ್ರಿವಿಧಲಿಂಗಸಪರ್ಯೆಯಿಂ ಸುಖ ವಿರ್ಪನ್ನವಾಪುರವರದಲ್ಲಿ ||

ಕಂ|| ಖ್ಯಾತಗುಣರಾಶಿಮೇದರ | ಕೈತೈಯನೆನಿಪ್ಪ ಶರಣನೊಪ್ಪಿರೆ ಪದಪಿಂ || ದಾತ ನಸುವಂ ಶಿವಂ ಸಂ | ಪ್ರೀತಿಯಿಮೊಡಗೂಡಿಕೊಂಡ ನಂದೊಂದುದಿನಂ || ||೫||

ವ|| ಆಗಳಾಪೊಳಲಭಕ್ತಗಣಂಬೆರಸು ವೃಷಭೇಂದ್ರ ನೇಳ್ತಂದು ಸರ್ವಮಾಹೇಶ್ವರರ್ನೆರದೊಡ್ಡೋಲಗಂ ಗೊಟ್ಟು ತತವಿತತಘನಸುಷಿರವಾದ್ಯ ಧ್ವನಿವಿಜೃಂಭಿಸೆ ಪುಷ್ಪಾಂಜಲಿಗಳೊಡನೆ ಘೋರವಂಗೊಡುತ್ತಂ ಶಿವಸಂಕೀರ್ತನಂಗಳಂ ಪಾಡುತಾಡುತಂ ಬಿನದಂ ಬೆತ್ತಿಪ್ಪರ್ದಂಕಂಡು ತತ್ಸಭೆಗೆ ಸಾಷ್ಟಾಂಗ ಮೆರಗಿ ತದನುಜ್ಞೆಯಿಂ ಕುಳ್ಳಿರ್ದು ಶರಣಂ ಹರಣಂಗಳೆದನೆಂದು ಮನಂನೊಂದು ಮರುಗುತನಿತರೊಳ್ತನ್ನಭಾಷೆಯುಂ ನೆನೆದುನೇಹಂಮಿಗೆ ನಿಜಪ್ರಾಣಮನಾಕ್ಷಣದೊಳ್ವಿಸರ್ಜಿಸೆ ಗಣನಿವಹಮದಂಕಂಡು ಕೌತುಕಂಗೊಂಡು ಪಡಿಯರಬಾಚಿದೇವನಂ ಮಾಚಿದೇವನಡಿಗಳಿರ್ದೆಡೆಗೀಕಜ್ಜಮೆಲ್ಲಮುಂಬಿನ್ನವಿಪುದೆಂದು ಬೆಸಸಿ ಕಳುಪಲೊಡನೆ ||

ಕಂ|| ಕಡುವೇಗದಿನೇಳ್ತಂದಾ|| ಪಡಿಯರ ನಾಮಾಚಿದೇವ ನಡಿದ ಳಿರೊಳ್ಸೈ || ಗೆಡೆದೇಳ್ದುಮುಗಿದಕೈನೊಸ | ಲೆಡೆಯೊಳ್ನಿಲಿ ದೇವಕೇಳ್ವುದೆಂದಿಂತೆಂದಂ || ||೬||

ಉ || ವೃ || ಮೇದರಕೇತಿದೇವನಸುಲಿಂಗದೊಳೊಂದೆವೃಷೇಂದ್ರನಂದು ತಾ ||ನೋದಿದಗೀತಮುಂ ನೆನೆದುಪಾವನೆಪಾರಿಭವತ್ಪತಾಬ್ಜಮುಂ || ಸಾದರಮೆಯ್ದೆ ಜಾನಿಸುತೆನೋಳ್ಪರೊಳದ್ಭುತಮುಣ್ಮೆ ಸತ್ಯರ | ತ್ನೋದಧಿ ತನ್ನಜೀವನಮನಾಗಳೆಬಿಟ್ಟನದೇನನೆಂದಪಂ || ||೭||

ವ || ಅಗಳಲ್ಲಿ ಸಕಲಗುಣನಿಧಿಯೆನಿಪ ಸಕಳೇಶಮಾದರಸಯ್ಯನುಂ, ಜಗನ್ನುತ ಮಹಿಮನೆನಿಪ ಜಗದೇವೈಯನುಂ, ಕಲಿಕಲುಷಹರನಾದ ಕಲಿಕೇತದೇವನುಂ, ತ್ರಿಲಿಂಗಾರಾಧಕನಾದ ತೆಲುಂಗಜೊಮ್ಮೈಯ್ಯನುಂ, ಶಂಕರನಂಕತಾರನೆನಿಪ ಶಂಕರೈಯ್ಯನುಂ, ಬಲವದಾಚಾರಚತುರನಾದ ಬಾಚಿರಾಜಯ್ಯನುಂ. ಕಲಿಕ್ಲೇಶನಾಶಕನೆನಿಪಕೇಶಿ ರಾಜಯ್ಯನುಂ. ದಾಸೋಹಂಭಾವಮುಳವಟ್ಟ ದಾಸಿಮಯ್ಯನುಂ, ಕರಿಮೆರೆಯುಳಿದಮೋರನವೇಮಯ್ಯನುಂ, ಗಣದಾಸಭಾವೋದ್ದಾಮನೆನಿಪ ಗಣದಾಸಿಭೀಮೈಯನುಂ,

ಸುರವಿನುತಚರಿತ್ರನಾದ ಸುರಗಿಚೌಡಯ್ಯನುಂ, ಸಲ್ಲೀಲಶಾಲಿಯೆನಿಪ ಕಲ್ಲಿದೇವನುಂ, ಪಾಶಹರಣಪರಿಣತನಪ್ಪ ಕಾಶಿನಾಥನುಂ, ಮಂನಣೆಯುಮಂ ಮೆಪೆತ್ತ ಕಿನ್ನರಬೊಂಮ್ಮಯ್ಯನುಂ,ಧರಾತಳದಯಾಪರನಾದದಸರಯ್ಯನುಂ, ಭರ್ಗಪ್ರಿಯುಚರಿತನಾದ ಗೊಗ್ಗೈಯನುಂ. ಕಾರ್ಕಶರಹಿತಹೃದಯನೆನಿಪ ಕಕ್ಕೈಯ್ಯನುಂ, ಸಲ್ಲಲಿತಪ್ರಭಾಸಂಬಡೆದಲ್ಲಮದೇವನುಂ, ಮಾಧುರ್ಯ್ಯಗುಣಮಹಿತನಾದ ಮಧುವಯ್ಯನು ಮಿವರ್ಮೊದಲಾದ ನಿರುಪಮಸಮುಗ್ರೋದಗ್ರಭಕ್ತಿಜ್ಞಾನವಿರತಿವಿಳಸಿತ ರಾ ಮಹಾನುಭಾವ ರ್ನೆರೆದು ಚರಲಿಂಗ ಮೂರ್ತಿಗಳ್ವೆರಸು ಬಸವನಸುವಂ ವಿಸರ್ಜಿಸೆ ವಿಷಾದಂಬಡುತ್ತಮಿರ್ದೆನ್ನಂ ನಿಮ್ಮಂಘ್ರಿಗಳೆಡೆಗಿದನೆಲ್ಲಮಂ ಬಿಂನವಿಸಿ ತಳ್ವದೊಡಗೊಂಡುಬರ್ಪುದೆಂದು ಕಳುಪಿದರೆಂದವಂನುಡಿಯೆ ಮಾಚಿದೇವಂಕೇಳ್ದು ಮಯ್ಯುರ್ವಿಪೊಂಪುಳಿಪ್ರೋಗಿ ಸಂಭ್ರಮಂನಿರೀಕ್ಷಿಸಿ ||

ಕಂ|| ಎಂತೆಂದುಮುಗುಳ್ದಿದೋರ್ಮೆನಿ | ತಾಂತಂಪೇಳ್ಪೀಳಿಸೈಕ್ಯನಸುವಿನೊಳಸುವಂ || ತಾಂತಳ್ವದೆಚೆರಸಿದನೆ ಮ | ಹಾಂತಂ ವೃಷಭೇಂದ್ರನನುಮ ಶುಭಗಣಸಾಂದ್ರಂ || .... ||೮||

ಕಂ||ಪೊಡವಿಯೊಳಿ ನ್ನೆಡನಮಾಯಿಯ|ತೊಡಂಕನೆಪಹರಿಸಿತನ್ನಭಾಷೆಯುಭಲನುಂ || ನುಡಿದಂತೆನಡೆದು ತೋರಿದ | ನಡೆಯುಡುಗದೆ ಭಕ್ತಿಭಾಮಿನೀಮುಖಮುಕುರಂ || .... ||೯||

ಕಂ|| ಪಡುಗಡಲೊಳರ್ಕನುದಯಿಸಿ | ದೊಡ ಮಂಬುಧಿಮೇರೆದಪ್ಪಿದೊಡ ಮುಮರನಗಂ || ನಡೆಗೊಂಡೊಡ ಮಾಕಾಶಂ | ಕೆಡದೊಡಮೇಂ ಬಸವಭಾಷೆತೊದಳಾಪುದೆ || .... ||೧೦||

ಕಂ|| ಶರಣನಸುಪ್ರೋಗೆ ತಂನಯ | ನಿರುಪಮ ಶಪಥಕ್ರಮೋಕ್ತಿಯುಂನೆನೆದಿಳಿಗ || ಚ್ಚರಿಯೊದನೆ ನಿಜಪ್ರಾಣಮ | ನಿರದಿತ್ತಂ ಬಸವನೆಂದೊಡೇಂಪಂಣೆಪುದೋ || .... ||೧೧||

ವ|| ಎಂದು ಮಾಚಿದೇವಂ ಪಲವಂದದಿಂ ನಲಿದು ಕೊಂಡಾಡುತ್ತಂ ಗಣಸಭೆಗೇಳ್ತಂದು ಸಡಗರಂಮಿಗೆ ಭಕ್ತಿಯಿಂ ಪೊಡಮುಡಲೊಡನಲ್ಲಿ ಶರಣಗಣಂ ಕಂಡು ಸತ್ಕರಿಸಿ ಬಂನಿಮೆಂದಾತನಂ ಕೈವಿಡಿದು ಮೂರ್ತಿಗೊಳಿಸಿ||

ಉ|| ವೃ|| ನೋಡಿರೆ ಮಾಚಿದೇವಬಸವೇಶನ ಭಕ್ತಿಯದೊಂದುಪೇ

ರ್ಣಯಂ । ಪಾಡಿದತಂನ ಗೀತದಳವಂ ನೆನೆದಿಂ ತಸುವಿಟ್ಟು ಭಕ್ತನಂ ॥ ನಾಡೆ ನಿರೀಕ್ಷಿಸುತ್ತೊಡನೆ ತಂನಸುವಂ ಸಲಿಸಿರ್ದನದ್ಭುತಂ । ಮೂಡೆ ಧರಿತ್ರಿಗೀಬಸವನೀತನ ಬಂಣಿಸಲಾರ್ಗೆಗೋಚರಂ ॥ ॥೧೨॥

ಕಂ॥ ಖಂಡಶಶಿಮೌಳಿ ಭಕ್ತನ । ಕೊಂಡೊಯ್ದಡೆ ಬಸವನಂತಿರಸುವಿತ್ತವರಂ ॥ ಕಂಡರೊಳಂಕೇಳ್ದರೊಳಂ । ಕಂಡರಿಯೆವು ಕೇಳ್ದುಮರಿಯೆವೀಭೂತಳದೊಳ್ ॥ .... ॥೧೩॥

ಕಂ॥ ವಿದಿತಪವನಾಂಗ ಜಂಗಮ । ಕಿದುಯುಕ್ತಂ ಪ್ರಾಣಮಾರುತಾರ್ಪಣಮೆನುತಂ ॥ ಪದೆದದನರ್ಪಿಪಚಾಣ್ಮಂ । ದುದುಗಡ ಬಸವಂಗೆ ನೋಳ್ಪೊಡೀವಸುಮತಿಯೊಳ್ ॥ .... ॥೧೪॥

ವ॥ ಎಂದುಶರಣಸಮುದಯಂ ಬಸವನೇಳ್ಗೆಯಂ ಕೀರ್ತಿಸುತ್ತಮಿರ್ಪಿನಮಲ್ಲಿ ಮತ್ತೆ ಕೆಲಂಬರ್ಭಕ್ತರಳಲ್ದುಮರುಗಿ

ಉ ವೃ॥ ಜಂಗಮಲಿಂಗಸಂ ಕಲಿತಭಕ್ತಿಪರಾಯಣ ಜಂಗಮಕ್ರಿಯಾಸಂಗತ ಜಂಗಮಪ್ರಕರ ಪಾವನಪಾದಸರೋರುಹೋಲ್ಲಸ ॥ ದ್ಭಂಗ ಸಮಸ್ತ ಜಂಗಮ ಸಮರ್ಚನಲೋಲುಪ ಜಂಗಮಾಳಿಸಂ । ಸಂಗತ ಜೀವಜಂಗಮಸುರದ್ರುಮಪೋಪುದೇ ನೀಂವೃಷಾಧಿಪ .... ॥೧೫॥

ಕಂ॥ ಕಲ್ಯಾಣಮೂರ್ತಿನೀನಿರೆ । ಕಲ್ಯಾಣಮಿದೆನಿಪುದಲ್ತೆ ಮಿಸುಪೀನಗರಂ । ಕಲ್ಯಾಣಮಲ್ಲದಿರ್ದೊಡೆ । ಕಲ್ಯಾಣಂತಾ ನೆನಿಪ್ಪುದೀಭೂತಳದೊಳ್ .... ॥೧೬॥

ಕಂ॥ ಜ್ಞಾನಾಭಿವೃದ್ಧಿ ಭಕ್ತಿವಿಧಾನಂ ಶಿವಧರ್ಮಸಂಪದಂ ಶಿವಚರಣಧ್ಯಾನರತಿ ಯೆಂಬಿವೆಲ್ಲಂ ನೀನಿಲ್ಲದೊಡೊಳವೆ ಪೇಳ್ಗಣಾರ್ಣವಚಂದ್ರ ॥೧೭॥

ಕಂ॥ ನೀನುಳ್ಳೊಡುಂಟು ಶರಣಜನಾನಂದಂ ತ್ರಿವಿಧಲಿಂಗಚರಣಾಂಭೋಜಾನೂನ ಪರಿಪೂಜನಾರತಿಮಾನಿತಶುಭವೃತ್ತಿ ಮಾನ್ಯಜನಮಂದಾರ ।

ವೃ॥ ಮಾಮರನಿಲ್ಲದಾರವೆ ಮಹೀವರನಿಲ್ಲದಭೂರಿರಾಜ್ಯ ಮುದ್ದಾಮಶಶಾಂಕನಿಲ್ಲದಿರು ಳುತ್ಪಲಮಿಲ್ಲದ ವಾರಿಜಾಕರಂ ॥ ತಾಮರಸಾಪ್ತನಿಲ್ಲದ ಪಗಲ್ನಯಮಿಲ್ಲದಬಾಳ್ಕೆ ದಿವ್ಯಸೌದಾಮಿನಿ ಯಿಲ್ಲದಿರ್ಪಮುಗಿಲಂ ಬಕಮಿಲ್ಲದ ಮಾನವಾನನಂ ॥ .... ॥೧೮॥

ಕಂ॥ ಶ್ರುತಿಇಲ್ಲದಪಾರ್ವಂ ಸನ್ಮತಿಯಿಲ್ಲದಮಂತ್ರಿ ಸತ್ಯಮಿಲ್ಲದತಪಮುಂನತಿ ಕವಿತೆಯಿಲ್ಲದವಿದಗ್ಧತೆ ಬಸವಾಧೀಶನಿಲ್ಲದಿಳೆ ಸೊಗಯಿಕುಮೆ ॥

ಕಂ|| ದಿನಮಣಿಯಿಲ್ಲದೊಡಂಬುಜ ವನಮುಲರ್ವುದೆ ಚಂದ್ರನಿಲ್ಲದೊ ಡೆಕುಮುದಕ್ಕಂ || ಸನೆಕೊನೆಪೋವುದೆಶರಣ | ರ್ಗ್ಗನಿತಾಂತಂ ಬಸವನಿಲ್ಲ ದೊಡೆಮುದಮೊಳವೆ .... ||೨೧||

ವೃ|| ಶರಣಲಲಾಮ ಸತ್ಯಗುಣಧಾಮ ಪವಿತ್ರಚರಿತ್ರಸಜ್ಜನಾಂ ಬು ರುಹ ದಿನೇಶಭಕ್ತಿನಿಧಿಕೋಶ ಕೃತಾಂತಲತಾಂತಬಾಣ ಸಹ್ಮರ ನವತಾರ ನಿರ್ಜಿತವಿಕಾರ ನಿಜಾಂಗಭುಜಂಗಭೂಷಭಾ | ಸುರಮತವಾರ್ಧಿಚಂದ್ರ ವೃಷಭೇಂದ್ರಭವಾಂಬುಧಿಕುಂಭಸಂಭವಾ ||೨೨||

ಕಂ|| ಧಾರುಣಿಯೊಳ್ಜಂಗಮತತಿ | ಯಾರಂಬೇಡುಗು ಮದಾರನಾ ಶ್ರೈ್ರಸುಗು ಮಿಂ || ನಾರಂಕಾಡುಗು ಮಾರೊಡ | ನೋರಂತೆವಿನೋದಕೇ ಳಿಯಂ ನಟಯಿಸುಗುಂ ||೨೩||

ಕಂ|| ಇನ್ನೆಲ್ಲಿಯ ದಕಟೊಮುಯ | ಹೃಂನಳಿನ ವಿಕಾಸದೇಳ್ಗೆ ವಡೆ ದ್ವೈಸಿರಿಮೇ || ಣಿಂಸೆಲ್ಲಿಯುದಭಿಮತ ಸುಖ |ಮಿನ್ನೆಲ್ಲಿಯದೋವ್ರೊಬಸವನೀಂ ಪೋದುದರಿಂ .... ||೨೪||

ಮ|| ಸ್ರ || ಹರಪಾದಾಂಬುಜದಲ್ಲಿಚಿತ್ತಮ ಸುದಂಚತ್ಕೀರ್ತಿಯಂ ದಿಕ್ಸಮ | ತ್ಕರದೊಳ್ಚಂನಸ್ವಪಾಂಕ ನೊಳ್ವಿಮಳಸಂಮ್ಯಜ್ಞಾನಮಂ ಪ್ರಾ ಣಮಂ || ಚರರೂಪಾನ್ವಿತಕೇತಿದೇವನೊಳೆ ನೀನಿಟ್ಟಂತೆ ನಿಂನತ್ಯದಾ | ರ ರಸಶ್ರೀಯ ನದಾರೊಳಿಟ್ಟು ತಳರ್ದೈಪೇಳ್ಭಕ್ತಚೂಡಾಮಣಿ ||೨೫||

ವ|| ಎಂದಿಂತು ಭಕ್ತತತಿಪಲವಂದದಿಂಪಲುಂಬಿ ಪಳಯಿಸುತ್ತಮಿರೆ ಮಾಚಿದೇವಂಮಾಣಿಸಿ

ಕಂ|| ಪ್ರಮಥತತಿ ರುದ್ರಸಮುದಯ | ಮುಮೆ ಯಂಮಪುರಾತನ ರ್ಕ್ಳಿರಿಯುದ ತೆರದಿಂ || ಹಿಮಕರಧರ ನೀಭಕ್ತೋ | ತ್ತಮ ರಸುವಂತಂ ನೊಳಿಪ್ಪೊಡಾಂ ಸ್ಥೈರಿಪೆನೆ .... ||೨೬||

ವ|| ಎಂದು ತ್ಕಟಿಸಿನಿಂದು ಭೂಭಾಗಭಾಳನೇತ್ರಂವಿಜೃಂಭಿಸಿ

ಕಂ|| ಶರಣಪ್ರಾಣಪ್ರಿತ ಭಾ | ಸುರಬಸವಂಶರಣನಳಿಯೆ ಹರಣಮ ನಿತ್ತು || ರ್ಪ್ಪರೆಯರಿಯೆ ವಿಜಯನಾದಂ | ಹರಸಿವರಂನುಂಗಿ ಪೊಲ್ಲದೆ ಸಗಿದನಲ್ತೆ .... ||೨೭||

ವ|| ಎಂದು ಮತ್ತಮಿರದೆ

ಚಂ|| ವೃ|| ಚರಚರಣಾಬ್ಜಪೂಜನ ಪರಾಯಣ ಭಕ್ತರಸಿಂತಕಾಲ

ದೊಳ್ | ಪುರಹರನೀಂ ವಿಚಾರಿಸದೆ ನಿಂನೊಳಡಂಗಿಸಿಕೊಳ್ವುದೇಂ ಸದಾ ||
ಚರಣಮೆ ಚೆಚ್ಚರಂಕೊಡು ಕೊಡೀಗಳೆ ತಳ್ವದೆ ಕೇತಿದೇವನಾ | ಹರಣಮ
ನೆಯ್ದುಗುಂ ಬಸವಜೀವನನೊಲ್ದದರೊಂದುಗೂಡುತಂ ||೨೮||

ವ|| ಎಂದುಪಂನತಿಕೆಯುಂನುಡಿದು

ಕಂ|| ಮೃಡಭಕ್ತರಸುವ ನಭವಂ | ಕೊಡದೀಗಳ್ತಳ್ವಗೆಯ್ದನಾಂ
ಸ್ವೈರಿಪನ || ಲ್ತೆಡೆಯುಡುಗದೆ ಡಂಗುರಮಂ | ಪೊಡೆದಪೆನೆಂದಾರ್ದು ಶರ
ಣನುದ್ಘೋಷಿಸಿದಂ ... ||೨೯||

ವ|| ಅಂತುಘೋಷಿಸಿ

ಚಂ|| ವೃ|| ಅದಿರೆ ನಭಸ್ಥಳಂಕೆದರೆ ತಾರಗೆತುಳ್ಕೆ ಪಯೋಧಿಬಳ್ಕೆ
ಪಂ | ಪೊದವಿದಹೀಂದ್ರನಿಂದ್ರಮುಖದಿಗ್ವರರಳ್ಕೆ ವಿರಿಂಚಿವಿಷ್ಣುಗ || ಳ್ಬೆ
ದರೆ ಗಣೇಂದ್ರರದ್ಭುತರಸಾಸ್ಪದರಾಗೆ ಮೃದುಸ್ಮಿತಾಮೃತಂ | ಪೊದಳೆಕ
ಡಂಗುತಣ್ಮೆ ಪೊಡೆದಂ ಮಿಗೆಡಂಗುರಮಂಗಣಾಧಿಪಂ ||೩೦||

ಕಂ|| ತ್ಯ್ರಕ್ಷನಸಭೆ ಗಜಿಬಜಿಸಿದು | ದಾಕ್ಷಣ ಮಾಪ್ರಮಥರುದ್ರ
ಗಣಮುತ್ಸವಿಸಿ || ತ್ತಕ್ಷಯಮುಹಿಮನ ಶೌರ್ಯಮ | ನೀಕ್ಷಿಸಿ ಪೊಸತೆಂದು
ಪೊಗಳ್ದರಘಹರಭಕ್ತರ್ .... ||೩೧||

ಉ|| ವೃ|| ಸಂಬಿಯ ನಂಬಿಕಾರಮಣನಂಮೆರೆಮಿಂಡನ ದೋರ್ಮ
ದಭ್ರಭ | ಕ್ತಾಂಬರನಿಪ್ಪುಗಾಧರರ ನಂದುಹಲಾಯುಧನೋರ್ಮೆ ಗಾಢ
ಶಾ || ರ್ಯಂಬಡೆದೆಂಮುವರ್ಗೆ ಪೊರಗೆಂದೆನುತಂ ಜಡಿದಾರ್ದುಪೊಯ್ದನಾ |
ಡಂಬರಮೊಪ್ಪಿ ಡಂಗುರಮ ನಿಂದಿಳೆಸ್ವೈರಗಾಗೆಮಾಚಯುಂ ||೩೨||

ಕಂ|| ಪೊಡೆದಂ ಡಂಗುರಮನಿಮಂ | ಮೃಡಂಗೆನುತ್ತಲ್ಲಿ ಶರಣತತಿ
ಕೊಂಡಾಡು || ತ್ತೊಡನೊಪ್ಪಿರೆ ಕೈಲಾಸದೊ | ಳೆಡೆವಿಡದಾಪ್ರಮಥರಭವ
ನೊಡನಿಂತೆಂದರ್ .... ||೩೩||

ಚ || ವೃ || ಕೊಡುಕೊಡುಬೇಗಮಿಾಗಳೆಲೆದೇವ ವೃಷೇಂದ್ರನಕೇತಿ
ದೇವನು | ಗ್ಗಡದಸುವಂ ಕಡಂಗಿಕೊಡದಿರ್ದೊಡೆ ಸ್ವೈರಿಪನಲ್ತುಮಿಕ್ಕುತ
ಕ್ಕಡರ್ದು ಮಹಾಬಳಂ ಪ್ರಮಥರಾಕಲಿದೇವನ ಭದ್ರಸಿಂಧುರಂ | ಪೊಡವಿ
ಯರುದ್ರಮೂರ್ತಿ ಭವದೀಯಮತಾಂಬುಜ ಭಾನುಮಾಚಯುಂ ||೩೪||

ಕಂ|| ಅಲ್ಲಿಯಭಕ್ತಾಳಿಗೆ ಮೇ | ಣಲ್ಲಿಯಶರಣರ್ಗೆ ದೇವಪೊರಗಾ

ಗಿರಿವು ‖ ತ್ರಿಲ್ಲಿಯುದೊ ನಿನಗೆಪೊಗಲಿಡೆ । ಯಲ್ಲಿಯುದತಿಮುಹಿಮೆ ಬೇಗೆ ಕಳುಪಿವರಸುವಂ ‖ .... ‖೩೫‖

ಕಂ‖ ಛಳವಿಲ್ಲದ ಕೊಳಸಿಲ್ಲದ । ಜಳಸಿಲ್ಲದ ಬಸವಸಿಲ್ಲದ ಗವುಂ ಬನಮುಂ ‖ ವಿಳಸಿತ ತಟಾಕಮುಂಭೂ । ವಳೆಯುಮುಮೇಂದೇವಪೇಳ್ಮ ನಂಗೊಳಿಸುಗುಮೆ .... ‖೩೬‖

ಕಂ‖ ರವಿರುಚಿಯಿಂ ಶಶಿಕರದಿಂ । ಭುವನಜಮುಂ ಕುಮುದಮುಂ ಪೊವಳ್ದಲರ್ವೊಲು ‖ ತ್ಸವಮೆಸೆವ ಭಕ್ತಿಯುಲರ್ವುದು । ಕುವಲಯ ಸಖಿ ಮೌಳಿ ಬಸವನಿಂ ಭೂತಳದೊಳ್ .... ‖೩೭‖

ಕಂ‖ ಶಿತಿಕಂಠನಿಂಮುಜಂಗಮು । ತತಿಗೀಪ್ಸಿತ್ರವಸ್ತುವಿತ್ತು ಪೂಜಿಪ ದಾಸ್ಸರಂ ‖ ಸುತಬಸವನಿಲ್ಲದಿರೆವಸು । ಮತಿಯೊಳ್ಸರ್ವಜ್ಞದೇವ ನೀನ ರಿಯುದುದೆ .... ‖೩೮‖

ಕಂ‖ ಪುರಹರಕಳುಪೀಗಳೆ ಮೇ । ದರಕೇತಯ್ಯಂಗಳೊಡನೆ ಬಸವ ನನಬಿಳೋ ‖ ವರೆಯೊಳ್ಭಕ್ತಿಯುಸೊಬಗಂ । ಪರಪೂರ್ಣಂಗೆಯ್ವುದೆಂದ ವರ್ನುಡಿಯಲೊಡಂ ‖೩೯‖

ಉ‖ ವೃ‖ ಆಲಿಸಿತಂಕರಂ ನಗುತೆ ಶತ್ರುಮಥಕ್ಕಳಮುಂದೆ ನಣ್ಪಿನಿಂ । ಲಾಲಿಸುತಂ ವೃಷಾಧಿಪನ ಮೇದರಕೇತಯನಂ ಕಡಂಗಿಸ ‖ ಲ್ಲೀಲೆಯೊಳೆಯ್ದಿರಿನ್ನಿಳೆಗೆನೀಮೆನೆ ಕೇಳ್ದುಬಿಗುರ್ತುಭಕ್ತಿಯಿಂ । ಶೂಲಿಗನಾಗ ಣಾವಳಿಗೆ ವಂದಿಸಿಕೈಮುಗಿಯುತ್ತೆ ಸಾದರಂ .... ‖೪೦‖

ಚಂ‖ ಗಣತತಿಬಿಂನಪಂ ಮಹಿಯುಭೋಗಮನೆಲ್ಲಮ ನೊಲ್ದುಬಲ್ಲಿವಾ । ವಣೆಯುರ ಮಲ್ಲಿಗೆಯ್ದಿವು ಭವತ್ಪದಪದ್ಮದಗಲ್ಕೆಗಾರೆವೆಂ ‖ ದೆಣೆವಡೆದೀರ್ವರುಂನುಡಿಯೆ ಕೇಳ್ದುಪುರಾಂತಕನೆಂದನಾ ಗಣಾ । ಗ್ರಣಿಯೆನಿಸಿರ್ದ ತದ್ವೃಷವಸಾನನಮಂ ನಡೆನೋಡಿನಣ್ಪಿನಿಂ ‖೪೧‖

ಕಂ‖ ದಾಸೋಹಂಭಾವಮನುಳಿ । ದಾಸೋಹಂಭಾವದೆಡೆಗೆಮನ ಮಿಕ್ಕದೆ ನೀಂ ‖ ಲೇಸನೊಡರ಼್ಿದೆ ಛಲರೆವು । ಹಾಸಾಹಸಿ ಬಸವಭಕ್ತಿ ಯಿಂತಿರವೇಡಾ . .... ‖೪೨‖

ಕಂ‖ ವಿಪುಳಗುರುಲಿಂಗಜಂಗಮ । ಸಪರ್ಯೆಯಿಂ ತೋರಿಬೀರಿಭ ಕ್ತಿಯನೆಲ್ಲಾ ‖ ರ್ಗುಪದೇಶಿಸಿ ಬರ್ಪದನುಳಿ । ದುಪಾಯದಿಂದಿತ್ತಲಿರ್ಪೆ ನೆಂಬುದು ಮತವೆ .... ‖೪೩‖

ವ|| ಅಂತುಮಲ್ಲದೆಯುಂ

ಚಂ|| ವೃ|| ಅಳಿಮಕರಂದಮಂ ಮುಗಿಲಸತ್ಪಥಮಂ ಪೊಸಮಾವು ಚೈತ್ರಂ | ಜಳರುಹಮರ್ಕನಂ ಕುವಲಯಂಶಶಿಯಂ ನವಿಲಂಬುವಾಹಮಂ|| ಬೆಳೆಘನವೃಷ್ಟಿಯಂ ಬಯಸುವಂತೆ ಧರಿತ್ರಿಯೊಳಿನ್ನಭಕ್ತಸಂ | ಕುಳಮೊಲಿ ನಿನ್ನನೇಬಯಸುತಿರ್ದಪುದಲ್ತೆ ವೃಷಾಧಿನಾಯಕಾ ||೪೪||

ಕಂ|| ಈಲೋಕಮು ಮಾಲೋಕಮು | ಮಾಲೋಕಿಪೊಡೊಂದೆ ಬ ಸವಮದ್ಭಕ್ತಿಯುತ || ಗಾಲಾಪಿಪುದೇಂ ಭೇದಕ | ಥಾಲಪಮುಂ ತೋ ರದೆಂದು ಮೆನಗಂನಿನಗಂ .... ||೪೫||

ಉ|| ವೃ|| ಎನ್ನನಿರೂಪಮಂ ತಳೆದುಪೋದೆಗೆಡಂದು ವೃಷೇಂದ್ರಭೂ ತಳ | ಕ್ಕಿನ್ನುಮೊರಲ್ದು ಪೋಗಿಗುರುಲಿಂಗಚರೋತ್ತಮ ಭಕ್ತಿಯಂದಮಂ|| ಚೆನ್ನಲರ್ವಂತೆನೀಂ ಪಸರಿಸುತ್ತಿಳೆಯೊಳ್ ಬಗೆದಿಲ್ಲಿಗೆಯ್ದೆ ನು | ತ್ತ ನ್ನಗಜಾ ಧಿಪಂ ಬೆಸಸೆ ತತ್ಪದಕೊಲ್ದಿರಗುತ್ತೆಭಕ್ತಿಯಿಂ ||೪೬||

ಕಂ|| ಪ್ರಮಥಗಣ ಪದಸರೋಜ | ಕ್ಕಮರ್ದೆರಗುತ್ತೊಲ್ದು ಕೇತಿ ದೇವಸಮೇತಂ || ವಿಮಳಮತಿ ತನ್ನಿರೂಪ | ಕ್ರಮಮಂ ಪಡೆದಿಳೆಗೆ ಬಸವ ರಾಜಂಬಂದಂ .... ||೪೭||

ವ|| ಅಂತುಕೇತಿದೇವಸಮೇತಂ ಕಲ್ಯಾಣಕಟಕಕ್ಕೇಳ್ತಂದು ಚೈತ ನ್ಯಂಬಡೆದೇಳ್ವ ಶರಣಗಣದೊಡನೊಡ್ಡೋಲಗಂಗೊಟ್ಟಿರ್ದ ಮಾಚಿದೇವಂಗ ಣಸಭೆಗಂ ಸಾಷ್ಟಾಂಗಮೆರಗಿದಾಗಳ್ಮಾಚಿದೇವನು ತ್ಸವಿಸುತೇಳ್ದು ತಾನು ಮಾಗಣಸಭೆಗೆ ಸಾಷ್ಟಾಂಪ್ರಣಾಮಂಗೆಯ್ದು ಕರಾರವಿಂದಂಗಳಂಮುಗಿದು

ಕಂ|| ಬಂದಂನಿಮ್ಮಡಿಯೊಲ್ಮೆಯು | ಕಂದಂ ನಿಜಭಕ್ತಿಮಲ್ಲಿಕಾಪೇ ಕ್ಷಿತಮಾ || ಕಂದಂ ಶಿವಗಣವಿತತಾ | ನಂದಂ ಬಸವಂಶಿವಾಂಘ್ರಿನಳಿನ ಮರಂದಂ .... ||೪೮||

ಕಂ|| ಶರಣವರೇಣ್ಯರೆ ನಿಮ್ಮಯ | ಚರಣಾಂಬುಜ ಭೃತ್ಯರೀರ್ವರುಂ ಬಂದರಿವಂ || ದಿರಕರದಿಂ ಸೇವೆಯನಾ | ದರದಿಂಕೈಕೊಂಡು ಸುಖದಿನಿನ್ನಿ ರವೇಳ್ಕುಂ .... ||೪೯||

ಕಂ|| ಭವದೀಯಕೃಪಾಶರಧಿಯೊ | ಳವಗಾಹಂಗೈಯುತ್ತಿವರ ನೆನ ಗೊಳ್ಪಿಂದೊ || ಪ್ಪುವ ನಿಮ್ಮಸುಪ್ರಸಾದವ | ನವಿರತವಿಮಾಯುತ್ತೆ ಕೂರ್ತು ಪೊರೆಯಲ್ವೇಳ್ಕುಂ ... ||೫೦||

ವ|| ಎಂದುಮುಗುಳ್ದಂ ಮಾಚಿದೇವಂ ಸಾಷ್ಟಾಂಗವೆರಗೆ ಭಕ್ತತತಿಯುಂ ಜಂಗಮನಿಕರಮುಮಾಸಂದಂಮಿಗೆ ತೆಗೆದು ಬಿಗಿಯಪ್ಪಿ ಮನ್ನಿಸಿ

ಚಂ|| ವೃ|| ಅರರೆ ಗಣಾಗ್ರಗಣ್ಯ ಭವದೀಯಮಹತ್ವಮನಿಂತುಟೆಂದುಬಿ | ತ್ತರಿಸಲದಾರ್ಗೆಗೋಚರಿಪುದೀ ನರರುಂಸುರರುಂ ಭಯಾರ್ತಿವ ||
ಟ್ಟರೆ ಧರೆಯುಂನಭಸ್ಥಳಮು ಮದ್ಭುತಕಂಪಮನಾಳೆ ಪೊಯ್ದಿಡಂ | ಗುರ
ುನನಂಗಮರ್ದನನಮೇಲೆ ಮಹೀತಳ ಭಾಳಲೋಚನ ||೫೧||

ಕಂ|| ಮದಕರಿಯಕರದಕಬ್ಬಂ | ಪದಪಿಂಸೆಳೆವಂತೆ ಸೆಳೆದೆ ಹರನೊಳಕೊಂಡ || ಗ್ಗದ ಶರಣರಸುವನಸವಸ | ಮುದಿತಪ್ರಬಳಪ್ರತಾಪಮಹಿಮಾಭರಣಾ .... ||೫೨||

ಕಂ|| ಮೂದಲಿಸಿ ಹರನನಧಟಿಂ | ನಾದಂ ಬೊಯ್ದುಳಿದಭಕ್ತರಸುವಂ ಪಡೆದ್ಯೆ || ಮೇದಿನಿಯೊಳಮನುಘನಮಹಿ | ಮೋದಧಿ ನಿನ್ನಳವನಾರೊಬಣ್ಣಿಸಲಾರ್ಪರ್ || .... ||೫೩||

ಕಂ|| ಆಲೋಕದೊಳೀಲೋಕದೊ | ಳಾಲೋಕಿಪುಡರರೆ ನೀನೆಪೆಸರ್ವೆತ್ತೈ ಸ || ಲ್ವಾಲಾಪಬಸವನಸುವಂ | ಲೀಲೆಯಿನೀತೆರದಿ ಸೆಳೆದುತಂದಿತ್ತುದರಿಂ || .... ||೫೪||

ಕಂ|| ಚರಲಿಂಗಕೆ ಹರಣಂಬಸ | ವರಸಂ ಬಸವಂಗ ಮೆಮಗೆ ಮಸುನೀಂಗಡ ಮಾ || ಚರಸಾರ್ಯಭಕ್ತವದನಾಂ || ಬುರುಹಾ ಬಳಸೂರ್ಯಸೂರಿಜನನುತಶೌರ್ಯ || .... ||೫೫||

ಉ|| ವೃ|| ಎಂದಭಿವಂದಿಸುತ್ತೆ ಗಣಸಂತತಿ ಸಂಭ್ರಮಮಾಳ್ದನೇತ್ರದಾ | ನಂದಜಲಂಪೊಸಲ್ವರಿಯೆ ಕೀರ್ತಿಸುತೊಪ್ಪಿರೆ ತದ್ಗಣಾಳಿ ಗೋ ||
ರಂದದೆಮಾಚಿದೇವನೆರಗುತ್ತತಿಭಕ್ತಿಯೊಳಲ್ಲಿ ತತ್ಕೃಪಾ | ಮಂದಸುಧಾತರಂಗಿಣಿ ಯೊಳಾಳ್ದಿಡನೊಪ್ಪಿದನುತ್ಸವಾನ್ವಿತಂ || ||೫೬||

ಮ || ಸ್ರ || ಗಣಸಂದೋಹಕ್ಕಮಾಮಾಚಯನಚರಣಕಂಜಾತಕಂಭಕ್ತಿಯಿಂದಂ | ಮಣಿಯುತ್ತಂ ಕೀರ್ತಿಸುತ್ತಂ ಪಡೆಯುತವರಕಾರುಣ್ಯಮಂ ಬೀಳ್ಕೊಳುತ್ತಂ || ಪ್ರಣಯಂಕೈಗಣ್ಮೆ ಭಕ್ತಪ್ರತತಿಸಹಿತ ಕೇತಾರ್ಯನೊಳ್ದಿಯ್ದೆಪೊಕ್ಕಂ | ಮಣಿಭಿತ್ತಿದ್ಯೋತಭಾಸ್ವಂ ನಿಜಭವನಮನಾನಂದಸಾಂದ್ರಂವೃಷೇಂದ್ರಂ || .... ||೫೭||

ಲಲಿತಪದವೃತ್ತಂ|| ವಾಸ್ತವಗುಣಾಕರ ನಿರಸ್ತನಿಖಿಲಾಮಯಸರಾ

ಸ್ತಪರವಾದಯುಮಿಶಸ್ತಶಿವಯೋಗಾ । ಭ್ಯಸ್ತನಿಜಭಾವನನವಚಸ್ತುತಮ
ಹಾಗಮಮುಹಸ್ತಿಜಿತಾರ್ಕನಿಗಮಸ್ತವನಿಲೋಲಾ ॥ ಧ್ವಸ್ತಕಲಿಕಲ್ಮಷ
ಸಮಸ್ತಬುಧಸನ್ನುತಾಯಶಸ್ತತದಿಗಂತ ಸುರಮಸ್ತಕಸಮೂಹ ಸ್ವಸ್ತಪದ
ಪಾಲಿಸುನಿರಸ್ತಮಯುಸಾರಗುಣವಿಸ್ತರಲಸದ್ವರದ ಹಸ್ತಬಸವೇಶಾ ॥೫೮॥

ಮಂದಾಕ್ರಾಂತವೃತ್ತ ॥ ಸಾರಾಕಾರೇಸರಸಹೃದಯೇಸರ್ವಲೋಕೈ
ಕಮಾತೇ । ಭೂರಿಶ್ರೀರಾಜಿತಪದಯುಗೇಭ್ರೂಲತಾಜ್ಞಾಪ್ರಭೂತೇ ॥ ಪಾ
ರಾವಾರಪ್ರಭವಲಲನಾರಾಧಿತೇಸತ್ಪುನೀತೇ । ಮಾರಾರಾತಿಪ್ರಿಯೇಪೊರೆ
ಸಮಂತೆನ್ನನದ್ರೀಂದ್ರಜಾತೇ ॥ .... ॥೫೮॥

ಗದ್ಯ॥ ಇದು ವಿನಮದಖಿಳಸು ರಾಸುರೇಂದ್ರ ಮುಕುಟತಟಘಟಿತ
ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ
ಪರಮಶಿವಲಿಂಗ ಪಾದಾರವಿಂದ ಪರಾಗ ಭಸಿತ ಭಾಸುರ
ಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರ ದೇವಭಕ್ತಿವಿರಚಿತ ಶ್ರೀಮದ್ಬಸವರಾಜ
ವಿಜಯ ಮಹಾಪುರಾಣದೊಳ್ ಬಸವಭಕ್ತ
ಪ್ರಾಣಸಖತ್ವಕಥನಂ ಪಂಚವಿಂಶತ್ಯಾ
ಶ್ವಾಸಂ ಪರಿಸಮಾಪ್ತಂ.

ದಸರದೇವಯ್ಯನಕಥೆ

ನಾಂದಿ॥ ಲಲಿತಪದವೃತ್ತಂ॥ ಮಾಪಕೃತರೋಪಗಿರಿಚಾಪಪುರಲೋ
ಪರಜನೀಪಸಕಲಾಪಮತದೀಪನಿಹತಾನ್ಯಾ । ಕ್ಷೇಪಹೃತಪಾಪಜಿತತಾಪ
ಗತಲೇಪತತಚಾಪಲಮದೋಪಯುತಗೋಪರಿಪುನಾಶಾ ॥ ಭೂಪನಿವಹೋ
ಪನತತಾಪಸಭವಾಪಹಸುಲಾಪ ಸುಜನೋಪಕರಣೋಪಹಿತವಿಶ್ವಾ । ವ್ಯಾ
ಪಕದಯಾಪರ ಸುಧೀಪಥದುರಾಪಜಯ ಕೋಪಹೃತ ಭಾಪಸುತರೂಪಬ
ಸವೇಶಾ ॥

ಲಲಿತಪದವೃತ್ತಂ ॥ ಕ್ಷಿಪ್ರಶಮಿತಾಮಯಭವಪ್ರಹರಸರ್ಪಭುವನ
ಪ್ರಥಿತವೈಭವಸುರಪ್ರಭುಮುಕುಂದಾ ॥ ಜಪ್ರಮುಖ ದಾನವರಿಪುಪ್ರಕರ
ವಂದ್ಯಚರಣಪ್ರಕೃತಿವರ್ಜಿತಗುಣಪ್ರಯುತಚ ರ್ಯಾ ॥ ಸುಪ್ರಮಥನಾಯಕ
ಚರಪ್ರಚಯಭಕ್ತಿವನಿತಾಪ್ರಣಯಶೀಲಜಿತಯಪ್ರಕೃತವಾದಾ । ಪ್ತಪ್ರಣ

ವಮಂತ್ರಮನಕಪ್ರಯುತಚರ್ಯಜಯಸುಪ್ರಮದಕ್ಷೈವಮತವಪ್ರಬಸವೇಶಾ॥

ಕಂ॥ ಶ್ರೀಮದುಮಾಕಬರೀಸುಮ । ದಾಮರಜೋರಾಜಿರಂಜಿವಾ
ಮಾಂಶಕನು ॥ ದ್ದಾಮಗುಣಧಾಮನಘಹರ । ನಾಮಂಪೊರೆಗೆಂಮನಾವ
ಗಂಶಿವಲಿಂಗಂ ॥ .... ॥೧॥

ಮ॥ ವೃ॥ ಹರಭಕ್ತಿಪ್ರಮುದಾಮುಷ್ಟೈಕಮುಕುರಂಪಂಚೇಷುದೂ
ರೇಶುಭಾ । ಕರಪುತ್ರಂಗಳಿತೇಷಣಂವಿಗತದೋಷಂವಿಶ್ವನೃತ್ಯಂಕೃಪಾ ॥
ಭರಣಂಭಕ್ತಜನಾಂತರಂಗನನಘಂಗಾಂಭೀರ್ಯವಾರಾಕರಂ । ಪರಿಶುದ್ಧಂವ
ಸರ್ಪೈಯ್ಯನೆಂಬಶರಣಂದಾನಾಮರಕ್ಷ್ಮಾರುಹಂ ॥ ॥೨॥

ಮಲ್ಲಿಕಾಮಾಲಾವೃತಂ ॥ ಸರ್ವಜೀವದಯಾಪರಂ ಸಕಳಪ್ರಪಂಚ
ವಿವರ್ಜಿತಂ । ನಿರ್ವಿಕಾರನನಾಮಯಂ ನಿಗಮಾಗಮಾರ್ಥವಿಶಾರದಂ॥ ಗರ್ವ
ದೂರನನಂಚಕಂ ಜಿತಪಾಶನಾತ್ಮಯುತೋಜಿತಾ । ಖರ್ವಪಾರ್ವಣಚಂದ್ರಿ
ಕಂ ಚರಲಿಂಗಭಕ್ತಿಪರಾಯಣಂ ॥ .... ॥೩॥

ಕಂ॥ ಘನಸಚ್ಚಿದಾತ್ಮಕಂ ಸ । ಜ್ಜನವಿನುತಂ ಸತ್ಯವಾಣಿ ನಿಜನಿರು
ಪಮ ಪಾ ॥ ವನವೃತ್ತ ನಹಿಂಸಾಧ ॥ ರ್ಮನಿಯುಕ್ತಂ ಪೇರ್ಮೆವೆತ್ತು
ಕಂಗೊಳಿಸಿರ್ದಂ ॥ .... ॥೪॥

ಕಂ॥ ಶಮದಮಯಮನಿಯಮ ದಯೋ । ತ್ತಮ ಶಿವಧರ್ಮಂಗ
ಳೆಸೆಯೆ ಗುರುಚರಲಿಂಗ ॥ ಕ್ರಮ ಕಮಲಂಗಳನರ್ಚಿಸು । ತಮರ್ದೊ
ಪ್ಪಿದ ನಮಳಸುಗುಣ ನಿಸರಂದಸರಂ ॥ .... ॥೫॥

ಕಂ॥ನಡವೆಡೆಯೊಳ್ಪವಹತಿಯಿಂ।ಮಡಿಗುಂ ಕ್ರಿಮಿಸಮಿತಿಯೆಂದುಬ
ಗೆದಾರಯ್ಯು ॥ ತ್ತಡಿ ಯಿಡುವನೊಯ್ಯನೊಯ್ಯನೆ । ಪೊಡವಿಯೊಳಾದ
ಸರ ನತಿದಯಾರಸಭರಿತಂ ॥ .... ॥೬॥

ಕಂ॥ ನೆಗೆದಡ್ಡಂಬಾರುವ ಕೀ । ಟಗಣಕ್ಕಳಿವಪ್ಪುದೆಂದು ಬೀಸದೆ
ತೋಳಂ ॥ ಸುಗುಣನಿಧಿ ನಡೆಯುತಖಿಳೋ । ರ್ವಿಗಹಿಂಸಾಧರ್ಮಶಾಲಿ
ತಾನೆನೆನೆಗಳ್ದಂ ॥ .... ॥೭॥

ಚಂ॥ ವೃತ್ತ॥ ಹರಚರಣಾರ್ಚನಕ್ಕೆ ಪೊಸಪೂ ದಿರಿಯಲ್ಬನಕೆಯ್ದಿ
ಪೂಗಳಂ । ತುರಿಪದೆನೀಳ್ದುಕೊಯ್ಯೆ ಸೆಳೆಗೊಂಬುಡಿ ದಾಯೆಡೆಯಿಂದೆ ನೆ
ತ್ತರೊ ॥ ತ್ತರಿಸುತ ಸೂಸೆ ಝೋರಿಸುತೆ ಪೂಗಿಡನೊಂದೆನೆನುತ್ತಳಲ್ದು ಸು।
ರ್ಕಿರಿ ನಡೆನೋಡಿನೊಂದು ಬಿಸುಟಾಕುಸುಮಾವಳಿಗುಮ್ಮಕಜ್ಜಮಂ ॥೮॥

ಕಂ॥ ಮರದಡಿಯೊಳ್ಗೋಮಯದಿಂ । ವಿರಚಿಸಿ ಸಾರಣೆಯನಲ್ಲಿ ಮಳೆಗಟ್ಟುತೆ ಕಂ ॥ ಮರಲುದುರೆ ಕೊಂಡಪಂ ಸ । ಚ್ಚರಿತಂ ಶಿವಪೂಜೆಗೆಯ್ಯನೋಜೆಯೊಳನಿಶಂ ॥ ..... ॥೯॥

ವ॥ ಇಂತೀಶಾಂತಿರಸವಿಸರಂ ಪಸರಂಚೆತ್ತಿರೆ ದಸರ ದೇವಂ ರಸೆಯೊಳ್ಜಸದಿನೆಸೆಯುತ್ತಮಿರೆ ಪರಸಮಯಸ್ಥರಾತನ ನೆಗಳ್ತೆಗ ಸೂಯಾಪರರಾಗುತೆಲ್ಲಮ್ಮಂತಣಂಗೊಂಡು ಕುಳ್ಳಿರ್ದೊಂದು ಕಪಟೋಪಾಯ ಮನಾಳೋಚಿಸಿ ॥

ಮ॥ ಸ್ರ॥ ವೃ॥ ಪರರಂತನ್ನಂತೆ ನೋಳ್ಪಂಗಡ ಪರರಮನಂನೊಯ್ಗುಮೆಂದಾಗಳುಂ ನಿ । ಷ್ಠುರವಕ್ಯಾಲಾಪಮಂ ತಾಂಮರೆದುಮು ಸುರದಿರ್ಪಂಗಡಾ ಸರ್ವಜಂತೂ ॥ ತ್ಕರಮೆಂತುಂ ನೋಯದಂತಾಚರಿಪ ಪರಮಶಾಂತಂಗಡಾ ವೀರಮಾಹೇ । ಶ್ವರರೊಳ್ಮುಖ್ಯಂಗಡೀತಂ ಪಿಡಿದಬತ ದಸಾಮರ್ಥ್ಯಮನ್ನೋಳ್ಪವೀಗಳ್ ॥ ..... ॥೧೦॥

ವ॥ ಎಂದನಿಬರು ಮಾಳೋಚನಂಗೆಯ್ದು ಕೈಗೆಟ್ಟ ಕಾಳ್ಮಾನಿಸನೋರ್ವನಂ ಕಾಪಟ್ಯದಿಂಕರೆಡುತಂದು ॥

ಮ॥ ವೃ ॥ ಶಿರಮಂಭದ್ರಿಸಿ ನುಂಣನಾಗೆ ಕೊರಲೊಳ್ ರುದ್ರಾಕ್ಷಿಯಂತೀವಿ ಮೆ । ಯ್ಗಿರದುದ್ಧೂಳಿಸಿ ಭಸ್ಮಮಂಪಣೆಮೊಗಕ್ಕಾಲೇಪನಂಗೆಯ್ದು ಮು ॥ ಪ್ಪುರಿಯಂ ಕಟ್ಟಿಕಟೀತಟಕ್ಕೆ ಸುಲಿದೊಳ್ಪಿಂ ಪಲ್ಗಳಂ ಕಾಲ್ಗಳಂ । ಕರದಿಂದಂತೊಳೆದೊಂದು ಕೋವಣನುನಾತಂಗೊಲ್ದು ಕೈಗೆಯ್ವುತಂ ॥

ಕಂ ॥ ಒಳಗೆಮೃದುವಸ್ತ್ರಮಂ ಸಂ । ಗಳಿಸುತೆಬರಿಸೆಜ್ಜೆಯೊಂದನಳವಡಿಸುತ್ತಂ ॥ ಗಳದೊಳ್ಕಿವಲಾಂಛನಮಂ । ಕೆಳೆಗೊಳಿಸಿ ದರರಕಿಚೋದ್ಯಮೆನೆಪೌರಜನಂ ॥ ..... ॥೧೨॥

ವ॥ ಇಂತು ಬರಿಜೋಹಮನಳವಡಿಸಿ ನಲವಾಂತುನೋಡಿ ॥

ಕಂ॥ ದಸರ್ಕೈಯ್ಯನೆರಗಿಸಿಕೊಂ । ಡಸವಸದಿಂ ಪೊಡೆಯುದವನ ಶಿರಮಂನಿನ್ನೀ ॥ ಮಿಸುಗುತಿಹಮೋಟಗೈಯ್ಯಂ । ರಸೆಯಚ್ಚರಿವಡೆಯೆಮಲ್ಲಪೋಗೆನುತಾಗಳ್ ॥ ..... ॥೧೩॥

ಕಂ॥ ಬೋಳೈಸಿಕಳುಪಿ ಖಳರಾ ॥ ವೇಳೆಯೊಳ್ಕೈತಂದ ನತುಳಸಂ

ಭ್ರಮದಿಂ ಪು || ಷ್ಪಾಳಿದಳಲಿಂಪು ಪೋಪದ | ಯೊಳುವನಾ ದಸರವಿ
ಭುವ ನೊಯ್ಯನೆಕಂಡಂ || ..... ||೧೪||

ವ|| ಅಂತುಕಂಡು ಸಡಗರಂಮಿಗೆ ರಾಜವೀಧಿಯೊಳ್ಬಳಿಸಂದು ನಡೆ
ತರುತ್ತಂಸೋಳ್ಪರಂ ನಗೆ ಗಡಲೊಳೋಲಾಡಿಸಿ ||

ಮ ||ವೃ|| ನಗುತಂಡರ್ರನೆತೇಗುತಂ ತೊನೆಯುತಂ ಪುರ್ಬಿಕ್ಕುತಂ
ಪಾಡುತಂ | ನೆಗೆಯುತ್ತಂ ಕೆಲಿಯುತ್ತೆ ಕೇಕರಿಸ ತಡ್ಡಂಬಾಯ್ಬುತಂ ಮಂ
ದಿಯೋ || ಳ್ವೊಗುತಂ ಮೋಲಿಯನೆತ್ತುತಂ ಮುರುಕಿಸುತ್ತಂ ತಂತೆ ತನ್ನಂ
ಗಮಂ||ಮಿಗೆನೋಡುತ್ತೊಲಿದಾಡಿಸುತ್ತೆಮುಡುಸಂಪೆಂಪೇರುತಂಪಾಡುತಂ||

ಕಂ || ನಡೆದು ಪೆಡಂಮೆಟ್ಟುತೆ ಮುಂ | ಗಡೆಗೋರ್ಗುಡಿಸಂತೆ
ಜಂಗಳಂಬಾಯ್ಬುತೆ ಪಿಂ || ಗಡೆಗೊಲಿದು ನಿಲುತೆ ನೋಡು | ತ್ತೆಡವಲ
ಮನಲರ್ಚಿ ಕಣ್ಗಳಂ ಪುರ್ಬಿಡುತಂ || ..... ||೧೬||

ಕಂ|| ಮುಂಡೆಯುನಗಿತಿಂತೊಲೆಯುತೆ | ತುಂಡಿಸಿದ ಕರಂಗಳೊಡಿ
ದಂಡೆಗೊಡುತ್ತಂ || ದುಂಡಿಸುತಾಡಿಸುತಕಟ | ಮುಂಡಲಮಂ ಬೀಗಿಬೇ
ತತಣೆವಡಿಯಿಡುತಂ || .... ||೧೭||

ಕಂ|| ತಳರ್ದಿಂತು ದಸರಿದೇವನ | ಬಳಿಸಾರ್ದು ಕಡಂಗಿನೋಡಿ ಶರ
ಣಾರ್ತಿಯಿನ || ಲ್ಕಳವಡದೆ ಪರಸಿದಂ ತೊದ | ಲಿಳಸಿರ್ಪಿನ ಮಲ್ಪಮಾಯು
ನಿನಗಕ್ಕೆಸುತಂ || .... ||೧೮||

ವ|| ಎಂದವಂ ಕಪಟವೇಷಮಂ ತಳೆದೇಳ್ತಂದೆನೆಂಬ ಲಜ್ಜೆಯಿಂತಡ
ಬಡಂಬೋಗಿಪರಸಿ

ಕಂ|| ಎಲಿದಸರಿದೇವ ಕುಶಲಮೆ | ನಲವಿಂದಾವೆಡೆಗೆ ಪೋಪೆ ಕಜ್ಜ
ಮದೇಂನಿ | ಶ್ಚಲಮತಿ ನಿನ್ನಯಸುಗುಣಾ | ವಲಿಯಂ ಕೇಳ್ದೆಳಸಿನೋಡಲೆ
ಯ್ದಿದೆ ವೀಗಳ್ . * ||೧೯||

ಕಂ|| ನಿಯತದೊಳೆ ಮಲ್ಲಿನಾಥಾ | ಹ್ವಯುಮೆಸೆವವುದೆಮಗೆ ಸುಪ್ರ
ಸಿದ್ಧಂ ಸರ್ವೋ || ರ್ವಿಯೊಳೆಮಗೆಣೆಪರ್ಪರದಾ | ರ್ನಯುನಿಯಮನುಹತ್ವಸ
ತ್ವಸಾರೋನ್ನತಿಯೊಳ್ .. ||೨೦||

ಕಂ|| ಪರ್ವತನಾಥನ ಸುತನಾ | ನುರ್ವರೆಯೊಳ್ಕರಿಯನಲ್ತು ನಿನ
ಗೆಂತುಟೊ ಪೇ || ಳ್ಗರ್ವಂನುಡಿಯದೆ ಪೋದಪೆ ಸಿರ್ವಂಚಕಭಕ್ತಮರ್ತ್ಯನಿನ
ಗಿದುಗುಣಮೆ ||೨೧||

ಕಂ|| ನುಡಿದೊಡೆ ನಿನ್ನಸುಹತ್ವಂ | ಕೆಡುಗುಮೆ ನಡೆನೋಡೆನಿನ್ನಪೌ
ರುಷಮುಳಿವಂ || ಪಡೆಗುಮೆ ಮಣಿದೊಡೆನಿನ್ನಯ | ಮೃಡಭಕ್ತಿಗೆಹಾಸಿಯು
ಕ್ಕುಮೆಬಗೆವಾಗಳ್ ||೨೨||

ಕಂ|| ಚರಮೂರ್ತಿಯಾನೆ ನಿನ್ನಂ | ಕರೆಯುತ್ತಿರೆ ಕೇಳದಂತೆ ತ್ರಳ
ರ್ದಪೆ ನಿನಗಾಂ || ಚರಮೂರ್ತಿಯಲ್ಲಮೆ ಪೇಳ್ಪರಮಾರ್ಥಮನೇಕೆನುಡಿಯೆ
ಗುಣಮಣಿಭರಣಾ ||೨೩||

ಕಂ|| ಚರಭಕ್ತಿಯುತ್ತನಹಿಂಸಾ | ಪರನಧಿಕದಯಾಳುಧಾರ್ಮಿಕಂನೀ
ನೆಂದಾ | ದರದಿ ನಭೀಕ್ಷಿಸಲೆಂದಾ ನಿರದೇಳ್ತಂದಿರವನಿಂದುಸಫಳಂಗೆಯ್ದೆ||

ಕಂ|| ಎಮ್ಮೊಡನಾಡಿಗಳಿರ್ಪ | ರ್ದಿಂಮಿದರಿದನೆಯ್ದೆ ಕೇಳ್ದೊಡೆ
ನ್ಮಂ ಬಳಿಯೊ || ಳ್ನಮ್ಮನಿಪರಿ ಲಘುಮಾಡಿದೆ | ಕೆಮ್ಮನೆನೀನಕಟ ಸರಿಯ
ತಾಪಸರೆಡೆಯೊಳ್ ||೨೫||

ಕಂ|| ಒಡೆಯರ್ಕಳಿರ್ದೆಡೆಗೆ ಕೇ | ಳ್ಮೃಡಭಕ್ತಂಪೋಗುಪೋಗುತೆರಗಿ
ಸತ್ಕೃಪೆಯುನಣಂ || ಪಡೆಯುಲ್ವೇಳ್ಕುಂ ನೀನಿ | ರ್ದೆಡೆಗಾನಿರದೆಯ್ದೆ ಸುಮ್ಮ
ನಿರ್ಪುದೆ ಸುಮತಿ ||೨೬||

ಕಂ|| ಮದನೊಮುರುಳ್ತನೆಮೊನಿನ | ಗಿದುಜಗದೊಳ್ಕೋಟಮಲ್ಲಿ
ನಾಥನದೊರೆವೆ || ತ್ತೊದವಿದ ಪೇರ್ಮೆಯಕೇಳ್ದುಂ | ಪದೆದರಿದುಮ್ಮಣಿಯ
ದಿರ್ಪನಿನ್ನವಿಡಾಯುಂ ||೨೭||

ವ|| ಎಂದಿಂತು ಬಲಾತ್ಕರಿಸಿಗಳಪುವಶಿವಲಾಂಛನಧಾರಿಯಾದ ಮೋ
ಟಮಲ್ಲನಿರವಂ ದಸರಯ್ಯಂ ಪಿಂದಿರುಗಿನೋಡಿ

ಕಂ|| ಮರುಳನಿವನೆಂದುಬಗೆದನೆ | ದುರಿತಾತ್ಮಕನೆಂದು ನೆನೆದನೆಖ
ಳನೆಂದೋ || ಸರಿಸಿದನೆ ಕುಹಕವೇಷಮು | ನಿರದಾಂತಮುದಾಂಧನೆಂದದೇಂ
ನೋಡಿದನೆ ||೨೮||

ಕಂ|| ಕರಮಿಲ್ಲದಮೋಟಂತ | ಸ್ಕರಚರಿತಂಕಪಟಯೆಂದುಪೇಕ್ಷಿಸಿದ
ನೆಶಾಂ || ಕರಲಾಂಛನಧರನಂಭಾ | ಸುರಜಂಗಮಮೆಂದುಭಕ್ತಿಯಿಂಭಾ
ವಿಸಿದಂ ||೨೯||

ವ|| ಅಂತು ಭಾವಿಸಿ ಭಾವಜಾಂತಕನೆಂದೆನಂಬಿ ನಲವೇರ್ಚ ವಿಶ್ವಾಸ
ಮೆ ನಿಜಪ್ರಾಣಮಾಗಿಭಯುಭಕ್ತಿವೆರಸಿನಿಂದು

ಮ|| ವೃ|| ನರದೇಹಾನ್ವಿತಚಂದ್ರಚೂಡ ಕರುಣಾಪಾರಾಪಿತಪ್ಪಂಟು

ಸಾ | ಸಿರಮೆಂಸೊಳ್ಮದಮತ್ತನೊಳ್ಮರೆದಿದಂ ಕಾರುಣ್ಯದಿಂದೆನ್ನನು || ದ್ಧರಿ
ಸೊಳ್ಪಿನ್ನದನೋಡಿ ನೀಂಪ್ರೊರೆಯುದೆಂದಾತ್ಮಾಂಗಮಂ ಧಾತ್ರಿಯೊಳ್ | ಪ
ರವೃತ್ತಂಪ್ರೊಗಳುತ್ತೆ ಮತ್ತೆಮಣಿದಿರ್ದ್ದಂ ತತ್ಪದದ್ವಂದ್ವದೊಳ್ ||೩೦||

ವ|| ಆಗಳಾ ಮೋಟಮಲ್ಲಿನಾಥ ನಾಕ್ಷೇಪಂಬುಗೆ ತನಗೆರಗಿರ್ದದಸ
ರಿಪೇಪನನತೋತ್ತಮಾಂಗಮಂ ಕ್ಷೀಣಕಲಿತಂಗೆಾವ ತನ್ನಕೂಸಕೈಗಳಿ
ನಪೆನುತಟಿವಟಿಸಿತಿಪಿದು.

ಕಂ|| ಬಡನೊಡನೆಬಡಿಬಡಿದುಪ್ರೊಡೆ | ಪ್ರೊಡೆಪಡಿಗಡಿಗೆಟ್ಟಹಾಸಮಂ
ನೆಗಳ್ದ್ದಕರಂ || ಜಡಿದಗ್ಗೆಭಕ್ತನಂಬ | ಕುಣಿಗೆದ್ದಂಮೋಟಮಲ್ಲಿಸಪ್ರ
ತಿಮಲ್ಲಂ ||೩೧||

ಕಂ|| ಬುಗುಟೊಗೆಯೆ ಶಿರದೊಳಲ್ಲ | ಲ್ಲಿಗೆ ರಂಧ್ರಂಗಳಿನ್ರಪಳ್ದನೆ
ತ್ತರ್ಧುರ್ಗಲ್ಗಿಂ || ದೊಗೆ ಚಲ್ಲದಿಂದೆ ಮಲ್ಲಂ | ಮಿಗೆನಿರ್ಗಯಶೀಲನಗ್ಗೆಪ್ರೊ
ಡೆಮಂಬಡಿದಂ .... ||೩೨||

ವ|| ಅಂತವನಳುರ್ಕೆಯಿಂ ಪ್ರೊಡೆಯುಲಿಡನೆ.

ಚಂ|| ವೃ| ಅಗಿದುಬೆಮುತ್ತನೆ ಸುಗಿದು ಕುಗ್ಗದನೆನೆರೆನೊಂದೆನೆಂ
ದುಪಿಂ | ಪೆಗಡನೆ ತಪ್ಪು ಸಂದಿಸದೆಪ್ರೊಯ್ದ ಪನೀಲಬಲನೆಂದುಚಿತ್ತದೊ || ಳ್ಬ
ಗೆದನೆಪ್ರೊಯ್ದುದಿರ್ಬರಿದೆನೀನಕಟೆಂದನೆ ಬಂದಕೆಂಮುನಿಂ | ತಗಣಿತಮಾದ
ಬಾಧೆಗೊಳಗಾದೆನೆಸುತ್ತಮುಳಿತ್ತಿದನಂತನೆ ||೩೩||

ಕಂ|| ತಿಸುಗಣ್ಣೆನೋಡಿದನೆನಾ | ಮುಸಕಂಮುಸಗಿದನೆಸೂರುಳಿಟ್ಟ
ಗ್ಗೆಸಿಪಾ || ರಿಸಿದನೆ ನಿನಗೆಂಮುಳಿಯದೆ | ಸಸಿದಲಿಯುಸಭಕ್ತರೆಂದನೇದ
ಸರಸ್ಸಿಂ ||೩೪||

ಕಂ|| ಧೃತಿಗುಂದದೆ ಮತಿನಂದದೆ | ರತಿಯೋಡದೆಬಲ್ಲುಬಾಡದದ
ಲ್ಲಾಡದೆ ನಿ || ಶ್ಚಿತಚಿತ್ತಮತಿಭಕ್ತಿ | ಸ್ಥಿತಿಜಾರದೆ ವಿನಾರದಾತ್ಮಶೀಲಕ್ರ
ಮಮಂ .. ||೩೫||

ಕಂ|| ಪರಮಶಿವಭಕ್ತರೂಪಂ | ಕರಮಾಂತುದೊದಮೆಯೆತಾಳ್ದ
ದೋಪದಪಿಂದಂ || ಪುರುಷಾಕಾರಮನೆನೆ ತಾಂ | ತಿರಸಾಂಕಂ ದಸರಿದೇ
ವನೊಪ್ಪಿದನಾಗಳ್ ... ||೩೬||

ವ| ಅಂತೊಪ್ಪುತ್ತಮಿರ್ದಾಮಲ್ಲಿನಾಥಂ ನಿಲ್ಲದೆಬಡಿಯೆಶಿರಮೆಲ್ಲಂಶೀ
ಳ್ದೊಡೆಯೆ ಧೃತಿಗೆಡನೆ ಭಕ್ತನದ್ವಂಕ್ಷಮಾನಿಧಿತನ್ನೊಳಿಂತೆಂದಂ.

ಕಂ|| ಅಪರಾಧಮಿಲ್ಲದೀಂಬಡಿ | ವಪನೆ ಮಹಾತ್ಮಂ ಮದೀಯಶಿ
ರಮುಂ ಶಿಕ್ಷಾ || ವ್ಯಪದೇಶಂ ಭಕ್ತಿಸ್ಥಿತಿ | ಯುಪದೇಶವಿದಪ್ಪುದಾದೆ ನಾ
ನತಿಧನ್ಯಂ .... ||೩೭||

ಕಂ|| ಹರವಿಮುಸಿಳಿಯೊಳ್ಕೊಳ್ವ | ಕರಪದಿಂ ಟೊಣೆದಲ್ಲಿ ಕೊಳ್ವರೆ
ನ್ನಯಶಿರಮುಂ || ಭರದಿಂಪೊಡೆದು ಪರೀಕ್ಷಿಸಿ | ಪುರುಳಂಕೈಕೊಳ್ವನೆನ್ನನೀ
ಘನಮಹಿಮಂ .... ||೩೮||

ಕಂ|| ಶಿವಹಸ್ತಮ ನಂದಿಟ್ಟಂ | ಜವದಿಂಪೂರ್ವಾಂಗಮುಳಿಯುಲಿನ್ನ
ಯಶಿರದೊಳ್ || ಶಿವಮೂರ್ತಿಯನ್ನನೀಗಳ್ | ಶಿವಭಕ್ತನನೆಸಗಲೆಂದುಮೀ
ಣ್ಕರವಿಟ್ಟಂ .... ||೩೯||

ವ|| ಎಂದುಮುತ್ತಮಿರದೆ

ಚಂ|| ವೃ|| ಒಳಗೆಮದೀಯಮಸ್ತಕಮನಾಕರಿಸಂ ಪೊಡೆದಪ್ಪನಯ್ಯ
ನು | ಜ್ವಳಪ್ಪುದುಪಾಣಿಪದ್ಮಮೆನಿತಕ್ಕಟನೊಂದುದೊ ಲಿಂಗಜಂಗಮಾ ||
ವಳಿಗೆರಗಿರ್ದ ಪೇರ್ಮೆತನಗುಳ್ಳೊಡೆ ಮಲ್ಲಸದುತ್ತಮಾಂಗಮೊ | ಳ್ಪೊಳಪಡೆ
ಪುಷ್ಪದಂತೆವ್ಯದುಮಕ್ಕೆಗಡೀತನಪಾಣಿಗಸ್ಸಿತ್ರಂ ||೪೦||

ಕಂ|| ಶಿರಮತಿಕಠಿನಂ ಪೊಡೆದೊಡ | ಕರದ್ವಯಂನೋಗುಮೆಂದು
ನುಡಿದೊಡೆಮನದೊಳ್ || ಕೊರಗುವನೊ ನಿಜಶಿರೋವ್ಯಥೆ | ಗಿರದೀತಂ ನೆ
ಪಮನಿಟ್ಟುನುಡಿದಪನೆನುತಂ ||೪೧||

ಕಂ|| ನೆಸಿದೊಂದುಪಾಯಮಂ ಮಗಿ | ದಸುನಯದಿಂ ದೇವನಿನ್ನನ್ಯ
ದುಕರಮಿದುಮ|| ದ್ಭನಕಠಿನಮಸ್ತಕದತಾ | ಡನದಿಂ ನೊಂದಪ್ಪುದೀಗ
ಳಿನ್ನಯವ್ಯೆಯೊಳ್ .... ||೪೨||

ಕಂ|| ಮೃದುವಪ್ಪೆಡೆಯುಂ ಪೊಡೆನೀ | ನದರಿಂ ಬಿನಪಕ್ಕೆ ಕೊರತೆಯಾ
ವುದೊ ನಿನ್ನೀ || ಸದಮಳಕರಯುಗಳಸ್ಗ್ರಾಂ | ದುಮಗಡ ಮದನುಗ್ರಹಾ
ರ್ಥಮಿಂತಿದೆಕಜ್ಜಂ .... ||೪೩||

ಕಂ|| ಎಂದೊಯ್ಯನೆ ನುಡಿಯುತ್ತಂ | ಪಂದಿಸುತಂ ದೇವನಿನ್ನಕರ
ಸರಸಿರುಹಂ|| ನೊಂದುದಕಟಿನ್ನುತಾ ಬಗೆ | ಗುಂದಿ ಕರಂದಸರಸಮನಮೋ
ಟಿತಕರಮುಂ .... ||೪೪||

ಚಂ|| ವೃ|| ನಿಜಕರದಿಂದೆ ತಾಂಪಿಡಿದುನೋಡಿ ನಿಗುರ್ಚಿ ನಿಗುರ್ಚಿ ನೇ
ಹದಿಂ | ವೃಜಿನ ವಿದೂರನೊತ್ತಿ ತೆಗೆಯುತ್ತಿರೆ ಚಿತ್ರಮುದಿಂತೊ ರಕ್ತನೀ ||

ರಜನಿಭಪಾಣಿ ತಳ್ತಲರ್ದುಮೂಡಿವಿ ರಾಜಿತಮಾದುದೆಂದು ಕಾ | ಯಜರಿಪುವಿಂದೆ ಬಾಣಕರಪಂಕಜಮೊಲ್ದೊಗೆತಂದಮಾಳ್ಕೆಯಿಂ ||೪೫||

ವ|| ಮತ್ತಂ.

ಚಂ|| ವೃ|| ಪೊರಟಿದ ಬಂಕಿದೇವವಿಭುವಿಂದೆ ಕೊರಂಟುತಳಿರ್ತಪಾಂಗಿಸಿಂ | ಪರಮಗುಣಾಂಕ ಚನ್ನಯುನ ಜಿಹ್ವೆಗೆ ಮಂಜುಳಭಕ್ತಿಭಾವದಿಂ || ಕರಮೊಗೆವಂತೆ ಕಾಂತದಸರಯ್ಯನ ಭಾವದಬಲ್ಪಿನಿಂದಮುಂ | ಕುರಿಸಿ ನಿಮಿರ್ಕೆವೆತ್ತು ಕರಪಲ್ಲವಮೊಪ್ಪಿದುವಾತಪಸ್ವಿಯು ||೪೬||

ಕಂ|| ದಸರವಿಭುಭಕ್ತಿ ಚೈತ್ರಂ | ಪಸರಿಸೆಸೊಂಕಿಂದೆ ಜಂಗಮಸ್ಥಾಣುವಲಂ || ಪೊಸಲೆತಳಿರ್ತಪೊಲೀಂಕಂ | ಜ್ಜೆಸೆದುದೊಲಸದರುಣಪಾಣಿಪಲ್ಲವಯುಗಳಂ ||೪೭||

ವ|| ಮತ್ತಮಾದಯಾರ ಸನಿಧಿಯುಶಾಂತಿರ ಸಕಾಸಾರದೊಳುಳ್ಳಲರ್ದಕೆಂದಾವರೆಗಳಂತೆಯು ಮಾಭಕ್ತಿ ಸರೋನಿಧಿಯುಭಕ್ತಿಭಾಮಿನೀಕರ್ಣಾವತಂಸಂಗೆಯ್ದು ತಳಿದಚಂದಳಿರ್ಗಳಂತೆಯುಮುಳವಿಗಳಿತಸೌಂದರ್ಯಮನೊಳಕೊಂಡು ಥಳಥಳಿಸಿಪೊಳೆವಬಳ್ಳಿವೆಳಗಿಂಪಗಿಲ್ತಚೆಳ್ಳುಗುರ್ಗಳೆಂಬ ತರಳತಾರಗೆಗಳ್ಗೆ ಸಂಧ್ಯಾರಾಗರುಚಿಯಂಪೂರ್ಪೆಪಸೊಂಪಡರ್ದ ಕೆಂಪಂಕಳೆದುತೆರಂಬೊಳೆವಭಸಿತಾನುಲಿಪ್ತದೀರ್ಘಬಾಹು ಮೃಣಾಳದಗ್ರದೊಳಮರ್ದರುಣಸರಸಿರುಹಮೆನಿಸಿ ತತ್ಕರಂಗಳ್ಕರಮೆಸೆದಿರ್ದವಂತುಮಲ್ಲದೆ

ಕಂ|| ಇವಿರುಳಂತಿರೆನಖಮಣಿ | ಸ್ಫುರಿತಂಪಗಲಂತಿ ರರುಣರುಚಿಶೋಭಿ ಸುಧಾ || ಕರನಂತೆಪರ್ವಶೋಭಾ | ಕರಮಾಕರಮಭ್ರುವಂತೆಲೀಲಾಧಾರಂ .... ||೪೮||

ಮ|| ವೃ|| ಅದುಪಂಚಾಕ್ಷರದಂತೆಪೋಲ್ಪ್ರಣವವರ್ಣಪ್ರಾಂಚಿತಂಭಸ್ಮದಂ | ತುದಿತಶ್ರೀಕರಲಕ್ಷಣಪ್ರಕಟಿತಂ ರುದ್ರಾಕ್ಷೆಯಂತಿಷ್ಟಸಂಪದದಾನೋತ್ತಮಭೂಷಣಂಗಿರಿಶನೆಂತಂತಬ್ಜರೇಖಾಶ್ರಿತಂ | ಮದನಾರಾತಿಯುಭಕ್ತನಂತೆಸತತಾಶೋಕೋರು ರಾಗೊರ್ಜಿತಂ ||೪೯||

ವ|| ಮತ್ತಮಾಕರಂ ತಾಪಸ ತಪೋವೃತ್ತಿಯಂತೆ ಸಕಲಪುರುಷಾರ್ಥಪ್ರದಮುಂ ಶಿವದೀಕ್ಷೆಯಂತೆ ಪೂರ್ವವರ್ಣನಿವಾರಕಮುಂ, ಹರನ ರಾಭಯಂಕರದಂತೆ ಸುಪರ್ವಶೋಭಾವಹಮುಂ, ವೇದಾದಿವರ್ಣದಂತೆಕಳಾವಿರ್ಭಾವಕರಮುಂ, ಶಿವಯೋಗಿಗಣದಂತಾತ್ಮಲಿಂಗಪೂಜೋಚಿತಕರಣಮುಂ,

ಪಾಶುಪತಾಸ್ತ್ರದಂತೆ ಗುರುಶಿಷ್ಯಸಮಾಹಿತಪ್ರದಮುಂ, ಕಂಣಪ್ಪದೇವಪಾದುಕೆಯಂತೆ ಶಿವೋತ್ತಮಾಂಗಸ್ಪರ್ಶಿಯುಂ, ಶಿವನಾಗದೇವಕರಾಬ್ಜದಂತೆ ಪರಮಾಮೃತ ಪ್ರದಾನಮಹಿತಮುಮೆನಿಸಿ.

ಕಂ|| ಕರಮೆರಡುಮಿಂತುರಂಜಿಸುತಿರೆ ಕೊರಲಾಬರಿಯ ಸೆಜ್ಜೆಲಿಂಗೆಮನಾಳ್ದೊಪ್ಪಿಚರವೇಷಮುವಳವಟ್ಟಿರೆತನಗಾಮಲ್ಲಿದೇವನೀಕ್ಷಿಸುತಾಗಳ್||

ಚಂ|| ವೃ|| ಬಗೆಬೆದರುತ್ತೆ ಸಂತಸಮುನಾನುತೆ ನೋಡುತೆ ತನ್ನಚಾರುಪಾಣಿಗಳ ನರಲ್ದೊರಲ್ದು ಪೊಸಸೆಜ್ಜೆಯಲಿಂಗಮನಂಟಿವೇಳೆವೇಳೆಗೆ ಬಗೆದೀಕ್ಷಿಸುತ್ತೆ ದಸರಯ್ಯನನಿಟ್ಟಿಸುತಲ್ಲಿಲಜ್ಜೆಯಿಂ|ಮಿಗೆತಲವಾಗಿ ಮಲ್ಲವಿಭುವುಂಗುಟದಿಂ ಬರೆವುತ್ತೆಧಾತ್ರಿಯಂ .... ||೩೧||

ಕಂ|| ಮುನ್ನೆಗಳ್ದ ತನ್ನತಪ್ಪುಗಳ ನ್ನೆನೆಯುತೆ ದಸರನಮಳ ಶಮದಮಗುಣಸಂಪನ್ನತೆಯಂ ಬಗೆಯುತೆ ಮಹಿಮೋನ್ನತಿಯಂ ಭಾವಿಸುತ್ತೆತಾಪಸನಿರ್ದಂ .... ||೩೨||

ಕಂ|| ದಸರಯ್ಯಂ ತಚ್ಚರಪದಬಿಸಜಕೆಪೊಡಮಡುತೆಕರಸಾರಸಮುಂ ಚಿಟುಂಕಿಸುತೆ ಸಲ್ಲಸಿತಾಂಗುಲಿಯಂ ಕಡಂಗುತೊಪ್ಪಿಸಿ ಕೆಲದೊಳ್ ||೩೩||

ಕಂ|| ಕರುಣಾರಸಭರಿತೇಕ್ಷಣ | ಶರಣರ್ನಡೆನೋಡಿ ಪುಳಕಮಂತಾಳ್ದು ಕಳೇವರದೆಳಿದು ಲೇಸುಲೇಸೆಂ | ದಿರದಾನಂದಿಸುತೆ ದಸರನಂಕೀರ್ತಿಸಿದರ್ .... ---- ||೩೪||

ಚಂ|| ವೃ|| ನಿರುಪಮಶಾಂತ ನಿರ್ಜಿತಲತಾಂತ ಕಳಂಬಕಳಾನಿಶಾಂತ ಶಾಂಕರಮತಪಾರಿಜಾತ ಶಮಿತೇಂದ್ರಿಯಜಾತ ಸದಾಭಿಜಾತ ಬಂಧುರಗುಣಭೂಷ ಭಕ್ತಹಿತಭಾಷ ಭವಾಮಯಭೇಷಜಾಂಘ್ರಿಪಂ | ಕರುಹ ಕೃಪಾಕಟಾಕ್ಷ ಸಚರಾಚರರಕ್ಷಣಾ .... ||೩೫||

ಕಂ|| ಶಮದಮಯಮನಿಯಮಮಹಿಮ | ಹಿಮಕರಧರಶರಣಚರಣಸರಸಿರುಹಮಧುಪ || ಭ್ರಮರಮೃದುಮಧುರಗಂಭೀ | ರಮನೋಹರವಚನವಿಸರದಸರದಯಾಬ್ಧೀ .... ||೩೬||

ಕಂ|| ಭವದೀಯ ಮಸ್ತಕದೊಳು | ದ್ಭವಿಸಿದುದು ಮಹೇಶಭಕ್ತಿ ಭಾವಿಸೆ ಭಕ್ತೋ || ತ್ಸವಕರ ನಿನ್ನಚರಿತ್ರಂ | ನವಕಮಿದಂ ಬಂಣಿಸಲ್ಕೆಬಲ್ಲವನವರೊಳರೆ .... ||೩೭||

ಮಂ|| ಸ್ರ|| ವೃ|| ಅವಿನೀತಂ ಲಿಂಗಬಾಹ್ಯಂ ಕರವಿರಹಿತನೇಳ್ತಂದು

ಮಾರ್ಗಾವಿ ಮಿಥ್ಯಾಶಿವಚಿಹ್ನಂಬೆತ್ತು ಕಾಯ್ಪಿಂಬಡಿಯೆ ಶಿರಮನೆಲ್ಲಾ ಪದಾ
ತಂಗೆ ಪೂಣ್ಕೊರ್ ॥ ತ್ವನದಿಂ ಕೈಯ ಯುಕ್ತಿಂ ಸಜ್ಜೆ ಕೆಯ್ಯುವಿಮಳಲಿಂಗಾ
ಸ್ಥಿತಂಗೆಯ್ವಣಂಗಾಂ । ಭವರೂಪಂ ಸಾರ್ಚಿದೈನಿನ್ನಯಬಗೆ ಪೊಸತೀಧಾ
ತ್ರಿಯೊಳ್ಜಕ್ತನರ್ಹಾ .... ॥೫೮॥

ಚಂ॥ ಕೃತಕತಪಸ್ವಿಯೆಂದು ತಿಳಿದುಂ ಶಿವಲಾಂಛನಮುಂ ನಿರೀಕ್ಷಿಸು
ತ್ತ ಶಿರಯ ಭಕ್ತಿಯುಂಪೆರಗೆ ತಪ್ಪಿಸಿತಿಲ್ಲದೆ ಕೂಸಕೈಗಳಿಂ ॥ ಗತದಯನಾ
ಹೀನಸಿಂ ಬಡಿಯೆ ಸೆತ್ತಿಯನೆ ತ್ತರಧಾರೆಸೋರ್ವಿನಂ । ಹಿತಮತಿನೋಯ
ದಾತನಕೆರಂ ಕಡುನೊಂದುದೆಸುತ್ತೆ ಸುಕಿರ್ದೈ .... ॥೫೯॥

ಕಂ॥ ಕಾಂತಾಗ್ರಗಣ್ಯನಿನ್ನಯ । ಕಾಂತಿಪ್ರಭೆಗೆಯ್ದೆ ಸೋಲ್ದುಸೋ
ಲ್ತು ರತಿಯುಂಗಂಗಾ ॥ ಕಾಂತಿಯುಮಾಶಿವನಜಟಾ । ಕಾಂತಾರಮನೊ
ಡನೆ ಪೊಕ್ಕುಮೆಯ್ಗರೆದಿರ್ಪರ್ ॥೬೦॥

ಉ॥ ವೃ॥ ಅಂದುವೃಷೇಂದ್ರ ನಾತ್ಮಗೃಹಕೆಯ್ದದಚೋರರ ನೊಲ್ದು
ನೋಡಿಸ । ಣ್ಣಂದಮರಾಂತನುಬ್ಬದನೆಗಾಯ್ಗಳ ಲಿಂಗಮನೊಲ್ದು ಮಾಡು
ತೋಳ್ಪಿಂದೆ ಚರಾಂಗರಂ ನೆಗಳ್ದನಿಂದುಕರಂಗಳನಿತ್ತು ಸಜ್ಜೆಯೊಳ್ಸಂದಿಸಿ
ಲಿಂಗಮಂನೆಗಳ್ದೆ ಧೂರ್ತತಪಸ್ವಿಗೆ ಜಂಗಮತ್ವಮುಂ .... ॥೬೧॥

ವ॥ ಎಂದು ಕೂರ್ಮೆಯುಂ ಕೊಂಡಾಡಿ ಮೋಟಕರತಾಡಿತತದುತ್ತ
ಮಾಂಗಮನವಲೋಕಿಪಾಗಳೋರೊಂದೆಡೆಯೊಳೊಡೆದು ಸಾಂಖ್ಯನಾಥನ
ಬಿರುಗಲ್ಲಹತಿಯುಂದೊಡೆದ ಶಿವಶಿರದಂತೆಯುಂ ಪೆರತೊಂದುತಾಣದೊಳ್ಬು
ಗುಟಿಮೆತ್ತು ಪಿಟ್ಟಾಂಬೆಯಭಕ್ತಿನಿಮಿತ್ತಂ ಚೋಳಂಗೆ ಮೃತ್ತಿಕಾಭಾರ
ಮಂ ಪೊರಲೊಡನೆ ಬುಗುಟ್ಟೊಗೆದ ಮೃಗಧರಧರನ ಮಸ್ತಕದಂತೆಯುಂ
ಪದಪ್ರದೇಶದೊಳ್ಸುಲಿಪೆತ್ತು ಕಣ್ಣಪ್ಪ ದೇವಪಾದುಕಾ ಸಂಘರ್ಷಣದಿಂ
ಸುಲಿಪೆತ್ತಹರನರಾಂಗದಂತೆಯುಂ ಮುಖಸ್ಥಾನದೊಳ್ಕೆಂಗಲೆವಡೆದು ಭೋ
ಗನಾಥನಪಿಂಮುರುಳಲೊಡಂ ಕೆಂಗಲೆತಳ್ತ ಶಿಲಾರಮಣನ ಶೀರ್ಷದಂತೆ
ಯುಂ ಮನ್ಯದೇಶದೊಳುರ್ಬಿದಭೃಭಕ್ತಂಗೆ ಸಹಾಯಮಾಗಿಕರ್ಬುನಮೊರೆ
ಯುಂ ಪೊರಲೊಡನುಬ್ಬಿದ ಭವನವಿಭವಂಬಡೆದ ಪೇರ್ದಲೆಯುಂತೆಯುಂ
ಕರಮೆಸೆಯೆ ಕಂಡುಕೌತುಕಂಬಡೆದು ॥

ಚಂ॥ ವೃ॥ ಸಲೆತಲೆ ಸಾಸಿರಂಬಡೆದವಂ ತಳೆವಗ್ಗದರಕ್ಕಸರ್ಕಳಾ।
ತಲೆಗಳಮಾಲೆಯುಂಧರಿಸಿ ಪಾಣಿಸರೋಜದೊಳಬ್ಜಜಾತನೊ ॥ ಛಲಿಯು

ನಮುರ್ಚಿ ದೇವರೊಳಿಪೇರ್ದಲೆವೆತ್ತು ವಿರಾಜಿಸಿರ್ಪ ನಾ | ತಲೆಯುಮುನಾ
ಟ ನಿನ್ನತಲೆಗನ್ಯರಬೀಳ್ದ ಲೆನಾಟಯುಕ್ಕುಮೆ ‖ ‖೬೨‖

ಕಂ‖ ಪರಮುಜಗತ್ಕಾರಣಶಂ | ಕರಶಿರಮೊಂದಲ್ಲದುಳಿದ ವಿಧಿಗುಹ
ದಶಕಂ ‖ ಧರಫಣಿಪರರಶಿರಂಗ | ಳ್ಸರಿಬಕುರ್ಮೆ ನಿನ್ನಶಿರದೊಳಿಲೆಸು
ಹಿಮಾಬ್ಧಿ ‖ .... ‖೬೩‖

ಕಂ‖ ಶರಣಜನಪಾದಜಲಬಂ | ಧುರ ತತ್ಪದನಖರಚಂದ್ರಶೇಖರ
ಮೆನಿಪೇ ‖ ಶಿರಮಿದು ಗಂಗಾಶಶಿಧರ | ಶಿರಕೆಣೆತಾನಪ್ಪುದೀಮಹಿಮಂ
ಡಲದೊಳ್ ‖ .... ‖೬೪‖

ಕಂ‖ ಓದಲ್ಬಕುರ್ಂ ಶಾಸ್ತ್ರಮ | ನೋದಿದುದಂ ಮಗುಳ್ದುಪರ್ರ್ಗ
ಬೋಧಿಸಲಕುರ್ಂ ‖ ಮೇದಿನಿಯೊಳಮಮ ಶಮಸುಖ | ಮೇಮರ ನಿನ್ನಂ
ತೆನಡೆದು ತೋರ್ಪರುಮೊಳರೆ ‖ ..... ‖೬೫‖

ಕಂ ‖ ಇದುಚಿತ್ರಂ ಕ್ಷಮೆಯೆಂಬ ಗ್ಗದಖಡ್ಗದಿ ಕೋಪ ರಿಪುಸಾ
ರ್ಪಿಂ ಕಡಿದಿ‖ ಕ್ಕಿದ ನಿನಗಹಿಂಸಕಂಸ | ರ್ವದಯಾಪರನೆಂಬಕೀರ್ತಿವಿಶ್ವಂ
ಭರೆಯೊಳ್ ‖ .... ‖೬೬‖

ಕಂ‖ ಲಿಂಗದ್ವಯಸಮಭಾವಂ | ಮಂಗಳಮುಯನಿನಗೆಸಂದುದೀ
ಕೃತ್ತಿಮವೇ ‖ ಪಾಂಗದ ಕುಟಿಲನು ಮಂನೀಂ | ಜಂಗಮುಮೆಂದೊಲ್ದು
ಬಗೆದು ನಂಬದಕತದಿಂ ‖ .... ‖೬೭‖

ಕಂ‖ ಬರಿಸಿದೆ ಕಡಿವಡದೆರಡುಂ | ಕರಂಗಳಂ ಬರಿಯುಪೆಜ್ಜೆಯೊಳ್
ಲಿಂಗಮುನೊ ‖ ಲ್ದಿರಿಸಿದೆಬಗೆಗೈಯಿಂಭ | ಕ್ತಿರಸಾಂಬುಜಸೂರದಸರಸಿಸ
ಗೆಣೆಯಾವಂ ‖ .... ‖೬೮‖

ಚಂ‖ ವೃ‖ ದಸರಚರಾಚರಪ್ರಸರ ಪಾಲಕಸಾಧುಸರೋಧಿಚಂದ್ರಸ|
ದ್ವಿಸರ ಮನೋಜ್ಞಮಾನ್ಯಮುಹನೀಯ ಮಹೇಶ್ವರದಿವ್ಯಪಾದಸಾ ‖ ರಸ
ರಸಭೃಂಗಮಂಗಳಮಹತ್ವಸಮನ್ವಿತ ಸದ್ಗುಣಾಂಬುಜಾ | ತಸರಸರದ್ವಳ
ಕ್ಷರುಚಿಕೀರ್ತಿಸಮಂಚಿತ ಸರ್ವದಿಕ್ತಟಾ ‖ ‖೬೯‖

ವ‖ ಎಂದಿಂತುಭಕ್ತಜನಂ ನಲಿನಲಿದು ಕೀರ್ತಿಸುತಮಿರೆ ಪರಸಮ
ಯಮುಸ್ಥರೆಲ್ಲಂ ಬಿಗಿರ್ತು ಬೆರಗುಪಟ್ಟು ನಿರೀಕ್ಷಿಸಿ ‖

ಕಂ‖ ಬಡಿದೊಡಮುಳಲದೆಕೊಟ್ಟಂ | ಕಡಿವಡೆದೆರಡುಂಕರಂಗಳಂ

ಮಲ್ಲಂಗೊ ॥ ಲ್ಬಡಿಗೆರಗಿದೊಡೇನನಿವಂ । ಕೊಡುವನೊಘನಮಹಿಮನೆ ಮಗೆವರಮಂಪಸರಂ ॥ .... ॥೨೦॥

ವ ॥ ಎಂದೆಲ್ಲರೊಂದುಗೂಡಿ ತಚ್ಚರಣಾರವಿಂದಕ್ಕೆ ಸಾಷ್ಟಾಂಗಮೆರಗಿ ಲಲಾಟಘಟಿತಕರಪುಟರಾಗಿ ॥

ಮ॥ ಸ್ರ॥ ವೃ॥ ಖಲರಂ ಕಾಪಟ್ಯಕರ್ಮಾಶ್ರಿತರ ನಘಮರಂ ದುಷ್ಟರಂ ಧೂರ್ತರಂ ದು । ರ್ಬಲರಂ ದುರ್ನೀತರಂ ದುರ್ದಮರ ನಧಿಕಪಾಪಾತ್ಮರಂ ವ್ಯರ್ಥಗರ್ವಾ ॥ ಕುಲರಂ ಸರ್ವಾಪರಾಧಾಸ್ಪಿತರ ನೊಸೆದುನೀಂ ಕಾವುದೆಮ್ಮಂ ದಯಾಬ್ಧೀ .... ॥೨೧॥

ಕಂ॥ ಸರ್ವದಯಾಪರ ನಿನ್ನಯ । ಪರ್ವಿದ ಮಹಿಮಾತಿಶಯಮ ನರಿವಂ ಜಗದೊಳ್ ॥ ಸರ್ವಜ್ಞನೋರ್ವನಲ್ಲದೆ । ದುರ್ವಾರಮದಾಂಧಮತಿಗಳಾವರಿದಪೆವೆ ॥೨೨॥

ಚಂ॥ ವೃ॥ ನೆಗಳ್ದಪರಾಧಮಂನಿನಗೆತಾಂಪಡೆದಂಗಡ ಪಾಣಿಯುಗ್ಮಮಂ । ಬಗೆಮಿಗೆಮಲ್ಲಿನಾಥನವನಿಂಮೊದಲಾದಪರಾಧಮೆಂಮದು ॥ ಜ್ಜುಗಿಸಿದೆವಾವದಂಬಗೆವೊಡಂತದರಿಂ ಪೊರೆಮಾಣದೆಂಮ ಪೆಂ । ಪಗಲದಕೂರ್ಮೆಯಿಂದಸರನೀಂಸುಜನೋತ್ತಮನಾದಕಾರಣಂ ॥೨೩

ವ॥ ಎಂದು ಸನ್ನುತಿಗೆಯ್ಯುತೆಮ್ಮಪರಾಧಸರ್ವಸ್ವಮಂ ಸೈರಿಸಿ ಕರುಣಿಪುದೆಂದು ಮಗುಳ್ದು ಮಣಿದಭಯಂಬಡೆದು ಕೃತಾರ್ಥತೆಯನಾಳ್ದಿಸೆದಿರ್ದ ಪ್ರಸ್ತಾವದೊಳ್

ಕಂ॥ ಧರೆಜಯಜಯಯೆನೆ ಶರಣ । ರ್ಪರಮಾನಂದದೊಳೆ ಪರಸೆ ನುತಿಯಿಸುತಿರೆ ಸ ॥ ರ್ವರುಮಲ್ಲಿಮಲ್ಲಿನಾಥಂ । ಗೆರಡುಂ ಕೈಯ್ಯೆತ್ತು ಮೆರೆದನಾದಸರಯ್ಯಂ ॥೨೪॥

ಮ॥ ಸ್ರ॥ ವೃ॥ ಬಸವಂಕೇಳ್ದಾಮಹತ್ವಸ್ಥಿತಿಯನೊಸಗೆಯಿಂದೆಯ್ದಿಸದ್ಭಕ್ತಸಂದೋ । ಹಸಮೇತಂ ಕಂಡುದಂಡಪ್ರಣತಿಯೆಸಗಿ ಕೊಂಡಾಡುತಾನಂದಬಾಷ್ಪ ॥ ಪ್ರಸರಂಕೈಗನ್ನೆ ತಾಳ್ದಾದಸರ ನಮಳ ಕಾರುಣ್ಯಮಂ ಬಂದುಪೊಕ್ಕೊ । ಲ್ದಿಸೆದಂಶುದ್ಧಾಂತದೊಳ್ಜಂಗಮಚಯ ಚರಣಾಂಭೋಜಪೂಜಾವಿತಂದ್ರಂ ॥೨೫॥

ಕಂ॥ ದಸರಯ್ಯನಮಳಚರಿತಮ । ನೊಸೆದಾವಂ ಕೇಳ್ವನಾವನೋದುವ ನಾವಂ ॥ ಪಸರಿಪ ನವನಗಜೇಶ । ಪ್ರಸಾದದಿಂಪಡೆವ ನಿಷ್ಟಸುಖಸಂಪದಮಂ .... ॥೨೬॥

ಲಲಿತಪದವೃತಂ ॥ ಪಾರ್ಥಿವಸಮರ್ಚಿತಚತುರ್ಥಮಹನೀಯಪುರುಷಾರ್ಥನಿಶ್ರಿತಸುತೀರ್ಥಪದಧೂತಾ । ನರ್ಥಮುದದಂಜಿತಸದರ್ಥಪರಮಾಗಮಪರಾರ್ಥಪರಿಸಾಲಸುಕೃತಾರ್ಥಜನಪಕ್ಷ ॥ ಪಾರ್ಥಪಟುರೋಸದಕದರ್ಥನಲಲಾಹಿತಸದಾರ್ಥಿತಗೆಸೋತ್ಸವಸದರ್ಥಿಜನತಾಸಂ । ಪ್ರಾರ್ಥಿತಸುರದ್ರುಪೂರಿಸಾರ್ಥನಿಗಮಸ್ತುತಸಮರ್ಥಿತಮಹಾವ್ರತಸಮರ್ಥಬಸವೇಶಾ ॥೭೭॥

ಚಾಮರವೃತ್ತಂ॥ ಚಿದಂಬರಸ್ವರೂಪಚಿತ್ತ ಜನ್ಮವಂದ್ಯೆಚಿನ್ಮಯೀ । ಕದಂಬನಾಟಕಾನಿವಾಸಿಕಾಳಿಕಾಲಭಂಜನೇ ॥ ಸದಂಬುಜಾಯತಾಕ್ಷಿಚಕ್ರಪಾಣಿಡಕ್ರಸೇವಿತೇ । ಮದಂಬೆರಕ್ಷಿಸೆನ್ನನಿಂದುಮೌಳಿಪತ್ನಿಪಾರ್ವತೀ ॥

ಗದ್ಯ॥ ಇದು ವಿನಮದಖಿಳಸುರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತರುಚಿನಿಚ ಯತರುಣಾತಪಪರಿಲಸಿತ ಪರಮ
ಶಿವಲಿಂಗ ಪಾದಾರವಿಂದಪರಾಗ ಭಸಿತ ಭಾಸುರಲಲಾಟ
ಪಟ್ಟಸರಸಜನಮಾನಿ ತೋಭಯಕವಿತಾವಿಶಾರದಶ್ರೀ
ಷಡಕ್ಷರದೇವಭಕ್ತಿವಿರಚಿತ ಶ್ರೀಮದ್ಬಸವರಾಜವಿ
ಜಯಮಹಾ ಪುರಾಣದೊಳ್ ದಸರಿದೇವ
ಕಥಾ ಭಿವರ್ಣನಂ ಷಡ್ವಿಂಶ
ತ್ಯಾಶ್ವಾಸಂ ಪರಿಸಮಾಪ್ತಂ

ಗುರುಭಕ್ತಾರ್ಯಕಥನಂ

ಶುಭಮಸ್ತು॥ ನಾಂದಿ॥ ಲಲಿತಪದವೃತ್ತ ॥ ಕಂಬುಕಳಹಂಸಶರದಂಬುಧರಹಾರವಿಧುಬಿಂಬವಿಶದಚ್ಛವಿವಿಡಂಬಕುಮಹಶ್ಕಾ । ಶಾಂಬರಜಗತ್ರಯಕುಟುಂಬಸುರಭೂಧರನಿತಂಬಚರಮಾಧವಕಳಂಬಶಿವಯುಕ್ತಾ ॥ ಸಾಂಬವರಣಾಗತಕದಂಬಪರಿಪಾಲನವಿಳಂಬರಹಿತಾ ಶ್ವತರಕಂಬಲಸುಕರ್ಣಾ । ಲಂಬಕ ಗಣೇಂದ್ರನಿಕು ರುಂಬಹಿತರಕ್ಷಿಸಘಡಂಬರ ಮಹಾಕುಧರಶಂಬಬಸವೇಶಾ ॥

ಲಲಿತಪದವೃತ್ತಂ ॥ ಸ್ವರ್ಭವನರಾಂಬುರುಹಗರ್ಭಮುಖವಿಶ್ರುತಹವಿರ್ಭುಗಿನವಂದಿತಯಜುರ್ಭವಸುಮಂತ್ರಾಂ । ತರ್ಭರಿತಚಂದ್ರಶಿತವಾರ್ಭದಮಳಚ್ಛವಿನವಪುರ್ಭಸಿತಭಾಸುರಚತುರ್ಭುಜವಿನುತ್ಯ ॥ ದುರ್ಭರಜಗದ್ಭರಣನಿರ್ಭ

ರಹೃತಾಸುರವುನರ್ಘವಹರಾದ್ರಿಪಥನುರ್ಭೂದಖಿಳೇಶಾ | ವಿರಭವತುನೂನ ಗುಣಸಿರ್ಭರಣವಕ್ತ್ರಮ್ಪಡಪೂರ್ಭವನರಕ್ಷಿಸಭವಾರ್ಭಕವೃಷೇಂದ್ರಾ ||

ಲಲಿತಪದವೃತ್ತಂ|| ತಾಮರಸಲೋಚನಪಿತಾಮಹವಸಿಷೇವ್ಯವಿತತಾ ಮಳಚರಿತ್ರಸತತಾನುಯವಿದೂರಾ | ತಾಮಸಜನಪ್ರಿಯನತಾಮರಮಹೀ ಜನ್ಮೃದುತಾಮಧುರಭಾಷಜನತಾಮುದವಿನೋದಾ || ಸಾಮಜಪಸಂಯುಕ್ತ ತರಸಾಮರಪರಿಸ್ತುತಸಸಾಮಹಿತಕಾರ್ಯಗುಹಸಾಮಜಮುಖಾಚಾರ್ಯ | ಕಾ ಮತರಣಪ್ರಿಯನಿ ಕಾಮಶುಭಶೀಲಜಯ ಕಾಮರಿಪುರೂಪ ಜಿತಕಾಮಬ ಸವೇಶಾ ....

ಕಂ|| ಶ್ರೀ ಭೂಧರೇಂದ್ರತನಯಾ | ಶೋಭಾವಹಕಲ್ಪವಲ್ಲರೀಸುರತ ರುಮ || ತ್ರೀಭಾಜನಾಂಬರನ್ನಾ | ಗಾಭರಣಂಪ್ರೊರೆಗೆಶಿಷ್ಯರಂಶಿವಲಿಂಗ||೧

ವ|| ಮತ್ತಮಲ್ಲಿ.

ಚಂ|| ವೃ|| ಗುರುಚರಣಾರುಣಾಂಬುಜಯುಗಸ್ಮರಣಸ್ಥಿರಚಿತ್ತನಾಲ ಸ | ದ್ಗುರುಕರುಣಾಕಟಾಕ್ಷರುಚಿಚಂದ್ರಮರೀಚಿಚಕೋರನಾತ್ಮವಿ || ದ್ಗುರುಪದಪದ್ಮಶೇಖರತಿರಂಗುರುವಾಕ್ಯಸುಧಾಸುಪಾನಜಾ | ತರುಚಿಗುರುಪ್ರಸಾದರಸಿಕಂಗುರುಲಿಂಗಸದಾಸಮರ್ಚಕಂ .... ||೨||

ಕಂ|| ಗುರುಭಕ್ತಿನಸಮರುನ್ಮಣಿ | ಗುರುಭಕ್ತಿಸುಧಾಸರೋಧಿಗುರು ಭಕ್ತಿಸುಖಾ || ಕರಮೂರ್ತಿರಂಜಿಸಿರ್ದಂ | ಗುರುಭಕ್ತಿಧುರೀಣನಮಮ ಗುರುಭಕ್ತ್ಯಾರ್ದ್ಯಂ .... ||೩||

ಕಂ|| ಗುರುಕರುಣಮೆಹರಣಂಗುರು| ಚರಣಮೆನಿಜಚಿತ್ತಹಸ್ತಿಗಾಲಾ ನಂತ || ದ್ಗುರುಭಜನಸುಖಮೆಮೋಕ್ಷ | ಸ್ಥಿರಸುಖಮಾಗಿರೆಪ್ರೊದಳ್ದುನಲ ವೇರಿರ್ದಂ .... ||೪||

ಕಂ|| ಅಧಿಕರಿಸಿನಂಬಿನಗುರೋ | ರಧಿಕಮೆನಿಪ್ಪಾಗಮೋಕ್ತಿಯುಂಗು ರುವಿಂಬೇ || ರಧಿಕಮಣಮಿಲ್ಲೆನುತೆಭ | ಕ್ತಿಧುರಂಧರನೊಲ್ದುಭಜಿಯಿಸಂ ಗುರುವರನಂ .... ||೫||

ಚಂ|| ವೃ|| ಗುರುಚರಣಾಬ್ಜರೇಣುಭಸಿತಂಗುರುನಾಮಮೆದಿವ್ಯಮಂ ತ್ರಮಾ | ಗುರುಭಜನಂನಿಜೇಷ್ಟಯಜನಂ ಗುರುಪಾದವೆ ಸರ್ವಸಂಪದೋ| ತ್ಕರಜನನಸ್ಥಳಂ ಗುರುನಿರೂಪಮೆಜೀವನಮಾಗೆಸಂತತಂ | ಗುರುಚರಣಾಂಬುಜದ್ವಯಮನರ್ಚಿಸುತಂಗುರುಭಕ್ತನೊಪ್ಪುಗುಂ ||೬||

ಚಂ|| ಪರಿಮಳವಾರಿಯಿಂಗುರುಪದಾಂಬುಜಮಂ ತೊಳೆದಷ್ಟಗಂ
ಧದಿಂ | ಪೊರೆದುಸುಗಂಧಪುಷ್ಪಚಯಮಂ ಪಡೆದೇರಿಸಿ ಧೂಪದೀಪಭಾ ||
ಸುರಮಘುರಾನ್ನವೀಟಿಕೆಗಳಿಂನಲಿದರ್ಚಿಸಿಸಾತ್ವಿಕಂಪೊದ | ಳ್ತಿರೆಪೊಗಳುತ್ತೆ
ಕೂರ್ತಿರಗಿಮುತ್ತೆರಗುತ್ತೆಮನೋನುರಾಗದಿಂ ||೭||

ಕಂ|| ನೆನೆನೆನೆದುಗುರುಮಹತ್ವಮ | ನನುನಯದಿಂನೋಡಿನೋಡಿತ
ನ್ಮೂರ್ತಿಯನೊ || ಯ್ಯನೆಮಣಿದುಮಣಿದುತಕ್ಕೀ | ರ್ತನಮುಂಬಗೆದಂದು
ನೆಗಳ್ದನಾಗುರುಭಕ್ತಂ .... ||೮||

ಚಂ|| ವೃ|| ಶಿವಮಯಭಾವ ಶಿಷ್ಯಜನಪಾಶ ನಿಕೃಂತನ ಶಿಷ್ಟವಂದ್ಯ
ಶಾಂ | ಭವಮತ ಕಲ್ಪಭೂಜಶರಣಾಗತರಕ್ಷಕಶಾಂತಶರ್ವರೀ || ಧವರುಚಿ
ಕೀರ್ತಿಭಾಸುರ ಶರಣ್ಯವರೇಣ್ಯಶಶಾಂಕಮೌಳಿ ಭ | ಕ್ತವಿಸರಭಾವನೀಯ
ಜಯದೇಶಿಕಶೇಖರ ಸದ್ಗುಣಾಕರ .... ||೯||

ಮ|| ಸ್ರ|| ನಿರವದ್ಯಂ ನಿಷ್ಪ್ರಪಂಚಂ ನಿರವಧಿಮಹಿಮಂನಿರ್ಗುಣಂ
ನಿಷ್ಕಳಂಕಂ | ನಿರಪಾಯಂಚಿನ್ಮಯಂತಾನೆನಿಪ ಪರಶಿವಂನೀನೆಕಾರುಣ್ಯದಿಂ
ದಂ||ಗುರುರೂಪಂತಾಳ್ದುತೊಳ್ದೈಭವಮನನುಳಲಿಂಗಾಂಗಸಂಯೋಗಮಂ
ಬಿ | ತ್ತರಿಸುತ್ತಂಶಿಷ್ಯಪಾಶಪ್ರತತಿಯ ಪರಿದೈಧಾತ್ರಿಯೊಳ್ದೇಶಿಕೇಂದ್ರಂ ||

ಮ|| ಒದವಿರ್ದಾಗಮಮಸ್ತಕಪ್ರತತಿಲಕ್ಷ್ಮೀಶಾಜರುಂ ಕಾಣದ | ಗ್ಗ
ದಚಿನ್ಮಾತ್ರಮೆನಿಪ್ಪ ದಿವ್ಯನಿಜಲಿಂಗಾಕಾರಮಂ ಕಾಣಿಸು || ತ್ತದ ಸುದ್ಯದ್ವ
ಪುರೀಂದ್ರಿಯಾದಿಮುಖ ಸಮ್ಯಗ್ವ್ಯಾಪ್ತಮಂಮಾಡಿಪೂ | ರ್ಣದಯಾಸಾಗ
ರಸಾರ್ಚದ್ವೈವಿಮಳಜೀವನ್ಮುಕ್ತಿಯಂಭಕ್ತರೊಳ್ ||೧೧||

ಮ|| ಸ್ರ|| ಪರಪಂಚಬ್ರಹ್ಮವೈದುಂಕಲೆ ಮಿಸುಪಮಹಾಪಂಚಸಾ
ದಾಖ್ಯ ಪಂಚಾ | ಮರವೃಂದಂ ಪಂಚತನ್ಮಾತ್ರೆಗಳಮರ್ದಲಸ ತ್ಪಂಚಭೂ
ತಂಪ್ರಪಂಚೋ || ಧರಪಂಚೀಭೂತ ತತ್ವಪ್ರತತಿಯೆನಿಪಿವಂತಾಳ್ದು ಪಂ
ಪಾಂತಪಂಚಾಕ್ಷರಮಂದೇಹೇಂದ್ರಿಯಾಸುಸ್ಥಿತಮನೆಸಗಿದೈದೇಶಿಕೇಂದ್ರಾ
ವತಂಸಾ .... ||೧೨||

ಚಂ|| ನಿಯತದಿನಂಗಮಿಲ್ಲದಸದಾಶಿವನಂಶಿವಲಿಂಗಮೂರ್ತಿಯೊ | ಳ್ನಿ
ಯಮಿಸಿ ಸಾರ್ಚಸರ್ವಗತನಂ ನತಹೃದ್ಗತನಂ ನೆಗಳ್ಚಿತಾ || ರಯೆ ಜಗದಾ
ತ್ಮನಂ ಮಿಸುಪಭಕ್ತನಿಜಾತ್ಮನ ನೊಲ್ದುಮಾಡಿಚಿ | ನ್ಮಯನನೊಡರ್ಚಿಭಕ್ತ
ಮಯನಂ ಪೆಸರ್ವೆತ್ತೆಯುದಾತ್ತವೈಭವಾ ||೧೩||

ಕಂ॥ ಮಾಣದೆವಿಶ್ವೇಶ್ವರನಂ । ಪ್ರಾಣೇಶ್ವರನೆನಿಸಿ ನೆಗಳ್ದೆ ಕರಪಂಕಜ
ದೊ ॥ ಳ್ಕಾಣಿಸಿದೆಜೊಮ್ಮಮನ್ನಿಂ । ಮಾಣತಿಯೋಳ್ಸಂದುಬಾಳ್ವನಗಜಾ
ರಮಣಂ .... ॥೧೪॥

ಮ॥ ಸ್ರ॥ ವೃ॥ ಆದರಿಂ ನೀನೇಸ್ವತಂತ್ರಂ ನಿರುಪಮಮಹಿಮಂ ಸ
ಚ್ಚಿದಾನಂದರೂಪಂ । ವಿದಿತಂತತ್ವಾದಿಬೀಜಂಗುರುಪರಗುರುದೇವಾತ್ಪರಂ
ನಾಸ್ತಿಯೆಂಬು ॥ ಕ್ತಿಥಿಟಂ ನಿನ್ನತ್ತಣಿಂದಂ ಪರಮಿನಿತುಮಣಂ ತೋರದೀ
ವಿಶ್ವಮೆಲ್ಲಂ । ತ್ವದಧೀನಂಲಿಂಗಮುಂ ಜಂಗಮುಮು ಮತುಳಿತಾಚಾರ್ಯನುಂ
ನೀನೆದೇವಾ .... ॥೧೫॥

ಮ॥ ಮದಮುಂತೂಳ್ದು ಮನೋಜ ನಂತುಳಿದು ಮಾಯಾಮೋಹ
ಮುಂ ನೂಂಕಿಪೆ । ಚಿದಹಂಕಾರಮ ನಿಕ್ಕಿದುರ್ವ್ಯಸನಮುಂ ನುಗ್ಗೊತ್ತಿರಾ
ಗಾದಿಯುಂ॥ ಪದೆದಂಗೇಂದ್ರಿಯವೃತ್ತಿಯುಂಪರಿದುಪಂಚಕ್ಲೇಶಮುಂ ಕಿಳ್ತುಚಿ
ತ್ಪದಮುಂ ಸಾರ್ಚುಗುಮಲ್ತೆ ನಿನ್ನಪಚನಂಪ್ರತ್ಯಕ್ಷಭಾಳೇಕ್ಷಣಾ ॥೧೬॥

ಮ॥ ಕಡೆಗಣ್ಬಾಮದುಘಂ ಕರಂದಿವಿಜಭೂಜಂ ನಿನ್ನಚೆಲ್ವಾಳ್ದಮೆ ।
ಲ್ಲಡಿಚಿಂತಾಮಣಿವಾಣಿಸರ್ವಸುಪದಾರ್ಥಜ್ಯೋತಿಯೆಂದಳ್ಕರಿಂ ॥ ನುಡಿವ
ರ್ಕೋವಿದರಂತದಿರ್ಕೆ ಭವಮುಂಬೇರ್ಕೆಯ್ವ ಜೀವತ್ವಮುಂ । ಕೆಡಿಪಾನಂದಮ
ನೀವಮುಕ್ತಿಗೊಡುವಂದಮ್ಮೋಣಪರ್ಗಿಕ್ಕುಮೇ ॥೧೭॥

ಕಂ॥ ಅನಿಮಿತ್ತಂಬಂದುಮನುಮುನಿ। ಜನಕ್ಕಗೋಚರಮೆನಿಪ್ಪಲಿಂಗ
ಮನೆನ್ನಿಂ ॥ ತನುಮನದೊಳ್ಬಾವದೊಳಾ । ತ್ಮನೊಳನ್ನೆಲಿಗೊಳಿಸಿಪ್ಪೊರೆದೆ
ನೀಂಘನಮಹಿಮ .... ॥೧೮॥

ವ॥ ಎಂದು ಕೂರ್ಮಿಯಿಂಕೊಂಡಾಡಿ ದಂಡಪ್ರಣಾಮುಂಗೆಯ್ದು ಚರ
ಣಮುಂಶಿರದೊಳ್ಪೊತ್ತು ಭಯಭಕ್ತಿವೆರಸು ಕಿಂಕರತೆಯನೊಪ್ಪುಗೆಯ್ದು ಗು
ರುಭಕ್ತಂ ಗುರುಕೃಪೆಯಂಪಡೆದು ಜಡಭಾವಮುಂನೀಗಿ ವ್ಮಡಭಾವಮನಳ
ವಟ್ಟು ಗುರುದಕ್ಷಿಣೆಗೆ ಶರೀರಮರ್ಥಪ್ರಾಣಾಂಶ್ಚ ಸದ್ಗುರುಭ್ಯೋನ್ನಿವೇದ
ಯೇತ್ತೆಂಬ ವಾಕ್ಯಾನುಸಾರದಿಂ ನಿಜಾಂಗವ ಸುಪ್ರಾಣಂಗಳಂ ನಿವೇದಿಸಿ.

ಮ ॥ ಸ್ರ ॥ ದುರಿತಧ್ವಾಂತಾರ್ಕಬಿಂಬಂ ಭವಜಳಧರಜಂಝಾನಿಲಂ
ಮೋಹಧಾತ್ರೀ । ಧರಶಂಬಂ ಶೋಕಕಾಕೋದರಖಗಪತಿತಾಪಾಬ್ಧಿಕುಂ
ಭೋದ್ಭವಂ ದು ॥ ಸ್ತರಮಾಯಾಭೂರುಹಪ್ರಸ್ಫುರಿತಪರಶುಕಾಮೇಭ

ಕಂಠೀರವನಂಭೀ | ಕರಕಾಲಾರಣ್ಯದಾವಂ ಗುರುಪದವಿಳಸದ್ಭಕ್ತಿಶಕ್ತಿಪ್ರ
ಯುಕ್ತಂ .... ||೧೯||

ಚಂ|| ಗುರುಪದಭಕ್ತಿದೇವತರುಗೀಶ್ವರಸತ್ಕೃಪೆಮೂಲಮಲ್ಲಸ | ಚ್ಚ
ರಚರಣಾರ್ಚನಾಭಿರತಿಪಲ್ಲವಮಾಗಮನಿಷ್ಠೆಶಾಖೆಶಾಂ || ತಿರಸಮುರಂದಬೋ
ಧಮುಲರನ್ವಿತಮಾಗಿರೆಲಿಂಗಸಂಗಸೌ | ಖ್ಯರುಚಿಸುಮೋಕ್ಷದಿವ್ಯಫಲಮುಪ್ಪು
ದುಭೂತಳಾಗ್ರದೊಳ್ ——— ||೨೦||

ಕಂ|| ಕಡಿದೊಡೆ ದುರಿತವ್ರಜಮಂ | ಸುಡುವೊಡೆ ಭವವನಮ ನಭ
ವಚರಣಾಂಬುಜಮಂ || ಪಿಡಿವೊಡೆ ಸಂಪದಮುಕ್ತಿಯ | ಪಡೆವೊಡೆ ಗುರು
ಭಕ್ತಿಮುಖ್ಯಕಾರಣಮಲ್ತೆ ... ||೨೧||

ಕಂ|| ಗುರುಭಕ್ತಿಸರ್ವರುಜೆಯಂ | ಪರಿಹರಿಸುಗುಮಾಗುಮೈಹಿಕಾ
ಮುಷ್ಮಿಕಭಾ || ಸುರಸುಖಮನಿಷ್ಟಮನೊ | ತ್ತರಿಸುಗು ಮಭವಾಂಘ್ರಿಭಕ್ತಿ
ಯಂವರ್ಧಿಸುಗುಂ . ||೨೨||

ಕಂ|| ಭವರೋಗಕ್ಕಿದುಭೇಷಜ | ಮವಿಕಲಶಿವಪದಸುಸೌಧಕಿದು
ಸೋಪಾನಂ || ಪ್ರವಿಮಳಪರಮಜ್ಞಾನಾ | ರ್ಣವಕಿದುಭಾವಿಪೊಡೆ ಪೂರ್ಣ
ಹಿಮಕರಕಿರಣಂ .... ||೨೩||

ಕಂ|| ಗುರುಚರಣಭಕ್ತಿಯಿಲ್ಲದ | ಹರಪೂಜೆನಿರರ್ಥಮೆಂಬುದಾಗಮ
ವಚನಂ || ಹರಭಕ್ತಗೆಚರಭಕ್ತಿಗೆ | ಗುರುಭಕ್ತಿಯೆಮೂಲಕಾರಣಂಧಾರು
ಣಿಯೊಳ್ ||೨೪||

ಕಂ|| ಗುರುವಿಂಗೊಡಲಂ ಲಿಂಗಕೆ | ಹರಣಮ ನಾಜಂಗಮಕ್ಕೆನಿರ್ವಂ
ಚನೆಸಂ॥ದಿರೆಧನಮನಿತ್ತುಸೇವಿಪ|ವರಭಕ್ತಂತತ್ಪ್ರಸಾದಸಿದ್ಧಿಯನಾಳ್ಗಂ||

ಕಂ|| ಹರಮೂರ್ತಿತ್ರಯಮೆನಿಸುವ | ಗುರುಚರಲಿಂಗತ್ರಯಕ್ಕೆತನು
ವಂಮನಮಂ || ಹರಣಮನೀಯದೆವಂಚಿಸೆ | ಸರಿವುದುಶಿವಲಿಂಗಧಾರಣವ್ರ
ತಭಾಗ್ಯಂ .. .... ||೨೬||

ಕಂ|| ಕಪಟಗೆಕುಟಲಂಗಾಶಾ | ಚಪಲಂಗೆಖಲಂಗೆಮೋಹಶೀಲಂ
ಗೆವೃಥಾ || ಕುಪಿತಂಗೆಡಂಬಕಂಗತಿ | ಕೃಪಣಂಗೀತ್ರಿವಿಧಭಕ್ತಿಕೈಸಾ
ರ್ದಪುದೆ || .... ||೨೭||

ವ|| ಮತ್ತಂ||

ಮ|| ಸ್ರ|| ವೃ|| ದುರುಳಂಗಾಚಾರಶೂನ್ಯಂಗಧಿಕಮದನಿಯುಕ್ತಂ

ಗೆಧೂರ್ತಂಗೆದುರ್ಬೋ । ಧರುಚಿಸ್ವಾಂತಂಗೆಹಿಂಸಾಕರಣಮತಿಗೆವಿಶ್ವಾಸ ಹೀನಂಗೆದುಷ್ಕರ್ಮ ॥ ಹಿತಂಗಜ್ಞಂಗೆಸಂದೇಹಿಗೆಪರಮತಶೀಲಂಗೆಪಾಷಂಡಿ ಗೆಂದುಂ । ಚರಲಿಂಗಾಚಾರ್ಯರ್ಭಕ್ತಿತ್ರಯಮುಳವಡದೆಂದೆಂಬರೀಶಾಗಮ ಜ್ಞರ್ ॥ .... ॥೨೮॥

ಮ॥ ಸ್ರ॥ ವಿಮಳಸ್ವಾಂತಂಗೆ ವಿದ್ಯಾವಿನಯನಯಸದಾಚಾರಯು ಕ್ತಂಗೆ ಭಕ್ತೋ । ತ್ತಮಸಂಸರ್ಗಾಭಿಯುಕ್ತಂ ಗಭವಪದದಿದೃಕ್ಷಾಪರಂ ಗಸ್ವಸಾರ್ಗ ॥ ಭ್ರಮದೂರಂಗಪ್ರಮತ್ತಂಗಚಳಮತಿಗಹಂಕಾರಮುಕ್ತಂ ಗೆಶೈವಾ । ಗಮಸಿದ್ಧಂ ಭಕ್ತಿಲಿಂಗತ್ರಯದೊಳೊಗೆಯುದೀಶಪ್ರಸಾದಾ ಭಿಜಾತಂ ॥ .... ॥೨೯॥

ಕಂ॥ ಕನಸಿನಸಿರಿಯುವೊಲಳಿವೀ । ತನುಧನವಂಮನವನಿತ್ತುಗುರು ಚರಲಿಂಗ ॥ ಕ್ಕನುನಯದಿನೆಂದುಮಳಿಯದ । ಘನಶಿವಪದಸಿದ್ಧಿವಡೆಯ ಲೊಲ್ವನೆಜಾಣಂ ॥ .... ॥೩೦॥

ಕ॥ ಶತಕೋಟಿವರುಷಕೃತಘೋ । ರತರತಪ್ತೋಸ್ವಂದವೊಂದೆದಿನ ಮೆಸೆಪಸನು ॥ ನ್ನತಗುರುಚರಹರಭಕ್ತಿಯ । ಚತುರ್ಥಭಾಗಕ್ಕಮಾದೊ ಡಂಪಾಸಟಿಯೆ ॥ .... ॥೩೧॥

ವ॥ ಎಂಬ ಶಿವಾಗಮವಾಕ್ಯಮನವಧರಿಸಿ ॥

ಕಂ॥ ಅದರಿಂಗುರುಭಕ್ತಂಗುರು । ಪದಭಕ್ತಿಯನಾಳ್ದ ಮುಖ್ಯಮೆ ನೆಲಿಂಗಕಳಾ ॥ ಸ್ಪದಜಂಗಮಪದಭಕ್ತಿಯ । ನೊಪವಿಸುತಂತನುಮನೋ ಧನಾರ್ಪಣದಿಂದಂ ॥ .... ॥೩೨॥

ವ॥ ಮತ್ತಂ.

ಮ॥ ವೃ॥ ಗುರುಸೇವಾರತಿಯೇತಪಂಗುರುಪದಾಬ್ಜಧ್ಯಾನಮೇಧ್ಯಾ ನಮಾ। ಗುರುನಾಮಸ್ಮೃತಿಯೇಜಪಂಗುರುಪದಾಧೀನತ್ವಮೇಸದ್ವ್ರತಂ॥ ಗುರುತತ್ವಪ್ರಮೆಯೇನಿಜಪ್ರಮೆಗುರೂಕ್ತಾಚಾರಮೇಶೀಲಮಾ । ಗುರುನಿ ಷ್ಠಾವಿಧಿಯೇ ವಿಧಾನಮೆನೆಕಣ್ಗೊಪ್ಪಿರ್ದನತ್ಯೂರ್ಜಿತಂ ॥ ॥೩೩॥

ವ॥ ಇಂತು ಜಗಜ್ಜನ ನತಚರಿತ್ರಂ ಗುರುಭಕ್ತಿಭಾವದಿ ನೊಪ್ಪುತ್ತ ಮಿರ್ದೊಂದುದಿನಂ ಗುರುಸಮರ್ಚನೆ ಗರಲ್ದರಲೆಂದು ಕುಸುಮ ಕರಂಡಕ ಮಂಕೊಂಡು ಬೆಳಗುಜಾವದೊಳಿರ್ದು ಜವದಿಂನಡೆತರ್ಪಾಗಳಾಗುರು ಚರ ಣರಕ್ಷೆಗಳಂನಿಜಾಂಘ್ರಿಗಳ್ಗೊಂಕೆ ಕಂಡಳ್ಕಿಬಳ್ಕಿ ಮನಂಗುಂದಿನೊಂದು ॥

ಕಂ|| ಅಕಟಕಟಗುರುವರಪಾ | ದುಕೆಯುಂಟದುದೆನ್ನಬೆಂದಕಾಲ್ಪೆ
ನೆತರಪಾ || ತಕಮಾದುದೆನಗೆಮಿಗೆದೇ | ಶಿಕಚರಣದ್ರೋಹಿಯೆನ್ನವೊಲ್ಪೆ
ರನಾವಂ || .... ||೩೪||

ವ|| ಪಾದುಕಾಸನಶಯ್ಯಾದಿಗುರುಣಾಯುದಧಿಷ್ಠಿತಂ, ನಸ್ಪೃಶೇ
ದಂಘ್ರಿಣಾಯೆಂಬ ವಚನಮುಂಟಪ್ಪುದರಿಂದಿಂತೆನಗಾದ ದುಷ್ಕೃತಕ್ಕೆ
ನಿಷ್ಕೃತಿಯಾವುದೆಂದು ತನ್ನೊಳಾಳೋಚಿಸಿ ||

ಚ|| ವೃ|| ಕಡಿಕಡಿದೀಪದದ್ವಯಮನುದ್ಗತರಕ್ತರಸಾಜ್ಯದಿಂದೆಸಂ|
ಗಡಿಸಿದಮಾಂಸಮೆಂಬಪೊಸಪಿಂಡದಿಖಂಡಿಸಿದಸ್ಥಿಯೆಂಬಪೆಂ || ಪಡರ್ದಸ
ಮಿತ್ಸಮೂಹದಿಗುರೂತ್ತಮನಾಮಮೆನಿಪ್ಪಮಂತ್ರದಿಂ | ದೊಡನೆಪರಪ್ರ
ಕೋಪಶಿಖಿಗಾಹುತಿಕೊಟ್ಟಪೆನೆಂದು ಕೂರ್ಪಿನಿಂ || ||೩೫||

ಕಂ|| ಕರವಾಳಂಜಡಿಯುತೆತಂ | ನೆರಡುಂಕಾಲ್ಗಳನಡುರ್ತ್ತುಂಡಿ
ಸಿರುಧಿರೋ || ತ್ಕರಮೆಚ್ಚುಪಾಯ್ವುತಿರೆಗುರು | ವರಶರಣೆಂದಾರ್ದ್ದುಕೆಲ
ದೊಳಿರಿಸಿದನಾಗಳ್ || .... ||೩೬||

ಕಂ|| ವಿದಿತಗುರುಭಕ್ತಿದೇವತೆ | ಗಿದುಬಲಿಗೆವರ್ದ್ದರುಣನಳಿನಮೆಂ
ಬಂತಿರೆತ || ತ್ಪದಯುಗಳಮುಮುಳಗುರುಚರ | ಣದಜ್ಞಾನಂಬಿಡಿದುಭಕ್ತ
ನೊಪ್ಪುತ್ತಿರ್ದ್ದಂ|| .... ||೩೭||

ವ|| ಆಸಮಯದೊಳಮರಗುಂಡಮಲ್ಲಿನಾಥ ಪಂಡಿತರೆಂಬ ತದ್ಗು
ರುಗಳ್ ಶಿಷ್ಯನೆಸಗಿದದ್ಭುತವಾರ್ತೆಯುಮನಾಕರ್ಣಿಸಿ ಕರುಣಾತಿರೇಕದಿಂ
ಶರಣಗಣಸಮೇತ ಪೂತಾಣಕ್ಕೆ ಗಳಿಲನೆಬಿಜಯಂ ಗೈವಿನಂ ಗುರುಭಕ್ತ
ಯ್ಯಂ ಕಟ್ಟದಿರೊಳ್ಕಂಡು ನಯವಿನಯಸಂಭ್ರಮಂಬೆರಸು ಭಯಭಕ್ತಿ
ಪಾರವಶ್ಯದಿ ನಿರ್ದಿನಿಸಾನುಂ ಬೇಗದಿಸೆಳ್ತತ್ತು ಸಾಂಷ್ಟಾಂಗಮೆರಗಲೇಳಲು
ಜ್ಜುಗಿಸುತಳವಿಲ್ಲದೆ ತಲ್ಲಣಿಪಾಗಳ್ ||

ಅರಿದೆಂದುಶರಣಗೆಣಮು | ಚ್ಚರಿವಡೆತರುಣಾರುಣಾಂಶುವಿಕಸಿತವಿಲ
ಸ || ತ್ತರುಣಾರುಣನಳಿನಯುಗೆ | ಸ್ಫುರಿತಂಪದಯುಗಳಮೊಗೆದದೇಂ
ರಂಜಿಸಿತೋ || .... ||೩೮||

ಕಂ|| ಜಡಭವಪರಿಭವಕರನಿ | ರ್ಜಡಭವನಿಜಮೂರ್ತ್ತಿಯೆನಿಪಗುರು
ವಿನಕೃಪೆಯಿಂ || ದೊಡೆದೊಗೆದಡಿದಾವರೆಯದು | ಜಡಭವಮುಂನಗುವ
ವೊಲ್ನಖದ್ಯುತಿಮೆಱೆಗುಂ || .... ||೩೯||

ಕಂ ‖ ತಳಿರುಡಿಯೆಮೂಡುಗುಂಪೊಸ | ತಳಿರಿಳೆಯೊಳ್ಪೊಗಳುಡಿ ಯೆಮೂಡುಗುಮೆನಿರಾ | ಕಳಸುಲರಿಪನಡಿದಾವರೆ | ಮೊಳತುದುಮುನ್ನ ಡಿಯೆತನ್ನದಿದುಚಿತ್ರತರಂ ‖ .... ‖೪೦‖

ಕಂ‖ ಅಗಜಾಧಿಪಂಗೆದಾನಂ | ಸೊಗಯಿಸುಗುಮೆಕುಣಿವಭೃಂಗಿ ಗೊಂದಡಿಯಿತ್ತಂ ‖ ಮಿಗೆಗುರುಕುಂಜರನತಿದಾ | ನಗುಣಂಭಕ್ತಂಗೆಪಾ ದಯುಗಳಮನಿತ್ತಂ ‖ .... ‖೪೧‖

ವ ‖ ಎಂದಲ್ಲಿಬಲ್ಲರೆಲ್ಲಂ ಸಲ್ಲೀಲೆಯಿಂದಂನುತಿಸುತ್ತಿರ್ಪಾಗಳ್ ‖

ಕಂ ‖ ಗುರುಚರಣರಕ್ಷೆಯುನ್ನಿಜ | ಶಿರದೊಳ್ಮಿಗೆಪೊತ್ತುಪೊಣ್ಮಿದಾ ನಂದದಿತ ‖ ಚ್ಚರಣನಳಿನಕ್ಕೆಮಣಿದಾ | ದರದಿಂಪೊಗಳುತ್ತಮಿರ್ದನಾಗು ರುಭಕ್ತಂ ‖ .... ‖೪೨‖

ವ ‖ ಆಸಮಯದೊಳ್ ಶರಣಗಣಂಕಂಡು ಕಣ್ಬುಂಬಿನೋಡಿ ಮು ದಂಬಡೆದು ‖

ಚ‖ ವೃ‖ ಎಲೆಗುರುಭಕ್ತನಿನ್ನಗುರುಭಕ್ತಿಸಮುಜ್ವಲವೃತ್ತಿಜಾತನಿ | ಶ್ಚಲಿತಮಹತ್ವಕೀರ್ತಿಯಿದು ವಿಚಿತ್ರಮೆದೂರಮದಲ್ತುಮೊಸ್ಟೆಭೂ ‖ ಲಲಿತಜ ನೌಘಮೆಲ್ಲರಿಯೆನೀಂಸೆಗಳ್ದದ್ಭುತಕಾರ್ಯಮುಂಧರಾ | ತಳದೊಳಿಕಂಡುಬಲ್ಲಿ ವಣಮೆಂತೆನೆನಿನ್ನಯದೇಶಿಕೋತ್ತಮಂ ‖ .... ‖೪೩‖

ಚಂ ‖ ಗುರುಪರತಂತ್ರತಾಸ್ಥಿತಿಗೆನಿನ್ನಯಲಬ್ಧಗುರುಪ್ರಸಾದಭಾ | ಸುರತೆಗಸೂಯೆಗೊಳ್ವನಿಜಶಿಷ್ಯಕದಂಬಕೆನಿನ್ನನನ್ಯಸಾ ‖ ಧ್ಯಕೆಚಿರಭಕ್ತಿ ಭಾವದಳವಂಮಿಗೆಕಾಣಿಸಲೊಲ್ದುಮೂರ್ತಿಗೊಂ ‖ ಡಿರುತೆಸುತಲ್ಪದೊಳ್ ಕೆಳಗೆತನ್ನಕೆಲಂಬಿಡಿದಿರ್ದಶಿಷ್ಯರಂ ‖ ... ‖೪೪‖

ಮ ‖ ಸ್ರ ‖ ಕರೆದಾಗಳ್ ಮಂಚದೊಳ್ಕುಳ್ಳಿರಿಮೆನೆಸಗುತಂಬೆಕ್ಕ ಸಂಬಟ್ಟುತಾಮೋ | ರ್ವರನೋರ್ವನೋಡಿಮದ್ದೇಶಿಕನಿರೆಕೆಳಗಾವೆಂತುಕು ಳ್ಳಿರ್ಪವೀಭಾ‖ ಸುರಮಂಚಸ್ಥಾನದೊಳ್ದುರ್ಘಟಮತಿಶಯದೋಷಾವಹಂ ತಾನಿದೆಂದೆ | ಲ್ಲರುಮಾಮಾತಂಸಮುಲ್ಲಂಘಿಸೆನಸುನಗುತಂದೇಶಿಕಂನೋ ಡುತಾಗಳ್ ‖ .... ‖೪೫‖

ಮ‖ ಸ್ರ‖ ವಿನಯಂಬೆತ್ತಾತ್ಮಪಾದಾಂಬುಜಮನೊಸಗೆಯಿಂಪೂಜಿ ಸುತ್ತಿರ್ದನಿನ್ನಂ | ಮನವೊಲ್ದಾರೋಹಿಸೈಮಂಚಮಂಭನೆಮಣಿದಾಜ್ಞೆ ಯಂಪೊತ್ತುನೀಂ ಭೋಂ ‖ ಕನೆಪರ್ಯಂಕಾಗ್ರಮಂ ಸದ್ಗುರುಶರಣೆನುತಂ

ಪತ್ತಿದೈವಮತ್ತಮಾದು । ರ್ತನರೆಲ್ಲರ್ಕಂಡುಬದ್ಧಭ್ರುಕುಟಿಘಟಿತರಕ್ತೇಕ್ಷಣ ಕರ್ಾಯ್ದಿನಿಂದ .... ॥೪೭॥

ಮ॥ ಸ್ರ॥ ಕಡುಧೂರ್ತಂಸೋರ್ಕಿನಿಂದಳ್ಕದೆನಿಜಗುರುಸಾನ್ನಿಧ್ಯದೊಳ್ತಂನಿರೂಪಂ । ಬಡೆದೆಂಮೇಣಾನೆನುತ್ತಂಕೆಳಗೆಪಿರಿಯರಾವಿರ್ಪುದನ್ನೋಡದುರ್ಬು ॥ ತ್ತೊಡನೀಮಂಚಾಗ್ರಮಂತಾನಡರ್ದನಿದುವಲಂತಕ್ಕುದೇಚಿತ್ರಮನ್ನೋ। ಳ್ತೊಡೆದೇವಂಪೇಳ್ದೊಡಾವೇನಡರ್ದೆವೆಗುರುಪರ್ಯಂಕಮಂಭೀತಿಯಿಂದಂ .... ॥೪೭॥

ಕಂ॥ ಸರಸನವಗಂಧಕುಸುಮೋ । ತ್ಕರಮಿರೆಯುಂ ಕನಕದರಲ ನೊಲ್ದಂತೆ ಮಹೇ ॥ ಶ್ವರನೀಧೂರ್ತನನೊಲ್ದಂ । ಗುರುವಿರೆ ಯುಂಶಿಷ್ಯರ ಮಳಗುಣಮಣಿಭರಣರ್ .... ॥೪೮॥

ಕಂ॥ ಗುರುಶಿಷ್ಯಮಾರ್ಗವರ್ತನ । ಮಿರದೆ ಕುಮಾರ್ಗದೊಳೆನಡೆಯೆ ದೇವತ್ವಮನೊಂ ॥ ದೊರಕೊಳ್ಗುಮೆ ಪರಿಸಡುಗುಮೆ । ವರಭಾವಂ ವಿಬುಧತತಿಗೆವಿಶ್ವಂಭರೆಯೊಳ್ .. ॥೪೯॥

ಕಂ॥ ಪಿರಿಯುಶಿವಸೋದರರ್ಕ್ಕ । ಳ್ಪಿರಿನಡರಲ್ಕಳ್ಕಿಧಾರ್ಯಪರ್ಯಂಕಮನೀ ॥ ದುರುಳನಿರದಡರ್ದನಿವನಿಂ । ಗುರುಚರಣದ್ರೋಹಿಯಾವನೊಪೆರನಿಳೆಯೊಳ್ .... ॥೫೦॥

ಕಂ॥ಇವನತಲೆಗಡಿದುರುಳ್ಚುವೆ । ವವನಿಯೊಳೆಂದಣ್ಮಿಗಳವುನರಕಳತಳಮಂ ॥ ಪ್ರವಿಮಳಮತಿ ದೇಶಿಕವುಂ । ಗವನೋಹೋಯೆಂದುನಿಲಿಸಿ ನಸುನಗುತಾಗಳ್ .... ॥೫೧॥

ಮ॥ ಸ್ರ॥ ವೃ॥ ಇಳಿಯಲ್ವೇಳ್ದಲ್ಲಿ ನಿನ್ನಂಜವದಿನಿಳುಪಿಮಂಚಾಗ್ರದಿಂ ಮುಂದೆಶಂಭೂ । ಜ್ವಳರೂಪಂ ಶೂಲಮೊಂದುಂನಡಿಸುತೆಲೆಗುರುದ್ರೋಹಿಯಂತಿರ್ಕ್ಕನಿವ್ವಾರ್ ॥ ಕುಳರಾಚಾರ್ಯಾಂಘ್ರಿಭಕ್ತಿಪ್ರವಣಮತಿಗಳೊಲ್ದೇರಿ ದೈನೀಮಿದಂನಿ । ರ್ಮಳಚಿತ್ತರ್ನ್ನೋಳ್ಪೆನಾನಿಮ್ಮಯಪೃಥತೆಯನೆಂದಾಡಿದಂ ದೇಶಿಕೇಂದ್ರಂ .... ॥೫೨॥

ಮ॥ ಸ್ರ॥ ಎನೆಕೇಳ್ದಾಚಾರ್ಯನಂಘ್ರಿದ್ವಯಕೆಮಣಿದಿದೇಂವೇಳ್ವಿರೋವೋಘ್ರೊಮುನ್ನೊ । ರ್ಮನಿತಾಂತಂ ಮಂಚಮೇರಲ್ಬೆಸಸಿದಿರಕಟಂದೋಲ್ಮೆಶೂಲಾಗ್ರಮಂಭೋಂ ॥ ಕನೆಪತ್ತಲ್ವೇಳ್ದನೀವಾಗ್ರಹಿಸಿದಪಿರಿದಕ್ಕಾರ್ಪೆ

ವೇಮಂಚಮೇರಿ । ರ್ದಸನೀಶೂಲಾಗ್ರಮಂಪತ್ತಿಸುತೆಬೆಸಸೆತಾಂಪತ್ತುಗು
ವ್ಮಾಣದೀಗಳ್ ——— ॥೫೩॥

ಕಂ ॥ ವಿದಿತಗುರುವಾಕ್ಯಮವಿಮ್ಮಾ । ರದಭಕ್ತಂಮುನ್ನಮಳ್ಕದಾ
ಮಂಚಮನೇ,॥ ರಿದನಲ್ತೆಬಸಿದಶೂಲಮ । ನಿದನಿಂದೇರಲ್ಕೆಬೆಸಸೆಪರಸಾ
ರ್ದಪನೆ .... ॥೫೪॥

ಕಂ॥ ಕಾಣಮನೆಕೊಂಡುದಕೆಕಡಿ । ಯಾಣಂತಾನುಚಿತಮೆಂಬಗಾ
ಡೆಯತೆರದಿಂ ॥ ಮಾಣದೆಮಂಚಮನೇರಿದ । ಜಾಣಂಗಿದುಯುಕ್ತಮಲ್ತೆ
ಶೂಲಾರೋಹಂ ——— ॥೫೫॥

ವ॥ ಎಂದವರ್ನುಡಿದು ಪೆರಸಾರೆಗುರುಪರಂಗುರುಭಕ್ತನೆನಿಪ ನಿನ್ನನ
ಮಂದಕೃಪಾರಸಭರಿತಕಟಾಕ್ಷದಿನಭೀಕ್ಷಿಸಿ ವಾತ್ಸಲ್ಯದಿಂಸಾರೆಗರೆದು ನಿಜ
ತಾಂಬೂಲಪ್ರಸಾದಮಂಕರುಣಿಸಿ ಕೈಕೊಂಡುಭಕ್ತಿಯಿಂ ಸವಿದಂಗಲೇಪಂ
ಗೆಯ್ದುಪರಮಾನಂದಂಬಡೆದಿರೆ ಬಸಿದನಿಶಿತಶೂಲಮಂ ಕಣ್ಣನ್ನೆಯಿಂತೋ
ರ್ಪುದುಮಾಗಳ್.

ಚಂ॥ ವೃ॥ ಪರಪರಬಂಣಿಸಲ್ಕಳವೆನಿನ್ನಧಟಂ ಪೊಡಮಟ್ಟುದಿವ್ಯಸ
ದ್ಗುರುಪದಪದ್ಮಕದ್ಭುತಮನಾಕೆಜನಂ ಪರಮಾನುರಾಗನಿ ॥ ರ್ಭರತೆಯನ
ಪ್ಪುಗೆಯ್ದುಪರಿತಂದೊಡನೇರಿದೆಶೂಲಮಂಗುಣಾ । ಕರನೊನೆಯಿಂಪ್ಪಿಮಾಡೆ
ಡೆನಡುನೆತ್ತಿಯೊಳೆಂತುಟೊಭಕ್ತಿವೈಭವಂ .... ॥೫೬॥

ಕಂ॥ ಪರಮಗುರುಧ್ಯೇನಮಯೆಂ । ಬರಮಂ ಸೊಗಯಿಸೆಮುಖಾ
ಬ್ಜದೊಳ್ಕಿರುನಗೆತ ॥ ತ್ತಿರೆ ಮುನ್ನಮಂಚಮೇರಿದ । ಪರಿಯಂದೇರಿರ್ದ
ಶೂಲಮಂಗುರುಭಕ್ತಂ ॥೫೭॥

ಕಂ॥ಮನಮದುಗುರುವಿನೊಳಮರ್ದಿರೆ । ತನುವಂನೀಂಸ್ಥಾಣುವಿಂಗೆಪ
ದೆವರ್ಪಿಸಿದ್ಯೆ ॥ ತನುಮನವರ್ಪಣಭಾವಮ । ನೆನಿಸುಂಪಲ್ಲಿಟಸಿಮೆರೆದೆಪೊ
ಪತೆನೆವಿಬುಧರ್ .... ॥೫೮॥

ಕಂ॥ ಪರಮಾನಂದಸುಧಾಬ್ಧಿಯ । ನಿರದುರ್ವಿಸಗುರುಕಟಾಕ್ಷಕೌ
ಮುದಿಕವಿದೊ ॥ ತ್ತರಿಸಿರೆಮುಗಿದಂಭೋಜದ । ಪರಿಯಂಪರಿಭವಿಸಿಮುಗಿ
ದಕರಮಿರೆನೊಸಲೊಳ್ .... ॥೫೯॥

ಕಂ॥ ಗುರುಚರಣಧ್ಯಾನಾಮೃತ । ಸರಸಿಯೊಳವಗಾಹಮಿರೆಮನೋ
ಹಂಸನ್ನೋ । ಶ್ಪರಬಗೆಯೊಳೊಗೆಯೆಕೌತುಕ । ಮರರೆನಿಶಾತೋಗ್ರಶೂಲ
ದೊಳ್ಕುಳ್ಳಿರ್ದ್ದೆ .. ॥೬೦॥

ಮ|| ಸ್ರ|| ವೃ|| ಗುರುಪಾದಾಂಭೋಜಧಾಮಂ ಗುರುಪದಕಮಲ ಧ್ಯಾನನಿರ್ಧೂತಕಾಮಂ || ಗುರುವಂಶಾಂಭೋಧಿಸೋಮಂ ಗುರುಪದಯುಗಳಂನಿತ್ಯದತ್ತಪ್ರಣಾಮಂ | ಗುರುತತ್ವಜ್ಞಾನಭೂಮಂ ಗುರುಹಿತಕರಣೋದ್ಯೋಗರಾಗಾಭಿರಾಮಂ .... ||೬೧||

ವ|| ಎನಿಸಿನೆಗಳ್ತೆವೆತ್ತು ಮೆರೆವ.

ಮ|| ವೃ|| ಗುರುಲಿಂಗಾಂಘ್ರಿಸಮರ್ಚನೈಕಪರನಂ ಲಿಂಗಾಂಗಸಂಯೋಗಬಂ | ಧುರನಂ ಭಾವಜಸರ್ಪಗರ್ವಹರನಂ ಸಾಕಲ್ಯಮಾಂಗಲ್ಯಮಂ|| ದಿರನಂ ದುಷ್ಕೃತಮಃಪ್ರಚಂಡಕರನಂ ಸನ್ಮಾರ್ಗಸಂಚಾರಭಾ | ಸುರನಂ ಭವ್ಯಜನಪ್ರಮೋದಕರನಂ ನಿನ್ನಂಭವದ್ದೇಶಿಕಂ ||೬೨||

ಕಂ|| ಉದಯಗಿರಿಶೃಂಗದಗ್ರದೊ | ಳುದಯಿಸಿದಿನನಂ ಪರಾಭವಿಸಿ ಘನಸಶೂಲಾ || ಗ್ರದೊಳೆಸೆವನ ಸಮಳಿನಮಧಿ | ಕದಯಾರಸಭರಿತದೃಷ್ಟಿಯಿಂದೀಕ್ಷಿಸಿದಂ ... ||೬೩||

ಕಂ|| ಪ್ರಾಜ್ಯಗುರುಭಕ್ತಿನಿಜಸಾಂ | ಮ್ರಾಜ್ಯಕ್ಕಭಿಷೇಕಿಪಂತೆ ವಿಮಳೋದಕದಿಂ || ಪೂಜ್ಯಗುರುನಿಜಕಟಾಕ್ಷರು | ಚಿಜ್ಯೋತ್ಸ್ನೆಯನೊಲ್ದು ಮೇಲದೇಂಬೀರಿದನೋ ||೬೪||

ವ|| ಅಂತು ಕಾರುಣ್ಯರಸಮಂಮೊಗೆದು ಸೂಸುವಂತೆ ನೀರಿಕ್ಷಿಸಿಬೆರಗುವಟ್ಟು ಬೆಬ್ಬಳಿಸಿನೋಳ್ಪಶೇಷಶಿಷ್ಯರ ಲಜ್ಜಾನತಾನನಮನ್ನೋಡಿ ದೇಶಿಕೇಂದ್ರನಿಂತೆಂದಂ.

ಕಂ|| ಈತನಚರಿತ್ರಮಿೀತನ | ನೂತನಗುರುಭಕ್ತಿಸೊಗೆಯಿಪೀತನಸುಗುಣ || ವ್ರಾತಮಿವಂಗಲ್ಲದೆಮ | ತ್ತೀತರದಿಂಬಯಸೆಪೆರರ್ಗದೇನಾದಪುದೊ .... ||೬೫||

ಕಂ|| ಪ್ರದ್ಯೋತನಘನರುಚಿಯುಂ | ಖದ್ಯೋತಂಘಣಿಸಕಶಕ್ತಿಯುಮನೊಳ್ಳಿವಲಂ || ಸದ್ಯೋಗಿಯಯೋಗಮುನಬ | ಳೋದ್ಯೋಗರತನ್ನಿತಾಂತಮೆಳಸಿದೊಡಳನೆ ... ||೬೬||

ಉ|| ವೃ|| ಈತನಪೆಂಪುವೆತ್ತ ಗುರುಭಕ್ತಿಗುರುವ್ರತನಿಷ್ಠೆ ಗುಜ್ವಳ | ಖ್ಯಾತಿಗೆ ನೀವಸೂಯ್ಯೆವಿಡಿದಿರ್ಪರನೇಕಪುರಾಣಶಂತ್ರನೇ || ದಾತಿಶಯೇತಿಹಾಸದಿ ಪುರಾತನಮಾತನಭಕ್ತರೊಳ್ಪೊದ | ಳ್ದೀತೆರದಮುಪ್ಪಶೌರ್ಯಯುತಭಕ್ತಿಯ ನಾಲಿಪಿಪೇಧರಿತ್ರಿಯೊಳ್ ||೬೭||

ಕಂ॥ ಕಂಡೇಂಬಲ್ಲರೆಮಹಿಮಕ | ರಂಡನಮತ್ಸುತನಪ್ರೋಲ್ವಚಲವಂತರನು ॥ ದ್ದಂಡತೆಯುಂಗೆನ್ವಮನೊಳ | ಕೊಂಡಾವೇಭಕ್ತರೆಂದುಬೆರೆದಪಿರಿಳಿಯೊಳ್ .. ॥೧೮॥

ಕಂ॥ ನಿಮಗೆಗುರುಭಕ್ತಭಕ್ತಿ | ಕ್ರಮಮದ್ಭುದೆಸುರಮಹೀಜಮಹಿಮೆಯುದೆಂತುಂ ॥ ಸಮನಿಸುಗುಮೆಕಾನನಕುಜ | ಸಮಿತಿಗೆಬರಿದೇಕೆಭಕ್ತಿಭಾವದಬಿಂಕಂ .... ॥೧೯॥

ಕಂ॥ ಮಂಚಮನೇರಿದಕೆರದಿಂ | ದಂಚಿತಮತಿಯುಡರ್ದನರರೆಶೂಲಮನಿದುತಾಂ ॥ ಮಂಚಮದುಶೂಲಮೆಂಬವಿ | ಸಂಚುಂಟೆಮದುಕ್ತಿಜೀವಮಾದಂಗಿಳೆಯೊಳ್ ... ॥೨೦॥

ಕಂ॥ಧರಣಿಯೊಳಿವಂಗೆಸಂದುದು ॥ ಗುರುವಚನಮಲಂಘನೀಯಮೆಂಬುಕ್ತಿವಲಂ ॥ ಪರಿದೇರಿನೆಶೂಲಮನಾ | ದರದಿಂಭರ ದಿಂದಮೇರಿಮೆರೆದುದರಿಂದಂ .... ॥೨೧॥

ಕಂ॥ ಇವನೆಮ್ಮಕೃಪಾಪಾತ್ರಂ|ವಿವರಿಸಿಮತ್ಕ್ಷಮೆಗೆಪಾತ್ರರಪ್ಪಿರಿನೀವೆಂ ॥ ದವರೊಡನೆನುಡಿದುನೋಳ್ಪುದು | ಜನದಿಂದೃಷ್ಟಾಂತಮಂಬಳಿಕ್ಕೆಸುತಾಗಳ್ .... ॥೨೨॥

ವ॥ ಇಂತೆಂದವರ್ಗೆಮರಗುಂಡ ಮಲ್ಲಿಕಾರ್ಜುನಾರ್ಯಂ ತನ್ಮಹತ್ವಮಂ ನಿರವಿಸಿಭವದಭಿಮುಖನಾಗಿಕೃಪಾವಲೋಕನದಿ ನಭೀಕ್ಷಿಸಿ.

ಚಂ॥ ವೃ॥ ಎಲೆಗುರುಭಕ್ತ ನಿನ್ನಗುರುಭಕ್ತಿ ಮಹಾಪ್ರಮಥೇಂದ್ರರುದ್ರಭ | ಕ್ತಲಲಿತಭಕ್ತಿಪದ್ಧತಿಗೆಸಂದುದುನೀನಿಳೆತರ್ಪುದಿನ್ನೆನು ॥ ತ್ತಲಘುಮೃದೂಕ್ತಿಯಿಂಕರೆಯೆಸದ್ಗುರುವಿನ್ನಿಮಿದೂರಿಕೈಗಳಂ | ಪಲಗೆಯೊಳುದ್ಧಮೇಳ್ದಲುಗೆಶೂಲಮುದಗ್ರಕರಪ್ರಭಾವದಿಂ ॥೨೩॥

ಕಂ॥ ನೆಗೆದಿಳೆಗವತರಿಸಿಜನಂ | ಪೊಗಳುತ್ತಿರೆಗುರುಪದಾಬ್ಜಕೆರಗಿದೆನಿನ್ನಂ ॥ ತೆಗೆದುಬಿಗಿದಪ್ಪಿಸಂತಸ | ದೊಗುಮಿಗೆಯಿನ್ನೋಡಿದೇಶಿಕಂನಲಿದೊಲವಿಂ .... ॥೨೪॥

ಚಂ॥ ವೃ॥ ವಿಮಳನಿಜಪ್ರಸಾದಸುಧೆಯಿಂತಣಿಪುತ್ತೆ ನೆಗಳ್ತೆವೆತ್ತಸಂಭ್ರಮಮನಲರ್ಚಿರಂಜಿಸಿರೆಶೈವಸ ಹೋದರರೆಲ್ಲವಿಸ್ಮಯ ॥ ಸ್ತಿಮಿತಕಟಾಕ್ಷರಕ್ಷತಭವತ್ತನುವಂನಡೆನೋಡಿಚೋದ್ಯಮೆಂ | ದಮರ್ದತಿಭೀತಿಯಿಂಪೊಗಳೆನಿನ್ನಯುಸದ್ಗುರುಭಕ್ತಿವೈಭವಂ .. ॥೨೫॥

ವೃ॥ ಅಂದಿಳೆಯಲ್ಲಿರಂಜಿಸಿದುದಿಂದುಮನೂನತರಪ್ರಭಾವದೊ।ಳ್ಸಂದ್ಯ ದುಸರ್ವಲೋಕಮರಿಯುತ್ತಿರೆದೇಶಿಕಸತ್ಕೃಪಾಬ್ಧಿಪೂ ॥ ರ್ಣೇಂದುವಿದಲ್ತೆ ನಿನ್ನಗುರುಭಕ್ತಿ ಮಹತ್ವಪರಂಪರೋರ್ಮಿಕಾ । ಬೃಂದಸುಧಾತರಂಗಿಣಿಗೆ ಣೋತ್ಸವಪದ್ಮವನಪ್ರಭಾಕರಾ ॥ .... ॥೭೬॥

ಕಂ॥ ಆರರಿವರಯ್ಯನಿನ್ನಯ । ಸಾದಾಚಾರಪ್ರಸಂಗೆಗುರುಭಕ್ತಿಯು ವಿ ॥ ಸ್ತಾರಿತಪ್ರಭಾವಮಂಕಾ । ಮಾರಾತಿಯುಮಾದಡೋರ್ಕ್ಮಿತಾಂತಿ ಳಿದಪನೆ ॥ .... ॥೭೭॥

ಮ॥ ವೃ॥ ಗುರುಪಾದಾಂಬುಜಭೃಂಗ ಸದ್ಗುರುಕರಾಂಭೋಜಾತ ಜಾತಾಂಗ ಸ । ದ್ಗುರುದೇವಾಪರತಂತ್ರಸದ್ಗುರುಕೃಪಾಲಬ್ಧೇಶ ಸನ್ಮಂ ತ್ರಸ ॥ ದ್ಗುರುನಾಮಾಮೃತತೃಪ್ತ ಸದ್ಗುರುನಿರೂಪವ್ರಾತಸಂಪ್ರಾಪ್ತ ಸ । ದ್ಗುರುಪಾದಾಂಬುನಿಷಿಕ್ತ ಸಾರಗುರುಭಕ್ತಿಖ್ಯಾಪಿತ ॥ ॥೭೮॥

ಮ ॥ ಸ್ರ ॥ ಎಂದಿಂತೆಲ್ಲರ್ಕರಂ ಕೀರ್ತಿಸುತಿರೆಬಸವಂ ಕೇಳ್ದುತಾನೆ ಯ್ದುತಂನ । ನ್ನೆಂದಂನ್ನೆಯಿಕ್ಕೈಯ್ಯಂಮುಗಿದೆಲೆಗುರುಭಕ್ತಾರ್ಯ ನಿನ್ನಂ ನರಾರ್ಪೆಂ ॥ ಪೊಂದಿರ್ದಶ್ರೀಗುರುಶ್ರೀಪದಯುಗಳಲಸದ್ಭಕ್ತಿಯೊಳ್ನೋ ಳ್ಪೊಡೆಂದಾ । ನಂದಂಬೆತ್ತೊಲ್ದುಕೊಂಡಾಡುತೆ ಸೊಗಯಿಸಿದಂ ವೀರ ಶೈವಾಬ್ಧಿಚಂದ್ರಂ ॥ .... ॥೭೯॥

ಕಂ॥ ಗುರುಭಕ್ತನಮುಳಚರಿತಮ । ನುರುಮುದದಿಂದೋದಿಕೇಳೆ ಬಿಡದಪ್ಪುದು ಸ ॥ ದ್ಗುರುಪದಸುಭಕ್ತಿಸರ್ವೋ । ತ್ತರಸುಖಸುಜ್ಞಾನ ಸಂಪದಂ ಶಿವಕೃಪೆಯುಂ ॥ .... ॥೮೦॥

ಲಲಿತಪದವೃತ್ತಂ ॥ ಶ್ರೀದಸಹಪೇಲನವಿನೋದ ಗುಣರತ್ನವಿಸರೋ ದಧಿಮಹೇಶಕೃತನೋದತತಮಾಯಾ । ನೋದನಸುರೇಂದ್ರನತಪಾದ ಸರ ಸೀಜಕೃತವೇದಜಗತೀನುತ ಶುಭೋದಯಚರಿತ್ರ ॥ ಮೇದುರ ಗುಣಾಕರ ಶಿಲಾದಸುತಸಂತತ ಮಹೋದಯಪರಾಸ್ತಪರವಾದಗಣವರ್ಯಾ । ಹ್ಲಾದ ಕರರಕ್ಷಿಸಘಕಾದಳಗಜೇಂದ್ರಭುವನೋದರಲಸತ್ಪ್ರಣವನಾದಬಸವೇಶಾ॥

ಉತ್ಸಾಹವೃತ್ತ ॥ ಮಂಗಳಾಂಗಿಮಂಜುಳಾಂಬುಜಾಸ್ಯೆವಿಶ್ವವಿಶ್ರು ತೇ । ಭೃಂಗವೇಣಿಶಂಕರಾಂಕಪೀಠಿಕಾಸಮಾಶ್ರಿತೇ ॥ ತುಂಗದಾನವಾರಿ ವಾರಿಜೋದ್ಭವಾದಿ ವಂದಿತೇ । ಸಾಂಗವೇದವೇದ್ಯೆ ರಕ್ಷಿಸೆನ್ನನದ್ರಿರಾ ಟ್ಸುತೇ ॥ .... ॥೮೨॥

ಗದ್ಯ॥ ಇದು ವಿನಮದಖಿಳಸುರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ
ಪರಮಶಿವಲಿಂಗ ಪಾದಾರವಿಂದ ಪರಾಗ ಭಸಿತ ಭಾಸುರ
ಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರ ದೇವಭಕ್ತಿ ವಿರಚಿತ ಶ್ರೀಮದ್ಬಸವರಾಜ
ವಿಜಯ ಮಹಾಪುರಾಣದೊಳ್ ಗುರುಭಕ್ತಗುರು
ಭಕ್ತಿ ಮಹತ್ವಕಥನಂ ಸಪ್ತವಿಂಶತ್ಯಾ
ಶ್ವಾಸಂ ಪರಿಸಮಾಪ್ತಂ.

ಶ್ರೀಷಣ್ಮುಖಾಯನಮಃ

ಗುರುಭಕ್ತಾಂಡಾರ್ಯ್ಯರಕಥೆ

ನಾಂದಿ॥ ಲಲಿತಪದವೃತ್ತಂ ॥ ಸೋಮಗುರುವರ್ಯ್ಯವರಭೀಮಕವಿರಾಜಗುಣಧಾಮ ಘನಶಂಕರಸುನಾಮಕೃತಕಾವ್ಯ । ಸ್ತೋಮಸುತ್ರವೈಭವನಿರಾಮಯನಿರರ್ಗಳಮಹಾಮಹಿಮಸಾರವಿಬುಧಾಮರಮಹೀಜ ॥ ವ್ಯೋಮಕಚಸಂಗತಕೃಪಾಮಹಿತಚಿತ್ತ ವಿಭುವೇಮನಲಸತ್ಕದಿರರೇಮಹಿತಚರ್ಯೋ । ದ್ದಾಮತೃಹಬಿಜ್ಜಳಮನೋಮುದ ಸುವಾಕ್ಯಪೂರಿಕಾಮಪುರಾತನಲಲಾಮ ಬಸವೇಶಾ ॥ .... ॥೪೧॥

ಕಂ॥ ಶ್ರೀಗುಹಜನನೀ ಮಧುರಿಮ । ರಾಗಾಧರ ರಸರಸಜ್ಞ ನಮಿನಯಮಿ ಚೇ ॥ ತೋಗತನನುಪಮನಿಗಮ ಕ । ಳಾಗುರುವೆಮಗೀಗೆಸಾಖ್ಯಮುಂ ಶಿವಲಿಂಗಂ ॥ .... ॥೧॥

ವ॥ ಆಗಳ್ಗುರುಭಕ್ತ ಭಕ್ತಿಮಹತ್ವದರ್ಶನಜನಿತ ಹರ್ಷೋದಯಂ ಚನ್ನಬಸವಂಬಸವಂಗೆರಗುತ್ತೆಂ ಮಪುರಾತನರೊಳಿಂತಪ್ಪ ಗುರುಭಕ್ತಿಧುರಂಧರರೊಳರೆಬೆಸಸಿಮೆನೆ ವೃಷಭೇಂದ್ರಂಗಣನಿವಹಮಾನಂದದಿ ನಾಕರ್ಣಿಸೆ ಪೇಳ್ದನದೆಂತೆನೆ ॥

ಚಂ॥ ವೃ॥ ಜಲಧರಚುಂಬಿಚಂದ್ರಮಣಿಸಾಲಮುದಂಚಿತ ಭರ್ಮ್ಮಹರ್ಮ್ಯಸಂ । ಕುಲಮತಿಸಂಪದೋಜ್ವಲಗೃಹಾವಳಿ ಸಂತತದಿವ್ಯಭೋಗಮುಂ॥ ಜುಲಮನುಜಾಳಿ ಲೋಚನಸಮುತ್ಸವಕಾರಿ ಪುರೋಪವೀಥಿನಿ । ಶ್ಚಲರುಚಿಚೆಜ್ಜಾಡಪುರಮೊಪ್ಪುಗುಮುರ್ವ್ವಿಗಪೂರ್ವ್ವಶೋಭೆಯಿಂ ॥ ॥೨॥

ಕಂ|| ಪರಪುಣ್ಯಜನೋತ್ಕರ ಭಾ || ಸ್ವರಮುರುವಿಬುಧೇಂದ್ರ ಶೋ
ಭಿ ಘನಭೋಗಿಸಮು || ತ್ಕರರುಚಿರಂಕಿನ್ನರಪುರ | ಸುರವರಪುರನಾಗಪುರ
ಮನುಪಮಪೊಲ್ತೆಸೆಗುಂ || .... ||೩||

ಕಂ|| ಆಪುರಮನಾಳ್ವನನುಪಮ | ರೂಪಂಗುರುಭಕ್ತಿತತ್ಪರಂ ನಯ
ವಿನಯಾ || ಲಾಪಂವಿಶ್ರುತಕೀರ್ತಿಕ | ಲಾಪಂಗುರು ಭಕ್ತರಾಜನೆಂಬ
ವನೀಶಂ || .... ||೪||

ಕಂ|| ಗುರುಚರಣಸಪರ್ಯಾಪರ | ನುರುತರ ಗುರುನಾಮಜಾಪಕಂ
ಗುರುವರಭಾ || ಸುರ ಕಾರ್ಯಧುರ್ಯ ನಮಳಿನ | ಗುರುಮೂರ್ತಿಧ್ಯಾನಲೀನ
ಮಾನಸ ಮಹಿತಂ || .... ||೫||

ಕಂ|| ವೀರವ್ರತನಿಧಿವಿತತಯ | ಶೋರಂಜಿತ ನಂಬುರಾಶಿಗಾಂಭೀ
ರ್ಯಗುಣಾಧಾರಂಸಾರಾಸಾರವಿಚಾರಂ ಪರಶರಣಗಣಸಮರ್ಥ ನಲೋಲಂ ||೬||

ಕಂ|| ಎಂಬನೆಗೆಳ್ತೆಯನಾಳ್ದಳಿ | ಕಾಂಬಕನಂಪೂಜೆಗೆಯ್ಯುತಂ ಶಂ
ಭುಕಥಾ || ಡಂಬರಮನಾಲಿಸುತೆ ಸುಗುಣಾಂಬುಧಿಗುರುಭಕ್ತ ರಾಜನೊ
ಪ್ರವೃತ್ತಿರ್ದರಂ —— ||೭||

ಉ|| ವೃ|| ತೆಂಕಣಗಾಳಿತೀಡೆಗಿಳಿಗಳ್ನಲಿದಾಡೆ ಮದಾಳಿಪಾಡೆ ಮಾ
ವಂಕುರವೇರೆ ಮಾಧವಿಗೆಬೇರೆಮುಗುಳ್ತಲೆದೋರೆ ಪೂಸರಂ || ಬಿಂಕಮನಾ
ಳೆ ಪದ್ಮತತಿತಾಳೆ ವಿಳಾಸಮನೇಳೆ ಕೋಕಿಲಾ || ಸಂಕಲಿತಸ್ವರಂ ಮಿಸು
ಗೆಬಂದುದುಸನ್ಮಧುಮಾಸಮುರ್ವಿಯೊಳ್ || .... ||೮||

ಚಂ|| ಘನಶಿಶಿರೇಂದುವಸ್ತಮಿಸೆಕೋಕಿಲಕುಕ್ಕುಟರಾಜಿಕೂಗೆಮಾ||
ಮಿಸಪೊಸಚೆಂದಳಿಸ್ಸುರ್ಶಿಲಸಂಜೆಯುದಾಗೆ ಪಳಚ್ಚನಬ್ಜಕಾ || ನನಮುಲ
ರ್ದೊಪ್ಪೈಕೈರವದಪೆಂಪಳಿಯುತ್ತಿರೆಕೂರ್ತರೆಂಬನ | ಚ್ಚಿನಪ್ರೊಣರ್ವಕ್ಕಿಗ
ಳ್ನೆರೆಯೆಮೂಡಿದುದಲ್ತೆವಸಂತಭಾಸ್ಕರಂ || ||೯||

ಮ || ಸ್ರ || ಪೊಸಜೊನ್ನಂತನ್ನಕೀರ್ತಿಪ್ರಭೆ ಪಸರಿಸಿತೆಂಬಂತೆಸೊಂ
ಪೇರೆ ಬಳ್ಳಿ೦ | ಬಿಸಿಲಾತ್ಮೀಯ್ಯಪ್ರತಾಪಂ ಕವಿದವೊಲೆಸಕಂ ದೋರೆ
ಪಾಂಥಾರಿವರ್ಗ್ಗಂ || ಕುಸಿವೆತ್ತಂ ನೀರ್ಗಳಂಪೊಕ್ಕಿರೆ ಘನವಿಭವಂಬೆತ್ತುಕ
ಣ್ಗೊಪ್ಪಿದಂ ಪೆಂ || ಪೆಸೆವನ್ನಂಮಿತ್ರರಾಜಾಭ್ಯುದಯುಕರ ನಿಳಾಮೋದ
ದಂಚೈತ್ರರಾಜಂ || .... ||೧೦||

ವ || ಅಂತೇಳ್ತಂದ ಚೈತ್ರಮಾಸದೊಳೊಂದುವಾಸರಮಾಗುರುಭ
ಕ್ತರಾಜಂ ಬಿನದಂಬೆತ್ತು ||

ಮ|| ಸ್ರ|| ವೃ|| ವನಕೇಳೀಲೋಲಚಿತ್ತಂ ತಳೆದುರ್ಬನಕೆತತ್ಕೇಳಿ
ಯುಂತೀರ್ಚಿಸೌಂದ | ರ್ಯಸಿಯುಕ್ತಂ ಚಾರುಸರ್ವಾಭರಣವಿಳಸಿತಂ ಭೂರಿ
ಸೈನ್ಯಪ್ರಯುಕ್ತಂ || ಜನತಾಲೋಕೋತ್ಸವ ಶ್ರೀಕರಸುರುವಿಭವಂಸಿಂಧು
ರಾರೂಢನಾನಂ | ದದಿನಂದೇಳ್ತರ್ಪಿನಂ ಮುಂದೆಸೆದುದಮುಮಗಾಣಿಕ್ಯ
ಮಾಣಿಕ್ಯಹರ್ಮ್ಯಂ || .... ||೧೧||

ಕಂ|| ಎಳೆಗಿಳಿಯನೋದಿಸುವಮುಂ | ಜುಳರತಿಶಾಸ್ತ್ರವನೆಕಲ್ಪವಲ್ಲ
ಕಿಯುಮನಂ || ಗೊಳೆಬಾಜಿಪಸಿಂಗರಿಸುವ | ವಿಳಾಸಿನೀಜನಮುಪಲ್ಲಿಸಲೆನೆ
ಲಸಿರ್ದ್ದಂ || .... ||೧೨||

ಚಂ|| ವೃ|| ಬಿನದಮೆನಿಪ್ಪ ಪೆರ್ವೆಳೆಗೆ ರಾಗಿಸಿ ಪಾಯ್ವ ಯುಪಪ್ರ
ತಾನಸೂ | ತನಮೃಗಜಾಲಮಂ ಮರೆಯೊಳಿರ್ದ್ದೆಳೆಪೆಂಡಿರವುರ್ಚ್ಚವಿಲ್ಲನೊ ||
ಯ್ಯನೆಸೆಳೆವೀಕ್ಷಣಾಸ್ತ್ರದಿನಿಸಲ್ವೆಗಳ್ದಗಜನೆಂಬಲುಬ್ಧಕೇಂ | ದ್ರನಪೊಸ
ತೋಟಿನೊಡ್ಡಣೆಯುದೆಂದೆನೆಸೌಧಮುದೇಂಮನೋಜ್ಞಮೊ ||೧೩||

ಚಂ || ತೊಳಗುವತೊಂಡೆವಾಯ್ದೆರೆಯ ನೀಳ್ದಲರ್ಗಂಗಳಪೂರ್ಣ
ಚಂದ್ರನಂ | ಪಳಿವೆಸೆವಾಸ್ಯಬಿಂಬದಘನಸ್ತನದಲ್ಪಸುಮಧ್ಯದುನ್ನತೋ ||
ಜ್ವಳವಿಳಸನ್ನಿತಂಬದಸುವರ್ಣದಬಾಳೆಯುಚೆಲ್ವಿನೇಳ್ಗೆಯುಂ | ತಳೆದೆಸೆವೂ
ರುಮಂಡಲದಮೆಲ್ಲಡಿಯುಂದಮುದೇನಳುಂಬಮೊ || ||೧೪||

ಚಂ|| ತೊಳಪೆಳೆಮುತ್ತಿನೆಕ್ಕಸರಮೊಪ್ಪುವ ಕುಂಕುಮದಣ್ಪುಕೇತ
ಕೀ | ದಳದವತಂಸಮಾಳ್ಪೆಸೆವ ಸೋರ್ಮುಡಿಮಲ್ಲಿಗೆಜೊಲ್ಲೆಯುಮ್ಮನಂ||ಗೊ
ಳಿಪ ಸುವರ್ನ್ನಕಾಂಚಿಕನಕಾಂಬರಮುಂಚಿತ ರತ್ನಭೂಷಣಾ | ವಳಿಮೃಗಭೂ
ಲಲಾಮುಮೆಸೆಯುತ್ತಿರೆ ಕಾಮಿನಿಕಣ್ಗೆತೋರಿದಳ್ || ||೧೫||

ಚಂ|| ವೃ|| ಅಳಿಕಳಭಂಗಳೋ ಕುರುಳಬಂಬಲೊ ಪೂರ್ಣಶಶಾಂ
ಕಬಿಂಬಮೊ | ತೊಳಗುವವಕ್ತ್ರಮೊಮುದನವಾಜಿಯೊ ಪೇರ್ಮ್ಮೊಲೆಯೊಮ
ನೋಜನು || ಜ್ವಳರಥಮೊಕಟೀತಟಮೊ ಮಾರಗಜೇಂದ್ರಮೊ ಮಂಜುಳೋ
ರುಮಂ|ಡಳಮೊವಿರಾಜಿಪಾರಮಣಿಯಂಗಮೊಕಾಮನಚಾತುರಂಗಮೊ ||

ವ|| ಎನಿಸಿರಂಜಿಸಿ ಕನ್ನನತಿಮಧುರ ಸರಸ ತರಳಾಪಾಂಗದಿ ಸಭೀ
ಕ್ಷಿಸುತ್ತಮಿರ್ದ್ದಾಗಳ್ ||

ಕಂ|| ಪಣ್ಯಾಂಗನೆಯತಿಶಯಲಾವಣ್ಯಮ ನವಳಂಗೆದಂದಮುಮನಾ
ಕೆಯತಾರುಣ್ಯದಸೊಬಗಂ ಕಂಡಂಪಣ್ಯಾಧಿಪಾಭರಣಚರಣಸರಸಿಜಭೃಂಗಂ||

ವ|| ಅಂತು ಕಂಡವಳ ರೂಪಾತಿಶಯಕ್ಕೆ ತಲೆದೂಗಿ ಬೆರಗುವಟ್ಟು.

ಕಂ|| ಇವಳತನುರಾಜಲಕ್ಷ್ಮಿಯೊ | ಯಿವಳಂಗೆಜರಾಜಮಂತ್ರಶಕ್ತಿ
ಯೊ ಬಗೆನಂದಿಪಳಸಮಾಸ್ತ್ರಂ ಸಲೆಭಜಿಸುವದೇವಿಯೊ ಯೆಂದುಮುಗುಳ್ದ
ಘೀಕ್ಷಿಸುತಿರ್ದಂ ||೧೮||

ವ|| ಆಗಳ್.

ಮ|| ಸ್ರ|| ವೃ|| ಲಲನಾನೇತ್ರತ್ರಿಭಾಗದ್ಯುತಿತತಿಮದನಂ ಮಲ್ಲಿಕಾ
ಶೋಕನೀಲೋ | ತ್ಪಲಮೆಂಬೀಮೂರುಬಾಣಂಗಳ ನಸವಸದಿಂ ದೋರ್ಮ್ಮ
ತೊಟ್ಟೆಚ್ಚನೆಂಬಂ || ತಲರ್ದೊಪ್ಪಂಬೆತ್ತು ಬೇಗಂಪರಿದವನೆದೆಯೋಳ್ನಾಂ
ಟಿತತ್ಕಾಲಮಂಸಾ | ರ್ದಲರಂಬಂ ಮಾಣದೇಂನಾಂಟಿಸಿದನೊರಮಣೀ
ಲೋಕರಾಜಂಮನೋಜಂ ||೧೯||

ಕಂ|| ಇಸೆಬಗೆಯನುರ್ಚೆ ಧೈರ್ಯದ ಬೆಸುಗೆಯಬಿಸುಪಂಸಡಿಲ್ಚಿ ಕಾ
ಮಾಗ್ನಿಯುಬ || ಲ್ಬಿಸುಪಂ ತನುವಿನೊಳೆತ್ತಂ | ಪಸರಿಸಿ ತದುಭೂಮಿಪಾಲ
ಚೂಡಾಮಣಿಯಂ ||೨೦||

ಕಂ|| ನಡೆಗೆಡೆಚಿತ್ತಂ ಧೃತಿಲತೆ | ಕುಡಿಗೆಡೆ ಮನಸಿಜವಿಕಾರತತಿ
ಮಾನಸದೋ | ಳ್ತಡೆಗೆಡೆ ಕಯ್ಯಂಕುಶಮುದು | ಪಡಲಿಡೆ ಧರಣಿಯೊಳೆವಿ
ರಹವಿಹ್ವಳನಾದಂ ||೨೧||

ವ|| ಅಂತುವಿರಹ ವಿಷಾದ ವಿಘುರಿತನಾಗಿತಾಂ ವಿವೇಕ ನಿಧಿಯಪ್ಪು
ದರಿಂ ಚೆಲ್ಲಿದ ಕರಣಂಗಳಂ ಮೆಲ್ಲನೆ ಸಂತವಿಸಿಕೊಂಡು ತನ್ನೊಳಿಂತೆಂದಂ.

ಕಂ|| ಕಾಮಿನಿ ಯಪಾಂಗರುಚಿಸೌ | ದಾಮಿನಿ ಪಾರಿಸಿದುದೆನ್ನಧೃ
ತಿಹಂಸನ ನಿ | ಸ್ಸೀಮಾತೊ ಕಾಮನೆಂಬುನಿ | ಕಾಮಂ ನಟ್ಟುರ್ಚೆಪಾಯ್ದು
ದೆನ್ನಯಮನಮಂ ||೨೨||

ವ|| ಎಂದು ನೊಂದು ಕಜ್ಜದುಜ್ಜವಣೆಯಂಪಿಚಾರಿಸಿ.

ಕಂ|| ಸುದತಿಯಿವಳ್ಬೆಲೆವೆಣ್ಣೆವ | ಪದಭಕ್ತಿಗಡೀಕೆಯೊಡನೆ ನೆರೆ
ದೊದವಿದ ಸೌ || ಖ್ಯದಸವಿಯನೀಶ್ವರಂ ಗೋ | ಚ್ಯಾದಲರ್ಪಿಸಿಕೊಳ್ವೆ
ನೆನಗದಾವುದೊದೋಷಂ ||೨೩||

ಉ|| ವೃ|| ಸಂದಿಸಿ ಯದ್ಯದಾತ್ಮಹಿತಮೊಂದೆನುತಂ ಸಲೆ ನ್ಯೆಘುನೇ

ರತೇ | ಯೆಂದೆನುತಂ ಪೊಡಳಿಪ್ಳೊರ್ವಶೈವ ಪುರಾಣಸುವಾಣಿಯುಂಟು ಬೇ|
ರೊಂದೆನಿಸಿರ್ದಪಕ್ಷಮಿದುಸಲ್ವುದು ಭಕ್ತಿಯುತಂಗೆ ದೋಷಮಾ | ವಂದ
ದಿನಪ್ಪುದೀಕೆಯುರತಕ್ಕೆ ವಿಚಾರಿಸಿನೋಡೆನಾಡೆಯುಂ ||೨೪||

ವ|| ಅದರಿಂ ದೀಗಣಿಕಾಂಗನೆಯು ಸಣಿಯುರಮನುಭವಿಪೆನೆಂದು ನಿರ್ಧರಿಸಿ ನಿಜಗೃಹಾಗತನ ವಳ್ಗೆ ಧನಕನಕವಸನಮಣಿ ಭೂಷಣಾದಿಯನಾತ್ಮಸಖಿನಕ್ಕೈಯ್ಯೊಳಿತ್ತಪಳೆಗ್ಗತ್ತಿಗಳುಪಲೊಡನವಂ ತಂದು ನೀಡೆಮತ್ತಕಾಸಿನಿಯೊತ್ತೆಯು ನೊಲ್ಲೆನಿತ್ತಲ್ಾರದಿಂದು ವಿಡಂಬಿಸಿ ನುಡಿಯೆ ದೂತಂನಿಜನಾಥನಿರ್ದೆಡೆ ಗೇಳ್ತಂದವಳೊತ್ತೆಯು ನೊಲ್ಲದೊತ್ತರಿಸಿಬಿತ್ತರಿಸಿದುದ ನೆಲ್ಲಮಂಸವಿಸ್ತರಂ ಪೇಳೆ ಮೋಹಾತುರಂಕೇಳ್ದವನ ಸಜ್ಜೆಮಾಡದೆಪೆಗೆ ಗುರುಭಕ್ತರಾಜಂತಾನೇ ಬಂದು ತನ್ನಿತಂಬಿನಿಯು ನಭಿನವರಾಗ ರಸಭರಿತ ದೃಷ್ಟಿಯಿನಭೀಕ್ಷಿಸಿಸದ್ವೈನ್ಯ ಮಧು ರಾಲಾಪದಿ ನಿಂತೆಂದಂ.

ಮ|| ವೃ|| ಎಲೆಭಾಮಾಮಣಿ ನಿನ್ನಪೂರ್ವತರಸೌಂದರ್ಯಕ್ಕೆ ಕಣ್ಸೋಲ
ದಾಂ | ತೊಲವಿಂ ದಾಸಿನಗೊತ್ತೆಯುಂಕಳುಪಿದಂ ನೀನೊಲ್ಲೆನೆಂದೆಂಬುದೇಂ
ಛಲಮೊ ವೈಭವಮೊಮನಸ್ಥಿತಿಯ ನಾರ್ಯ್ವೆವಂದವೊಬಿಂಕಮೊ | ನಲವಾರಿ
ರ್ಪುದೊ ನಾಣಪೆರ್ಚುಗೆಯೊವಿತ್ತಂಸಾಲದೆಂಬಾಸೆಯೊ ||೨೫||

ಮ|| ವೃ|| ಜಲಮುಂ ವೈಭವಮುಂ ಮನಸ್ಥಿತಿಯನಾರ್ಯ್ವೆವಂದಮುಂ
ಬಿಂಕಮುಂ | ನಲವಾರಿರ್ಪ್ಪುದುಮಾಗದೊಲ್ದ ವಿಟನೊಳ್ಬಲ್ಲಳ್ಗೆನಾಣ್ಣಲ್ಲಮು ||
ಜ್ವಲವೇಶ್ಯಾಮತಕಲ್ಪವಿತ್ತಮೆನೆ ನಿನ್ನ ತ್ಯಾಸೆಯೆಂದೆಂಬನ | ರ್ಗಲವಾರಾಶಿ
ಗೆಸೇತುಗಟ್ಟಿಸೆನೆಪೇಳ್ವಿತ್ತೌಘದಿಂಕಾಮಿನಿ ||೨೬||

ಚಂ|| ಜಡಮತಿಯೆಂಬೆಯುಪ್ಪೊಡೆ ಮಹಾಚತುರಂದೊರೆಯಿಾತನಲ್ಲ
ವೆಂ | ಬೊಡೆ ಧರಣೀಶಸೂನು ಪರತೊಂದುಮತಸ್ಥ ತನೆಂಬೆಯುಪ್ಪೊಡಾ ||
ವೃಡಪದಭಕ್ತ ನಲ್ಪಬಳನೆಂಬೊಡೆ ಸಾಹಸಿ ಬಂಧುಶೂನ್ಯನೆಂ | ಬೊಡೆ ಶಿವ
ಭಕ್ತಬಂಧು ಕಟಲಾತ್ಮಕನೆಂಬೊಡೆ ಸದ್ಗುಣಾಸ್ಪದಂ ||೨೭||

ಕಂ|| ಸರಿವರೆಯುವಲ್ಲವೆಂಬೊಡೆ | ತರಳೇಕ್ಷಣೆನೋಡು ರತಕಳಾವಿದ
ನಲ್ಲೆಂ || ದರವರಿಪ್ರೌಢನೀನಿನ್ನೊಳ್ | ನೆರೆದೀಕ್ಷಿಪುದೋರ್ವೆಮತ್ಕಳಾಕೌ
ಶಲಮುಂ ||೨೮||

ಮ || ವೃ|| ಸೊಗಸಂಸೂಸೆವಿಳಾಸಮುಂಮೆರೆಮುನಣ್ಪೆನ್ನೋಡಿ ಕಾದ
ಲ್ಮೆಕ್ಕೈ | ಮಿಗೆ ಸಾಡೊರ್ಳ್ನುಡಿಯಾಡಿಕುಂತಳಮನೊಳ್ಪಿಂತಿರ್ದಿ ಬೋಮೋ

ಥ್ಗಮುಂ || ನೆಗೆವಂನಂ ಬಿಗಿಯುಪ್ಪಿಚುಂಬಿಸಿ ಕಳಾವಿಸ್ತಾರಮುಂಬೀರಿ ನಾ |
ಣ್ನಗೆಗೀಡಾಗದೆ ನಿನ್ನೊಳಿಂದು ನೆರೆಯಲ್ಕೂರ್ತಿಂಸರೋಜೇಕ್ಷಣೆ ||೨೯||

ಮ|| ಸವಿನೋಟಂ ಪೊಸವೇಟಮುಂ ನಗೆಯನಂಗಾವೇಶಮುಂಜಾಣ್ಮೆ
ವೆ | ತ್ತ ವಿನೋದೋಕ್ತಿವಿಳಾಸಮುಂ ನೆಗಳ್ದ ಗಾಢಾಲಿಂಗನಂ ಮನ್ಮಥೋ||
ತ್ಸವರೋಮಾಂಚನಮುಂ ಸುಧಾಧರದಭಾಸ್ವಚ್ಚುಂಬನಂ ದರ್ಪಕ | ದ್ರವ
ಮುಂ ಪುಟ್ಟಸದಿರ್ದ್ದೊಡೇಕೆ ನೆರೆವಾಯಾಸಂ ವಿಟಂಗಂಗನೆ ||೩೦||

ಮ|| ಕಲೆಯುಂ ಕಾಲಸುಜಾತಿಯುಂ ಪ್ರಕೃತಿಯುಂ ದೇಶೀಯಭಾವಂ
ಗಳಂ | ವಿಲಸದ್ರೀತಿಯನುಚ್ಚ ನೀಚಸಮರತ್ಯಾಶ್ಲೇಷಬಂಧಂಗಳಂ || ಲಲ
ನಾನೀಕದ ಮನ್ಮಥಾಲಯದ ನಾಡೀಭೇದಮುಂ ಪ್ರಾಯಮುಂ | ನಲವಿಂದಂ
ತಿಳಿದೊಂದಲಾರದ ಭುಜಂಗಂಭಂಗಮುಂತಾಳನೇ ||೩೧||

ಉ|| ಪೊಂಪುಳಿ ಮಗ್ಗುಲಿಕ್ಕದವೊಲಂಗದ ಬಲ್ಬೆಮರಿಂಗದಂತೆ ನೇ |
ತ್ರಂಪಡೆದೆಳ್ಗೆರೊಂದದವೊಲುರ್ಬಿದ ಚೆಂದುಟಬೀಯದಂತೆ ಸು || ಯ್ಗಂಪೆಲ
ರೋಟಮುಂ ಬಿಡದವೊಲ್ತನುಗುಣ್ಮೆದಸೇದೆಜಾರದಂ | ತಿಂಪಡರ್ದಂಗಜಾತ
ಸುಖಮುಂನಿನಗೀಯದೊಡಾಂಭುಜಂಗನೆ ||೩೨||

ಉ|| ಅಂಗುಟ ಮುಂಘ್ರಿಯುಂ ಪರಡು ಜಾನುಕಟೀತಟ ನಾಭಿವಕ್ಷ
ಮು | ತ್ತುಂಗಕುಚಂ ಭುಜಂಮಿಸುಪಕಕ್ಷೆಗಳೋ ಷ್ಠಕಪೋಲಮಕ್ಷಿಫಾ ||
ಳಂಗಳು ಮುತ್ತನೂಂಗಮೆನಿಪೀ ಯೆಡೆಯೊಳ್ಕ್ರಮದಿಂ ದ್ವಿಪಕ್ಷದೋ |
ಳ್ಪೊಂಗಿಸುತೂರ್ಧ್ವದೇಶಕಿಳುಪುತ್ತೆಡದೊಳ್ಕಲೆಯುಂವಿಳಾಸದಿಂ ||೩೩||

ಕಂ|| ಮಿಸುಪಷ್ಟವಿಧಾಲಿಂಗನ | ಮುನೂನಮೆಂಬತ್ತುನಾಲ್ಕುಬಂಧಂ
ಗಳ್ಚುಂ || ಬನಮುಂದ್ವಾದಶವಿಧಮೆಂ | ಬಿನಿತರೊಳುಚತಪ್ರಕಾರಮರಿದೆಸ
ಗುತ್ತಂ .... ||೩೪||

ಕಂ|| ಪರಿವಿಡಿಯಿನಿಂತುಬಾಹ್ಯಾಂ | ತರರತಮುಂ ನೆಗಳ್ದಿಪಂಜಯುಂ
ತನೊ ನಳಕೂ || ಬರನೊ ಮನಸಿಜನೊ ಯೆನೆಸಮ | ಸುರತಸುಖಾಬ್ಧಿಯೊ
ಳೆನಿನ್ನನಾಳಿಪೆನಬಲೆ .... ||೩೫||

ಕಂ|| ಜಗುಳೆನಿರಿ ಮುಗುಳೆಕಣ್ಮಲ | ರೊಗುಮಿಗೆಯಿಂಕಾಮುಕರ
ಧಿತುಳ್ಕಾಡೆ ಮನಂ || ಬುಗುವಾಲಿಂಗನಮಾತ್ರದೆ | ನೆಗಳ್ವೆಂನ್ವೈಮರಪೆನಿಂ
ದು ನಿನಗಿಂದುಮುಖಿ .... ||೩೬||

ಕಂ||ಸ್ಮರನಿಂದುಧನ್ವನಾದಂ | ತರುಣಿಮುಖಿಂದೆನಗೆಸಫಲಮಾದುದುವಲ

ಮೆಂ || ದುರುಮುದಮುಸಾಳೆನಿಸಗಂ | ಸುರತೋತ್ಸವವಿಶಾಯದಿದೋರ್ಡಾಂ
ವರವಿಟನೆ ||೩೭||

ಕಂ|| ನೋಡೆನ್ನಪರಿಯುಸಿಂವೊಡ | ಗೂಡೆನ್ನೊಳ್ಮೋಹನಾಂಗಿಯೆಂ
ದವನೆನೆತಾಂ || ನೋಡಿನಸುನಗುತವಿಟಕುಲ | ಚೂಡಾಮಣಿಮುಝುಕಿಲೀಸ
ನಾಡಿದೆಯೆಂದಳ್ ||೩೮||

ಮ|| ವೃ|| ಪೊಸತೀಜಾಣ್ನುಡಿಯೆಲ್ಲಿಕಲ್ತೆಯಿದರಿಂದೆನ್ನೊಳ್ಕರಂನಿನ್ನ
ಬ | ರ್ದೆಸೆನಂಸಂಬಗೆದೋರಿದ್ಪೈ ಛಲಕಿಕಂದರ್ಪಾಗಮಾಭಿಜ್ಞನಿಂ || ನೆಸಕಂ
ಸಾಲ್ಗುಮಿದೇಕೆನೀಂಜರಚುಸ್ಪೈಪ್ರೋಗುಸದ್ಭಕ್ತಿನೀ | ತಿಸುಶೀಲಂಸಮನಲ್ತು
ಕೂಡದೆನಗೊಂವಲ್ಲಿನ್ನೊಳುರ್ವೀಪತೀ ||೩೯||

ಚದುರಂನೀನಾದೊಡಿಂತಿಂತುಸಿರ್ದಮುಡಿಗಳಂ ಕೇಳ್ದುಸನ್ಮೋಹಮುಂ
ತಾ | ಳ್ದಿದಳಲ್ಲೀಕಾಂತೆಯೆಂದೊಳ್ಪರಿದುಕಡೆಗೆನೀಂಬೇಗಜಾರಲ್ಕೆವೇಡಾ ||
ವಿದಿತಂಭಾವಜ್ಞನಾದಂದಬಳಿಯುಕಡೆಗಣ್ನೋಟದಿಂಕಂಡುಮೋಹಾ | ಸ್ಪದ
ಭಾವಾಭಾವಮುಂಜಾಣ್ಮೆಯೊಳೆತೊಲಗುವಂದಂದಮಂಕಾಣವೇಡಾ ||೪೦||

ಉ || ಒತ್ತೆಯನೊಲ್ಲೆನೆಂದೊಡೆಲೆ ನೀಂವಿಟನಾದೊಡದೆಂತುಬಂದಿ
ಪೇ | ಳ್ಮತ್ತೆಮದೀಯಮಂದಿರಕೆ ಸದ್ರಸಿಕೋತ್ತಮನಾದೊಡೆಂತುಮ ||ಚಿ
ತ್ತದನೇಹಮುಂತಿಳಿಯದಾಡಿದೆ ಕಾಮಕಳಾಪ್ರಸಂಗಮುಂ |ವಿತ್ತದಬಲ್ಮೆಯು
ಳ್ಳೊಡಿಳೆಯೊಳ್ಗಣಿಕಾವಳಿಶೂನ್ಯವಾದುದೆ ||೪೧||

ಚ|| ಹರಪದಭಕ್ತನಾದೊಡಿನಿತಂ ಗಜವೋಹವಿಕಾರಮಾಂಪುದೇಂ|
ಗುರುಭಜನಾರ್ಪಿತಾತ್ಮತನುವಾದೊಡದೆಂತುತನೂವಿಮೋಹದೇ | ಳ್ತರಮುಕ
ಟೀಕೆಬೇಳ್ತನದಪೇರ್ಮೆಯುವಾತು ವಿದಗ್ಧಪುಂಗವ ಸ್ಮರಿಯುಭುಜಂಗರೇಂ
ನಗರಿ ನಿನ್ನವಿಚಾರಿತೆಕಂಡುಧಾತ್ರಿಯೊಳ್ ||೪೨||

ಕಂ|| ಅರಿತಮುದುಳ್ಳಡೆ ಕಾಮದ | ಬರಿಕಳವಳದಳಮನುಳಿದುಮಾ
ಣ್ಬೆನ್ನೊಳ್ಸಂ || ದರಕೆಯನೆಲೆಗುರುಭಕ್ತಿಯೊ | ಳಿರಕಂಬಡೆಬಂದಬಟ್ಟೆವಿ
ಡಿತಳರೆಂದಳ್ ||೪೩||

ವ || ಎಂದ ವಾರಾಂಗನೆಯ ಬಿರುನುಡಿಗಸಹ್ಯಭಾವಂಬಡದೆಮಾ
ಣ್ಬೊಂಡು ||

ಕಂ|| ಪುರುಷಾಂತರದಿರವರಿಯದ | ಮರುಳೆ ಮದಾಂಧತೆಯೊಳಿಂ

ತುಪೋಗೆಂದಪೆ ನೀಂ ‖ ನವವರಿಸದೆನ್ನನೀ ನಿ । ಷ್ಠುರವಕ್ರಾಲಾಪತತಿಗೆ ಕಾರಣಮೇನೊ ‖ .... ‖೪೪‖

ಕಂ‖ ವಾರಾಂಗನೆನೀಂಸುಗುಣ । ಶ್ರೀರಾಜಿತರಾಜಪುತ್ರನಾನೆಂಸಂನಿ ‖ ಷ್ಕಾರಣಮೊಲ್ಲದೆಪೋಗೆನೆ । ಭೂರಿಪಣಾಂಗನೆಯರೆಲ್ಲಪಳಿಯರೆನಿನ್ನಂ‖

ಕಂ‖ ಸಕಳಕಳಾನಿಧಿರಾಜಂ । ಗಕಟವೊಗಂ ಗೊಡದನಿನಗಮಾಪದ್ಮಿನಿಗಂ ‖ ಪ್ರಕಟಗುಣಮಿದೆರ್ೂಡೇಂಕಂ । ಟಕನಿವಹಂಜಾಡ್ಯಭಾಪಮಿದುವೆನಿಸರ್ಗಂ ‖ .... ‖೪೬‖

ಮ‖ ಸ್ರ‖ ವೃ‖ ಪಡಪಿಂಗಿಸ್ನಾರುಮುಂನೀಂ ಕರೆಯೆನೆನುತಣಂಪೂಣ್ಕೆಗೈಯ್ಯಲ್ಲದಿದ್ದಂ । ದೊಡಲೊಳ್ನಿಷ್ಕಾಮುಮುಂನೀನುಡುತಡಿಯುಮಹಾದೇವಿಯಂತ್ಯೈದೆತಾಳ್ಮೇ ‖ ಣ್ಕ್ರ್ರಡನಿಂಗಂಡಂದಮುಂನೀಂಪಡೆಪ ರತಿಲಕಾಂಬಾಪ್ಯೆಯೆಂತಂತಪಲ್ತೆಂ । ಬೊಡನೀನಾವೀರಚೋಳಾಂಬೆಯುವೊಲಭವನೇಗಂಡನಾಗಿರ್ಪುದೀಗಳ್ ‖ .... ‖೪೭‖

ಕಂ‖ ಅಂತಲ್ಲದೊಪೆಲೆನಿನ್ನನ । ದೆಂತುಂಬಿಟ್ಟಪೆನೆಕೂರ್ತುವಾರಾಂಗನೆಗೋ ‖ ರಂತನಳೊಲ್ಲದೆಪೋಗೆನೆ । ತಾಂತಳರ್ದನೆನಿಪ್ಪನಗೆಗೆಪಕ್ಕಾದಪೆನೆ‖

ವ ‖ ಎಂದವನೆನೆ ಕಾಂತೆಕಂಗನೆಕನಲ್ದು ಕೆಂಪಡರ್ದ ಕಟಾಕ್ಷದಿನಡರೆನೋಡಿ ‖

ಚ ‖ ವೃ ‖ ಆರರೆಭುಜಂಗರಾಜಮದನಾಗಮಸಾರಧುರೀಣ ವಾರಸೌಂ । ದರಿಯೊಳೆಬಲ್ಮೆಗೆಯ್ದುಪೊಸನೇಹಮನುರ್ಬಿ ಸಲೊಲ್ವಜಾಣಭಾ ‖ ಸುರಕುಸುಮೌಘಮುಂ ಪೊಸೆದುಕಂಪನೆ ಕೊಳ್ವವಿದಗ್ಧಭಾವಚಾ । ತುರತೆಗೆ ಕೂರ್ತಳಲ್ಲದಳಕೂರಿಪ ಬರ್ದನಿದೆಲ್ಲಿಕಲ್ತೆಯೊ ‖ ‖೪೯‖

ಮ ‖ ಸ್ರ ‖ ಚೆಲಿವೆಣ್ಣಾಂ ನಿನ್ನಪಂ ಗೆಳ್ಳನಿತುಮೆನಗೆ ಮುನ್ನಿಲ್ಲಮಲ್ಲಿಂಗದೇವಂ । ಸಲೆಕೊಟ್ಟೀಕಾಯಿಕಪ್ರಕ್ರಿಯೆಯೊಳನುದಿನಂ ಬಾಳ್ವೆನನ್ಯಾಯದಿಂ ನಿ‖ ಶ್ಚಲದರ್ಪಂಬೆತ್ತು ನಿನ್ನಾಳತಿಗೆ ಸಲಿಸಲೆಂದಿರ್ಪೆಯೆಂನನ್ನಿರರ್ಥ । ಕ್ಕೆಲೆನಿನ್ನಂಬಲ್ಲರೇಂಮೆಚ್ಚುವರೆನಿನಗಿದೇಂತಕ್ಕುದೆದುರ್ಬಿಮೋಹಂ‖

ಚ ‖ ಪನಜಮುನಭ್ರದೊಳ್ತಿರಿಯಲಕ್ಕುಮೆ ಸಾರಮರೀಚಿಯಲ್ಲಿಭೋಂ । ಕನೆಜಳಮಂತುಳುಂಕಿತರಲಕ್ಕುಮೆ ಸೈಕತದಲ್ಲಿತೈಲಮುಂ ‖ ಘನತರಯತ್ನದಿಂತೆಗೆಯಲಕ್ಕುಮೆ ತನ್ನನದಿಂತುಮೊಲದಂ । ಗನೆಯೊಳೆಸೌಖ್ಯಮುಂಪಡೆಯಲಕ್ಕುಮೆ ಪೇಳ್ವಿಟನುಂಧರಾಧಿಪ ‖ .... ‖೫೦‖

ಮ || ಧನಮುಂ ತೆತ್ತೊಡೆ ನಿಶ್ಚಯಂ ಸಲಿಸಿ ನಾನಾವಸ್ತುಸಂದೋಹ
ಮುಂ | ಮನೆಗೊಲ್ದಿಯ್ದಿಸಿ ರನ್ನ ಚಿನ್ನದೊಡವಂ ಕೈಗೆಯ್ದು ಸಂಪ್ರೀತಿಯುಂ ||
ಮನದೊಳ್ಮೇಳಿಸಿ ಜಾಣ್ಮೆಯಿಂ ಕಲಿಸಿ ಮುನ್ನೇಂ ಕೂಡಿ ಮುಚ್ಚಿರ್ದ ಕಾಂ | ತನೊ
ಳೀ ನಕ್ಕಟ ಕೆಮ್ಮನೆಂತು ನುಡಿವೈ ದುರ್ವ್ಯಾರಗರ್ವೋಕ್ತಿಯಂ || ||೫೨||

ಕ|| ಬರೆದ ಪೊಸ ಚಿತ್ರದಲರೊಳ್ | ಪರಿಮಳಮಂ ಕೊಳ್ವೆನೆಂಬ ತುಂ
ಬಿಯ ಪೋಲ್ ಸಾ || ದುರವಣಿಸಿ ನೇಹವಿಲ್ಲದ | ತರುಣಿಯ ರತಿಗೊಲ್ವ
ಮಾನವಂ ಮರುಳಲ್ತೆ || .... ||೫೩||

ಕಂ|| ಪುಲ್ಲಶರಕೇಳಿಗೊಲ್ದೊಲ | ವಿಲ್ಲದೊಡಂ ಮೇಳದಪ್ಪಿ ಮೇಲ್ವಾ
ಯ್ದು ಮನಂ || ನಿಲ್ಲದ ಕಾಡುವ ವಿಟರಂ | ಪುಲ್ಲಿಂ ಕಡೆಗಣಿಸಿ ಕಾಣರೆ ಕಾ
ಮಿನಿಯರ್ || .... ||೫೪||

ಚಂ|| ವೃ|| ಎನಗನುರಾಗವಿಲ್ಲದುದಱಿಂ ರತಿಸೌಖ್ಯಮಿದಿಲ್ಲ ನೀನದಂ |
ನೆನೆಯದೆ ಬಲ್ಮೆಗೆಯ್ದಡಪಕೀರ್ತಿ ಪೊದಳ್ದ ಪುದೈದೆ ಕೇಳ್ದ ಸ || ಜ್ಜನರಿಳಿಕೆಯ್ವ
ರಗ್ಗದ ಭುಜಂಗಸಭಾಂತರದಲ್ಲಿ ಹಾಸ್ಯಮುಂ | ಜನಿಯಿಸುಗುಂ ಮರೀಷಣ
ದಿ ದೂಷಣಮುಂ ತಳೆಯಲ್ಕೆ ತಕ್ಕುದೆ || .... ||೫೫||

ಕಂ|| ಅದಱಿಂದೆ ಮಾನನಿಧಿ ಗುರು | ಪದಭಕ್ತಂ ನೀತಿಯುಕ್ತ ಸರಸಂ
ನೀನ || ಪ್ಪುದನಱಿದು ನಿನ್ನೊಳಪಯುತ | ಮುದಯಿಸದಂ ತಾಳ್ವುದನುಳ
ನೀತಿಕ್ರಮಮಂ || .... ||೫೬||

ಕಂ|| ಗಂಡನೊ ನೀಂ ಸಲಿಪದಪಿನ | ಮಿಂಡನೊ ಪೊನ್ನಿತ್ತು ಮುನ್ನ
ಮೆನ್ನಂ ನೀನೇಂ || ಕೊಂಡವನೊ ಬಱಿದೆ ನೀನು | ದ್ದಂಡತೆಯುಂ ತೋರ್ಪೆನಿ
ನ್ನನಾರ್ಮೆಚ್ಚುವರೊ || .... ||೫೭||

ಕಂ|| ದೊರೆತನದ ಬಲ್ಮೆಯೊಲ್ಲದ | ತರುಣಿಯನೊಲಿಸಲ್ಕೆ ಮರ್ದೊ
ಮಂತ್ರಮೊ ಯಂತ್ರೋ || ದ್ಧರಣಮೊ ದೂತಿಯೊ ವಶ್ಯಾಂ | ಕುರತಿಲಕ
ಮೊ ಸನ್ನಿವೇಳ್ಬ ಭುಜಂಗಲಲಾಮ || .... ||೫೮||

ವ|| ಎಂದಿಂತನೇಕವಿಧದಿಂ ವಿಡಂಬಿಸಿ ನುಡಿಯೆ ಗುರುಭಕ್ತರಾಜನದ
ಕ್ಕೆ ತಕ್ಕ ದೆಮುತ್ತಂ ವಿಮೋಹಿತನಾಗಿರ್ಪುದಂ ಕಂಡು ಪಣಾಂಗನೆ ಗಣಿಕಾವಿಡಂ
ಬಮುಂ ನುಡಿದಿವರಿಗೆ ರತಿಜುಗುಪ್ಸೆ ದೋರ್ಪನೆಂದು ನೆನೆದು ||

ಕಂ|| ಕಾಮುಕರ ಭಕ್ತ ನಿನಗೀ | ಕಾಮವ್ಯಾಮೋಹಮುಚಿತಮೆ ಬಿಡು

ಬಿಡುವಾ ॥ ಯೂಮಯಯುಮೆನಿಸುವ ಗಣಿಕಾ । ಸ್ತೋಮಮೊಳೆಲೆತಿಳಿದು
ನೋಡುವುರುಳಿಸಿತುಂಟೆ ...... ॥೫೯॥

ಚಂ॥ ವೃ॥ ಎಲೆವಿಟರಾಜ ಕೇಳ್ಗಣಿಕೆಯು ರ್ಗುಣಹೀನೆಯು ರರ್ಥಲಾ
ಭಸಂ । ಚಲೆಯು ರತೀವಧೂರ್ತೆಯು ರಸತ್ಯಸಮೇತೆಯರಂಗಜಾತವಿ ॥ ಹ್ವ
ಲೆಯು ರಸಾರಮಾನಸೆಯರಸ್ತ್ವವಿಚಾರೆಯು ರಾಪ್ತವಂಚನಾ । ಕುಲೆಯು
ರಧರ್ಮಶೀಲೆಯುರನಾರತದುಷ್ಟಜನಾನುಕೂಲೆಯರ್ ॥ ॥೬೦॥

ಮ॥ ಕೃತಕಾಲಾಪೆಯು ರಿಚ್ಚೆಗಾರ್ತಿಯು ರನಲ್ಪಾಶಾರ್ತೆಯು ರ್ಪಾಪಸಂ
ಗತೆಯು ರ್ನಿರ್ಲಜ್ಜೆಯು ರುಗ್ರೆಯುರ್ಚಪಲೆಯು ಗೋರ್ಗಣ್ಯೆಯುರ್ದಂಭಸಂ ॥
ಯುತೆಯುರ್ಮಾನವಿಹೀನೆಯುರ್ಖಲೆಯುರನ್ಯಾಯಾನ್ವಸಂಚಾರೆಯು । ರ್ವಿತತಸ್ನೇ
ಹವಿದೂರೆಯುರ್ನಿಗಡೆಯು ರ್ವಿಧ್ವಸ್ತವಿಶ್ವಾಸೆಯರ್ ॥೬೦॥

ಕಂ॥ ಮೊರೆಗೆಟ್ಟೊಂದುವಧೂರ್ತೆಯ । ರರಿಕೆಯೊಳಸುವಸುವ ಗೊ
ಳ್ವರಕ್ಕಸಿಯರ್ಬ ॥ ಲ್ಬಿರಿಸಿನಬಿಂಕದವಾತಿನ । ನರುಗುಲಿಗಳ್ವಿಟರಮರ್ಮಪಟು
ಕರ್ತರಿಗಳ್ ॥೬೨॥

ಚಂ॥ ವೃ॥ ಅಡಿ ಮುಡಿ ಸಂಚು ವಂಚನೆ ವಿಡಾಯ ಮೊಡರ್ಪು ತೊ
ಡರ್ಪು ತೋಟರ । ಟ್ಟಡಿತನ ಮೊಲ್ಮೆಬಲ್ಮೆ ಪದಿರಣ್ಮು ಚಮತ್ಕೃತಿ ಗಾಡಿ
ಮೋಡಿ ಯಾ ॥ ರಡಿವುಸಿವಾಸಿ ವೈಸಿಕ ಮದಿರ್ಪಣಕಂ ಮುಳಿಸೆಗ್ಗುರ್ಸೊರ್ಕು
ಬ । ರ್ಕುಡಿವುರುಡಂಕೆ ಝುಂಕಣೆನುಸುಳ್ಗಣಿಕಾಂಗನೆಯರ್ಗೆ ಶಾಶ್ವತಂ ॥೬೩॥

ಕಂ॥ ಧನದಾಸೆಯೊಳೊಂದಿರ್ದುಂ । ಮನುಷ್ಯಧರ್ಮಾಪಹಾರಿಗಣಿಕಾನಿವ
ಹಂ ॥ ಜನಿತಾಭಿಮನ್ಯು ನರಕೋ । ಪನಿಮಿತ್ತಂ ತಾನೆನಿರ್ಪುದೇನಚ್ಚರಿಯೆ॥

ಮ॥ ವೃ॥ ಬಲಿದಸ್ಥಿಪ್ರಜದಿಂದೆ ಪಂಜರಮನಂತ್ರಪ್ರಾತದಿಂಕಟ್ಟಮೇ
ವ || ಶರಣರುಘೇಜಯಜಯಬಂಧುರಾವಂ ಬುಧರಹರಧ್ವಾನಂಸ್ವೈವರಿಯೆಸಕಳೋರ್ವೀಜನಮುಚ್ಚರಿಪಡೆನಿಜರಮಣಿವೆರಸಿಪೃಥುವೈಭವದಿಂ ||

ಕಂ||ಧಿಂಕಿಟ್ಟೆಗಗನತಳಕೆ ವಿ|ರಂಕಂನೆರೆಯುರ್ಗ್ಗೆತಳರ್ಪತೆರದಿಂ ತಳರ್ದಂ||ಘೋಂಕನೆಕೈಲಾಸಕೆಗಣ | ಕಿಂಕರನಾಪಾಲಂಗುರ್ಜರಕ್ಷಿತಿಪಾಲಂ ||

ಮ|| ಸ್ರ|| ವೃ|| ತರುಣೀಸಂಯುಕ್ತನಾಗಳ್ ಶಿವಗಣಕೃಪೆಯಿಂ ಸೌಖ್ಯಮೊಂದಿರ್ದನಾಭೂ | ವರವರ್ಣ್ಯಂ ತನ್ನಲೋಕಂಬೆರಸು ಶಶಿಧರಾವಾಸದೊಳ್ಮಾಣದೆಂದಾ || ಗುರುಭಕ್ತಂಗೊಲ್ದುಪೇಳ್ವಳ್ಪಣವಧುವೆನುತಂ ಭಕ್ತಿಯಿಂಪೇಳುತಂ ಶಂ | ಕರಭಕ್ತಶ್ರೇಣಿಗಾಮೋದಮನೊದವಿಸಿ ಕಣ್ಗೊಪ್ಪುತಿರ್ದಂವೃಷೇಂದ್ರಂ ||೧೯೪||

ಮಹಾಸ್ರಗ್ಧರಾವೃತ್ತ|| ತರುಣಾದಿತ್ಯಪ್ರಕಾಶಾವರಣೆ ವರದೆಕಳ್ಯಾಣಿ ಕಾಮಾಕ್ಷಿವಿದ್ಯಾ | ಕರಿವಿಶ್ವಾಧಾರೆಚಂದ್ರಾಭರಣೆಚತುರೆಚಿತ್ರಾಂಗಿಚಿದ್ರೂಪವೀಣಾ || ಧರೆವಾಣೀಪಾಣಿಪದ್ಮಾರ್ಪಿತಮಧುಭರಮಂದಾರಮಾಲಾಂಚಿತಶ್ರೀ | ಚರಣಾಂಭೋಜಾತೆಯೆನ್ನಂಪೊರೆನಿರುಪಮಿತಾಮ್ನಾಯವಾಣೀವ್ಯಾಣೀ .... ||೧೯೫||

ಗದ್ಯ|| ಇದು ವಿನಮದಖಿಳಸುರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ
ಪರಮಶಿವಲಿಂಗ ಪಾದಾರವಿಂದ ಪರಾಗ ಭಸಿತ ಭಾಸುರ
ಲಲಾಟಪಟ್ಟ ಸರಸಜನಮಾನಿಕೋಭಯಕವಿತಾವಿಶಾರದ
ಶ್ರೀಷಡಕ್ಷರ ದೇವಭಕ್ತಿವಿರಚಿತ ಶ್ರೀಮದ್ವೃಷಭರಾಜ
ವಿಜಯ ಮಹಾಪುರಾಣದೊಳ್ ಮಲ್ಹಣಪಾಲಗುರ್ಜರಕಥಾಭಿವರ್ಣನಂ ಏಕೋನತ್ರಿಂ
ಶದಾಶ್ವಾಸಂಪರಿಸಮಾಪ್ತಂ.

ನಾಂದಿ || ಲಲಿತಪದವೃತ್ತ|| ಕಾಯಗುಣವರ್ಜಿತವಿಮಾಯಗಣಸಂಚಯಸಹಾಯನಿಗಮಾಗಮನಿಕಾಯನುಸರಳೋಕ್ತ | ನ್ಯಾಯಜಿತವಾದಿಸಮುದಾಯಶಿವಭಕ್ತಸಮವಾಯಜಯದಾನಸದುಪಾಯಮಹನೀಯ || ಧೇಯಖಚರೇಂದ್ರಚಯಗೇಯಚತರಶಂಕರವಿಧೇಯಬುಧಸುತ್ಯರುಚಿರಾಯಪರಬೃಂದಾ | ಜೇಯಪೂರಿಪೂರ್ಣಗುಣಜಾಯಸಕಳೇಷ್ಟಫಲದಾಯಕಗಿರೀಶಗಣನಾಯಕವೃಷೇಂದ್ರಾ ||

ಲಲಿತಪದವೃತ್ತ|| ಹೀರಹಿಮತಾರಗಿರಿನಾರ ದಪಟೀರಘನಸಾರಸುರವಾರಣತುಷಾರಕರತಾರಾ | ಹಾರಶಿತನೀರಧರಪಾರದಸುಧಾರಸಸಮಿಾರಭುಗಿಸಾರುಚಿರಗೌರಸುಯಶೋಂಕ || ಘೋರಭವದೂರಜಿತಸೂರಭವಮಾರಶುಭಸಾರಯಮಿಪಾರನುತಮಿರಶಿವಭೃತ್ಯಾ | ಧಾರಸದುದಾರಸದವಾರಸುಖಪೂರಜಯಚಾರುಪದಸಾರಸವಿಹಾರಬಸವೇಶಾ ||

ಕಂ|| ಶ್ರೀಕುಧರಜಾತಿಮಧುರಾ | ಲೋಕನಮಲಯಜವಿಲಿಪ್ತವಕ್ಷಸ್ಥಳನ || ಸ್ತೋಕಮಹಿಮಾಂಕನಿಂದುಕ | ಲಾಪಂಪೊರೆಗೆಮ್ಮನಾವಗಂಶಿವಲಿಂಗಂ .... ||೧||

ಕಂ|| ಒಸಗೆಮಿಗೆಕೇಳುತಿರೆಶರ | ಣಸಮೂಹಂ ಮತ್ತಮಾಗಳುಸುರ್ದಂಬಸವಂ || ಮಿಸುಪಗುರುಭಕ್ತನೆಸಗಿದ | ಪೊಸಪರಿಯಂ ಭಕ್ತಜನಮನೋವನಚೈತ್ರಂ ||೨||

ಕಂ|| ಪ್ರಿಯರಮಣಿಸುಡಿದ ಕಟಕಿಯ | ನಯನಿಧಿತಾಂಕೇಳ್ದು ಲೇಸುವಡೆದಂಗಡದು || ರ್ಜಯಪಾಲಗುರ್ಜರಂನಿ | ಶ್ಚಯಮಿಷ್ಟವಧೂಕ್ತಿಗೇಳ್ದವಂಗೆಡರುಂಟೆ .. ||೩||

ಕಂ|| ಮೊದಲೊಳತಿವಿರಸಮಾದೊಡ | ಮೊದವಿಸುಗುಂ ಲೇಸನಗ್ರದೊಳ್ಸದತಿಯರಾ || ಡಿದನುಡಿಯದುಕಾರಣಮೆಂ | ನುದಿತೋಕ್ತಿಯಕೇಳ್ವುದೆಂದವಂಗವಳೆಂದಳ್ ||೪||

ವ|| ಎಂದ ಪಣವಧೂಟಿಯ ವದನವಿಧುಬಿಂಬದಿನೊಗೆ ತಂದಸರಸಚತುರೋಕ್ತಿಚಂದ್ರಿಕೆಯಿಂ ಕಾಯ್ಪುಮುಸಗಿ ತನುವೆಲ್ಲಮನಾವರಿಸಿತೀವೆ.

ಕಂ|| ಸೈರಿಸಲಾರದೆಮೇಲ್ವರಿ | ದೋರಂತೆತುಡುಂಕಲಾಟಪಾತನಬಗೆಯಂ || ವಾರಾಂಗನೆನೆನಡೆನೋಡುತ | ಪಾರಭಯಾಂಬುಧಿಯೊಳಾಳ್ದುತಳವೆಳಗಾದಳ್ .... ||೫||

ಕಂ॥ ತಿಳುಪಿದೊಡೆಸಾನಪರಿಯಿಂ । ತಿಳಿಯಂ ಕಾಮಾಂಧನಕ್ಕಟೀ
ಗೆಯ್ದಪೆನೆಂ॥ ದಳವಳಿದು ಕಳವಳಿಸಿ ಮೊಕ್ಕಳಮುಳರ್ದಳಲಾಂತು ಸುಯ್ದು । ಸಿಡಿ
ಮಿಡಿಗೊಂಡಳ್ .... ॥೭॥

ಕಂ॥ ಮೇಲರಿಯದೆ ಕಾಮಾತುರ । ನಾಲಿಂಗಿಸಲೆಸಗುತೆನ್ನ ಹರಣದಪಾ
ಯ॥ಕ್ಕಾಲಂಬನಮಾದಪನೆಂ । ದಾಲಲನೆ ಮನೋವಿಷಾದದಿಂದಿಂತೆಂದಳ್ ॥

ಕಂ॥ ಎತ್ತಿಮೂರ್ತ್ಯರಸನಿಸಗಾಂ । ಪಲವಂದದಿ ನುಸುಕೆ ಕೇಳ್ದು ದಿಲ್ಲ ಕಟ
ನಿ॥ ಗರ್ಳವಿಮೂರ್ತ್ಯರಾಜ್ಞೆಯಿಂಗ । ಲ್ಗಲನೇಂಬ ದಪ್ಪ ದೊಷುಂದೆಸೂಲಿ
ಯೆಬಲ್ಲಂ .... ॥೮॥

ಕಂ॥ ಇನಿತೆನಿತುಪಾಯದಿಂ ಪಂ ಜನೆಗೆಯ್ದೊಡಮೋವೊಪ್ಪೋಗದಿದು
ಪೇಳ್ದಪನಿಂದೆನಗಿಲ್ಲ ತಪ್ಪ ನಿನ್ನಂ ಮನಮೊಲ್ಲದುದಕ್ಕೆ ಕಾರಣಮನೆಲೆ ನೃಪತಿ॥೯॥

ಕಂ॥ ಗುರುಭಕ್ತಂ ಗಡನೀನು ರ್ವರೆಯೊಳಿರುಳ್ಕಂದು ನಿನ್ನ ಗುರುವರನೆ
ನ್ನೊಳ್ ॥ ನೆರೆದಿರ್ದು ತಳರ್ದ ಸದರಿಂ ನರೇಂದ್ರ ನೀನೆಳಸೆ ಸುಸಿಲನಾಂ ಮ
ಯ್ದೆಗಪೆಂ .... ॥೧೦॥

ವ॥ ಎಂಬುದುಮಾಸುಡಿ ಕೂರಂಬಿನಂತೆ ಕರ್ಣಮಂ ತಾಗೆ ಬಿಸಿಗೆಂ
ಡಮಂ ಮೆಟ್ಟಿದಂತಿರಾಗಿಸ್ಪದಯಂ ನಸ್ಸನೆ ಪಾರೆ ಭಯರಸಮೊಳಳ್ದು ಹಾಹಾ
ದೇಶಿಕೇಂದ್ರ ಕೆಟ್ಟೆ ಕೆಟ್ಟೆನೆಂದು ಬಾಯ್ವಿಟ್ಟು ಧರಣೀತಳದೊಳೊಪ್ಪನೆ ಬಿಳ್ದು॥

ಕಂ॥ ನಡುಗುವೆರ್ದೆನಾಂಟಿದತಿಭಯ ಮೊಡನೊಡನುರದೇಳ್ವ ಶೋಕ
ಶಿಖಿಬತ್ತಿದ ಬಾಯ್ಗುಗ್ಗುಡು ಗುಡನೆಸುರಿವ ಕಣ್ಬನಿ ಕಡುವಿಸುಪಾಂತಿಳಿಪ ಸುಯ್ಗ
ಳೆಸೆಪಳಯಿಸಿದಂ .... ॥೧೧॥

ಕಂ॥ ದಪಶಿಖಿಯಂ ಮುಳ್ಗಿಸಿ ಮೇ । ಘುಮೆಯ್ಯಂ ಪೆರ್ಜುಗೆಯ್ವ ಕಾ
ಗಾರ್ಲದವೊ॥ ಲವಳನುಡಿ ಕಾಮವಹ್ನಿಯ । ತವೆ ಮುಳ್ಗಿಸಿ ಶೋಕಶಿಖಿಯನೇನು
ರ್ವಿಸಿತೋ .... ॥೧೨॥

ಕಂ ॥ ಗುರುನಾಥ ಹಾ ಮಹಾಗುರುವರ ಹಾ ಹಾ ಗುರುವರೇಣ್ಯ ಹಾ
ಹಾ ಘನಮ॥ದ್ಗುರುಲಿಂಗ ಹಾಯೆನುತೆ ಕಾಳ್ಪುರಮಾರ್ಗ ದೃಗಂಬು ಬಿಕ್ಕಿಬಿರಿ
ದಳುತಾಗಳ್ .... ॥೧೩॥

ಮ॥ ವೃ॥ ನಡೆತಂದಾಪಣಕಾಂತೆಯಂಘ್ರಿಗೆರಗುತ್ತಂ ತಾಯೆ ನೈಗೊ
ರ್ಬಿನಿಂ । ತೆಡರ್ದ ಜ್ಞಾನದಿ ನಿನ್ನ ನರ್ಥಿಸಿದ ಪಾಪಂ ಪ್ರೋಪ್ಪುದೆಂತಕ್ಕ ನಿ॥ ನ್ನೊಡನಾ
ಕಾಮವಿಕಾರದಿಂ ನುಡಿದಘುಕ್ಕೇಗೆಯ್ವೆನೀ ನಿನ್ನ ಸಂಗಡ ಮಾಂಸಕ್ಕ ಪರಾಧ

ಮೆಂತಳಿಗುವಿಾನಿನ್ನಂಗಮುಂಮೋಹದಿಂ ‖ .... ‖೧೪‖

ಉ ‖ ನೋಡಿದದೋಷಮೆಂತುಪರಿಗುಂ ಬೆಸಸಂಬಿಕೆ ನಿನ್ನೊಳಾಂ
ಮನಂ | ಮಾಡಿದಘೋರದುಷ್ಕೃತಿಗೆ ನಿಷ್ಕೃತಿಯಾವುದೊ ನಿನ್ನಸಳ್ಕರಿಂ‖
ಕೂಡಲೊಡರ್‍ಚಿದೀದುರಿತಮೇತೆರದಿಂ ತವಿಲಕ್ಕುಮಿಂತುರೋ | ಡಾಡುತೆನಿ
ನ್ನನೋಯಿಸಿದಪಾತಕಮೆಂತುವಿನಷ್ಟಮಪ್ಪುದೊ‖ ‖೧೫‖

ಕಂ‖ ಸ್ಮರಸರ್ಪಗರಳದುರಿಯಿಂ ‖ ದುರಿದೆಂ ವ್ಯಾಮೋಹಮೆಂಬಬ
ರಸಿಡಿಲಿರಗಿ ‖ ತ್ರಿರವಕ್ಕಟ ಮಾಯಾಭೀ | ಕರತರರಾಕ್ಷಸಿಯುಬಾಯ್ಗೆ ಸವಿ
ದುತ್ತಾದೆಂ ‖ .... ‖೧೬‖

ಕಂ‖ ಎನಿತೆನಿತುಹಿತಮುನೀನೊ | ಲ್ದನುನಯದಿಂಪೇಳೆಕೇಳದಾಂ
ಮರುಳಾದೇಂ ‖ ಜನನಿಮಿಗೆಮುನ್ನಮೆಂತ | ಪ್ಪನವಧಿಪಾಪಪ್ರಯುಕ್ತ
ನೊಬಗೆವಾಗಳ್ ‖ .... ‖೧೭‖

ಕಂ ‖ ಸಲೆಪೂರ್ವಜನ್ಮದೊಳ್ಗ | ಲ್ಗಲನದ್ವೈತಮನೆಪಿಡಿದುಕಾಲ
ತ್ರಯದೊಳ್ ‖ ನಲಿಪರ್ಚಿಸದಾದೆನೊನುಂ | ಜುಲಶಿವನಂ ಷೋಡಶೋಪ
ಚಾರಕ್ರಮದಿಂ ‖ .... ‖೧೮‖

ಕಂ‖ ಹರನೆರೆಯನಾಳ್ದಲಾನೆಂ | ಬಿರವರಿ ದಾಚರಿಸದಾದೆ ನೊಫ
ಲಕಾಂಕ್ಷಾ ‖ ತುರನಾಗಿಪೂಜೆಗೆಯ್ದೆನೊ | ಪುರವೈರಿಯನನ್ಯಚಿತ್ತದೊ
ಳ್ಭಜಿಸಿದೆನೋ ‖ .... ‖೧೯‖

ಕಂ ‖ ರಾಜೋಪಚಾರಮನ್ನಿ | ರ್ವ್ಯಾಜದೊಳಾನೆಸಗದಾದೆನೊ
ಶಂಭುಗೆ ತ ‖ ತ್ಪೂಜೆಯನುಳಿದಾಹಾರಮ | ನೋಜೆಯನಳಿದುಳುಪಿಕೊಂ
ಡೆನೊಮೂರ್ಖತೆಯಿಂ ‖ .... ‖೨೦‖

ಮ ‖ ವೃ ‖ ಪರಶಾಸ್ತ್ರಾವಳಿಯೊಳ್ ಸದಾವಿಹರಣಂಚೆತ್ತಿರ್ದೆನೊಸ
ತ್ಯಲಾಂ | ಕರಶಾಸ್ತ್ರಾಳಿಯವಜ್ಞೆಗೆಯ್ದೆನೊ ಬಳಲ್ದೆಯ್ತಂದಮಾಹೇಶ್ವರೋ‖
ತ್ಕರಮುಂಮುನ್ನಿಸದಾದೆನೊಶರಣರಂಕಂಡಾಕ್ಷಣಂತಂನಮ | ಸ್ಕರಣಂಗೆಯ್ಯ
ದೆಪೋದೆನೊಹಿರಿಯರಾಜ್ಞಾಲಂಘನಂಗೆಯ್ದೆನೊ‖ ‖೨೧‖

ಮ‖ ಸ್ರ‖ ಘನಸದ್ಭಕ್ತಪ್ರತಾನಂಕೆಳಗಿರೆ ಪರಿದಗ್ರಾಸನಂಗೊಂಡು
ಕುಳ್ಳಿ ‖ ರ್ದೆನೊ ಸೊರ್ಕಿಂಜಂಗಮೌಘಂಬರೆ ಸಮಯನಿಯುಕ್ತೋಪ
ಚಾರಂಗಳಂಸಂ ‖ ಮನದಿಂದಾಂಮಾಡದೇಂಪೋದೆನೊ | ಹರಚರಸತ್ಪೂ
ಜೆಯಂಶಕ್ತಿಯಿರ್ದಂ | ತೆನೆಗಳ್ಚಲ್ಸಲ್ಲದೇನಾದೆನೊ ಚರಚಯದೊಳ್ಪೂರ್ವ
ಜಾತ್ಯಾದಿಯೊಳ್ಪಂ ‖ .... ‖೨೨‖

ಚಂ || ಬಗೆದೆನೊ ಪಙ್ತಿಭೇದಮನೊಡರ್ಚಿದೆನೊ ಚರಲಿಂಗಪಙ್ತಿ
ಯೊ | ಳ್ಮಿಗೆಭವಿಮಾರ್ಗದೊಳ್ನಡೆದೆನೊ ಭವಿಪಾಕಮನುಂಡೆನೊಶಿವೈ ||
ಕ್ಯಗಣದೊಳೆಗ್ಗನೇಂನೆಪಿಡಿದೆನೊಶಿವಭಕ್ತರೊಳೋರ್ಮೆಸೋಲಮಂ | ನೆಗಳ್ದೆ
ನೆಃ ಗರ್ವದಿಂಜರೆದೆನೊಶಿವತತ್ವಕಳಾಪ್ರಸಂಗಮಂ || ||೨೩||

ಮ || ಶಿವವಿದ್ಯಾಗುರುಭೇದಬುದ್ಧಿಯ ನದೇಂಕೈಗೊಂಡೆನೊಗಾತ್ರ
ಪಾಂ | ಘ್ರಿಪಸೇಜಾತದಜಾನಮಂತೊರೆದೆನೊತತ್ಪಾದಪೂಜಾಮಹೋ ||
ತ್ಸವಕಾಲಸ್ಯಮನಾಳ್ದೆನೊಮರೆದೆನೋತದ್ದೇಶಿಕೇಂದ್ರಾತ್ಮಸಂ | ಭವರಂ
ಮನ್ನಿಪುದಂ ಭವಿಪ್ರಜದಮೇಳಾಪಕ್ಕೆಪಕ್ಕಾದೆನೊ || ||೨೪||

ಮ|| ಸ್ರ|| ಪರವಾದಿವ್ರಾತಕಾನಳ್ಕಿದೆನೊ ಪರಶಿವಾಚಾರಮಂಮಾ
ಣ್ದೆನೊಶಾಂ|ಕರಲೀಲಾಸತ್ಕಥಾಕರ್ಣನದೊಳಲಸನಾಗಿರ್ದೆನೊಶೈವಧರ್ಮೋ||
ದ್ಧರಣಕ್ಕಾಂವಿಘ್ನಮಂ ಚಿಂತಿಸಿದೆನೊ ವಿಷಯೋದ್ರೇಕದೊಳ್ಸಂದೆನೊಭ |
ಕ್ತರಪುಸ್ತ್ಯೋಕ್ತಂಗಳಂದೂರಿದೆನೊ ತೊರೆದೆನೊಶೀಲಮಂಲೌಲ್ಯದಿಂದಂ ||

ಮ || ಸ್ರ | ಶಿವನಿಂದಾವಾಕ್ಯಮಂ ಕೇಳ್ದೆನೊ ಪರಧನಮಂಕೊಂಡೆ
ನೊಮೋಸದಿಂದ | ಸ್ವವಧೂಟೀಸಂಗಮಂಮಾಡಿದೆನೊ ಪಳಿದೆನೊಶಿಷ್ಟ
ರಾಶೀಲಮಂಮಾ || ಣ್ದವರೊಳ್ವಾದಿದ್ದೆನೊ ಸೂಸಿದೆನೊಧರೆಗೆಲಿಂಗಪ್ರಸಾ
ದಾಂಬುವಂ ಸಾ | ಧುವಿರೋಧಂಗೆಯ್ದೆನೊಮಾಡಿದೆನೊಕಪಟಮಂಮಾ
ಣ್ದೆನೊಭಕ್ತಿಯೊಳ್ಸಂ || .... ||೨೬||

ಕಂ|| ಪರಿಕಿಪೊಡಿವರೊಳಗೊಂದುಂ | ದುರಿತಮನೆಸಗದಡೆಮುನ್ನ
ಮಿಂದೆನಗೀಗ || ಳ್ಗುರುತಲ್ಪಗಮನದೋಷಂ | ದೊರೆಕೊಳ್ಗುಮೆಜನನಿ
ಮಾಣಿದೀಧಾರುಣಿಯೊಳ್ || ||೨೭||

ವ|| ಎಂದಿಂತಾಕ್ರಂದನಂಗೆಯ್ದುಮತ್ತಮಿರದೆ ||

ತರಳವೃತ್ತ|| ಗುರುವಿನತ್ತಿಗೆತಳ್ತನಾದಿಸಿಯೊರ್ಮೆಸೋಂಕಿದಕಾಂತೆತ|
ದ್ಗುರುವಿನೋದಿಸಿದಾಕೆಯೊತ್ತೆಯನಿತ್ತಕಾಮಿನಿಮುನ್ನವೊ || ಲ್ದಿರಿಸಿಕೊಂ
ಡುಳಿದಿರ್ದನಾರಿಸಹಾಸ್ಯಭೋಕ್ತೆಯೆನಿಪ್ಪಸೌಂ| ದರಿಯರಾಗುರುಪತ್ನಿಯೋ
ಳ್ತೊಣೆಯೆಂಬರಾಗಮಕೋವಿದರ್ || .... ||೨೮||

ಕಂ|| ಅದುಕಾರಣದಿಂನೀಂಗುರು | ಸುದತಿಗಡೆಲಿತಾಯೆ ಗುರುನಿ
ನ್ನೋಳ್ಮೆರೆಮುದದಿಂ || ಮದನೋದ್ರೇಕದಿನಿನಗಳು | ಪಿದೆನೀಘನದೋಷ
ಕಾವುದೊಪರಿಹಾರಂ || ||೨೯||

ಕಂ|| ಗುರುವಧುಗೆಕೂರ್ತಪಾಪಕೆ || ಪರಿಹಾರಮನಕ್ಕಪೇಳ್ವುದೆ ಸಗ್ಗೀಗೆಳೆಸು || ತ್ತುರವಣಿಸಿಪಳಲಸೊಳಕೊಂ | ಡಿರದವಳಡಿದಳಿರೊಳೆರಗಿ ಕಣ್ಬನಿವನಲಿಂ || .... ||೩೦||

ಮ|| ಸ್ರ|| ವೃ||ಲಲನಾಪಾದಾಬ್ಜಮಂತಾಂತೊಳೆವುತೊರಸುತಂಭಾಳಮುಂಬಳ್ಕುತಂ ಸು | ಯ್ದುಲಸುತ್ತುಂ ನೋವುತಂಬೇಯುತೆಪಳಯಿಸುತಂ ಕಂದುತಂಕುಂದುತಂ ಪಂ || ಬಲಿಸುತ್ತುಂಸುರ್ಕುತಂಕಂಪಿಸುತೆಕರಗುತಂ ಕೋ‍ಡುತಂಬಾಡುತಂಕೋ | ಟಲೆಗಿಂಬಾಗುತ್ತೆಬೀಳುತ್ತಳಲುವಳುತೆಬೇಳಾದನಾಭಕ್ತವರ್ತ್ಯಂ || .... ||೩೧||

ಕಂ|| ಮರುಗುವನಳವಳಿಪಂ ಮೈ | ಮರೆವಂ ಕಳವಳಿಪನಂತೆಮೂರ್ಛೆಗೆಸಲ್ವಂ || ಮರುಕಣಿಪಶೋಕದಿಂಸೈ | ಗರೆವಂಕಣ್ಬನಿಯನಿಳೆಯೊಳುರುಳ್ವಂಪೊರಳ್ವಂ || .... ||೩೨||

ಚಂ|| ವೃ|| ಬರಿದೊರೆವೋದುದೆನ್ನಯವಿವೇಕಮುಡಂಗಿದುದೆನ್ನಸೈಪುಕ| ಟ್ಟೆರಕದದೇಶಿಕೇಂದ್ರಪದಭಕ್ತಿಮಹಾನಿಧಿಮಾಯಮಾದುದೇಂ || ನರಿವೊಳಸೋರ್ದುದಿಂಗಿದುದುಕೀರ್ತಿತರಂಗಿಣಿ ಕೆಟ್ಟೆನಕ್ಕಟೆಂ | ನರಿಕೆಯಶೈವಧರ್ಮಮಳಿಪಾಂತುದುನಿನ್ನಳಿಪಾಂತದೂಸರಿಂ || ||೩೩||

ಕಂ|| ಗುರುವಧುಗೆಳುಪಿದದೋಷಾ | ಕರನವ್ಮೃತಕಳಾಕ್ಷಯಕ್ಕೆಪಕ್ಕಾದಂದ || ಲ್ಗುರುವಧುಗೆಳುಪಿದದೋಷಾ|ಕರನಾದೆನಗವ್ಮೃತಭಾವಮೇಂಸಮನಿಕುಮೆ || ..... ||೩೪||

ವ|| ಎಂದಿಂತುನೊಂದುನುಡಿದಳವಿಗಳಿದಳಲಂ ಸೈರಿಸಲಾರದೆ.

ಕಂ|| ಉರಿಯಂಪೊಕ್ಕಳಿವೆನೊ ಸಾ | ಗರದೊಳಪೊಕ್ಕಾಳ್ದುಮಡಿವೆನೊಕಡಿಕಡಿದೆ || ಳ್ತುರದಿಂದಿಗ್ಬಲಿಗೊಡುವೆನೊ | ಶರೀರಮಂಪುಗುವೆನೊಪುರಾರಿಯಬಸುರಂ .... ||೩೫||

ವ|| ಎಂದುಪಲುಂಬಿ ತನ್ನಸುವಂನಿವರ್ಜಿಸಲೆಳಸಿ ಮತ್ತಮಿರದಾಮಂದಗಮನೆಯ ಮಂದಿರಕ್ಕೆ ರಾಗದಿಂನಡೆಗೊಂಡಕಾಲ್ಗಳಂಕಡಿಖಂಡಂಗೆಯ್ದು ದೆಸೆದೆಸೆಗೀಡಾಡಲು ಸೌಂದರಿಯಸೌಂದರ್ಯಮನವ ಲೋಕನಂಗೆಯ್ದ ನಿಜನೇತ್ರಂಗಳ ನುತ್ಪಾಟನಂಗೆಯ್ದುರಿ ಯೊಳುರುಪಲು ಮಾನ್ಯದುಸ್ಮಿತಮುಖಿಯೊಡನೆಸಕ್ಕ ನಲಿವನಿಜಾಸ್ಯ ವಿವರದಧರರದನಂಗಳಂ ಕೊಯ್ದೊಯ್ದುನುರ್ಗ್ಗುನುರಿಪಾಡಿಕಲ್ಲೊಳಿಟ್ಟರೆಯಲು ಮಾಮಧುರಾಧರೆಯಧರ ರಸ

ಪೊಂಬುಱುಸಿ ಪಲವಂಗಳಪಿದರಸನೆಯುಂಕೇಳ್ದುಸೀಳ್ದು ಬಿಸಿಗಾವಲಿಯೊಳಿಕ್ಕಿಪರಿಯಲುಮಾಲತಾಂಗಿಯುಂ ಗಮನಾಲಿಂಗನಂಗೈಯುಳಿಳಸಿದ ತೋಳ್ಗಳಂತುಂಡಿಸಿಕಿರಿಕಿರಿ.ದಾಗಿತರಿದುತನಿಗೆಂಡದೊಳಿಟ್ಟುಚುರ್ಚುಲಮಾನಿಬಿಡೋತ್ತುಂಗಕುಚೆಯುಕುಚಯುಗಳಮನಪ್ಪಲಿಕ್ಕಿ ಪಟ್ಟ ವಕ್ಷಸ್ಥಳಮನಿರಿದಿರಿದು ಖಂಡಂಗಳಂ ತೆಗೆದೊರ ಳೊಳಿಕ್ಕಿ ಮಿದಿಯಲುಮುಟವಟಿಸಿ ಸಿಡಿಮಿಡಿಗೊಂಡಿಂತಿಂತೆಸಗಿದಲ್ಲದೀದೋಷಂಪರಿಪಡದೆಂದುನೆನೆದು, ಮಗುಳ್ದು ವ್ಯೆಯುಂಮುರೆದು ಬಳಲ್ದು ತೊಳಲ್ದು ಪಲವಂಪಲುಂಬುತಲ್ಲಿಂದೇಳ್ದು ಪುರೋಪಕಂಠ ದುಪವನಕ್ಕೇಳ್ತಂದು ನಿಂದುವನಾಂತರಾಳದ ತರುನಿಕರಮುಂ ಶಕುಂತಸಂತಾನಮುಮನಲ್ಲಲ್ಲಿ ಪರಿವರಿದಭೀಕ್ಷಿಸಿ.

ಮ|| ವೃ|| ಎಲೆಮಾಕಂದಮೆಕಂದಿದೆನ್ನೆಗೆಳ್ದೆಸಾಂ ಶ್ರೀಖಂಡಮೇಖಂಡಚಂ | ಪ್ರಲಲಾಟಂಗಪರಾಧಮುಂಬಸುರೆಕೇಳೆಂನೀಬಸಿರ್ಬೆಂದುದು || ಜ್ವಲಶೋಕಾನಲನಿಂದೆಬೀರಮುಳಿದೆಂಜಂಬೀರಮೇಮಲ್ಲಿಕಾ | ಪಲಿಮಲ್ಲೀನವಿನೇಕಮಿಂಗಿದುದುಬನ್ನಂಬೆತ್ತೆನಾಂಬನ್ನಿಕೇಳ್ ||೩೬||

ಕಂ|| ಕುಂದಮೆಮುಕುಂದವಲ್ಲಭ | ನೆಂದೊಲ್ದು ಪನೆನಗೆಪೇಳಪಿಚುಮುಂದಮನೇ || ಮುಂದಪ್ಪಿದೆನಸುಗೆಯುಸುಗೆ | ನಿಂದುರಿವಂದಂದಮಾದುದೀದುಷ್ಕೃತದಿಂ ||೩೭||

ಕಂ|| ಸಂಪಗೆಕೇಳೆನ್ನಯುಸಾ | ಸಂಪಗೆಪೂಗೋಲನಿಂದೆಮುಳ್ಗಿದುದುಕೃತಾಂ || ತಂಪಾಯ್ತುರಿಯುದಮುನ್ನೆ | ನ್ನಂಪಾದರಿಮುದನವೈರಿಯೆಂತೊಲ್ದಪನೊ .... ||೩೮||

ಕಂ|| ಮಾದಳಮೆಯೆನಗೆಮಿಗೆಸೊಂ | ಮಾದಳವಳಸೋದುರ್ಮದಕ್ಕಟೀಗೆಯ್ದುಪೆನಾಂ || ಕಾದಳಮೆಯುನ್ನಮಾನಸ | ಕಾದಳಲಂಪರಿವೆನೆಂತೊಶಿವಗಣಕೃಪೆಯಿಂ .... ||೩೯||

ಕಂ|| ಕುರುವಕಮೆಯುನ್ನಪುಣ್ಯಾಂ | ಕುರವಕಟಮುರುಂಟಿದತ್ತುಶಿವಶಿವಘನಕಾಮರುಗಮಿತಬಾಧೆಯಿಂದಂ | ಮರುಗಮೆಮರುಳಾಗಿಪೊಲ್ಲದೆಸಗಿದೆನಲ್ತೆ ||

ಕಂ|| ಆಮಳಕಮೆಮದ್ಗುರುವಿತ | ತಾಮಳಕರುಣಾಕಟಾಕ್ಷಮೆಂತಪ್ಪುದೊಪೇಳ್ || ಶ್ರೀಮುಕ್ತಕಗುರುಭಕ್ತಿ | ಶ್ರೀಮುಕ್ತಕನಾಗಿಕೆಟ್ಟೆನಕಟಕಟೀಗಳ್ ||೪೧||

ಕಂ|| ಇರವಂತಿಯುನ್ನಬೆಳ್ತನ | ದಿರವಂತಿಂತೆಂಬೊಡಸದಳಂಗಡಜ
ಗದೋ || ಳ್ಕರವೀರಮೆಘನಕರುಣಾ | ಕರವೀರಪ್ರಮುಥರೊಲ್ಮೆಯೆನಗೆಂ
ತಕ್ಕುಂ || ||೪೨||

ಕಂ|| ವರನಾರಿಕೇಳಕೇಳ್ಗುರು | ವರನಾರೀಕೇಳಿಗೊಲ್ದದುರಿತಾತ್ಮಕ
ನಾಂ||ಸರಳತರುಸೇಳ್ವುದೆನಗೆಲೆ | ಸರಳತರಂಭಕ್ತಿವೃತ್ತಿಯಿಂದಾದಪುದೊ||

ಕಂ|| ಜಾತಿಯೆಮೂಸಿದುದಿಂದುನಿ | ಜಾತಿಶಯಂಗುರುವಧೂಟಿಗೆ
ಳುಪಿದಕತದಿಂ || ಕೇತಕಿಸತ್ಕೃತ್ಯವಸಂ | ಕೇತಕಿದರಿಯಾದುದೆನ್ನಮಾರ
ವಿಕಾರಂ ||೪೪||

ಕಂ|| ಬಕಪಾದಪಮೆಲಲಾಟಾಂ | ಬಕಪಾದಪಯೋಜದೊಲ್ಮೆಯುನ
ಗೆಂತಕ್ಕುಂ || ವಕುಳಮೆಪಳಿಯುದೆಪೇಳ್ಶೈ | ವಕುಳಮೆಗುರುತಲ್ಪಗಮುನಿ
ಯೆಂದಿರದೆನ್ನಂ ||೪೫||

ಕಂ|| ಪಲಸೆಗುರುಪಾದುಕೆಯುನಾಂ | ಪಲಸನ್ಮಸ್ತಕದೆಪಾಪಭಾರ
ಮನಾಂತೆಂ || ತಿಲಕಮುಹೀಜಮೆಪೇಳ್ ಯಮಿ | ತಿಲಕಮುದಾರ್ಯಾಂಘ್ರಿಸೇ
ವೆಗೆಂತಳನಡುವೆಂ .. ||೪೬||

ಕಂ|| ಪೂಗಣೆಯುನಲೆಗೆವಂದೆಲೆ | ಪೂಗಮೆಸಚ್ಚರಿತಪೂಗಬಾಹಿರನಾ
ದೆಂ || ನಾಗಲತೆಗುರುಕರುಣಮಿಲ | ನಾಗಲದೆಂತೆಸಪನುಸುರುಪಾಯುಮ
ನೀಗಲ್ ||೪೭||

ಕಂ|| ಪುನ್ನಾಗಮೆಪರಿಪಟ್ಟುದು | ಪುನ್ನಾಗಸ್ತುತ್ಯಮೆನಿಪಮುನ್ನಹಿ
ಮವಲಂ || ಚನ್ನಂಗಿಯೆಪೇಳ್ತನ್ನಂ | ಚಾನಂಗಿತ್ತ ಭವನೆಂತುಕೃಪೆಗೆಯ್ದ
ಪನೋ .... ||೪೮||

ಕಂ|| ತಾಳತಮಾಲಮೆಘನಹಿಂ | ತಾಳತರುಪ್ರಕರಮೆಮುನೋಗದ
ಮುನಿದಂ || ತಾಳಲ್ಕಾರೆಂತತದುರಿ | ತಾಳಂಬನನಾದೆ ನೆಂದುಬಿಸುಸು
ಯ್ವುತ್ತಂ .... ||೪೯||

ಕಂ|| ಗಿಳಿಯೆಥರೆಗಿಳಿದೆನಕ್ಕಟ | ಕಳಕಂಠಮೆಕಳವಳಕ್ಕೆಪಕ್ಕಾದೆಂ
ಕೇ || ಳಳಿಯೆಮುದಮುಳಿದೆನಿಂದು | ಜ್ವಳಶಿಖಿಶಿಖಿನಯುನನೊಲ್ಮೆಗಾನೆರ
ವಾದೆಂ .... ||೫೦||

ಕಂ|| ಕಳಹಂಸಕಳೆದುದೆನ್ನಯು| ತಿಳಿವೆಳೆತಿಳಿಗೊಳಮೆನಳಿನಮೆನಲ

ಪಳಿದಂ || ತಳಮಳಗುಗೊಳುತಲರಿತೋ | ತ್ಪಳಕುಳಮೆಬಳಲ್ದಿನಳವಿಗಳಿ ದಳಲಿಂದಂ|| .... ||೫೧||

ವ|| ಎಂದಮಂದ ಶೋಕೋದ್ರೇಕದಿಂಮಿಗೆ ಪಲಪಾಡಿಪಲುಂಬಿಪ ಳಯಿಸಿ.

ಚಂ|| ವೃ|| ಬಸದೊಳೆತತ್ತ ನೋದರಿಯಪರ್ಮ್ಮೊಲಿ ಯಿಂದುರಥಾಂಗ ಮುಂದಳ | ದ್ವಿಸಜಮನಾಸ್ಯಮೆಂದು ತಳಿರಂಕರಮೆಂದು ಲತಾಂಗಮೆಂದು ಚಂ || ದಸತರುಶಾಖಿಯುಂ ಚಿಕುರಮೆಂದಳಿಮೊಲಿಯನಲ್ಲಿನೋಡಲುಂ | ನೆನೆಯಲುಮಳ್ಕಿಬಳ್ಕಿಮಗುಳ್ದಿಯ್ದಿನಾಪುರದತ್ತಧಾತ್ರಿಪಂ ||೫೨||

ವ|| ಅಂತೇಳ್ತಂದೊಂದು ಶಿವನಿಳಯಮಿದು ರೊಳಿರೆ ಕಂಡಲ್ಲಿಗೆಯ್ದಿ ಪಂದು.

ಉ|| ವೃ| ಸಾಲಮೆಸಾಲದೇನಿಸಿತಪಸ್ಥಿಕನತ್ಕಳಿಕಪ್ರಬದ್ಧಲಿಂ | ಗಾ ಲಯದಗ್ರಗೋಪುರಮೆಪಾಪವಿಲೋಪಕೆಬುದ್ಧಿವೇಳ್ ಮಹಾ || ಕಾಲಗಣೇ ಶಕಾಲಭಯಮುಂಪರಿಮುಂದಣನಂದಿನಂದಿಸೆಂ | ನೀಲಯಕಾರಿತಾಪಶಿಬಿ ಯುಂಶಿಬಿವಾಹನಪಾಲಿಸಳ್ಕರಿಂ || ||೫೩||

ಕಂ|| ಎಲೆವೀರಭದ್ರಭದ್ರಮ | ನಲಸಿದೆನೀಂಮಾಡುದೇವಿದೇವೇಶನ ನಿ || ಶ್ಚಲಭಕ್ತಿಗುಡುದೃಢವ್ರತ | ದೊಲವಂಪ್ರಮಥರ್ಕಳಿತ್ತುಪಾಲಿ ಪುದೆನ್ನಂ .... ||೫೪||

ಕಂ|| ಪೂತಪುರಾತನಗಣವಿ | ಖ್ಯಾತಾಸಂಖ್ಯಾತಭಕ್ತಗಣರುದ್ರಗಣ ವ್ರಾತಮೆಕೃಪೆಯಿಂಮತ್ಕೃತ | ಪಾತಕಮುಳಿವಂದಮಂನಿರೂಪಿಪುದೀಗಳ್ ||

ಕಂ|| ಪಲವಂಪದಿನೀತೆರದಿಂ | ಪಲುಂಬಿಫಲಮೇಂಮಹೇಶ್ವರಾಶಂ ಕರನಿ || ಶ್ಚಲತೆಮಿಗೆಮತ್ತನುವಸಿದ | ನಲಸದಣಂಬಿಟ್ಟುಶುದ್ಧಸಪ್ಪಿನ ವೋಘಂ ||೫೬||

ವ || ಎಂದುದೃಢಪ್ರತಿಜ್ಞನಾಗಿ ತನ್ನಂಪರಿಚ್ಛೇದಿಸಲ್ಸನ್ನದ್ಧನಾಗಿ

ಕಂ|| ಎರಡುಂಕಣ್ಗಳನಾರ್ದು| ಬರಿಸುತ್ತಂಮೀಂಟಿಕಳಿದುಕರವಾ ಳಿಂದಂ || ಕೊರಳನರಿಪೆಡೆಯೊಳರಸುತೆ | ಪರಿತಂದಪನಗ್ರಜಾತ ಭಕ್ತಂಕಂಡಂ .... ||೫೭||

ಕಂ|| ಪರಗುಣನಿಧಿಗುರುಪರಕರ | ಸರಸಿಜಸಂಜಾತನಮುಳಚರಿತಂ

ಮಹಿಮಾ || ಕರಸೀಶಭಕ್ತನವನಾ | ದರದಿಂಬಳಿವಂದುನೋಡಿವಿಸ್ಮಯ
ಮಾಂತಂ .... ||೫೮||

ಚಂ|| ವೃ|| ಎಲೆಗುರುಭಕ್ತ ರಾಜಗುರುಭಕ್ತಿವಿಲಾಸವಿನೀತಸಾರನಿ |
ಶ್ಚಲಗುರುಭಕ್ತಿವಾರಿಧಿಸುಧಾಕರಸದ್ಗುರುಭಕ್ತಿದಿವ್ಯಮಂ || ಜುಲಮಣಿರೋ
ಹಣಾಚಲಮಹಾಗುರುಭಕ್ತಿಸುಧಾಮರಾಳನಿ | ರ್ಮಲಗುರುಭಕ್ತಿಭೂಷಣಲ
ಸದ್ಗುರುಭಕ್ತಿಸರೋಜಭಾಸ್ಕರಾ .... ||೫೯||

ಕಂ|| ನಿನ್ನಮತಿನಿನ್ನಸಿಷ್ಟೆಸ | ಮುನ್ನತಮೆನಿಸಿದ್ದನಿನ್ನಗುರುಭಕ್ತಿಸುಖಾ
ಸನ್ನತೆಸಮಸ್ತಶಿವಗಣಹೃನ್ನಳಿನಕ್ಕರಿಸೆಗಳ್ದುದತಿಶಯಮುಮುದಮಂ ||೬೦||

ಕಂ|| ಅಪರಾಧಮಿಲ್ಲನಿನ್ನೊಳೆ | ಸುಪವಿತ್ರಚರಿತ್ರಬಿಡುಬಿಡೀಕಜ್ಜಮ
ನೆಂ || ದುಪಚರಿಸಿನಿಲಿಸಿತನ್ನಂ | ಘೃಪಯೋರುಹಕೆರಗಿಮರುಗುವ
ಸುಜನನಾಗಳ್ .... ||೬೧||

ಕಂ|| ತೆಗೆದುಬಿಗಿಯಪ್ಪಿಲೋಚನ | ಯುಗಪರುಣೋದಕವಿಮಿಶ್ರ
ಬಾಷ್ಪಮನೊರಸು || ತ್ತಗಲದೆಕರಪಲ್ಲವದಿಂ | ಸುಗುಣಾಂಕಂಗುರುಪದಾ
ಬ್ಜಮಂಚಾನಿಸಿದಂ ... ||೬೨||

ಚಂ|| ವೃ|| ಅನಿತರೊಳುಣ್ಮಿದತ್ತು ನಯನದ್ವಯವಾಯತಮಾಗಿದೇ
ಶಿಕೇಃ | ದ್ರನಕರುಣಾಕಟಾಕ್ಷಬಲದಿಂಪಿರಿದದ್ಭುತವಾಳ್ದುಭಕ್ತರೊ || ಲ್ದ
ಸುನಯದಿಂದುಘೇಯುಸುತೆಕೀರ್ತಿಸೆಸಂಭ್ರಮದಿಂನಿಜಾಲಯ | ಕ್ಕನುಪಮ
ನೆಯ್ದುತಗ್ರಜಯುತಂಸುಖದಿಂಗುರುಭಕ್ತನೊಪ್ಪಿದಂ ||೬೩||

ಮ|| ಸ್ರ || ಗುರುಭಕ್ತಕ್ಷ್ಮಾವಘೂವಲ್ಲಭನ ಕಥೆಯನಿಂತೊಲ್ದುಪೇ
ಳ್ದಾಮಹಾಭ | ಕ್ತರಚೇತಃಪ್ರೀತಿಯಂತಾಂಸಲಿಸುತೆರಗುತಿಂತಪ್ಪರಿನ್ನುಂ
ಗುರುಶ್ರೀ || ಚರಣಾಂಭೋಜಾತಭಕ್ತರ್ಕೆಲರೊಳರೆನುತಂ ಬಿನ್ನಪಂಗೆಯ್ಯು
ತಂಸಾ | ದರಮೊಪ್ಪುತ್ತಿರ್ದನೀಶಾರ್ಪಿತಮತಿಶಿವಸಿದ್ಧಾಂತದುಗ್ಧಾಬ್ಧಿ
ಚಂದ್ರಂ .... ||೬೪||

ಮಾಲಿನೀವೃತ್ತಂ || ಶತದಳದಳನೇತ್ರೇಶಂಕರಸ್ನೇಹಪಾತ್ರೇ | ದಿತಿ
ಸುತರಣಭೀಮೇದಿವ್ಯತೇಜೋಭಿರಾಮೇ || ತತಭುವನಕದಂಬೇತತ್ವಮಾಲಾ
ವಲಂಬೇ | ಪ್ರತಿಹತನತದೈನ್ಯೇಪಾಹಿಮಾಂಶೈಲಕನ್ಯೇ ||೬೫||

ಗದ್ಯ॥ ಇದು ವಿನಮದಖಿಳಸು ರಾಸುರೇಂದ್ರ ಮುಕುಟತಟಘಟಿತ
ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ
ಪರಮಶಿವಲಿಂಗ ಪಾದಾರವಿಂದ ಪರಾಗ ಭಸಿತ ಭಾಸುರ
ಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರ ದೇವಭಕ್ತಿ ವಿರಚಿತ ಶ್ರೀಮದ್ಬಸವರಾಜ
ವಿಜಯ ಮಹಾಪುರಾಣದೊಳ್ ಗುರುಭಕ್ತಗುರು
ಭಕ್ತಿ ಮಹತ್ವಕಥನಂತ್ರಿಂಶದಾಶ್ವಾಸಂ
ಪರಿಸಮಾಪ್ತಂ.

ವೇಮನಾರಾಧ್ಯ ಕಥನಂ

ನಾಂದಿ ॥ ಲಲಿತಪದವೃತ್ತ ॥ ಶೌರ್ಯಜಸದಾಕೃತಸಪಲ್ವಭುವನಪ್ರಕರ
ಧುರ್ಯಗಣನಾಥಹಿತಕಾರ್ಯಸುಜನಾಂಭೋ । ಜಾರ್ಯಮಸುಕೀರ್ತಿನುತಧಾರ್ಯ
ಮುನಿಹೃನ್ನಳಿನಧಾರ್ಯಪದಸನ್ಮಾರ್ಗಪರ್ಯಟನಶೀಲ ॥ ಸ್ಥೈರ್ಯಯುತನಿರ್ಜಿತ
ಸುರಾದ್ಯಧಿಕಮೇರುನಿಭಧೈರ್ಯನಿಗಮಾಂತಪರಿಚರ್ಯಯುತಲೋಕಾ । ಚಾರ್ಯ
ಪತಿಪಾಲಿಪ್ರದಪಾರ್ಯಮಹಿಮಾಂಕಗಣವರ್ಯಸಕಳಾದಿಜಗದಾರ್ಯಬಸವೇಶಾ ॥

ಕಂ॥ ಶ್ರೀಮದಮರೇಂದ್ರಸನ್ನುತ । ಹೈಮವತೀರಮಣನಮಿತಕ
ಲ್ಯಾಣಗುಣ ॥ ಸ್ತೋಮಾಭಿರಾಮನತುಳೋ । ದ್ದಾಮಂ ಪೊರೆಗೆನ್ನನಾವ
ಗಂಶಿವಲಿಂಗಂ ॥೧॥

ಕಂ॥ ಅತಿಶಯಸೌಭಾಗ್ಯಸಮ । ನ್ವಿತಮೆನಿಸಿವಿರಾಜಿಸಿರ್ಪಕಲ್ಯಾಣ
ದೊಳುಂ ॥ ನತಶುಭಚರಿತನಿಳಾವಿ । ಶ್ರುತನೆಸೆದಂವೇಮನಾರ್ಯನೆಂಬಮ
ಹಾತ್ಮಂ ॥೨॥

ಚಂ॥ ವೃ॥ ಅಮಿತಗುಣಾಕರಂಪ್ರಮಥಪುಂಗವಪಾದಪಯೋಜಭೃಂ
ಗನ । ಸ್ತಮಿತದುರೀಷಣಂಸಕಲವೇದಶಿವಾಗಮವೇದಿಭಕ್ತಿಸಂ ॥ ಕ್ರಮಿತ
ಸುಮಾನಸಂಪ್ರಥಿತಪಾವನರೂಪನಮೇಯವೈಭವಂ। ಶಮಿತನತಾಮಯಂ
ಪ್ರಬಳ ಶೈವಮತಾರ್ಯನಘಾರ್ತಿಭಂಜನಂ ॥೩॥

ಮ॥ ಸ್ರ॥ ಶರದಿಂದುದ್ಯೋತವಿದ್ಯೋತಿತವಿಶದಯಶಂಪಾಶಸಂಹಾ
ರಿಪಂಚಾ । ಕ್ಷರಮಂತ್ರಪ್ರಾಣನಾರ್ಯಪ್ರಕರಪರಿನುತಂಧರ್ಮಕಾಮಾರ್ಥಮೋ
ಕ್ಷಾ ॥ ಪುರಭೂಜಂಸಾರವೀರವ್ರತವಿಹಿತಸದಾಚಾರಸಂಪನ್ನಸುವೀರ್ । ಶ್ವ
ರಚೋರವ್ಯಾಘ್ರಸರ್ಪಾನಲಮುಖಭಯವಿಧ್ವಂಸಕಂಭಸ್ಮನಿಷ್ಠಂ ॥೪॥

ಕಂ|| ತಾಪಸನುತನವನತಜನ| ತಾಪದ್ಘನತಾಪಮೃತ್ಯುಹರನುರು ತರವಿ || ದ್ಯಾಪರಿಣತನತಿಸಿತಮತಿ | ಶಾಪಾನುಗ್ರಹಸಮರ್ಥನಚಲಿತಮ ಹಿಮಂ .... ||೫||

ವ || ಎಂಬನೆಗಳ್ತೆಗಡರ್ಪೆನಿಸಿ ರಂಜಿಸುತ್ತಮಿರ್ದೊಂದುದಿವಸಮಾ ವೇಮನಾರ್ಯಂ ತತ್ಪುರದಬಹಿರ್ವಳಯ ವಿಳಸದುಪವನ ಸವಿಧವಿವಿಧಪರಿಮ ಳರಸಮಿಳಿತ ಮೃದುಳದಳದರದಳಿತಕುಸುಮವಿಸರ ಮನೋಹರಮೆನಿಪ ಕುಸುಮವನಕ್ಕೆ ಪೂದಿರಿಯಲೆಳಸಿ ಕರಂಡಕರಾಂಬುಜ ನೇಳ್ತಂದೊಳಗನೆ ಪೊಕ್ಕು ||

ಚ|| ವೃ|| ಸುರಯಿಯನಾಗಸಂಪಿಗೆಯ ಜಾದಿಯಮೊಲ್ಲೆಯ ಕರ್ಣಿ ಕಾರಟೇ | ಕ್ತರಪವಸಂತದೂತಿಕೆಯ ಯೂಧಿಯಮಲ್ಲಿಗೆಯುಚ್ಚಪೂಗಳಂ|| ಸುರುಚಿರಮಾದಬಿಲ್ವದಳಸಂಕುಳಮಂ ತಿರಿದಲ್ಲಿತೀವುತಂ | ಕರಡಿಗೆಯಂಕ ಡಂಗಿಮುಗುಳೆಯ್ದುರುತಿರ್ಪೆಡೆವಟ್ಟೆಯೊಳ್ಕರಂ || .... ||೬||

ಉ|| ಎತ್ತಿದಮೇಘಡಂಬರದೆಮಿಳ್ಳಿರಿದಾಡುಪಸಿಂಘದಿಂಪೊದ| ಳ್ದಿತ್ತ ರವಲ್ಲಿಬರ್ಪಗಜವಾಜಿರಥೌಘಪದಾತಿಬೃಂದದಿಂ || ಬಿತ್ತರಮಾದವಾದ್ಯರವ ದಿಂಚಳಚಾಮರಪಜ್ತಿಯಿಂಬೆಡಂ || ಗೆತ್ತಲುಮುಣ್ಮಸಾಡೆಬರುತಿರ್ದನ ದೋರ್ವಸಿಳೇಶ್ವರಾತ್ಮಜಂ || .... ||೭||

ವ|| ಅಂತು ವಿವಾಹಶೋಭನಸಂಬಧೆದು ನೆರೆಯೂರಿಂ ನಲ್ಲಳೊಡನೆ ಪೊನ್ನಂದಣಮನೇರಿ ತದ್ರಾಜಸುತನೇಳ್ತರುತ್ತಮಿರ್ದು ಕಟ್ಟಿದಿರೊಳ್ಬರ್ಪ ಶೈವತೇಜೋಮೂರ್ತಿಗಳೆನಿಪ ವೇಮನಾರಾಧ್ಯರಂಕಂಡು ಭೋಂಕನೆ ದಂ ಡಿಗೆಯನಿಳಿದು ಪೊಡಮಡಲೊಡನವಂಗಾಯೂರಲ್ಪಮೆಂಬುದಂ ತಾಂ ತ್ರಿ ಕಾಲಜ್ಞಾನಿಯಪ್ಪುದರಿನರಿದು ಪರಸಲೊಲ್ಲದಾಚಾರ್ಯವರ್ಯಂ ಸುಮ್ಮನಿರೆ ತನ್ನರೇಂದ್ರಸುತಂನೋಡಿ ||

ಕಂ|| ಎರಗಿದೊಡೆನ್ನಂಪರಸದ| ತೆರನೇಂಕಾಣನೊಮಹಾತ್ಮನಿನ್ನೋ ಕ್ಕೆಪೊದ||ಳ್ದಿರಗಿಸಿರೀಕ್ಷಿಪೆನೆನುತಂ|ತರಿಸಂದೆಲೆದೇವಶರಣನುತ್ತಿರಗಲೊಡಂ||

ವ|| ಮತ್ತಮಪರ್ಪರಸದುಸಿಕನಿರೆ ||

ಕಂ|| ಪದಕೆರಗೆಪರಕೆಗುಡದು | ಸ್ಮದಯುತಭಕ್ತಂಗೆಮುಣಿದನಿನ ಯನೆನುತಿಮ || ತ್ರ್ನಪತಿಪರಿಹಾಸಕಂಗೆ | ಯ್ಯುದೆಮ್ಲಾಣಳ್ನಿನುತ್ತಿಸಾಣ್ಣಿ ಪಂಜನೆಪಸುತಂ || ..... ||೯||

ವ || ಅಂತುನಾಣೆ ತಲೆವಾಗಿ ಪಿಡಿಮಿಡಿಗೊಂಡು ಭಕ್ತಿ ಭಾವಂಜಾ
ರೆಕಾಯ್ಪನೊಳಕೋಡು ||

ಮ|| ಸ್ರ|| ಪಿರಿಯರ್ಶ್ಮಾಸ್ತ್ರಬುದಾರವೃತ್ತರನಘರ್ಶೈವಾಗಮಾಚಾರಸ|
ದ್ಗುರುಗಳ್ನೀಮೆನುತಲ್ತಿಪಟ್ಟವಿಸಂಬುಂಬಿತ್ತೊಲ್ದುನಿಮ್ಮಂಘ್ರಿಪಂ || ಕರುಹ
ಕ್ಕಾಂಪ್ರೊಡಮುಟ್ಟೊಡಕ್ಕೆನಿನಗಾಯುಕ್ತ್ಯೆಯುಮೆಂದೆನ್ನನೀಂ | ಪರಸಲ್ನ
ಲ್ಲದೆಸುಮ್ಮನಿರ್ದಪಿರಿದೇನಾಚಾರ್ಯರಾಚಾರಮೇ || ||೧೦||

ಕಂ|| ಅಕ್ಕಟನಿನ್ನಯಸೌಜಂ | ನ್ಯಕ್ಕಮುದರ್ಗುಣಕ್ಕೆ ಶೈವತೇಜಕೆ
ಸಲೆಕ್ಕೈ ॥ ಮಿಕ್ಕಶುಭವಿಮಳವೃತ್ತಿಗೆ | ತಕ್ಕುದೆಕೂರ್ತೆರಗೆಪರಸಲೊಲ್ಲದ
ಬಿಂಕಂ || .... ||೧೧||

ಕಂ|| ಶುಕಮಿಡಿದುಪ್ಪೂತನವಕಿಂ | ಶುಕಕೆರಗಿದತೆರದಿನೆರಗಿದೆಂನಿಮ
ಗಿಂದಾ || ಸಕಟಕಟಬಾಹ್ಯರಾಗ | ಪ್ರಕಟನಮಿದುವಿಫಲವೆಂಬುದಂಮ
ನ್ನರಿಯೆಂ || .... ||೧೨||

ಕಂ|| ದ್ವಿಜಕುಲಸಂಜಾತರ್ಗಡ | ನಿಜದಿಂನೀವಾರ್ಕ್ಕಪುರುಷರುಂಗ
ಷಹರನಂ || ಭಜಿಯಿಪಭಕ್ತರ್ಗಡಭೂ | ಬುಜನೇಳ್ತಂದೆರಗೆಸುಮ್ಮನಿರ್ಪ್ಪ
ದುಮುತಮೆ || .... ||೧೩||

ತರಳವೃತ್ತಂ|| ಪರಸಿನೀಮೆನಗಾಯುಮಿತ್ತಪಿರೇಮದೋದ್ಧತವೃತ್ತಿ
ಯಿಂ | ಪರಸಲೊಲ್ಲದೊಡಾಯುತರ್ಗುಗುಮೇವಿರಿಂಚಲಲಾಟದೊ || ಳ್ಬರೆ
ದುದಂತೊಡೆಯಲ್ಕೆಪೆರ್ಚಿಸಲುಂಸಮರ್ಥರೆನೀಂಜಗ | ದ್ಗುರುಗಳೇಬಿಡದೆ
ಮ್ಮತುಳ್ತ್ತಮಿಳ್ತ್ತನಿಮ್ಮಯುದಾಸಿಯೆ || ||೧೪||

ಕಂ|| ಪಸೆನಿಂದವೇಳೆಯೊಳ್ನಂ | ತಸದಿಂಪಿತ್ರರರ್ಕಳಿತ್ತಸಲವರಕೆ
ಗಳಿಂ || ದೆಸೆದಳಮೆನಿಮ್ಮಪರಕೆಯು | ಮುಸಕಂಬರಿದೇಕೆಸುಂಮುನಂನಿಮ
ಗಳೆಯೊಳ್ || .... ||೧೫||

ಕಂ || ಪರಸಿದೊಡಳಿದಪ್ಪುದೆಮ್ಮಯ | ಪಿರಿಮತಸಂಮಾನದೆಂದು
ಪರಸದೆನೀಂವಿ || ಪಿರಿವಂತಿಳಿದೆಂನಿಮ್ಮಂ | ತಿಳಿಯಮ್ಮಂಪರಸಲಿಳೆಯೊ
ಳಿಲ್ಲವೆವಿಬುಧರ್ || .... ||೧೬||

ವ|| ಎಂದನೃಪಸುತನ ಸಗರ್ವೋಕ್ತಿಯನಾವೇಮನಾರ್ಯನಾಕರ್ಣಿಸಿ||

ಕ|| ಜನಪಸುತನಾಳೆಮಧ್ಯಂ | ದಿನದೊಳ್ನಿನಗಪ್ಪುದಳ್ತೆಮೃತಿಯ

ದನರಿದುಂ || ಮನಮೊಲ್ದಾಶೀರ್ವಾದಮ | ನೆನೆಸುಂನಿನಗೆಂತುಮಾಡಲಾಂ
ಬಗೆದಿರ್ಪೆಂ || .... ||೧೭||

ಕಂ|| ಪರಸಿದೊಡೆಬರ್ಪಮರಣಮ | ನೊರಸಲ್ಕೇಳ್ಕುಂಮಹಾತ್ಮರೆ
ನ್ನದೆನಿನ್ನೀ || ದುರಿತಬಲಮೆಮ್ಮಜಿಹ್ವಾಂ | ಕುರಕ್ಕೆಕೇಳ್ಬಾರದಾದುದಾ
ಶೀರ್ವಾದಂ || ——— ||೧೮||

ಕಂ || ತಪ್ಪದೆಲೆನಾಳೆಮೃತಿನಿನ | ಗಪ್ಪುದುಪೋಗೆನೆಸ್ವಪಾತ್ಮಜಂ
ಕೇಳ್ದುಮನಂ || ಸೊಪ್ಪುಸೊವಡಾಗೆಕೋಪಮ | ನಪ್ಪುಗೆಗೆಯ್ದಾಕ್ಷಿಸು
ತ್ತೆಮುಗುಳ್ದಂತೆಂದಂ || .... ||೧೯||

ಚ|| ವೃ|| ಮದನನನಾರ್ದುಸುಟ್ಟುಳುಪಿದಂ ತಲೆಗೊಯ್ದು ಸರೋಜಗ
ರ್ಭನಂ | ಮುದಮುಲದರ್ೀವಿದಂ ಖಲಜಲಂಧರದೈತ್ಯಸುರಾಹಿತರ್ಕಳಂ ||
ಸದೆದೊಲವಿಂದೆರಕ್ಷಿಸಿದನೀಶನವಂ ಪೊರತಾಗೆಮಿಕ್ಕಲೋ | ಕದಮನುಜ
ರ್ಕರಂವಧಿಸಲುಮ್ಮಗುಳ್ದಿಂ ಪೊರೆಯಲ್ಕಮರ್ಕರಿ || ||೨೦||

ಕಂ|| ಮಾರಮದಹರಣಲಾಂಛನ | ಧಾರಣಮಾತ್ರದಿಮನೋಜಹರ
ನಪ್ಪಿರೆ ನೀ || ಮಾರಯೆನಿಮ್ಮನುಚಿತವಾ | ಗ್ವಾರದೆಬಂದವುದೆಮಿಳ್ತು
ನಾಳೆನಗೆವಲಂ || .... ||೨೧||

ಕಂ|| ಬರಿದೇಕೆಬಿಂಕಮೆನುತಂ | ಗರಿಗಟ್ಟದಕೋಪದಿಂದೆಗಳವುತೆಪ
ಲವಂ || ನೆರೆಚುನ್ನವಾಡುತನ್ನೆಲ | ದೆರೆಯನ್ನಡೆತಂದುಪೊಕ್ಕನಾತ್ಮಾಲ
ಯಮುಂ || .... ||೨೨||

ವ || ಅಂತು ಪೊಕ್ಕುನಿಜರಮಣಿವೆರಸು ಪರಿಮಳೋದಕದಿಂಮಿಂದು
ಪರಮಾನ್ನಮುಂಸವಿದು ಕರ್ಪೂರತಾಂಬೂಲಮುಂಕೊಂಡು ಮಣಿಮಂದಿರಾಂ
ತರ್ವಿಳಸಿತ ಕನಕಪರ್ಯಂಕ ಮೃದುಳತಲ್ಪಸ್ಥಳದೊಳ್ ಸಮರಸರತಸಮರಸಂ
ಜಾತ ಸುಖಾನುಭವಾನಂತರಂ ಸುಖನಿದ್ರೆಗೆಯ್ದಿರ್ದನಾಗಳ್ ||

ಕ|| ಫಣಿಯೊಂದುಘೋರವಿಷಭೀ | ಷಣವದನಂಪಾಟಲಸ್ಫುಟಂಪಟು
ತೆಯಿನಂ || ದಣಿಯರಮಿಳಿತಂದುದುಮೇ | ಗಣಸರಪಳಿವಿಡಿದುತೀವ್ರಚಾ
ಲಿತರಸನಂ || .... ||೨೩||

ವ|| ಅಂತುವಾತೂಗುಮಂಚದಸರಪಳಿಯುಬಳಿವಿಡಿದು ಗಲ್ಲಳನಿಳಿದು
ನಿದ್ದೆಗೆಯ್ದಿರ್ದ ನೃಪಸುತನ ಕಯ್ಯಪಗರಂಕರ್ಚಿ ಮೊರೆದು ಫಣಿಪೊಡೆಮುಗು
ಳ್ದುಪೊರಳ್ವನಿತರೊಳ್ತ್ತಾಕಾಂತೆಯೆಚ್ಚತ್ತು ಕಂಡು ಬಿಗುರ್ತ್ತು ಬೆಬ್ಬಳಿಸಿನಡುಗಿ

ಹಾಹಾರವಂ ಪುಸಗೆ ಕೆಟ್ಟೆಂಕೆಟ್ಟೆನೆಂದಳುತ್ತಮಿರೆ ನರೇಂದ್ರನನಿತರೊ
ಳ್ಪೋಂಕನೇಳ್ದು ತಳಮುಳಗೊಂಡುನೆತ್ತರೊಗುವಕರಮುಂಕಡಿದ ಘೋರಫ
ಣೆಯುಮುಂಕಂಡು ಪಾವಸೆಪಾರಿಕೆಡೆದು ಹಮ್ಮದಂಬೋಗಿ ||

ಕ|| ಮುಡಿದಂಮಹಾತ್ಮರಾಜಿದ | ನುಡಿತಪ್ಪುಗುಮೆಸ್ಸಪಾತ್ಮಜಂಬರಿ
ಸಿದಳಾ || ಮುಡದಿಮೋರೆಯಿಡುತೆಪೊಸಗಾ | ರುಡರಸ್ನುತಶಸ್ತ್ರವೈದ್ಯರಂ
ಜೋಗಿಗಳಂ || ..... ||೨೪||

ವ|| ಅಂತು ಬರಿಸುತನಪ್ಗೆ ಬೇಡಿದುದನಿತ್ತಪೆನೆನ್ನ ಪತಿಯುಂಬರ್ದುಂಕಿ
ಪುದೆಂದು ಬಾಯುಳಿದಳುತ್ತಮಿರೆನಾಣೆಂದು ನಿಲಿಸುತ್ತಮುಪರ್ಮಂತಣಂ
ಗೊಂಡು ಮಂತ್ರತಂತ್ರೌಷಧ ವಿಲೇಪನಾದಿಯಂ ನಿಮಿರ್ಚಿಯುಂಹರಣಂಬ
ಡೆಯಲ್ಕಮಾರದೆ ಕೆಲಸಾರ್ದರವರೊಳೋರ್ವಂ ವಿಷಹರಣವಿಚಕ್ಷಣ ನಾಫಣಿ
ದಷ್ಟನಂಗಮನಭೀಕ್ಷಿಸುತ್ತಮಿಂತೆಂದಂ ||

ಕಂ|| ಪಾವೆತ್ತಣಿಂದೆಬಂದುಮ | ಹೀವರಸಂಕಟಿಂದತ್ತೊ ಶಿವಶಿವಕಾ
ಲಂ || ತೀವಿದುದಿಪಂಗೆದೈವಮು|ನಾಪಂವಿಾರುವನೆಸುತ್ತೆ ಮುಗುಳ್ದಿಂತೆಂದಂ||

ಮ|| ವೃ| ವಿಮಳಂಬಾಸುಗಿಕಂಬಳಾಶ್ವತರಸುಸ್ಮತ್ರಂಪ್ರಚಂಡಂಗು
ಹಂ | ಸುಮುನಂತಕ್ಷಕಪುಷ್ಪದಂಷ್ಟ್ರಕಪುರಾಣಂಗಳ್ಬಳಾಕಂಕರಾ || ಳಮು
ಪೈರಾವತನೀಲಪುಂಡ್ರಕಹವಿರ್ಮಕಾತ್ರಿಟಿಕರ್ಕೋಟಕಂ | ಕುಮುದಂವಾ
ಮನಮುದ್ಗಲಾರ್ಯಕಕಳಿಂಗಂಶಂಖಪಾಲಂಶಲಂ || ||೨೬||

ಕಂ|| ಕಾಲೀಯಂಸಂವರ್ತಕ | ಕಾಲಿಕಧೃತರಾಷ್ಟ್ರಕುಧರಮಣಿ
ನಾಗಂಗಳ್ || ಜ್ವಾಲಿಪತಂಗವಿಭಾಕರ | ಕೌಲಿಕನಖಿಶಿಖಿಮಹೋದರಾಜಿ
ತಕರ್ಣಿಗಳ್ || ...... ||೨೭||

ಕಂ|| ಪಿಂಜರೆಕಂಧರಕೋಟಧ| ನಂಜಯಪಾಂಡುರಕಶಾಲಿಪಿಂಡಾಂ
ಶುಗಚ || ತ್ರಾಂಜನಕುಹರಬಲಾಢ್ಯಮ | ಣಿಂಜಯಸಮುದಂಗಳಾದಿಯಾ
ದಹಿನಿವಹಂ || .... ||೨೮||

ಕಂ|| ಷಾಸಿರವಿಭೇದಮುದರೊ | ಳ್ವಾಸರಯಾಮಾಷ್ಟಕಕ್ಕೆಪತಿಗಳೆ
ನಿಸಿಬ || ಲ್ವಾಸದುರಗಂಗಳೆಂಟೊಳ | ವಾಸಮುಯದೆಪಿಡಿದುಕರ್ಚುಗು
ವ್ಮಾನವರಂ || ...... ||೨೯||

ವ || ಅವರವಿಷಕ್ಕೆ ಮಂತ್ರತಂತ್ರಗಾರುಡಂಗಳಿಂ ಪರಿಹಾರವೊಳವು
ಷ್ಣೋಣ್ಗಜನುಂ, ದುರ್ಮುಖನುಂ, ಘಿತ್ರಾರಿಯುಂ, ರೇಣುಕನುಂ, ಜಿನ

ಕನುಂ, ಸರ್ಗ್ಗಕನುಂ; ದರ್ದುರನುಂ, ಕುಳಿಕನುಂ, ದಂಡಪಾದಕನುಮೆಂಬ ಫಣಿಗಳ್ಮೊದಲಾದ ನಾಗಂಗಳ್ ಲಕ್ಷಸಂಖ್ಯೆಯೊಳವರಗರಳಂ ಕಾಲಮೃತ್ಯುನುಂಗದೊಡೆನರನಂ ಗಾರುಡಕ್ರಿಯಾ ಮಂತ್ರೌಷಧಾದಿಯಿಂ ಪರಿಹರಿಸಲ್ಪಡುಗುಮಲ್ಲಿಕಾಲಮುಂ ಯುಗಮುಮುಂ ನಟ್ಟಪಲ್ಗಳಿನಿತೆಂಬುದಂತಿಳಿದು, ಘೋರಗರಳಾಸ್ಯಂಗಳೆನಿಪಷ್ಟಕುಲ ಫಣಿಗಳಂಶಭವೋರಗಂಗಳಗಿಯೆ ಗಾರುಡಮಂತ್ರಸಂಸ್ಕಾರದಿನಾಮಾನವಂ ಗಾವೇಶಂದುಂಬಿ ನುಡಿಯಿಸಲಕ್ಕುವನಂಗಂ ಕಾಲಮೃತ್ಯುತಗುಳ್ದಂದೊಂದು ಪಲ್ನಾಂಟೆಶಿರದೊಳ್ ಶಿಖಿಯುಶಿಖೆಯಿನುದಕಾಭಿಷೇಕದಿಂದ ವಿಷಮಿಳಿಗುಮೆರಡುಪಲ್ನಾಂಟೆ ಸಾರತರಮಂತ್ರ ಗಾರುಡಮಂತ್ರ ವಿಧಿಯಿನಾಗರಳಮುಳಿಗುಂ, ಮೂರುಪಲ್ನಾಂಟೆ ದಿವ್ಯೌಷಧಪ್ರಯೋಗದಿ ನಾಹಾಲಾಹಲಂಕಿಡುಗು ಮಾವಂದದಿನಾದೊಡಂ ಪಲ್ನಾಲ್ಕುನಾಂಟೆ ಘೋರತರಕ್ಷ್ವೇಳಮಾವಾತಂಗ ಮಾದೊಡಮಸಾಧ್ಯಮಕ್ಕುಮೆಂದಾನರೇಂದ್ರಸುತನ ಕರದಫಣಿದಂತಕ್ಷತಮನಭೀಕ್ಷಿಸಿ ‖

ಕಂ‖ ಇದುಕರ್ಕೋಟಕಫಣಿಕ | ಚ್ಚಿದುದುರೆನಟ್ಟುಚ್ಚಿನಾಂಟಿದು
ಮನಾಲ್ಕುಂಪ ‖ ಲ್ಲಿಧರವಿಷಮುಂಮಹಾವಿಷ | ಪದಕಂಧರಶಂಭುಮಾದೊ
ಡಂಪರಿದಪನೆ .... ‖೩೦‖

ವ‖ ಎಂದಾಜೋಗಿಕೆಲಂದೊಲಗ ಲೊಡನಾಸಮಯದೊಳಂತಃಪುರದ ಕಾಂತಾಜನಮುರಸ್ಥಳ ತಾಡನಂಬೆರಸು ಹಾಹಾರವಂಮುಸಗೆ ಘೋಳಿಡುತ್ತಳುತ್ತಮಿರೆಮುತ್ತಮಲ್ಲಿ

ಕಂ‖ ಪರಿಜನಮುಂಪುರಜನಮುಂ | ನೆರೆದಾಪ್ತರುಮಿಷ್ಟಮಿತ್ರರುಂಕ
ಣ್ಬನಿಕಾ ‖ ಳ್ಪರಮಾಗಿಸುರಿಯೆಶೋಕಾ | ತುರತೆಯನೊಳಕೊಂಡಳುತ್ತ
ಮಿರೆಬಳಿಕಾಗಳ್ .... ‖೩೧‖

ಚಂ‖ವೃ‖ ಅಳಿದನಿಜೇಶನಂರಮಣಿನೋಡಿನಿಜೋದರದಲ್ಲಿಬಾಸುಳಂ|
ಬಳಯಿಸಿ ಕೋಮಲಾಂಗುಲಿಗಳೋವದೆಮೋದಿಕೊಳುತ್ತೆ ಕಾಂತಹಾ ‖
ವಿಳಸಿತರೂಪಹಾವಿನಯಮಂದಿರಹಾಯೆನುತಂದ್ಪಗೆಂಬುಮಾ | ಯ್ದುಳಿದಿಳೆ
ಯೊಳ್ಪೊನಲ್ವರಿಯೆಬೀಳ್ದಳುತ್ತಾರ್ತ್ತೆಯಿಂಪಲುಂಬಿದಳ್ ‖೩೨‖

ಕಂ‖ ಪಳಯಿಸಿದಳ್ಮಿಗೆಮರುಗಿದ | ಳೊಳಗಾರಿದಳೋಪಕೆಟ್ಟೆನಕಟ
ನುತಂಬಾ ‖ ಯುಳಿದತ್ತಳ್ಕಳವಳಿಸಿದ | ಳಿಳೆಯೊಳ್ಕೆಡೆದುರುಳ್ದುಪೊರ
ಳ್ದುತಳೆನೆಳಗಾಡ್ದಳ್ .... ‖೩೩‖

ವ|| ಅಂತಳವಿಗೆಳೆದಳಲಸೊಳಕೊಂಡಾಕ್ರಂದನಂಗೆಯ್ದು ಗದ್ಗದೋದ್ಗಳಿತ ಶಿಥಿಲಾಕ್ಷರಂ ನಾಲಗೆಯೊಳೆಳ್ಪರಳ್ದುರುಳೆಮೊದಲದಿನದೊಳಾವೇಮನಾಚಾರ್ಯರ್ಗರಸಲೊಲ್ಲದೆಂದುದುಸೆಲ್ಲಮಂ ಬಿತ್ತರಿಸಲೊಡನಾನೃಪನಂದನನಾಪ್ತಬಂಧುಗಳು ಮನನತಂದೆ ತಾಯ್ಗಳುಂಕೇಳ್ದಳದಿಲೆಂದವಳಂಸಂತೈಸುತಿಂತೆಂದರ್

ಮ|| ಸ್ರ|| ವೃ|| ಪರಮಾರಾಧ್ಯಪ್ರಪನ್ನಪ್ರಕರವಿಪದಘಧ್ವಂಸಕೆ
ರ್ಗತ್ಯಪಾಭಾ | ಸುರಚಿತ್ತಸ್ವೀಮನಾರ್ತ್ಯಕರ್ಣಪಮನಿದನೊಯ್ದಂದು
ಮುಂವಿಕ್ಯತಾಮೆ || ಲ್ಲರುಮುದ್ಯಚ್ಛಕ್ತಿಯಿಂದೀಸತಿನೆರಸುತರಗ್ಬೊಕ್ಕೊ
ದೀಸತ್ತರಾಯುಂ | ಗಿರದೀವಪ್ರಾರ್ಣಮುಂಮಾಣದೆಮೆರೆವಿಸಮಾಕ್ತ್ರೀಯು
ಕ್ತೈವಪ್ರಭಾವಂ .... ||೩೪||

ವ|| ಎಂದುಸುರ್ದಿರ್ದೇಕಜ್ಜಮೊಂದುನಿರ್ಧರಿಸಿ

ಮ|| ಸ್ರ|| ವೃ|| ಜಪದಿಂದೇಳ್ತಂದುತಾಮೆಲ್ಲರುಮವರಪದಾಂಭೋ
ಜದೊಳ್ಬೀಳ್ದುಭೀತಿ| ಪ್ರಪಣಮ್ಯಾರ್ಯಕ್ಕೈಯ್ಯಂಮುಗಿದಪಧರಿಸಲ್ವೇಳ್ಕು
ಮಾಚಾರ್ಯನಂತಾ|| ರ್ಗಪರಾಕಾಚಂದ್ರಸೀಬಿನ್ನಪಮನಿದನಿಮಂನಿಮ್ಮಭೃ
ತ್ಯಂಮಹಾಮ್ಯ | ತ್ಯುವಿಸುಗ್ರಾಸ್ಯಾಂತರಂಬೊಕ್ಕಿದನಕಟಘೋರಾಹಿ
ದಂತಾತಿದಷ್ಟಂ .... ||೩೫||

ಕಂ|| ಅಡಿಗೆರಗೆಪರಕೆಯುಂಕುಡ | ದೊಡೆಯುರ್ಗಿರವಿಸಿದತೆರದಿಫಣಿದ
ಷ್ಟನಿವಂ || ನುಡಿದಂಪಡುಗಡೆಯುದಯಿಸಿ | ದೊಡಮರ್ತ್ಯಂದೇವನಿಮ್ಮನು
ಡಿತವ್ಯಗುಮೆ .... ||೩೬||

ಕಂ|| ನಿಜಶಿಷ್ಯರಳಿಕದೊಳ್ಜಡ| ಜಜನುಂಲಿಖಿಸಿರ್ದಲಿಪಿಯನೊರಸು
ವೆಗಡಸೀ || ನಜನಿಂತುನೆಗಳ್ದಜನಪಾ | ಲಜಮೃತಿಯುಂಪರಿಯುದರಿದೆನಿಮ
ಗೆತಿಮುಹಿಮ .... ||೩೭||

ಕಂ|| ಕಾಲಹರಗರಳಕಂಠ| ವ್ಯಾಲಾಭರಣೈಕರೂಪಪಾಲಿಪುದೀಗ || ಲ್ಬಾ
ಲನಪ್ರೊಳಲ್ಗಿಪಟುಫಣೆ | ಹಾಲಾಹಲಮಡಸೆತಳರ್ದಭೂಭುಜನಸುವಂ||೩೮||

ಕಂ|| ಅಮಿತಗುಣಶಾಲಿಲೀಲಾ | ಶಮಿತೇಂದ್ರಿಯುವರ್ಗಭರ್ಗಮಾ
ರ್ಗಗವಿದ್ಯಾ || ಸಮುದಯಮುದಮುಯಮಾನಸ| ವಿಮದಸ್ತುತವೇಮನಾ
ರ್ಯಜಯುಗಣಪದ್ಯಾ ||೩೯||

ಚಂ|| ವೃ|| ವಿತರಣಧೀರವಿಶ್ರುತವಿಚಾರವಿನಿರ್ಜಿತಮಾರಲಿಂಗಸಂ |

ಗತನಿಜಕಾಯನಿರ್ಗಳದಪಾಯನಿರಾಕೃತಮಾಯಮುಮಂಗಳಾ ॥ ಯತನೆ
ಸುಪುತ್ರಮಾನ್ಯಸಮುದಾತ್ತಮಹೇಶ್ವರಚಿತ್ತಪಾವನಸ್ಥೋ। ಸ್ನತಗುಣಧಾಮ
ಪಾಲಿಪುದುವೇಮಗುರೂತ್ತಮತಾಮಸಾತ್ಮರಂ ॥೪೦॥

ಚಂ॥ಗುರುಕುಲಚಕ್ರವರ್ತಿವಿಶದೋಜ್ವಲಕೀರ್ತಿನಿಜಾನತಾರ್ತಿಸಂ।
ಪರಪರದಿವ್ಯರೂಪಶಿವತತ್ವಕಳಾಪದುರಂತಪಾಪಕುಂ ॥ ಜನಹರಿಣೇಂದ್ರ
ಸದ್ವನಧಿಚಂದ್ರಸದಾಶಿವಭಕ್ತಿಸಾಂದ್ರನೀಂ । ಪೊರೆಯುದುವೇಮನಾರ್ಯಬ
ಡದೆಂಮನವಾರ್ಯಸುಕಾರ್ಯಕೌಶಲಾ ॥೪೧॥

ಕಂ॥ ಶರಣಾಗತಜನಪವಿಪಂ। ಜರಡಿಂಬೀಬಿರುದುನಿಮಗೆಶಾಶ್ವತಮ
ದಿಂ ॥ ಕರುಣಾಕರನಿಮ್ಮಂಘ್ರಿಗೆ । ಶರಣಾಗತರಾದೆವೆಮ್ಮಪೊ
ರೆಮಹಿಮಾಬ್ಧೀ ॥೪೨॥

ಕಂ॥ ಈಯುಗದೊಳಳಿದನರರ್ಗೆಸು । ವೀಯಲುಮಂತಕನಬಾಧೆ
ಯುಂಪರಿದೊಲವಿಂ ॥ ಕಾಯಲುಮೆಳಿಸೀಪಲ್ಲದೆ । ಮಾಯಾಂತಕಪೇಳ್ವ
ಮರ್ಥರಾರ್ಪರಿಳೆಯೊಳ್ ॥೪೩॥

ಕಂ॥ ಪೊಡಲೊಳ್ನಿಮಗಿವನೊರ್ಬ್ಬರ । ಗದೊಡವನಮತಪ್ಪುಗಡವಿಚಾ
ರಿಪ್ರೊಡೀತಂ ॥ ಪೊಡವಿರಿಗಿದನಿವನೊಳ್ತ । ಪ್ಪುದಯಿಸುಗುಮೆದೇವದೇವ
ನೀವರಿಯದುದೆ ॥೪೪॥

ಹರಮತಕೆಕೀರ್ತಿನಿಮ್ಮಯ । ಚರಿತ್ರಕ್ಕೆನೆಗೆಳ್ತೆಯೆಮಗೆಪರಮಾನಂ
ದಂ ॥ ತರುಣಿಗೆಮುತ್ತೈದೆತನಂ । ಧರಣಿಗೆಮುದಮುಲರ್ವತೇರದೆಪೊರೆಕ
ರುಣಾಬ್ಧಿ ॥೪೫॥

ಕಂ॥ ಅನಿಮಿತ್ತಬಂಧುನಿಮ್ಮಯ । ವಿನುತಕೃಪಾಪಾಂಗಸಾರಸಂ
ಜೀವನದಿಂ ॥ ಘನವಿಷಮವಿಷಧರವಿಷ । ಮನಿದಂಕಳೆದಸುವನಿತ್ತುಪೊ
ರೆಗುರುತಿಲಕಾ ॥೪೬॥

ಚಂ॥ ವೃ॥ಮುಸುಟಿಯಚೌಡದೇವನಡಿಗೊರ್ಲ್ದೆರಗಿರ್ದಲತಾಂಗಿಗೆಯ್ದೆ
ಸಂ । ತಸದೊಳೆದೀರ್ಘಮಾಯುನಿನಗೆಂದುಮೊದಲ್ವರಸುತ್ತೆಮೇಣವ ॥
ಳ್ಗೆಸುಪೆರಪಿಂಗೆಜೀವನಮನಿತ್ತುವಿರಾಜಿಸನೇಧರಿತ್ರಿಯೊಳ್ । ಕುಸುಮ
ಶರಾರಿಭಕ್ತತತಿಗಿಂತಿದುಚೋದ್ಯಮೆವೇಮಧೀಮಣಿ ॥೪೭॥

ಕಂ॥ ಪನ್ನಗಧರಸನ್ನಿಭಪಟು । ಪನ್ನಗದಷ್ಟಂಗೆಹರಣವೀವುದುಭಜ
ಕಾ ॥ ಪನ್ನಗಪನಿನಿಭಗುಣಸಂ । ಪನ್ನಗಣಪ್ರವರವೇಮವಿಬುಧಲಲಾಮ ॥

ಕಂ॥ ಶರಣಾಗತರಕ್ಷಾಕರ। ಬಿರುದಾಂಕಭವತ್ಪದಾಬ್ಜಮಂಮರೆವೊಕ್ಕಾ॥ ವಿರೆವೊರೆಯಮಭಯಮಂಕುಡ । ದಿರೆನಿಮ್ಮಯ ಬಿರುದಬಿಂಕಮೇನಪ್ಪುದೊ ಪೇಳ್ ॥೪೯॥

ಕಂ ॥ ಗತಿಯುಮ್ಮತಿಯುಂಹಿತಮುಂ । ಪಿತನುನ್ನೀವೆಮಗೆದೇವ ಪೊರೆವೊರೆಯದೊಡು ॥ ನ್ನತಧೀರನಿಮ್ಮವೀರ । ವ್ರತಕ್ಕೆಕುಂದಪ್ಪುದಲೆವಿಶ್ವಂಭರೆಯೊಳ್ ॥೫೦॥

ವ॥ ಎಂದಮಂದಿರಡಿಗಡಿಗೆ ಮಣಿಯುತಂಪಲವಂದದಿಂ ಸುತಿಯಿಸುತಂಪ್ರಾಣದಾನಮುಂ । ಪ್ರಾರ್ಥಿಸುತ್ತಂನಿಜಕೃಪಾಕಟಾಕ್ಷ ಸಾಮರ್ಥ್ಯಮುಂ ಬಯಸುತಂಬಾಯಳಿದು ಬೇಡಿಕೊಳುತ್ತಮಿರ್ಪಾಸಮಯದಲ್ಲಿ

ಉ॥ ವೃ॥ ಅಪ್ರತಿಮಪ್ರತಾಪನಿಧಿರಾಘವನಿಭಂಶಿವನಾಮಧೇಯವೇ । ಮಪ್ರಭುನೋಡಿತನ್ನಕರುಣಾಮೃತಪೂರ್ಣಕಟಾಕ್ಷದಿಂಶಿವೈ॥ ಕ್ಯಪ್ರಸರಪ್ರಭಾವದಿನಮಂಪವಿಭಾಪನಿಸಾರವೀರಶೈ । ವಪ್ರಭೆಕುಂದುಗುಮ್ಮಗೆನಂದರನೋವದೊಡಿಂದುಚಿತ್ತರಂ ॥೫೧॥

ಕಂ॥ ಮೂದಲಿಸಿಮುಡಿಯಿಸಿಂದ । ಣ್ಣಾಗದೊಡೆಮಗೆಕೊರತೆಯಲ್ತೆನಿಜಭಕ್ತಿಯುಮ ॥ ಲ್ಕೋದಿತಪತನಕೆಜಗುಳ್ದಾಂ । ಪೋದೊಡೆನಿಜಭಕ್ತಬಂಧುನಗದೇಕಿನ್ನಂ ॥೫೨॥

ಚಂ॥ ವೃ॥ ಎರೆಯನದಂಡುಮೇಲ್ಪರಿಯೆಪಿಂದೆಗೆದೋಡುವದೊಂದುಬೀರಮೇ । ಕೊರತೆಯನಾತ್ಮಭಕ್ತಮತಪದ್ಧತಿಗಾಗಿಪ್ಪುದೊಂದುಶೀಲವೇ॥ ನೆರೆಯಮುವೀವುದೆಂಬು ಮರೆಯೊಕ್ಕೊಡುಪೇಕ್ಷ್ಪವುದೊಂದು ಶಕ್ತಿಯೇ । ಮೆರೆವಭವಾಂಘ್ರಿಭಕ್ತತತಿಯೊಲ್ಪುದೆಮೂದಲಿಗಳ್ಕಿದಾತನಂ ॥೫೩॥

ವ॥ ಎಂದುದೃಢಪ್ರತಿಜ್ಞೆಯ ನಪ್ಪುಗ್ಗೆದು ಲಿಂಗಜಂಗಮಸದ್ಭಕ್ತರಂ ಭಕ್ತಿಯಿಂಬಿಜಯಂಗೈಸಿತಂದು ॥ ಲಲಿತರಗಳೆ ॥ ಮಣಿಮಣಿದು ಮಣಿಮಯಾಸನದಲ್ಲಿಕುಳ್ಳಿರಿಸಿ । ಗಣನಿವಹಮಂ ಭಕ್ತಿಭರದಿಂದೆಸಡಗರಿಸಿ । ವಿಮಳೋದಕದಿನವರಪಾದತಳಮಂಕರ್ಚಿ । ಕಮನೀಯತತ್ಪಾದಸಲಿಲಮಂಸಲೆಪೆರ್ಚಿ । ಪೊಸಕಳಸದೊಳ್ತೀವಿಗಣಸಭಾಮಧ್ಯದೊಳ್। ಮಿಸುಗುವಂತದನಿರಿಸುತವರಸಾನ್ನಿಧ್ಯದೊಳ್। ಲೇಸೆನಿಪಸುರಭಿಕುಸುಮದೆಸುರಭಿತಂಮಾಡಿ। ಭಾಸಣಿಸಿವದನದಿಂ ವೃಷಭನಜಿಗಳಂಪಾಡಿ । ಮಗುಳ್ದುಶಿವಗಣಸಭೆಯನಾನಂದದಿಂನೋಡಿ। ಪೊಗಳ್ದುಪೂಷ್ಪಾಂಜಲಿಗಳನವರಮುಡಿಯೊಳ್ನೀಡಿ । ಪರಿ

ಮಳಕದಂಬದಿಂತನುಲೇಪನಂಗೊಳಿಸಿ | ಸುರುಚಿರಾಭರಣನಿಕುರುಂಬದಿನ ಲಂಕರಿಸಿ | ಸಾರತರಧೂಪಧೂಮಾಮೋದಮಂನೀಡಿ | ನೀರಾಜನಾದಿಯಂ ಬೆಳಗಿಮಿಗೆಕೊಂಡಾಡಿ | ಸರ್ಪಿರಮೃತಾತ್ತಮಧುರೋಪಹಾರಮನಿತ್ತು | ಕರ್ಪೂರವೀಟೀವಿಭೂತಿಗುಡುತೊಲವೆತ್ತು | ಪಟುಪಟಹಡಿಂಡಿಮದಶಂ ಖದರವಂನೆಗಳೆ | ಚಟುಲಕಹಳಾರವದೊಡನೆವಂದಿಗಳ್ಪೊಗಳೆ | ಆದೆನರ್ತ ಕಿಯರೀಕ್ಷಿಪರಲ್ಲಿಮೇಲ್ವರಿಯೆ| ಕೂಡೆನಾನಾವಾದ್ಯನಾದಮದುಸ್ಯೆವರಿಯೆ|ನೆ ಗಳ್ದು ಘೋಜಯಜಯಧ್ವಾನಮೆತ್ತಂಮಸಗೆ|ಸುಗುಣನಿಧಿನಿಂದುನಿಜಭಕ್ತಿಭಾ ವಂಮುಸಗೆ|ಕುಸುಮಾಂಜಲಿಯನೆಸಗಿಬಲವಂದುಮುಗುಳ್ದೀಳ್ದು|ವಿಸುಪಶರ ಣಪ್ರಜದಬೆಸನಶಿರದೊಳ್ತಾಳ್ದು | ವಿತತಮಹಿಮಾಕರಂನತಜನದಯಾ ಕ ರಂ | ಭವಭಯವಿಭಂಜನಂಶಿವಸಮಯರಂಜನಂ | ಶರಣಪದಸೇವಕಂಪರ ಮಶಿವಭಾವಕಂ | ಯಮಭಯನಿವಾರಣಂಸ್ವಮತಶುಭಕಾರಣಂ | ಕಲಿ ಮಲವಿದಾರಣಂ | ಖಲಸಮಯದಾರುಣಂ | ವಿರಹಿತದುರೀಷಣಂವರಗು ಣವಿಭೂಷಣಂ | ಸೋಮಧರಬಂಧುರಂ ! ರಾಜಿತಗುಣಾಕರಂಭಾಜಿತದಿ ವಾಕರಂ | ರಾಜಿಸುತೆನಲ್ಮೆಯಿಂಪೂಜಿಸಿದನೊಲ್ಮೆಯಿಂ ||

ವ| ಅಂತುಶಿವಗಣಸಪರ್ಯೆಯಂನೆಗಳ್ದುತದನುಜ್ಞೆಯಂ ಕೈಕೊಂಡಾನ ರೇಂದ್ರನಕಳೇವರಮಂತರ್ಪುದೆಂದುಬೆಸಸೆತನ್ಮಿತ್ರಜನಂಜವದಿಂಪೋಗಿನಿಂದು ನಿರೀಕ್ಷಿಸಾಗಳ್

ಚಂ|| ವೃ|| ಬೆರೆತ್ತವೊಗಂಬೆಳರ್ಚನಸುದೇಲ್ದವಿಲೋಚನದಾಲಿಕುರ್ಗಿ ಜೋ | ಲ್ದೊರಗಿಪಮಸ್ತಕಂಕೆದರ್ದವಿಾಸೆನಡಿಲ್ದತುರಂಬುಸ್ಯೆತುಗೆ|| ಟ್ಸೊ ರಗಿದಕಂಧರಂನಿಮಿರ್ದಮೂಗುಪಸುರ್ಪಗಿಲ್ತಪಲ್ಗಳ| ರ್ಪರೆತರದಚ್ಚದಂ ತೆರೆದಬಾಯ್ಮಿಗೆಸೂಸುವಲಾಳೆಯೆಳ್ತರಂ ||೫೪||

ವ||ಮತ್ತಂ||ಚಂ||ವೃ||ಬಿಗಿದನರಂಗೆಳುಬ್ಬರಿಪಬಿಲ್ಬಸಿರಿಂಗಿದಸುಂಪೊತ್ತಡಂ ಕಿಡೊಂ | ಕೊಗೆದಕರಾಂಘ್ರಿಗಳ್ತೆರೆದರಂಧ್ರಮಡಂಗಿದಕಾಂಮಕಾಂತಿಕ್ಕೈ || ಮಿಗೆಪೊಸನೆತ್ತರಾರಿದತೊವಲ್ಪೊಲಸುಣ್ಮಿರೆಬಾತುನಾತಮಂ| ನೆಗಳ್ವತದಂ ಗಕಾರ್ದೆರಗಿರ್ಪುಮ್ಮಿಸುತೋಡುವಮಕ್ಷಿಕಾಳಿಗಳ್ ||೫೫||

ಕಂ|| ಕಡುಪರ್ಬಡಿಕೆಯನಾತಂ | ತೊಡರ್ದಿರೆಭೀಕರಸೆನಿಪ್ಪವೆಣ ನಂಕಾಣು. || ತ್ತೊಡನೊಡನೆಮುಚ್ಚಿಮೂಗಂ | ಪಿಡಿದುಗುಳುತ್ತೆಲ್ಲರಲ್ಲಿ ಪೇಸುತ್ತಾಗಳ್ .... ||೫೬||

ಕಂ|| ಮನಮೊಲ್ಲದೆಸಲ್ಲದೆಮೆ | ಲ್ಲನೆಪೆಣನಂಕಟ್ಟಪ್ರೊತ್ತುಕಂದಾವೇಮಾ || ರ್ಯನಮುಕವಬಟ್ಟದೆರ್ೕಕದೊ | ಳನುವಿಂದಿಳುಪುತ್ತೆ ಪೊಕ್ಕರಾ ಗಣಸಭೆಯಂ .... ||೫೭||

ವ|| ಅಂತುಪೊಕ್ಕುಮೈಯಿಕ್ಕಿತಪಮುಂತಂದೆಪನಧರಿಸೆಂದಮಂದಿರ್ಬಿಸ್ನವಿಸೆ ವೇಮನಾರ್ಯಕರ್ೕಳ್ದು ಸಡಗರಂತಾಳ್ದು ಚರಚರಣಸಲಿಲದಿನಾನರೇಂದ್ರ ಕಳೇವರಮುಸಿಸಿತುಂ ದುರ್ಗಂಧಮಿಲ್ಲದಂತೆನರೇಂದ್ರನನುಚರರಿಂ ತೊಳಯಿಸುತನಂತರಮೊಳಗೆಸ್ಗೆ ತರಿಸಿ ||

ಕಂ|| ಹರಭಕ್ತರಪಾವನತರ | ಕರದತ್ತವಿಭೂತಿಯಂತದೀಯಪದಾಂಭೋ || ಜರಜೋವಿಮಿಶ್ರಿತಂಗೆ | ಯ್ದಿರದಪರಪದ್ಮಾಂಬುವಿಂದೆಕಲಸುತ್ತಾಗಳ್ .... ||೫೮||

ಚಂ|| ವೃ|| ಘನತರಭಕ್ತಿನಿಷ್ಠೆಯಿಗೆತನ್ನೃಪನಂಗದೊಳೊಲ್ದುಪೂಸಿಲೇ | ಪನಮುನೊಡರ್ಚಿಭಾಳದೊಳುರಸ್ಥಳದೊಳ್ಭುಜದೊಳ್ತ್ರಿಪುಂಡ್ರಮಂ || ಮನದೊಲವಿಂದೆಬಿತ್ತರಿಸಿಭಕ್ತಸಮರ್ಪಿತಪುಷ್ಪಮಾಲೆಯಂ | ತನುಗೆಮರ್ಿಂತೆವೇಮವಿಭುಸುತ್ತಿಗಣಾಭಿಮುಖಂಪ್ರಮೋದದಿಂ ||೫೯||

ಕಂ|| ಗಣಸಭೆಗೆಸೆಗಳ್ದುದಂಡ | ಪ್ರಣಾಮಮುಂಪ್ರಮಥರುದ್ರಗಣಭಕ್ತಮಹಾ || ಗಣದಂಘ್ರಿಕಮಲಮುಂತಾ | ಳ್ದಣಿಯರಮಾತ್ಮೀಯಮಾನಸದೊಳಲವಿಂದಂ .... ||೬೦||

ಮ|| ಸ್ರ|| ವೃ|| ಪರಮಾನಂದಪ್ರಜಪ್ತಪ್ರಣವಸಹಿತಮಂ ಚಾಕ್ಷದೋ ರ್ದ್ಯತ್ಕಳಾವಿ | ಸ್ಫುರಿತಾಂಗಂ ಭಕ್ತಹಸ್ತಾರ್ಪಿತಭಸಿತಲಸದ್ರೇಣುಮಂಪಾಣಿಯುಂಭೂ || ಪರನಾಸ್ಯಸ್ಥಾನದೊಳ್ತಾಂತಳೆದಮುಳಕೃಪಾಪಾಂಗದಿಂನೋಡಿಭದ್ರಾ | ಕರನೇಳೇಳೆಂಬುದುಂ ಸಂಭ್ರಮದೆ ಬಳಿಯೊಳೇನೆಂಬೆನಾಶ್ಚರ್ಯಮುದ್ಯಂ .... ||೬೧||

ಕಂ|| ಹರಣಂತೀವಿದುವಾಗಳೆ|ಶರೀರದೊಳ್ಭಳಿಲನೇಳ್ದುನರಪತಿಸುತನಾ|| ಗುರುವೇಮನಾರ್ಯರಂಘ್ರಿಗೆ| ಶರಣೆಂದತಿಭಕ್ತಿಯಿಂದೆಮೈಯ್ಯಿಕ್ಕಿರ್ದಂ ||೬೨||

ವ|| ಅಂತುಸಾಷ್ಟಾಂಗಮೆರಗಿಸನ್ನುತಿಗೆಯ್ದು ||

ಕಂ|| ಕಾಲಾಂತಕಸ್ವರೂಪಕ | ರಾಳಾಸನಕಾಲಭಯಮುಸರ್ದಿ ಸುತೆಸ್ನಂ || ಪಾಲಿವುದೆಂದಂತನ್ನರಪಾಲಸುತಂಕಾಲಮೃತ್ಯುಭಯಚಕಿತಮನಂ||

ವ|| ಎಂದವನತ್ಯಂತದೈನ್ಯವಿಸ್ಮಿಗೆಬೇಡೆ ಕಾರುಣ್ಯಾದಿ ನಾವೇಮನಾರ್ಯ

ರವಂಗೆಮುವನಂಗನೆಗೆಮುವನಬಾಂಧವರ್ಗಂ ಶಿವದೀಕ್ಷೆಯನಿತ್ತು ಶ್ವನೀತರಂ ಮಾಡಿ ಗಣಸಭೆಗೆಮುವರೆಲ್ಲರನವನತರಾಗಿರಾಗಿಸಿ

ಮ॥ ಸ್ರ॥ ವೃ॥ ಧರಣೀಭಾಗಕ್ಕಿದೊಂದಚ್ಚರಿಯೆನೆ ಪಟುಹಾಲಾಹಲಜ್ವಾಲಕೀಲಾ । ಕರಕಾಲವ್ಯಾಲದಂತಾಹುತನುತಸ್ವಪಜಾತಾಂಗದೊ । ಳ್ಪ್ರಾಣಮುಂಸಾ॥ ದರವಿಾಯುತ್ತೋವುತೆಮ್ಮೆಲ್ಲರಭವಹರಣಂಗೆಯ್ದು ನೀದೇವನೀಶಂ । ಕರರೂಪಂ ಮಾಣದೀಶಾಂಭವವಿಮಳಕಳಾಧುರ್ಯನೀವೇ ಮನಾರ್ಯಂ .... ॥೬೪॥

ಕಂ॥ ಫಣಿವಿಷದಿನಳಿದಜನಪನ । ಪೆಣಕ್ಕೆ ಜೀವನನುನಿನಜನಂಸದೆದಿತ್ತಂ ॥ ಪ್ರಣುತಗುಣನಿನನಶಕ್ತಿಯ। ನೆಣಿವೊಡೆವೊಡೆಯಲರಬೊಮ್ಮರುಂನೆರೆದಪರೆ .... ॥೬೫॥

ವ॥ ಎಂದವನ್ನಚ್ಚಿನಲಿದು ಪೊಗಳುತ್ತಮಿರೆ ಶರಣಗಣಮಾಪ್ರಸ್ತಾವದೊಳ್

ಮ॥ ವೃ॥ ಪ್ರಮಥೇಂ ದ್ರಾಂಘ್ರಿಸದಾಕೃತಪ್ರಣಮನಂ ತಳ್ತಿರ್ದವಿದ್ಯಾಪರಿ । ಶ್ರಮನಂ ಶಾಂಭವಶರ್ಮಧರ್ಮರಮನಂ ನಿರ್ಧೂತನಿಶ್ಶೇಷದು ॥ರ್ದಮನಂ ದಂಡಿತದರ್ಪದೃಪ್ತಯಮನಂ ವಿಜ್ಞಾತಶೈವಾಗಮ । ಕ್ರಮನಂ ವೇಮನಪಂಡಿತಾರ್ಯತಮನಂ ಕೊಂಡಾಡಿಸಂಪ್ರೀತಿಯಿಂ ॥೬೬॥

ಕಂ॥ ತೆಗೆದುಬಿಗಿದಪ್ಪಿನಲಿನಲಿ। ದೊಗುಮಿಗೆಯಿನ್ನೋಡಿಪಾಡಿನುಂಡಾಡಿಮುನಂ ॥ ಬುಗುಮಳ್ಕರಿಂದೆಮನ್ನಿಸಿ । ನೆಗಳ್ದಕೃಪಾವಾರಿನಿಧಿಯೊಳೋಲಾಡಿಸುತಂ .... ॥೬೭॥

ಮ॥ ಸ್ರ॥ ವೃ॥ ವಿತತಾತ್ಮೀಯಪ್ರಸಾದಾಮೃತಮನೊಸಗೆಯಿಂದೀಯ್ಯೆಕೈಕೊಂಡಿಳಾಸಂ । ನು ತನೊಪ್ಪಿರ್ಪಸನ್ನಮಾವಾರ್ತೆಯನರಿದೊಲವಿಂಬಂದುಕಂಡಂಘ್ರಿಪದ್ಮಾ ॥ ನತಿಗೆಯ್ದಾನಂದದಿಂದಂಪೊಗಳ್ದವನಕೃಪಾಪಾತ್ರನಾಗುತ್ತೆವಿಶ್ವೋ । ನ್ನತನಿರ್ದಂತದ್ಗಣಾಸ್ಥಾನದನಡುವೆನ್ನೃಡಸ್ವಾಂತಪದ್ಮಾಧಿರೂಢಂ ॥೬೮॥

ಕಂ॥ ವೇಮಾರ್ಯರಕಥೆಯನಿದಂ । ಪ್ರೇಮಂಕೈಮಿಕ್ಕುಪರಿಯಿಪಾಲಿಪಸುಜನ । ರ್ಭೀಮಾಮುಯಾಪಮೃತ್ಯುವ । ನೀಮುಹಿಯೊಳ್ಪರಿದುಪೂರ್ಣಸುಖಮುಂಪಡೆವರ್ ...... ॥೬೯॥

ಲಲಿತಪದವೃತ್ತಂ ॥ ಸಿದ್ಧಪರನಾಮಮುನಿಬದ್ಧ ಶಿವತತ್ವರುಚಿವೃದ್ಧ

ಮುನಿಸೇವ್ಯ ಜಿತಬೌದ್ಧಮುಖವಾದಾಶ್ರದ್ಧಜನದುರ್ಲಭ ನಿರುದ್ಧಕರಣೇಂದ್ರಿಯುನಿಷಿದ್ಧಸುದರ್ಶನವಿವೃದ್ಧ ಶಿವಯೋಗಾ॥ಚಿದ್ಧಯುನಶೋರುಚಿಪಿನದ್ಧದಶದಿಕ್ತಟವಿಪದ್ಧರಣಿಭೃತ್ಕುಲಿಶ ಭೃದ್ಧರಪದಾಬ್ಜಾ। ನದ್ಧನಿಜಚಿತ್ತಜಗದುದ್ಧರಣಶೀಲಪೊರೆಯುದ್ಧಪರಭಂಜನವಿಶುದ್ಧ ಬಶವೇಶಾ॥

....ಮಣಿಗಣವೃತ್ತ॥ ಇಂದುಕುಂದಹಿಮಹೀರಸುಧಾಭಯಶೋಯುತೆ।ಸ್ಕಂದಮಾತೆಹರಿಧಾತೃಸುರೇಂದ್ರಪರಿಸ್ತುತೆ॥ ಮಂದರಾದ್ರಿಮಣಿಮಂದಿರಮಧ್ಯವಿರಾಜಿತೆ। ಚಂದವೊಂದೆಪೊರೆಯುನ್ನನಸರ್ಷ್ಣಿ ಕೃಪಾನ್ವಿತೆ ॥

ಗದ್ಯ॥ ಇದು ವಿನಮದಖಿಳಸು ರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ
ಪರಮಶಿವಲಿಂಗ ಪಾದಾರವಿಂದ ಪರಾಗ ಭಸಿತ ಭಾಸುರ
ಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರ ದೇವಭಕ್ತಿವಿರಚಿತ ಶ್ರೀಮದ್ಬಸವರಾಜ
ವಿಜಯ ಮಹಾಪುರಾಣದೊಳ್ ಗುರುಭಕ್ತಗುರು
ಭಕ್ತಿ ಮಹತ್ವಕಥನಂ ಏಕತ್ರಿಂಶದಾಶ್ವಾಸಂ
ಪರಿಸಮಾಪ್ತಂ.

ಸಕಳೇಶಮಾದರಸ ಕಥನಂ

ನಾಂದಿ॥ ಲಲಿತಪದವೃತ್ತ॥ ಚಿತ್ರತರಮಂಗಳಚರಿತ್ರಚರಲಿಂಗೆಸುಪವಿತ್ರಮಯಪಾದಶತಪತ್ರಮದಭೃಂಗಾ । ಮಿತ್ರಜಯಭಂಜನಜಗತ್ರಯಧುರೀಣಜಿತವೃತ್ತವಿಧಿಪಂಕರುಹನೇತ್ರಸುರವಂದ್ಯಾ ॥ ಗೋತ್ರರಿಪುನಂದನಸುಪತ್ರದಮಹೇಶಮತಸತ್ರಪರಿವೃದ್ಧವರಚೈತ್ರಬುಧವೃಂದಾ। ಸ್ತೋತ್ರನಿಕುರಂಬಪರಪಾತ್ರಪೊರೆಯೆನ್ನನ ಘೃತ್ರಭವವಾರಿಧಿವಹಿತ್ರಬಸವೇಶಾ ॥

ಕಂ॥ ಶ್ರೀಶಿಖರಿಜಾಕುಚಾಂಬುಜ । ಕೋಶಾರ್ಪಿತಪಾಣಿಪಲ್ಲವಂಶಿಖರವಿರಾ॥ತ್ರೀಶನಯನತ್ರಯಂಜಗ।ದೀಶಂಪೊರೆಗೆಂಮನಾವಗಂಶಿವಲಿಂಗಂ ॥

ಕಂ॥ ಕ್ಷೋಣಿಯೊಳೆಕಂಗೊಳಿಪಕ । ಳ್ಯಾಣಪುರಾಂತರದೊಳಲ್ಲಿಮತ್ತಂಲಿಂಗ ॥ ಪ್ರಾಣಕಳಾನಿಧಿಯೊಪ್ಪುವ । ನೇಣಾಂಕಧರಸ್ವರೂಪನನುಪಮಮಹಿಮಂ ॥ .... ॥೨॥

ಕಂ|| ಧರೆಯಲ್ಲಿಶತಾಯುಷ್ಯೈ | ಪುರುಷಶ್ರುತಿವಾಕ್ಯಮಂ ವಿಭಂಗಿ
ಸಿತನ್ನಾ || ದರಸಂಸಪ್ತಶತಂವಾ | ತ್ಸರಮುಮರ್ದಿ ಟಿತನಗೆಬಾಳ್ದ ನತಿಷ್ಟೈ
ಭವದಿಂ || .... ||೩||

ಮ|| ಸ್ರ|| ವೃ|| ಮುಳಿದುದ್ಯನ್ಮೃತ್ಯುದಂಷ್ಟ್ರಾಂಕುರಮನಧಟನಿಂ
ಕೀಳ್ತುಕಾಲೋಗ್ರದಂತಂ | ಗಳನಾದಂಪೊಯ್ದುದುರ್ಚುತ್ತವಧಿವಿಧಿಗಳಂ
ಮೆಟ್ಟಪಂಕೇಜಗರ್ಭೋ || ಜ್ವಳಗರ್ವಧ್ವಂಸನಂಗೆಯ್ದಿಳೆಯೊಳೊದರಿಮಾ
ರಾರಿಮಾಯಾರಿಯೆಂಬ | ರ್ಗಳಚಂಚತ್ತಾಹಳೀಸಂಕುಳಮೆಸೆದನವಮ್ಮಾದಿ
ರಾಜಾಭಿಧೇಯಂ || .... ||೪||

ಕಂ|| ಸಾಂಗಮೆನೆರಚಿಸುತಂಶಿವ | ಲಿಂಗದಜಂಗಮುದಪಾದಪೂಜೆ
ಯನಮುಳೋ || ತ್ತುಂಗತರಭಕ್ತಿಯಿಂದೆಚೆ| ಡಂಗಮುರಿಹರಂಗೆವೀಣೆಯುಂ
ಕೇಳಿಸುತಂ || .... ||೫||

ಕಂ|| ಇರುಳೆಲ್ಲಂನಾದಾಮೃತ | ಶರಧಿಯೊಳೋಲಾಡಿಸು | ತ್ತೆಶಿವ
ನಂಶರಣೋ || ತ್ಕರಸಂಗದೆಚಿರಸುಖಿಯಾ | ಗಿರುತಿರ್ದಂಸುಜನವನಜವ
ನದಿನನಾಥಂ || .... ||೬||

ಉ|| ವೃ|| ಆತನಶಿಷ್ಯನೋರ್ವನಕಳಂಕಗುಣಾಂಕನನೂನಭಕ್ತಿವಿ |
ಖ್ಯಾತವಿಲಾಸನಾತ್ಮಸತಿಯುಂಸುತನುಂಸಹಿತಂಗುರೂತ್ತಮು || ಪ್ರೀತಿಯು
ನಂಘ್ರಿಪೂಜೆಗಳನೊಲ್ದು ನಿಮಿರ್ಚುತೆನಿಚ್ಚಮುಂಸುವೃ | ತ್ತಾತುಳಚಿಕ್ಕಮಾ
ದನೆನಿಸಿರ್ದವಿದಗ್ಧವರೇಣ್ಯನೊಪ್ಪಿದಂ || .... ||೭||

ಕಂ || ಗುರುಮಾದಿರಾಜಪಾದಾಂ | ಬುರುಹಮೆಗತಿಯೆಂದುಸೇವಿ
ಸುತೆಸಲೆನಿಜಮಂ || ದಿರಕೃತ್ಯಕೇನುಮುಂಭಾ | ಸುರಮತಿಚಿಂತಿಸದೆಸಂತ
ಮಿರ್ದಂಭಕ್ತಂ || .... ||೮||

ವ || ಅಂತುಪಲಕೆಲವತ್ಸರಂಬಾಳುತ್ತಮಿರ್ದೊಂದುದಿನದಿರುಳೊಳಿ ರ್ದಿರ್ದಂತಿರಸುಗಳೆವಿನಂತದ್ರುಮಣಿಕಂಡು ಚರಪಾದೋದಕದಿಂ ತೊಳೆ ದೊರಸಿ ಸರ್ವಾಂಗದೊಳ್ಭಸಿತೋದ್ಧೂಳನಂಗೆಯ್ದು ರುದ್ರಾಕ್ಷೆಗಳಿನಲಂಕರಿ ಸುತ್ತಮಾಕಳೇವರಮನೊಂದು ಕಂಬದೊಳ್ನಿರ್ಮಿಸಿನೆರೆಪೊರೆಯವರಾರುಮ ರಿಯದಂತದಂನಿಕ್ಷೇಪಿಸಲೊಂದು ಗೋಪೆಯನವಳಗುಳ್ಳನಿತರೊಳಾಖನನ ನಿರ್ಭರಧ್ವನಿಗೆ ಪಟ್ಟರ್ದತರುಣಂನಿದ್ರೆತಿಳಿದೇಳ್ದಗುಳುತ್ತಮಿರ್ಪಮಾತೆಯಿ ರವಂಕಂಡುಕೌತುಕಂಬಟ್ಟು ||

ಕಂ॥ ಎಲೆಜನನಿಲಿಂಗಪೂಜಾ । ಫಲಸದ್ವೇದಿಯನದೇಕೆನೀನೆಗುಳ್ದ
ಪೆಗೆ ॥ ಲ್ಗಲಸ್ಸೈಯ್ಯನಪೂಜೆಗೆಪೊಸ । ಸಲಿಲಂಗೂಳಲಿಂದೊರಂತೆಯುಂನೆಗ
ಳ್ದಪೆಯೊ ॥ — ॥೯॥

ರಕ್ತೋದ್ಧತವೃತ್ತ ॥ ಐಯ್ಯನೇಕೆಚರಬೃಂದದೋಲಗ । ಕ್ಕೈಯ್ಯ
ಸೆಂದಿನವೊಲಿಂದುಪೋಗದೀ ॥ ರಯ್ಯಮಾದಮನೆಗಂ ಬದೊತ್ತಿನೊಳ್ ।
ಸುಯ್ಯಡಂಗಿದವನಂತಿರಿರ್ದಪಂ ॥ ॥೧೦॥

ಕಂ॥ ಎಂದುಂಮುಳಿಯುಂನಿನ್ನೊಡ । ನಿಂದುಕರಂಮುಳಿದುಸುಮ್ಮ
ನಿರ್ದಪನಕ್ಕಂ ॥ ತಂದೆನಿಜದಿಂದಮುಳಿಸಿಂ । ಗೊಂದಿದಕಾರಣಮದಾವುದ
ರುಪೆನಗೀಗಳ್ — ॥೧೧॥

ಕಂ॥ ಸಾಂಗನಿಜಶೀಲಮಂಪಿ । ಕರ್ಣಂಗೊಳಿಸಿದೆಯೊಗೃಹಕ್ಕೆಪದೆದೇ
ಳ್ತೆ ಸೆನೀಂ॥ಜಂಗಮತತಿಸಮಯೋಚಿತ। ದಿಂಗಿತಪೂಜೆಯನೊಡಸ್ಟ ದೇಂಪೋ
ದೆಯೊಪೇಳ್ .... ॥೧೨॥

ಉ॥ ವೃ॥ ಸಾರಣೆಯಲ್ಲಿಜಂತುತತಿಸೊಂದುದೊ ಸೋದಿಪಿಪಂಬುವಿಂ
ದೆಸಂ । ಪೂರಿತಮಾದುದಿಲ್ಲವೊ ಕನತ್ಕಲಶಂಕಡಗೆಯ್ದುಸೂತ್ರಮೇ ॥ ನೋರಿ
ಯನಾಳ್ದದೋಪಳಿಯುಗಂಧಮನಿಟ್ಟೆಯೊ ಮಾಸಿಭಿನ್ನಮಾ । ದೋರಣಮ
ಲ್ಲದಕ್ಷತೆಯನಿತ್ತೆಯೊ ಪಜ್ಜಳಿಪಂತೆನಲ್ಮೆಯಿಂ ॥೧೩॥

ಕಂ॥ ಬೆಳಗದೆಶಿವೋಪಕರಣಾ । ವಳಿಯಂಸಾರ್ಚದೆಯೊ ತೊಟ್ಟುಗ
ಳೆದೊಣಗಿದಪೂ ॥ ಗಳನರ್ಪಿಸಿದೆಯೊ ಪೊಸಗು । ಗ್ಗುಳರಸದಿಂದಗ್ನಿಸಾಂದಿ
ಪೊಗೆತರ್ಗಿದುದೊ .... ॥೧೪॥

ಕಂ॥ ಸಾರಪ್ರಭೆಮಸುಳ್ದುದೊಪೇ । ಳ್ನೀರಾಜನಮೋಜೆದಪ್ಪಿಮನಮಿತ್ತೆ
ಯೋಪೇ॥ಳೋರಂತೆಗಡಣಿಸಿಮರ್ಪ । ಹಾರಕ್ಕಿದಿರಿಟ್ಟಸೊಡರುಕಳೆಗುಂ
ದಿದುದೊ॥ ॥೧೫॥

ಕಂ॥ ಲಿಂಗಾರ್ಪಿತಶೇಷದೊಳಭ । ವಂಗರ್ಪಿತವಾಗದುದನೆಬೆರಸಿದೆ
ಯೊ ಮಹಾ ॥ ಲಿಂಗತ್ರಿವಿಧೋದಕಮಂ । ಪಿಂಗದೆನೀನೊಂದುಗೆಯ್ದೆಯೊ
ಮರೆಪಿಂದಂ .... ॥೧೬॥

ಕಂ॥ ಅಸಮಾಕ್ಷನಡಿಗಳಂಜಾ । ನಿಸುವಾಗಳ್ಮಾತನಾಡಿಸೆದೆಯೊ ನಿ
ತಾಂತಂ ॥ ಬೆಸಕೈಪೊಡಲಸಿದೆಯೊನೀ। ನುಸುರಲ್ಲದೊಡಯ್ಯನಿಂತುಮುನಿವ
ನೆಜನನೀ .... ॥೧೭॥

ಕಂ|| ತಾಯೆಬಿಡುನೆಲನನಗುಳ್ವುದ | ನೋಯಾರವೆನೀನುವಾನುಮಿ
ವನಂಘ್ರಲಸ || ತ್ತೋಯರುಹಕೆರಗೆತಿಳಿಪಪ | ನೀಯವಸರದಲ್ಲಿನೋಳ್ಪೊ
ಡಿಂತಿದೆಕಜ್ಜಂ ||೧೮||

ಕಂ|| ಬಾರೆಂದುಕರೆಯುತಂಕರ | ನೀರಜದಿಂಜನನಿಯುಟ್ಟಚೇಲಾಂ
ಚಲಮಂ || ಭೀರುಮತಿಪಿಡಿದುಸೆಳೆಯೆಕು|ಮಾರನನಡೆನೋಡಿಮಾತೆನಸುನ
ಗುತಾಗಳ್ ||೧೯||

ಕಂ|| ಎಳೆಮಗನೆಕಲ್ತನುಡಿಗಳ|ನಲಸದೆಪಲವಂದದಿಂದೆನುಡಿಯುದನುಳಿ
ಕಾ||ದಲನಮುಳಿಸಿಲ್ಲಿಕೂಪದ|ಜಲದಿಂದಳಿದಪ್ಪುದದರಿನಗುಳ್ದಪೆನೀಗಳ್||೨೦||

ಕಂ|| ಎಳೆಯನೆನಿಸಿರ್ದನೀನಗೀ | ಮುಳಿಸಿನಮಾತೇಕೆಪ್ರೋಗಿಪಪಡಿಸು
ಮುಳಿಸಂ || ತಿಳುಪಿದಪೆನೀಯೊರಂತೆಯ| ಸಲಿಲಮನೊಸೆದಿತ್ತುಮೆಲ್ಲನಸು
ನಯದಿಂದಂ ||೨೧||

ವ|| ಎನೆನಿಜಜನನಿಗಸದಳಮಾದ ಜನಕನಬಲ್ಮುಳಿಸೆನಗೆತಿಳುಪಲಿಂ
ತಾನುಮುಳವಲ್ಲೆಂದು ಗುರುಮಾದಿರಾಜನೀನಲ್ಲದಿಂ ತಿದುತಿಳಿಪಡದೆಂದುನೆನೆ
ದುತರುಣನಾಪರ್ಬಿದಮರ್ಬಿನೊಳೋರ್ವನೆ ನಿಜಗೃಹಕವಾಟಮುಂಗಿರ್ರನೆತೆ
ಗೆದೇಳ್ತಂದುಸಕಳೇಶದೇವನರಮನೆಯಂಪೊಕ್ಕು ಸರಸಮಧುರತರವೀಣಾರ
ಣಿತರಾಗರಸಸುಧಾಸಾಗರದೊಳೀಶ್ವರನವಗಾಹಂಗೆಯ್ಸುತ್ತಮಿರ್ದಾಗಳ್||

ಕಂ|| ಸಕಳೇಷ್ಟದಾನಿಯೆನಿಸುವ | ಸಕಳೇಶ್ವರಮಾದಿರಾಜನಂಕಂ
ದೊಲವಿಂ | ಸುಕುಮಾರಮಾನಸಾಂಬುಜ|| ಸುಕುಮಾರಂಪಾದಪದ್ಮಕವನ
ತನಾದಂ|| ||೨೨||

ವ|| ಅಂತೆರಗಿಕರಾಂಬುಜಂಗಳಂಮುಗಿದುಮ್ಮಳಿಸುತಿಂತೆಂಪಂ

ಚಂ|| ವೃ|| ಅವಧರಿಸೈಯ್ಯಬಿನ್ನಪಪನೆಮ್ಮಯತಂದೆನಿಮಿತ್ತಮಿಲ್ಲದಿಂ
ದವಿರಳವಾದಪೇರ್ಮುಳಿಸನಾಳ್ದುವಿಭೂಷಿಂಪುನೆಯ್ದೆಪೂಸಿತಂ|| ನವಯುವದ
ಲ್ಲಿನಿಮ್ಮಡಿಗಳಿತ್ತನವಾಂಬರಮುಂಮುಸುಂಕಿಕೊಂ | ಡವಿಚಲಿತಾಂಗನಾಗಿ
ರುತಮಿರ್ದಪನೊಯ್ಯನೆನೆಮ್ಮಿಕಂಬಮುಂ ||೨೩||

ಕಂ|| ನುಡಿಯಂನೋಡಂಮಿಸುಕಂ | ಕಡುಮುಳಿಸಂತಾಳ್ದುಮೂ
ರ್ತಿಗೊಂಡಿರ್ದಪನಾ|| ಪೃಡಪೂಜೆಯವೇದಿಕೆಯಂ | ಬಿಡದಗುಳ್ದಪಳೆನ್ನಜ
ನನಿಯೋರ್ವಳೆಗೃಹದೊಳ್ ||೨೪||

ಕಂ|| ಜನಕನಡಿಗೆರಗಿನಯದಿಂ |ಮುನಿಸಂಕಳೆಯೆಂದೊಡಗುಳ್ದೀರಂ

ತೆಯುಜಲವಿ ॥ ತ್ರ್ಯನುನಯದೆತಿಳುಪಿದಪೆನೆಲೆ | ತನುಭವನೀಂಪೋಗುಪವಡಿ
ಸೆಂದಸವಸದಿಂ ॥೨೬॥

ಕಂ॥ ಪಿಡಿದಕರಂಗಂಕರದಿಂ | ಬಿಡಿಸಿಕೊಳುತ್ತೆನ್ನಮಾತೆತೊಲಗೆಂದೆ
ನ್ನಂ ॥ ಜಡಿದೊಡಿದಸೆಲ್ಲಮಂಸಿ |ಮಡಿಗೆರಪಲ್ಬಂದೆನಯ್ಯದೇಶಿಕತಿಲಕಾ ॥

ಕಂ॥ ಇನಕರದಿಂಮರ್ಬ್ಬಳಿವಂ | ತೆನಿತೆಂತಾನಿಮ್ಮಪದದಸಂದರ್ಶನ
ದಿಂ ॥ ಜನಕನಮುಳಿಸಳಿದಪುದೊ | ಯ್ಯನೆಬಿಜಯಂಗೆಯ್ದು ದೇವಪೊರೆ
ಯಲ್ವೇಳ್ಕುಂ ॥೨೭॥

ಕಂ॥ ಎಂದುಂಮುಳಿಸಿಲ್ಲಿನ್ನು ಯು | ತಂದೆಗೆಮುಳಿದಿರ್ಪನೀಗಳೇ
ಕೆಂದರಿಯೆಂ ॥ ಮುಂದೆರಗಿನುಡಿಯಿಸಿದೊಡೇ| ನೆಂದುಂತಾಂನುಡಿಯನೆನ್ನೊ
ಳೇಪೇಳ್ದಪನೋ ॥೨೮॥

ಕಂ॥ಜನಕಂಪ್ರಣಯದಿನೆನ್ನಯ|ಜನನಿಯೊಳಿಪ್ರೊದಳ್ದದಮುನಿಪೊಡಂ
ಮುನಿಗೆಮುಯಿ॥ ಳ್ನಿತುಂತಪ್ಪಿಲ್ಲದೆಸುಂ | ಮನೆತಾನೆನ್ನೊಡನೆಮುನಿದಪಿದು
ಚಿತ್ರತರಂ ॥ .... ॥೨೯॥

ಕಂ ॥ ಅರಿದರಿದಾತನನೇಹದ | ಪರಿಯನ್ನೊಳ್ದೇವಪೇಳ್ವೊಡನದಳ
ಮುಖಿಳೋ ॥ ರ್ಮರೆಯೊಳಿದುಪೊಸತುನಿಮ್ಮಯ | ಚರಣಾಬ್ಜಮೆಬಲ್ಲುದದ
ನದೇಂವಣ್ಣಿಪನೊ ॥ .... ॥೩೦॥

ಚ॥ ವೃ॥ ಅಳವಿಯೊಳೆನ್ನನೀಕ್ಷಿಪುದುಮಾಗಳೆಪೊಂಪುಳಿದಾಳೆಮೆಯ್ಪೊ
ದ | ಳ್ದಳಿಯೆಮಪಾತ್ರುಬಾರೆಲೆತನೂಭವಬಾರೆಲೆತಂದೆಬಾರಮುಂ ॥ ಜುಳ
ಗುಣಬಾಲಲಿಂಗವಿಭುಬಾರೆನುತಂಬಿಗಿಯಪ್ಪಿಕೊಂಡುಕೋ | ಮಳಭುಜ
ದಿಂದೆಮೆಯ್ದಡಪಿಮುದ್ದಿಪಿನೋಡಿಮನೋನುರಾಗದಿಂ ॥ ॥೩೧॥

ಮ॥ ತೆಗೆದುತ್ಸಂಗದೊಳಿಟ್ಟುಚಂಡಿಕೆಯನೊಳ್ಪಿಂಕಟ್ಟಿಸಂಪ್ರೀತಿಕೈ|
ಮಿಗೆಪೂಮಾಲೆಯ ನುತ್ತಿ ಫಾಳತಳದೊಳ್ಭಸ್ಮತ್ರಿಪುಂಡ್ರಾಂಕಮುಂ ॥ ನೆಗ
ಳ್ದಕ್ಷಿದ್ವಯಕೆಚ್ಚುಕಜ್ಜಳಮನೆನ್ನೀಕರ್ಣದೊಳ್ಪೂದೊಡಂ | ಬಿಗಳಂಸಾರ್ಚಿ
ನಿರೀಕ್ಷಿಸುತ್ತೆ ಸಲಿಸಂಮುಂಡಾಡುವಂಮುದ್ದಿಪಂ ॥ ॥೩೨॥

ಕಂ॥ ಕೊನೆವೆರಳಿಂದಳ್ಳಿಯನೊ | ಯ್ಯನೆಜಕ್ಕುಲಿಸುತ್ತೆ ನಗಿಪನಂಗ
ನೆನೋಡೆಂ ॥ ದೆನುತಂಜರ್ಬ್ಬುತೆಪುರ್ಬ್ಬಂ | ದಿಸಿಯುಳ್ಗರುಪುತ್ತೆ ಬಿನದಿ ಪಂನಸು
ನಗುತಂ ॥ ॥೩೩॥

ಚ ॥ ವೃ ॥ ಅಡಿಗಡಿಗಪ್ಪಿಕೊಳ್ಳನನುರಾಗದಿನೋದಿಪನೀಶಮಂತ್ರ
ಮಂ | ಮೃಡಶಿವಶಂಭುಶಂಕರಹರಾಭವಭರ್ಗಭವಾದಿನಾಮಮುಂ ॥ ನುಡಿ

ನುಡಿಯೆಂದುತಾಂಕಲಿಪನಾಲಿಪನೊಳ್ಸೊಸಲೊಡ್ಡಿಚೈಗುಡು । ತ್ತೊಡನೊ
ಡನುರ್ಬಿವೋಣ್ಪಿಡಿದುಗಲ್ಲಮನೊಲ್ದಲುಗುತ್ತೆರಾಗಿಪಂ ॥ ॥೩೪॥

ವ॥ ಮತ್ತಂ॥

ಚ॥ ವೃ॥ ಬಸವನಬಂಟನೋಸುತನೊಕಿನ್ನರದೇವನಕೂರ್ಪಲೆಂಕ
ನೊ । ಮುಸುಟಿಯಚೌಡರಾಯನಹಲಾಯುಧನಾಳೊ ತೆಲುಂಗಜೊಮ್ಮ
ನಾ ॥ ಕೈಸದಬೆಡಂಗನೋಮುಸಣಿದೇವನದಾಸನೊದಾಸಿಮಯ್ಯನೊ । ಕೈ
ಸಕದಭೃತ್ಯನೋದಸರಿದೇವನಚಾರನೊ ಮಾಚಿದೇವನಾ ॥ ॥೩೫॥

ಚಂ ॥ ಪಳೆಯನೊಸೇದಿರಾಜನಸಿಯಂ ಪಿಡಿವಾತನೊ ಪಂಡಿತಾರ್ಯ
ನು ॥ ಜ್ವಲಪದಪದ್ಮಸೇವಕನೊ ವೇಮುರಸಾರ್ಯನಶಿಷ್ಯನೊವಿಶ್ರುಂ ॥ ಖಳಮ
ತಿಬಂಕನಂಕದವನೊ ಸಿರಿಯಾಳ್ವನಸೂನುವಿಂಗೆನ । ಲ್ಗೆಳೆಯನೊ ಸೌಂದ
ರಾಧಿಪನದೂತನೊ ಚನ್ನಯನಾತ್ಮಜಾತನೊ .... ॥೩೬॥

ಉ॥ ಚೇರಮನಶ್ವರಕ್ಷಕನೊ ಗೊಲ್ಲಳನೊಳ್ದುರುಗಾವನೊಬಹಿ ।
ರ್ದ್ವಾರಮನೊಲ್ದುಕಾವಭರನೊಗಣನಾಥನಬಂಡಿಕಾರನೊ ॥ ಬೀರವಬಿಬ್ಬ
ಬಾಚಯನಹೊನ್ನಯನಗ್ಗದಕಂಬಿಕಾರನೊ । ಮಾರಯನಂಗಣಕ್ಕೆ ಚಳೆಯಂ
ಗುಡುವಾತನೊ ಚೋಳರಾಯನಾ .... ॥೩೭॥

ಚಂ॥ ಪಡಿಯರನೊಪ್ರೊಗೆಲ್ತೊಣೆಯರಾಳತಿಗೆಯ್ವನೊ ಕಕ್ಕಯಂಗಿ
ಪಂ । ಪಡಿಗಮನಾಂಪನೊಮುಳಿಯರಾಜನಸತ್ತಿಗೆದಾಳ್ವನೊಬೆಡಂ ॥ ಗಿಡಿದಿ
ರಿವತ್ತನರ್ಘಕನೊ ಚನ್ನವೃಷಾಂಕನಸುಪ್ರಸಾದಿಯೊ । ನಿಡುಗುಡಿಮಾರನಂ
ಗಣರಜಂದಿಗೆವಾತನೊ ಸಿದ್ಧರಾಮನಾ .... ॥೩೮॥

ಉ॥ ಸೇವಿಪಗುಡ್ಡನೊಸುರಗಿಚೌಡಕಿಂಕರನೊಪ್ರೊದಳ್ದಕೆಂ । ಬಾವಿ
ಯಭೋಗನಾದರಪಸಿಂಬಕನೊ ಕಲಿಕಾಮನಂಘ್ರಿರ ॥ ಕ್ಷಾವಹನಕ್ರಿ
ಯಾನ್ವಿತನೊಮಾದರಸಾರ್ಯರಮೊಂಮುಗನೊಮುಹಾ । ದೇವಿಯಚಿಕ್ಕಮಾವ
ಣನಕಂದನೊ ನೀನೆನುತೆನ್ನನಳ್ಕರಿಂ .... ॥೩೯॥

ಕಂ॥ ಕರೆಕರೆದುಲಲ್ಲೆಗೆಯ್ದಾ । ದರಿಸುತೆಪೇರುರದೊಳಪ್ಪುಪಂಪಡಗ
ರಿಪಂ ॥ ಕರತಳತಾಳಮನೊತ್ತುತೆ । ಪಿರಿದುತ್ಸವದಿಂದೆಕುಣಿಯಿ
ಪಂಪಿತನೆನ್ನಂ .... ॥೪೦॥

ಕಂ॥ ಪೆಗಲೇರಿಸಿಕೊಂಡೆನ್ನಂ। ಮಿಗೆಸಿನ್ಮೇಳಗಕೆಬರ್ಪನತಿಸಂಭ್ರಮ

ದಿಂ ॥ ಪಗಲಪನುದಿನಮುಮಿಂತಿಂ । ತಗೆಣಿತಸಂಪ್ರೀತಿವೆತ್ತು
ಮನ್ನಿಪನೆನ್ನಂ .... ॥೪೧॥

ಕಂ ॥ ಇಂದೆನ್ನೊಳ್ಮನಿಮಸುರಂ । ತಂದೆಮಹಾಮಹಿಮನೀವೆಬ
ಲ್ಲಿರಿದಂಮೇ ॥ ಕೊಂಡುಂತಪ್ಪೆನ್ನೊಳ್ಸಲೆ । ಸಂದಿರವಾನಾಡೆನಸ್ವಶಿ
ಶುಗಳೊಳೆಂದುಂ ——— ॥೪೨॥

ಕಂ ॥ ಶರಣತತಿಗೆಂಡುನಂದಿಸ । ದಿರೆಸಭವಾನಪ್ಪಿತಕ್ಕೆಬಾಯ್ದೆರೆ
ಯೆಂಶಂ ॥ ಕರಪೂಜೆಗೆಯ್ವುಸಮಯದಿ । ಕರೆಯುಂ ಕಂಡುದನೆಬಯಸಿ
ಪೇಡೆನಜಸ್ರಂ .... ॥೪೩॥

ಕಂ॥ ಪೊಲ್ಲದುಮನೆಸಗೆ ನಯ್ಯನ । ಸೊಲ್ಲಂ ಸಲೆಮೀರೆ ನಸ್ವರೊಸ
ಗೆಯುಗೃಹಕಾ ॥ ನಿಲ್ಲದೆಪೋಗೆಂಸಮಯಕೆ । ಸಲ್ಲದಪೊಳ್ನುಡಿಯೆ ನೀಶಮುಂ
ತ್ರಂಮರೆಯೆಂ .... ॥೪೪॥

ಸ್ರ॥ ವೃ ॥ ಇಂತಾಸಿರ್ಸಂದಮಂ ತಾನರಿಯುಸೆಮುಳಿದಂ ನೆಟ್ಟಿರಂ
ತಾತನೆನ್ನೊ । ಳ್ಸಂತಾಪಂಗೊಂಡು ಮೇಣಾಂತಿಳಿಯುನೇನೆಂದಪಂ ಸತ್ಕೃ
ಪಾದನ್ರ ॥ ಸ್ವಾಂತರ್ನಿರ್ಮೆಯ್ಬೇಗಂತಿಳುಪೆತಿಳಿದಪಂಬಲ್ಲೆನಾನೆಲ್ಲಮಂ
ದುಶ್ಚಿಂತಾಕಾಂತಾರದಾವಾನಳಗುರುವರನೀಂ ಬಂದುರಕ್ಷಿಪ್ಪುದೆನ್ನುಂ ॥

ಕಂ॥ ಎಂದಿಂತುಮುದ್ದುನುಡಿಗಳ್ । ಸಂದಣಿಸಿರೆದೇನಬನ್ನಿಮೆಂಡಡಿ
ಗಡಿಗಾ ॥ ಕ್ರಂದಿಸುತೆರಗುತೆಕರೆಯುತೆ । ಕುಂದದೆದೈನ್ಯೋಕ್ತಿವೆರಸಿಪೊರ
ಳುತ್ತಡಿಯೊಳ್ .... ॥೪೬॥

ಕಂ ॥ ಕರಕರಿಪಕರುಣನಿರಮಂ । ಕರುಣಾನಿಧಿನೋಡಿವಶನದೀಧಿತಿ
ಮೊಗೆದೊ ॥ ಳ್ಪರಕಲಿಸೆನಗುತೆಸಕಳೇ । ಶ್ವರದೇವಂವೀಣೆದೆಗೆದುನೆ
ಲಕಿಳುಪುತ್ತ್ರಂ .... ॥೪೭॥

ಮಲ್ಲಿಕಾಮಾಲಾವೃತ್ತ॥ಶೀಲವಂತರನಂತರುಂಟಿವಳಂತೊರಂತೆಯನೆಯ್ದೆ
ತ । ಸ್ಮಾಲಯುಕ್ಷಳಪಲ್ಲಿತೋಡಿಪರುಂಟಿಪನ್ಮಳಿಸಾಗೆತ ॥ ತ್ಕಾಲದೊಳ್ಜ
ಡಿಮಂಪಮುಂಬಿಸುಟೀತನಂಕೆಮುಸುಂಕುತಂ । ಚೇಲಮುಮ್ಮಿಗೆನೆಮ್ಮಿಕಂಬ
ಮನಿರ್ದರುಂಟಿಗೃಹಾಧಿಪರ್ .... ॥೪೮॥

ಕಂ॥ ಚಿತ್ರಮಿದುಚಿಕ್ಕಮಾದನ । ಪುತ್ರನಿವಂನುಡಿವಮಾತುಪೊಸಬ
ಗೆಯೆಮಿಸ್ಮ ॥ ಶ್ರೋತ್ರಕಿನಿದಾಯ್ತುಶಿವಶಿವ । ಧಾತ್ರಿಯೊಳಿವನನ್ನರೊಳ
ರೆನುಡಿಯುಬೆಡಂಗರ್ ॥ .... ॥೪೯॥

ವ॥ ಎಂದು ಪೊಗಳ್ದು ತಲೆತಡವಿ ಮುದ್ದಿಸಿಮುಂಡಾಡಿನೋಡಿ ॥

ಸ್ವಾಗತ ವೃ॥ ಬಾಲಲಿಂಗನಡೆಪೋಪಮೆನುತ್ತಂ । ಲೀಲೆಯಿಂದಸ ಕಳೇಶ್ವರದೇವಂ ॥ ಕಾಲವೈರಿಯನಿರೂಪಮಿಡೆಂದಾ । ಕಾಲಕಂಠನಿಭನೇಳ್ತರುತಾಗಳ್ ॥ ॥೫೦॥

ಮ॥ ವೃ॥ಸಕಳೇಷ್ಟಪ್ರದದೇವನೀನಿರೆವಲಂಬೇರೊಂದನಿಚ್ಛೈಸಿಬೇ । ಡಿಕರಂಧಾವತಿಗೊಳ್ವನಲ್ಲುಬಿಡದಾಸೆಂಬಿಂತಿದಂನೀನೆಬ ॥ ಲ್ಲಿಕೃಪಾಸಾಗರಪೇಳ್ವುದೇಂಪೆರತನೆನ್ನಂಗೇಂದ್ರಿಯಪ್ರಾಣಚಿ । ತ್ತಕಧೀಶಂಸಕಳೇಶನೀನೆ ನಿಜಮೆಂದಾನಂದದಿಂಗೀತಮಂ ॥ .... ॥೫೧॥

ಕಂ॥ ಪಾಡುತ್ತೆಬಾಲಲಿಂಗಂ । ಕೂಡೈತರೆನಿಜದೃಗಂಚಲಪ್ರಭೆಜವದಿಂ ॥ ದೋಡಿಸೆತಮಮುಂಗುರುಕುಲ । ಚೂಡಾಮಣಿಮಾದಿರಾಜನೊಸೆದೇಳ್ತಂದಂ ॥ .... ॥೫೨॥

ವ॥ ಅಂತೇಳ್ತಂದು ತನ್ಮಂದಿರಮಂ ಪೊಕ್ಕುನಿಂದು ನಿರೀಕ್ಷಿಸಿ॥

ಕಂ॥ ಏಗೆಯ್ದುಪೆಮಗಳೆಪೊದ । ಳ್ದೀಗಳ್ನಿಂನಿನಯನೇಕೆಮುನಿದನೊಪೊರಮ॥ಟ್ಟೀಗುಣನಿಧಿನಟ್ಟರುಳೆಂ।ಮಾಗಾರಕ್ಕೀಕೆಬಂದನೋಬಳಲುತ್ತಂ॥

ವ॥ ಎಂಬ ಗಂಭೀರಧ್ವನಿಯನಾಮಹಾದೇವಿಕೇಳ್ದು ಖನನಕ್ರಿಯೆಯನುಳಿದು ಭೀತಿವೆರಸಿ ಭಕ್ತಿಭರದಿನೆರಗುವಂತೆ ತದಂಘ್ರಿಗೆರಗಿಮುಗುಳುಪೊಡಮಡುತ್ತಮಿರೆ ನಡುಮನೆಗೆಬಂದು ಕಂಬಮಂ ನೆಮ್ಮಿರ್ದಚಿಕ್ಕಮಾದಣ್ಣನಂಗಮಂ ಮಾದಿ ರಾಜನಚ್ಚರಿವೆತ್ತು ನಿಜಕೃಪಾಪೀಯೂಷಾರ್ದ್ರಕಟಾಕ್ಷದಿನಡರೆನೋಡಿ ಪೆಸಗೊಂಡು ಕರೆದು ॥

ಕಂ ॥ ಬಿಡುನಿನ್ನಮುನಿಸನೇಳೇ । ಳ್ತಡಮಿಲ್ಲದೆಚಿಕ್ಕಮಾದನೀನೆಂಬುದುಮಾ ॥ ಗಡೆಕೀವೆಜೀವಮೇಳ್ದವ । ರಡಿಯೊಳ್ಸೈಗೆಪೆದುದೇವಶರಣೆನುತಿರ್ದಂ ॥ ... ॥೫೪॥

ಕಂ॥ ಮಕರಾಂಕಮಾನಹರಣಹ । ಮಕರಾಂಕಕಪರ್ದರೂಪಜಯಜಯಸತತಂ॥ ಸಕಳೇಪ್ಸಿತಪ್ರದಾಯಕ।ಸಕಳೇಶ್ವರಮಾದಿರಾಜನತಸುರಭೂಜಾ॥

ಕಂ॥ ದೇವೇಶದೇವನಿಮ್ಮಡಿ । ದಾವರೆಯುಂಕಂಡುಧನ್ಯನಾದೆಂಶಿವಧ ॥ ರ್ಮಾವಾಸನಾದೆನನುಪಮ । ಪಾವನಪದನಾದೆನಾದೆನಾನತಿಮಾನ್ಯಂ ॥೫೬॥

ವ॥ ಎಂದಿಂತು ನಿಜಭಕ್ತಿಯಿಂ ಪೊಗಳ್ದು ಪೊಡಮಟ್ಟು ತಚ್ಚರಣತ

ಳಂಗಳಂಶಿರದೊಳ್ಹೊತ್ತು ಪೊರೆಯೇರಿ ಮನೋರಮಣಿಯುಂ ನಂದನನುಂ
ಬೆರಸು ಚಿಕ್ಕಮಾದಂಣನನುಪಮಾನಂದದಿ ಸಿರ್ಪಿಸಮುಲ್ಲಿ ॥

ಕಂ॥ ನೆರೆನೆರೆದುಪರಮಭಕ್ತ । ಪ್ಪರಮೋತ್ಸವಮುಲರೆಮಾದಿರಾಜ
ನಪಾದಾಂ ॥ ಬುರುಹಕಭಿವಂದಿಸುತ್ತ । ಚ್ಚರಿವಡುತಂನೋಡಿಸಂಭ್ರಮಂ
ಗೊಳುತಾಗಳ್ ॥ .... ॥೫೭॥

ಸ್ರ॥ವೃ॥ ಕಾಲವ್ಯಾಲೇಭಪಂಚಾಸನಕಲಿಕಲುಷಧ್ವಾಂತಮಾರ್ತಾಂ
ಡಮುದಾರಾಂ । ತಾಲೀಕಾಲಾಪನಿ ರ್ವ್ಯಾಪಕಪರತರಪಂಚಾಕ್ಷರಪ್ರಾಣಲಿಂಗ॥
ವ್ಯಾಲಗ್ನಸ್ವಾಂತಚಿಂತಾರಹಿತಚಿದಮಿತಾನಂದನಿರ್ದ್ವಂದ್ವಪೂರ್ಣ । ಪ್ರಾಲೇ
ಯಾಂಶುಪ್ರಭಾಪ್ರಸ್ಫುರಿತಸುತಯಶೋಭಾಸಿಮಾದಾರ್ಯವರ್ಯಾ ॥೫೮॥

ಮ॥ವೃ॥ ತರಳಂನಟ್ಟಿರುಳೆಯ್ದಿ ದೇವಮುನಿದಿಂ ಮುತ್ತಾತನೀಕಾಯ್ದು
ನೊ । ತ್ತರಿಸಲ್ಕಿಂಮಡಿಯೆಯ್ದುಗೆಂದನುಡಿಯುಂ ಕೈಕೊಂಡು ಕಾರುಣ್ಯದೇ॥
ಳ್ತರದಿಂಬಂದಸುಮಿತ್ತು ನಿದ್ರಿತನನೇಳೆಂಬಂತಿರೇಳೇಳೆನು । ತ್ತಿರದೇಳ್ವಂತಿ
ರೆಮಾಡಿದೈಮಝುರೆಶೈವಾಚಾರ್ಯಚೂಡಾಮಣೀ ॥ ॥೫೯॥

ಕಂ॥ ಮುಗಿಲಿತ್ತೊಡೆಜೀವನಮುಂ । ಮಿಗೆಪುರುಡಿಸಿನಿನ್ನಪಾಂಗರು
ಚಿಮಿಂಚುವಮಿಂ ॥ ಜೊಗೆದಿತ್ತುದುಜೀವನಮುಂ । ಜಗದೊಳ್ಬಕ್ತಾಂಗಸ
ಸ್ಯಕಮಳಚರಿತ್ರ ॥ .... ॥೬೦॥

ಕಂ॥ ಗುರುಚರಹರಾಂಘ್ರಿಭಜನಮೆ । ನೆರೆದಪವರ್ಗಕ್ಕಮರ್ಗಳಂ
ನಿಜಮೆಂಬೀ ॥ ಪರಿಯುರುವುವಂತೆಭಕ್ತನ । ಹರಣಮನೊಲ್ದಿತ್ತೆ ಶಿಷ್ಟಜನ
ಮಂದಾರಾ ॥ .... ॥೬೧॥

ಕಂ॥ ತರಳನನುಡಿಯೆನ್ನದೆನ । ಟ್ಟಿರುಳೆಯ್ದುತೆಭಕ್ತನಸುವನಿತ್ತೈ
ಮಝುಭಾ ॥ ವುರಿದಯೆಯದೆಂತೊಶಕ್ತಿಯು । ಪರಿಯೆನ್ನದೊಸೌಮ್ಯಗು
ಣಗಣಾಲಂಕರಣಾ ॥ .... ॥೬೨॥

ವ॥ ಎಂದು ಕೀರ್ತಿಸಿ ಸದ್ಭಕ್ತಸೂನುವಂನೋಡಿ ॥

ಕಂ॥ ಹರಕೃಪೆವಡೆದಳಿದಣುಗನ । ಹರಣಮನೆಲೆಪಡೆದರೊಳರಿಳಾತ
ಳದೊಳಿವಂ ॥ ತರುಣಂನಿಮ್ಮಯಕೃಪೆವಡೆ । ದಿರದಸುವಳಿದಾತ್ಮಜನಕನಸು
ವಂಪಡೆದಂ ॥ .... ॥೬೩॥

ಸ್ರ॥ವೃ॥ ಎಂದಿಂತೆಲ್ಲಾಗಣಂಗಳ್ಪೊಗಳೆನೆಗಳ್ದಮಾದಾರ್ಯನಂ ಕಂಡು
ಬಂದಾ॥ ನಂದಂಪೆಂಪೇರಿಭಕ್ತಂಗೆಸುಪನೊಸೆದುಕೊಟ್ಟಂಗಡೀದೇವನೆಂದೊ

ಳ್ಪಿಂದಂ ಕೊಂಡಾಡುತಂಪಾಡುತೆಪವಕೆರಗುತ್ತಲ್ಲಿಕಣ್ಗೊಪ್ಪುತಿರ್ದಂ। ಕಂದ ರ್ಪಾರಾತಿಭಕ್ತಪ್ರಕರಸುಖಕರಂಭಕ್ತಿಭಾವಾಭಿರಾಮಂ ||೬೪||

ಕಂ|| ಸಕಳೇಶನಮಾದಿರಾಜ || ಪ್ರಕಟಮಹತ್ವಾಂಗಕತೆಯನಿದನೋ ದುವಕೇ || ಳ್ವಕಳಂಕಚಿತ್ತರಹಿರಾ । ಜಕಟಕಸೊಲವಿಂದೆಪಡೆವರಭಿಮತ ಸುಖಮಂ ... ||೬೫||

ಲಲಿತಪದವೃತ್ತಂ|| ಮಾನವಪತಿವ್ರಜಸಮಾನತಪದಾಬ್ಜ ಮುನಿಮಾ ನಸಮನೋಜ್ಞತರಮಾನಸಮರಾಳಾ। ಮಾನಜನತಾಪ್ರಿಯವಿಮಾನಪಸುರ ಸ್ತುತಸಮಾನರಹಿತಾತ್ಮ ಮಹಿಮಾನಘಚರಿತ್ರ || ಮಾನವವಚೋನಿಗಮ ಮಾನಗದಿತಾರ್ಥವಪಮಾನತತಭಾಸ್ವ ದನುಮಾನನಯಸತ್ಸ।ನ್ಮಾನಕವರಕ್ಷಿ ಸತಿಮಾನಘನೆರಾಷ್ಟ್ರದುಪಮೂಸಭವಮೇಘಪಪಮಾನಬಸವೇಶಾ ||೬೬||

ಮಲ್ಲಿಕಾಮಾಲಾವೃತ್ತ|| ವೀರಶೈವಮಹಾಮತಾಶ್ರಿತಭಕ್ತನಿರ್ಜರವ ಲ್ಲರೀ। ದಾರುಣಾಸುರರಾಜಿಭಂಜನಶಾತಿಬಾಣಧನುರ್ಧರೀ || ಮಾರಮ ರ್ದನಮಾನಸಾಂಬುಜ ರಾಜಹಂಸಿಶಿವಂಕರೀ। ಪಾರಣಾನನಮಾತೆರಕ್ಷಿಪುದೆ ನ್ನನದ್ರಿಜೆಶಾಂಕರೀ ||೬೭||

ಗದ್ಯ|| ಇದು ವಿನಮದಖಿಳಸುರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತರುಚಿನಿಚ ಯತರುಣಾತಪಪರಿಲಸಿತ ಪರಮ
ಶಿವಲಿಂಗ ಪಾದಾರವಿಂದಪರಾಗೆ ಭಸಿತ ಭಾಸುರಲಲಾಟ
ಪಟ್ಟಸರಸಜನಮಾನಿ ತೋಭಯಕವಿತಾವಿಶಾರದಶ್ರೀ
ಷಡಕ್ಷರದೇವಭಕ್ತಿವಿರಚಿತ ಶ್ರೀಮದ್ಬಸವರಾಜವಿ
ಜಯಮಹಾ ಪುರಾಣದೊಳ್ ಮಾದಿರಾಜಕ್ಕ
ತಚಿಕ್ಕಮಾದಂಣಪ್ರಾಣದಾನಕಥನಂದ್ವಾ
ತ್ರಿಂಶದಾಶ್ವಾಸಂ ಪರಿಸಮಾಪ್ತಂ

ಕದಿರೆರೇಮಾರ್ಯನ ಕಥನಂ,

ನಾಂದಿ || ಲಲಿತಪದವೃತ್ತ || ಬಾಲಶಶಿಮೌಳಿಕಪಾಲಧರಶೂಲಕರ ಕಾಲಹರಕೋಲಪರಲಾಲಸಮನೋಜ । ವ್ಯಾಡಧರಲೀಲಶುಭಲೀಲಬುಧ ಜಾಲನುತಿಲೋಲಕರುಣಾಲಸಿತಫಾಲಶಿಖಿನೇತ್ರಾ || ಶೈಲಗವಿಶಾಲರುಚಿರಾ

ಲಯಸು ಪೇಲನಗಣಾವಿಕೃತಮೇಲನಮುರಾಲಗೆಮನಾರ್ಜ | ಸ್ಥೂಲತನುಕಾ ಲಿವನಮಾಲಿವಿಧಿಮಾಲಕತಮಾಲದಳನೀಲಗಳಪಾಲಿಸುವೃಷೇಂದ್ರಾ ||

ಕಂ || ಶ್ರೀತುಹಿನಗಿರಿಸುತಾಮುಖ | ಶೀತಾಂಶುವಿಲೋಕನೋತ್ಸ ಕಂಗುಣನಿಧಿವಿ || ಖ್ಯಾತಹರಿಮುಖ್ಯಸುರಸಂ | ಜಾತಾರ್ಚಿತನೀಗೆಸೌಖ್ಯ ಮಂಶಿವಲಿಂಗಂ || .... ||೧||

ಕಂ|| ಸುರುಚಿರಸುರಪುರದಿರವಂ | ಪರಿಭವಿಪನೆಗಳ್ತೆವೆತ್ತ ಕಲ್ಯಾಣ ದೊಳೊ|ಪ್ಪಿರುತಿರ್ಪನೋರ್ವನಭಿನವ|ಚರಿತಂಚರಲಿಂಗಚರಣಸರಸಿಜಭೃಂಗಂ||

ಕಂ|| ಪಿತತತಶಿವಕೀರ್ತಿವಿಶ್ರುತ | ಮತಿಪಳಿತನತಾರ್ತಿದಾನನಿಧಿವಿದಿ ತಗುಣಾ || ನ್ವಿತನುರುಗುರುಚರಪೂಜಾ | ಚತುರಂಸಲಿಕದಿರರೇಮನೆಂಬ ಮಹಾತ್ಮಂ || .... ||೨||

ವ || ಅನುಹಾ ಮಹಿಮನೊಂದುದಿನ ಪೊಲ್ತು ಗುರುಚರಣದರ್ಶನ ಕ್ಕೆಂದು ನಡಗರಂಮಿಗೆ ಕೊಳಲಂ ಪೊರಮಟ್ಟು ಬರ್ಪಾಗಳಿಡೆವಟ್ಟೆಯೊಳೊಂ ದೂರಿರಿಮೂರಾಂತ ರಾಳದೊಳ್ಕಂಡು ತನಗೆ ಹರಪೂಜಾಸಮಯ ಮಾದುದಿ ದನುಲ್ಲಂಘಿಸಿಪೋಗೆ ಶಿವಾರ್ಚನಾತಿಕ್ರಮಣಂಮಹಾದೋಷಸ್ಯ ಕಾರಣ ಮೆಂದು ಶಿವಾಗಮೋಕ್ತಿಯೊಳವಯಿಸಿಲ್ಲಿ ಮಹಾದೋಷಂ ತಗುಳ್ಗುಮೆಂ ದವಧರಿಸಿ ನಡೆತಂದಾ ಪುರದೊಳಿರ್ದ ಸೋಮನಾಥನೆಂಬ ಭಕ್ತನಂಗಣಮಂ ಪೊಕ್ಕು ತದಂಗನೆಯಪ್ಪಣ್ಣಾಲ ದೇವಿಪಾದಪ್ರಕ್ಷಾಳನಂ ಗೈಯ್ಯೆ ಸಾದರಂ ತನ್ಮಂದಿರದೊಳಗಂಪುಗುತಂದಿಕ್ಕಿದಮೆಲ್ವಸೆಯೊಳ್ಕುಳ್ಳಿರ್ದಾಗಳ್ ||

ಕಂ|| ಪಿರಿಮುತ್ಸವದಿಂಕಂಡಾ | ದರದಿಂನಿಜತನಯಮಲ್ಲಿನಾಥಸಮೇ ತಂ|| ಗುರುವರನವಿಮಳಪದಸರ|ಸಿರುಹಕ್ಕಾಸೋಮನಾಥಭಕ್ತಂಮಣೆದಂ||

ವ|| ಅಂತು ಮಣಿದೇಳ್ದುನಿಂದು ಭಯಭಕ್ತಿಯಿಂ ಕರಾಂಜಲಿವೆರ ಸಿಕೀರ್ತಿಸುತ್ತ ಮಿರ್ಪಿನಮಲ್ಲಿ ನಡಗರದಿನಣ್ಣಾಲ ದೇವಿ ಸಾಂಗಮೆನೆಲಿಂ ಗಾರ್ಚನಂಗೆಯ್ಸಿ ನೈವೇದ್ಯಮಂ ಭಕ್ತಿಮಿಗೆಗಡಣಿಸಲೊಡನೆ.

ಕಂ|| ನಲಿದರ್ಪಿಸಿರೇಮಾರ್ಯಂ | ಸ್ವಲಿಂಗದೇವಂಗೆಸವಿದುತಾನುಳು ಪಿದನಿ || ರ್ಮಲಸುಪ್ರಸಾದಮುಮ್ಮನ | ದೊಲವಿಂಕೈಕೊಂಡನೆರಗಿಮುಗುಳ್ದ ವವಡಿಯೊಳ್ .... ||೩||

ವ|| ಅಂತುಮಹಾಪ್ರಸಾದಮಂಕೈಕೊಂಡು ತನ್ನರಸಿಯುಣಾಗಿಲ್ವೆ

ರಸಿಸವಿಪನಂತರಸಾಕದಿರರೇವ್ಯೈಯನಿಂ ಶಿವತತ್ವಾನುಭಾವಮಂ ಬೆಸಗೊಂ
ಡುಕೇಳ್ದು ಕೃತಾರ್ಥಭಾವಮಂದಾಳಿರ್ದನಾಗಳ್.

ಕಂ|| ಎಳೆಯುಂರೇವ್ಯೈಯ್ಯನಪದ | ತಳಕೆರಗುವನೊಲ್ದುನೋಡುವ
ಸ್ನಗುವಂಕಂ || ಗಳಮುಂಗಿವನಲರ್ಚುವನ | ಪ್ವಳಿಪಂಸುಳಿಸುಳಿದುಸುತ್ತು
ವಂಸಡಗರಿಪಂ ||೬||

ಕಂ|| ಅಂಗುಟಮುಂಪಿಡಿದಲುಗುವ | ನಂಗುಲಿಯಂಕರಪನೊತ್ತುವಂ
ಪದತ್ರಳಮಂ || ಮುಂಗಡೆಯೊಳಾಡುವಂ ಮು | ದ್ದಿಂಗೆಡೆಯೆಂಪೆನಿಸಿಬಿಸದಿ
ಪಂಪುಟನೆಗೆವಂ || ..... ||೭||

ಕಂ|| ಎಲೆಬೊಪ್ಪನೋಳ್ಪುದೈಯನ | ನಿಲಪಂಸೀನೆಂಪುತೋರುವಂ
ಕರತಳದಿಂ || ಸಲವೆಚ್ಚುಗವನತ್ತಿತ್ತಂ | ತೊಲಗಂಪೆರತೊಂಪನೆಳಸದಿಂತೆಸೆ
ವಾಗಳ್ || ..... ||೮||

ವ|| ಕದಿರರೇಮುಯ್ಯನಾಕು ವರನ ನಚ್ಚಿನ ಬಿಸಪಕ್ಕೆಬಗೆವೆತ್ತುನೋ
ಡಿ ಮುದ್ದುಗೆಯ್ದು ಮುಂಡಾಡಿ ವೈಯಂತಪಪಿಮನ್ನಿಸಿ ||

ಕಂ|| ಮುನ್ನೆಂದುಮರಿಯದೀಮುಗು | ವೆನ್ನೊಳ್ಬಿಸದಿಪುದು ಚಿತ್ರ
ಮೆನುತಂ || ಪನ್ನಂಬೆಚ್ಚುತೆಮುನದೊಲ | ವಿಂನಗುತಂನಲಿಯುತಿರ್ಪನಮ
ನಂತರದೊಳ್ || .... ||೯||

ಉ|| ವೃ|| ಅಣ್ಣಲದೇವಿಲಿಂಗಯುಜನೋಚಿತ ವಸ್ತುವನೀಯೆನಲ್ಮೆ
ಯಿಂ | ಬಂಣಿಸಿಪಾಡುತಂಶಿವಸಮರ್ಚನೆಗೆಯ್ದುಶಿವಪ್ರಸಾದಮಂ|| ಪಂಣ
ನೆಭಕ್ತಿಯಿಂಸವಿದು ಶೇಷಮನಿತ್ತನವರ್ಗೆರೇಮುಯಂ | ಚಿಂಣನುಮಾತ್ಮ
ಮಾತೆಯೊಡನಾಗುರುಶೇಷಮನುಂಡನಳ್ಕರಿಂ ||

ವ|| ಅಂತು ಪೂಮುವ್ವರುಂ ಗುರುಪ್ರಸಾದಮಂಸೇವಿಸಿ ದೈಸ್ವಭಾ
ವಂಬಡೆದು ಮಗುಳ್ದುಪೊಡಮಡಲೊಡನೆ ನಿಜಕಾರುಣ್ಯಮಂಬೀರಿ ||

ಕಂ|| ಎಲೆ ಸೋಮನಾಥಗುರುಪರಿ | ಗೊಲವಿಂದಾಂಪೋಗಿಬರ್ಪೆನಂ
ತಿರುನೀನೆಂ || ದಲಘುಮತಿಸಂತಮಿರಿಸುತೆ | ವಿಲಾಸದಿಂದೇಶಿಕೇಂಪ್ರಪು
ರಿಗೇಳ್ತಂದಂ || .... ||೧೧||

ಕಂ|| ಪರಮಾನಂದದಿನಾಗುರು | ವರನಂಕಂಡಳ್ಕರಿಂದೆ ವೈಯಿಕ್ಕಿ
ಕೃಪಾ || ಕರಜಯಜಯಶರಣಾಗೆನು | ತುರುತರನಿಜಭಕ್ತಿಭಾವದಿಂ ಕೀ
ರ್ತಿಸಿದಂ || .... ||೧೨||

ಮ|| ವೃ|| ಜಲಗಂಧಾಕ್ಷತೆಪುಷ್ಪಧೂಪ ವಿಳಸದ್ದೀಪಾರ್ಪಣಂಗೆಯ್ದು
ಮಂ | ಜುಳನೈವೇದ್ಯಸುಗಂಧವೀಟಿಕೆಯನಿತ್ತೋರಂತೆಕ್ಕೈಗೆಯ್ದುತು || ಜ್ವ
ಲರತ್ನಾಭರಣಂಗಳಿಂಗುರುಪದಾಂಭೋಜಾತಮಂ ಪೂಜಿಸು | ತ್ತೊಲವಿಂ
ಸತ್ಕೃಪೆವೆತ್ತು ತನ್ಮಠದೊಳಿರ್ದ್ದಂಭಕ್ತಿಭಾಗ್ಯಾನ್ವಿತಂ ||೧೩||

ವ|| ಅನ್ನೆವರಮಿತ್ತಲ್.

ಮಲ್ಲಿಕಾಮಾಲಾವೃತ್ತ || ಮಲ್ಲಿನಾಥನಮಾತೆಜಂಗಮವೃಂದಮೋಳ್ತ್
ರೆಮಂದಿರ | ಕ್ಕಲ್ಲಿ ವಂದಿಸುತಂಪ್ರಿಯಂ ತೊಳೆದೊಯ್ದುಕುಳ್ಳಿರಿಸುತ್ತೆತ ||
ತ್ಪಲ್ಲವಾಧರೆಪಾಕಮಂ ಸಮೆಯಲ್ಕೆ ಕಾಷ್ಠಮನಾಯ್ದುತಂ | ದಲ್ಲದಾಗದೆನು
ತ್ತೆ ನಂದನನೆಯ್ದೆ ಪಿಂದೆವಿಳಾಸದಿಂ ||೧೪||

ಮಲ್ಲಿಕಾಮಾಲಾ|| ಬಂದುಪಿತ್ತಿಲನೆಯ್ದೆ ಪೊಕ್ಕಡುಗರ್ಬನೀಕ್ಷಿಸುತಾ
ಯ್ದುಪ್ಪೊ | ಳ್ತಿಂದುಚಂದನಕಾಷ್ಠಮಂಸುತನೆತ್ತೆತಾಂಕೆಳಗಿರ್ದ್ದಘು||ಸ್ಸಿಂ
ದುಪಲ್ಕಿರಿದೇಳ್ದುಘೋರವಿಷಾತಿಭೀಷಣಸರ್ಪನಾ | ಕಂದನಂಪಿಡಿದೊ
ತ್ತಿಕಚ್ಚಿದುದುರ್ಚಿಪಲ್ಕಿನೆಮಾಯ್ದನಂ ||೧೫||

ವ|| ಅಂತು ತನ್ನನಗಿದ ಭೀಕರಾಹಿಯನಾ ಕುಮಾರಂಕಂಡಗಿದು ಜ
ನನಿಯಂಬೆದಲ್ದು ಕಂಗಳಿಂನೋಡಿ.

ಕಂ|| ತಾಯೆಕಡೆದೊಳಗುಬಾರದಿ | ರೀಯುಡೆಗಚ್ಚಿಯುದ್ದುದಿರ್ದ್ದುದಕ
ಟಕಟನ್ನಂ || ನೋಯಿಸಿಕಡಿದುದೆನುತ್ತಂ | ಬಾಯುಳಿದಾಬಾಲನುಸುರ್ದ
ಪಳಯಿಸುತಿಳೆಯೊಳ್ ||೧೬||

ಕಂ|| ಪಡಲಿಟ್ಟ್ಯುಫಣಿಯುವಿಷದುರಿ | ಯುಡರೆಕರಂಮುಗುಳೆಕಣ್ಗಳಳ
ವಳಿದಸುವಂ || ಬಿಡೆಮಲ್ಲಿನಾಥನವನಂ | ಮೃಡಭಕ್ತೆನಿರೀಕ್ಷಿಸುತ್ತೆಸಾರ್ಕೆ
ಯೊಳಾಗಳ್ ||೧೭||

ಚಂ|| ವೃ || ಸುಗಿದಳೆಸುಯ್ದಳೇ ತನಯಹಾಸುತಹಾಸುಕುಮಾರ
ಹಾಯೆನು | ತ್ತಗಿದಳಲಿಂದೆರೋದಿಸಿದಳೇ ಬಗೆಗುಂದಿದಳೇ ಬಳಲ್ದಳೇ ||
ಮಿಗೆಕರಿಗಂದಿಕುಂದಿದಳೆ ಪರ್ಚಿದಜೀವನದಿಂ ಬೆಳರ್ತುಬೆಂ | ದೊಗೆದಳೆ
ಕಂದಕೆಟ್ಟೆನಕಟೆಂತೆನಗೆಂದು ವಿಷಾದಮಾಂತಳೇ ||೧೮||

ಕಂ|| ಅಣುಗಂಫಣಿಯಿಂಮಡಿದಂ | ಗುಣನಿಧಿಯೇಗೆಯ್ವೆನೆಂದುಪ
ಳಯಿಸಿದಳೆ ತ || ಲ್ಲಣಿಸಿಮರುಗಿದಳೆ ಧೈರ್ಯದ | ಕಣಿಕಣ್ಬನಿಗರೆಮತಾಪಮಂ
ತಾಳಿದಳೆ ||೧೯||

ಕಂ॥ ಅಕಟಿಂತುಮುಡುಪಿದಂಗಡ। ಸುಕುಮಾರನನಭವನೆಂದುಸೊಂ
ದಳೆ ಮಡಿದ ॥ ರ್ಭಕನಸುವನೀವುದೆಲೆಭ । ಕ್ತಕದಂಬಮೆ ತಳ್ವದೆಂದುಸಂಬ
ಲಿಸಿದಳೆ .. .... ॥೨೦॥

ಮ॥ ವೃ॥ ಹರನಿಮ್ಮಂಘ್ರಿಯುಪೂಜೆಗೆಯ್ದುಮಳಿವಂತಾಯ್ತಾತ್ಮಜಂ
ಗೆಂದಳ । ಲ್ಪಿರಿದಾಗುತ್ತಿರೆ ಸುಯ್ದಳೇ ಗುರುಗಳಿಂಮುಮ್ಮಂತ್ರಿಸಲ್ಬಾಳ್ವ
ನೀ ॥ ತರುಣಂತಾನೆಸುತಂ ಪಲುಂಬಿದಳೆ ಪುತ್ರಂಬಾಳ್ವನೊಲ್ಮಾಡಿರೇ । ಶರ
ಣರ್ತ್ರೀರಸಷೋಡಶಶ್ವಭಜಿಪೆನೆಂದಭ್ಯರ್ಥನಂಗೆಯ್ದಳೇ ॥೨೧॥

ಕ॥ ಅನುನಯದಿನೀಕ್ಷಿಸುತೆನಿಜ । ತನಯುನಿವಂ ಸಂದನಭವಗಣ
ತತಿಗಿದುಲೇ ॥ ಸೆನುತ್ತೊಲವಿಂದೆಳೆನಗೆಯಾ । ನನ ನಳಿನದೊಳುಣ್ಮೆತನ್ನಪ
ತಿಯೊಡನಾಗಳ್ .... ॥೨೨॥

ಮ॥ ಸ್ರ ॥ ವೃ ॥ ಪೆರರಾರುಂ ಕಾಣದಂತಾಲಯಕೆಸ್ವತಪತತ್ಕಾಯ
ಮಂತಂದು ಕಟ್ಟ । ಳ್ಕರೊಳಾಲಿಂಗಾರ್ಚನಾವೇದಿಕೆಯನಗುಳ್ದರುದ್ರಾಕ್ಷೆ
ಯಿಂಭಸ್ಮದಿಂದೊ ॥ ಳ್ನರುಗಂಪಂ ತಾಳ್ದಭಕ್ತಾರ್ಪಿತಕುಸುಮಲಸದ್ಬಿಲ್ವದಿಂ
ಸಿಂಗರಂಗೈ । ದೆರಕಂಕ್ಕೈಗಣ್ಮೆನಿಕ್ಷೇಪಿಸಿದಳದನ ದೇನೆಂಬೆನಾಶ್ಚರ್ಯದುರ್ಬಂ॥

ವ॥ ಅಂತು ನೀಕ್ಷೇಪಿಸಿಸತಿಪತಿಗಳೀರ್ವರುಮೇಕಚಿತ್ತರಾಗಿ.

ಕಂ॥ ಮುನ್ನಿನಪರಿಯಂಶಿವಗಣ । ಪನ್ನಳಿನನುನೋಜೆಯಿಂದೆಪೂಜಿ
ಸುತಂ ಸ ॥ ತ್ಪ್ರೋನ್ನತಮತಿಗಳ್ಸುಖಮಿ । ರ್ಪನ್ನೆವರಂ ಕದಿರರೇಮನಾಗು
ರುಪದಮಂ ... ॥೨೪॥

ಕಂ॥ ಭಜಿಯಿಸುತೇಳುಂದಿನಮಿ । ರ್ದ್ದಜಡಂಗುರುಚರಣಕೆರಗಿತತ್ಕ
ರುಣವನೊ ॥ ಟ್ಟಜೆಯಿಂಪಡೆದೇಳ್ತಂದಂ । ಸುಜನಸ್ತುತನಲ್ಲಿಮಗುಳ್ದಶಿ
ವಗಣಸಹಿತಂ ॥೨೫॥

ವ॥ ಅಂತೇಳ್ತಂದಾಸೋಮನಾಥನಿರ್ದ ಪೊಳಲಂಪೊಕ್ಕು ಸಂಭ್ರಮ
ದಿಂ ತನ್ಮಂದಿರಕ್ಕೆನಡೆತರೆ.

ಸ್ರ ॥ ವೃ ॥ ಕಂಡಷ್ಟಾಂಗಪ್ರಣಾಮಂಗೆಯ್ದು ತೊಳೆದುಪಾದಾಬ್ಜ
ಮಂ ಪಾದತೀರ್ಥಂ । ಗೊಂಡಾಗಳ್ ಧನ್ಯಭಾವಂದಳೆದು ಪದೆದುಲಿಂಗಾ
ರ್ಚನಂಗೆಯ್ಸಿ ತಾನುಂ ॥ ಪೆಂಡಿರ್ತಚ್ಛೇಷಮಂಸೇವಿಸುವ ಸಮಯದೊ
ಳ್ಶೋಡುತೊಲ್ದೀರ್ವರಂ ಮಾ । ರ್ತಾಂಡಾಂಶುಸ್ಫಾರತೇಜಂ ಚದುರಕದಿರ
ರೇಮಾರ್ಯನಿಂತೆಂದನಾಗಳ್ .... ॥೨೬॥

ಉ॥ ಅಣ್ಣಲದೇವಿನಿನ್ನಣುಗನಾವೆಡೆಗೆಯ್ದಿದನಿಲ್ಲಿಕಾಣೆವಾ । ಚಿಣ್ಣನನಾಡಲೆಯ್ದಿದನೊಮಕ್ಕಳೊಳಾರ್ಯ ಗೃಹಾಂತರಕ್ಕೆನು ॥ ಕ್ಕಣ್ಣನಪೂಜೆಯಂಪಡೆದುನೋಳ್ಪೊಡಪೋದನೊ ಭಕ್ತರೀಶನಂ । ಬಣ್ಣಿಸಿಪಾಡಕೇಳಲವರಂಗಣಕೇಂತಳರ್ದತ್ತ್ರನಿಂದನೋ .... ॥೨೭॥

ಕಂ॥ ಚರಲಿಂಗದನುಕದತ್ತ । ಲ್ಪರಿದನೊ ಶಿವಲಿಂಗೆಯುಜನಕೊಪ್ಪವಪ್ರೊಸಕಂ ॥ ಮರಲಂತಿರಿಯಲ್ಪಿತ್ತಲ । ನಿರದೆಯ್ದಿವಿನೋದದಿಂದೆಪ್ರಾಗೊಯ್ದಪನೋ ... ॥೨೮॥

ಕಂ॥ ಗಿರಿಶಪುರಾಣಮನೋದುವ । ಶರಣರಬಳಿಸಾರ್ದುಬಾರದಿರ್ಪನೊ ನಿನ್ನೊ ॥ ಳ್ತರುಣಂಮುನಿದೇಂಮೆಯ್ಗರೆ । ದಿರುತಿರ್ದನೊ ಪೊರಗೆನಿದ್ರೆಗೆಯ್ದಿರ್ದಪನೊ ॥೨೯॥

ಕಂ॥ ಅಂದಾಪ್ಯೆತರೆ ತಾಂಪಲ । ವಂದದಿ ಬಿನದಿಸುತಮಿರ್ದನೆಮ್ಮೊಡನೊಲವಿಂ ॥ ಕಂದನವನಾಡದಿರ್ಪಿ । ಮಂದಿರಮಿದುಬಿನ್ನನಾಗಿಕಾಣಿಪುದಲ್ತೆ .... ॥೩೦॥

ಕಂ॥ ಕರೆಕಂಗಿನಿನ್ನತನಯನ । ನರಪರಿಸವೆ ಬೇಗವಿಾಗಳೆಂದಾಗುಣನಾ । ಗರಕದಿರರೇಮನೆನೆ ತ । ತ್ತರುಣೀಮಣಿಮಣಿದು ಮಗುಳ್ದುನೆಗಳ್ದಂ ಜಲಿಯಂ .... ॥೩೧॥

ಕಂ॥ ದೇವಕರೆಯಲ್ಕೆಚಂಗಳ । ದೇವಿಯೆ ಪೇಳಾಂತನೂಜನಂಕರೆಯುದನ ॥ ಧ್ಯಾನಮನಾನಲ್ಕೆಂಬಿಯೆ । ಭಾವಿಸೆತದ್ಗೇಹದಾಸಿಯುಗರ್ಜನೆಸೆಯೇ .... ॥೩೨॥

ಮ॥ ಸ್ರ॥ ವೃ॥ ಕರೆಯಲ್ಸಾಮರ್ಥ್ಯಮಿಲ್ಲಂ ಕರೆಯ ದುಸಿಕನಿರ್ದಂದು ನಿಂಮುಕ್ತಿಯುಂ ಸ್ಯೆ । ತಿರದಾದಂ ಮಿಾರಿಪಂತಾದವುದೆನಗಿದನೇನೆಂಬೆನಾಂ ದೇವನೀಮೆಂ॥ ನಿರವಂ ಮುನ್ನೋಡದೀ ದುರ್ಘಟಮನೊರೆಯುದೇಂತಕ್ಕು ದೇವಳ್ಕೃಪಾಸಾ । ಗರ ಕಾರ್ಯಾಕಾರ್ಯಮಂ ನಿಮ್ಮಡಿಗಳರಿಗುಮಂತಲ್ಲದಾನೆತ್ತಬಲ್ಲೆಂ .... ॥೩೩॥

ಕಂ॥ ದೇವಭವದೀಯಸದರಾ । ಜೀವದೊಳೆನ್ನಣುಗನಿರ್ದಪಂಗಡಬೇರಿಂ । ನಾವೆಡೆಯೊಳರಸಿ ಕರೆವೆಂ । ನೀವಿದಮರಿದಿರ್ದುಮೆನಗೆ ಪೇಳ್ದುದುಚಿತ್ರಂ .... ॥೩೪॥

ವ॥ ಎಂದು ನುಡಿವನದ್ಭಕ್ತಿಯ ಭಕ್ತಿಭಾವಕ್ಕೆ ಸಾಶ್ಚರ್ಯ ಚಿತ್ತಂ

ಸಂತಸಂಬಟ್ಟು ಪೂರ್ಳ್ದನಿಕ್ಷೇಪಮನಗುಳ್ಚುವಂತಿರಾವೇದಿಕಾಸಮಾಧಿಯುಸೆ ಗುಳಿಮುಸುಂಕಿತಳ್ತ್ತು ಬಿಲ್ವೀದಳಭಸಿತರೇಣುಗಳನಗಲೆನೂಂಕಿ ಭೋಂಕನೆನಿಜ ಪ್ರಸಂಗವೃಷ್ಟಿರುಚಿ ಸುಧಾಸೇಚನಮನೆಸಗುವಂತಿರಭೀಕ್ಷಿಸಿ.

ಕಂ|| ಪೆಸರ್ಗೊಂಡೇಳೇಳೆಂಬುದು | ಮುಸವಸದಿಂ ತೆರೆದುಕಂಗಳಂ ಜನನಿಗೆಸಂ || ತಸವೊಗೆತರೆ ಮೊಲೆವಾಲ್ಪಿರಿ | ದೊಸರ್ದಿಳಿತರೆ ಕುವರನೇಳ್ದನತಿಸಂಭ್ರಮದಿಂ ||೩೫||

ವ|| ಅಂತೇಳ್ದು ಶರಣಾರ್ತಿರವಂ ಬೆರಸು ಮುಗಿದ ಕೈಯಂ ಸೆಳೆದು ನಿಜಕುಮಾರಕನಂ ಮಾತೆಬಿಗಿಯಪ್ಪಿ ತೆಗೆದೆತ್ತಿಕೊಂಡು ಕದಿರರೇಮ ವಿಭುವಿನಡಿದಾವರೆಗೆ ಪೊಡಮಡಿಸಲೊಡನೆ.

ಕಂ|| ಕರುಣಾಸುಧೆತೆರೆ ಮುಸಗು | ತ್ತಿರೆನೋಡಿ ನಿಜಪ್ರಸಾದದಿಂತಣಿಪುತೆ ತ || ತ್ತರುಣನನಾಪಿತರರ ನಾ | ದರಿಸಿ ಮಹಾಸುಖದೊಳಿರಿಸಿದಂ ಘನಮಹಿಮಂ ... ||೩೬||

ವ|| ಆಗಳಾಕದಿರರೇಮಯ್ಯನ ನಿಂತೆಸಗಿ ದದ್ಭುತವಾರ್ತೆಯಂ ಬಸವರಾಜಂಕೇಳ್ದು ಸಂಭ್ರಮಿಸಿ ಗಣಸಮಿತಿಸಮೇತಂ ಬಂದುಕಂಡು ತದಂಘ್ರಿಯುಗಕ್ಕೆ ಭಕ್ತಿಮಿಗೆ ಪೂವಲಿಗೆದರಿ ಸಾಷ್ಟಾಂಗೆಮೆರಗಿನಿಂದು.

ಮ|| ಪರಮಾನಂದ ಸರೋಮರಾಳ ನಿಗಮಾಂಭೋಜಾತಬಾಲಪ್ರಭಾ | ಕರ ಕಾರುಣ್ಯಕಳಾವಿಳಾಸನಿಧಿ ನಿರ್ಧೂತಾನತವ್ರಾತಸಂ || ಸರಣಧ್ವಾಂತ ಧರಾವನೋದ್ಯಮಸದಾನಿರ್ನಿದ್ರಭೂರುದ್ರ ಭಾ | ಸುರವೀರವ್ರತಭಾಪುರೇ ಕದಿರರೇಮಾಚಾರ್ಯಚೂಡಾಮಣೇ ||೩೭||

ಚ|| ಶರಣಲಲಾಮ ಸತ್ಯಗುಣಧಾಮ ಸದಾಶಿವಭಕ್ತಿಸೀಮ ಶೈ | ವರುಚಿರನಾಮ ಜಾಪಕಲಿಕಾಮನಿರಾಕೃತಮತ್ತಕಾಮ ದು || ರ್ಧರಪರಭೀಮ ಸದ್ವನಧಿಸೋಮ ಸಮಸ್ತಕಳಾಭಿರಾಮ ಚಾ | ಗುರಿತತನಾಮ ಸನ್ನುತಜನಾಮರಭೂರುಹರೇಮಧೀಮಣೇ ||೩೮||

ಸ್ರ || ಎಂದಿಂತಾನಂದದಿಂ ಕೀರ್ತಿಸುತಳಿದೆಳೆಯುಂಗಿಂತುಟೀಳುಂದಿನಂಗ | ಳ್ಕಂದಾಗಳ್ಪ್ರಾಣಮುಂಪಾಲಿಸಿದಿ ರಮುಮ ನೀಮೆಂದು ಕೊಂಡಾಡುತನ್ನ || ಣ್ಪಿಂದಂ ತತ್ಸಾರಕಾರುಣ್ಯಮನೆಪಡೆದು ಕಣ್ಗೊಪ್ಪಿದಂಭಕ್ತಿವಲ್ಲೀ|ಕಂದುಂಕಂದರ್ಪದರ್ಪಪ್ರಹರಗಣಘನಾಂಭೋಧಿಚಂದ್ರಂವೃಷೇಂದ್ರಂ||

ಸಾ|| ವೃ|| ಕದಿರರೇಮವಿಭುಸಚ್ಚರಿತ್ರಮಂ | ಪದೆದುಕೇಳ್ವನಿದನಾ

ವನೋಮವಂ ‖ ಮದನವೈರಿನಿಜಭೋಗಮೋಕ್ಷನಂ । ಪದಮನೀವನವ ಗೀರ್ಧರಿತ್ರಿಯೊಳ್ .... ‖೪೦‖

ಲಲಿತಪದವೃತ್ತಂ ‖ ದಾನವರಿಪುಪ್ರಿಯುಸದಾನನಸುಭಕ್ತಿಯುತದಾನಗುಣಶೀಲವಿಮದಾನಘಚರಿತ್ರ । ಶಾನಸದಭಾವನನವಶಾನತವರಪ್ರದವಶಾನನಸಮರ್ಚಿತದಿಶಾನಟಯುತಸ್ಕ ‖ ಭಾನುಪವನಾಪ್ತಿಮುಭಾನುನಯನತ್ರಯನಿಭಾನುಗತಸತ್ಪಥಶುಭಾನುಭವಯುಕ್ತ । ಹೀನರಥಸುಪ್ರಭನವೀನಗುಣದುಷ್ಟಫಣಿವೀನಧೃತಶಾಂಭವಕವೀನಬಸವೇಶಾ ‖೪೧‖

ಮಾನಿನೀವೃತ್ತ ‖ ಮಂದರಭೂಧರಮಂದಿರಭಾಸುರಶಾಂಕರಿಶಂಭುಸುಖಂಕರಿಸಂ । ಕ್ರಂದನವಂದಿತೆ ಚಂದನಗಂಧಿಸುಧಾಕರಮೌಳಿಶುಭಾಕರಪೂ ‖ ರ್ಣೇಂದುಮುಖಾನ್ವಿತಕುಂದದರಸ್ಮಿತರಾಜಿತೆನಿರ್ಜರಪೂಜಿತೆಸೈ । ಪ್ರೊಂದಿರೆರಕ್ಷಿಪುದಿಂದಿರೆಗಾರ್ಕ್ಯಜಗನ್ನುತೆಪರ್ವತರಾಜಸುತೇ ‖೪೨‖

ಗದ್ಯ ‖ ಇದು ವಿನಮದಖಿಳಸು ರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ
ಕಂ|| ಹರವಿಯನೊಡೆದಾತೊೞ್ತಿನ | ಶಿರಮುಂಬಿಡದೊಡೆಯಲೆಳಸಿಮದ್ಬಾಲಕರಾ || ದುಃರವಣಿಸುತ್ತಿರೆ ನಿಮ್ಮಂ | ನಿರೀಕ್ಷಿಸಲ್ವೇೞ್ಕುಮೆಂದುನಿಲಿಸಿದೆವಲ್ತೆ .... ||೩೯||

ವ|| ಎಂಬುದು ಮಲ್ಲಿಕಲ್ಲಿದೇವಂಕಡುಕನಲ್ದು.

ಮ|| ವೃ|| ಫಣಿರಾಡ್ಭೂಷಣಭಕ್ತಮುಂದಿರದಕೀೞಿಲ್ಗೊಂಡುಪಟ್ಟಪರ್ಬ | ಲ್ಗೊಣಗಂಗಾದೊಡಮಾಗದಾಗದೆಲೆನಿಮ್ಮಂಸಾರ್ದುಮುಟ್ಟಲ್ಕೆಮೇ||

ಗೆಣಸಾತೇಂ ಪೃಡದೀಕ್ಷೆಯಿಂತಶಿವಭಕ್ತಾವಾಸದಾಸೀಜನಂ । ಗುಣ
ಶೂನ್ಯಸ್ಥಿತಿಪೆತ್ತನಿಂನುಸಿರದೆಂತುಂಮುಟ್ಟಲೇಸಕ್ಕುಮೆ ॥೪೦॥

ವ॥ ಅದೇಂಕಾರಣಮೆಂಬಿರಪ್ಪೊಡೆ.

ಉ॥ ವೃ॥ ವೇದಶಿರೋನಿರೂಪಿತಮೆನಿಪ್ಪ ವಿಭೂತಿಯನಕ್ಷಮಾಲೆಯುಂ
ಸಾದರಮಾನಲೊಲ್ಲದೆಲೆಗೋಪಿಯುಮುರ್ಗಲಮುಂಸರೋಜಬೀ ॥ ಜಾದಿಮ.
ಣಿಪ್ರಜಂಗಳನೆತಾಳ್ದಪಿರಾಶ್ರುತಿಸಿದ್ಧ ಶಂಭುಪಾ । ದೋದಕಸುಪ್ರಸಾದಮ
ನಣಂತೊರೆದುಂಡಪಿರಸ್ಯಕೇಷಮುಂ ॥೪೧॥

ಕಂ॥ ಶಿವಪಕೋಧ್ಯೇಯುಯೆನು । ತ್ತವಿಕಲವೇದೋಕ್ತಿಯುಳಿಗು
ಮುಭವನನುಳಿದೀ ॥ ಭವಭಾರಿದೇವತತಿಯುಂ । ತವೆಜಾನಿಪಿರೇಜೆನಿಮಗೆ
ವೈದಿಕನಾಪುಂ ॥೪೨॥

ಕಂ॥ ಬ್ರಾಹ್ಮಣನಪ್ಪಂಜಗದೊಳ್ । ಬ್ರಹ್ಮಮನರಿದಾತನಭವನೇಬ
ಗೆಯೆಪರ ॥ ಬ್ರಹ್ಮಂಬ್ರಹ್ಮಾಚರತಿ । ಬ್ರಾಹ್ಮಣಯೆಂಬಾಗಮೋಕ್ತಿಯಿಂ
ದಿದುಸತ್ಯಂ .... ॥೪೩॥

ಮ॥ ವೃ॥ ಉಮೆಯಾಣ್ಮಂಪರ ಬೊಂಮಮೆಂಬುದುರುತಂಸತ್ಯಂ
ಪರಂಬ್ರಹ್ಮಮುಂ । ತ್ರಮಿದುಂವೇದಶಿರಸ್ಸಹಾಯುಬಲದಿಂತತ್ಕಾರಣಂಬ್ರಹ್ಮ
ವಿ ॥ ಷ್ಣುಮುಖಜೀವರುಮೇಶನೋರ್ವ ನೆಪರಬ್ರಹ್ಮಂದಲಿಂಬೀವಿನೇ ।
ಕಮುದೆಂದುಂನಿಮಗಿಲ್ಲದಿರ್ಪಕತದಿಂಬ್ರಾಹ್ಮಣ್ಯಮೆಂತಕ್ಕುಮೊ ॥೪೪॥

ಕಂ॥ ಪರಮಾತ್ಮಂಪರಬೊಂಮುಂ । ಪರಮೇಶನೆನಿಪ್ಪನಸ್ಯಸಾಧಾರ
ಣಭಾ ॥ ಸುರಪರಮನಾಮಮುಪಿಳಾ । ಮರಪಶುಪತಿ ಶಂಭುಗಲ್ಲದನ್ಯ
ಗೊರ್ಗಳವೆ .... ॥೪೫॥

ಕಂ॥ ಭಾವಿಪ್ಪೊಡೆವೇದತತ್ವಂ । ದೇವೇಷುಬ್ರಾಹ್ಮಣೋಜಿಯೆಂಬು
ದರಿಂಗೌ ॥ ರೀವರನಾದಿಬ್ರಾಹ್ಮಣ । ನಾವಿಭುವಂಬ್ರಾಹ್ಮಣಂಗೆಸೇವಿಪ್ಪು
ದುಚಿತಂ .... ॥೪೬॥

ಕಂ॥ ಇದನುಳಿದಥವಾಮರರಂ । ಪದೆದರ್ಚಪೆಶಂಭುನಿಷ್ಠಗಾಯು
ತ್ರಿಯನೊ ॥ ಕ್ಮೆದಲರ್ಕಪರಪುನೆಸಗುವ । ತುದುಕುಳಿಗಳ್ನಿಮಗೆಸಲ್ಪುದೇ
ಬ್ರಾಹ್ಮಣ್ಯಂ .... ॥೪೭॥

ವ॥ ತತ್ಕಾರಣಂ(ಶಿವಭಕ್ತಚರಾಗಾರದಾಸೀಭುಕ್ತ್ವೋಚ್ಛಿಷ್ಟ ತಾತನಾಃ
ಶುನಕಃಸೂಕರಂಯಾಂತಿಯಾವಜ್ಜಂದ್ರದಿವಾಕರೌ)ಎಂಬನುಕ್ತಾಗಮ

ಶಿವವಚನಪ್ರಮಾಣದಿಂ ಶಿವಭಕ್ತಗೃಹದಾಹೀಜನಮುಂಡುಳುಹಿದುದಂಕೊಂ ಡದರಿನೊಗೆದಶುದ್ಧಬುದ್ಧಿಯನಾಳ್ದಶುನಕನೆಂತು ನೀಂಮುಟ್ಟುಗುಮೆನೆ ಕೇಳ್ದು ಶಾಪಾಗ್ನಿದಗ್ಧರ್ಮಗುಳ್ದು ಕೋಪಾಗ್ನಿದಗ್ಧರಾಗಿ.

ಉ॥ ವೃ॥ ಆಡಿದೆಲೇಸನಿಂದಮುಮ ಮೂರ್ಖಶಿಖಾಮಣಿನಾಯ್ಗಳಿಂ ದೆಕೀ । ಳ್ಮಾಡಿದೆಯೆಂಮುನಾಗಮುವಿದಗ್ರಜರಂನೆರೆನಿನ್ನತೊಳ್ತುಮಂ ॥ ಮಾ ಡಿದತಪ್ಪನೋಸರಿಸಿನಿನ್ನೊಡೆವೇಳ್ದೊಡೆ ತತ್ಕಟೂಕ್ತಿಯಿಂ । ನೀಡೆನೆನಿಷ್ಠು ರೋಕ್ತಿಗಳನೆಂದೆಗಡೆಲ್ಲರಮುಂಡೆಕೊರ್ವಿನಿಂ ॥೪೮॥

ಕಂ॥ ಬಿಸಿಲುಪಟಳಮಂ ಕಳೆಯು । ಲ್ಪೊಸಬನಮಂಪುಗೆ ಧವಾಗ್ನಿ ಕೊಂಡವೊಲಾದ ॥ ತ್ತುಸುರಲದೆಂಬರುವಾತಿನ । ಪಸರಂಮಾಣ್ಗೆಮುಸಮು ಸ್ತರುಂ ಕೇಳ್ವಿನೆಗಂ ॥೪೯॥

ಕಂ॥ ಓದಿಸುನಿನ್ನಯುಸೊಣಗನಿ । ನಾದಂಪದಪಾಳಿಜಟೆಗಳಮರ್ದಿರೆ ವಿಸುಪಾ ॥ ವೇದಮುನೀಕ್ಷಿಪೆವೆನೆ ಸಂ । ಮೋದಂಮಿಗೆನಗುತೆಶರಣನಂ ದಿಂತೆಂದಂ ॥೫೦॥

ಕಂ॥ ಇದುಗಹನಮೆಮುದ್ಭಕ್ತರ । ಸದನಮುನೆಡೆವಿಡದೆಕಾವಕುಕ್ಕುರ ರತತಿಗು ॥ ರ್ವಿದವೇದಮೊನಕೆವಾಡ । ವ್ಪುದರಿಂದಿ ಸುನಿಗೆವೋದು ವಕಜ್ಜಂ ॥೫೧॥

ವ॥ ಎಂದು ಗುರುಧ್ಯಾನಪರಾಯಣನಾಗಿ ನಿಜಗೃಹದ್ವಾರದೊಳ್ಪಟ್ಟಿ ರ್ದಜಾಯಿಲನಂ ಪ್ರಸನ್ನದೃಷ್ಟಿಯಿಂನೋಡೆ ವೇದಪಿತಾಮುಹನೆಂಬ ವೆಸರಿ ನಂಗುಲಿಯುಚಿಟುಂಕನಿಟ್ಟುಕರೆದು.

ಉ॥ ವೃ॥ ಉಚ್ಚಶಿವಪ್ರಸಾದಪರಿಲಬ್ಧಜಪಾವನಭಾವಪೂರ್ಣಭಾ । ಸ್ವಚ್ಛದಖಂಡಸುಪ್ರಣವಮುಂಗಳವಿಗ್ರಹಲಿಂಗಭಾವನಾ ॥ ಸಚ್ಚರಿತ್ರಪ್ರಸ ನ್ನಸಕಲಶ್ರುತಿರತ್ನಸಮುದ್ರಬರ್ಪುದು । ಚ್ಚುಚ್ಚರಿಯೆಂದು ತಾಂಕರೆದನಂತ ದನಾಮುದನಾರಿಸಂನ್ನಿಭಂ ॥೫೨॥

ವ॥ ಎಂದುಕರೆಯು ದುಮಾಸೊಣಗನೇಳ್ತಂದು ಪರವಾದಿಜನಮುಂ ಬಡಿಯುಲ್ಕಸೆಯುಂಚಾಲಿಪಂತೆ ಬಾಲಮುನಾಡಿಸುತ್ತಂಭಕ್ತಿಭರದಿ ನಡಿಗೆರಗಿ ನಿಲ್ವಿನಮುದರವೊಗಮುನಾಮುಹಿಮಾಕರಂನ್ನೋಡಿ ನಿಜಕೃಪಾತರಂಗಿಣಿಯೊ ಲೋಳಾಡಿಸುತ್ತಮಾವೇದದೊಳಾದಡ ವೊಂದೆಡೆಯೊ ಳೊಂದುವಾಕ್ಯಮು ನೆತ್ತಿ ತಳ್ವದೋದೆಂಬು ದುಮಾಗಳಾರುದ್ರಾಂಶಸಂಭೂತಂ ಷಡ್ಮಾಸನವತ

ಪಷ್ಟಂಭಿಸಿ ಋಜುಭಾವದಿಂ ಕುಳ್ಳಿರ್ದು ಹೃದಯಕಮಳಕರ್ಣಿಕಾಗ್ರದೊಳ್ಗುರುಸ್ವರೂಪ ಪರಶಿವನಂ ಜಾಸಿಸಿ ಮೂಲಾಧಾರಕುಂಭಸಂಗೆಯ್ದು.

ಕಂ॥ ರವಿಶಶಿಗತಿಯುಂ ತಡೆದಾ। ಪವನನನಾಮಧ್ಯಮಾರ್ಗದೊಳ್ಪ್ರೆತ್ತಿಸಿಬಿಂ॥ ದುವಿಮಳನಾದಲಯಾನ್ವಿತ। ಸವಿಶೇಷಪ್ರಣವಮಂ ಸಮುಚ್ಚರಿಸುತ್ತಂ .... ॥೫೩॥

ಕಂ॥ ಪಿರಿದಾಶ್ಚರ್ಯದಿಪ್ರೋಗಳು। ತ್ತಿರೆಭೂಸುರತತಿಯುದಾತ್ತಮನುದಾತ್ತಮುಮಿಾ॥ ಸ್ವರಿತಂಪ್ರಚಯಸ್ವರಮುಮ। ರ್ದಿರೆಪದಪಾಳಿಕ್ರಮಂಗಳಂಪರಿಪಿಡಿಯಿಂ .... ॥೫೪॥

ಕಂ॥ ತಿಳಿದಸುಯೋಗಿಸಿರಾಗಿಸಿ। ವಿಳಾಸದಿಂತಪ್ಪದಂತೆನಾಲ್ಕುಂವೇದಂ॥ ಗಳೊಳೋರೊಂದೆಡೆಯುಸಮು। ಜ್ವಳವಾಕ್ಯಮನೆತ್ತಿಸೋಣಗನೋಡಿದುದಾಗಳ್॥ .... ॥೫೫॥

ವ॥ ಅದಂಕೇಳ್ದುವಿಪ್ರರೆಲ್ಲರುಂ ತಲೆದೂಗಿ॥

ಕಂ॥ ಸುತನುಹಿಮನಿಸ್ಮಮುಹಿಮೋಂ। ನ್ನತಿಯುಂಶಿವನೋರ್ವನೆಶಿವನಾರ್ಬಲ್ಲರೆನು॥ ತ್ತತಿಶಯಭಯಚಕಿತರ್ವಿ। ಸ್ಮಿತಚಿತ್ತರ್ಕಲ್ಲಿನಾಥನಡಿಗೆರಗಿರ್ದರ್॥ .... ॥೫೬॥

ವ॥ ಆಗಳ್ಕಂಡಸ್ಮಿತಾಸ್ಯನಾಗಿವಾದಿವಾಗ್ಭಂಜನನಾಜಾಯಿಲಸಂನೋಡಿ॥

ಕಂ॥ ಹೋನಾಣ್ನಾಲ್ಕುಂವೇದಪಿ|ತಾಮಹವೇದಂಗಳೋದೆನುತ್ತಂ ನಿಲಿಸು॥ ತ್ತಾಮಹಿಮಾಂಕರನದನಾ। ಭೂಮಿಾಸುರರಾಸ್ಯಮಂ ವಿರೀಕ್ಷಿಸುತೆಂದಂ॥ .... ॥೫೭॥

ವೃ॥ ಭೂಸುರರೆಲ್ಲರೀಕ್ಷಿಸಿದಿರೇ ಶಿವಭಕ್ತರಪೇರ್ಮೆಯುಂಬಳಿ। ಕ್ಕೆಸೋಣಗಂಸುವರ್ಣಪುರದ್ಗಗದಸದ್ಗುರುಸಿದ್ಧರಾಮನಾ॥ ವಾಸದವೇದದೇಶಿಕನೆನಿಪ್ಪಭಿಧಾನಮುನಾಳ್ದುಘೇರಪ್ರೋ। ದ್ಭಾಸಿತವಕ್ತ್ರನಪ್ಪಶುನಿಗಳ್ಕರಶಿಷ್ಯನೆನಿಪ್ಪುದುರ್ವಿಯೊಳ್॥ .... ॥೫೮॥

ವ॥ ಎಂದು ಪೇಳ್ದುಮತ್ತಮಿಂತೆಂದಂ॥

ಮ॥ ಸ್ರ॥ ಸ್ವ॥ ಧರಣೀದೇವರ್ಕಳೊಳ್ವಾದಿಸಿನಿಗಮಮುಸಾರ್ಪಿಂದೆಜಂಬೂರೊಳಂಕು|ಕ್ಕುರನಿಂದಂ ಮಾಣದಂದೋಡಿಸನೆಸಭೆಯೊಳಾದಂ ಮಹಾಕಾಳಿದೇವಂ॥ ಹರಭಕ್ತಾವಾಸಮುಂ ಸೇವಿಪಶುನಕನಿಕಾಯಕ್ಕೆನೋ

ಣಂತರಿಂದಂ । ಸರಿಯಲ್ತೀವಿಪ್ರವೃಂದಂ ಶರಣಮುಹಿಮೆಯಂ ಕೇಳ್ವುದಿ
ನ್ನುಂನಿತಾಂತಂ ॥ .... ॥೫೯॥

ಮ॥ ಶಿವಚಿತ್ತಯ್ಯನೆನಿಪ್ಪನಿರ್ಪನಭವಶ್ರೀಪಾದಭಕ್ತಂಮುಹೋ। ತ್ಸ
ವದಿಂಧಾತ್ರಿಯೊಳಾತನೊರ್ಮೆ ಸರಿಯಲ್ತೋರ್ಪಂಗೆಕೋಟಿದ್ವಿಜರ್ ॥ ಶಿವ
ಭಕ್ತರ್ಗೆನುತಣ್ಮೆಪಾರ್ವರೊಳೆವಾದಂಗೆಯ್ದುವೇದಾಗಮಾ । ದಿವಿಶೇಷೋ
ಕ್ತಿಗಳಿಂದೆ ತಾಂಜಯಿಸೆ ಸೋಲ್ತಿಂತೆಂದರಾಭೂಸುರರ್ ॥ ॥೬೦॥

ಕಂ॥ ನುಡಿಜಾಣ್ಮೆಯಿಂದೆಜಯುಮಂ । ಪಡೆವಳವಂತಿರ್ಕೆದೃಷ್ಟಮಂ
ತೋರ್ಪಘಟು ॥ ಳ್ಕೊಡೆತೋರಿಗೆಲ್ವುದೆನೆಕಡು । ಸಡಗರದಿಂಪೂಣ್ದುತೋ
ರ್ಪೆನೆಂದಾಕ್ಷಣವೊಳ್ ॥ .... ॥೬೧॥

ತರಳವೃತ್ತ॥ ಪಿರಿಯಭಕ್ತರಪಾದರಕ್ಷೆಯನೇಕಪಾತ್ರೆಯೊಳಿಟ್ಟುಪಾ।
ರ್ವರನನೇಕರನೇಕಪಾತ್ರೆಯೊಳಿಟ್ಟುತಾಂ ತೊಲೆದೂಗೆಸ ॥ ರ್ವರುಮಣಂತ
ಲೆದೂಗೆಚಿತ್ರಮುಧಸ್ಥಿತಂ ಗುರುವಾದುದಾ । ಚರಣರಕ್ಷೆ ಸಮುನ್ನತಂ ಲ
ಘುವಾಯ್ತುಭೂಸುರಸಂಕುಳಂ ॥ .... ॥೬೨॥

ಕಂ॥ ಅದರಿಂದಭವನಭಕ್ತರ । ಪದರಕ್ಷೆಗೆಸರಿಯೆಪಾರ್ವರಿಂಪವಸಂ
ತ ॥ ಳ್ವದೆತಲೆವಾಗಿಸಿಮೆರೆದಂ। ಪದಪಿಂದಕಲ್ಲಿದೇವನಮಳಿನಭಾವಂ ॥೬೩॥

ವ॥ ಮತ್ತಂ ॥

ಮ॥ ವೃ॥ ಪದಪಿಂಧಾರಿಣಿಯುಲ್ಲಿಕಂಗೊಳಿಪಗೊಬ್ರೂರಿಂಬಸಾರಾಗ್ರ
ಹಾ । ರದೊಳೊಪ್ಪಂಬಡೆದಿರ್ಪನದ್ಭುತಚರಿತ್ರಂ ವೀರಶೈವವ್ರತಾ ॥ ಸ್ಪದನ
ತ್ಯೂರ್ಜಿತಭಕ್ತಿಭಾಸುರನದೀರತ್ನಾಕರಂ ವಾದಿವಾ । ರಿದಜಂಝಾನಿಲನ
ಪ್ರತರ್ಕ್ಯಮಹಿಮುಶ್ರೀಬಿಬ್ಬಬಾಚಾಹ್ವಯಂ ॥ ॥೬೪॥

ಕಂ॥ ನುತಜಂಗಮುಪ್ರಸಾದಾ । ಮೃತಸಂವರ್ಧಿತನಿಜಾಸುಲಿಂಗಂ
ಲಿಂಗೋ॥ನ್ನತಭಾವನೆಯಿಂಜಂಗಮುತತಿಯಂಕಂಡೆರಗಿಪೂಜೆಗೆಯ್ವನಜಸ್ರಂ॥

ವ॥ ಅಂತು ಶುದ್ಧಸಿದ್ಧಪ್ರಸಿದ್ಧ ಪ್ರಸಾದತ್ರಯಮೆ ನಿಜಪ್ರಾಣಮಾ
ಗೆ ಕೈಕೊಂಡು ಪರಮಾನಂದಂ ಬೆರಸು ॥

ಚಂ॥ ವೃ॥ ಶರಣರಪಾದುಕಾಶಕಲದಿಂಸಮೆದಾಭರಣಂಗಳಂಕರೋ।
ದರಭುಜಕಂಠಕರ್ಣಯುಗಮಸ್ತಕಕಕ್ಷಮೆನಿಪ್ಪತಾಣದೊ ॥ ಳ್ಧರಿಯಿಸಿಜಂ
ಗಮಾಂಘ್ರಿಯುರಜಂಗಳನಂಗದೊಳಂಗರಾಗಮಂ । ವಿರಚಿಸುತಂಚರಾವಳಿ
ಯಬೀಳುಡೆಯಂಪೊದೆದೊಲ್ದುಗಾಡಿಯಿಂ ॥ .... ॥೬೬॥

ಚಂ ॥ ಮಿಳಿರ್ಪಪಟಂಗಳಿಂಮೆರೆವನಂದಿಪತಾಕೆಯಕಟ್ಟಬಿಟ್ಟಪ್ರೊ ।

ಗಳಪೊಸಬಾಸಿಗಂಗಳವಿಚಿತ್ರವಿತಾನದಚಾರುಚಾಮರಾ || ಪಳಿಮಣಿದರ್ಪ
ಣಪ್ರಕರತೋರಣಮಾತಪವಾರಣಂಗಳು | ಜ್ವಳಿತೆಯನಾಳ್ದಪೊಂಗಳಸದಂ
ದಮೊಡಂಬಡೆಲಿಂಗಮುದ್ರೆಯುಂ || .... ||೬೭||

ಕಂ|| ತಳಿದರ್ಕಚಂದ್ರಬಿಂಬಂ | ಗಳನಣಕಿಪಕಾಂತಿವೆತ್ತನಾಲ್ಕುಂ
ಚಕ್ರಂ || ಗಳಸೊಬಗುಮಿಸುಗೆವೃಷಭೋ | ಜ್ವಳಿತೆಯಸೊಳಕೆಯ್ದುಮೆರೆ
ವಪೊನ್ನಂದುಗೆಯುಂ || .... ||೬೮||

ಮ || ವಿಲಸದ್ರುದ್ರಾಕ್ಷಮಾಲಾಭರಣದಿಕೊರಲೊಳ್ತಳ್ತಪೊಂಘಂಟಿ
ಯುಂ ಕಂ | ಗೊಳಿಪುದ್ಯತ್ಪುಷ್ಪಮಾಲ್ಯಾಘದೆಝುಣಝುಣರಾವಸ್ಫುರತ್ಕಿಂ
ಕಿಣೀಮುಂ || ಜುಳಮಾಲಾಜಾಲದಿಂ ಚಾಮರದಿ ಸಮರ್ದಶೃಂಗಂಗಳಿಂ
ಭಾಳಮಧ್ಯ | ಸ್ಥಳಬದ್ಧಸ್ವರ್ಣಪಟ್ಟಾಂಕಸದಿ ನೆಸೆವಪೇರೆಳ್ತುಗಳ್ಪೇರ್ಮೆ
ಯಿಂದಂ || .... ||೬೯||

ಕಂ || ಪೆಗಲಿತ್ತುಪೊತ್ತುಜವದಿಂ | ಮಿಗೆಪರಿಯೆವಿರಾಜಿಸಿರ್ದಗೋರ
ಥಮುಂಪೆಂ || ಪಗಲದೊಡನೇರಿಸಂಭ್ರಮ | ದೊಗುಮಿಗೆಯಿನುಘೇಯು
ಘೇಯೆನುತ್ತಾದೋಲವಿಂ || .... ||೭೦||

ಕಂ|| ಅರುಗಾವುದದಳವಿಯೊಳುಮೆ | ಯೆರೆಯನ ಭಕ್ತರ್ಕಳೆಸಗೆ
ಗಣಪರ್ವಮ ಸ || ಕ್ಕಟೊಳಲ್ಲಿಗೆತದ್ರಥಮುಂ | ನೆರೆಪರಿಯಿಸುತೆಯ್ದಿ ಕಂ
ಡುಭಕ್ತಾವಳಿಯುಂ || .... ||೭೧||

ಕಂ|| ದಂಡಪ್ರಣಾಮಮೆಸಗುತೆ | ಖಂಡಸುಖಂಬಡೆದುತತ್ಪದಾಂ
ಬುಜರಜದೊ || ಳ್ಬಂಡುಣಿಯವೊಲೋಲಾಡುತೆ | ಮಂಡೆಯೊಳಾಂತವರ
ಚರಣವಿಮಳೋದಕಮುಂ || .... ||೭೨||

ಚ|| ವೃ|| ಘನರುಚಿತಸ್ಮಿತೋದಿತವಚಸ್ಸುಧೆಯಿಂ ತಣಿವೇರಿಮೀರಿ
ಮು | ತ್ತನಿತರೊಳಲ್ಲಿಭಕ್ತಚರಸಂತತಿಯುಂಡುಳುಪಿರ್ದ ಸಿದ್ಧಪಾ || ವಸತ
ರಸುಪ್ರಸಾದಮನಮಂಪೊಗದೆತ್ತಿಶಿವಾಯತೇನಮೊ | ಯೆನುತೆರಗುತ್ತೆ ತೀ
ವಿಕಕಟಾಂತರದೊಳ್ನೆರೆತಂದುಲೀಲೆಯಿಂ || .... ||೭೩||

ಕಂ|| ಅನುಭವಿಸುತ್ತಸುದಿನಮಿಂ | ತನುನಯದಿಂಬಿಬ್ಬಭಾಸ್ಕರಂ
ಸುಖಮಿರೆಕಂ || ಡನವದ್ಯನಿರವನಾಪುರ | ಜನಮೆಲ್ಲಂನೆರೆಕನಲ್ದುಗುಜುಗು
ಜಿಸುತ್ತಂ|| .... ||೭೪||

ಕಂ|| ಪಲಪಂದದೆಸಿಂದಿಸುತಿರೆ | ಜಲರುಹರಿಪುಮೌಳಿಭಕ್ತನಾಗೊ

ಬ್ಬಾದೊ || ಳ್ನಲವೇರಿಪಿರಿಯಭಕ್ತನ | ನಿಲಯುದಪರ್ವಕ್ಕೆತಳರ್ದನತಿ
ಸಂಭ್ರಮದಿಂ || .... ||೭೫||

ಮ|| ವೃ|| ಚರಲಿಂಗಶ್ರೇಣಿಯಂಕಂಡೆರಗಿ ಚರಣದೊಳ್ಮೀರಿದಾನಂದ
ದಿಂಭ| ಕ್ತಿರಸಂಮ್ಮೈದುಂಬಿ ತುಳ್ಕಿತ್ತೆನಿಸೆ ಸುಖಜಲಂನೇತ್ರದೊಳ್ತತ್ಪ್ರಸಾ
ದೋ|| ತ್ಕರಮುಂಕ್ಕೈಕೊಂಡು ತೀವುತ್ತೆಸೆವ ಶಕಟದೋಳ್ಮಂದ್ಮೆಮಾಹೇಶ್ವರ
ರ್ಬ್ಬಿ| ತ್ತರದಿಂದಂಪಾಡುತಾಡುತ್ತೆಸೆಯೆಹರಹರಧ್ಯಾನಮುಂಬೀರುತಾಗಳ್||

ಕಂ|| ಮಿಳಿರುತ್ತಿರೆ ಪಳಯಿಗೆಗ| ಳ್ತೊಳಗುತ್ತಿರೆಮೋಲಿಸತ್ತಿಗೆಗಳುಂ
ಮತ್ತಂ || ಕಳತೂರ್ಯತ್ರಯರವಮು | ಗ್ಗಳಿಸುತ್ತಿರೆ ಬಿಡದೆಘೋವುಘೋಯೆನು
ತೊಲವಿಂ || .... ||೭೭||

ಕಂ|| ರಥಮುಂತನ್ನಯಸುಮನೋ | ರಥಮುಂತರ್ಪಂತೆತರುತಮಿರೆ
ಪುರದೊಳ್ತ || ತ್ಪಥಮುಂತಡೆದಿದಿರೊಳ್ತ | ತ್ಪ್ರಥುವಾಗ್ಬಳವಿಪ್ರರಣ್ಮೆನಿಂ
ದಿಂತೆಂದರ್ || .... ||೭೮||

ಕಂ|| ಪುಗದಿರ್ಪುಗದಿರ್ನಿಲ್ನಿಲ್| ನಗರಮುನಿದನೇನಿದದ್ಭುತಂಪೇಳ್ವೆ
ಳ್ಕಿಂ || ನುಗೆಸಡಗರಮುಂನೀಕಳ್ದಪೆ | ಮಿಗೆನೀಂಕಡುಗೊರ್ತಧೂರ್ತಸಖ
ಸಂಕುಲದೊಳ್ || .... ||೭೯||

ಕಂ|| ಪಳಯಿಗೆಯೇನಿದುಕೆಲವಲ | ದೊಳಿಕ್ಕೈವಾರಿಪವಿಡಾಯುಮೇ
ನಿದು ಮೇಲು || ಜ್ವಳಿಪಾತಪತ್ರಮೇನಿದು | ಕಳಕಳಮೇನಿದು ಪೊದಳ್ದತೂ
ರ್ಯತ್ರಯದ || .... ||೮೦||

ಕಂ|| ಮದುವೆಯುಪೇರೊಸಗೆಯೊಪೆಂ | ಪೊದವಿದಹರಭಕ್ತನಳಿದ
ನೊಬಲ್ವಗೆಯುಂ || ಸದೆದತಿಶೌರ್ಯಮೊ ತ | ಳ್ವದೆಚಾಮರನಂತೆಶಿವನಪುರ
ಕ್ಕೈಯ್ದುವೆಯೋ || .... ||೮೧||

ಕಂ|| ಅಲಸದೆಶೂದ್ರಾಂತ್ಯಜರೆಂ |ಜಲನುಂಡದರೊಳ್ಮಳುಂಗಿದನಿತ್ಯೆ
ದದೆಗ||ಲ್ಗಲನೀಪಾರ್ವರಪೊಳಲಂ|ಪೊಲೆಗಲಸಲ್ತರ್ಪ್ಪಿಶಕಟದೊಳ್ಸಡಗರದಿಂ ||

ಕಂ|| ನೆಲನಾಳ್ವಭೂಪನೆರ್ದೆಯೊ | ಳ್ಕೊಲೆಗೆಂಡೆಯೊ ಬಳ್ಕದಳ್ಕ
ದೋಸರಿಸದೆ ದು || ಷ್ಕುಲರೆಂಜಲನೀಸದ್ವಿಜ | ನಿಲಯುಂಗಳಮುಂದೆತರ್ಪೆ
ಯೆಂನದೊಬಿಂಕಂ || .... ||೮೩||

ಕಂ|| ಮಾನಂಗೆಡದೆಮ್ಮಿಂದಂ || ನೀನತಿಶಯುಬುದ್ಧಿಶಾಲಿಯಾದೊ
ಡೆ ತೊಲಗೆಂ || ದಾನೆರೆದಪಾರ್ವರಿನೆಕೇ | ಳ್ದಾನುತಮುಹಿಮಾಬ್ಧಿರೋಷಭೀ
ಷಣನಾದಂ || .... ||೮೪||

ಚ॥ ವೃ॥ ಎಲೆಎಲೆಪಾಪಕರ್ಮರಿರ ದುರ್ಮದದುಷ್ಟರಿ ರಾದುರಂತದು। ರ್ಮ
ಲಮಲಿನಾತ್ಮಧೂರ್ತರಿರ ಶಾರಭವಭಕ್ತಿಯುಬಟ್ಟೆದಪ್ಪಿಕೋ ॥ ಟಲಿ ಗೊಳ
ಗಾದಬೂಳರಿರ ಮೇಲರಿದಾದಡೆಕೊರ್ಬಿಸುರ್ಬಿಸಿಂ । ದುಲಿದಪಿರೇಕೆ ಜಾ
ವಳರಿ ಭರ್ಗನಭಕ್ತರಿಳಾತಳಾಗ್ರದೊಳ್ ॥ .... ॥೮೫॥

ಕಂ॥ ಕುಲಹೀನರೆಂಬಿರಗ್ಗದ । ಮಲಹರಚರಣಾಬ್ಜಭಕ್ತರಂಸಿವಿಪ್ರಾ
ಗ್ರ॥ ಳ್ಕುಲಹೀನೆಯಾದಗೋಪಿಯ।ಮಲಮುಂಘಣೆಯಲ್ಲಿತಾಳ್ವಿರಬ್ಜರಿಯಲ್ತೆ॥

ಕಂ॥ ಗುರುಕರಜಾತರೊಳಿಂದುಂ । ಹರಭಕ್ತರೊಳಿಲ್ಲಪೂರ್ವಕುಲಜಾ
ತಿಭವ ॥ ದ್ಗುರುವಾದಬಾದರಾಯಣ । ವರಮುನಿಯಕುಲೀನನೆಂದೊಡೇ
ವೇಳ್ದಪಿರೊ ॥ ——— ॥೮೭॥

ಕಂ ॥ ಅಪಿಪಾಯತ್ಥಂಡಾಲೋ । ಲ್ಲಪಿತಶ್ರುತಿಶಿವನಭಕ್ತರೊಳ್ಕು
ಲಮಿಲ್ಲೆಂ ॥ ದುಪದೇಶಿಪುದಿದನರಿದುಂ । ಚಪಳತೆಯಿಂಬಾಯ್ಗೆಬಂದ
ವೋಲ್ಗಳಪುವುದೇಂ ॥ .... ॥೮೮॥

ಕಂ॥ ಗುರುಜನಹರಪ್ರಸಾದಮ । ನಿರದೆಂಜಲೆನುತ್ತೆತೆಗಳ್ವನರನಾ
ವನನಂ॥ನರಕಾಗ್ನಿಯೊಳಜಕಲ್ಪಂ।ಬರೆಗಂಬೇವಂದಲಿಂಬುದಾಗಮವಚನಂ॥

ಕಂ॥ ಹರಭಕ್ತಿಯುಳ್ಳವರ್ಗಿದು । ಪರಮಾಮೃತಮಲ್ಲದರ್ಗೆಲಯುವ
ಹ್ನಿಯಿದಂ ॥ ಕರಮಿಂತೆಗಳ್ವಬಡಪಾ । ರ್ವರೆನಿಂಮುಂಕೊಲ್ವುದೆಮಗಿದೇಂ
ಪೌರುಷಮೆ ॥ .... ॥೯೦॥

ಕಂ॥ ತುಂಗಪ್ರಸಾದದೀಪಪ । ತಂಗತ್ವಮನಾಳದತ್ತ ತೊಲಗುಮೆ
ನುತ್ತಂ ॥ ಜಂಗಮಲಿಂಗಪದಾಂಬುಜ । ಭೃಂಗಂಘನಬಿಬ್ಬಭಾಸ್ಕರಂನು
ಡಿಯಲೊಡಂ ॥ .... ॥೯೧॥

ವ॥ ಕೇಳ್ದಾಪಾರ್ಶ್ವರಂಕಂಡು ಕನಲ್ದು ಮಾಮುಸಕಂಮುಸಗಿ ॥

ಚಂ॥ ವೃ॥ ಬಿಡುಬಿಡದೇನನೆಂದಪೆವಿಡಾಯುದಭೀತಿಯುನಿಂತುಬೀರಿ
ನಿಂ । ನೊಡೆಯರೆನಿಪ್ಪಕೀಳ್ಗೊರವರೆಂಜಲಿದೇಂಘಣಿಯೋಮದೇಭವೋ ॥
ಸುಡುಗರನೋಗಜಾರಿಯೊವೃಗಾರಿಯೊ ಕಾಲನೊಕಾಲಕೂಟವೋ । ಸಿಡಿ
ಲೊಪ್ಸ್ಲಗೇಂಪ್ರವೈರಿಬೊಡವಾನಲನೊಲಯಕಾಲವಹ್ನಿಯೋ॥ ॥೯೨॥

ವ॥ ಎಂದು ಗಳಪುತಂ ತಮ್ಮ ದಿರ್ವರಿವ ನಿಶ್ಚಯಭಕ್ತರಾಟೋಪಮಂ
ಕಂಡು ಕನಲ್ದು ಕೈಗಡಗಗಳುಮಂ ಪರ್ಚಿಪಿರಸೊಂದೆಡೆಯಲ್ಲಿಳಪಿ ಜನ್ನಿವಾ
ರಮನೇರಗಟ್ಟಿ ದೋವತಿಯಿಂ ಮಲ್ಲಗಾಸೆಯನುಟ್ಟು ಯಷ್ಟಿಗಳಂಕೈಕೊಂ
ಡು ಕದನಕ್ಕೆಕಡಂಗಿನಿಂದು.

ಚಂ || ವೃ|| ಪಿಡಿಪಿಡಿಯುಳ್ತನಚ್ಯುತಗದಾಧರಜೊತ್ತಗೆಗೀಳ್ತುಪ್ರೋರಿ
ಯುಂ | ಬಿಡುಬಿಡುದುಷ್ಟಕೇಶವಕೊರಳ್ಗೊಗನುಂಕಡಿಯುಪ್ಪಿಗೊಂಡುನೀಂ||
ಬಡಿಬಡಿಬಂಡಿಯುಂಕರಿಯುರಾಘವನಾಥನನುಂದೆಬರ್ಪರಂ | ತಡೆತಡೆಕೂ
ಚಿಗಾಮಿಳಿರ್ವಕೇತನಮುಂಪರಿದಿಕ್ಕುಬೇಗದಿಂ ||೯೩||

· ಕಂ|| ಎಲೆದಾನೋದರ ಪೊಡೆಪೊಡೆ | ಕಲಶಮನೆಲೆಜನ್ನಜಂತ್ರಮಂ
ಪರಿಪರಿ || ತ್ಕಲಕಟ್ಟದತೋರಣಮಂ | ತೊಲಗದೆಕೀಳ್ತಿಡುಮುರಾರಿಮು
ರಿಸತ್ತಿಗೆಯುಂ .... ||೯೪||

ವ|| ಎಂದು ಗಜರಿಗರ್ಜಿಸಿ ಮೇಲ್ವರಿವ ದುಷ್ಟದ್ವಿಜರಂಕಂಡು ಬಿಬ್ಬ
ಭಾಸ್ಕರಂನಕ್ಕು ನಿಜಕರಂಗೆಳಿಂಪಿದ್ಧಪ್ರಸಾದಮಂ ಮೊಗೆದೆತ್ತುತ್ತ ವಿಪ್ರೊ
ಳಲಂದಹಿಪುದೆಂದು ಘಳಿಲನೆಕೆದರಲೊಡನೆ.

ಚಂ || ವೃ || ಗುಳುಗುಳಿಸುತ್ತೆಚಂಡರುಚಿರೋಚಿಯುನಾಳ್ದುಪೊಡ
ಳ್ದುಪೊಣ್ಮೆಬಾಂ | ದಳಕೊಗೆದುರ್ಬಿಪರ್ಬಿಕಿಡಿಸೂಸೆಚಿಳಿಚ್ಛಿಟಲೆಂದುಮಿಾರಿ
ಪ || ಜ್ವಳಿಪುರಿಮಾಲೆದಳ್ಳಿಸೆಪುರತ್ರಯಮಂಮಿಗೆಸುತ್ತಿದುಗ್ರನು | ಜ್ವಳನ
ಯನಾಗ್ನಿಯಂತೆಸೆದುಮುತ್ತಿದುದಾಪೊಳಲಂಕ್ಷಣಾರ್ಧದೊಳ್ ||೯೫||

ವ|| ಅಂತುಮುತ್ತಿಮುಂಬರಿದು ಕಾಲಾಗ್ನಿಯಂತೆ ಕವಿತರ್ಪತದಗ್ನಿ
ಯಂಕಂಡು

ಚಂ|| ವೃ || ಎಲೆಎಲೆಕಿಚ್ಚುಕಿಚ್ಚುಪರಿಯಿಟ್ಟುದುಸುಟ್ಟುದುಕೆಟ್ಟೆವ
ಕ್ಕಟಾ | ನಿಲಯಮನುರ್ಬಿಪರ್ಬಿದುದಕಾಲಲಯಂಮುಸಗಿತ್ತುಮಿಳ್ತುಬಂ ||
ದಲೆದುದುಪೋಗುಪೋಗುಪರಿದೋಡಿರದೋಡುಜಲಾಶಯಂಗಳ | ತ್ತಲೆತೆ
ಗೆಮಕ್ಕಳಂಜವದಿನೆಂಬರವಂಪರಿದಾಯ್ತುಪಾರ್ವರೊಳ್ ||೯೬||

ಕಂ|| ಪ್ರಮಥರ್ಜಗಮುಂಕಲ್ಪಾಂ | ತಮುಹಾಶಿಖಿಯುಳುರೆನೋಡಿನ
ಲಿವಪ್ರೊಲಾಜಂ || ಗಮುಸುಪ್ರಸಾದಶಿಖಿದು | ರ್ದಮುರೂರಂಮುತ್ತೆಭಕ್ತ
ರುತ್ಸವಮಾಂತರ್ .... ||೯೭||

ವ|| ಆಗಳ್.

ಕಂ|| ಶ್ರುತಿಯೆಪುರಾಣೌಘಮೆಭಾ | ರತಮೇರವಿಯೇವಿಧಾತ್ರನೇ
ವಿಷ್ಣುವೆಭಾ|| ರತಿಯೆಶತಮುಖನೆಮುಖಸಂ | ತತಿಯೇಮಾಣಿಪುದುಸುಡುವ
ಶಿಖಿಯುಪಟಳಮಂ .... ||೯೮||

ವ|| ಎಂದು ಪುಯ್ಯಲ್ಚಿ ಮೊರೆಯಿಟ್ಟು ಮರುಗು ತ್ತಂಪರಿವ ಪುರೋ
ಹಿತರುಂ ನಿಚ್ಚಮುಂನಿನ್ನನಾಶ್ರೈಸಿದೆಂಮಂ ದಹಿಸುತ್ತ ಮಾಶ್ರಯಾಶನಾ

ಮುಮಂ ಸಾರ್ಥಕಂಮಾಡದಿರೆಂದನಲಂಗೆ ಬಾಯ್ವಿಟ್ಟುಬಿಗೆರುತ್ತೋರ್ಪುವ ಸೋಮಯಾಜಿಗಳುಂ, ಪೊತ್ತಗೆಯನಿರುಂಕಿಸುಕ್ಕಳಂ ಪೆಗಲೊಳ್ತಾಳ್ದು ಪೆಂಡಿಗೊರ್ಡಿ ಸಡುಗುತ್ತಂಪಾರುವಪಂಡಿತರುಂ, ಬೊಂಮನೆಂಮನಗ್ನಿರೂಪಿಂ ಕೊಲಲೇಳ್ತಂದುದೇಗೆಯ್ವೆನೆಂದಟ್ಟಸುಡುವಗ್ನಿಗಗಿದು ಪುಡುವೊಳಾಳ್ವ ವೇದಾಂತಿಗಳುಂ, ಕಟ್ಟದಿರೊಳ್ಪಿಂದಕ್ಷತೆಯನ ಭಿಮಂತ್ರಿಸುತಿಟ್ಟು ಪಾರಣಜಪಂಗೆಯ್ವಾಗಳುಟ್ಟು ದುಮುಂಸುಟ್ಟುಶಿಖಾಶ್ಮಶ್ರುಗಳನಗ್ನಿ ಯುರುಪೆನಗ್ನಾಂಗರಾಗಿ ಜೈನದೀಕ್ಷೆವೆತ್ತರಂತೆಬಿಗುರ್ತುದೆಸೆದೆಸೆಗೆ ಪಾಯ್ವಮಂತ್ರವಾದಿಗಳುಂ, ಪಾಲ್ದುಪ್ಪಮುಂ ಪಾತ್ರೆಯೊಳ್ತೀವಿ ತಂಮುಂಗದಾಹುತಿಗಾಪೋತನಮನೆರೆವಂತೆರೆದು ನಂದಿಪಲ್ನೆರೆಖುದುರಿಯುಕೋೞ್ಗೈರಿಸಲಾರದೆ ಸೈವರಿವ ಶಾಸ್ತ್ರವೇದಿಗಳುಂ, ಗರಿಗರಿಲನಾಲಯುಮುರಿಯೆನೆರಪಿದಭಕ್ಷ್ಯಭೋಜ್ಯಾಜ್ಯಮೆಲ್ಲಮುಸಕಳಿದುದೆಂದೊಡಲುರಿಗೊಂಡು ಬಿಕ್ಕಿಬಿರಿದಳು ತಂತಳರ್ವತರುಣದ್ವಿಜರುಮಲ್ಲದವೊಲ್ತಿನೊಳ್ಬವರಕ್ಕೆ ಪೊರಮಟ್ಟಫಲಂ ಸಿದ್ಧಿಸಿದುದೆಂದು ಶಿಖಿಯುಶಕೆಯಿಂ ಕಂದಿಕುಂದಿನೊರೆಯಿಡುತ್ತಂ ಗಳಿಗೆವಟ್ಟಲೊಡೆಯೆ ಘಳಿಲನೆಕೆಡೆವಜೋಯಿಸರುಂ, ಶಿರೋವೇಷ್ಟಿಯುನುರುವುತ್ತೆ ಭೋಂಕನೆಕಳೆದು ಬಿಸುಟುತಲ್ಲಣಿಸಿ ತಲೆವಡವುತ್ತೇಳ್ತಂದು ಶಿವಾಗಾರದಪಿಂದಣ ಜಲಕುಂಡದೊಳ್ಬಡಲಿಡು ಉಪಾಧ್ಯಾಯರುಮಿಂತಿಂಡೆಲ್ಲರುಮಾಗೊಬ್ಬೊರೋೞ್ ಶಿವದೂಷಕರ್ಬ್ಬಂನೆಂಬಟ್ಟುಗೋಳುಂಡೆ ಗೊಂಡಳ್ಕಿಬಳ್ಕಿ ಬಿಬ್ಬಭಾಸ್ಕರದೇವನಂಘ್ರಿಗಳೆಡೆಗೆ ಪರಿತಂದು ಪಲ್ಗಿರಿದು ಶರಣ್ಬೊಕ್ಕು ಸಾಷ್ಟಾಂಗಮೆರಗಿ.

ಚಂ|| ವೃ|| ಶರಣಗಣಾಗ್ರಗಣ್ಯಕರುಣಾಮೃತಪೂರ್ಣ ಕಟಾಕ್ಷಕಾಲಸ | ಹ್ಮರನವತಾರನಿಂಮಯುಮಹತ್ವಮಿದೇಂಜಡಬುದ್ಧಿಗಳ್ಗೆಗೋ || ಚರಿಕುಮೆ ಮುನ್ನಮಾಮರಿಯದಂತೆಸಗಿರ್ದಪರಾಧಮೆಲ್ಲಮುಂ | ವರಗುಣಶಾಲಿ ಸೈರಿವುದು ನಂದಿಪುದಿಂದೆಮಗಾದತಾಪಮುಂ ||೯೯||

ಕಂ|| ಪರಮಪ್ರಸಾದಶಿಖಿ ಸು | ಟ್ಟುರುಪಿದುದೆಮ್ಮಗ್ರಹಾರಮುಂದ್ವಿಜರೆಲ್ಲಿಂ || ಕರಮೆದವಾಗ್ನಿಗೆಸಿಲ್ಕಿದ | ತರುಣದ್ವಿಜವೃಂದದಂತೆಕರಿಮುರಿವೋದರ್ .... ||೧೦೦||

ಉ|| ವೃ || ಬೆಂದುದುದೇವಮಾಧವನಪೆರ್ಮನೆ ರಾಘವನಾಲಯಾಳಿಗೋ |ವಿಂದನಗೇಹಮುಚ್ಯುತನಸದ್ಮಮನಂತನಬೀಡುದೇವಕೀ || ನಂದನನಾಗರಂ ಪರಿಪುರೋಚಿತನಾಶ್ರಯು ಮರ್ಕಭಟ್ಟನಾ | ಮುಂದಿರಮಾದಿವಿತ್ತಲನಚಾರಿಗೆ ಕೂಚಿಯುಸನ್ನಿಕೇತನಂ ||೧೦೧||

ವ|| ಎಂದುಗರಳದುರಿಯಿಂನೊಂದ ಸುರರಭವನಿದಿರೋಳ್ಪೆನಂಬ ಡುವಂತನಲನುರಿಯಿಂ ನೊಂದಭೂಸುರರ್ಘನಮಹಿಮನಿ ದಿರೊಳ್ಬಾಯ್ಬಿಟ್ಟು ದೈನ್ಯಂಬಟ್ಟು ಕಾರುಣ್ಯಮಂಪಾರ್ದುಸಾರ್ದು.

ಕಂ|| ಅಳಿಪರಭಿಮಾನಹೀನ | ರ್ಖಲರೆನಿಪೆಂಮಲ್ಲಿ ಗುಣಮನರಸದೆ ನಿಂಮು || ಜ್ವಲಗುಣಮುಮೆರೆದೆಮ್ಮಂ | ವಿಳಾಸದಿಂ ಪೊರೆಯುದೆಂದುಮು ಗುಳೆರಗಲೊಡಂ ||೧೦೨||

ಚಂ|| ವೃ|| ಅಭಯಮನಿತ್ತು ವಿಪ್ರತತಿಗಾಕ್ಷಣದೊಳ್ಕರಕಂಜಯುಗ್ಮ ಮಂ | ಶುಭಮತಿನೀಡಿತಾಂಬರಿಸಿಪಾವಕರೂಪಿನಸುಪ್ರಸಾದಮಂ || ವಿಭವದೆತಾಳ್ದು ತತ್ಪುರಮನೆಂದಿನ ವೊಲ್ನೆಗಳುತ್ತೆ ಶಂಭುಸ | ನ್ನಿಭನಳಿನರ್ಗೆಕೊಟ್ಟಸುವನಾದ್ವಿಜರಂಪೊರೆದಂಗುಣಾಧಿಕಂ ||

ಕ|| ಮದದಿಂದಿದಿರ್ಚೆಮುನ್ನಂ | ಸದೆದಂಮುದಮಳಿದುತನ್ನಮರೆವು ಗೆಕಾದಂ||ವಿದಿತಸ್ವತಂತ್ರನಾದ್ವಿಜ|ಕದಂಬಮಂನೃಪತಿಬಿಬ್ಬಭಾಸ್ಕರದೇವಂ|

ಕಂ|| ಹರಭಕ್ತಿಯಿಲ್ಲದೊಡೆಭೂ | ಸುರನಧಮಂ ಶ್ವಪಚನಿಂಶ್ವಪಾಕಂಸಲೆಶಂ || ಕರಭಕ್ತಿಯುಳ್ಳೊಡಾತನೆ | ಪಿರಿಯಂದ್ವಿಜರ್ಗಂದೆಸತ್ಯಮಿದು ಮನುಜೇಂದ್ರ .... ||೧೦೫||

ಕಂ|| ಹರಭಕ್ತಿಗೆಟ್ಟದಕ್ಷನ | ಶಿರಮಂ ತರಿದಿತ್ತನಲ್ತೆ ಕುರಿದಲೆಯಂ ಮಾ || ದರಚನ್ನಯ ನೊಡನುಂಡಂ | ಪರಮೇಶಂ ನೃಪತಿಕೇಳ್ದು ನೀನರಿಯದುದೇ ||೧೦೬||

ಕಂ|| ಗುರುದೇವತೆನಿಗಮಾಗಮ | ವರಮಂತ್ರಂಮಿಥ್ಯೆಯೆಂದುಪುಸಿಯುದರಿಂಪಾ || ರ್ವರೆಪೊಲೆಯರಲ್ತೆಧಾತ್ರೀ | ಪರವುಸಿವನೆಪೊಲೆಯನೆಂಬ ವಚನದಿನಿಳೆಯೊಳ್ ||೧೦೭||

ಕಂ|| ಶಿವಭಕ್ತನಾದಪೊಲೆಯಂ | ಗವನೀಸುರರೆಣೆಯೆಭಕ್ತಿರಹಿತರ್ಕೇಳ್ಬೊ || ಧವಮತ್ತಂದೂಡಯನೆಂ | ಬವಿಕಲವ್ಯಡಭಕ್ತನಿರ್ಪನೀಧಾರುಣಿಯೊಳ್ .... ||೧೦೮||

ಕಂ|| ಅಮಾದರರದೂಡ್ಡೆಯನ | ಸೀಮಾತೀತಪ್ರಭಾವಮೆಂದೆನೆ ಪೇಳ್ವೆಂ || ಭೂಮಿಸುರನೋರ್ವ್ವಂ ಕು | ಷ್ಠಾಮಯಮಯಕಾಯನಿರ್ದುಳೊಳ್ರ್ಬಿದತಮುದೊಳ್ ||೧೦೯||

ಮ|| ಸ್ರ|| ವೃ|| ಅರಸುತ್ತಂಘೇನುವಂಭಕ್ತನಗೃಹನಿಕಟಸ್ಥಾನಕೇ

ಳ್ತಂದುಮುಂತೆ । ಳ್ಬಿರದಾತಂಮಿಂದನೀರ್ದುಂಬಿದಕುಳಿಯೊಳೆ ಕಾಲಿಟ್ಟೊಡಾಜಾನುಪಂಕಂ ॥ ನೆರೆತೀವಿತ್ತಂತದಂತಾಂತೊಳೆಮುಜವದಿನಾತ್ಮಾಲಯಕ್ಕೈದುತನ್ನೇ । ಸರಬಿಂಬಂಮೂಡುವಂದೀಕ್ಷಿಸೆ ಪದಮೆಸೆದತ್ತುಜ್ವಳಸ್ವರ್ಣತೇಜಂ ॥೧೧೦॥

ಮ॥ಅದನೊಲ್ದೀಕ್ಷಿಸಿವಿಸ್ಮಯುಂಬಡೆದು ವಿಪ್ರಂಬಂದು ತದ್ವಾರಿತೀ। ವಿದತತ್ಕೂಪದೊಳಾಳ್ದು ಕುಷ್ಠರುಜೆಯುಂ ಪೋಗಾಡಿದಿವ್ಯಾಂಗನಾ ॥ ಗಿದಯೂವಾರಿಧಿದೂಡದೇವನಡಿಯೊಳ್ಮೈಯಿಕ್ಕಿಕೊಂಡಾಡಿ ತ । ಳ್ವದೆ ತತ್ಸಾರಕೃಪಾರಸಂಬಡೆದುಗೇಹಂಬೊಕ್ಕನಾನಂದದಿಂ ॥೧೧೮॥

ಕಂ॥ ಅದುದೂಡದೇವಮಜ್ಜನ । ದುದಕಂಜಳನಲ್ತುಸಿದ್ಧರಸನುಭಿನವನು ॥ ಪ್ಪುದು ತಪ್ಪದುಮೇಣಲ್ಲದೊ । ಡೊದವಿಕುಮೆವಿವರ್ಣತನುಸುವರ್ಣತೆಯನಣಂ ॥ .... ॥೧೧೨॥

ಕಂ॥ ಶಿವದಾಸಭೀಮುಯುಂಭೂ । ದಿವಿಜರಕುಷ್ಠಮನೆಪರಿದನೆಂಬರ್ಮುನ್ನಂ ॥ ಜವದಿಂದೂಡಯುಸೀವಿ । ಪ್ರವರನಕುಷ್ಠಮನೆಪರಿಪನೀಗಳ್ಧರಿಯೊಳ್ ॥ .... ॥೧೧೩॥

ವ ॥ ಎಂದಿಂತು ಸರ್ವರುಂ ಕೀರ್ತಿಸುತ್ತಮಿರ್ಪಿನಮಲ್ಲಿ ತದ್ವಾರ್ತೆಯುಂ ಕೇಳ್ದಾದೇಶದೊಳಿರ್ದೇಳ್ವರು ಕುಷ್ಠಗಳಾದ ಪಾರ್ವರೇಳ್ತಂದು ತನ್ಮಜ್ಜನ ಜಲಪೂರ್ಣಕುಂಡದೊಳ್ಮುಳುಂಗಿ ॥

ಕಂ॥ ಪರಿಶುದ್ಧಕಾಯರಾಗು । ತ್ತಿರದಾಗಳ್ದೂಡದೇವನಂಘ್ರಿಗೆಪ್ರೊಡಮ ॥ ಟ್ಟಿರುತರತತ್ಕರುಣಾಮೃತ । ಶರಧಿಯೊಳೋಲಾಡಿಬಾಳ್ದರಿಳೆಯರಿವಿಸೆಗಂ ॥ .... ॥೧೧೪॥

ವ॥ ಮತ್ತಂ ॥

ಕಂ॥ ಪುರಹರವಿದ್ವೇಷಿದ್ವಿಜ । ಶಿರೋಬ್ಜಕುಂಜರನೆನಿಪ್ಪಬಿರುದಾಂತೆಸೆವಂ ॥ ವರಡೋಹರಕಕ್ಕೆಯ್ಯಂ । ಚರಗುರುಶಿವಲಿಂಗಭಕ್ತನೀವಸುಮತಿಯೊಳ್ ॥ .... ॥೧೧೫॥

ವ ॥ ಆಘನಮಹಿಮನನಿಪನೊಲ್ವಗ್ರಹಾರದೊಳೋರ್ವಂ ಪುರಾಣಭಟ್ಟನೆಂಬ ಪಾರ್ವಂ ದುಷ್ಟದ್ವಿಜರ್ಗೆ ಪುರಾಣಮನುಸುರ್ವುದಕೇಳುತ್ತಮಿರ್ಪಿನಮಾಪುರಾಣಭಟ್ಟಂ ಸಡಗರಂಮಿಕ್ಕು ॥

ಕಂ॥ ಮೃಡನಬ್ಜಭವನಶಿರಮಂ । ಪಿಡಿಯುತೆತಿರಿದುಂಡನೆಂಬನಘ

ಟಂದೀಶಂ || ತಡೆಯದೆವಿಷ್ವಕ್ಸೇನನ | ಜಡಿದಿರಿದಂತಿಸುಳದಿಂದಮೆಂಬು
ದನುಸಿರಂ ||೧೧೬||

ಚಂ|| ವೃ|| ನರಹರಿಯಾಹಿರಣ್ಯಕಸುರಾರಿಯನಿಕ್ಕಿದನಂದುಪೇಳ್ವನಾ
ನರಹರಿಯಂಗೆಮಂ ಶರಭರೂಪಿನರುದ್ರನಡರ್ತುಸೀಳ್ದನೆಂ || ದಿರದುಸಿರಂತ್ರಿ
ವಿಕ್ರಮನಕಾಲ್ಮಭಮುಂಟದುದೆಂಬನಲ್ಲದೀ | ಶ್ವರನವನಸ್ಥಿಯಂಮುರಿದುತಾ
ಳ್ದನೆನುತ್ತೊರೆಯಂ ದ್ವಿಜಾಧಮಂ ||೧೧೭||

ಮ || ಹರಿಮತ್ಸ್ಯಾಕೃತಿದಾಳ್ದು ಸೋಮಕನಕೊಂದಾಮ್ನಾಯಮುಂ
ತಂದನೆಂ | ದೊರೆವಂವಾಲಮನೊತ್ತಿಸುತ್ತಿದನದಂಕೊಂಡುತ್ತಮಾಂಗಕ್ಕೆ
ಶಂ || ಕರನೆನ್ನಂಕಿಟರೂಪಿನಿಂನೆಗಪಿದಂ ದೈತ್ಯಾರಿತಾನೆಂಬನೀ | ಧರೆಯುಂ
ತತ್ಕಿಟಿಯಂಗುಹಂ ಸದೆದುದಂಪೇಳಂ ಪುರಾಣಾರ್ಥಮಂ ||೧೧೮||

ಮಲ್ಲಿಕಾಮಾಲಾವೃತ್ತ||ದಕ್ಷನಧ್ವರದಗ್ರಪೂಜೆಯನಾಳ್ದನಚ್ಯುತನೆಂಬ
ನಾ | ತ್ಯಕ್ಷನಾಹೆರಿಮಸ್ತಕಂಗಡಿದಂದಮುಂ ಬಿಡದೋದನ || ಬ್ಯಾಜಕ್ಷನೇ
ಜಗದಾದಿಶಕ್ತಿಯೆನುತ್ತೆಪೇಳ್ವನವಂಗೆ ದಿ | ವ್ಯೋಕ್ಷರಾಡ್ಧ್ವಜನಾಳ್ದನೆಂದು
ಸಿರಂಮೃಷಾಪರಭಾಷಣಂ ||

ಶಾ|| ವೃ || ಸರ್ವಂವಿಷ್ಣುಮಯಂದಲೆಂದುನುಡಿವಂ ಕಲ್ಪಾಂತದೊ
ಳ್ವಿಷ್ಣುವಂ | ಶರ್ವಂಮರ್ದಿಪನೆಂಬುದಂ ನುಡಿಯನಾವ್ಯಾಸಂ ಮಹಾಕಾ
ಶಿಯೊಳ್ || ಸರ್ವನೋಡೆಮುಕುಂದನೇಪರಮೆನುತ್ತಂದೆತ್ತಿದಂತೋಳ
ನೆಂ | ದುರ್ವೃತ್ತಂಬನದಂಕರಂಮುರಿದನಾನಂದೀಶನೆಂಬರ್ಥಮಂ ||೧೨೦||

ಕಂ|| ಒರೆಯಂ ಹರಿಯಂತವೆಸಂ | ಹರಿಸಿದ ಕತದಿಂದೆ ಪುರಹರಂ
ಸ್ಮರಹರನ || ಧ್ವರಹರನೆಂಬಂತಿರೆ ಹರಿ | ಹರನೆನಿಸುಗುಮೆಂಬ ನೈಗಮಾರ್ಥ
ಮನುಸಿರಂ ||೧೨೧||

ವ|| ಇಂತೆಂದೊರೆವದುರ್ದಾಂತನ ದುರ್ಭಾಷಣಮುಂಕೇಳ್ದು ಕಕ್ಕೈ
ಯಂ ಕಾಲಾಗ್ನಿರುದ್ರನಂತೆ ಕಾಯ್ಪನೊಳಕೊಂಡು.

ಚಂ|| ವೃ||ಪುಸಿಕನಿವಂಪುರಾಣಸಹಜಾರ್ಥಮನೆನ್ನದೆ ವಂಚಿಸುತ್ತೆಪೆ|
ರ್ಬುಸಿಯನೆ ಪೇಳ್ದಪಂಶಿವನಪೇರ್ಮೆಗೆ ಸೈರಿಸಲೊಲ್ಲದಾತನಂ || ಮಸೆದಲ
ಗಿಂಕರುತ್ತಿರಿವುದಾತನಪೊತ್ತಗೆಗೀಳ್ದು ಸುಟ್ಟದಂ| ಪೊಸೆಪುದುವೀರಭಕ್ತಾವಿ
ಹಿತಂ ಗಡಧಾತ್ರಿಯೊಳೀದುರಾತ್ಮಕನಂ ||೧೨೨||

ಕಂ॥ ತರಿಸಂದುಕೊಲ್ವೆನೆಸುತಂ । ನೆರೆಗುಡುಗುಡಿಸುತ್ತೆ ಸಬಳದಿಂ
ದವನೆದೆಯುಂ ॥ ಮರುಮೊನೆಪಾಯ್ತು ರೆಮುಳಿಸಿಂ । ದಿರಿದಂ ತಲೆದರಿದುಕೆಡ
ಪಿದಂದೂಷಕನಂ ॥೧೨೩॥

ವ॥ ಆಗಳೆಲ್ಲರುಂ ಪಾರ್ವನ ನಿರಿಯುಲಕ್ಕುಮೆಯೆನೆಪಾರ್ವನಲ್ಲಿ ತ್ತಂ
ಪರಮಪಾತಕನಂತದಕ್ಕೆ ದೃಷ್ಟಾಂತಮಂನೋಡಿ ಮೆನೆ ನೆರೆದಖಿಳರುಂನೋ
ಳ್ಪಾಗಳ್.

ಕಂ॥ ಜುರುಜುರಿಸಕೀವುನೆತ್ತ । ಗೆರಗುತೆ ಝುಂಮೆಂದುಮೊರೆವ
ನೊಳವಿರೆಜವದಿಂ ॥ ನೆರೆವಿಲಿವಿಲಿಸುವಪುಳುಗ । ಳ್ಪೊರಗೊಳಗಾವೆಣದೊ
ಳಿಡಿದು ತೀವಿದುವೆತ್ತಂ ॥೧೨೪॥

ಮ॥ ಸ್ರ॥ ವೃ॥ ಇದನೆಲ್ಲರ್ಕೇಳ್ದು ವಿಪ್ರಾಭೂಸುರರರಿಯುರೆಧಾತ್ರೀಶ
ಮೇಣೆಂತುಗೆಯ್ದು । ಗ್ರದಪೆಂಪಂ ತಾಳ್ದಕಕ್ಕೈಯುನಸ್ಥಮುಕುಲೋದ್ಭೂತ
ನೆಂದಾಡಲೇಂತ ॥ ಕ್ಕದೆ ಪೇಳ್ಕೆನೆಂದುಸಂದಪ್ರತಿಮುಕರಣಚಾರಿತ್ರಮಂ
ಪೇಳುತಂ ಸಂ। ಮುದದಿಂದೊಪ್ಪಿರ್ದನಾಸ್ಥಾನದೊಳಿಕುಮತಭೂಭೃನ್ಮಹೇಂ
ದ್ರಂವೃಷೇಂದ್ರಂ ॥೧೨೫॥

ಕಂ॥ ಶ್ರೀಕಲ್ಲಿನಾಥಚರಿತಮ । ನಾಕರ್ಣಿಸಿಪೇಳ್ದಸುಜನರಿಳೆಯೊಳ
ಜಸ್ರಂ ॥ ಲೋಕೋತ್ತರಪೂರ್ಣಸುಖಾ । ನೀಕಮನಗಜಾಧಿನಾಥನೊಲ
ವಿಂಪಡೆವರ್ ॥೧೨೬॥

ಕಂ॥ ವರಬಿಬ್ಬಭಾಸ್ಕರಾರ್ಯನ । ಚರಿತಮನಾಕರ್ಣಿಪರ್ಗೆಪೇಳ್ವರ್ಗೆ
ಸುಧಾ ॥ ಕರಧರನೀವಂ ನಿಜಭಾ । ಸುರಸುಖಕರುಣಪ್ರಸಾದಸಿದ್ಧಿಯುನಿಳೆ
ಯೊಳ್ .... ॥೧೨೭॥

ಕಂ॥ ಘನತರಮಾದರದೂಡ್ವೈ । ಯುನಪರಮತಮುದವಿದಳನಡೋ
ಹರಕಕ್ಕೈ ॥ ಯುನಪುಣ್ಯಚರಿತಮಂಕೇ । ಳ್ದನಘರ್ಗಭಿಮತಸಮಸ್ತಸಂಪ
ದಮಕ್ಕುಂ ॥೧೨೮॥

ಲಲಿತಪದವೃತ್ತ ॥ ಧರ್ಮಗಿರಿಮಂದಿರೆಹವಿಮುಖವ ರಾರ್ಚಿತೆಯ
ಜುರ್ಮಿಳಿತಮಂತ್ರಮುಮೆಗೀಶ್ವಹಿತವಾಣೀ । ನಿರ್ಮಿತಜಗತ್ರಯೆಷಡೂರ್ಮಿ
ಗಣವರ್ಜಿತೆಸುಕರ್ಮಯುಮಿಮಂಡ್ಯೆಶಿವಧರ್ಮಹೃದಯಾಬ್ಜೇ॥ ಕೂರ್ಮನಿಭಪಾ
ದೆಯುಮುಧರ್ಮಮುದಮರ್ದಿನಿಸುಶರ್ಮಕರಸದೃಚಿಪಪುರ್ವೃಡಮನೋಜ್ಞೇ ।

ನಿರ್ಮ್ಮದೆನಿರಸ್ತತತದುರ್ಕ್ಮ ತೆಗಿರೀಂದ್ರಸುತೆಪೇರ್ಕೆ ಮಿಗೆಪಾಲಿಪುದುಶರ್ಮ್ಮದೆಭವಾನೀ ... ——— .... ॥೧೨೯॥

ಗದ್ಯ॥ ಇದು ವಿನಮದಖಿಳಸುರಾಸುರೇಂದ್ರ ಮಕುಟತಟಘಟಿತ ಮಣಿಗಣಾಗಣಿತರುಚಿನಿಚ ಯತರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗ ಭಸಿತ ಭಾಸುರಲಲಾಟ ಪಟ್ಟಸರಸಜನಮಾನಿ ತೋಭಯಕವಿತಾವಿಶಾರದಶ್ರೀ ಷಡಕ್ಷರದೇವಭಕ್ತಿವಿರಚಿತ ಶ್ರೀಮದ್ಬಸವರಾಜ ವಿಜಯಮಹಾ ಪುರಾಣದೊಳ್ ಕಲ್ಲಿನಾಥ ಬಿಬ್ಬಭಾಸ್ಕರಾದಿ ಕಥಾವಿವರಣಮಷ್ಟ ತ್ರಿಂಶದಾಶ್ವಾಸಂ ಪರಿಸಮಾಪ್ತಂ

ಕೆಂಬಾವಿಭೋಗಾರ್ಯಕಥನಂ

ನಾಂದಿ॥ ಲಲಿತಪದವೃತ್ತ॥ ವಾಸವಗುರುಸ್ತುತಮಹಾಸುರಮಹೀಧರಶರಾಸನಮನೋಂಬುಜನಿವಾಸಶಿವಯೋಗಾ । ಭ್ಯಾಸರತವತ್ಸಲಕೃಪಾಸದನರಮ್ಯದರಹಾಸರುಚಿರಾಸ್ಯಚಿರದಾಸಹಿತಕಾರ್ಯಾ॥ ವಾಸವಕರಪ್ರಕರಭಾಸಹತದುರ್ಮತನಿವಾಸಕುಸುಮಾಯುಧದುರಾಸದನಿಜಾತ್ಮಾ । ವ್ಯಾಸಶುಕಮುಖ್ಯನುತಭಾಸುರಚರಿತ್ರಕೊಡುಲೇಸನೆಮಗುನತಪಿಲಾಸಬಸವೇಶಾ

ಕಂ॥ ಶ್ರೀರಮಣೀಯನಗೇಂದ್ರಸು । ತಾರಮಣಂತಾರಕಾರಿಗಜಮುಖಜನಕಂ॥ ತಾರಾದ್ರಿಸುಂದಿರಂಜಿತ । ಮಾರಂಮಾಳ್ಕೆಮಗೆಸೌಖ್ಯಮಂಶಿವಲಿಂಗಂ ॥೧॥

ವ॥ ಮತ್ತಂ.

ಕಂ॥ ಭೂವಳಯದೊಳೊಪ್ಪವಕೆಂ । ಬಾವಿಯೆನಿಪ್ಪಗ್ರಹಾರದೊಳ್ಕಂಗೊಳಿಪಂ॥ ಭಾವಜಹರಭಕ್ತಂಚರ। ಸೇವಾಪರನರರೆಭೋಗನೆಂಬಮಹಾತ್ಮಂ ॥೨॥

ವ॥ ಅಂತು ಚರಚರಣಸಪರ್ಯಾಪರಾಯಣನೊಪ್ಪಿರೆ ಶಂಕರಂತದ್ಭಕ್ತಿಯೇಳ್ಗೆಯ ನಿಳೆಯೊಳ್ಮೆರೆಯಲೆಳಸಿ.

ಕಂ॥ ಪೆಗಲಲ್ಲಿಸತ್ತಕರುಮಂ । ಮಿಗೆಪೊತ್ತಂತ್ಯಜನ ಪರಿಜನಾಳ್ಗಿಕ

ಗ್ರೀ || ವೆಗಳೊಳ್ಸಿತಂ ಲಿಂಗಂ | ಸೊಗೆಯಿಸೆರುದ್ರಾಕ್ಷಿಯುವಸಗೃಹಕೇಳ್ತಂದಂ ||೩||

ಕಂ|| ಕಂಡಧಿಕಭಕ್ತಿಯಿಂಮುಂ | ಕೊಂಡೆರಗುತ್ತವನಪೆಗಲಗೆರುವಂತಾಂಕೈ || ಕೊಂಡಾಂತುತನ್ನಪೆಗಲೊ | ಳ್ಮಂಡಿತಮತಿತಂದನಾತ್ಮಮಂದಿರಕವನಂ ||೪||

ಚಂ|| ವೃ|| ತೊಳೆದವನಂಘ್ರಿಯಂತಳೆದುತತ್ಪದವಾರಿಯನುತ್ತಮಾಂಗದೊಳ್ | ಬಳಿದನುರಾಗದಿಂಮಣಿದಭಕ್ತನನೀಕ್ಷಿಸಿತನ್ನವಕ್ತ್ರದೊ|| ಳ್ಮೊಳೆನಗೆಯುಣ್ಮೆ ಕೇಳಿಮುಗೆವತ್ಸದಮಾಂಸಮನುಣ್ಬ್ಸನೇಮಮಿಾ | ಗಳೆ ಕರುವಂಕರಂಕೊರೆದು ಮಾಂಸಮನಟ್ಟುಣಲಿಕ್ಕುಬೇಗೆದಿಂ ||೫||

ಮಲ್ಲಿಕಾಮಾಲಾವೃತ್ತ|| ಎನ್ನನೇಮಮನಾಗಿಸಲ್ಕರುವಾಂಕುಜಾಡರದಾಸನಂ | ನಿನ್ನಪೋಗಿಕಡಂಗಿಬೇಡಿದೊಡಾತನಾತ್ಮವಧೂಟಿಯುಂ || ಮುನ್ನಕೇಳ್ದಪೆನೆಂದುತಾಂಮನೆಗೆಯ್ದಿಬಾರದೆತಳ್ಪಿದಂ | ನಿನ್ನಗೇಹಕೆಬಂದೆನಿಂದೆಲಿಭಕ್ತಮಾಡುಮುದಿಷ್ಟಮಂ ||೬||

ವ|| ಎನೆಮಹಾಪ್ರಸಾದಮಂತೆಗೆಯ್ವೆನೆಂದು.

ಕಂ|| ಕ್ಷಾರಾಮ್ಲಲವಣಮುಖಸಂ | ಭಾರಂಗಳ್ವೆರಸಿ ಮಾಂಸಮಂಪಚಿಯಿಸಿ ತ || ತ್ಸೌರಭಮೆಸೆವಡಗಂ ಗುಣ | ವಾರಿಧಿಯುಣಲಿಕ್ಕಿತಣಿಪಿದಂತಾಪಸನಂ ||೭||

ವ|| ಆಗಳಾಗ್ರಾಮವಾಸಿಗಳಾದಪಾರ್ವರದಂ ಕಂಡು ಕುಪಿತರಾಗಿ.

ಚಂ|| ವೃ || ಗುಡುಗುಡಿಸುತ್ತೆಕಲ್ಲಡಿಗಳಂ ತಳೆದಾರ್ದಿಳಿವಿಳ್ದು ಪೌಳಿಯಂ | ನಡೆನಡೆಕೇರ್ಗಳಂಕೆಡವು ಬಲ್ಪಡಿಯುಂಮುರಿಪೊಕ್ಕುಗೇಹದೊ || ಳ್ಪುಡುಕು ನಿರೀಕ್ಷಿಸಂತ್ಯಜನಪೇರ್ದಡಿಯಿಂಪೊಡೆ ಪೋಗಲೀಯದಿ | ರ್ಕಡೆಗೆನುತುರ್ಬಿ ಬೊಬ್ಬಿರಿದುಮುತ್ತಿದರಾಗೃಹಮಂ ದ್ವಿಜಾಧಮರ್ ||೮||

ವ|| ಅಂತುಮುತ್ತಿಮುಂಬರಿದುನೋಳ್ಪಾಗಳಾತಪಸ್ವಿಯದೃಶ್ಯನಪ್ಪುದು ಮನಿತರೊಳಾಕುಮತಿಗಳಕಳಕಳಮಂ ಭೋಗ್ಯೆಯುಂಕಂಡು ಕನಲ್ದು.

ಚಂ|| ವೃ|| ಎಲೆಎಲೆಭೂಸುರಾಧಮರಿರಾಹರಭಕ್ತನಿವೇಶಮಪ್ಪಮ | ನ್ನಿಲಯಮನುಕ್ಕಮೊರ್ಮೆನಿಮಗಂ ಪುಗಲಗ್ರಜರಾದವರ್ಗೆನಿ|| ಶ್ಚಲಪೃತಿಯಿಂದಮೆಂಪೆನೆ ದಲಂತ್ಯಜನೆಂತೊಳಪೊಕ್ಕಪಂ ಸುಹೋ | ಜ್ವಲಶಿವಮೂರ್ತಿಪೊಕ್ಕನವನಂ ತಿಳಿವಿಲ್ಲದೆನಿಂದೆಗೆಯ್ವುದೇಂ ||೯||

ಚಂ|| ಪುರಹರಭಕ್ತದೂಷಣಪರಾಯಣರೆಂದೆನಿಸಿರ್ದನಿಂಮನಾ । ದ
ರದೊಳೆನೋಡಲುಂನುಡಿಯಿಸಲ್ಕೆಮಗಕ್ಕುಮೆ ಸಾಲ್ಗುಮಿಾಪುರಾಂ ॥ ತರ
ದೊಳಗಿರ್ಪುದಿಂನೆಮಗೆಮದ್ಗೃಹವೃತ್ತಿಯನಿಲ್ಲಿನೀಮೆಕೊಂ । ಡಿರಿಮಿರದೆಂ
ಮಸ್ವಾಮಿಗಳಪಿಂದನೆಪೋದಪೆವಿಂದುಬೇಗದಿಂ ||೧೦||

ಕಂ|| ಭೋಗಯ್ಯಂನಿಶ್ಚಲಮತಿ|ಯಾಗಳೆಪೊರಮಟ್ಟುಪೊಳಲನೆಯ್ದು
ವಪಥದೊ ॥ ಳ್ದೀಗುಲದೊಳ್ಶೈವದ್ವಿಜ । ರಾಗರದೊಳ್ನೆಲಸಿನಿಂದಘನಲಿಂ
ಗಂಗಳ್ .... ||೧೧||

ಮ|| ಸ್ರ|| ವೃ|| ಉಳಿದುದ್ಯತ್ಪೀಠಮಂ ಕಿತ್ತಿಸೆವಪೃಥುಕವಾಟಂಗೆ
ಳಂ ನುರ್ಗುತಂಕೇ । ರ್ಗಳನಾಗಳ್ಕೀಳ್ವಿನಂ, ಪಾಯ್ದೊಡೆಯುತಿದಿರಪೂಗಲ್ಗ
ಳಂ ನೂಂಕುತಂ ಮಂ ॥ ಜುಳಪಕ್ಷದ್ವಾರದಿಂದಂ ಮಸುಳುತೆಪೊರಮಟ್ಟು
ರ್ವಿಗತ್ಯದ್ಭುತಂ ಸಂ । ಗಳಿಪನ್ನಂ ಭಕ್ತಮಾರ್ಗಂಬಿಡಿದುಬಳಿಯಿನೇಳ್ತಂದು
ವಾನಂದದಿಂದಂ ॥ .... ||೧೨||

ವ|| ಮತ್ತಮಲ್ಲಿ ॥

ಮ|| ಸ್ರ|| ವೃ|| ನಲಿಯುತ್ತಂಪೋಪಲಿಂಗಪ್ರತತಿಯುರುಳ್ವಲಿಂಗಪ್ರ
ತಾನಂ ನಭೋಮಂ । ಡಲದೊಳ್ಪಾಯ್ತರ್ಪಲಿಂಗಪ್ರಕರಮಿಳಿಯೊಳಲ್ಲಲ್ಲಿ
ನಿಂದೆಯ್ದುತಿರ್ಪು ॥ ಜ್ವಲಲಿಂಗಶ್ರೇಣಿಬೇಗಂ ಪರಿವವಿಮಳ ಲಿಂಗವ್ರಜಂ
ಸೋಂಕದೊಳ್ಪಿಂ । ನೆಲನಂ ಚೋಟುದ್ದದೊಳ್ಕುಪ್ಪಳಿಸಿ ಕುಣಿವಲಿಂಗೋ
ತ್ಕರಂಮಾಣದಾಗಳ್ ॥ ..... ||೧೩||

ಕಂ|| ಒಲೆದೊಲೆದು ನಡೆವಲಿಂಗಾ । ವಲಿ ಮುಂದಣ್ಗೋಡಿನಿಲ್ವಲಿಂ
ಗಸಮೂಹಂ ॥ ಕೆಲಬಲಕೆ ನಿಮಿರ್ದುತಳರ್ವು । ಜ್ವಲಲಿಂಗ ಪ್ರಸರಮೇಂ
ಮನಂ ಗೊಳಿಸಿದುದೊ ॥ ..... ||೧೪||

ಕಂ|| ಭೋಗಯ್ಯನೊಳೊದವಿರ್ದನು । ರಾಗದಿನೊಡವೋಪಲಿಂಗೆ
ತತಿಯೊಡಗೂಡು ॥ ತ್ತಾಗಳೆಪೊಳಲ ಸುಭಕ್ತರ । ಪೂಗಂ ಪೊರಮಟ್ಟುತ
ಳರ್ದುದತಿಸಂಭ್ರಮದಿಂ ॥ .... ||೧೫||

ಕಂ|| ಆಡುತ್ತಂಕೇಳಿಕೆಯೊಡ । ಗೂಡುತ್ತಂ ತಳರ್ವಲಿಂಗತತಿಯು
ನಲಂಪಿಂ ॥ ನೋಡುತ್ತಂ ಮೃಡಸಂಭ್ರಿಯ । ಪಾಡುತ್ತಂ ನಡೆದುದಲ್ಲಿಶ
ರಣಸಮೂಹಂ ॥ .... ||೧೬||

ವ|| ಇಂತು ಕಡುಸ್ಪಡಗರಂಮಿಗೆ ಭೋಗದೇವಂಗೆಮಿಯಿಸುತ್ತ ಮಿರ್ಪಿನಮಿತ್ತಲ್ ||

ಕಂ|| ಕೆರೆಬಾವಿತೊರೆಯನೀರ್ಗ | ಳ್ಬರಿತವು ನಳಿನೋತ್ಪಲಾಳಿಕೊರಗಿದುದೆತ್ತಂ || ಬಿರುಗಾಳಿಬೀಸಿದುದು ಪಶು | ವರಚಿದವುಬಳಲ್ದುಬಾಡಿದವುಸಸ್ಯಂಗಳ್ || .... ||೧೭||

ಚಂ|| ವೃ|| ಮೊಳಗಿದುದಂಬರಂ ಪಗಲೊಳಂಧತಮಂಕವಿದತ್ತು ಕಂಪಿಸಿ | ತ್ತಿಳೆ ನಿರಿಯೂಳ್ದವಾಗಸದೊಳೇಳ್ದವು ಭೋಂಕನೆಧೂಮಕೇತುಗ || ಳ್ಪುಳಿತುದು ಭಕ್ಷ್ಯಭೋಜ್ಯತತಿ ಬೊಬ್ಬಿರಿದಾರ್ದುದು ಕಂಬಮಲ್ಲಿಸೂ|ರ್ಗಳೊಳೊಗೆದತ್ತು ಪೇರ್ಪೊಗೆಪುರಾಧ್ವದೊಳುರ್ವಿದುದುಜ್ವಳಾನಲಂ ||೧೮||

ವ|| ಇಂತು ನೆಗಳ್ದುತ್ಪಾತಕತಮನಾವಿಪ್ರರ್ಕಂಡು ಕಡುಭೀತರಾಗಿ ಕಂಪಿಸಿ ಭೋಗಯ್ಯನವಜ್ಞಾನಿಮಿತ್ತಮಿಾ ವಿಪರೀತಮೊಗೆದುದಾತನಂ ಶರಣ್ಬೊಕ್ಕೊಡಲ್ಲದೆಮಗೆ ಬಾಳ್ತೆಯಿಲ್ಲೆಂದೆಲ್ಲರ್ನೆರೆದಾಲಿಂಗ ಸಂಘ ಸಮಾವೃತ ನಿರ್ದೆಡೆಗೆಪರಿತಂದು ಸಾಷ್ಟಾಂಗಮೆರಗಿ ಪಲ್ಗಿರಿದು ಪುಲ್ಗರ್ಚಿಕಾರ್ಪಣ್ಯಂದೋರಿ ಕೈಮುಗಿದುನಿಂದು ||

ಚಂ|| ವೃ|| ಎಲೆಕರುಣಾಬ್ಧಿ ಕಾವುದು ಮದಾಂಧರನಲ್ಪರನಜ್ಞಭಾವಸಂ | ಕಲಿತರ ನನ್ಯಥಾಗತಿವಿಹೀನರನೆಂಮನೆನುತ್ತೆ ನೋಡದಿ || ರ್ಪಲರೆನಿಪೆಂಮತಪ್ಪುಗಳನಿಂದಭಯಂಗುಡುದೇವನೀನೆನು | ತ್ತಲರ್ದತಿದೈನ್ಯದಿಂಪೊಗಳೆಕೇಳ್ದು ಮುಗುಳ್ನಗೆನಕ್ಕು ಭೋಗಯಂ || ||೧೯||

ಕಂ|| ಕರುಣಾನಿಧಿಯಭಯಂಗುಡು | ತಿರದೆ ಧರಾಮರಕದಂಬಕೊಡವರೆ ಲಿಂಗೋ || ತ್ಕರಮಿರಿದೆನೆಸರಭಸಮಾ | ಪುರಿಗೆಯ್ದಿದನಪ್ರತರ್ಕ್ಯಮಹಿಮಾಧಾರಂ || .... ||೨೦||

ವ|| ಅಂತೆಯ್ದಿ ನಿಜಭವನಮಂ ಪುಗುವಾಗಳಾಕೆಂಬಾವಿ ಪೊಳಲಲಿಂಗಂಗಳಸವಸದಿಂ ತಂತಂಮಗುಡಿಗಳುಮಂ ಪೀಠಂಗಳುಮಂ ಪಲ್ಲಟಿಸಿ ||

ಕಂ|| ಭೀಮೇಶ್ವರಲಿಂಗಂ ಘನ | ರಾಮೇಶ್ವರಲಿಂಗ ಪೀಠದೊಳ್ನೆಲಸಿದುದಾ || ರಾಮೇಶ್ವರಲಿಂಗಂ ಘನ | ಭೀಮೇಶ್ವರಲಿಂಗಪೀಠದೊಳಮತಿರಯದಿಂ || .... ||೨೧||

ಪುಷ್ಪಲತಾಗ್ರವೃ|| ಸುರಪೂಜ್ಯಲಿಂಗತತಿ ಸಿದ್ಧಪೂಜ್ಯಧಾ | ಸುರಲಿಂಗಪೀಠದೊಳೆದೇವಪೂಜ್ಯಬಾ || ಘುರಲಿಂಗಪೀಠದೊಳ್ನೆಲಸಿರ್ದಪೂಜ್ಯಸೌಂ| ದರಲಿಂಗರಾಜನೆಲಸಿರ್ದುದದ್ಭುತಂ || .... ||೨೨||

ಕಂ|| ಲಿಂಗಂಗಳ್ಭೋಗಯ್ಯನ | ಪಿಂಗಡೆಯೋಳ್ತಿರ್ದ ತಂಪುಪರಿ ಯರುಪಲ್ಕೇ || ಳ್ದಂಗವಿಪಿಜಗಕೆನಿಜಪೀ ಠಂಗಳಪಲ್ಲಟಿಸಿನೆಲಸುತೀಗೆಳು ಮೆಸೆಗುಂ || ..., ||೨೩||

ಕಂ|| ಪುರಮೆಂದಿನಂತೆಮುಂಗೆಳ | ತರಮಾದುದುಜಂಗಮಾಂಘ್ರಿಪೂ ಜಾಸುಖದಿಂ || ಕರಮೆಸೆದಂಭೋಗಯ್ಯಂ | ಪರಿದೇಶ್ದೆಸೆದೀವೆತನ್ನಜಸಮಾ ಪ್ರೊಳಲೊಳ್ || .... ||೨೪||

ಕಂ|| ಹರಭಕ್ತನಾವಜಾತಿಯೊ | ಳಿರುತಿರ್ದೊಡಮುಪನೆಪೂಜ್ಯನಖಿ ಳರ್ಗೆಂದೀ || ಶ್ವರನರುಪಿದನಂತದರಿಂ | ನರೇಂವ್ರಕೇಳ್ಭಕ್ತರಲ್ಲಿಕುಲಮ ರಸುವುದೇಂ || .... ||೨೫||

ವ|| ಮತ್ತಂ ||

ಕಂ|| ಶ್ವಪಚಯ್ಯನೆಂಬಭಕ್ತಂ | ವಿಪಿನಾಂತರಶುದ್ಧದೇಶದೊಳ್ಕಂ ಭುಗೆತಾ|| ಸುಪಹಾರಮನೆಸಗುತ್ತಂ|ಸುಪವಿತ್ರಚರಿತ್ರಸಿರ್ಪ ನಿರ್ಪಂನೆವರಂ||

ಮಲ್ಲಿಕಾಮಾಲಾವೃತ್ತ || ಸಾಮವೇದಿಯೆನಿಪ್ಪಭೂಸುರವರ್ಯನಾವನ ದೇಶದೊ| ಳ್ವ್ಯೋಮಮಾರ್ಗದೊಳೇಳ್ತರುತ್ತಿರೆಲೀಲೆಯಿಂದವನಂಗುಣಾ|| ರಾಮನೀಕ್ಷಿಸಿಬೋನಮಂಭವಿಕಾಣ್ಬುಮೆಂದತಿವೇಗದಿಂ | ವಾಮಪಾದು ಕೆಯಿಂದಮುಚ್ಚಿದನಾಗಳಂತದನಾದ್ವಿಜಂ || ||೨೭||

ಕಂ|| ಕಂಡುನಗೆನಗುತಮಿವನು | ದ್ದಂಡತೆಯಿಂಶ್ವಪಚನಡುವಬೋ ನದವಿಳಸ || ದ್ಭಾಂಡಮುನೆನ್ನೀಕ್ಷಣರುಚಿ | ಕೊಂಡಪುದೆಂದಲ್ತೆಮುಚ್ಚಿ ದಂಪಾದುಕೆಯುಂ || ..... ||೨೮||

ಕಂ|| ಕಡುದುರುಳನೆನ್ನಮಹಿಮೆಯ | ಪೊಡರ್ಪನಿವನರಿಯದಿಂತು ನೆಗಳ್ದಂಥರಿಯೊಳ್ || ನುಡಿಯಲದೇಂಮುಷ್ಕುಲಜರ | ನಡವಳಿಬೇರೆಂದು ಗರ್ವದಿಂನುಡಿಯುಲೊಡಂ || ..... ||೨೯||

ಚ || ವೃ || ಅಳಿದುದುಮಂತ್ರಶಕ್ತಿ ಬಿಸಿಲ್ಗೊಂದದವೊಲ್ನಿಜಪಕ್ತ್ರಕಲ್ಲಿ ಬಾಂ | ದಳದೊಳೆಬರ್ಪವಸ್ತ್ರಮದುಧಾತ್ರಿಗೆಬೀಳ್ದುದವಂ ನಿರೀಕ್ಷಿಸು || ತ್ತಿ ಳಿದತಿ ಭೀತಿಯಿಂದೆರಗಿದಂ ಶ್ವಪಚಾರ್ಯನಪಾದಪದ್ಮಕು | ಜ್ವಳಮತಿಸಾಮ ವೇದಿವಿತತಾತಪತಪ್ತನಿಜಾನನಾಂಬುಜಂ || ||೩೦||

ವ|| ಅಂತೆರಗಿ ಕೈಮುಗಿದು ಕೊಂಡಾಡಿ ತತ್ಕಾರುಣ್ಯದಿಂ ಶಿವದೀಕ್ಷೆ ಪಡೆದು ಶಿವಾಚಾರದೊಳ್ಸಂದು ಕೆಲವಾನುಂದಿವಸಮಿರ್ದನಂತರ ಮದ್ಭು ತಭಕ್ತಿಯಿನಭವನಂ ಮಚ್ಚಿಸಿಮುಂನಸೆಪೆತ್ತು ||

ಕಂ॥ ಮೂವತ್ತಾರುಂಪ್ರೌಳಲಜ । ನಾವಳಿವೆರಸುತ್ತೆ ಶಿವನಪುರಿಗೆಯ್ದಿದನಂ ॥ ದಾವಿಭುವದರಿಂಕೇಳಿಲೆ । ಭೂವರ ಶಿವಭಕ್ತರೊರಿಗೆ ಬರ್ಪರೆಪಾರ್ವರ್ ॥ ...... ॥೩೧॥

ಕಂ॥ ಆಲಿಪ್ರುದಿನ್ನುಂಭೋಜನೃ । ಪಾಲಂಪಡೆದಾಳ್ದವಲ್ಲಕೀಪುರದೋಳ್ನ ॥ ಲ್ಲೀಲೆಯೊಳೆಸೆವಂ ಸದ್ಗುಣ । ಶೀಲಕಳಾಶಾಲಿಶರಣಸುದ್ಭಟದೇವಂ॥

ಕಂ॥ ಶಿವದೀಕ್ಷೆಯಿತ್ತುತಿಳಿಪುತೆ । ಶಿವತತ್ವಮುನಾನೃಪಂಗೆಗುರುವಾಗಿಮುಹಾ ॥ ಶಿವಯೋಗಿನೃಪನಪರ್ಯ್ಯೋ। ತ್ಸವಮಂಕೈಕೊಂಡುವೇದಶಾಸ್ತ್ರಗಮಧಿಂ ॥ ..... ॥೩೩॥

ಕಂ॥ವಾದಂಗೆಯ್ದುಗ್ರ್ಮದಪರ । ವಾದಿಗಳಂಗೆಲ್ದುಜನಮುನಾಳ್ದಿರುತಂನಂ ॥ ಮೋದದೆಪನೆನಿಂದಾಮುಹಿ । ಮೋದಧಿಜೊಂಮುಬ್ಬೆಯೆಂಬಕಾಂತಾಮಣಿಯೋಳ್ ॥ .... ॥೩೪॥

ವ॥ ಅಂತು ಪರಮಶಿವಭಕ್ತೆಯಾದ ಗಾನವಿದ್ಯಾ ವಿಶಾರದೆಯೆನಿಪ ಜೊಂಮುಬ್ಬೆಯುಂ ವಿವಾಹವಾಗಿಜೆರಸಿರ್ಪಿನಮುದಂಕಂಡು ಪೌರಜನಮಚ್ಚರಿವಡೆಪರಸಮಯಿಗಳರಸನೆಡೆಗೇಳ್ತಂದು ಸಂದಣಿಸಿನಿಂದು ॥

ಚಂ॥ ವೃ॥ ಎಲೆನರಪಾಲನಿನ್ನಗುರುವೆಂದೆನಿಪುದ್ಭಟದೇವನಜ್ಞನ । ಲ್ತಲಘುಕಲಾವಿದಂ ಪಿರಿಯನಗ್ರಜನಂತ್ಯಜೆಯಾದಕಾಂತೆಯೊ ॥ ಳ್ನಲಿದೊಡಗೂಡಿ ತನ್ನಕುಲಧರ್ಮ್ಮಮನಿರ್ಕಡಿಗೆಯ್ದನದ್ಭುತಂ । ಸಲೆಮರುಳಾದನೆಂಮಪಿಸುಣಾಡಿದ ರಾದ್ವಿಜರಾನರೇಂದ್ರನೊಳ್ ॥ ॥೩೫॥

ವ॥ ಆಮಾತ ನರಪನೇಳಿದಂ ಗೇಳ್ದಿಂದಿನಂತೆ ನಿಜಗುರುವಂ ಭಕ್ತಿಭಾವದಿಂಸೇವಿಸುತ್ತಮಿರೆ ಪಿಶುನರೆಲ್ಲರುಂನಾಣ್ಚಿಸರಿಯೆ ಕೆಲವಾನುಂದಿವಸಂ ಕಳೆಯೆ.

ಕಂ॥ ನಿಜಭಟನಾದುದ್ಭಟನಂ । ತ್ಯಜೆಯೊಡಗೂಡಿರ್ದನೆಂಬರಂ ನಾಣ್ಚಿಸಲಂ ॥ ಗಜರಿಪುತನ್ಮಹಿಮೆಯನೆ । ಯ್ದೆ ಜಗಕ್ಕರುಪಲ್ಕೆನೆನೆದುಬರಿಸಿದನವನಂ ॥

ವ॥ ಅಂತು ಶಿವಂ ನಿಜಲೋಕಕ್ಕೆ ತರಿಸಂದುದ್ಭಟನಂಬರಿಸೆ ತತ್ಕಳೇವರಮುನಾಪ್ತರೊಂದು ವಟವಿಟಪಿಯುಕೆಳಗೆ ಸುಡಲೊಡನೆ.

ಕಂ॥ ಮುಂಗಳಮುಯನಂಗದಹೊಗೆ । ಪಿಂಗದೆತನುಸೋಂಕೆ ತದ್ವಟಸ್ಥಿತಬಹುಭೂ ॥ ತಂಗಳ್ಕೈಲಾಸಕ್ಕೆಕ । ಡಂಗುತ್ತಂಪೋದವಿತ್ತಲುಳಿದೊಂದುಮರುಳ್ ॥೩೭॥

ವೃ॥ ನಡೆನೋಡುತ್ತೆವಟಾವನೀರುಹಮನಾಭೂತಂಗೆಳಂ ಕಾಣದಿ। ಟ್ಟೆಡೆಯೊಳ್ನಿಕ್ಕಿದದಂತಿಯುಂತೆ ಪಿರಿದುಂಘೀಳಿಟ್ಟು ಧಾತ್ರೀತಳಂ ॥ ಬಿಡದ ಲ್ಲಾಡೆ ಗಜಾಶ್ವರಾಜಿಪೆಳರ್ದತ್ತಂ ಹಂಮುದಂಬೋಗೆ ಗೋ । ಳಿಡುತಂ ಪೆರ್ದನಿವಿಾರೆ ನಿಂದಳೆನೃಪಾಲಂಕೇಳ್ದನಾಘೋಷಮಂ ॥ ||೩೮||

ವ ॥ ಅಂತು ಕೇಳ್ದೀಯದ್ಭುತರೋದನ ಮನಾನೇ ಪರೀಕ್ಷಿಪೆನೆಂದಾ ಸ್ಥಾನದಿನೇಳ್ದು ಸಮಸ್ತಸಾಮಂತ ಮಂತ್ರಿಮಂಡಳಿಕ ದಂಡನಾಥರ್ವೆರ ಸು ಪೊಳಲಪೂರವಳಯುವಟಭೂರುಹದ ಬಳಿಗೇಳ್ತಂದು ಭೋಜರಾಜಂನಿಂ ದು ನೋಳ್ಪಿನಮಲ್ಲಿ ॥

ಚ॥ ವೃ॥ ಕಡುನಿಡಿದಾದಕಾರೊಡಲ ಕೇಸುರಿ ದೊಂಗಲಪೊಲ್ವಕೇ ಶದೊ । ಳ್ಕಿಡಿಸುರಿತರ್ಪಕೆಂಡದವೊಲೊಪ್ಪುವಕಂಗಳನೀಳ್ದುಬಾಗಿಮುಂ ॥ ಗಡೆಗುರುಗಿರ್ಪಪಲ್ಗಳಮುಹಾಗುಹೆಯುಂದದಬಾಯುಬತ್ತಿಬೆಂ । ಗಡರ್ದುನೆ ರಂಪಗಿಲ್ತಬಸುರೊಂದಿರವಾಸುರಮಾಗೆನಿಂದುದಂ ॥ ||೩೯||

ಕಂ॥ ಗುಡುಗುಡನೆಸುರಿಯೆಕಣ್ಬನಿ । ನಿಡುದನಿಯಿಂದಳ್ವಭೂತಮಂ ಕಂಡರಸಂ ॥ ಕಡುಚೋದ್ಯಮನಾಳ್ದಾಗ । ಳ್ನುಡಿಯಿಸಿದಂನೀನಿದೇಕೆಪಳ ಯಿಪೆಯೆನುತಂ ॥ .... ||೪೦||

ವ॥ ಎನೆಪಿಶಾಚಮರಸನಿದಿರ್ಗೆವಂದು ॥

ಕಂ ॥ ಎಲೆನೃಪತಿ ಕೇಳ್ಳುದೊಂದು । ಜ್ವಲಕಥೆಯಂಕೇಳ್ದುಮುಂದೆ ನೀನೆಸಗೆನಿರ ॥ ರ್ಗಲಪರಹಿತಮಂ ನಿನಗೆ ।ತ್ಯಲಘುತರಂಪದವಿಸಾರ್ಗುನೆಂ ತೆನೆಪೇಳ್ವೆಂ ॥ .... ||೪೧||

ಮ॥ ಸ್ರ॥ ವೃ॥ ವಿಲಸತ್ಕೈಲಾಸಭೂಭೃತ್ಕಟಕದೊಳೆಸೆಗುಂ ಸಾರ ಮಂ ದ್ರೋಣದಮೆಂಬು । ಜ್ವಳಕಾಸಾರಂ ತದಬ್ಜಾಕರದತಟದೊಳಿರ್ಪಂ ತ ಪಂಗೆಯ್ಯುತಂ ನಿ ॥ ರ್ಮಲಮಾರ್ಕಂಡೇಯನೆಂಬಂ ಮುನಿಯದರೊಳಿಗಂ ಧರ್ವರೇಳ್ತಂದು ತಾರಾ । ಚಳನಾಥಾಸ್ಥಾನದಿಂದುಟ್ಟುದನೆ ಕಳೆದುಪೊಕ್ಕಲ್ಲಿ ನೀಸಾಡುತಿರ್ದರ್ ॥ .... ||೪೨||

ವ॥ ಅಂತು ಜಲಕೇಳಿಯಂತೀರ್ಚ ॥

ಕ॥ ಪರಿಮಳಿಸುವಕೆಂದಾವರೆ । ಯರಲನವಮುರ್ರಿಯೆಕಂಡುಮುನಿ ಮುನಿದರುಣ ॥ ಸ್ಫುರಿತೇಕ್ಷಣದಿಂ ನಗ್ನಾಂ । ಗರನಾಗಂಧರ್ವರಂ ಸಮಂ ತೀಕ್ಷಿಸಿದಂ ॥ .... ||೪೩||

ವ|| ಅಂತು ಕಾಯ್ದಾಕ್ಷಿಸಿ ಸಪ್ತಶತಸಂಖ್ಯಾಕರಂ ಜಡಿದು ಜಂಕಿಸಿನುಡಿದು ||

ಕಂ|| ಸತತಶಿವಸ್ನಾನೋಚಿತ | ಸುತಜಲಮುಂ ಕದಡಿಶಂಭುಪೂಜೋಚಿತಮುಂ || ಶತದಳಮುಂ ಪರಿದುದರಿಂ | ಕ್ಷಿತಿಯುಳ್ಳಿಪಿಶಾಚರಾಗಿಮೆಂದಂ ಮುನಿಪಂ || .... ||೪೪||

ಕಂ|| ಎನೆಕೇಳ್ದುಪೆಳರ್ದುತತ್ಪದ | ವನರುಹದೊಳ್ಕೆಡೆದುಜವದೆಶಾಪವಿಮೋಕ್ಷಂ || ಜನಿಯಿಪುದಂ ದಯೆಯಿಂದಲೆ | ಮುನೀಂದ್ರಬೆಸಸೆಂದು ಬೇಡಿಕೊಂಡರ್ಮುನಿಯಂ || .... ||೪೫||

ವ|| ಎನೆಕೇಳ್ದು ||

ತರಳವೃತ್ತ|| ನಿಟಿಲಲೋಚನಭಕ್ತಸುದೃಢಯೋಗಿ ತತ್ವವಿಶಾರದಂ| ಕುಟಿಲವಾದಿವಿಭಂಜನನಂ ಶಿವಮೂರ್ತಿತಾಂಚಿರಕಾಲಮು || ನ್ನಟಿಯಿಸಿರ್ದಿಳೆಯೊಳ್ವಿಮುಕ್ತಿಯನೆಯ್ದುತತ್ತನುದಾಹಸಂ | ಘಟಿತಧೂಮದಸೋಂಕಿನಿಂ ನಿಮಗಕ್ಕೆ ಶಾಪವಿಮೋಚನಂ || .... ||೪೬||

ವ|| ಎಂದು ಋಷಿಪೇಳ್ದನಿತರೊಳಾವೆಲ್ಲರುಂ ಪಿಶಾಚರೂಪಮಂತಾಳ್ದೀ ಪಟುವಿಟಪಿಯನಾಶ್ರಯಿಸಿ ಗೆಯ್ದು ಪನ್ನಿರ್ಛಾಸಿರವರುಷಂ ಬರಮೆತ್ತಲುಂ ತೊಲಗದವನನೀನಂಪಾರ್ದು ನೆಲಸಿರ್ದೆವಿಂದಿನುದಯದೊಳಾನೋರ್ವನೆ ಪಶಿವಂತಾಳಲಾರದಾಹಾರಂಗೊಳಲೆಂದೆಲ್ಲರಂಬಿಟ್ಟು ಪೊರಮಟ್ಟು ಪೋದೆನಾಂ ಬರ್ಪುದರಿಂ ಮುನ್ನಮೆ ||

ಕಂ|| ಪೋದರ್ಗಡ ಪುಣ್ಯಾಧಿಕ | ರಾದೇವನದೇಹದಾಹಧೂಮದಸೋಂಕಿಂ || ದಾದಮುಳಿದಿರ್ದೆನಾನೆ | ನ್ನೀದೌರ್ಭಾಗ್ಯಪ್ರಭಾವಮೆನ್ನದೊ ನೃಪತಿ || .... ||೪೭||

ಕಂ|| ಒಡನಾಡಿಗಳೆಲ್ಲರಸಂ | ಗಡಮಿರದೀಪ್ರೊಳ್ತಿಪಸಿವಿನುರುವಡೆಯಿಂ ಬೆಂ || ದೊಡಲಂ ಪೊರೆಯಲ್ಪೋದೆಂ | ಕಡೆಸಿಲ್ಕಿದೆನದರಿನಿಂತುಪಳಯಿಪೆನರಸ || .... ||೪೮||

ಕಂ|| ಅರೆಬೆಂದಕೊಳ್ಳಿಗಳುಮಂ | ಪರೆದಿರ್ದತದಸ್ಥಿಶಕಲಮುಮನೊಡನಿಟ್ಟೊ || ಲ್ದುರಿಪೊತ್ತಿಸೆನ್ನ ಮೇಲಣ | ಕರುಣದಿನೆಲೆನೃಪತಿಪೋಪೆನಾಪೊಗೆಯಿಂದಂ || .... ||೪೯||

ಕಂ|| ಕುರುಪಾವುದು ನೀಂಪೋಮದ | ಕರುಹಿಂದೆಮಗೆಂಬೆಯಪ್ಪೊ

ಡೀವಟತರುವಂ ‖ ನೆರೆಕೀಳ್ತುಬೇರ್ವೆರಸಿನೆಲ । ನರಿಯುತ್ತಿರೆರಜತಗಿರಿಗೆ ಕೊಂಡಾಂಪೋಪೆಂ ‖ .... ‖೫೦‖

ವ‖ ಎಂದ ಮರುಳನಾತಂ ಮನದಿಗೊಂಡರಸನಾಶ್ಚರ್ಯಮಾನಸನಂ ತೆಗೆಯ್ವೆನೆಂದು ಕಡೆಗೊಳ್ಳಿಗಳುಮನಸ್ಥಿಶಕಲಮುಮಂಪುಂಜಿಸಿ ಚಂದನೇಂಧನಂಗಳನಾಜ್ಯದೊಳ್ನಾಂದ ದಿವ್ಯಾಂಬರಂಗಳು ಮನಮರ್ಚಿಚಿದಾಗ್ನಿಯುಂ ಪೊತ್ತಿಸೆಪೊಗೆನೆಗೆದುನಿಜಾಂಗಮಂ ಸೋಂಕಲೊಡನೆ ‖

ಚ ‖ ವೃ ‖ ತೊಳಪಕಿರೀಟಮುಜ್ವಲಲಸನ್ಮಣಿಕುಂಡಲಮುಟ್ಟದಿವ್ಯಮಂ । ಜುಳವಸನಂ ಮನೋಜ್ಞತರಹಾರಮುದಂಚಿತರತ್ನಕಂಕಣಂ। ಪೊಳೆವಮುಬೀದುಮುಂದಹಸನಂ ನಿಡುಗಣ್ಮಲರೊಪ್ಪೆಮೆಯ್ಯಸು । ಣ್ಬೆಳಗೆಳೆಮಿಂಚನೇಳಿಸೆ ಪಿಶಾಚತೆಪಿಂಗಿದನೊಪ್ಪಿತೋರಿದಂ ‖ ‖೫೧‖

ವ‖ ಆಗಳ್ ‖

ಮ‖ ವೃ‖ ಅರಸಂಬೇಗದೆಮುಂತ್ರಿಮುಂಡಳಿಕಸಾಮಂತಾಪ್ತಪುತ್ರಾಂಗನೋ । ತ್ಕರಯುಕ್ತಂ ಪದೆದೇರುತಂ ಘಟಘಟಪ್ರಧ್ವಾನಮಿಂಬಾಗೆ ಬೇ । ರ್ವೆರಸುತ್ತಂ ಸುರನೊತ್ತಿಕೀಳ್ತವಟವನುಂತತ್ಸಂಯುತಂಭೂಮಿಗ । ಚ್ಚರಿಯಪ್ಪಂತಿರುಘೇರವಂಗುಡುತೆ ಪೊಕ್ಕಂಬಂದುಕೈಲಾಸಮಂ ‖೫೨‖

ವ‖ ಇಂನುಂಪೇಳ್ವೆನೆಂತೆನೆ.

ಕಂ ‖ ನಾವಿಂದಮೆಂಬಪೊಳಲೋ । ಳ್ಬಾವಜಹರಭಕ್ತಚನ್ನಯಾನ್ವಯಭವೆಕು ‖ ಷ್ಠಾವೇಷ್ಟಿತತನುಗುಡ್ಡಾ । ದೇವಿಯೆನಿಪ್ಪೋರ್ವಳಿರ್ಪಳಲೆ ಮನುಜೇಂದ್ರ ‖ .... ‖೫೩‖

ವ ‖ ಆಪೊಳಲಪಾರ್ವರ್ಪುರವೀಧಿಯೊಳ್ಬರ್ಪ ವಿಶೀರ್ಣನಾಸಾಕರಚರಣನಖಾಗ್ರ ವ್ರಣಾವೃತಶರೀರಿಣಿ ಯಪ್ಪಗುಡ್ಡಾಂಬೆಯಂಕಂಡು ಮೆಯ್ಗೆಟ್ಟಂತ್ಯಜೆಯಾದಸಿನ್ನಂ ನೋಳ್ಪುದೆಮುಗತ್ಯಂತಾಸುಚಿತಮಾಗಳೆ ಪೊರಮಡೆಂದಾ ಪೊಳಲಿಂಪೊರಮಡಿಸೆ ದೃಢವ್ರತೆಭಕ್ತಿಧೃತಿಗೆಡದಾನಗರಮನುಳಿದು ಮನ್ನಾಥನಿಪ್ಪ ಸೌರಾಷ್ಟ್ರಪತಿಯಿಂ ಸಾರತೇಜೋಮಯಶರೀರಂಬಡೆದಪೆನೆಂದುತರಿಸಂದು ತತ್ಪುರಾಭಿಮುಖಿಯಾಗಿ ‖

ಮ ‖ ವೃ ‖ ನಡೆತಂದಳ್ ಧೃತಿಯಿಂದೆಕಾಲ್ನಡೆಯೊಳೆತ್ತಂಸೂಸೆರಕ್ತಾಂಬುತಂ । ನಡಿಯಿಂಪೂಯುಸಮನ್ವಿತಂ ಕಿರಿಮದೂರಂಕಾಲ್ಗಳಾಮಾರ್ಗದೊ‖ಳ್ಕಡಿಪ್ರೋಗುತ್ತಿರೆಜಾನುವಿಂತಳರ್ದಳಾಜಾನುದ್ವಯುಂ ಬೀಳೆಕೀ ।

ಉಡಿದಾಗಳೆಸ್ವರಳುತ್ತೆನೆತ್ತರುಗೆಮೆಯ್ಯಂಭಕ್ತಿಯುದ್ವೇಗದಿಂ ||೫೪||

ಕಂ|| ಬರುತಿರ್ದಳಲ್ಲಿನಿರುಪಮ | ವರದಂಸೌರಾಷ್ಟ್ರಸೋಮನಾಥಂತಾನಿಂ || ನಿರಲಾಗದೆಂದುಬಂದಾ | ದರದಿಂನಿಜರೂಪುದೋರುತಿದಿರೊಳ್ನಿಂದಂ || .... ||೫೫||

ಕಂ|| ಜಡೆಮುಡಿಶಶಿಕಳೆಬಾಂಬೊಳೆ | ಕಿಡಿಗಣ್ಣಹಿಭರಣಮಸಿತಕಂಠಂಮೆಯ್ಯೊ|| ಳ್ತೊಡೆದಭಸಿತಂದ್ವಿಪಾಜಿನ | ಮುಡೆತಿಸುಳಿಂ ಮಿಸುಗೆಮೆರೆದನಗಸುತೆಯುರಸಂ || .... ||೫೬||

ವ|| ಅಂತೆಸೆದು ಭವರೋಗವೈದ್ಯಂ ನಿಜಭಕ್ತೆಯಂ ಕರುಣಾದ್ರ್ರಕಟಾಕ್ಷದಿ ನಿರೀಕ್ಷಿಪುದು ಮಾಗಳೆಸರ್ವಾಂಗಮುನಿತುಂ ಸಂಪೂರ್ಣಮಾಗಿ ತಪ್ತಸುವರ್ಣವರ್ಣಮಂತಳೆಯೆ ನಿರುಪಮಸೌಂದರ್ಯಮನಾಳ್ದು ತನ್ನಡಿಗೆ ಪರಮಾನಂದದಿ ನೆರಗಿರ್ದಭಕ್ತೆಗೆಮೆಚ್ಚಿನೀಂ ವರಮಂ ಬೇಳ್ಪುದೆನೆಕರಾರವಿಂದಮಂಮುಗಿದು ||

ಕಂ|| ಪರಮಕೃಪಾನಿಧಿನಿಮ್ಮಯ | ಚರಣಾಬ್ಜಮನಿಂದುಕಂಡೆನವದಿರಿಂದನ್ಯಂ || ವರಮಾವುದೊಬೇಳ್ಕೊಡೆಸಲೆ | ಕರುಣಿಸುನಿಂಮಂಘ್ರಿಭಜನಮೊಂದನೆಮುದದಿಂ || .... ||೫೭||

ವ|| ಎನೆಶಿವಂಮೆಚ್ಚಿ ನಿಜಭಕ್ತಿಸುಖಮನನುಜ್ಞೆ ಗುಡಲ್ಕಾದೇವಿಯುಂ ಪೊರೆದು ||

ಕಂ || ಅವಳಂದೂಷಿಸಿದವನೀ | ದಿವಿಜರತನುಮೆಲ್ಲಕುಷ್ಠಮಯಮುಪ್ಪವೊಲಾ || ಭವಹರನೊಡರ್ಚಿದಂಭೂ | ಧವಜನಮುಟ್ಟರಿಯನಾಳ್ವಿನಂವಸುಮತಿಯೊಳ್ || .... ||೫೮||

ಕಂ|| ವಾರ್ತೆಯಿದುಜಗದೊಳಿನ್ನುಂ | ವರ್ತಿಪುದೆಲೆನೃಪತಿವರ ಮಹಿಪಭಕ್ತಿಲಸ || ದ್ವರ್ತನರಪೂರ್ವಜಾತಿಯ | ನಾರ್ತಡೆಯುದೆನುಡಿವರಪರಘಕ್ಕೊಳಗಪ್ಪರ್ ||೫೯||

ಕಂ|| ಸಾಂಗಕ್ರಿಯಾಪ್ರತಿಷ್ಠಿತ | ಲಿಂಗದೊಳಿಶಿಲತ್ವಮೊಳವೆ ಪರಶಿವದೀಕ್ಷಾ || ಸಂಗತನೊಳಂತ್ಯಜತೆಯನು | ಪಂಗೊಸಮನಿಪುದೆಪೇಳ್ಪರಾಧಿಪನಿಜಮಂ ||೬೦||

ಕಂ|| ಶರಧಿಯೊಡೆನೆಚಿದನದಿಗ | ಳ್ಕರಧಿಮುರೂಪಪ್ಪತೆರದಿನನನಿಪ

ವಿಲಸ ‖ ದ್ಗುರುಕರಕಮಲಸ್ಪರ್ಶನ । ದಿರವಿಂ ನರರಕ್ಕುಮಲ್ತೆಗುರುರೂ
ಪಧರರ್ ‖೬೧‖

ಕಂ‖ ಭ್ರಮರಾವಲಂಬಕೀಟಂ । ಭ್ರಮರಂತಾನೆನಿಸಿಕೀಟಮಪ್ಪುದೆ
ಶಿವಲಿಂ ‖ ಗಮನಪ್ಪಿಲಿಂಗಭಾವಂ । ಸಮನಿಸಿದನರಂನರೇಂದ್ರನರನಕ್ಕು
ಮೆಪೇಳ್ .... ‖೬೨‖

ಕಂ‖ ಜಲಧರದಮರೆಯದಿನಮಣಿ । ಮಲಿನಾಂಬರಬದ್ಧಮಣಿಧರಿ
ತ್ರಿಯಮರೆ ಯೊ ‖ ಳ್ನಿಲಸಿದನಿಧಿಯೆನಿಪಂ ದು । ಷ್ಕುಲಸಂಭನ್ನಂಪು ರಾ
ರಿಭಕ್ತಂಧರೆಯೊಳ್ ‖೬೩‖

ಉ ‖ ವೃ ‖ ಪುಟ್ಟದೆಮುತ್ತುಶುಕ್ತಿಯೊಳೆಪುಟ್ಟದೆಪಂಕದೊಳಂಬು
ಜಾತಮೇಂ । ಪುಟ್ಟದೆಕಲ್ಲೊಳೇಂಮಿಸುನಿಪುಟ್ಟದೆಕಾಷ್ಠದೊಳಗ್ನಿಪಟ್ಟೆ
ತಾಂ ‖ ಪುಟ್ಟದೆ ಕೀಟದೊಳ್ಧರೆಗೆಪೂಜ್ಯತೆದಾಳದೆಮೇಣೆವಂತೆಪಲ್ । ಪುಟ್ಟ
ದೊಡೇನೊದುಷ್ಕುಲದೊಳೀಶ್ವರಭಕ್ತನೆಪೂಜ್ಯನುರ್ವಿಯೊಳ್ ‖೬೪‖

ರತೋದ್ಧತವೃತ್ತ ‖ ಮಾತೆಗೌರಿಪಿತನಲ್ತೆರುದ್ರನಿ । ಖ್ಯಾತಮಾದ
ಭುವನತ್ರಯಕ್ಕೆತ ‖ ಜ್ಞಾತಸರ್ವಜಗತೀಜನಂಗಳೊ । ಳ್ಜಾತಿಭೇದಮಣ
ಮುಂಟೆಧಾತ್ರಿಪ ‖೬೫‖

ವ‖ ಅಂತುಮಲ್ಲದೆಯುಂ.

ಕಂ‖ ಭೂಸುರಕುಲಗುರುವೇದ । ವ್ಯಾಸಂಕಬ್ಬಿಲಿತಿಯಲ್ಲಿಪುಟ್ಟಿದನೆ
ಧಿಕೋ ‖ ಲ್ಲಾಸಂಮಾತಂಗಿಯೊಳಾ । ಭಾಸುರಮಾತಂಗಮುನಿವರಂಜನಿ
ಯಿಸಿದಂ .... ‖೬೬‖

ಕಂ‖ ಒಗೆದಂವಸಿಷ್ಠಮುನಿವೇ । ಶ್ಯೆಗೆಸೂತಂಜನನಮಾಂತನಂತ್ಯ
ಜನಿಂಪಂ ‖ ನಗಧರಭಕ್ತಿಸ್ಥಿತಿಯು । ಜ್ಜುಗದಿಂದ್ವಿಜಮುಖ್ಯರಾದರಿವರೀದ
ರೆಯೊಳ್ ‖೬೭‖

ಕಂ‖ ವಿದಿತಮಿದುಸಕಲಭುವನದೊ । ಳಿದನರಿದುಂನುಡಿಯಲೇಕೆ
ದುಷ್ಕುಲಭವರೆಂ ‖ ದೊದವಿದಮದದಿಂಕುಲಮಿ । ಲ್ಲದಶಿವಭಕ್ತರ್ಕಳಲ್ಲಿ
ಕುಲಜಾತಿಗಳಂ ‖೬೮‖

ವ‖ ಎಂದಿಂತುನುಡಿದ ಮಹಿಮಾಕರನಮಾತನೇಳಿದಂ ಗೇಳ್ದರಸಂ
ಕುಪಿತನಾಗಿ

ಕಂ‖ ಬಸವರಸಪೂರ್ವಕಥೆಗಳ । ವಿರಸಮನುಳಿಸರ್ವಜನವಿರೋ

ಧೋಕ್ತಿಗಳಂ ‖ ಪಸರಿಸದಿರಿಂಪೊಳೋದಿನ ಘಸಣೆಗಳೀಕಿನಿತುಸಾಲ್ಗುವೊ
ಪ್ಪದುಬಿಂಕಂ .... ‖೧೯‖

ಕಂ‖ ಹರಭಕ್ತರಧಿಕಕಿಂದೆಂ । ದೊರೆದಪೆತತ್ಕಾಯಮುಂಚಿವ್ರಂಟ
ದೊಡಮುದೇಂ । ಸುರಿತರ್ಪುದೆಸುಧೆಸಾರ್ವರ । ಶರೀರದಿಂರಕ್ತಮೊಕ್ಕಪು
ದೆಪೇಳ್ದಿಟಮುಂ .... ‖೨೦‖

ವ‖ ಎಂಬುದುಂಭಕ್ತಿರತ್ನಾಕರಂಕ ನಲ್ದುಘಳಿಲನೇಳ್ದು ನಿಂದು

ಕಂ‖ ವಿಮಳಶಿವಭಕ್ತಿಮಾರ್ಗಮೆ । ಸುಮಾರ್ಗಮುಳಿದವರಮಾರ್ಗ
ಮುದುವೆಕುಮಾರ್ಗಂ । ಕುಮತಿಜನಮೆಂತುಮೇನಲಿ । ಗುಮೆಪೇಳಿದನತುಳ
ದುರಿತಪೂರಿತಹೃದಯಂ .... ‖೨೧‖

ಮ‖ ಸ್ರ‖ ಖಳರಾಶಾಪಾಶಯುಕ್ತರ್ದುರುಳರತಿದುರಾತ್ಮರ್ಶಿವ
ದ್ರೋಹಿಗಳ್ಗಂ । ಚಲಚಿತ್ತರ್ಸೋಮಪಾನಚ್ಛಲರಚಿತಸು ರಾಪಾನರಾನೀ
ತಗೋಪೀ । ಮುಲಘಾಲರ್ವೇದಘಾದೋದ್ಭವಹನಖರ ರುಪಾತತ್ತ್ವದೋಷ
ರ್ಗಜೀವ್ರೋ । ಜ್ವಲಪಶ್ವಾಘಪ್ರಹಿಂ ಸಾಪರರಮರಪುರೀ ಜೀಟಿಕಾ
ಭೋಗಲೋಲರ್ .... ‖೨೨‖

ಮ‖ ಸ್ರ‖ ಹರಭಕ್ತದ್ವೇಷಿಗಳ್ಭಕ್ಷಿತ ಪಶುಪಲಲರ್ಕರ್ಮಚಂಡಾಲರ
ನ್ಯಾಯರತರ್ವಿತ್ತಾಘದಾತಾರ್ಜಿತನಿಜಸುಕೃತರ್ದಂಭಮಾತ್ಸರ್ಯಮಾಯಾ ।
ಪರಿಬದ್ಧಪಾಶಬದ್ಧರ್ಗರಮು ಮುನಿದಧೀಚಾದಿಶಾಪಾಗ್ನಿದಗ್ಧ । ಗುರು
ದೀಕ್ಷಾಶೈವಪಂಚಾಕ್ಷರಜಪರಹಿತಭೂದಿವಾ ಕೋವರಾಕರ್ ‖೨೩‖

ಕಂ‖ ಎನಿಪೀದುರ್ದ್ವಿಜರೊಡನೆಮ । ಗನುವಲ್ತುತ್ತರಮನೀವ್ರುದಂ
ತಾದೊಡಮಾ । ಘನಶಿವಮಹತ್ವಮುತದಾ । ರ್ಥ್ಯನಿಮಿತ್ತಂತೋರುಪೆಂನಿದ
ರ್ಶನಮುನಣಂ .... ‖೨೪‖

ವ‖ ಎಂದು ಸತ್ಕ್ರಕೌರ್ಯ ಸಮುಗ್ರಂಪೂಣ್ದುನುಡಿದು ನೀನೆಂದಂತೆ ಶಿವ
ಯೋಗಿ ಯಂಗದೊಳಮುರ್ದಂತೋರ್ಪನೀನಿನ್ನನಟ್ಟಿನಸೋಮಯಾಜಿಯುಂ
ಗದೊಳ್ಸಲಿಲಮುನಾದೊಡಂಶೀಳ್ದು ತೋರ್ಪುದಿದಕ್ಕೆ ನಿಂದುದೋಲ್ತೊಡೆಪಾ
ರ್ಶ್ವರಂಗ ದೊಳ್ಕನಕಾಂಘ್ರಿ ಮುದ್ರೆಯುಮನೊತ್ತಿಶಿ ಖೋಪವೀತಂಗಳ ನಿ
ಳುಪಿನಿಜಮತಕ್ಕೆಪೊರಗಾಗಿ ಪೋಪಂತೆಮಾಳ್ಪದೆಂಬುದನವ್ರುಗೆಯ್ಸಿ ‖

ಮ‖ ಸ್ರ‖ ಮನುಜೇಂದ್ರಂ ಸಭೆಗೊಡಿನೋಡುತಿರೆ ನತ್ತ್ವಂತಸ್ತ್ರಸಾ
ಯೋಗಿಪ । ದ್ವಜನಕಾನತನಾಗಿತನ್ನ ಕರದಿಂತತ್ಪಾಣಿಮಂಕೇಜಮುಂ । ಬಿನ

ದೆಂಕೈಮಿಗೆಮೆಲ್ಲನೊತ್ತಿಪಿಡಿದಾಗಳ್ನೀವಿದಂಭಕ್ತಿಪಾ । ವಸಥೇನುಸ್ತನಸನ್ನಿ
ಭಾಂಗುಲಿಗಳಂದುದಾಱಂತವಾಗ್ಬಂಜನಂ .... ||೭೫||

ವ|| ಅಂತು ನೀವಿದಾಗಳ್

ಕಂ|| ಇಡಿದಡಸಿಪಾಱಿಪಾಲ್ವನಿ । ಯುಡುರಾಜಿಯತೆಱದಿನಿಂದುವಿಂ
ಜೊನ್ನಂಮುಂ ॥ ಗಡೆಗುರ್ವುವಂತೆಪಸರಿಸು । ತೊಡನಿಳಿದುದುದುಗ್ಧಧಾರೆ
ತತ್ಕರದಿಂದಂ .... ||೭೬||

ಕಂ|| ಉಗುರ್ವೆಳಗುಬಳ್ಳಿವರಿದಂ । ತೊಗುಮಿಗೆತತ್ಕರದಸುಧೆಯಧಾ
ರೆಗಳೆತ್ತಂ ॥ ಮಿಗೆಭೋರ್ಭೋಱೆನುತಿಳಿವಂ । ದಗಲದೆಪೊನಲಾಗಿಪರಿದುದಾ
ಸ್ಥಾಯಿಕೆಯೊಳ್ .... ||೭೭||

ವ|| ಅಂತಪ್ಪಭಕ್ತಮಹತ್ವಮಂಕಣ್ಣಾರೆಕಂಡು ॥

ಮಲ್ಲಿಕಾಮಾಲಾವೃತ್ತ ॥

ಆಸಭಾಸದರೆಲ್ಲರಚ್ಚರಿಪಟ್ಟು ವಂದಿಸುತಿರ್ದರಾ । ಭೂಸತೀಪತಿಯುಂ ವಿಚಿ
ತ್ರಮಿದೆಂದುಭೀತಿಸಮನ್ವಿತಂ ॥ ದಾಸಭಾವಮನಾಳುತಂ ಶಿವನಾಗಯೋಗಿ
ವರೇಣ್ಯಸುದ್ಭಾಸಿತಾಂಘ್ರಿಸರೋಜಯುಗ್ಮಕೆಮ್ಯೆಯನಿಕ್ಕಿದನಳ್ಕರಿಂ ||೭೮||

ಕಂ|| ಕರಿಕಾಲಚೋಳನೃಪತಿಗೆ । ಪುರರಿಪುಪೊಂಮಳೆಯನಂದುಕರೆ
ಯಿಸಿದಂಮೇ ॥ ಣೆರದಿಂಮುಬಸವರಾಜಂ । ಗುರುತರಪಿಯ್ಯಾಷವರ್ಷಮಂ
ಕರೆಯಿಸಿದಂ .... ||೭೯||

ವ|| ಎಂದುಮತ್ತಮಿರದೆ

ಕಂ|| ಮಲರಹಿತದಿವ್ಯಶಿವಮಯ । ವಿಲಸಿತ ಶುಭಕಾಯನೀಮಹಾ
ಮಹಿಮನೆನು ॥ ತ್ತಲರ್ದುಶಿವನಾಗದೇವನ । ನಲಘುಬುಧರ್ಮಣಿದುಭಕ್ತಿ
ಯಿಂಕೀರ್ತಿಸಿದರ್ .... ||೮೦||

ಕಂ|| ಜಸದಿಂಸೊದೆಯಿಂ ಸೋಲದಿ । ನೆಸೆವೆಸ್ಥೆಸೆಯಾಧರಿತ್ರಿಯಂ
ವಾದಿಮುಖ ॥ ಪ್ರಸರಮುಮನೋರ್ಮೆಯೆಬೆಳ್ಪೇ । ರಿಸಿದಂಗಡಬಸವನೆಸಕ
ಮೇನತಿಶಯಮೊ .... ||೮೧||

ವ|| ಎಂದು ಬಿಜ್ಜಳಂಬಗೆವಂದು ಪೊಗಳುತ್ತಮಿರ್ದನಲ್ಲಿ ಪರವಾದಿ
ಗಳೆಲ್ಲ ನಾಣ್ಚೆತಲೆವಾಗಿ ಕಾರ್ಪಣ್ಯಂದೋರಿ ಕೈಗಳಂಮುಗಿದು

ಚಂ|| ವೃ|| ಪೆರಮರಹಸ್ಯಮೀಮತಮಹತ್ವಮಿದೆಮ್ಮ ಕುಬುದ್ಧಿಗಳ್ಗೆ
ಗೋ । ಚರಿಸುಮೆದೇವಮುನ್ನರಿಯದೆಂದಪ ರಾಧಮನೋರ್ಮೆಸೈರಿಸ ॥

ಜ್ಞರಸಭಿಪಾಸಹೋನರಸಿಕಾಜನಸಮಾಪ್ಯರನೆಮ್ಮನೊಲ್ಮೆಯಿಂ । ಪೊರೆಭವದೀಯದಿವ್ಯಗುಣಮಂಮೆರೆಭಸ್ಯದಯಾಸುಧಾಂಬುಧಿ ॥೮೨॥

ವ॥ ಎಂದು ಶಿವನಾಗದೇವ ನಿದಿರೊಳಿಪ್ಪೊಡನುಟ್ಟು ಸೋರ್ಕಳಿದುಶರಣ್ಬೊಕ್ಕು ಭಯಂಬೇಡುವ ಧರಾಮರರ್ಗಭಯಮುಂದಯೆಗೆಯ್ದು ಪೊರೆದು

ಮ॥ ಸ್ರ॥ ವೃ॥ ವಿಲಸದ್ದಂತಾವಳಸ್ಕಂಧದಮಣಿಮಯಪೀಠಾಗ್ರದೊಳ್ತನ್ನಸಂಪ । ಗ್ಗಳಿಪನ್ನಂಮೂರ್ತಿಗೊಳ್ಪಂತೆಸಗಿಮಿಸುಪನಾಗಾರ್ಯನಂಪಿಂ ತೆತ್ತಾನುಂ ॥ ಕಳೆವೆತ್ತೋರಂತೆಕುಳ್ಳಿರ್ದತುಳವಿಭವದಿಂಮುಂದಿರಂಬೊಕ್ಕಿತನ್ನಂ । ಜುಳಪಾದಾಂಭೋಜಪ್ರಾಜೋತ್ಸವದಿನೆಸೆದ ಸಾನಂದಸಾಂದ್ರಂವೃಷೇಂದ್ರಂ .... ॥೮೩॥

ಕಂ॥ ಕೆಂಬಾವಿಭೋಗಚರಿತವ । ನಿಂಬಾಗಿರೆಪೇಳ್ವಕೇಳ್ವಸುಜನರ್ಗಿಳೆಯೊಳ್ ಸಾಂಬಶಿವನೀವಸತಿಕೃಪೆ । ಯಿಂಬಹುಸುಖಮುಂಗಣೇಂದ್ರಪದಸಂಪದಮುಂ .... ॥೮೪॥

ಕಂ॥ ಕೃಪೆಯೋದ್ಭಟಗುಡ್ಡಂಬಾ । ವಿಪ್ರಳಚರಿತ್ರಮನೊರಲ್ದು ಕೇಳ್ವನರರ್ಗೊ ॥ ಲ್ದಪರಿಮಿತಸುಖಮನೀವಂ । ಕಪರ್ದಿ ಕರುಣಾಳುವೈಹಿಕಾಮುಷ್ಮಿಕಮುಂ ॥೮೫॥

ರಥೋದ್ಧತವೃತ್ತ॥ ಶಿವನಾಗಯೋಗಿಸುಕಥಾಸುಧಾರಸಂ । ಸವಿದರ್ಗೆಮಾಳ್ಕುಮಜರಾಮರತ್ವಮಂ ॥ ಕಿವಿಯುಂದವೊಂದು ಮಿಗೆನಾಣ್ಚಿನಾಕವಂ । ತವೆಸ್ರೋಕ್ಕುಡಂಗಿಮುದುನಿರ್ಜರಾಮೃತಂ ॥೮೬॥

ಲಲಿತಪದವೃತ್ತಂ॥ ಸೋಮಗುರುಪದ್ಮಭವಮುಕವಿರಾಜಗುಣಧಾಮಘನಶಂಕರಸುನಾಮಕೃತಕಾವ್ಯ । ಸ್ತೋಮನುತವೈಭವನಿರರ್ಗಳ ನಿರಾಮಯಮಹಾಮಹಿಮಸಾರವಿಬುಧಾಮರಮಹೀಜ ॥ ವ್ಯೋಮಕಚಸಂಗತಕೃಪಾಮಹಿತ ಚಿತ್ತ ವಿಭುವೇಮನಲಸತ್ಕದಿರರೇಮಹಿತಚರ್ಯ್ಯ । ದ್ದಾಮಘೃತಬಿಜ್ಜಳಜಮನೋಮುದಸುವಾಕ್ಯಪೊರೆ ಕಾಮದ ಪುರಾತನಲಲಾಮಬಸವೇಶಾ ॥೮೭॥

ಮಣಿಗಣನಿಕರವೃತ್ತ॥ ಹರಿವಿಧಿಸುರಪತಿನತಪದವನಜೇ । ಕರತಳಚಳಪಶಿಸೃತಖಿಲದನುಜೇ ॥ ವರವಿತರಣಜಿತದಿವಿಷದವನಿಜೇ । ಪೊರೆಶರಣಜನರನಗಪರತನುಜೇ ॥೮೮॥

ಗದ್ಯ|| ಇದು ವಿನಮದಖಿಳಸುರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತರುಚಿನಿಚ ಯತರುಣಾತಪಪರಿಲಸಿತ ಪರಮ
ಶಿವಲಿಂಗ ಪಾದಾರವಿಂದಪರಾಗ ಭಸಿತ ಭಾಸುರಲಲಾಟ
ಪಟ್ಟಸರಸಜನಮಾನಿ ತೋಭಯಕವಿತಾವಿಶಾರದಶ್ರೀ
ಷಡಕ್ಷರದೇವಭಕ್ತಿವಿರಚಿತ ಶ್ರೀಮದ್ಬಸವರಾಜ
ವಿಜಯಮಹಾ ಪುರಾಣದೊಳ್ ಶಿವನಾಗದೇ
ವಮಹತ್ತ್ವಕಥನಮೇಕೋನಚತ್ವಾರಿಂ
ಶಾಶ್ವಾಸಂ ಪರಿಸಮಾಪ್ತಂ

ವಿಷವಿಹರಣ ಕಥನಂ.

ನಾಂದಿ|| ಲಲಿತಪದವೃತ್ತ|| ಆಹವಸಮಾಗತಸಸಾಹಸಪರಪ್ರಹರ ಬಾಹಗಣನಾಯಕಸಮಾಹಿತಸುಕಾರ್ಯ| ವ್ಯೂಹಪರಿವರ್ಜಿತವಿಮೋಹಭುವನೋತ್ತರಕಟಾಹಬಹಿರಾತತಸುಗೇಹಕೃತವಾಸಾ || ವ್ಯಾಹತಪರೋಕ್ತಿಪರಿವಾಹಬುಧಸನ್ನುತಸದೂಹಸಕಳೀಶಕರುಣೇಹಚರಭಕ್ತ| ಸ್ನೇಹಪರಿಪಾಲಿಸುಸುದೇಹಪರಮೇಶ್ವರಮನೋಹರಗುಣಾಭರಣವಾಹಬಸವೇಶ ||

ಕಂ|| ಶ್ರೀರುಚಿರಗಿರಿಸುತಾಕಚ| ಭಾರಪಯೋಧರಮಯೂರನನುಪಮಸುಗುಣಾ || ಧಾರನಘದೂರನತಿಗಂ| ಭೀರಂಪ್ರೋರೆಗೆಮ್ಮನಾವಗಂ ಶಿವಲಿಂಗಂ ||೧||

ಮ|| ಸ್ರ|| ವೃ|| ಘನಮೂಢಧ್ವಾಂತವಿಧ್ವಂಸನಖರಕಿರಣಂ ಪಾಂಚರಾತ್ರೋರ್ವೀಭೃದ್ಭೇ| ದನಶಂಬಂ ಚಂಡಜೈನಪ್ರಕಟಕರಟಿಕಂಠೀರವಂ ದುಷ್ಟಚಾರ್ವಾ|| ಕನಗೆಪ್ರೋದ್ಯತ್ಕುಠಾರಂ ಕುಟಿಲಮತಿಯುತಾಬದ್ಧಬೌದ್ಧಾವಳೀಕಾ| ನನದಾವಂ ದೃಪ್ಯದದ್ವೈತಮತಜಲದಜಂ ಝಾನಿಲಂಶ್ರೀವೃಷೇಂದ್ರಂ ||೨||

ಲಲಿತಪದವೃತ್ತ|| ಓರ್ಮೆಚರಪೂಜನದಿ ನೋರ್ಮೆಹರನರ್ಚನೆಯಿನೋರ್ಮೆಶಿವಮಂತ್ರಜಪದುಜ್ಜುಗದನಣ್ಪಿಂ || ದೋರ್ಮೆ ಗಣಸೇವನೆಯಿನೋರ್ಮೆವೃಡಭಾವನೆಯಿನೊರ್ಮೆಚರಪಾದಜಲಸೇಚನೆಯುಲಂಪಿಂ || ದೋರ್ಮೆಪರಭಂಜನದಿನೋರ್ಮೆ ಗಣರಂಜನದಿ ನೋರ್ಮೆಶಿವಸತ್ಕಥೆಯನಾಲಿಸುವ

ಪೆಂಪಿಂ | ದೋರ್ಪೆ ಚತುಷ್ಷಷ್ಟಿಗಳಿಸೋರ್ಪೆ ಗಣಗೋಷ್ಠಿಗೆ ಸೋರ್ಪೆ ಶಿ
ವಗೀತರಸದಿಂ ಮೆರೆಯುತಿರ್ದಂ ||೩||

ಕಂ|| ಅನುದಿನಮಿಂತೆಸೆಯುತೆ ಜನ | ಪನಸಭೆಯೊಳ್ಗೆಲ್ದು ವಾದಿಸು
ವವಾದಿಗಳಂ || ಘನದೃಷ್ಟಪ್ರತ್ಯಯಮಂ | ಮನದೊಲವಿಂ ತೋರಿಜಯಮ
ನಾಳ್ದೊಪ್ಪಿರ್ದಂ ||೪||

ಕಂ|| ಶರಣರಚಿಂತಾಮಣಿ ಸ | ತ್ಪುರುಷರಸುರಧೇನು ಬುಧರಭಾ
ಗ್ಯೋದಯ ಮು || ರ್ವರೆಯುಪೊಸಸ್ವೈಪು ಭಕ್ತರ | ವರಸಿಧಿ ಭಾವಕರಮು
ಕುರಮಾವೃಷಭೇಂದ್ರಂ ||೫||

ಚಂ|| ವೃ|| ನೆನೆದನೆ ದೇವನೀಕ್ಷಿಸಿದನೇದಿವಿಷತ್ಪತಿತತ್ಪದಾಂಬುಜ |
ಕ್ಕನುನಯದಿಂದೆ ಬಂದೆರಗಿದಾತನೆ ಸಿದ್ಧನಲಂಪುವೆತ್ತು ಕೀ || ರ್ತನೆಯ
ನೊಡರ್ಚಿದಾತನೆ ಗಣಾಗ್ರಣಿ ತತ್ಕರುಣಾದ್ರ್ರನೇತ್ರಪಾ | ವನರುಚಿಯಂಕ
ರಂಪಡೆದನೇಸಿಜಮುಕ್ತನಕೇಷಲೋಕದೊಳ್ ||೬||

ವ|| ಎಂಬ ಸದ್ವೃತಪ್ರಶಸ್ತಿಗಡಪಾರ್ಗಿ ಮಹಿಮಾಕರರಂಜಿಸಿರೆ ಮ
ತ್ತಮಾಕಲ್ಯಾಣಕಟಕದಲ್ಲಿ.

ಕಂ|| ಕರುಣಾಳುಗಳನಘರ್ಗು ರು | ಚರಶಿವಲಿಂಗೈಕನಿಷ್ಠರಮಳಿನ
ಭಾವ || ರ್ಪರಮತಜಯಶೀಲ ಭಾರ್ಪ | ಸುರಗುಣರಪ್ರತಿಮವಿಭವರಭವ
ನಶರಣರ್ ||೭||

ಮತ್ತಮಲ್ಲಿ| ಮಾಚಯ್ಯಂಕೇಶಿ ರಾಜಂ ಮೊರಟದಕಲಿಬಂಕಯ್ಯ
ನಾಮದ್ರುದೇವಂ | ಕಾಚಯ್ಯಂಮಾಯಿಭಟಂವಿಮಳಕದಿರರೇಮಯ್ಯನುಂ
ಕಿನ್ನರಯ್ಯಂ || ಬಾಚಯ್ಯಂಮಲ್ಲಿನಾಥಂಮಧುವರಸನುಮಾದಯ್ಯನುಂಗೋ
ಣಿಮಾರಂ | ಬಿಜ್ಜಯ್ಯಂಭೋಗಿದೇವಂಕಲಿಗೆಲಸದ ಸೋವಣ್ಣನಾಮಾದಿ
ರಾಜಂ .... ||೮||

ಮಲ್ಲಿಕಾಮಾಲಾವೃತ್ತ || ಗಂಡುಗತ್ತರಿನಾಚಸಲ್ಲಮದೇವನರ್ಘ್ಯದ
ಹೊನ್ನಯಂ | ಮುಂಡುಬೊಂಮಯನಪ್ಪಿದೇವನಘಾತ್ಯಮಲ್ಲಯನೈಚಯಂ
ಮಿಂಡಬೊಂಮಯನಜ್ಜದಾಸಯನಾರ್ಯಮಂಕಲಕೇತಯಂ | ಪಂಡಿತಯ್ಯ
ನುಮುತ್ತಮಾಂಗದಕೆಸಿಜಾದರದಾಸಯಂ ||೯||

ಕಂ || ಲಕ್ಕಯ್ಯಂಕಲಿದೋಹರ | ಕಕ್ಕಯ್ಯಂಕಲ್ಲಿದೇವಸುದರದ

ರಾಮುಂ ‖ ಚಿಕ್ಕಯ್ಯಂಧೂರ್ಜಟಿಯಾ । ಯ್ದಕ್ಕಿಯಮಾರಯ್ಯನುರಗೆರಾ
ಯಂಧವಳಂ ‖೧೦‖

ಕಂ‖ ಸುರಗಿಯಚೌಡಯ್ಯಂಮಾ । ದರದೂಡಯ್ಯಂತೆಲುಂಗಜೊಂ
ಮಯ್ಯಂಡಿಂ ‖ ಗರಿಮಲ್ಲಯ್ಯಂಕಾಲಾ । ಗ್ನಿರುದ್ರನೇಕಾಂತರಾಮುಯುಂಕ
ಪಿಲೇಶಂ .... ‖೧೧‖

ಕಂ‖ ಶಿವರಾತ್ರಿಯಸಂಕಂಣಂ । ಕವಿಲೆಯಬೊಮ್ಮಯ್ಯನವರಗುಂ
ಡದೇವಂ ‖ ಚವರದಚಿಕ್ಕಯ್ಯಂಪ । ಲ್ಲವ ರಾಯುಂಸಿಂಗಿಬೊಪ್ಪಯುಂ
ಶಿವದೇವಂ ‖೧೨‖

ಚಂ‖ ವೃ ‖ ಪಡಿಯರರುತ್ತ್ರಯುಂಮೊರಸವೇಮುಯುಸಂಕದವೀರಸಂ
ಗಯುಂ । ಬಡವರಬೊಂಮುಯುಂಸಗೆಯಮಾರಯನುಂ ಗಣದಾಸಭೀಮು
ಯುಂ ‖ ನಿಡುಗುಡಿಮಾರ ನಂಬಿಗರಚೌಡಯು ನಿಂಡೆಯಬೊಮ್ಮನಪ್ಪಯುಂ ।
ಗೊಡಲದಮಲ್ಲಯುಂ ಬೆರಲಮಾರಯನೆಳ್ಚರಮುಕ್ತ್ರಯಾಹ್ವಯುಂ ‖೧೪‖

ಕಂ‖ ಮುಸುಡಿಯಚೌಡಯ್ಯಂಬಾ । ಣಸಭೀಮಯ್ಯಂ ನಿರಾಳದೇ
ವಂ ಶಾಂತಂ ‖ ದಸರಯ್ಯಂಗೊಗ್ಗಯ್ಯಂ । ಮುಸಣಯ್ಯಂ ಮಲ್ಲಿನಾಥನಿಂ
ಡೆಯಶಾಂತ್ರಂ ‖೧೪‖

ಕಂ‖ ಕೂಗಿನಮಾರಯ್ಯಂ ಶಿವ । ನಾಗಯ್ಯಂ ಶಂಕರಯ್ಯನಡಪದ
ರೇಚಂ ‖ ರಾಗದಮಾರಂವೀರಂ । ಯೋಗೆದಶಾಂತಯ್ಯನನೃತನಾಥಂ
ಸಕಳಂ .... ‖೧೫‖

ಕಂ‖ ಶಂಕರದಾಸಂ ಸುಂಕದ । ಬಂಕಯ್ಯಂ ಕನ್ನಬೊಂಮುನೇಲೇ
ಶ್ವರ ಕೇ ‖ ತಂಕಾಳಿಮರಸನುಂ ಶಿವ । ಲೆಂಕಯ್ಯಂ ನುಲಿಯಚಂದಯುಂ
ಗಣನಾಥಂ ‖೧೬‖

ಮ‖ ಸ್ರ‖ ವೃ‖ ಗುರುಭಕ್ತ್ರಂ ಗೋಡೆಮಲ್ಲಂ ಧರಣಿಯರಸನುಂಮುಂ
ಚಣಂಪೋತಿದೇವಂ । ಕರವಾಳಬ್ರಹ್ಮದೇವಂ ಸಗರದಕಲಿನಾಚಯ್ಯನುಂ
ರೇವಯುಂಭಾ ‖ ಸ್ಕರದೇವಂ ಜಟ್ಟಮಾರಂ ಸುಗುಣಿಸಿಗುರುಚಂದಯ್ಯನುಂ
ರಾಮುಯುಂ ಶ್ರೀ । ಗಿರಿನಾಥಂವಿಶ್ವನಾಥಂ ಶಿಖರದ್ಧರಸಮಲ್ಲಯ್ಯನಾರಾ
ಚನುಲ್ಲಂ .... ‖೧೭‖

ಕಂ‖ ಪರಮರುಳಶಂಕರಂ ಜೋ । ಧರಸಾಯಣ್ಣಂ ದಯಾಳುಮೋ

ಳಿಗೆನಾರಂ ‖ ಗುರುಲಿಂಗಯ್ಯಂಸುದ್ದಯ । ಸುರುಲಿಂಗಂ ಪೆದ್ದಿಕೊಡ್ಡಳ
ಬಾಚಯ್ಯಂ ‖೧೮‖

ಕಂ‖ ಆನಘರಿಪಮೋದಳ್ಪಾದತಿ । ಘನಸುಹಿಮರ್ಭಕ್ತ ಚರಿತದೆಳ್ತ
ರದಿರವಂ ‖ ದಿನದಿನಮುವಿಾಕ್ಷಿಸುತೆಪಂ । ಪಿಸಮುದಮಂತಾಳ್ದುಸುಖದಿ
ನೊಪ್ಪುತ್ತಿರ್ದರ್ ‖೧೯‖

ಕಂ‖ ಪರಮಶಿವಲೋಕಸುಖದಿಂ । ಪಿರಿದೀಸುಖಮೆಂದು ಪಾಣ
ದಾತರಣಸಮು ‖ ತ್ಕರದೊಡನಾಡುತೆಪಾಡುತೆ । ವರಭಕ್ತಿಸುಧಾಬ್ಧಿರಂಜಿ
ಸಿರ್ದಂಬಸವಂ ‖೨೦‖

ವ‖ ಇಂತು ಶರಣರ್ಸುಖಮಿರ್ಪಿನಮಲ್ಲಿ ಪೆರತೊಂದುದೆವಸಂ.

ಕಂ‖ ಪಂಡಿತವರ್ಯರ್ಭಸಿತ ಸು । ಮಂಡಿತರುದ್ರಾಕ್ಷಭೂಷಿತಾಂಗ
ಗಿರಿಕೋೞ ‖ ದಂಡಸ್ತುತಿಪಾಠಕರು । ದ್ದಂಡರ್ಪಂಡೇಶ್ವರಾಜಸರ್ವಾಕ್ಷ
ಟುಗಳ್ .... ‖೨೧‖

ಕಂ‖ ಪರಮಶ್ರೀಕಂಠಶಿವ । ಗುರುಲಿಂಗಶಿವರ್ಮಹೇಶಶಿವರತಿಬಳ
ಶಂ ‖ ಕರಶಿವರಿನಶಿವ । ಗಿರಿಶಶಿವಲೋಕನಾಥಶಿವರೀಶಶಿವರ್ ‖೨೨‖

ಕಂ‖ ವರಪಶುಪತಿಶಿವರಂಗೆಜ । ಹರಶಿವರಾನೀಲಕಂಠಶಿವರುಂಗಂ
ಗಾ ‖ ಧರಶಿವರುದ್ರಾಂಬಕಶಿವ । ರುರುಸದ್ಯೋಜಾತಮೂರ್ತಿಶಿವರಭವ
ಶಿವರ್ .... ‖೨೩‖

ಚಂ‖ ವೃ‖ ಹರಶಿವರುಂತ್ರಿಲೋಚನಶಿವರ್ಪರಮಾತ್ಮಶಿವರ್ಶಶಾಂ
ಕಶೇ । ಖರಶಿವರಧ್ವರಾರಿಶಿವರಂಚತಶಂಭುಶಿವರ್ಗಜಾಜಿನಾಂ । ಬರಶಿವರ
ಧ್ವನಾಥಶಿವರುಷ್ಯದಘೋರಶಿವರ್ಕೃತಾಂತಸಂ । ಹರಶಿವರುಗ್ರಭೂತಿಶಿವರಂ
ಧಕವೈರಿಶಿವರ್ಮಹಾಶಿವರ್ ‖೨೪‖

ಕಂ‖ ಪರಮಾನಂದಶಿವರ್ತ । ತ್ಪುರುಷಶಿವರ್ವಾಮದೇವಶಿವರಮಳ
ಶಿವ ‖ ಪುರರಿಪುಶಿವರಘಹರಶಿವ । ರುರುನಿಷ್ಕಲಶಿವರಜಾತಶಿವರಮೃತ
ಶಿವರ್ .... ‖೧೫‖

ವ‖ ಎಂಬಿವ್ರ ಪೋಪಲಾದ ಶೈವಶಾಸನಧರರೆಲ್ಲರ್ನೆರೆದು ಬಿಜ್ಜಳೇಂ
ದ್ರ ನೆಪೆಗೇಳ್ತಂದು ಸಂದಣಿಸಿನಿಂದು ‖

ಕಂ‖ ಮಾನವಪತಿಕೇಳ್ಪರ್ಮಯ । ಕೋನಿಧಿ ನೀನರಸುಗೆಯ್ವ ಕಾ

ಲದೊಳೊದವಿ ॥ ತ್ರಿನಗರದೊಳನ್ಯಾಯಮು । ನೂನಮಿದಂನೀನೆನೆರೆವಿ
ಚಾರಿಪುದೀಗಳ್ ॥ .... ॥೨೬॥

ಕಂ॥ ಧರೆಯೊಳಗೆಸಲ್ವುದೆಮಗೀ । ಪುರಹರನಘನಪ್ರಸಾದಮೆಂಮು
ಯಚಂಡೇ ॥ ಶ್ವರನಿದನೀಶ್ವರಕಟಕದೊ । ಳಿರದಂದೆಮಗಿತ್ತನೆಂಮಸೊಂ
ಮಿದುನೃಪತೀ ॥ .... ॥೨೭॥

ವ॥ವೃ॥ ಪರಮಬ್ರಾಹ್ಮಣನಿಂದೆಪುಟ್ಟದನವಂ ಚಂಡೇಶ್ವರಂ ಚಂಡ
ಭಾ।ಸ್ಕರತೇಜಂ ಜನಕಾಜ್ಞೆಯಿಂ ಪಶುಗಳಂ ತಾಂಕಾಯ್ದುತಿರ್ದಳ್ಕರೊಂ॥
ದಿರೆ ಭಾಸ್ವತ್ತಟನೀತಟಂಬಿಡಿದು, ಬಾದೋರಂತೆ ತದ್ವಾಲುಕೋ । ತ್ಕರ
ದಿಂ ನಿರ್ಮಿಸಿಲಿಂಗಮುಂಕರೆವನಾ ಗೋವೃಂದದೊಳ್ಪಾಲ್ಗಳಂ ॥೨೮॥

ವ॥ ಅಂತೆ ಕರೆದಾಲಿಂಗಕ್ಕಭಿಷೇಕಂಗೆಯ್ದು ಪೂಜಿಸುತ್ತ ಮಿರ್ಪನ
ಮೊಂದುದಿನಂ ಜನಕನಲ್ಲಿಗೇಳ್ತಂದುಕಂಡುಸೈರಿಸಲಾರದೆ ॥

ಕಂ॥ ಮದದಿಂದ್ವಿಜನಾಲಿಂಗಮ । ನೊದೆಯೆ ಕರಂಕಂಡುಕಾಯ್ದು
ಕೈಗೊಡಲಿಯಿನಾ ॥ ದ್ಮಿದರುತ್ತಂಕೆಡೆಕೆಡೆಯೆನು ॥ ತಥಟಂತಲೆಗಡಿದು
ರುಳ್ಚಿದಂ ನಿಜಪಿತನಂ ॥ .... ॥೨೯॥

ಕಂ॥ ಸುರಿದುದುಪೂಮಳೆ ಸುರಪಟ । ಹರವಂಪೊಣ್ಮಿದುದು ಮಚಿ
ಮನನೊಲ್ದು ಮಹೇ ॥ ಶ್ವರನಾಗಳ್ನಿಜರೂಪಂ । ಧರಿಯಿಸಿಗಿರಿಜಾಸಮೇತ
ನೀಕ್ಷಿಸಿದಯೆಯಿಂ ॥ .... ॥೩೦॥

ಕಂ॥ ದಂಡಪ್ರಣಾಮಮೆಸಗಿದ । ಚಂಡೇಶಂಗಿಂದಿರೇಂದ್ರವಾಣೀ
ರಮಣಾ ॥ ಖಂಡಲದುರ್ಲಭಮೆನಿಸುವ ॥ ಖಂಡರುಚಿನಿಜಪ್ರಸಾದಮಂ
ಕರುಣಿಸಿದಂ ॥ .... ॥೩೧॥

ವ॥ ತತ್ಪ್ರಸಾದಾಸ್ವಾದನ ಜನಿತಘನಮಹತ್ವದಿಂ ಹರಿಚತುರ್ಮು
ಖಮುಖ್ಯಹವಿರ್ಮುಖರಿಂ, ವಂದ್ಯಮಾನನಾದ ಚಂಡೇಶ್ವರನ ರೋಮಾಂ
ಚಕಂಚುಕಿತಾಂಗದ ರೋಮಕೂಪಂಗಳಿನದ್ಭುತಮಾಗೆ ಕೆಲಂಬರ್ಗಣಂಗ
ಳೊಗೆದುಲಲಿತಪದಪ್ರಸನ್ನ ಸಂದರ್ಭಪ್ರೌಢ ಚಿತ್ರಾರ್ಥಗರ್ಭಿತಗದ್ಯಪದ್ಯಂ
ಗಳಿಂಪೊಗಳೆ ಸಂತುಷ್ಟನಾಗಿ. ಹರದತ್ತನಿಜಪ್ರಸಾದಮನವರ್ಗೆ ಚಂಡೇಶನಿ
ತ್ತನಸಂತರಂ ॥

ಕಂ॥ ತನ್ನಂಪೊಗಳ್ವನಿತರೊಳವ । ರುನ್ನತವಾಕ್ಪಟುತೆಗೊಲ್ದುನಿಜ

ವಂದಿತೆಯುಂ ॥ ಪನ್ನಗಭರಣಂಕರುಣಿಸಿ । ದಂ ನಿಜಮುಂದಿಂದೆಶಿವನಸಮಂ
ದಿಗಳಾದರ್ ॥ .... ॥೩೨॥

ಕಂ॥ ಶಿವನವರ್ಗೆಮತ್ತಮಿತ್ತಂ । ಜನದಿಂಪುರಗೇಹಲಿಂಗಭಜಕತ್ವ
ಮನೊ ॥ ಪ್ಪುವಕಾಳೀಗಣಪತಿಭೈ । ರವರಂಪೂಜಿಸುವಕಜ್ಜಮುಮನೆಲ್ಲಿ
ಡೆಯೊಳ್ ॥ .... ॥೩೩॥

ಕಂ॥ ಜನಿಯಿಸಿದೆವವರಸಂಕರದಿ । ನೆನಸುಂಕೇಳವರಿನೆಮ್ಮ ಸೊಂಮ
ಪ್ಪುದುಮಾ ॥ ವನಿತರಶಿವಪ್ರಸಾದಂ । ಮನುಜಾಧಿಪವೀರಶೈವರೀಪುರವ
ರದೊಳ್ ॥ .... ॥೩೪॥

ಕಂ॥ ಕೊಡದೆಮಗೆತಾವೆಭುಂಜಿಪ । ರಿಡೆಯುಡುಗದೆಬಿಜ್ಜಳೇಂದ್ರ
ಬಸವನಬಲದಿಂ ॥ ಸುಡಿಯಲರಿದೆಮಗೆ ಭಕ್ತರ । ಕಡುಬಿಂಕಮನಿಂದು
ನೀನೆಕುಡಿಸೆನೆಜನಸಮಂ ॥ .... ॥೩೫॥

ವ॥ ಇಂತೆನಲರಸಂ ಬಸವರಸನಾನನಮಂ ನಿರೀಕ್ಷಿಸುತ್ತ ಮಿವರ
ಸೊಮ್ಮಪ್ಪಶಿವಪ್ರಸಾದಮನಿವರ್ಗಿಯ್ಯದೆ ನೀವೆಭುಂಜಿಪುದನ್ಯಾಯಮೆಂಬು
ದುಮಾವೃಷಭೇಂದ್ರನಾ ಚಂಡಪುತ್ರರ್ಗಭಿಮುಖನಾಗಿ ॥

ಉ॥ವೃ॥ ಚಂಡಕುಲಪ್ರಭೂತರಿರ ಕೇಳಿರೆನಿಮ್ಮಯಶೌರ್ಯಮಿರ್ಕೆಭೂ।
ಮಂಡಲದೊಳ್ಪರಾಮರಮುನಿಪ್ರವರಾಬ್ಜಭವಪ್ರತಿಷ್ಠಿತೋ ॥ ದ್ದಂಡಗಿರೀ
ಶಲಿಂಗತತಿಯೊಳ್ಸಲಿಸಲ್ಕುದು ತತ್ಪ್ರಸಾದಮಾ । ಚಂಡಗಣೇಶ್ವರಂ ಗುಳಿ
ದಲಿಂಗಸಮೂಹದೊಳೆಂತುಸಲ್ವುದೋ ॥ .... ॥೩೬॥

ಕಂ॥ ಚರಲಿಂಗಬಾಣಲಿಂಗ । ಸ್ಫುರಿತಸುವರ್ಣಾದಿಲಿಂಗಮಣಿಲಿಂ
ಗೆಸಮು ॥ ತ್ಕರದೊಳ್ಸ್ವಯಂಭುವಿನೊಳಂ । ದೊರೆಯದುಚಂಡಂಗೆತ
ತ್ಪ್ರಸಾದವಿಭುತ್ವಂ ॥ .... ॥೩೭॥

ಶ್ಲೋ॥ ಬಾಣಲಿಂಗೇಚರೇಲೋಹೇ।ರತ್ನಲಿಂಗೇಸ್ವಯಂಭುವಿ । ಪ್ರತಿ
ಮಾಸುಚಸರ್ವಾಸು । ನಚಂಡೋಧಿಕೃತೋಭವೇತ್ ॥ ॥೩೮॥

ವ॥ ಇಂತೆಂಬ ಶೈವಾಗಮ ವಚನಮಿದರೊಳ್ಪವಣ ಮಿದುಕಾರಣ
ಮಾವೆಡೆಯೊಳ್ ಚಂಡಂಗಧಿಕಾರಮಾಯೆಡೆಯೊಳ್ನಿಮಗೆ ಶಿವಪ್ರಸಾದಂ ಸ
ಲ್ಗುಮುಳಿದೆಡೆಯೊಳೆಂತುಂಸಲ್ಲದೆನೆ ಚಂಡಪುತ್ರರವಕ್ಕೆ ಮಾರ್ಕೊಂಡು ॥

ಕಂ॥ ದಾಕ್ಷಾರಾಮಶ್ರೀಗಿರಿ । ಲಕ್ಷಿತಕಾಂಚೀಲಸಚ್ಚಿದಂಬರಪುರ

ಮು ॥ ಖ್ಯಕ್ಷೇತ್ರಂಗಳೊಳಿಪುಗ । ಧ್ಯಕ್ಷತೆಯೊಳವೀಶಶೇಷಭೋಜನವಿ
ಧಿಯೊಳ್ ॥ .... ॥೩೮॥

ಮ॥ ಸ್ರ॥ ವೃ॥ ಅವರಿಂಸಲ್ಗುಂಪೊದಳ್ದಿಲ್ಲಿಡೆಯೊಳಿಮಗೆ ಲಿಂಗಪ್ರ
ಸಾದಂಭವಲ್ಲಿಂ । ಗೆದಶೇಷಂ ಸಲ್ಲದೇಂ ಪೋಕುಮೆ ಬಸನಬಲಾತ್ಕಾರದಿಂ
ದೆಮಸೊಂಪು ॥ ಪ್ಪುದನಿಂದೋರಂತೆನೀನಿಯ್ಯದೊಡೆ ಬಿಡುವೆವೀಪ್ರಾಣ
ಮಂ ಮಾಣದೆಂದಾ । ಡಿದರಾಮಾತಿಂಗೆತಾಂಮಾರ್ನುಡಿದನಭವಸಿದ್ಧಾಂ
ತವಿದ್ಯಾಂತರಂಗಂ ॥ .... ॥೩೯॥

ಕಂ॥ ನ್ಯಾಯಮಿದಿಲ್ಲದೆಬಿಟ್ಟಪಿ । ರಾಯುವನೆಂತಮಮ ನಿಮ್ಮಬಿ
ರುನುಡಿಗಳ್ಕಂ ॥ ಮಾಯಾರಿಶರಣನುಚಿತ । ನ್ಯಾಯಪರಂಗಾಳಿಯಲೆಯೆಗಿರಿ
ಚಲಿಯಿಕುಮೇ ॥ .... ॥೪೦॥

ಕಂ॥ ನಯಮಿದುಶಾಸ್ತ್ರಾನುಭವ । ದ್ವಯದೊಳವೊಂದರೊಳಿಸಿದ್ಧ
ಮಾದರ್ಥದೊಳಾ ॥ ರಯೆವರ್ತಿಪಬಗೆಯುದನುಳಿ । ದಯಥಾರ್ಥಂಬಿಡಿ
ದೊಡವನೆನಿಂದ್ಯಂಥರೆಯೊಳ್ ॥ .... ॥೪೧॥

ಕಂ॥ ಪೇಳಿರೆಶಾಸ್ತ್ರಮದುಳ್ಳೊಡೆ । ಪಾಳಿಯಿನನುಭವಮೆ ಪವಣ
ಮೆಂಬೊಡೆ ನಿಮಗಾ ॥ ಭಾಳೇಕ್ಷಣಪ್ರಸಾದಮ । ನಾಳೋಚಿಸದಿತ್ತವೀ
ರಮಾಹೇಶ್ವರರಾರ್ ॥ .... ॥೪೨॥

ಕಂ॥ ನಿಯಮಮಮರೆ ತೋರಿಶಾಸ್ತ್ರೋ । ಕ್ತಿಯೊಳಾದೊಡಮನು
ಭವಾಪ್ತಿಯಿಂದಾದೊಡಮಂ ॥ ನೆಯಮಿಲ್ಲದೆಕೊಳ್ವುದು ಸಂ । ಶಯ
ಮುಳಿದುಮದೀಯಲಿಂಗಶೇಷಮಂನೀಗಳ್ ॥ ॥೪೩॥

ಕಂ ॥ ಸುಮ್ಮನೆಕೊಂಡಪೆವೆನೆ ಕೊಡೆ । ವೆಮ್ಮಯಲಿಂಗಪ್ರಸಾದ
ಮಂನಿಮಗೆವಲಂ ॥ ತಿಮ್ಮಸಪರಸನೆಯೆಸಕಮ । ದೆಂಮ್ಮೊಡನೇಕಿನಿತುಬಿ
ಡಿಮಿದೇತರಬಿಂಕಂ ॥ .... ॥೪೪॥

ಉ ॥ ವೃ ॥ ಏತರದಿಂದಮಾದೊ ಡಮುಮಾಧಿಪಲಿಂಗದಸುಪ್ರಸಾದ
ಮಂ । ನೀತಿಯದಿಲ್ಲದುಣ್ಬೆವೆನುತಾಗ್ರಹಮಂ ಪಿಡಿದಪ್ಪರಪ್ಪೊಡೇಂ ॥ ಮಾ
ತೊಪುರಾರಿಗುಗ್ರಗರಮಂಪದೆದರ್ಪಿಸೆನಂತದಂಮನಃ । ಪ್ರೀತಿಯೊಳುಣ್ಬ
ದೀಗಳೆನೆಕೇಳ್ದತಿರೋಷಮನಾಳ್ದರಾದ್ವಿಜರ್ ॥೪೫॥

ವ॥ ಅಂತು ರೋಷಾನ್ವಿತ ಹೃದಯರಾಗಿ.

ಕಂ॥ ಅರಿದರಿದುನಿನ್ನನುಡಿಗ ಳ। ಪರಿಯೆಮ್ಮೊಳ್ಬಸವಲೇಸನಾಡಿದೆ

ನೀಂ ದಿ ॥ ವ್ಯರಸಾಮೃತಾಂನಮುಂಕೊಂ । ಡಿರದೆಮಗಿಂದೇಪೆಗೆಡಮೃಡಾ
ರ್ಪಿತವಿಷಮುಂ ॥೪೬॥

ಕಂ॥ ಪರಮೇಶ್ವರಪ್ರಸಾದಮ । ನೆರೆದಪರಿಪಕ್ಕಿಂದುಪಾಯದಿಂದೆಂ
ಮುನ್ನಿ ॥ ಷ್ಮುರವಿಷಮನಿಕ್ಕಿಕೊಲಲರೋ । ಸರಿಸದೆನೀಂ ನೆನೆದೆನಿನ್ನಬಗೆಪ್ರೊ
ಸತಲ್ತಿ ॥ .... ॥೪೭॥

ಕಂ ॥ ಎಮಗೇಪಶಿವಾರ್ಪಿತಗರ । ಳಮನೀಗಳ್ನೀಮೆಕೊಂಡುಬಾ
ಳ್ದೊಡೆಗೆಲ್ಲಂ ॥ ನಿಮುಗೆಕ್ಕುಮೆಮಗೆಸೋಲಂ । ಸಮನಿಪ್ಪುದಿದೇಪ್ರಮಾಣ
ಮುಮಗಂನಿಮಗಂ ॥ .... ॥೪೯॥

ವ॥ ಎನೆಕೇಳ್ದು ಮಹಿಮಾಕರನಂತೆಮಾಳ್ಪೆ ನಿದಾವಗಹನಮೆಂದರಸ
ನಂ ಸಾಕ್ಷಿಗೆಯ್ದಲ್ಲಿಂದೇಳ್ದು ಸಡಗರಂಮಿಗೆ ಭಕ್ತಗಣಪರಿವೃತಂ ಸಂಗ
ಮೇಶ್ವರನೆಮುಂದಿರಪ ಬಹಿರ್ದ್ವಾರಮುಂಟಪಕ್ಕೇಳ್ತಂದಾಗಳ್ ॥

ಕಂ॥ ಶರಣರಬಿರುದಂಪಾಡಿಸು । ತುರುತರವೈಭವದಿತಂಮುಚರಲಿಂಗ
ನಮು ॥ ತ್ಕರದೊಡನೆಬಂದರೆಂದೇ । ಳ್ತರದಿನಸಂಖ್ಯಾತಭಕ್ತರತಿಸಂ
ಭ್ರಮದಿಂ ॥ ॥೪೯॥

ವ॥ ಅಂತೇಳ್ತಂದಭಕ್ತರ್ಗೆ ಭಕ್ತಿಯಿಂಮಣಿದು ಬಸವರಸಂ ಪರ
ಮೋತ್ಸವದಿಂ ಮೂರ್ತಿಗೊಳಿಸಿ ಸತ್ಕ್ರಿಯೆಗಳಂ ನೆಗಳ್ದುತಿರ್ಪಿನಮಲ್ಲಿ॥

ವಿಶತಾದ್ಭುತಮತಿಬಿಜ್ಜಳ । ನತಿಶಯಸಾಮಂತ ರಾಜಸುತಸಟಿನ
ಪುರೋ ॥ ಹಿತಯುತನೇಳ್ತಂದದರ್ಗಂ । ಪ್ರತಿಪಾದಿಕಪಂಬಮೆಯ್ದೆವಂದ
ತ್ತಾಗಳ್ ॥ .... ॥೫೦॥

ಉ॥ವೃ॥ ವೀರಕವೀರಭದ್ರಪ್ರಮುಖಪ್ರಮಥಪ್ರಕ ರಾನ್ವಿತಂಮನೊ।
ಜಾರಿನಗೇಂದ್ರಪುತ್ರಿಯೊಡನಂಬರದೊಳ್ಬಗೆಗೊಂಡು ಸಾರತೇ ॥ ಜೋರಮ
ಣೀಯ ದಿವ್ಯಮಣಿಪುಷ್ಪಕದೊಳ್ನೆಲಸಿರ್ದುಭಕ್ತವಿ । ಸ್ತಾರಮಹತ್ವವೀಕ್ಷ
ಣಸಮುತ್ಸುಕನೊಪ್ಪಿರೆದೇವಸೇವಿತಂ॥ ॥೫೧॥

ಕ ॥ ಪರಿಜನಮುಂಪುರಜನಮುಂ । ನೆರೆದೀಕ್ಷಿಸೆಕನಕರೌಪ್ಯತಾಂ
ಮ್ರಾದಿಮಕೊ ॥ ಪ್ಪರಿಗೆಗಳನಗಣಿತಂಗಳ । ನಿರದಲ್ಲಿಗೆತರಿಸಿಬಸವನಚ
ರರಿಂದಂ ॥ .... ॥೫೨॥

ಕಂ॥ ಕುಳಿಕನತಕ್ಷಕನಮುಹಾ ।ಖಳಕರ್ಕೋಟಕನಘೋರತರವಿಷದಿಂದ
ಗ್ಗಳಮೆನಿಪಕಾಲಕೂಟಂ । ಗಳ ನನಿಬಂನೆನೆಮುಬರಿಸಿಪಿರಸುತ್ತಮರೊಳ್ ॥

ಮ|| ಸ್ರ|| ವೃ|| ಭರದಿಂದವತ್ಸನಾಭಿಪ್ರಮುಖಬಹುವಿಷವ್ರಾತಮಂ
ಕೂಡಿ ಸರ್ವೋ| ರ್ವರೆಗೆತ್ತ್ಯಾಶ್ಚರ್ಯಮಂತಾನೆಸಗುತರೆಯಿಸುತ್ತಿರ್ದನಾವೇ
ಳೆಯೊಳ್ತ || ದ್ಗರಳಾಭೀಳಸ್ಫುರತ್ಸಾರಭವಮಲೆಯೆಧರಾಜೀವಿಗಳ್ಜೀವಮಂ
ಬಿ | ಟ್ಟರದೆಂತಂಪಕ್ಷಿವೃಂದಂಕೆಡೆದಸುಗೆಳೆದತ್ತಭೃದಿಂಪೇಳ್ವೆನೇನಂ ||
ಕಂ||ಗರಳಮುಸರಿವನವರ್ಕಳ | ಕರುಳದುಕಡಿಖಂಡಮಾಗಿಪಡಲಿಡೆಪಿರಿದ||
ಚ್ಚರಿಪಟ್ಟದನಾಂಪರದಾ| ರ್ಧರೆಯೊಳೆನುತ್ತಗಿದುಕೆಲಕೆಜಗುಳ್ದರ್ಶೈರ್ವರ್ ||
ವ|| ಆಗಳಾಭೀಕರಾಕಾರವಿಷಮುಂಬಸವಂ ತೈಲರಸದೊಳ್ಪಿರಿದುಂ
ಮುರ್ದಿಸಿ ಕೂಷ್ಮಾಡಪರಿಮಾಣಕಬಳಂಗೆಯ್ದು ಕಟಾಹಂಗಳೊಳ್ಪ್ರತ್ಯೇಕ
ವಿರಿಸಿ ಮುಗುಳ್ದುತೈಲಂ ಬೊಯ್ದುಕಲಸಿದರ್ವೀಕರ ನಿಭದರ್ವಿಯಿಂದೊತ್ತಿ
ತೊಳಸಲೊಡನೆ ಕಡುಕಾಯ್ದುಪುಮಸಗಿ|| ಕಂ|| ಬಡಬಾಗ್ನಿದಾಪಶಿಖಿಬರೆ|
ಸಿಡಿಲುರಿಕಲ್ಪಾಂತವಹ್ನಿಮುಸಕಂಗೊಂಡೊಂ || ದೆಡೆನಿಂದವೆಂಬಭಾವಮು |
ನೊಡರ್ಚಿಘುಳುಘುಳಿಸಗರಳಪಟುಪಾವಕನಿಂ|| ||೫೬||

ಚಂ|| ವೃ|| ಪೊಗೆನೆಗೆದೊತ್ತಿಪೊಯ್ದುಗಗನಾಗಮುದುಗ್ರಮರಾಜಿಸೂ
ಸಿದಂ | ತೊಗುವಿಗೆಕಳ್ಕನೊಕ್ಕುದುಡುರಾಜಿಕುಲಾಚಲವೃಂದಮುಂಜನಾ||
ದ್ರಿಗಣದಮಾಳ್ಕೆಯಂತಳಿದುದರ್ಕವರೂಥದವಾಜಿಬೆರ್ಚಿದ | ತ್ತಗೆಲದೆನೀ
ಲನೀರಮುಯುಮಾದುವುಸಿಂಧುತಟಾಕವಾರಿಗಳ್ ||೫೬||
ಕಂ||ಕುದಿದುರ್ಕಿಧವಖಿಳನದೀ| ನದಂಗಳುರಿದತ್ತುತರುಕುಲಂಗಿರಿತತಿಸೀ||
ಳ್ದುದುಗರಳಶಿಖಿಯುಸೆಕೆಸೋಂ| ಕಿದಗಾಳಿಯುಕೋಳ್ಗೆಬಳ್ಕಿದರ್ದಿಕ್ಪತಿಗಳ್||
ಕಂ|| ಭೂತಳದೊಳ್ಪುಟ್ಟಿದುದು| ತ್ಪಾತಲಯಾನಲನಿದಾವಕಾಮೆನುತ್ತ||
ಬ್ಜಾತಭವಂಲಯುಕಾಲ | ವ್ರಾತಮುನೆಣಿಸುತ್ತಮಿರ್ದನತಿಚಕಿತಮನಂ||
ಕಂ|| ಜಲಧಿಯೊಳಂದೊಗೆದಹಲಾ | ಹಲದಿಂದಸಿತಾಂಗನಾದೆನಿಂ
ದೊಗೆದತ್ತು || ಜ್ವಲವಿಷಮುದರಿಂದೇಂಕೋ | ಟಲೆಬರ್ಪುದೊಮೂಣದೆಂ
ದುಹರಿಚಿಂತಿಸಿದಂ ||೫೯||

ಕಂ|| ಕೊರಳಗರಳಾಗ್ನಿಕಡೆಗೋ | ಸರಿಸಿದುದೆಂದೆಂಬಶಂಕೆಯಿಂದ
ರ್ಪಣಮಂ || ತರಿಸಿನಿಜರಮಣಿಯಿಂಕಂ | ಧರಮಂನಡೆನೋಡುತಿರ್ದನಗ
ಜಾರಮಣಂ||೬೦|| ಕಂ|| ವಾಣಿಯುಮೂಲಕುಮಿಯುಮಿಂ | ದ್ರಾಣಿಯು
ಮೆಂಬೈರದಾಳಿಯುಂಕಾವುದುಶ || ರ್ವಾಣೀಶಶರಣೆನುತ್ತಂ | ಮಾಣದೆ
ವಿಷಕಳ್ಕಿಶಂಭುಮಂಮರೆವೊಕ್ಕರ್ ||೬೧||

ವ॥ ಇಂತು ಮಹಾಭಯಾದ್ಭುತಂ ಮಸಗಲೊಡನೆ ಸಂಭ್ರಮದಿಂ ಬಸವಂಗಣನಿವಹಮುಂತರಂಬಿಡಿದು ಮೂರ್ತಿಗೊಳಿಸಿ ಸಾಂಗಮೆನೆ ಲಿಂಗಾರ್ಚನಂಗೆಯ್ದು ಸಾಷ್ಟಾಂಗಮೆರಗಿ ಜಯಜಯಧ್ವಾನದಿನುಘೇರವಂತ್ರಡಂಗಲಿಸಿ ವಿಜೃಂಭಿಸಿನಲವೇರ್ಚೆ ಪೊಗಳ್ದು ಸರ್ವರುಮುಚ್ಚರಿಯಿಂಗೆ ನಿರೀಕ್ಷಿಸುತ್ತಿಮಿರೆ ಬಹುಕಟಾಹಸ್ಥಿತ ವಿಷರಸಮಂ ಕರತಳದಿಂ ತುಳುಂಕೆ ಪೊಂಗಳಸಂಗಳಿಂ ಮೊಗೆಮೊಗೆದು ಶಿವಗಣಾವಳಿಕೈಕೊಳ್ವುದೆಂದು ಮುಂದೆಗೆಡಣೆಸಿರ್ದ ಪರಿಯಗಣಂಗಳೊಳ್ ವಿಸಟಂ ಬರಿದೆಱೆಯೆ ಭಕ್ತಗಣಮಾಕ್ಷಿಸಿ ಪೊಱೆಯೇರಿರಾಗಿಸಿ ಗರಳರಸಮಂ ಗರಳಧರಂಗೆ ಸಮರ್ಪಿಸಿ ತತ್ಪ್ರಸಾದಮಂ ಸವಿಪಾಗಳ್ಕರಣಗಣದ ಸಂಭ್ರಮೋಕ್ತಿಗಳ್ನಿಗಳ್ದವೆಂತೆನೆ.

ಉ॥ ವೃ॥ ಮೆಲ್ಲನೆಕುಳ್ಳಿರಿಲ್ಲಿಕಲಿದೇವಸದಾಶಿವದೇವಬಂದೆನೀಂ ।ಗೆಲ್ಲಮನಾನಲಿಂದರಱೆಶಂಕರದೇವಸಮರ್ಥನಕ್ಕುಮಿಂ ॥ ತಿಲ್ಲಿಗೆನೀನೆಲಿಂಗಸುಖಿದೇವಕಡಂಗಿಶಿನಪ್ರಸಾದಮುಂ । ನಿಲ್ಲದೆಕೊಳ್ವೆಯಿಂದಮುಮುಭುಂಜಿಪುದಲ್ಲಮದೇವರಾಗದಿಂ .... ॥೬೩॥

ಉ॥ ತ್ರ್ಯಂಬಕದೇವಸುಂಡಪನೆಭಾಪುಱೆಸಾಲದಮಾಯಿದೇವನಾ । ಡಂಬರಮಾಳ್ದಕುಕ್ಷಿಗೆಮಹೇಶ್ವರದೇವನಪೊಟ್ಟೆಸತ್ವರಂ ॥ ತುಂಬದುದಾಸಿದೇವನುದರಂತನಿನೆರ್ಚದುಶಂಭುದೇವನೇ । ಸುಂಬನೊಮೆಲ್ಲನುಂಡಪನಳುಂಬಮಿದುದ್ಭಟದೇವನುಜ್ಜುಗಂ ॥೬೪॥

ಉ॥ ಪಿಡಿಪಿಡಿಪಾತ್ರೆಯಂಸಹಿನೆಸಂಗಮ ದೇವಗಜೇಶದೇವಕೈ । ಗುಟಿತಿಮೊಳೀಂಟುವೈದಸರಿದೇವಜವಂಗೆಡಮುಂಡಪ್ಪೈಬಿಸಿ ॥ ಕರ್ಡುಪಿರಿದಲ್ತಿಕೇಳ್ನಿನಗೆಪರ್ವತದೇವಪಯೋರಸಕ್ಕಿದೀ । ಮರ್ಡಿಗಡಬಂಕಿದೇವಸುರಿವೈಸುರುಕೆನ್ನಡೆಮಲ್ಲಿದೇವನೀಂ ॥೬೫॥

ಕಂ॥ ತಲೆಯಂತೂನೆಯದಿರಿನ್ನುಂ । ನೆಲೆವೆರ್ಚದುಪೊಡೆಕುಮಾರದೇವಯ್ಯಸಡಿ ॥ ಲ್ಚಿಲಿಜಘನಸೂತ್ರಮಂಪಿಂ । ಪಲಿಗೆಯಚಂದಯ್ಯಭೋಗಭುಂಜಿಸುಜವದಿಂ ॥೬೬॥

ಕಂ॥ ಪುರುಡಿಂಪಿರಿದುಂಡವನೀ । ವಿರುಪಯ್ಯಂಭಲಱೆಬೊಮ್ಮಿದೇವಂಪೀರ್ದಂ ॥ ಕರಮೆರಡಱೊಳಿತಂದುದ । ನರರೆಕರಂತಣಿದನಲ್ಲುತ್ತಕಲಿಕೇತಾರ್ಯಂ .... ॥೬೭॥

ಕಂ॥ ಪದೆಮುಕೊರಲ್ವರೆಗಂತುಂ । ಬಿದನುದರದರಾಮನಪ್ಪಿದೇವಂ

ಮೆಯ್ಯಾ || ಡದೆಪಿರಿದುಂಪೀರ್ದಂಸಗ | ರದಬೊಮ್ಮಂಸವಿಡನಳ್ಕರಿಂತ
ಣಿವನ್ನಂ .... ||೧೮||

ಕಂ|| ಸವಿಯೆಂತುಬೊಸುರಿದಪನೀ | ಶಿವದೇವಂಪೀರ್ದುತಣಿದುತೇ
ಗಿದನೀಗ || ಳ್ಕವಿಲೆಯಬೊಂಮುಂಕೆಲವಲ | ದವರೊಳ್ಪುರುಡಿಸುತೆಪೀರ್ದ
ಪಂಕಾಶೀಶಂ ||೧೯||

ಕಂ|| ಮುನ್ನೆರೆದುದನೀಂಟಿದನೀ | ಕನ್ನದಬೊಮ್ಮಯ್ಯನಿನ್ನುಮೆರೆ
ಬರಿದಾಯ್ತ್ತಾ || ಚನ್ನಯ್ಯನಪರಿಯಣಮಿ | ತ್ತಂನೋಡಂಬಿಗರಚೌಡನಾ
ರೋಗಿಸಿದಂ ||೨೦||

ಕಂ|| ಸಾಲದುತನಗೆನುತಿರ್ದಪ | ನೀಲಿಂಗಣದೇವನೊಲ್ದಿವಂಗೆರೆ
ಜವದಿಂ || ದಾಲೋಕಿಪುದಿತ್ತಮಹಾ | ಕೋಲಯ್ಯಂಬರಿಯಬಟ್ಟಲಂಪಿ
ಡಿದಿರ್ಪಂ .... ||೨೧||

ಮ|| ವೃ || ನಿನಗೇಂಸಾಲ್ಗುಮೆಶಾಂತದೇವತಲೆದೂಗುತಿರ್ಪಮಾಧು
ರ್ಯಮೆಂ | ತೊನಿತಾಂತಂಗಣದಾಸಭೀಮಧವಳೇಶಂಗಾದುದೈತೃಪ್ತಿನೀ ||
ನಿನಿತಂಕೊಳ್ಳಕಳೇಶಸಾಲ್ಗುಮೆನುತಿರ್ಪಿಸುಮ್ಮನಾದಯ್ಯನಿಂ | ನನುವಂ
ಬಲ್ಲೆನಿಳೇಶಬೊಮ್ಮನಗದಿಮಾರ್ಪದಾರ್ಯನೀನೀಂಟದಃ ||೨೨||

ಮ|| ಸ್ರ || ವೃ || ಎನಗಿನ್ನುಂತರ್ಪುದೀತಂಗೆರೆವೊರಟದಬಂಕಂ ಗೆ
ಲಿಂಗಾರ್ಪಣಂಗೆ | ಯ್ದುನಿತಾಂತಂಶ್ರೀಗುರುಧ್ಯಾನದಿನೆರೆದನಿತಂಪೀರ್ದಪಂ
ಬೊಮ್ಮಿದೇವಂ || ಬಿಸದಂಗೆಯ್ಯುತ್ತೆಪೂಣ್ದಂ ತಿರೆಸವಿದಪನೀಡಕ್ಕೆಮಾರ
ಯ್ಯನೀಗೋ | ವಿನಮಾರಂಸಾಲದೆಂದೀಂಟದ ಪನಮುರ್ದುಗೊಳ್ವಂತಿರಾ
ನಂದದಿಂದಂ ||೨೩||

ಕಂ|| ಪ್ರಮಥರಕೃಪೆಯಿಂದೆನ್ನು || ತ್ತಮಮಾಗಮಿದುಬಹಳರಸನೆ
ವಡದೊಡೆಪೀರ್ವೆಂ || ಸುಮಹತ್ಕಟಾಹಿವಿಷಮೆನಿ | ತುಮನೆಂಬಂಮಿಂಡ
ಸಂಗನೇಂಕಡುಗಲಿಯೊ ||೨೪||

ಕಂ|| ಚೊಕ್ಕಳತನದಿಂಸವಿದಂ | ಮೊಕ್ಕಳಮೇಕಾಂತರಾಮನೀಂ
ಟದಪಂಕ್ಕೈ || ಯಿಕ್ಕಿಮೊಗೆಮೊಗೆದುಬಗಸೆಯೊ | ಳೊಕ್ಕಲಿಗರಮುಗ್ಧನೋ
ರ್ವನೊಲ್ದಸವಸದಿಂ ||೨೫||

ಕಂ|| ಚಿಕ್ಕಯ್ಯನುಮೀಜೋಪಸ | ಕಕ್ಕಯ್ಯನುಮೊಡನೆಪೀರ್ದರರಿ

ಪೆನೆಪಡಪಿಂ ‖ ಬೊಕ್ಕುದುಮಿಕ್ಕುದುಬಸವಂ । ಗಕ್ಕುಂಸವಿಯುಳ್ಕೆಚನ್ನೆ ಬಹೆಪಸಮೇತಂ ‖೭೬‖

ವ‖ ಎಂಬ ಸಂಭ್ರಮೋಕ್ತಿಗಳಿಂಬುವಡೆಯೆ ಮತ್ತಮಲ್ಲಿ.

ಕಂ‖ ಗೊಗ್ಗಾಂಬಿಕೆಚಾಕಮಾಂಬಿಕೆ । ದುಗ್ಗಳೆಕಮಳಾಂಬಿಕಾಳಿಶಿವ ದೇವಿಲಸ ‖ ತ್ಸುಗ್ಗಲಿಶಾಂಭವಿಸಿಂಬಿಯು । ಮುಗ್ಗದಮಾದೇವಿವಿಮಳೆರೇ ಚಾಂಬಿಕೆಯರ್ ‖೭೭‖

ಕಂ‖ ಸೋಮಾಂಬಿಕೆಮಾದಾಂಬಿಕೆ । ಭೀಮಾಂಬಿಕೆಬೇಚಿದೇವಿಬಿಲಿ ದೇವಿಮಹಾ ‖ ಕಾಮಾಂಬಿಕೆನಾಗಾಂಬಿಕೆ । ರೇಮಾಂಬಿಕೆರೇಚಿದೇವಿವೀ ರಾಂಬಿಕೆಯರ್ ‖೭೮‖

ಕಂ‖ ಲಿಂಗಾಂಬೆತೂರಸೇವಿಸು । ಮಂಗಳೆಸತ್ಯಕ್ಕನಲ್ಲಮಾಂಬಿಕೆವಿ ಳಸದ್ಗಂಗಾಂಬೆಗೌರಿಶಾಂಕರಿ । ಸಂಗಾಂಬಿಕೆಚಂಡಿಯು ರಸೆಯಾದಾಂಬಿ ಕೆಯರ್ .... ‖೭೯‖

ವ‖ ಇವರ್ಮೊದಲಾದ ಶಿವಯೋಗಿಣಿಯರ್ಮೇಲಣ ಪಙ್ಕ್ತಿಗೊಂಡು ಕುಳ್ಳಿರ್ದು ಪರಮಾನುರಾಗದಿಂ ಶಿವಪ್ರಸಾದಿತ ವಿಷಾಮೃತಪಾನಲೀಲೆಯ ನಾಳ್ದು ತಣಿದುತೇಗಿ ಬೀಗುತ್ತಮಿರೆ.

ಕಂ‖ ಓರೋರ್ವರಪರಿಯುಣಮುಮ । ನೋರೋರ್ವರ್ನೊಂಡು ಶೇಷ ಮುಂಸವಿವು ‖ ತ್ತೋರೋರ್ವರೊಡನೆಕುಳ್ಳಿರ್ದೋರೋರ್ವರ್ತಂಮೊಳಿಂಟು ತಂಬಿನದಿಸುತಂ ‖ .... ‖೮೦‖

ಕಂ ‖ ಅರೆಮುಚ್ಚಿತೆರೆಯುತಂಕ । ಣ್ಣರಲಂಕಾಲ್ನೀಡಿನೀಗುತಂಪಾ ತ್ರೆಗಳಂ ‖ ಕರತಳದೊಳಾಂತುವರ್ತಿಸು । ತಿರದಾರ್ದುಪ್ಪರಿಸಿನೆಗೆಯುತಂ ನಗೆನಗುತಂ ‖ .... ‖೮೧‖

ಮ‖ಸ್ರ‖ ವೃ‖ ತಣೆಯುತ್ತಂತೇಗುತಂಬೀಗುತೆಪೊಡಮುಡುತಂಪೊಂ ಗುತಂಕೂಗಿಡುತ್ತಾ । ಕುಣೆಯುತ್ತಂಬಣ್ಣಿಸುತ್ತಂಬಲವರುತಮುರುತ್ತಪ್ರ ತಂಪೇರ್ಚುತಂಸಂ ‖ ದಣಿಸುತ್ತಂಸಾರುತಂಮ್ಮೈಮುರಿಯುತೊಲೆಯುತೊ ಲ್ದಾಡುತಂಪಾಡುತಂಬಿಂ । ನಣಮಂತೋರುತ್ತೆಬೀರುತ್ತಭಿನವರಸಮಂ ನೋಡುತಂಗಾಡಿಯಿಂದಂ ‖ .... ‖೮೨‖

ಚಂ ‖ ಬಸವನನೋರ್ಮೆಲಿಂಗಮುಮನೋರ್ಮೆನಿರೀಕ್ಷಿಸುತಂಬೆ ಮರ್ಸ್ತುತಂ । ಪಿಸುತೆಸುಖಾನ್ನುವಿನೆನೆನೆಯುತಾನೆನೆಯು ತ್ತೆಶಿವಾಂಘ್ರಿಪ

ದ್ಮಮಂ ॥ ಪೊಸಬಗೆವೆತ್ತು ಘೇಯೆನುತ್ತೆಗದ್ಗದವೊಪ್ಪಿ ರೆತತ್ಪುರಾತನ । ಪ್ರಸ
ರಮನುರ್ವಿಕೀರ್ತಿಸುತೆಕೈಮುಗಿಯುತ್ತೆ ಪೊದಳ್ದ ಭಕ್ತಿಯಿಂ ॥ ॥೮೩॥

ಕಂ॥ ನರಪತಿಮುಖ್ಯರ್ನೋಡು । ತ್ತಿರೆಸಾದ್ಭುತಹೃದಯರಿಂತುಗಣ
ವರರಾಗ॥ ಳ್ಗರಳರಸಪಾನಕೇಳಿಯ । ನಿರದಾಳಿಱೆಲಾಡಿದರ್ಸುಖಾಂಭೋ
ನಿಧಿಯೊಳ್ ॥ .... ॥೮೪॥

ಕಂ॥ ಗುಣನಿಧಿಬಸವಂಕಂಡಾ । ಗಣನಿವಹಸಮುತ್ಸವಂಗಳಂನಲಿ
ದೊಲವಿಂ ॥ ಮಣಿದಾಂತುತತ್ಪ್ರಸಾದಮ । ನಣಿಯುರಮಾರೋಗಿಸುತ್ತೆ
ತಣಿದೊಪ್ಪಿರ್ದಂ ॥ .... ॥೮೫॥

ಕಂ ॥ ಗರಳಧರನೀಂಟಿದಮೃತಂ । ಗರಳಂತಾನಾದುದಮೃತಮಯ
ರೀಂಟಿದತ ॥ ದ್ಗರಮಮೃತಮಾದುದೆಂದೆನೆ । ಧರೆಯೊಳ್ಸಲಸಾಧುಸಂಗ
ಮೇಗೆಯ್ಯದೊರ್ಪೇಳ್ ॥ .... ॥೮೬॥

ವ ॥ ಎಂದು ಬಲ್ಲವರ್ಬಣ್ಣಿಸುತ್ತ ಮಿಱಿಮುತ್ತಮುಲ್ಲಿವೇತ್ರಧರರ್ಗೆನಿ
ಯಾಮಿಸಿ ॥

ಚ॥ ವೃ॥ ಬರಿಸಿದನಳ್ತಿವಟ್ಟುಗಣಕಾವಳಿಯಂ ಸಚಿವಪ್ರತಾನಮಂ ಕ್ಷ್ಮಾ
ಧರಣಿಪಪುತ್ರರಂಜನಪಬಾಂಧವರಂನೃಪನಾಪ್ತಮಿತ್ರರಂ ॥ ಚರಸುಭಟರು
ಳಂಗುರುಪುರೋಹಿತರಂಪುರರಕ್ಷಕೌಘಮಂ । ಸುರುಚಿರವಿಪ್ರರಂಸುಕರದಾ
ಸಿಯರಂಸುನಟೀವಿತಾನಮಂ ॥ .... ॥೮೭॥

ಶಾ ॥ ಕ್ಷೋಣೀಂದ್ರಪ್ರಮದಾಳಿಯಂವ್ಯಜನಭೃಂಗಾರಾತಪತ್ರೋ
ಲ್ಲಸ । ನ್ಮಾಣಿಕ್ಯಾಂಚಿತದರ್ಪಣಾಭರಣಚಂಚಚ್ಚಾಮರಾಂದೋಳಿಕಾ॥ ಶ್ರೇ
ಣೀಧಾರಕರಂಸುಗಂಧಹಿಮವೀಟೀದಾನ ಧೌರೇಯರಂ । ವೀಣಾವೇಣು
ಮೃದಂಗತಾಳಕಹಳಾವಾದ್ಯಪ್ರವೀಣರ್ಕಳಂ ॥ ॥೮೮॥

ಕಂ॥ ಪಂಡಿತರಂಲಾಸ್ಯಕಳಾ । ಮಂಡಿತರಂಗಾಯಕರ್ಕಳಂಕವಿಗ
ಳನು ॥ ದ್ದಂಡನಿಗಮಾಗಮಜ್ಞರ । ತಂಡಮನುರುತರ ಪುರಾಣ ಪರಿಣತ
ಬುಧರಂ ॥ .... ॥೮೯॥

ಕಂ ॥ ವರವಾದಿವಂದಿಮಾಗಧ । ಪರಿಹಾಸಕಸುವಿಟವಾಗ್ಮಿಪಾಠಕ
ಚಯಮಂ ॥ ತರಮರಿದುಕುಳ್ಳಿರಿಸಿಘನ । ಗರಳಾಮೃತಮೆಱೆದುತಣಿಪಿದಂ
ವೃಷಭೇಂದ್ರಂ ॥ .... ॥೯೦॥

ಕಂ॥ ಅವರನಿಬರುಮೀಂಟಿದರು । ತ್ಸವದಿಂಸುಧೆಯಂತಿರಾದವಿಷ

ಮಂತಣಿದ || ವಿವಿಧೋಕ್ತಿಗಳಿಂ ಪೊಗಳ್ದ | ಸವಿನಸುಖಮಾಳ್ದು ಭಕ್ತಿ
ರತ್ನಾಕರನಂ || .... ||೯೧||

ವ || ಮತ್ತಂ ಸಾಂಕುಶನಿಬದ್ಧಾಂಜಲಿಗಳಾಗಿ ನಿಂದಿರ್ದಗಜಾರೋಹಕರಂ ಮಹಿಮಾಕರನಭೀಕ್ಷಿಸಿ ||

ಮ || ವೃ || ರಣಕೋಲಾಹಲಸಂಕರಾಳರದನಂ ನೀಲಾಚಲಸ್ಪರ್ಧಿ
ಯುಂ| ಗಣನಾಥಪ್ರಿಯನಂ ಸುಭದ್ರಗಜಮುಂ ದಂತಾವಳೋತ್ತಂಸನಂ||ಗುಣ
ರತ್ನಾಕರನಂ ಗಜೇಂದ್ರಮಣಿಯುಂ ಗಂಭೀರನಾದಾಂಕವಾ| ರಣರಾಜೇಂದ್ರನ
ನಿಂದ್ರದಂತಿನಿಭನಂ ವಿಂಧ್ಯಾದ್ರಿಸಂಕಾಶನಂ || .... ||೯೨||

ಚಂ|| ಕಳಭವರೇಣ್ಯನಂ ಕರಟಿಪುಂಗವನಂ ಕರಿಸಾರ್ವಭೌಮನಂ| ಮ
ಳಯವಿಹಾರಿಯುಂ ಮಹಿತವಿಭ್ರಮನಂ ಮದಗಂಧಭಾಸಿಯುಂ| ಜಳಧರಘೋ
ಷನಂ ಜನಪವಲ್ಲಭನಂ ಜಗದೇಕಶೂರನಂ | ವಿಳಸಿತಸತ್ವನಂ ವಿಪುಳವಿಗ್ರಹ
ನಂ ವಿಜಯಾಭಿರಾಮನಂ || .... ||೯೩||

ಕಂ|| ಸಸುರಪಟುವಿಕ್ರಮನನೆ | ಭ್ರಮೂಪವಿಭ್ರಮನನಭ್ರಕಾಯು
ನನಹಿತೋ || ಗ್ರಮತಂಗಜಮುದಹರನಂ | ಚಮೂಭೂಷಣನನಿಭಕುಲಪ್ರ
ಭುಕರಿಯುಂ || .... ||೯೪||

ಕಂ|| ಕುಂಜರವರನಂ ಭೂಧರ | ಭಂಜನನಂ ಕಾಲರುದ್ರನಂ ಟದ
ಳಿನೀ || ರಂಜನನಂ ಮದಸುರಭಿಸ | ಮಂಜಸನಂ ಶಂಕರಪ್ರಿಯಾಹ್ವಯ
ಗಜಮಂ || .... ||೯೫||

ಕಂ|| ರಿಪುರಾಜಭಯಂಕರನಂ | ತ್ರಿಪುರಾಂತಕನಂ ಪ್ರಮತ್ತನಂ ಜಂ
ಗಮದಾ | ಸ್ವಪರಾಯಣನಂ ಸಬಳ | ದ್ವಿಪೇಂದ್ರಮಂತಂ ನಿಮೆಂದು ತಾಂ
ಬಿಸಸುತ್ತಂ || .... ||೯೬||

ಕಂ || ಬರಿಸಿಘನಕರಿಗಳಂ ಬಸ | ವರಸಂಸಾಲ್ಗೊಳಿಸುತೆರೆದುಗರಳಾ
ಮೃತಮಂ || ದ್ವಿರದಂಗಳನುರಿತಣಿಪಿದ | ನರಿದೆಂದಚ್ಚರಿಯನಾಳ್ದು ಪೊಗಳೆ
ನರೇಂದ್ರಂ || .... ||೯೭||

ವ|| ಮತ್ತಂ ಕಶಾಗರ್ಭಿತಕರ ಸಂಪುಟ ಘಟಿತ ನಿಟಿಲತಟರಾಗಿ ನಿಂದಿರ್ದತುಂಗತುರಂಗಿಗಳಂ ಮಂಗಳಮಯಂ ಪಿಂಗದೆನೋಡಿ ||

ಮ|| ಸ್ರ|| ವೃ || ಭರದಿಂದಂ ತನ್ನಿಮುಚ್ಚೈಶ್ಶ್ರವನನತುಳಭವಪ್ರಾಂಗನಂ
ಸೌಮ್ಯನಂ ಸೌಂ | ದರನಂ ಚಿತ್ರಾಂಗನಂ ಮಂಗಳಮಯನೆನಜೇಯಾಖ್ಯ

ನಂಸಂಗರಶ್ರೀ ॥ ಧರನಂತತ್ವಜ್ಞನಂಮಂಜುಳಿಗೆಮನನನುದ್ದಂಡನಂಚಂಡ
ವೇಗೋ । ದ್ಧುರನಂಚಂಡಾಂಶುವಾಜಿಪ್ರಭನನಭಯನಂತುಂಗನಂ ಮಾ
ಣದೀಗಳ್ ॥ .... ॥೯೮॥

ಚ॥ ಸುಲಲಿತಕಾಯನಂಸುಭಗವಾಜಿಯನಾಜಿವಿಹಾರಧೀರನಂ। ವಿ
ಲಸಿತಸತ್ವನಂವಿಪುಳವಿಕ್ರಮನಂಜಯಶೀಲನಂಮಹೋ ॥ ಜ್ವಲಹಯರಾಜ
ನಂಕುಸುಮಬಾಣನನುನ್ನತಚಂಪ್ರಹಾಸನಂ । ಬಲಿಮದಮರ್ದಿಯಂಬಹ
ಳವಿಭ್ರಮನಂಜಿತವೈನತೇಯನಂ ॥ .... ॥೯೯॥

ಕ॥ ಜವಗನನಿಂದ್ರಾಯುಧನಂ । ದಿವಿಜಾಶ್ವಸ್ಪರ್ಧಿಯಂತುರಂಗೆ
ಮವಿಭುವಂ ॥ ಶಿವಸೇವಾಭೂಷಣನಂ । ರವಿಹಾಸನನತುಳಚೇರಮಪ್ರಿಯ
ಹಯನಂ ॥ .... ॥೧೦೦॥

ವ ॥ ಎಂದಿವುಮೊದಲಾದವಂತರಿಸುತ ಸಮವಿಷಸುಧಾರಸಮನಾ
ವಾಜಿರಾಜಿಗೋಜೆಯಿಂನೆರೆಮ ತಣಿಪಿವಿಶ್ವರಕ್ಷಣವಿಚಕ್ಷಣನಚ್ಚರಿಯೇರಿ ವಿ
ರಾಜಿಸುತ್ತಮಿರ್ಪಿನವಾಗಳ್

ಚಂ॥ ವೃ॥ ಮೊಳಗಿದುದಭ್ರದೊಳ್ದಿವಿಜದುಂದುಭಿದಾಂಥಳಮೆಂದು
ಭೋರೆನು । ತ್ತಿಳಿದುದುಪುಷ್ಪವೃಷ್ಟಿಸುರಕಿನ್ನರಸಿದ್ಧಕದಂಬಯುಕ್ತಮು॥ಜ್ವ
ಳಮತಿಯಿಂದೆಬಣ್ಣಿಸಿದುದಗ್ಗದರುದ್ರಗಣಂಕೃಪಾಸುಧಾ । ವಿಳಸಿತವರ್ಷ
ಮಂಕರೆಮದೇಳ್ಗೆಯಭಕ್ತಗಣಂವಿಳಾಸದಿಂ ॥ .... ॥೧೦೧॥

ಕಂ ॥ ಪೊಗಳ್ದಂಬಿಜ್ಜಳಭೂಪತಿ । ನೆಗಳ್ದತಿಶಯಕೌತುಕಕ್ಕೆಬಗೆಮೆ
ಚ್ಚಿಧರಿ ॥ ತ್ರಿಗೆಮುದವೊದವಿದುದುಮನಂ । ಬುಗೆಕೊಂಡಾಡಿದುದುವಿವಿಧ
ವಿಬುಧವಿತಾನಂ ॥೧೦೨

ವ॥ ಮತ್ತಂ ಭಕ್ತಗಣ ನಲಿವೆರ್ಚೆಮಚ್ಚಿ.

ಚಂ ॥ ವೃ॥ ಬಸವಕುಮಾರಭಕ್ತಿಸುಖಸಾರಭವಾಂಬುಧಿಕರ್ಣಧಾರ
ಸ । ದ್ವಿಸರಲಲಾಮಸತ್ಯಗುಣಧಾಮಸಮುನ್ನತಪುಣ್ಯನಾಮಚಿ ॥ ದ್ರಸಭರಿ
ತಾಂಗಚಿತ್ತಜವಿಭಂಗಚಿರಂತನಶಿಷ್ಟಸಂಗತಾ । ಮಸವನದಾವತತ್ವಮಯ
ಭಾವತತಾಖಿಲದೇವಸೇವಿತ ॥೧೦೩॥

ಚಂ॥ ಶರಣಜನಾನುಕೂಲಜಿತಕಾಲಜಗತ್ರಯಪಾಲಜಂಗಮ । ಸ್ಥಿರ
ಭಜನಾತಿಲೋಲಶುಭಶೀಲಸುರಾಸುರಜಾಲವಂದ್ಯಭಾ ॥ ಸುರಭಸಿತಾಂಕಫಾ

ಲಸುವಿಶಾಲಸುವಿದ್ರುಮಮಮಾಲಭಕ್ತಿಭಾ | ಸುರಸರಸೀಮರಾಳಘನಲೀಲಗೆ
ಣಾಂಬುಜಬಾಲಭಾಸ್ಕರ ||೧೦೪||

ಪಂಚಚಾಮರವೃತ || ಭವಾಪಹಾರಿಭಸ್ಮಭಕ್ತಭಾವ್ಯಭದ್ರಮೂರ್ತಿ
ಸ | ಧ್ಯಪ್ರೋಪಯುಕ್ತಚಿತ್ತಮತ್ತವಾದಿಭಂಜನಾಲಸ || ಚ್ಛಿವಾಪರಾವತಾ
ರಧೀರಸಾರಸುಸ್ವಸ್ವೈಭವ ||೧೦೫||

ಕಂ|| ಶುಭಶೀಲವಿಶ್ವಪತಿಸ | ನ್ನಿಭಸಿಗೆವಾತೀತಮಹಿಮನಿನಗೆವಲಂ
ದು || ರ್ಲಭವಾವುದೊಬಗೆಪ್ರೊದೆಘನ | ವಿಭವೋನ್ನತವಿಶ್ವಭುವನದೊಳ್
ವೃಷಭೇಂದ್ರ ||೧೦೬||

ಕಂ || ಭವದೀಯಮಹಿಮೆಯಂಕೇ | ಳ್ವವರಿವಂಪ್ರಮುಖರಿವರು
ಮೆಯರಿವಕ್ತ್ರೀ || ಣ್ಭುವನದೊಳಾರರಿವರ್ಪರ್ | ಳವಿಕಳಶಿವಭಕ್ತಿಭಾಮಿನೀ
ಮಣಿಮುಕುರ || .... ||೧೦೭||

ಉ|| ವೃ|| ಅಂಗಜವೈರಿಸುಂಗಲಗಿದೊಯ್ಯನೆಭೀಕರಕಾಲಕೂಟಮಂ|
ತುಂಗೆಗಳಸ್ತಳಾಂತರದೊಳಾಂತನದಂಜವದಿಂಕೊರಲ್ಗರಂ || ಪಿಂಗದೆಪೀರ್ದೆ
ನಿನ್ನಯಮಹತ್ವಮಿದದ್ಭುತಮದ್ಭುತಂಕೃಪಾ | ಸಂಗತಚಿತ್ತನಿನ್ನಳವನಾರ್ತಿ
ಳಿವರ್ಮಹಿಯೊಳ್ ವೃಷಾಧಿಪ .... ||೧೦೮||

ಕಂ|| ಅವುದಿರ್ದೀಂಟಿಯುಮಮರಮುರ | ಣಮನಾಂಪರ್ಗಡಜಗದ್ಭ
ಯಂಕರಮೃತ್ಯು || ಗಮವಿಷಮನೀಂಟಿನಿತ್ಯ| ತ್ವಮನಾಳ್ದೆ ವೃಷೇಂದ್ರನಿನ್ನ
ಬಗೆಚಿತ್ರತರಂ || .... ||೧೦೯||

ವ|| ಎಂದಪಿಳರುಂ ಕೀರ್ತಿಸುತ್ತಮಿರ್ಪರಾಪ್ರಸ್ತಾವದೊಳ್ ||

ಮ|| ಸ್ರ|| ಸ್ವ| ಭಯದಿಂದಂಚಂಡವುತ್ರರ್ನಡುಗಿಸಡೆದುಬಾಯ್ಬಿಟ್ಟು
ಕ್ಷತ್ರಾವದಪದ್ಮ | ದ್ವಯಕತ್ಯಂತಾರ್ತಭಾವಂಬಡೆದೆರಗಿಶರಣ್ಬೊಕ್ಕುದುಃಪ್ಪಾ
ತ್ರರಂದು || ರ್ನಯರಂರಕ್ಷಿಪ್ಪುದೆಂಮುಂಬಸವವಿಭುವೆಕಾರುಣ್ಯದಿಂದೆಂದು
ಕೊಂಡಾ | ಡಿಯತೋಪಾರಾಸಿಯುಂದಂಪಡೆದಭಯಮನೊಲ್ದಿಯ್ದಿದರ್ಭ
ಕ್ತಿಯುಕ್ತರ್ || .... ||೧೧೦||

ಕಂ|| ಮದನರಿಪುಭಕ್ತಭಾವಾ | ಸ್ಪದಶರಣರ್ಗಲ್ಲದೀಶಶೇಷಂಸಲಿಸ ||
ಲ್ಲದುಪೆರರ್ಗೆಂದೀಬಗೆಯಂ | ಪದಪಿಂವಂತೋರಿಬೀರಿಮೆರೆದಂಬಸವಂ ||

ಕಂ|| ಪರವಾದಿಗಳಂಸೋಲಿಸಿ | ಹರಸಮಯಮನಿಂತುಗೆಲಿಸಿಪಾಲಿಸಿ
ದಂಮ || ದ್ವರಬಸವನೆಂದುಶರಣ | ರ್ಪಿರಿದುಂಸಂಭ್ರಮದಿಕೀರ್ತಿಸುತ್ತೆಸೆ
ದಿರ್ದರ್ .... ||೧೧೧||

ಮ॥ ಸ್ರ॥ ವೃ॥ ಅರಸಂಪೌರಪ್ರಧಾನಾದ್ಯರಿನೆರಿದೆನುತಂನಾಡೆಕೊಂ
ಡಾಡಿದಿವ್ಯಾಂ । ಬರಭೂಷಾಶ್ರೇಣಿಯಿಂಪೂಜಿಸಿಮುಗಿದುಕರಾಂಭೋಜ
ಮಂತನ್ನಮಾದ್ಯ॥ ತ್ಕರಿಯಂಕೈಗೆಯ್ಸಿತಂದೇರಿಸಿಕಳುಪೆಮಹಾಸಂಭ್ರಮಂ
ಬೆತ್ತುಬಂದೀ । ಶ್ವರಭಕ್ತವ್ರಾತಮುಂಮುನ್ನಿಸುತೆಸೆದನುಮಾಕಾಂತಹೃತ್ಪ
ದ್ಮಸದ್ಮಂ .... ॥೧೧೩॥

ಕಂ ॥ ಬಸವಂಬಿಸವಂದಮಿದೆನೆ । ಬಿಸವಂಸುಧೆಗೆಯ್ದುಸವಿದಕಥೆ
ಯನಿದಂಸಂ ॥ ತಸಮುಲರಿಕೇಳ್ದನರರೀ । ರಸೆಯೊಳ್ಫನಭುಕ್ತಿಮುಕ್ತಿಸು
ಖಮಂಪಡೆವರ್ ॥೧೧೪॥

ಲಲಿತಪದವೃತ್ತಂ॥ ಕಾಯಗುಣತರ್ಜಿತ ವಿಮಾಯಗಣಸಂಚಯಸ
ಹಾಯನಿಗಮಾಗಮನಿಕಾಯಸರಳೋಕ್ತ । ನ್ಯಾಯಜಿತವಾದಿಸಮುದಾಯ
ಶಿವಭಕ್ತಿಸಮುದಾಯಜಯದಾನಸದುಪಾಯಮಹನೀಯ ॥ ಧ್ಯೇಯಖಚ
ರೇಂದ್ರಚಯಗೇಯಚರಶಂಕರವಿಧೇಯಬುಧನುತ್ಯರುಚಿರಾಯಪರಬೃಂದಾ।
ಜೇಯಪೂರಿಪೂರ್ಣಗುಣಚ್ಛಾಯಸಕಳೇಷ್ಟಫಲದಾಯಕಗಿರೀಶಗಣನಾಯಕ
ನೃಪೇಂದ್ರ ॥೧೧೫॥

ವನಮಯೂರವೃತ್ತ ॥ ಮಂಗಳಮಯಾಂಗಿಸುಭುಜಂಗಪತಿವೇಣೀ ।
ಭೃಂಗಕಚಭಾಸುರಿಸದಂಗಶುಕವಾಣೀ ॥ ತುಂಗಕುಚೆಭ್ರಾಜಿತಪತಂಗೆಮೃ
ದುವಾಣೀ । ಸಾಂಗಶಿವಭಕ್ತಿಸುಪಥಂಗೊಡುವೃಡಾಣೀ ॥೧೧೬॥

ಗದ್ಯ॥ ಇದು ವಿನಮದಖಿಳಸುರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತರುಚಿನಿಚಯತರುಣಾತಪಪರಿಲಸಿತ ಪರಮ
ಶಿವಲಿಂಗ ಪಾದಾರವಿಂದಪರಾಗ ಭಸಿತ ಭಾಸುರಲಲಾಟ
ಪಟ್ಟಸರಸಜನಮಾನಿ ತೋಭಯಕವಿತಾವಿಶಾರದಶ್ರೀ
ಷಡಕ್ಷರದೇವಭಕ್ತಿವಿರಚಿತ ಶ್ರೀಮದ್ಬಸವರಾಜ
ವಿಜಯಮಹಾ ಪುರಾಣದೊಳ್ ವಿಷವಿಹರಣ
ಕಥನಂ ಚತ್ವಾರಿಂಶಾಶ್ವಾಸಂ
ಪರಿಸಮಾಪ್ತಂ

ಜಗದೇವ ಕಥನಂ.

ನಾಂದಿ ॥ ಲಲಿತಪದವೃತ್ತ ॥ ವ್ಯಾಳಪತಿಕಂಕಣಕರಾಳಖಳಸೂದನ

ಮರಾಳರಥನಾನಿತವಿಶಾಲಮತಿಯುಕ್ತ । ಕ್ಷ್ವೇಳಗಳಸದೃಸಿತಫಾಲಮಣಿ ರಾಜನಿಭವ್ಯಾಳಬುರನಿರ್ಮಥಿತಕಾಳದನುಜೇಂದ್ರಾ ॥ ಗಾಲವದಧೀಚಿಮುನಿಪಾಲನಪರಾಯಣಸದೈಳಬಿಳಭಾಗ್ಯದಸುಪೇಲನಕಟಾಕ್ಷ । ಕ್ಷಾಳಿತದಿಗಂತಗಣಮೇಳನವಿಲೋಲಪ್ರೋಕ್ಶೈಲನಿಭಕಾಯಕರುಣಾಳುಬಸವೇಶ ॥

ಕಂ॥ ಶ್ರೀಮದಜಭಾವಿನೀಸುತ । ಹೈಮವತೀಮಧುರಗಾನನವರಸಲೋಲಂ ॥ ಸೋಮಕಳಾಧರನತುಳಕ । ಳಾಮಂದಿರನೀಗೆಸೌಖ್ಯಮಂ ಶಿವಲಿಂಗಂ .... ॥೧॥

ವ॥ ಮತ್ತಮೊಂದುಶುಭವಾಸರದೊಳ್.

ಕಂ॥ ಜಗದೇವನೆಂಬವಿಪ್ರಂ । ನಿಗಮಾಗಮವೇದಿಶಿವಪದಾಂಬುಜಭೃಂಗಂ ॥ ಸುಗುಣನಿಧಿತನ್ನಗೃಹದೊಳ್ । ಮಿಗೆಭುಂಜಿಸಲೆಂದುಬಸವನಂ ಪ್ರಾರ್ಥಿಸಿದಂ ॥೨॥

ವ॥ ಅಂತವಂಭಕ್ತಿಯಿಂಪ್ರಾರ್ಥಿಸೆ ಬಸವರಾಜಂನೋಡಿ.

ಕಂ॥ ಜಗದೇವನೀಂದ್ವಿಜಂಗಡ । ಮಿಗೆಮಜ್ಜನಮಕದಂಬಸಂಮರ್ದಮನೆಂ ॥ ತಗಲದೆಸೈರಿಪೆಯೆನೆಕೈ । ಮುಗಿದೆಂದಂನಿಂಮಚಿತ್ತಮೊಲ್ವಂತೀಗಳ್ .... ॥೩॥

ವ॥ ಎಲ್ಲಮಂಗಾಂಗಮಾವ ವೃದೀಗಳೆಂನಮೇಲಣದಯೆಯಿಂ ಬಿಜಯಂಗೆಯ್ವುದೆಂದು ಭೂತಿದಾನಪುರಸ್ಸರಂ ನಿಜಗೃಹಕ್ಕೇಳ್ತಂದು ಸಂಭ್ರಮಂಮಿಗೆ ಸಕಲಪಾಕಸಾಮಗ್ರಿಯುಂನೆರಪಿ ಪಂಚಪ್ರಕಾರದಾಹಾರಂಗಳನಳುಂಬಮೊಡರ್ಚ ಬಸವಾಗಮನದಿಂ ಮುನ್ನಮೆ.

ಕಂ॥ ಕಲಿದಾತ್ಮಮಂದಿರಕೆಪಾ । ರ್ವರನಾವರಿಸುತ್ತೆಪೂಜೆಗೆಯ್ದಂ ಜಗದೇ ॥ ವರಸಂತದ್ವಾರ್ತೆಯನೆನು । ಚರರಿಂಕೇಳ್ದು ಬಸವರಾಜಂ ಮುಳಿದಂ ॥೪॥

ವ॥ ಅಂತುಮುಳಿದಿವಂದುರಾಚಾರಮಂನೆಗಳ್ದನೆಂದೇಳಿದಂಗೆಯ್ದಿರ್ದುಮಾಗಳ್.

ಕಂ॥ ಕಳುಪಿಧರಾಸುರರನಮಂ । ಬಳಿಕೇಳ್ತಂದಂವೃಷೇಂದ್ರನಂಕರೆಯಲ್ಕಿಂ ॥ ಪೆಳಸಿತೆರೆಗೆಯ್ಸಿಬಸವಂ । ಖಳನೀಕ್ಷಣಕಲಸುತದರಮಕೆಯೊಳಗಿರ್ದಂ ॥೫॥

ವ॥ ಅಂತಿರ್ದುತನ್ನಂ ಕರೆಯುಲೆಳಸಿರ್ದ ಜಗದೇವಂಗಿಂತೆಂದಂ.

ಕಂ|| ಭವಿಸಂಗಪಂಕಜಲಮು|ಗ್ನವಿಚಾರಿಪೊಡೆಲವೊನಿನಗೆಶಿವಭಕ್ತಿಸುಧಾ||
ರ್ಣವಕೇಳಿಯೊಪ್ಪುಗುಮೆನಿಂ | ಸವೊಲಾವಂಗಾಂಪನೆಳಸಿಬರ್ಪುದೆಮರುಳೆ||

ಕಂ||ಕುಲದೈವಮಿರೆಮಹೇಶ್ವರ| ನೆಲೆನೀಂಬಹುಮಾರ್ಗದಲ್ಲಿನಡೆದಪೆಗಿರಿ
ಶೋ|| ಜ್ವಲಭಕ್ತಿಯೆತ್ತನಿನಗೀ| ಮಲಿನಾತ್ಮರಸಂಗಮೆತ್ತಪೇಳ್ಜಗದೇವ||೭||

ಕಂ|| ಹರಭಕ್ತಪಾದಸೇವಾ | ಪರಕರಯುಗಳಕ್ಕಿದುಚಿತಮೆಹರಭ
ಕ್ತೋ || ತ್ಕರದೂಷಣಪರವಿಪ್ರರ | ಚರಣಾರ್ಚನಕರ್ಮಮಧಿಕದುರ್ಮ
ತಿನಿಳಯ ||೮||

ಕಂ|| ಶರಣಜನಚರಣಜಲಮುಂ | ಶಿರದೊಳ್ತಳೆದೆಯ್ದೆಧನ್ಯನೆನಿಸಿದನಿ
ನಗೀ || ದುರಿತಕುಲಭರಿತಭೂಸುರ | ಚರಣಜಲಂತಾಳ್ವುದುಚಿತಮೇವಸು
ಮತಿಯೊಳ್ .... ||೯||

ವಿಳಸಿತಶಿವಪ್ರಸಾದಾ | ಮಳತನುವೆನಿಸಿರ್ದಲಿಂಗಭಕ್ತಂಗೆಶಿವೋ ||
ಜ್ವಳಭಕ್ತಿರಹಿತಭೂಸುರ | ಕುಳಪಂಙ್ತಿಯೊಳುಣ್ಬಕಜ್ಜಮೆಂತಳನಡುಗುಂ||

ಕಂ||ನಡೆನುಡಿನೋಟಂನಗೆಸಂ |ಗಡಿಗತನಂಪಂಙ್ತಿಭೋಜನಮುಮೆಂಬಿನಿ
ತಂ||ಜಡಭವಿಗಳೊಡನೆನೆಗಳ್ವನೆ | ಮೃಡಭಕ್ತಂಭವವಿದೂರನಮಳಚರಿತ್ರಂ||

ಕಂ|| ಶೂಲಿಪದಭಕ್ತನನುಪಮ | ಶೀಲವ್ರತಯುಕ್ತನತುಳಚಿತ್ರಚರಿ
ತ್ರಂ || ಭೂಲೋಕದೊಳೊಪ್ಪುವನೊಸೆ | ದೇಲೇಶಕ್ಷೇತ್ರಪಾಲನೆಂಬ
ಮಹಾತ್ಮಂ ||೧೨||

ಚಂ || ವೃ || ಅವನಚರಿತ್ರಮಂಪೊಗಳ್ವೊಡಾರ್ಗಳವಪ್ಪುದೊನ್ಯೆಜಪು
ತ್ರಮಿ | ತ್ರವನಿತೆಯರ್ಕಳಂಸಕಳಗೋತ್ರಜಬಾಂಧವಚೇಟಿಯರ್ಕಳಂ ||ಭ
ವನದೊಳಿರ್ಪಸರ್ವರುಮನೊಪ್ಪಿರೆಲಿಂಗಸಮನ್ವಿತಾಂಗರಂ | ಜವದೆನೆಗಳ್ಚಿ
ರಂಜಿಸುತೆಲಿಂಗವಿಹೀನರೊಳಾಡನೋರ್ಮೆಯುಂ ||೧೩||

ಮ || ನಡೆನೋಡಂನುಡಿಯಾಡನೀಯುನವರಿಂದೇನೊಂದನೆಂತಾದೊ
ಡಂ | ಪಿಡಿಯುಂಸೋಂಕನವಂದಿದಾಳ್ವನೆಲಸಂತಾಂಮೆಟ್ಟನಾದುಷ್ಟರೊ ||
ಳ್ತೊಡರಂಸಾಲಮನೊಲ್ಲನಂತವರ ಕ್ಕೆಯಿಂದಂಕುಡಂಕೂರ್ಮೆಯಿಂ | ಕಡ
ಮಂತತ್ಕಥೆಗೇಳನಿಂತೆಸೆಯುತಿರ್ದಂಭಕ್ತಿರತ್ನಾಕರಂ ||೧೪||

ವ || ಆಗಳಾಮಹಾತ್ಮನಿರವಂಕಂಡು ಸೈರಿಸಲಾರದಸೂಯೆಯಿಂ
ದುಷ್ಟಮತಸ್ಥರಿಲ್ಲರೊಂದುಗೂಡಿ.

ಕಂ|| ಪಿಡಿಯುಂ ಸಾಲಮುಮೆಂದುಂ | ಕಡಂಗೊಡಂಭವಿಗಳಿಂದುತೆಗೆ

ಳುತ್ತಿರ್ದಂ ॥ ಳ್ನುಡಿಯುಂ ಲೆಕ್ಕಿಸಸೀತನ । ಪೊಡರ್ಪುವೊಸತೆಂದಸೂಯೆ ಮಿಗೆಕುಟಿಲಾತ್ಮರ್ ॥೧೫॥

ಕಂ॥ ಇವನಪೊಸಧಾನ್ಯಬೀಜದ । ಭವನಮನುರುಪುತ್ತೆ ಬಳಿಯೊಳೀತನಜಲದಂ ॥ ದವನರಿವೆಮೆಂದುಬಗೆದಾ । ಭವಿಗಳ್ತದ್ಧಾನ್ಯಗೃಹಮನುರುಪಿದರಾಗಳ್ .... ॥೧೬॥

ವ॥ ಅಂತುರುಪೆಮೂಟೆಗೆಟ್ಟಿರ್ದಬೀಜಧಾನ್ಯರಾಶಿಯೆಲ್ಲಂ ಭಸ್ಮರಾಶಿಯಾಗೆಕಂಡು ಮುಗುಳ್ನಗೆನಕ್ಕು ತದ್ಭಸ್ಮರಾಶಿಯನೆಬಂಡಿಯೊಳ್ಕೊಂಡುಪೋಗಿಪೊಲದೊಳ್ಬಿತ್ತನೆಂತಂತೆಬಿತ್ತಿ.

ಕಂ॥ ಬೆಳದೆಂದಿನಬೆಳಸಿಂಪೆ । ರ್ಬೆಳಸಂಬಹುಧಾನ್ಯರಾಸಿವಡೆದಂಗಡನಿ ॥ ರ್ಮಳಮತಿಮುಂಣಂಪಿಡಿದೊಡೆ । ಫಳಿಲನೆಪೊಂಸಪ್ಪುದಲ್ತೆತಪ್ಪದೆಧರೆಯೊಳ್ ॥೧೭॥

ಉ॥ ವೃ॥ ಅಂದಿಳೆಯಾಳ್ವಬೊಂಮವಿಭುಬಿಳ್ತದೆಯುಂಬೆಳೆದಂಥರಿತ್ರಿಯೊ । ಳ್ಸಂದಿರೆತನ್ನಸಂಪುಪೊಸಧಾನ್ಯಮನೆಂದಿಳೆಪೇಳ್ಗುಮಂತದಂ ॥ ಕುಂದದೆಕೇಳ್ವಿವಿಂದಮುಕಂಡೆವಿದಂಘನಕೇತಿರಾಜನೋ । ರಂದದೆಬಿತ್ತಿಬೂದಿಯನೆಪೆರ್ಚಿಳಸಂಪಡೆದಂವಿಳಾಸದಿಂ ॥೧೮॥

ವ॥ ವಂದುಕೂರ್ಮೆಮಿಗೆ ಪಲರ್ಮೆಯಂತನ್ನ ಪೇರ್ಮೆಯುಂ ಭಕ್ತಜನಂ ಪೊಗಳುತ್ತಮಿರ್ದುದಲ್ಲಿ ಪೆರತೊಂದುದಿವಸಂ ದುರಾತ್ಮಕರಾದ ಜೈನರಾಕ್ಷೇತ್ರಪಾಲದೇವನತುರುಗಳಂ ತಸ್ಕರರಿಂ ಕೊಳಿಸೆ ತುರುಪಟ್ಟಿಯ ನಾಚೋರರೆಲ್ಲಾ ಧೇನುಗಳೆನಿರುಳೊಳ್ಪಿಟ್ಟು ಕಡುದೂರಂಬೆತ್ತಪರದೇಶಕ್ಕೆ ಕಡಂಗಿಪೊಡೆವಾಗಳ್.

ಉ॥ ವೃ॥ ಮೇಯುದೆಪುಲ್ಗಳಂಪಥದೊಳಾದೊಡವಿಮಾಂಟದೆಸತ್ಯಕೋನದೀ । ತೋಯಮನಿಂತುಸಪ್ತದಿವಸಂಬರೆಗಂತುರುಗಳ್ಬಳಲ್ವಿನಂ ॥ ವಾಯುಕೆತಂದೆವಿಂದಿವನಿವಕ್ಕಟಸತ್ತೊಡೆದೋಷಮುಕ್ಕುಮ । ನ್ಯಾಯವಿದೆಂದುಮುಂನಿನೆಡೆಗಟ್ಟಿದರಾಕಳಪಿಂಡನಾಖಳರ್ ॥೧೯॥

ಕಂ॥ ಎರೆಯುನೆಡೆಗಾವುಗಳ್ಬಿಡ । ದರುಚುತ್ತಂಬಾಯೆನುತ್ತೆಹುಂಕರಿಸುತ್ತಂ ॥ ಮರುಕಂಮಿಗೆನೆಗೆನೆಗೆದ । ಳ್ಕರಿನೋಡಿಬರುತ್ತಮಿರ್ದವತಿಭರದಿಂದಂ ॥೨೦॥

ವ॥ ಅಂತೇಳುದಿನಂ ನಡೆದ ಬಟ್ಟೆಯ ನೇಳುಂಭಾವ ದೊಳ್ಕಳೆದು

ಜವದಿಂ ಪರಿತಂದ ಪಶುಗಳ ನಾಕ್ಷೇತ್ರಪಾಲದೇವಂ ಪ್ರತಿಹೀನಂಗೆಯ್ದಾದ ತುರುಗಳೀಕೊಟ್ಟಗೆಯಂ ಪೊಗಲಾಗದೆಂದವಧರಿಸುತ್ತ ದರಗುಹೆಯುಬಾಗಿ ಲಂಬಂಧಿಸೆ ಪಸಿದುಬಳಲ್ದವಿವೆಂದು ಪೌರಜನಂಮರುಗಿಸಾರತರಮಪ್ಪ ತೃಣ ಜಲಮುಂ ಮುಂದಿಡೆ ಮುಟ್ಟಲೊಲ್ಲದೆ.

ಕಂ|| ಕೊಟ್ಟಗೆಯಂಬಲವರುತಂ | ನೆಟ್ಟನೆನಿಜಲಿಂಗದರ್ಶನಂಗೆಯ್ದ
ಪೆವೆಂ || ದಿಟ್ಟಣಿಸಿನಿಳ್ಕಿನೀಕ್ಷಿಸು ! ತೊಟ್ಟಜೆಯಿಂದರುಚಿಕರೆಯುತಿರ್ದವು
ಪಶುಗಳ್ ||೨೧||

ಕಂ || ಒಳಗೆಕಡುಪಸಿದುಬಡವಾ | ದೆಳೆಗರುಗಳ್ಕೇಳ್ದುಮವರದನಿ
ಯಂಬತಮಿಂ || ದಳಿದುದಿವಕೆಂದುಮರುಕಮ | ನುಳಿದರುಚದೆಸುಂಮನಿ
ರ್ದವೆಳಸದೆಸುಧೆಯಂ || .... ||೨೨||

ವ|| ಅನಿತರೊಳೇಲೇಶ್ವರ ಕೇತಯ್ಯಂ ತುರುಗಳಾಹಾರಂ ಗೊಳದ ಬಗೆಯಂಬಗೆದಂತೆ ಕಂಡುನಿಜವ್ರತಮಂ ಬಿಟ್ಟವಲ್ಲೆಂದು ತಿಳಿದು ಗೋಷ್ಠ ಕವಾಟಪುಟಮಂ ಭೋಂಕನೆಬಿರ್ಚಲೊಡನೆ ||

ಕಂ|| ಸಂತಣಿಸಿಪೊಕ್ಕುಲಿಂಗದ | ಮುಂದಣ್ಗೆರದೆಯ್ದಿಕರುಗಳಂಬ
ಗೆಯದೆನ || ಇಂದೀಕ್ಷಿಸಿತುರುಗಳ್ಬಲ | ವಂದೆರಗುತೆಮುಟ್ಟಲಿಂಗಮಂ
ಮಸ್ತಕದಿಂ || .... ||೨೩||

ಕಂ|| ಪರಿಸನನೇಮಮನೆಸಗು | ತುರುತರಮುದಮಾಳ್ದುಶರಣನ
ಡಿದಾವರೆಗಾ || ದರದಿಂನಸುಬಾಗುತೆನಿಂ | ದಿರೆಕಂಡಾಕೇತಿರಾಜನತಿಕೃ
ಪೆಯಿಂದಂ || .... ||೨೪||

ಕಂ|| ಎಳೆಪುಲ್ಲಂತಿಳಿನೀರಂ|ಗೆಳಲನೆಮುಂದಿಟ್ಟುನಾಗಳಾಕಳತಂಡಂ||
ಕೆಳೆಗೊಂಡುಮೇವುತಂಪು | ಲ್ಗಳನುಂಬುಗೊಳುತ್ತೆ ಕಳೆದುದಧ್ವಶ್ರಮಮಂ||

ವ|| ಅಂತು ಕಳೆದು ಸಂತಸಂದಳೆದಿಪಾರ್ಗಳ್ಕರುಗಳಂತಾದುದೆಲ್ಲ ಮಂಕಂಡು||

ಕಂ|| ವ್ರತಭಂಗಮಿಲ್ಲಮಿದಕೆಂ | ದತಿಶಯಮುದಮಾಳ್ದು ತೊರೆದ
ಪಶುಗಳಮೊಲೆಯಂ || ಮುತಿಮಿಗೆನೆಲಿದುಂಡವುಜನ | ತತಿಯುಚ್ಚರಿವಡೆದು
ಕೀರ್ತಿಸುತ್ತಿರೆಧರೆಯೊಳ್ || .... ||೨೬||

ಕಂ|| ಬಿಡದಾದವಲ್ತೆಪಶುಗಳು | ಮೊಡನಾತ್ಮವ್ರತಮುಸಧಿಕಸಂಕ

ಟದೊಳಿಪೆಂ ॥ ದೊಷಬಿಟ್ಟಮನುಜನವರಿಂ । ಕಡೆನಿಜಸುವ್ರತಮನವನಿ
ಯೊಳ್ಜಗದೇವಾ ॥ .... ॥೨೭॥

ಕಂ॥ ಧರೆಯೊಳಗೆಕೇಶಿರಾಜನ । ಪರಿಯಂಮುನ್ನರಿದೆಯುಪ್ಪೊಡೀಭ
ವಿಸಂಗಂ ॥ ದೊರಕೊಳ್ಗುಮೆಸಿನಗೆಂದಾ । ಶರಣಾಗ್ರಣಿಯೊರೆದುಮತ್ತ
ಮಂದಿಂತೆಂದಂ ॥ .... ॥೨೮॥

ಚಂ॥ ವೃ॥ ಧರೆಯೊಳೆನಾಚಿದೇವನೆನಿಪ್ಪೋರ್ವನುಮಾಧವಭಕ್ತನಾತ್ಮ
ಸುಂ । ದರಿತರುಣದ್ವಯಂಪುದಿಪಗಪ್ಪುನಾಳ್ದಿರುತಿರ್ದಪೆತ್ತೊಡೀ ॥ ರ್ವರನ
ವರೊಳಿರ್ವ್ರದಲ್ಜನಿಯಮಂಗೆವೃಷವ್ರತನೊಂದುಲಿಂಗಮಂ । ಧರಿಯಿಸಿಮ
ತ್ತೆಪುಟ್ಟದುದನೀಕ್ಷಿಸಿಕಾಲಮತೀತಮಪ್ಪುದುಂ ॥ ॥೨೯॥

ಕಂ॥ ಲಿಂಗಮನವಕಳಿಪಡಿಸದೆ । ಪಿಂಗಿರೆಕಂಡಬಲೆನುಡಿದಳೀಶಿಶು
ಗೀಗಳ್ । ಸಂಗತಮಪ್ಪಂತಿರೆಶಿವ । ಲಿಂಗಮನಳವಡಿಸದಿರ್ಪರೇಂಕಾರಣದಿಂ॥

ಕಂ॥ ಎನೆನಾಚಿರಾಜನೆಂದಂ । ವನಿತೆಗೆಕೇಳ್ತರುಣಿತರುಣಸರ್ವೋದ
ಯದೊಳ್ ॥ ಘನಲಿಂಗಮನಳವಡಿಪುದು । ವಿನುತಾಗಮವಿಹಿತವೀರಶೈವಾ
ಚರಣಂ ॥ .... ॥೩೧॥

ಕಂ॥ ಅಳವಡದೀಶಿಶುವಿಂಗಾ । ವಿಳಸತ್ಕ್ರಿಯೆಬಿಸುಟುಕಳೆಯುದ
ದರಿಂದಿವನೆಂ ॥ ದಿಳೆಯರಿಯೆಬಿಸುಡಿಪಿದನಾ । ಗಳೆಮಗುವಂಭಕ್ತನೆಂದೊ
ಡೇಂಪಣ್ಣೆಪುದೊ ॥ .... ॥೩೨॥

ಕಂ॥ ಇಂತೆಸೆವವೀರಶೈವಮ । ಹಾಂತರಸನ್ಮಾರ್ಗಮೊಪ್ಪುತಿರೆಬಿಟ್ಟ
ದನೋ ॥ ರಂತೆಕುಮಾರ್ಗದೊಳಡಿಯಿಡ । ಲಿಂತೊಲ್ದಿದುರಾತ್ಮಬೋಧೆಯೆ
ಗೆಯ್ಯದೊಪೇಳ್ ॥ .... ॥೩೩॥

ಕಂ ॥ ಅಲ್ಲದುದನಪ್ಪುಗೆಯ್ಯುವ । ರಿಲ್ಲದುದಂತೋರ್ಪುಮಳ್ಳುದುದ
ವಂಚಿಪರೆ ॥ ಲ್ಲಿಲ್ಲಿಯುಮಿಾಖಿಳರವನೀ । ವಲ್ಲಭರಮುರುಳ್ಚಿಸೆಳೆವರೀಪ್ಸಿತ
ವಸುವಂ ॥ .... ॥೩೪॥

ಕಂ॥ ವಿಮಳನಿಗಮಾಂತಗದಿತೋ । ತ್ತಮಶಿವಧರ್ಮಮನಗಲ್ದುಮು
ನಿಶಾಪಹತ ॥ ರ್ಕಮತಮನವಲಂಬಿಸಿದು । ರ್ದಮರೀದ್ವಿಜರಭವಭಕ್ತರಂ
ನಿಂದಿಸುವರ್ ॥ .... ॥೩೫॥

ಕಂ॥ ಹರಚರಣದ್ರೋಹಿಗಳೀ । ಶ್ವರವಿಮುಖರೆನಿಪ್ಪಪರಮಪಾಷಂ
ಡರಿವಂ ॥ ದಿರಸಂಸರ್ಗಂತ್ರೀಯು । ಸ್ಕರಮುಕ್ತಮೆಲಿಂಗಭಕ್ತಸಂತತಿಗಿಳೆ
ಯೊಳ್ ॥ .... ॥೩೬॥

ಚಂ || ವೃ || ಪಶುಕುಲಪಾಶಹಾರಿಪರಮೇಶ್ವರನೊಪ್ಪಿರೆಬಿಟ್ಟನಲ್ಕೆ ಯಿಂ | ಪಶುಗಳನಾವನೊಂದಿನಿಜಪಾಶವಿಮುಕ್ತಿಗೆಸೇವೆಗೆಯ್ವನಾ|| ಪಶುನ ರನಾಸ್ಯದೊಳ್ಕಿಸುಪ ಮೂಗರಿದಿಟ್ಟಗೆಯುರ್ದಿಬೇಗದಿಂ | ಪಶುಪತಿಯಾ ನೊಗಕ್ಕೆಮ: ಕುರಂಬಿಡಿದಾಗಳೆತೋರದಿರ್ಪನೆ || .... ||೩೭||

ಕಂ|| ವಿಮಳಾಂಬುವಿನೊಳ್ಬಿಂಬಿಪ | ಕಮಲಸಖಂಪಂಕದಲ್ಲಿಬಿಂಬಿಸುಗುಮೆಜಂ || ಗಮಲಿಂಗಭಕ್ತರೊಳೆತ | ಳ್ತಿಮಹೇಶ್ವರನನ್ಯಭವಿಗಳೊಳ್ಬಿರಸುಗುಮೆ || .... ||೩೮||

ಉ|| ವೃ|| ಬಲ್ಲನೆಗಾನಮುಂಬಧಿರನಂಧಕನಗ್ಗದರತ್ನದೀಪಮುಂ| ಬಲ್ಲನೆತತ್ಸುಧಾರಸದಬಲ್ಲವಿಯುಂಜ್ವರಿತಾಂಗಮಾನವಂ || ಬಲ್ಲನೆಪ್ರಚುರ್ಗೊಂಡಶುನುಜಂಶಿವತತ್ವಸದರ್ಥಸಾರಮುಂ | ಬಲ್ಲನೆಬಲ್ಲನೇಕುಕವಿಸತ್ಕವಿಕಾವ್ಯಕಲಾಕಲಾಪಮುಂ || .... ||೩೯||

ಮ|| ಖರಮೇಂಬಲ್ಲುದೆನಾಕಲೋಕಸುಖಮುಂಮಾಣಿಕ್ಯಮುಂಧೂರ್ತವಾ | ನರಮೇಂಬಲ್ಲುದೆಗೂಗೆಬಲ್ಲುದೆಲಸನ್ಮಾರ್ತಾಂಡನಂಗಂಧಬಂ || ಧುರಕಂಜಾತಮರಂದಮುಂನೊಳವದೆಂತುಂಬಲ್ಲುದೇಕರ್ದಮು | ಸ್ಥಿರಮುಂಡೂಕನೊರಲ್ದುಬಲ್ಲುದೆಮಹಾಂಭೋರಾಸಿಗಾಂಭೀರ್ಯಮುಂ || ||೪೦||

ಕಂ || ನಿನ್ನಾತ್ಮನದೇಂಬಲ್ಲುದೆ | ಪನ್ನಗಧರಶರಣಚರಣಸರಸಿಜಸೇವಾ|| ಸನ್ನುತಸುಖಮುಂಭವಮುದ| ಮನ್ನಾಗಮತಂಗಜಾರಿಯುಂಜಗದೇವ||

ಚ|| ವೃ|| ಸುರಮಣಿಪಾಣಿಯಲ್ಲಿರೆಬಿಸುಟ್ಟಳಿಗಾಜನಪೇಕ್ಷಿಪಂತೆನಿ | ರ್ಜರತರುಪಿತ್ತಲಲ್ಲಿರೆತದರ್ಥನೆಗೆಯ್ವುದೆಬೂರಮುಂಸಮಂ| ತೆರೆವವಸಂತೆದೇವಪಶುವಂಗಣದಲ್ಲಿರೆಮಾಣ್ದುಕಳ್ತೆಯುಂ | ಪಿರಿದಮುದೀರ್ಂಟಲಾದರಿಪವೊಲ್ನಿಧಿಮುಂದಿರೆನೂಂಕಿವಾರಿಯಿಂ || .... ||೪೨||

ಮ|| ಜರಗಂಕರ್ಚುವಪ್ರೋಲ್ಸುಧಾಸುರಸಮಿಂಬಾಗುತ್ತೆಕೈವಟ್ಟಲ|ಲ್ಲಿರೆಕೂರ್ತಿರ್ಂಟದೆಗಂಜಿಯಿಂಟಲೆಸೆವಂತಾವೋದದಾವೋದತಾ || ಮರಸಂತಳ್ತಿರೆಬಿಟ್ಟುಗೋರಟೆಯಪೂಗೊಲ್ವಂತೆವೋಲ್ಬ್ರಂಡಶ | ರ್ಕರೆಕೈಸಾರ್ದಿರೆಮೆಲ್ಲದಂತಿರಿಸಿಬೇವಂಮೆಲ್ವವೋಲ್ಧಾತ್ರಿಯೊಳ್ || ||೪೩||

ಕಂ|| ವಿಮಳಶಿವಂಕರಶಿವಭ | ಕ್ತಿಮಾರ್ಗಮಿರೆವರ್ಜಿಸುತ್ತೆಭವಿಕರ್ಮವಿಧಾ || ನಮನೊಲ್ದೆಸಗಿದೆಕೇಳೆಲೆ | ಕುಮತಿಕುಲೋತ್ತಂಸನಿನ್ನನೇನೆಂದಪುದೊ || .... ||೪೪||

ಕಂ|| ಭವಸಾಗರಮಂದಾಂಟಪ | ಶಿವಭಕ್ತಿಯೆನಿಪ್ಪತೆಪ್ಪಮುಂಸಾರ

ಡಿದು ॥ ರ್ಭವಿಜನಮೆಂಬತುಂಬೀ । ನವಫಲದೊಡೆದೋಡನೇಕೆಪಿಡಿದಿದು
ದಾಂಘ ॥ .... ॥೪೫॥

ಕಂ॥ ಅಂಗುಳಮದೊರ್ೀಪರಿಯು । ನಂಗಳದಸಿಧಾನಮಾಡಶಿವಭಕ್ತಿ
ಯುನೀಂಪಿಂಗಿಭಪಿವೃತ್ತಿದಾಳ್ದಿಕ|ಡಂಗುತೆನಿನ್ನಂನನನ್ಯನಾವನೊಗಾಂಪಂ॥

ಮ ॥ ವೃ ॥ ಜಲದೊಳ್ಮಾಂದೆಶಿಲಾಜ್ವಯಕ್ಕೆಮೃದುಭಾವಂಬರ್ಪುದೇ
ನೀರ್ಗಳಿಂ । ತೊಳೆಯುತ್ತಂಪಿರಿದೆತ್ತಿಕಂಬಳಿಬೆಳರ್ಪಂತಾಳ್ವುದೇಪಾಲನು॥
ಜ್ವಳಸರ್ಪಂಗೆರೆದೋವೆನಿರ್ವಿಷತೆಯುಂ ಕೈಕೊಳ್ವುದೇಕಟ್ಟನೇ । ಪ್ರಳವ
ಟೊಪ್ಪಿರೆನೀವೆಜಾಯಿಲನಬಾಲಂನೇರಿತೇನಪ್ಪುದೆ ॥ ॥೪೭॥

ಕಂ॥ ನಿಂಬಮಿಸಿದಪ್ಪುದೆಮಧು । ವಂಬೆರಸುತೆಪಾಲನೆರೆಯೆಮೂ
ಧಂಗೆನಿತಂ ॥ ಬೆಂಬಿಡದೆಬೋಧಿಸಿದೊಡಂ । ತ್ರ್ಯಂಬಕಪದಭಕ್ತಿಸೌಖ್ಯ
ವಾಂಪನೆಧರೆಯೊಳ್ ॥ .... ॥೪೮॥

ಕಂ॥ ಭವನದಮುಂಗಡೆಯೊಪ್ಪುಪ । ಕವಿಲೆಯನುಳಿದಧಮಶುನಕ
ನಂಪೂಜಿಸವೊ ॥ ಲ್ಶಿವನನುಳಿದಧಮದೈವಮ । ನವಿವೇಕದಿನರ್ಚಿಪಾತ
ನೇಂಜಡಮತಿಯೊ ॥ .... ॥೪೯॥

ಕಂ॥ ಹರನಂಪೂಜಿಸದುಳಿದ । ಧ್ವರಮಂಬಲದಕ್ಷನೆಸಗಿಪರದೇವ
ತೆಯುಂ ॥ ಪಿರಿದರ್ಚಿಸಿದುರ್ಮತಿನಿಜ । ಶಿರಮಂಪ್ರೋಗಾಡಿನಗಿಸಿಕೊಂಡಂ
ಧರೆಯೊಳ್ ॥ .... ॥೫೦॥

ಕಂ॥ ಭೂತಳದೊಳೆಂದುಭೂಸುರ । ಜಾತನುನರ್ಚಿಸಿದಗೌತಮುಂ
ಗೋಹತ್ಯಾ ॥ ಪಾತಕಕೊಳಗಾದಂಗಡ । ಮಾತೇಂದ್ವಿಜಭಜನೆಮೊಳ್ಳ
ನೇಂಸಾರ್ಚುಗುಮೆ ॥ .... ॥೫೧॥

ಕಂ॥ ತರುಣಿಗೆಕೆಡುವುದುಗಡಪಾ । ದರದಿಂಚಿರಕಾಲರಚಿತಪತಿಭ
ಕ್ತಿಮಹೀ ॥ ಶ್ವರಭಕ್ತಿಮಳಿಗುಮನ್ಯಾ । ಮರಭಜನದಿನೀಶಭಕ್ತನಾದಂ
ಗಿಳೆಯೊಳ್ ॥ .... ॥೫೨॥

ಕಂ॥ ಪರದೈವಭಜನದಿಂಭ । ಕ್ತಿರಸಂಬರಿದಪ್ಪುದೊಡೆದಕುಂಭದಜ
ಲದಂ॥ ತಿರೆಶೀಲಂತುಹಿನಂಪ್ರೊ|ಯ್ದುರವಿಂದವವೊಲ್ವಿನಷ್ಟಮಪ್ಪುದುನಿಜದಿಂ॥

ಕರ॥ ಹರಭಕ್ತಂಗೋರ್ವಂಗಾ । ದರದಿಂದುಣಲಿತ್ತಸುಕೃತಕೆಣೆಯ
ಲ್ತಮಹೀ ॥ ಸುರಕೋಟಿಗುಣಲ್ಬಡಿಸುತೆ । ನೆರಪಿದಸುಕೃತಂದಲೆಂಬುದಾ
ಗಮವಚನಂ ॥ .... ॥೫೪॥

ಕಂ॥ ಸುವಿವೇಕಚಂದ್ರಜಲಧರ । ಮವಿವೇಕಮಹೀಜಬೀಜಮಘ

ಘೂಕಸಮು || ತ್ರವಕರತಿಮಿರಂಭವಘೋ | ರವಿಷೋರಗದಂತಮುತ್ತೆಭನಿ ಸಂಸರ್ಗಂ ||೫೫||

ವ|| ಎಂದಿಂತು ಭಕ್ತಿರತ್ನಾಕರಂನುಡಿದಾಕ್ಷೇಪೋಕ್ತಿಗೇಳ್ದು ಜಗದೇವಂಬೆರ್ಚಿ ಬೆಗಡುಗೊಂಡು ನಿಜಾಪರಾಧಮಂನೆನೆದು ಬೆಮರ್ತುಕಳಂಪಿಸಿ ಶೋಕಾಕುಲೀಕೃತಚಿತ್ತನಾಗಿ ಸಾಷ್ಟಾಂಗಮೆರಗಿ ಗಣಸಭೆಗೆ ಕೈಗಳಂ ಮುಗಿದು ನಿಂದು.

ಮ|| ವೃ|| ಅತಿಪಾಪಾತುರನಂವಿನಷ್ಟಮತಿಯಂದುಷ್ಟಾಟ್ಟಸಂಘೂರ್ತನಂ | ಗತನಂದುರ್ಮುಖನಂದುರುಕ್ತಿಪರನಂದುರ್ಭಾಗ್ಯನಂಸದ್ವ್ರತ|| ಚ್ಯುತನಂಸತ್ವವಿಹೀನನಂ ಖಲನನಾತ್ಮದ್ರೋಹಿಯಂದುರ್ಗುಣಾ | ನ್ವಿತನಂ ನಿತ್ಯಕೃತಾಪರಾಧಶತನಂನಿರ್ಲಜ್ಜನಂನೀಚನಂ ||೫೬||

ಕಂ|| ಶಿವಭಕ್ತಿದೂರನಂಶಾಂ | ಭವಮಹಿಮೆಯನರಿಯದಜ್ಞನಂತಾಮಸನಂ || ಭವಪಂಕಮಗ್ನಪಶುವಂ| ತವೆರಕ್ಷಿಪುದೆನ್ನನೆಲೆಕೃಪಾರಸಜಲಧಿ||

ವ|| ಎಂದತಿದೈನ್ಯಂಮಿಗೆ ಬಿಂನವಿಸಿ ಮತ್ಕೃತಾಪರಾಧೋಚಿತಪ್ರಾಯಶ್ಚಿತ್ತಮೊಂದಂದಯೆಯಿಂ ನಿರೂಪಿಸಲ್ವೇಳ್ಕು ಮೆನೆಶರಣಗಣಾಜ್ಞೆಯಿಂ ಶಿವಜ್ಞಾನಧುರೀಣನಿಂತೆಂದಂ.

ಕಂ|| ಜಗದೇವಕೇಳ್ವುದೆಸೆವೀ | ನಗರದೊಳೊಗೆಯುದುವಲಂಶಿವದ್ರೋಹಮುದಂ || ನೆಗಳ್ದನನಂತಕಪುರಮಂ | ಪುಗಿಸಲೆನೀಂನೆಗಳ್ದದೋಷಕಿದುಪರಿಹಾರಂ ||೫೮||

ವ|| ಎನೆದೇವ ಮಹಾಪ್ರಸಾದಮಂತೆ ಮಾಳ್ಪೆನೆಂದೆರಗಿ ತದ್ವತ್ತವೀರತಾಂಬೂಲಮಂ ಕೊಂಡು ವಿಜಯೋದ್ಧತಂ ಬಸವಪ್ರಮುಖ ಶಿವಗಣಂಗಳ್ಗೆ ದಯೆವುಟ್ಟುವಂತೆದಾಸಭಾವಂದೋರಿ ಮಗುಳ್ದು ಮೆಯ್ಮಿಕ್ಕಿ ನಿಜಗೃಹಕ್ಕೆಬಿಜಯಂಗೈಸಿತಂದು ಸಾದರಂಮಿಗೆ ಪಾದಪ್ರಕ್ಷಾಳನಂಗೆಯ್ದು ಪಾದೋದಕಂದಳೆದುಸಾಂಗಮೆನೆತತ್ಪೂಜೆಯನೋಜೆಯಿಂವಿರಚಿಸಿದಾಗಳ್.

ಕಂ|| ಫಣಿರಾಡ್ಭೂಷಣನಮಹಾ | ಗಣತತಿಜಗದೇವರಚಿತಪೂಜೋತ್ಸವದಿಂ || ತಣಿವೇರಿಶಿವನಸುಖಸಂ | ದಣಿವಡೆದೊಪ್ಪಿರ್ದುದತುಳಸಂಭ್ರಮದಿಂದಂ ||೫೯||

ವ|| ಆಪ್ರಸ್ತಾವದೊಳ್.

ಮ|| ಸ್ರ|| ವೃ|| ಶರಣಾನಂದಾಬ್ಧಿಚಂದ್ರಂಶಿವಗಣಚರಣಾಂಭೋಜ

ಪೂಜಾಪಿತಂದ್ರಂ | ಕರುಣಾಪೂರ್ಣಾಂತ ರಂಗಂಕಲಿತನಿಜಶಿವಾದ್ವೈತವಿದ್ಯಾಪ್ರಸಂಗಂ ॥ ಪರಮಾರ್ಥಜ್ಞಾನದೀಪಂಪ್ರಬಳಜಗದುಪಾರೂಢಮಾಯಾವಿಲೋಪಂ |. ಗುರುರೂಪಂರಂಜಿಸಿರ್ದಂಗುಣನಿಧಿವಿಕ್ರತಾನಂದಸಾಂದ್ರಂವೃಷೇಂದ್ರಂ ॥೬೦॥

ಮಂದಾಕ್ರಾಂತವೃತ್ತ ॥ ವಿದ್ಯಾರೂಪೇವಿಧಿವಿಧುವಧೂವಂದ್ಯಮಾನಾಂಘ್ರಿಪದ್ಮೇ | ವಿದ್ಯುದ್ವಲ್ಲೀಪ್ರತಿಭಟಕಟಾಕ್ಷಚ್ಛಟಾಭಾಸಮಾನೇ ॥ ಹೃದ್ಯಾಮರ್ತ್ಯಸ್ತುತಗುಣಗಣೆವಿಶ್ವಲೋಕೈಕಮಾತೇ | ಸದ್ಯೋಗೀಂದ್ರಪ್ರಕರವರದೆಪಾಲಿಸೆನಂಭವಾನೀ ॥೬೧॥

ಗದ್ಯ॥ ಇದು ವಿನಮದಖಿಳಸುರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತರುಚಿಸಿಚ ಯತರುಣಾತಪಪರಿಲಸಿತ ಪರಮ
ಶಿವಲಿಂಗ ಪಾದಾರವಿಂದಪರಾಗ ಭಸಿತ ಭಾಸುರಲಲಾಟ
ಪಟ್ಟ ಸರಸಜನಮಾನಿ ತೋಭಯಕವಿತಾವಿಶಾರದಶ್ರೀ
ಷಡಕ್ಷರದೇವಭಕ್ತಿ ವಿರಚಿತ ಶ್ರೀಮದ್ಬಸವರಾಜ
ವಿಜಯಮಹಾ ಪುರಾಣದೊಳ್ ಬಸವೇಶಕಥ
ನಮೇಕಚತ್ವಾರಿಂಶದಾಶ್ವಾಸಂ
ಪರಿಸಮಾಪ್ತಂ

ಅಲ್ಲಯ್ಯ ಮಧುರಯ್ಯ ಕಥನಂ.

ನಾಂದಿ ॥ ಲಲಿತಪದವೃತ್ತ ॥ ಪಕ್ಷಿಪರಥಾಕ್ಷಿಪದರುಕ್ಷಪವಳಕ್ಷಕದಿದೃಕ್ಷವಿಜಿತಾಕ್ಷಸುಮುಮುಕ್ಷುಜನವೀಕ್ಷಾ | ಲಕ್ಷಿತತರಕ್ಷುತನುರಾಕ್ಷಸವಪಕ್ಷಖಿಲದಕ್ಷಮುಖಶಿಕ್ಷನಿಟಲಾಕ್ಷಗಮುಹೋಕ್ಷಾ ॥ ಯಕ್ಷಪತಿಪಕ್ಷಮಿಳವಕ್ಷಯುಗುಣಾಕರಮುರಿಕ್ಷಗರಭಕ್ಷಕುಭಲಕ್ಷಣಗಣೇಂದ್ರಾ | ಧ್ಯಕ್ಷರಿಪುಕಕ್ಷದವಸಾಕ್ಷರಕೃತಕ್ಷಣಕಟಾಕ್ಷಪ್ರೋಟಿಸಕ್ಷಮುಮುಚಕ್ಷಣವೃಷೇಂದ್ರ ॥

ಕಂ॥ ಶ್ರೀಶಾಂಭವೀಶುಭಾಂಗನಿ | ವೇಶಿತವಾಮಾಂಗನರಗಜಾಹಿತನುರುಗಾ ॥ ಧೀಶನರನಮುಳಗುಣನಿಧಿ | ಕೋಶಂಕುಡುಗೆಮಗೆಭಕ್ತಿಯಂಶಿವಲಿಂಗಂ ॥೧॥

ವ॥ ಇಂತುನಿಜಾಂತಃಪುರದೊಳ್ಶಿವಗಣಾನುಭವಗೋಷ್ಠಿಯೊಳ್ನಿಲಸಿ

ಹುಹಿಮಾಕರಂ ಸುಖವಿರ್ಪಂನೆಗಮಾನಗರಿಯೊಳಲ್ಲಯ್ಯನುಂ ಮಧುವಯ್ಯನುಮೆನೆ ಪೆಸರ್ವಡೆದು.

ಕಂ|| ಗುರುಚರಲಿಂಗಾರಾಧಕ | ರುರುತರಶೀಲವ್ರತಾನ್ವಿತರ್ಜಿತಮಾಯ || ರ್ಪರಮಶಿವತತ್ವವಿದರೀ | ಶ್ವರಭಕ್ತವರೇಣ್ಯರೆಸೆವರಮಳಚರಿತ್ರರ್ ||

ವ|| ಅಂತವರೀರ್ವರು ಮನ್ಯೋನ್ಯ ಸಮಾರೂಢ ಸೌಹಾರ್ದ್ರದಿಂಕೆಲವಾನುಂದಿವಸಂಶಿವಭಕ್ತಿಸೌಖ್ಯದಿ ಮೊಪ್ಪುತ್ತಮಿರ್ಪಿನ ಮಲ್ಲಿ ತಚ್ಚರಿತ್ರವೈಭವಮಂ ಕಂಡಸೂಯೆಯಿಂ ಸೈರಿಸಲಾರದೆ ಪಿಸುಣ್ಗೆಡೆದ ಪರಸಮಯಿಗಳ ಕುಹಕೋಕ್ತಿಯಂಕೇಳ್ದು.

ಕಂ|| ತಿಳಿದಿರ್ದುಂವೃಷಭೇಂದ್ರನ | ಬಳವನ್ಮಹಿಮೆಯನಘಾಗ್ನಿಶೋಷಿತಸಂವಿ || ಜ್ಜಳಬಿಜ್ಜಳನಾಭಕ್ತರ | ವಿಳಸದ್ರುಚಿಲೋಚನಂಗಳಂತೆಗೆಯಿಸಿದಂ ||೩||

ವ|| ಆಗಳಾವಾರ್ತೆಗೇಳ್ದು ಕೆನಲ್ದು ವೃಷಭೇಂದ್ರಾದಿಗಣಂಗಳೊಂದೆಡೆಯೊಳೊಂದುಗೂಡಿ ನಿಜಾನುಚರರಿಂ ತದ್ಭಕ್ತರಂಬರಿಸಿ ಯಥೋಚಿತಸನ್ಮಾನಂಗೆಯ್ದು.

ಕಂ|| ಪರಮಶಿವಗಣದನುಜ್ಞೆಯ | ನಿರದಾಂತುನಿರೀಕ್ಷಿಸುತ್ತೆ ತದ್ಭಕ್ತರ್ಗಾ || ದರದಿಂಕಣ್ಗಳನಿತ್ತಂ | ಕರುಣಾನಿಧಿಬಸವನಸಮನನುಪಮಮಹಿಮಂ ||೪||

ವ|| ಅಂತಿತ್ತು ಜಗನ್ನುತನೊಪ್ಪಿರೆ ತತ್ಪುರದ ಪೌರಜನಂ ಗುಜುಗುಜಂಗೊಂಡಲ್ಲಲ್ಲಿನೆರೆದು

ಕಂ|| ಯಮಪುರಿಗೆ ಯ್ದುವಸಮಯಂ | ಸಮನಿಸಿದುದಿವಂಗೆನ್ನಪತಿಗಲ್ಲದೊಡೀದ್ರೋ || ಹಮನಳ್ಕದೆಮಾಳ್ಪನೆಮುಳಿ | ಯೆಮಹೇಶ್ವರಭಕ್ತರುಳಿವರಾರ್ಧಾರುಣಿಯೊಳ್ ||೫||

ಕಂ|| ಹರಶರಣರಳವನವರುರು | ತರಮಹಿಮೆಯನೆಯ್ದೆ ಮುನ್ನ ಕಂಡರಿಯನೆಭೂ || ವರನಿಂತುಶಿವದ್ರೋಹಮ | ನಿರದೆಸಗಿದನಕಟಕುಮತಿಯಿನ್ನುಳಿದಪನೇ ||೬||

ವ|| ಎಂದಲ್ಲಿ ನುಡಿಯುತ್ತಮಿರ್ಪಿನಮಾಶರಣವರೇಣ್ಯರೆಲ್ಲ ಕೋಪೋದ್ದೀಪಿತಹೃದಯರೀ ಪ್ರೊಳಲೊಳಿನ್ನಿರಲ್ತಕ್ಕುದಲ್ಲೆಂದು ನಿರ್ಧರಿಸಿ ಜಗದೇವನಂ ಬಳಿಯಟ್ಟಿಬರಿಸಿ ಬಿಜ್ಜಳನೆಸಗಿದಪರಾಧಮನವಂಗೊರೆದು.

ಕಂ॥ ಅಂದಿತ್ತ ನಿನ್ನಭಾಷೆಗೆ । ಬಂದುದುದಿನವಿದಾಮಹೇಶ್ವರದ್ರೋ
ಹಿಯುನೋ ॥ ರಂದದೆಸಹ್ಮರಿಪುದುಸೀ । ನಂದಾಗಳ್ಬಸನನಿತ್ತು ಕಳುಪಿದರ
ವನಂ .... ॥೭॥

ವ॥ ಅಂತು ಕಳುಪಿಮಾಚಿದೇವನುಂ, ಮಾದಿರಾಜನುಂ, ಸುರಗಿಯ
ಚೌಡಯ್ಯನುಂ, ಮುಸುಡೆಯಚೌಡಯ್ಯನುಂ, ಕಿನ್ನರಬೊಮ್ಮಯ್ಯನುಂ, ಕ
ನ್ನದಬೊಮ್ಮಯ್ಯನುಂ, ಕಲಕೇತಯ್ಯನುಂ, ಕರುಳಕೇತಯ್ಯನುಂ, ದಸರ
ಯ್ಯನುಂಮುಖ್ಯರಾದ ಶರಣರ್ಚರಲಿಂಗ ಸಂದೋಹದೊಡನೆ ಬಿಜ್ಜಳನಂ
ಕಸಿಯಿಸಿ ಬಸವರಸನೊಡನೆ ಸಂಗಮಸ್ಥಾನಮೆನಿಪ್ಪ ಕಪ್ಪಡಿಗೇಳ್ತರುತ್ತಮಿ
ರ್ದರಿತ್ತಲ್.

ಕಂ॥ ಪೊಳಲಸಿಬಿತನ್ಮಹಾತ್ಮರ । ಬಳಿವಿಡಿದೆಯ್ದುದುಪೊಳಲೊಳು
ತ್ಪಾತಶತಂ ॥ ಮೊಳೆತುಬಳೆದುರ್ಬಿಪರ್ಬಿದು । ದಿಳಿಕಂಪಿಸಿದತ್ತು ಪೆಳರ್ದ
ದಾಪೌರಜನಂ ॥೮॥

ಕಂ॥ ಇರಲಾಗದಿನ್ನೆನುತ್ತಂ । ಪುರಮುಂಪೊರಮಟ್ಟುಪೋದರರಿಬ
ಭರ್ವಿದಾ ॥ ಸುರರಲ್ಲಿಶಾಂತಿಹೋಮೋ । ತ್ಕರಮುಂನೆಗಳುತ್ತಮಿರ್ದರತಿಭ
ಯಚಕಿತರ್ .... ॥೯॥

ಕಂ॥ ಅಡರ್ದಮೃಗರಾಜಪೀಠಂ । ನಡುಗಿದುದುನಿಜೋತ್ತಮಾಂಗ
ಮಂಜನಪಂಕ ॥ ನ್ನಡಿಯಲ್ಲಿನೋಡಿಕಾಣದೆ । ಬಿಡಿಮಿಡಿಕೊಳುತಿರ್ದನಸ್ತ
ಧೈರ್ಯೋದ್ರೇಕಂ ॥೧೦॥

ಕಂ॥ ಜಗದೇವಂಮನೆಗೇಳ್ತರೆ ॥ ನೆಗಳ್ದಾತನಜನನಿವೀರಭಕ್ತಿರಸಾಕ್ಶೈ
ಮಿಗೆನೋಡಿನುಡಿದಳಿಂತೆಂ । ದಗಲದೆನಿಜತನುಜನೊಡನೆಕನಲುತ್ತಾಗಳ್ ॥

ಕಂ॥ ವಸುಧೆಯೊಳೆಶಿವದ್ರೋಹಮ । ನೆಸಗಿದನಂಕಂಡುಸೈರಿಸುವ
ನಾವನವಂ ॥ ಮಸಕಂಗುಂದದಪಾಪ । ಪ್ರಸರಕೆಪಕ್ಕಾಗಿಭವಸರೋಧಿ
ಯೊಳಾಳ್ಗಂ ॥೧೨॥

ಮ॥ ವೃ॥ ಗಿರಿಶದ್ರೋಹಿಯನಿಕ್ಕಿ ಕೊಲ್ವುದುಸಮರ್ಥಂಮಾಣದಾಪಂ
ದುತಾಂ । ಮರಣಂಬೊಂದುವುದಗ್ಮೆಶಕ್ತಿ ತನಗಿಲ್ಲಾದಂದುಭಕ್ತಂಗೆಸ ॥ಕ್ಷ
ರಿತಾಂನೋಣೆಮಯುಕ್ತಮಾನ್ಮಲಿಲಸಾ ಪುತ್ರಾಪ್ತಮಿತ್ರರ್ಕಳೊ । ಳ್ಪಿರ್ಥಿ
ದ್ರೋಹಮನಾಳ್ದರಂತರಿಪುದುಳ್ಳತ್ತೇಳ್ಕುವಿದಾಶಾಜ್ಞೆಯಿಂ ॥೧೩॥

ಕಂ॥ ಹರನಿಂದೆಗೇಳ್ವತನ್ನಯ । ಹರಣಮನೇಂಬಿಡಳಿದೇವಿಯುಪ

ಮನ್ಯುಮುನೀ || ಶ್ವರನುರಿದುಭಸ್ಮವಾಗನೆ | ಗುರುತರನಿಜಕೋಪಶಿಖಿಯಿ
ನೊಲ್ವಿನಮುಭವಂ ||೧೪||

ಕಂ|| ಅಸುವಂಶಿವಕಾರ್ಯಕೆವಂ | ಚಿಸುವಧಮುಂಗೆಲ್ವಮತಿಗೆಕುಟಿಲಾ
ತ್ಮಂಗೀ || ರಸೆಯೊಳ್ಕಿವಸೊಲ್ವನೆಮಂ | ನಿಸುವರೆಗಣವರ್ಯ್ಯರಕ್ಕುಮೇಮುಕ್ತಿ
ಸುಖಂ ||೧೫||

ಕು|| ಪ್ರ|| ವ|| ಹರಭಕ್ತದ್ರೋಹಮುಂಮಾಡಿದನರಪತಿಯಂ ಕೊ
ಲ್ವುದುಂಕಾಯ್ವುದುಂಶಂ | ಕರಭಕ್ತಪ್ರೋತ್ಕರಕ್ಕೇನರಿದೆಪಿರಿದೆತ್ತದ್ಭಕ್ತ
ನೋರ್ವಂಗೆಕಾಯ್ಸಂ || ನೆರಪುತ್ತ್ರಂಬಾಳ್ವನಾವಂಭುವನತತಿಯೊಳಿಂದ್ರಾ
ಚ್ಯುತಾದ್ಯರ್ಕಳೊಳ್ಕಿಂ |ನಿರವಂನೋಡಲ್ಕೆಬೇಗಂಬೆಸಸಿತಳರ್ದರೀಕಜ್ಜಮಂ
ಭಕ್ತವರ್ಯ್ಯರ್ ||೧೬||

ಕಂ|| ಇದುನಿನಗೆಸಮುಚಿತ್ರಂಗೆಡ | ವೊದಲೊಳ್ಕೀನಿತ್ತಭಾಷೆಸಲ್ವು
ದುಖಳನಂ || ಸದೆಯೆಸದೆಯಲ್ಕೆನೀಂತ | ಳ್ವಿದೆದುರ್ಮತಿನಿನ್ನವೊಲ್ಬುರಾತ್ಮ
ರುಮೊಳರೆ ||೧೭||

ಕಂ|| ನೆರೆಪೂಣ್ದುಪೂಣ್ಕೆಯುಂನೀಂ | ಮರೆದೆಯೊದೃಢವೀರಭಕ್ತಿಯು
ಜ್ಜುಗದೊಲವಂ || ತೊರೆದೆಯೊನಿಜಾಸುಭಯದಿಂ | ಪೆರವೆಗೆದೆಯೊಪೇಳುನೆ
ನ್ನಿಯಿಂಜಗದೇವಾ ||೧೮||

ಮ|| ವೃ|| ಪ್ರಮಥದ್ರೋಹಿಯನಿಕ್ಕದಿಂತುಮನೆಗೇಳ್ತಂದ್ಯೆಮಹೇಶ
ಪ್ರಸಾ | ದಮನಾರೋಗಿಸಲೆಂದುಚೀಖಳಗಣಾಜ್ಞೋಲ್ಲಂಘನಂಗೆಯ್ದೆದು||
ರ್ದಮನೀಂಕುರ್ಕುರನಪ್ಪೆಯೆಂದುರೆಚಿಟ್ಟುಂಕಿಂದುರ್ಬ್ಬಿರೇಯೆಂದನು | ತ್ಕ್ರ
ಮದಿಂದಂಕರೆಯುತ್ತೆಮಂದಿರಬಹಿರ್ದ್ವಾರಾಂತಭೂಭಾಗದೊಳ್ ||೧೯||

ಕಂ|| ಸುರಿದಳ್ಕಿವಪ್ರಸಾದನು | ನಿರದಾಂಸೊಣಗೆಂದಲಪ್ಪೆನೆನುತವ
ನುಣಲೊ || ಲ್ದಿರೆಬಂದರಲ್ಲಿಗತಿನಿ | ರ್ಭರದಿಂದಂಮಲ್ಲಬೊಮ್ಮರೆಂಬವ
ಹಾತ್ಮರ್ .... ||೨೦||

ಕಂ|| ಆವನೊಡನುಂಡಮುರ್ದದಿಂ | ಶಿವಪ್ರಸಾದಮನುದಗ್ರಶೌರ್ಯಾ
ಭರಣ ||ರ್ಭವಭಕ್ತಿಭಾಸುರಶರ್ಾ | ತ್ರವಸಂಹರಣಪ್ರಸನ್ನಮಾನಸಮಹಿತರ್||

ವ|| ಅನಂತರಂ ಜಗದೇವ ಸಮೇತಂತನ್ಮಾತೆಯ ಪದತಳಕ್ಕೆರಗಿ ನಲ
ವರಕೆಗಳಂ ಗೆಲ್ಲಸೇಸೆಗಳಂಪಡೆದು ವೀರತಾಂಬೂಲಮುಂಕೈಕೊಂಡು ವೇ
ವಾಂಗಮುಂಬಿಗಿದುಟ್ಟು ಬೀರಗಚ್ಚೆಯುನಮುರ್ಬ್ಬಿಬಂಕುಡಿಯುಂಕಟ್ಟಿ ಭಸಿತ

ಮನಂಗಡೊಳುದ್ಧೂಳಿಸಿ ರುದ್ರಾಕ್ಷೆಯತೊಡವಂತೊಟ್ಟು ಕಾಲರುದ್ರನು ಗ್ರಾಪಾಂಗದಂತಿರ್ದ ಕರಾಳಖಡ್ಗಂಗಳಂ ಕರತಳದೊಳ್ಪಿಡಿದುರ್ಝುಡಿದು ವೀರ ಪ್ರಮಥರಂಘ್ರಿಗಳಂ ನೆನೆದು ಪಟುಶೌರ್ಯ್ಯಾಟೋಪಮಂ ತಾಳ್ದು ಪೂಮುವ್ವರುಂ ಗೃಹಮುಂ ಪೊರಮಟ್ಟು ರಾಜವೀಥಿಯೊಳ್ಸರಭಸಂಬರ್ಪಾಗಳ್ಕಟ್ಟೆದಿರಲ್ಲಿ॥

ಕಂ॥ ಮುಂಗಡೆಯೊಳೊಂದುವೃಷಭಂ । ಶೃಂಗಮನಾಡಿಸುತೆಮುಂದಿಯಂತೊಲಗಿಸುತಂ ॥ ಮುಂಗೆಳರವದಿಂಕೆರೆಯುತೆ । ಕಂಗೊಳಿಸುತೆನಡೆಯೆ ಕಂಡುಮುದಮಂತಳೆದರ್ ॥ .... ॥೨೨॥

ಕಂ॥ ಬಂದರರಮನೆಯಬಾಗಿಲ । ಮುಂದಣ್ಗೆದಿರಲ್ಲಿ ಕಂಡರರಸಾಳ್ಗಳನೋ ॥ ರಂದದಕರಿತುರಗಂಗಳ । ಸಂದಣಿಯಂಮಂತ್ರಿಮಂಡಳಿಕಪಟುಭಟರಂ ॥ .... ॥೨೩॥

ವ ॥ ಅಂತವರೆಲ್ಲರು ಮಿದಿರೊಳ್ಕಂಡಗಿದು ಕೆಲಂದೊಲಂಗೆರೌದ್ರರಸಂಮುಸಗಿ ರುದ್ರಾವತಾರರುತ್ಪಾತನಿಶಿತಾಸಿಗಳಂಕುರುಳ್ಚುತಂಬಂದು ಪಜ್ಜಳಿಪ ಬಿಜ್ಜಳನ ಸಭಾಸ್ಥಳಮಂಭೋಂಕನೆಪೊಕ್ಕು ॥

ಮ॥ ವೃ ॥ ಬಳಿಗೊಂಡಿರ್ದಸುಯಾಯಿಗಳ್ಪಟುಭಟರ್ಧಾತ್ರೀಶಪುತ್ರರ್ಕಳು । ಜ್ವಳಖಡ್ಗಂಗಳನಾಂತಿದಿರ್ಚಲೆಸಪಂದಂಗೆಂಡುಮುಂಕೊಂಡುತ ॥ ತ್ಫಳಕಾಸ್ಫೋಟನಮಾತ್ರದಿಂಬಿಡದಿದಿರ್ಚುರ್ತ್ತೋಡಿಸುತ್ತಣ್ಮಿಬಿ । ಜ್ಜಳನಂಪೊಕ್ಕಿರಿದರ್ಕ್ಕಪಾಣಧಿನವರ್ವಿಕ್ರಾಂತವಿಶ್ವಾಧಿಕರ್ ॥ ॥೨೪॥

ಕಂ॥ ಹರಭಕ್ತಕರಸ್ಪರ್ಶನ । ಪರಿಪೂರ್ಣನಿಶಾತಖಡ್ಗದಿಂಮಡಿದಮಹೀ॥ಶ್ವರನೈಂದ್ರಪದಂಬಡೆದಂ।ಪಿರಿದುತ್ಸವಮಾಳ್ದು ಶರಣರುರ್ಬಿದರಾಗಳ್ ॥

ಮ॥ ವೃ॥ ಹರಭಕ್ತರ್ಗೆಜಯಂಜಯಂಜಯಮೆನುತ್ತುದ್ಘೋಷಿಸುತ್ತಾರ್ದುನಿ । ರ್ಭರದಿಂಶೀಳ್ದವನುನ್ನತೋದರಮನಲ್ಲಿಟ್ಟಾರ್ಪಿನಿಂಕೊಯ್ದುತ ॥ ಚ್ಛಿರಮಂಭಕ್ತಗಣಾಜ್ಞೆಯಿಂನೆಗಳ್ದವಾವೀಕಜ್ಜಮಂಮಾಣದೆಂ । ದಿರದಾರ್ದೆತ್ತಿಕೃಪಾಣಮಂಜಡಿದುಚಿಮ್ಮುತ್ತೆಯ್ದೆವಿಕ್ರಾಂತದಿಂ ॥೨೫॥

ಕಂ॥ ಹರಭಕ್ತದ್ರೋಹಮನಾ । ರ್ವಿರಚಿಪರವರ್ಗೀನೃಪಾಲಗತಿತಪ್ಪದೆನು ॥ ತ್ತಿರದೊಂದೋಲಿಯನೊಳ್ಪಿಂ । ಬರೆದಾತನಕೈಗೆಕಟ್ಟಿದರ್ಕಡುಗಲಿಗಳ್ ॥ .... ॥೨೬॥

ಕಂ॥ ನಲಿನಲಿದುನರ್ತಿಸುತೆಕರ । ಫಲಕಾಸ್ಫೋಟನಮನೆಸಗುತಂಕ

ರವಾಳಂ || ಬಲಿದೆತ್ತಿಚಂಮುತ್ತಂಕಲ | ಕಲರವದಿಂನಗುತೆಪಾಡುತಂಗಣ
ತತಿಯಂ || .... ||೨೮||

ಕಂ|| ಚಂಡಬಲರಿವರೊಡನೆಭೂ | ಮಂಡಲದೊಳ್ಸೆಣಸಲಾರ್ಪಕಲಿ
ಯಾರೆನುತಂ || ಮಂಡಳಿಕರಳ್ಕುತಿರೆನಡೆ | ಗೊಂಡರ್ಪೊರಮಟ್ಟುಸಭೆಯಿನ
ಭವನಸುಭಟರ್ || .... ||೨೯||

ಕಂ|| ನಿಡುಸರದಿಂವಂದಿಗಳು | ಗ್ಘಡಿಸುತ್ತಿರೆಮುಂದೆನಿಂದುಬಿರು
ದಾವಳಿಯಂ || ನಡೆತಂದುಪೊಕ್ಕನೊಡವರೆ | ಕಡುಗಲಿಗಳ್ತಂನಭವನಮಂ
ಜಗದೇವಂ || .... ||೩೦||

ವ|| ಅಂತುಪೊಕ್ಕು ಜನನಿಯಡಿದಾವರೆಗೆವರ್ಜರಸುಮಣಿದು ||

ಮಲ್ಲಿ || ಮಾತೆನಿಂಮಯಮುನಕೆಸಂತಸಮುಪ್ಪಮಾಳ್ಕೆಯೊಳಿಂದುನಿ |
ರ್ಭೀತಿಯಿಂದೆಶಿವಾಪರಾಧಿಯನಿಕ್ಕಿಬಂದೆವೆನುತ್ತೆಸಂ || ಪ್ರೀತಿಯಿಂದೆರಗಿ
ರ್ದಪುತ್ರನನಳ್ಕರಿಂಪರಸುತ್ತೆಸಂ | ಜಾತಸಂಭ್ರಮಮೆಚ್ಚುತಂಪೊಗಳುತ್ತೆತ
ಳ್ತಮರ್ದಪ್ಪಿದಳ್ || .... ||೩೧||

ಕಂ || ಸಮುದಿತಗುಣಕೀರ್ತನದಿಂ | ನಮಿಯಿಸೆಮಲ್ಲಯ್ಯಬೊಂಮ
ಯರ್ಪದಪಿಂದಂ || ಪ್ರಮುದಮನೊಡರ್ಚೆಮನ್ನಿಸಿ | ಸಮುಚಿತಸತ್ಕಾರ
ಮಂಕರಂರಚಿಯಿಸಿದಳ್ || .... ||೩೨||

ವ|| ಆಗಳಾಜಗದೇವನುತ್ಕಟಿಸಿ ||

ಮ|| ಸ್ರ||ವೃ|| ವಿಹಿತಂಭಕ್ತಂಗೆತಾನೇತವಿಪ್ರುದಘಹರದ್ರೋಹಿಯಂ
ಮಾಣ್ದನಂಮೇ | ಣ್ಮಹಿಯೊಳ್ಭಕ್ತಪ್ರತಾನಂಬೆಸಸೆಬಳಿಯಿನಾದ್ರೋಹಿಯಂ
ಕೊಂದೆನಾಂದು || ರ್ವಹಪಾಪಂಬೆತ್ತೆನೀಪಾಪಮನಳಿವಡೇಂಮತ್ಪ್ರಾಣ
ಮಂಬಿಟ್ಟಪೆಂನಿ | ಸ್ಪೃಹೆಯಿಂದಾನೆಂದುಖಡ್ಗಾಗ್ರದಿನಿಜಶಿರಮಂಕೊಯ್ದ
ನಾಭಕ್ತವರ್ಯಂ || .... ||೩೩||

ವ|| ಅಂತು ಕಳ್ಕನೆ ಕೊರದಿಕ್ಕುವುದುಮುಮಾರಮಣಂ ಪ್ರಸನ್ನನಾಗಿ||

ತೋಟಕವೃತ್ತ|| ಸುರನಿನಮ್ನಗಲ್ವೆರೆಕೆಂಜಡೆತ | ಳ್ತುರಿಗೆಣ್ತೆಸುಳಂಗರಳಂ
ಭಸಿತಂ || ಕರಿಕೃತ್ತಿಧರಾಧರಪುತ್ರಿಫಣಾ | ಧರನೊಪ್ಪಿರೆರಂಜಿಸಿದಂಗಿರಿಶಂ||

ವ|| ಅಂತು ರಂಜಿಸಿ ನಿಜಭಕ್ತನಶಿರಮಂಪತ್ತಿಸಿ ಹರಣಮನಲರ್ಚಿತ
ನಗೆರಗಿರ್ದನಂತೆಗೆದೆತ್ತಿಬಿಗಿಯಪ್ಪಿಪೊಗಳ್ದು ಮನ್ನಿಸಿ ಮಾತೃಮಿತ್ರಸಮೇತ
ನವನಂ ಮಣಿಪುಷ್ಪಕಮನೇರಿಸಿ ||

ಅಸಲಸರಿಸುರಿಯೆಭೋಕಿಂ । ದಿರದನುರಾಸಕರನಂಗಳುಲಿಯುತ್ತಿರೆ ಶ॥ಕರನವನಂ ನಿಜಪುರಿಗೊ।ಯ್ದಿರಿಸಿದನತುಳಪ್ರಸನ್ನಸುಖಸಂಪದದೊಳ್ ॥

ವ॥ ಆಗಳಿಂತುಜಗದೇವನೆಸಗಿದ ಕಡುಕಜ್ಜದಾದ್ಯಂತಮನೆಲ್ಲ ಮನಿತ್ರಲ್ಲಸವರಸಂಕೇಳ್ದು ಪಿರಿದುಂ ಸಂತಸಂಬಾಳ್ದು ನಿಜಗುರುವಪ್ಪ ಕೂಡಲಸಂಗಮೇಶ್ವರಸಂಕಾಣ್ಬ ಸಡಗರದಿಂ ಭಕ್ತಗಣಸಂಯುಕ್ತನಾಕಪ್ಪಡಿಗೆಯ್ತಂದಾಲಿಂಗಮುಂದಿರಂಬುಗುವಾಗಳ್ ॥

ಕಂ॥ ಮೊದಲಗುರು ರೂಪನಾಳ್ದೊ । ಪ್ಪಿದನಿದಿರೊಳ್ಸಂಗಮೇಶ್ವರಂ ಬಸವಂಕಂ ॥ ಡುದಿತೋತ್ಸವಮುಲರುತ್ತಿರೆ । ಸದಮಳಸದ್ಭಕ್ತಿಭಾವಸಂಭ್ರಮದಿಂದಂ ॥ .... ॥೩೬॥

ಮ॥ ವೃ॥ ತನುರೋಮಾಂಚಮನಾಳೆನೇತ್ರಯುಗದಿಂದಾನಂದಬಾಷ್ಪಾಂಬುಸೂ । ಸೆಸಿತಾಂತಂತನಿವೇರ್ಚೆಗದ್ಗದಸಮಾಲಾಪಂ ಕೊರಲ್ಗೊಂಡೂಕಂ ॥ ಪಸನುಂತಾಳ್ದೊಡಲಾನೆಬಲ್ಪೆಮರನಾನಂದಾಬ್ಧಿ ನೀರೇರಿಪಾ । ವನವೃತ್ತಂನೆಗೆಳ್ದಂತದಂಘ್ರಿಗೊಲವಿಂದಂಡಪ್ರಣಾಮುಂಗಳಂ ॥೩೭॥

ವ॥ ಅಂತು ನೆಗಳ್ದು ಕೃತಾಂಜಲಿಪುಟನುಂ ಪೊತ್ತು ನಿಂದು ॥

ಉ॥ ವೃ॥ ಸ್ವಾಮಿಮದೀಯಮಾನಸವನೇಜಖಿನೇಶ್ವರಮಾಥವಾಜಸು । ತ್ರಾಮುಕಿರೀಟಮಂಡಿತಪದಾಂಬುಜವಿಶ್ವಕುಟುಂಬರಕ್ಷಣೋ ॥ ದ್ದಾಮದಯಾಸುಧಾರಸಸಮುಗ್ರಕಟಾಕ್ಷಕಲಂಕದೂರನಿ । ಷ್ಕಾಮುಚಿದಂಗನಾರಮಣದೇಶಿಕಕೂಡಲಸಂಗಮೇಶ್ವರ ॥ .... ॥೩೮॥

ಚ॥ ನಿರುಪಮನಿತ್ಯನಿಷ್ಕಳನಿರಾಕುಳನಿರ್ಭಯನೀಲಕಂಠನಿ । ರ್ಜರಸುತನಿಷ್ಪ್ರಪಂಚನಿಗಮಾಗಮವಂದ್ಯನಿರೀಹನಿಸ್ಪೃತ । ಸ್ಮರನಿರವದ್ಯನಿರ್ಮದನಿರರ್ಗಳನಿಶ್ಚಳನಿಸ್ತುಳಪ್ರಭಾ । ಕರನಿರುಪಾಧಿನಿರ್ಗುಣನಿ ರಾಮಯ ಕೂಡಲಸಂಗಮೇಶ್ವರ ॥ .... ॥೩೯॥

ಉ॥ ಜಂಗಮಲಿಂಗಸಂಗತನಿರಂಗಕುರಂಗಧರೋತ್ತಮಾಂಗನಿ।ರ್ಭಂಗಪತಂಗಜಾಂಗಜಮತಂಗಜತುಂಗಮೃಗೇಂದ್ರಸದ್ಧಯಾ ॥ ಪಾಂಗತರಂಗಿಣೀಧರಪಿಶಂಗಜಟಾಭರಸರ್ವಮಂಗಳಾ। ಲಿಂಗಿತಮಂಗಳಾಂಗಮಹಿಮೋನ್ನತಕೂಡಲಸಂಗಮೇಶ್ವರ ॥ .... ॥೪೦॥

ಚಂ ॥ ಮನುತತಿಪೂಜ್ಯಮಾನ್ಯಮಿಹಿರದ್ಯುತಿವಿಮಾನವಿಮರ್ದಿಮುಗ್ಧಮೂ । ರ್ತಿನಿಯುತಮೇರುಧನ್ವಕರಮೈಹಿರಭಂಜನನೋಹದೂರಮಾ ॥

ಲಿನಿಹಿತಚಂದ್ರಮಂಗೆಳಗುಣಾಕರಮಸ್ತಕಮಾಲಿಕಾಂಕನು । ಜ್ಞನಕಮದೀ
ಶಮುದ್ಗುರುಕೃಪಾಕರಕೂಡಲಸಂಗಮೇಶ್ವರ ॥ .... ॥೪೧॥

ಚ ॥ ಭವಭವಭಂಜನಾಂಜನವಿವರ್ಜಿತನಿರ್ಜಿತನಿರ್ಜಿತಮಿತ್ರಗಾತ್ರ
ಸಂ । ಭವಭುವನೇಶಪಾಶಹರಕಿಂಕರಶಂಕರಚಂಡತಾಂಡವೋ ॥ ತ್ರನಘವ
ಳಾಂಗಶೃಂಗನಗನಿರ್ಮವಶರ್ಮದಶರ್ವಪಾರ್ವತೀ । ಧವಶಿವಲಿಂಗಪಿಂಗಳಜ
ಟಾಧರಕೂಡಲಸಂಗಮೇಶ್ವರ .... ॥೪೨॥

ಚ॥ ಸುರತಟನೀಪಯಃಕಣಕಳಾಪಜಟಾಭರಪದ್ಮವೈರಿಶೇ । ಖರನಿಗೆ
ಮಾಂತಸ್ತುತ್ಯಚರಣಾಂಬುಜಶಾಶ್ವತದಿವ್ಯರೂಪಶಾಶ್ವರೇ॥ ಶ್ವರವರವಾಹವಾ
ರಿಧರಕರ್ಬುರಕಂಧರಕಾಲದರ್ಪಸಂ। ಹರಹರಿವಂದ್ಯಪಾದಜಗದೀಶ್ವರಕೂಡ
ಲಸಂಗಮೇಶ್ವರ ॥ .... ॥೪೩॥

ಚ॥ ಶರಣಕದಂಬಶಂಬರಧಿಶಂಬರಜಾಹಿತಶಂಬರಾರಿಶಂ । ಬರದ
ಪಟುಪ್ರಭಂಜನನಿರಂಜನರಂಜಿತಕುಂಜರೇಂದ್ರಸಂ ॥ ಹರಹರಿಣಾಂಕಪಾಣಿ
ಹರಿಣಾಂಕಹುತಾಶದಿನೇಶನೇತ್ರಶಂ । ಕರಕರುಣಾನಿವಾಸಗುಣಭೂಷಣ
ಕೂಡಲಸಂಗಮೇಶ್ವರ ॥ .... ॥೪೪॥

ಚ॥ ಪುರುಷವರೇಣ್ಯಪುಣ್ಯಮಯಪೂರ್ಣಪುರಂದರವಂದ್ಯವಿಶ್ವವಿಸ್ತ
ರಣವಿನೋದವಿಶ್ರುತವಿಹಾರವಿರಾಜಿತವೀರಶೈವಭಾ ॥ ಸುರಭವದೂರಭಕ್ತ
ಭಜಕವ್ರಜಭದ್ರದಭಕ್ತವತ್ಸಲಾ । ಸ್ವರವರದಪ್ರಸನ್ನಜಯಚಿನ್ಮಯಕೂಡ
ಲಸಂಗಮೇಶ್ವರ ॥ .... ॥೪೫॥

ಮ॥ ಸ್ರ॥ ತರುಣಾದಿತ್ಯಪ್ರಕಾಶಾವರಣಶರಣಸಂದೋಹಮಂದಾರ
ಚಂದ್ರಾ । ಭರಣಾಂಚನ್ಮೌಳಿಚಂಚದ್ಗರಳಗಳಕಳಾಧುರ್ಯಗಾಂಭೀರ್ಯಶೌರ್ಯಾ॥
ಕರಕಂದರ್ಪಾರಿಶೌರಿಸ್ತುತಗುಣಗಣರಂಗತ್ತರಂಗಾಂಗಗಂಗಾಧರಮುತ್ಪಾ
ಣೇಶಸಂಗಪ್ರಭುವೆವಿಭುವೆರಕ್ಷಿಪ್ಪುದೆಂದಂನೃಪೇಂದ್ರಂ ॥ ॥೪೬॥

ವ॥ ಇಂತು ತನ್ನಂಕಟ್ಟಳ್ಕರಿಂಪೊಗಳ್ದನಿಜಕುಮಾರನಪ್ಪ ಗುಣಭೂಷ
ಣನಂ ಫಣಿಭೂಷಣಂ ನಡೆನೋಡಿ ತೆಗೆದುಬಿಗಿದಪ್ಪಿ ನಿಜಪ್ರಸಾದಮನಿತ್ತು
ಮನ್ನಿಸಿಸಿರುಸಮಾನವಾತ್ಸಲ್ಯಮಂ ಬೀರಿಗರ್ಭಗೃಹದಂತರಾಳಮನವಂ ಬೆರ
ಸುಪೊಕ್ಕಾಗಳ್ ॥

ಕಂ॥ ಬೆಳಗಿನೊಳಗೆಬೆಳಗುಬೆರೆವಂ । ತಳಿವಿಗೆಮಿಗಿಲಾದಸುಖಮನೊ

ಳಕೊಂಡತಿಮಂ ॥ ಗಳಸುಯುಲಿಂಗದೊಳೊಡೆವೆರ । ದಳಕ್ಷ್ಯಭಾವಮನೆ
ತಾಳ್ದುಮೆಱೆದಂಬಸವಂ ॥ .... ॥೪೭॥

ಕಂ॥ ಪ್ರಮಥಪ್ರರ್ಮುಳಿಗೆಱೆದ । ಪ್ರರ್ಮುದಿತಗಣಭೇರಿದಾಂಧಳಧ್ವ
ನಿಗುಡಿಸಂ ॥ ಭ್ರಮದಿಸುಘೇಯೆಸುತಿರ್ದ । ವಿಮಳಾಂತಃಕರಣರಭವನ
ಶರಣರ್ ॥ .... ॥೪೮॥

ಚ॥ ವೃ॥ ಅನುಪಮನಪ್ರತರ್ಕ್ಯಮಹಿಮಂ ಶರಣಾಗತವಜ್ರಪಂಜರಂ।
ವಿನಯಸುಧಾಸರೋಧಿಕರುಣಾಮೃತಪೂರ್ಣಕಟಾಕ್ಷನೀಶಪ್ಯ ॥ ದ್ವಸಜನಿ
ಪಾಸನೆಲ್ಲಿಡೆಯುಭಕ್ತರಮಾನಸಮಧ್ಯದಲ್ಲಿನೆ । ಟ್ಟನೆನೆಲೆಗೊಂಡುರಂಜಿಸಿದ
ನಲ್ಲದೊಡೆಲ್ಲಿಯುಭಕ್ತಿಮುಕ್ತಿಗಳ್ ॥ .... ॥೪೯॥

ಕಂ॥ ಗುಣಿಬಸವಚರಿತಮಣಿದ । ರ್ಗಣಸೋಳ್ಕಾಪ್ರರ್ಳಿದುದಲ್ತೆಗ
ಣನಿವಹಪದಸ ॥ ದ್ಗುಣಗಣಚರಿತ್ರಮಹಿಭೂ । ಷಣನೆನಿಸಿದಿನೆಸಗೆವಿಶ್ವವಿಶ್ವಂ
ಭರೆಯೊಳ್ ॥೫೦॥

ಕಂ॥ ಬಸವನಸಮಾನಮಹಿಮ । ಪ್ರಸರಸುಧಾಂಬುಧಿಯೊಳೊಗೆದ
ಸೀರ್ಪನಿಯುನದೇಂ ॥ ನಿಸದಂಪ್ರೊಗೞಲ್ಬಲ್ಲರೆ । ಬಿಸರುಹಭವನುಂಫಣೀಂದ್ರ
ನುಂ ಸುರಗುರುವುಂ .... ॥೫೧॥

ಮ॥ ಸ್ರ॥ ಪ್ರಮಥೇಂದ್ರಪ್ರಥಮಪ್ರಧಾನಪುರುಷಂ ಚಿದ್ರೂಪನಾದ್ಯಂ
ತಶೂ । ನ್ಯಮಹಾವೈಭವನಪ್ರತರ್ಕ್ಯಮಹಿಮಂ ವಿಶ್ವಾವನೀರಕ್ಷಣ ॥ ಕ್ಷಮ
ಸುಕ್ಷ್ಮೇಂದ್ರಪ ರಾವತಾರನನಘಂ ಕಾರುಣ್ಯವಾರಾಶಿಭ । ದ್ರಮಯುಭಕ್ತಿಪ
ರಾಯಣಂಪರಶಿವಂ ಶ್ರೀಮನ್ಮನೋಮಂದಿರಂ ॥೫೨॥

ಮ॥ ಸ್ರ॥ ಗುರುರೂಪಂ ಲಿಂಗರೂಪಂ ಪರತರಚರರೂಪಂ ಪ್ರಸಾದಸ್ವ
ರೂಪಂ। ಹರಪಾದಾಂಭಸ್ಸ್ವರೂಪಂ ಭಸಿತಲಸಿತರೂಪಂ ಸುರುದ್ರಾಕ್ಷರೂಪಂ॥
ವರಷಡ್ವರ್ಣಸ್ವರೂಪಂ ಪರಮಶಿವಮಯಾನಾದಿಭಕ್ತಸ್ವರೂಪಂ। ಪರಚಿಚ್ಛಿ
ಕ್ತಿಸ್ವಸ್ವರೂಪಂ ಬಸವನಸದೃಶಾನಂದಸತ್ಯಸ್ವರೂಪಂ ॥

ವ॥ ಎಂದಿಂತು ಪಲವಂದದಿಂ ಪೊಗೞುತ್ತಂ ಚನ್ನಬಸವರಾಜನುಂ
ಮಾದಿರಾಜನುಂ ಮಾಚಿದೇವನುಂ ಶರಣಗಣದೊಡನೆ ಸಂಭ್ರಮದಿಂ ದುಳು
ಮೊಗೀಳ್ತಂದು ಶಿವತತ್ವಾನುಭವಸಂಜನಿತ ಪರಮಾನಂದ ಸುಧಾಸಮುದ್ರ
ದೊಳವಗಾಹಂಗೆಯ್ದು ॥ ॥೫೩॥

ಕಂ॥ ಕರಮೆಸೆದಿರ್ದಕೈಲಸೀ । ಶ್ವರಭಕ್ತಶ್ರೀಗಿರೀಂದ್ರಕೆಯ್ದುವರಿ

ತ್ತ || ಲ್ವರಗಂಗಾಂಬಿಕೆತನ್ನಯು|ಕರಸರಸಿಜಲಿಂಗದೊಡನೆಬೆರೆದೆಸೆದಿರ್ದ್ದಳ್ ||

ಕಂ|| ಪ್ರಮಥಪತಿಬಸವರಾಜನ | ವಿಮಳಚಿದಂಗಸ್ವರೂಪಮಾಭಕ್ತರಹೃ || ತ್ಕಮಲದೊಳೆತಳ್ತುನೆಲೆಗೊಂ | ಡಮುದಿರ್ದೊಪ್ಪಿದುದಧಿಕಮುದಮನೊದವಿಸುತಾಗಳ್ || ||೫೫||

ಮ|| ಸ್ರ|| ವೃ|| ಪರಮೇಶಪ್ರೇಮಧಾಮಂಪ್ರಮಥಪರಿಷದಾನಂದದುಗ್ಧಾಬ್ಧಿಸೋಮಂ | ತರುಣಾದಿತ್ಯಪ್ರಕಾಶಂತತಕುಮತಪುದೇಭೇಂದ್ರಕಂಠೀರವಂಭಾ || ಸುರಭದ್ರಾಕಾರಸಾರಂಭವಭಯಹರಣಂಭಕ್ತಿಭಾವಾಮನೋಜ್ಞಂ | ಕರುಣಾಂಭೋರಾಶಿವಿಶ್ವಪ್ರಭುವಿಭುವಿಬುಧಸ್ತೋತ್ರಪಾತ್ರಂವೃಷೇಂದ್ರಂ || ||೫೬||

ಹರಿಣಪ್ಲುತವೃತ್ತ || ಸಕಳಸುಕಳಾಧಾರಂಧೀರಂಸುಭಾಷಣಭೂಷಣಂ | ಶಕಲಿತಕಲಿಧ್ವಾಂತಂಶಾಂತಂಭವಾಂಬುಧಿಕುಂಭಜಂ || ಪ್ರಕಟಿತಕೃಪಾಪಾಂಗಂತುಂಗಂಸ್ವಭಾವಶುಭಾವಹಂ | ನಿಕೃತಸಿಕೃತಿವ್ರಾತಂಖ್ಯಾತಂವಿಮಾಯನನಾಮಯಂ || ||೫೭||

ಉ|| ವೃ|| ಪುಷ್ಕರಪುಷ್ಕಮಸ್ತಕಪದಾಂಬುಜಭೃಂಗನನಂತತಾತ್ವಿಕಾ | ವಿಷ್ಕರಣಪ್ರಮಾಣಪರಿಭಾಷಣನಾನತಲೋಕಸಂಕುಲಾ || ಯುಷ್ಕರಣಪ್ರವೀಣನನವದ್ಯಚರಿತ್ರನಮೋಘವಿಕ್ರಮಂ | ದುಷ್ಕರವಾದವಾದಿವನದಾವನನಮಾಯನಮೇಯವೈಭವಂ || ||೫೮||

ಮ||ಅಕಳಂಕಂಗುರುಲಿಂಗಜಂಗಮಪದಾಂಭೋಜಾತಪೂಜಾಸಮುತ್ಸುಕನನ್ಯಾಧ್ವತಮುಪ್ರಚಂಡಕರನಂಭೋರಾಶಿಗಂಭೀರನು | ದ್ಧಕಳಾಭಿಜ್ಞನಭಂಗತುಂಗಶಯಸುದ್ಯದ್ಭಕ್ತಿಭಾಮಾಲಸ| ನ್ಮಕುರಂಶ್ರೀವೃಷಭೇಂದ್ರನೀಗೆಮಗಮಂದಾನಂದಸಂದೋಹಮಂ || ||೫೯||

ನಿರೋಷ್ಠ್ಯಲಲಿತಪದವೃತ್ತ || ಶೀತಕರಶೇಖರಸನಾತನನಿಜಾಂಗಜಗೆ ತೀತಳಜನಾನತನಿಶಾತಶರಧಾರಾ | ಘಾತಹೃತದೈತ್ಯಕರನೀತಸಕಳೇಷ್ಟಝಷಕೇತನಹರಾಂಕಧರಗೀತಸರಸೀಸಂ || ಜಾತದಿನನಾಯಕಜಿತೇತರನಿತಾಂತಜಡಚೇತನಜಗನ್ನಿಚಯತಾತಘನನಂದಿ | ಖ್ಯಾತಗಣನಾಥಕಲಕೇತಸಖಕಿನ್ನರದಯಾತತರಸಾರ್ಥಿಹರಜಾತಜಯಧೀರಾ || ||೬೦||

ಅಚಲಜಿಹ್ವಾವೃತ್ತ|| ಶಿವಮಯಕಾಯಭವ್ಯಮಹಿಮಾಂಗವಿಮಾಯಯುವಿಮಾಶಗನ್ಯುಕಶಾಂ| ಭವಸುಗೆಸಾಸನಾಗೆಸುಕುಶೇಶಯಸುಹಂಸಖಗೇಶಪಾ

ಹವಾ ‖ ಸಪಮುಖಭಾಸ್ಯವಿಶ್ವವಿಭುಭಾವಭವಾಪಹಸಾಹಸಾಂಕಶಂ| ಭು
ವಶಗಭಾವಸಾಹಿಬಸವೇಶಶುಭಾವಹವಾಕ್ಯವೈಭವ ‖

ಮುಕ್ತಪದಗ್ರಸ್ತವೃತ್ತ ‖ ಜಯಜಯಕಾಲಕಾಲತತವಿಭ್ರಮವಿಭ್ರ
ಮಭಾನುಭಾನುಚಿ | ಸ್ಮಯಮುಯಮಂಜ್ಮವಂದ್ಯಪದನೀರಜನೀರಜಧೀರಧೀ
ರಸ | ಸ್ನಯುನಯುನಾನ್ವಿತಾನ್ವಿತನಿರಂಜನರಂಜನರಂಜನಸತ್ವಸತ್ವಗಾ| ಶ
ಯುತಯುಭಾಗ್ಯಭಾಗ್ಯಜನನಂದಿತನಂದಿತಸುಪ್ರಭುಪ್ರಿಯಾ ‖

ಚ| ಸುರವರದಾನವೇನಪರಿಪೂಜಿತರಾಜಿತ ‖ ಲಿಂಗಸಂಗಬಂ| ಧುರ
ನಿರಪೇಕ್ಷಮೋಕ್ಷಕೃತಪಾಂಗಕೃಪಾಂಗೆಕರಾಳಕಾಲಸಂ | ಹರನಿರಪಾಯಕಾ
ಯಗುಣಮಂಡಿತಪಂಡಿತಸೃತ್ಯಸತ್ಯಸಂ | ಗರಪ್ರೊರೆಯೆನ್ನನುನ್ನತವಿತಂದ್ರಗ
ಣೇಂದ್ರನೃಪೇಂದ್ರಸಂತತಂ ‖ ‖೬೩‖

ಕ| ನೀನೆಗುರುನೀನೆಲಿಂಗಂ | ನೀನೆಚರಂನೀನೆಮಾತೆನೀನೆಪಿತಂಕೇ‖
ಳ್ನೀನೆಗತಿನೀನೆಮತಿಪತಿ | ನೀನೆಸಮಂತೆನಗೆಬಸವಪಾಲಿಪುದೆನ್ನಂ ‖೬೪‖

ಕಂ‖ ಕ್ಷಿತಿರೇಣುವದಗಣಿತಭವ | ತತಿಯೊಳ್ನಲೆಬಂದುನೊಂದೆನಿ
ನ್ನಾದೊಡಮು ‖ ನ್ನತಕೃಪೆಯಿಂಭವಬಂಧ | ಸ್ಥಿತಿಯುಂಪರಿದೆನ್ನಂಪ್ರೊರೆಕೃ
ಪಾನಿಧಿಬಸವ ‖ ‖೬೫‖

ಉ‖ ವ್ರ ಮಾಡದಪಾಪಮಿಲ್ಲಮನಮುಂಟದಮಾರವಿಕಾರಮಿಲ್ಲಕೂ |
ರ್ತಾಡದನಿಂದೆಯಿಲ್ಲಕೊರಚಾಡದಸಜ್ಜನರಿಲ್ಲವಾಂಛೆಯಿಂ ‖ ಬೇಡದವಸ್ತು
ವಿಲ್ಲಬರಿದಾಗದಮಾನವರಿಲ್ಲದೇವನೀಂ | ನೋಡದಿರೆನ್ನದುರ್ಗುಣಶತಂಗಳನ
ಯ್ಯವೃಷಾಧಿನಾಯಕ ‖೬೬‖

ಮ‖ ವೃ‖ ಕ್ರಿಯೆಯೊಳ್ಬೈಯೊಳಿತ್ವರಾನುಗತಯೋಗಜ್ಞಾನಮಾ
ರ್ಗಂಗಳೊ | ಳ್ನಯಮುಂದಪ್ಪದಮಾಳ್ಕೆಯಿಂಚರಿಸಲುದ್ಯದ್ಭಕ್ತಿವೈರಾಗ್ಯನಿ ‖
ರ್ಣಯದೊಳ್ವರ್ತಿಸಲಿಂತುಮಾರದಜಡಾತ್ಮಂನೋಳ್ಪೊಡಾನೇಗುಣಾ | ಕ್ರಿ
ಯನಿನ್ನಂಮರೆವೊಕ್ಕೆನಯ್ಯಪ್ರೊರೆನೀನೆನ್ನಂವೃಷಾಧೀಶ್ವರ ‖೬೭‖

ಮ‖ ಖಲನಂಕಾಮುಕನಂಕುಧೈರ್ಯಪರನಂಮದಾಂತನಂಧೂರ್ತನಂ
ಕಲಹಾನಂದಿತನಂಕುಮಾರ್ಗರತನಂದುಸ್ವಾಂತನಂದುರ್ಮದಾ ‖ ವಿಲನಂ
ದುಃಖಸಮುದ್ರಮಧ್ಯಗತನಂಕಾರುಣ್ಯದಿಂದೆನ್ನನ | ಸ್ಖಲಿತಶ್ರೀಕರನೋಡಿ
ರಕ್ಷಿಸುನಿತಾಂತಂನೀಂವೃಷಾಧೀಶ್ವರ ‖೬೮‖

ಉ|| ನಿನ್ನಯದಿವ್ಯಮೂರ್ತಿಬಿಡದೆನ್ನಮನೋಂಬುಜಮಧ್ಯದೊಳ್ಕ
ರಂ | ನಿನ್ನಯದಿವ್ಯನಾಮಮುಮದೆನ್ನಯುಸದ್ರಸನಾಗ್ರದಲ್ಲಿಕೇ|ಳ್ನಿನ್ನಯಭ
ಕ್ತರಂಘ್ರಿಯುಗಮೆನ್ನಯಮಸ್ತಕದಲ್ಲಿಮಾಣದೆಂ | ದುಂನೆಲಸಿರ್ಪುದೊಂ
ದುವರಮುಂಕೊಡುಬೇಳ್ಪೆಸಿದಂವೃಷಾಧಿಪ ||೧೯||

ಚಂ||ಬಸವಭವತ್ಪದಾಬ್ಜರಜಮೆನ್ನಲಲಾಟಲಲಾಮಮಾಗಿನಿ | ನ್ನಸ
ಮಪದಂಗಳೆನ್ನೆದೆ ಗೊಳಃತಳೆದಂಬುಜಮಾಗಿನಿನ್ನರೂ || ಪೆಸೆವಮದೀಯ
ಚಕ್ಷುಗಮೃತಾಂಜನಮಾಗಿಮದುತ್ತಮಾಂಗದೊ | ಳ್ಪಸರಿಸಿನಿಲ್ಕೆನಿನ್ನಪದ
ಪಾದುಕೆಶೇಖರಮಾಗೆಸಂತತಂ ||೨೦||

ಚಂ|| ಪರಮಕೃಪಾಸಮುದ್ರಸತತಂಶರಣಾಗತವಜ್ರಪಂಜರ | ಸ್ಥಿರ
ಬಿರುದಾಂಕಘೋರಭವದುಃಖಪಕೋಟಲೆಗಳ್ಕಿಬಂದುನಿ || ನ್ನರುತ್ತರಪಾದ
ಪದ್ಮಯುಗಮುಮ್ಮಿಲೆವೊಕ್ಕೆನುದಾರವೃತ್ತಿಯಿಂ | ಪೊಲೆಭವಬಂಧಮುಂಪರಿ
ದುನಲ್ಕೆಯೊಳೆನ್ನವೃಷಾಧಿನಾಯಕ ||೨೧||

ಮ|| ಸ್ರ|| ತರಿಸಂದಜ್ಞಾನದಿಂದಾಂಬಿಡದೆನೆಗಳ್ದಸರ್ವಾಪರಾಧಂಗ
ಳಂನೀಂ | ಮರೆದೆನ್ನಂನಿನ್ನಕಾರುಣ್ಯಮನೆಮರೆದುರಕ್ಷಿಪ್ಪುದೆಲ್ಲಂದದಿಂಕ ||
ಟ್ಟಿರಕಂಬೆತ್ತಿವುದುದ್ಯತ್ಪರಮಶಿವಪದಾಂಭೋಜಸದ್ಭಕ್ತಿಯೊಂದ | ಳ್ಕರ
ನೊಳ್ಪಿಂದೇವನೀನೊಲ್ದೆನಗೆಬಸವಭಕ್ತಾಬ್ಧಿಸಂಪೂರ್ಣಚಂದ್ರ ||೨೨||

ಶಾ|| ಆಶಾವಾರಿಸುತಾಚಲಾವಳಿಷಡೂರ್ಮಿದ್ವಿಪಗ್ರಾಹಸಂ | ಕ್ಲೇಶಾ
ವಾರ್ತಕಳತ್ರಸಿಂಧುಕರುಣೋದ್ಯನ್ಮೀನಸಂಸಾರವಾ || ರಾಶಿಪ್ರಚ್ಯುತನಾದೆ
ನುದ್ಧರಿಸುತಂನೀಂರಕ್ಷಿಸೈಸತ್ಕೃಪಾ | ವೇಶತ್ವತ್ಪದನಾವೆಯಿಂಕೃಪಣನಾದೆ
ನ್ನಂವೃಷಾಧೀಶ್ವರ ||೨೩||

ಮ || ಸ್ರ || ವಿತತಾಯುರ್ವೃದ್ಧಿಯಂಸಿದ್ಧಯನನುಪಮಸೌಭಾಗ್ಯ
ಮುಂಭೋಗ್ಯಮುಂಸಂ | ತತತೇಜಸ್ಫೂರ್ತಿಯಂಕೀರ್ತಿಯನುರುತರಗಾಂಭೀ
ರ್ಯಮುಂಧೈರ್ಯಮುಂವಿ || ಶ್ರುತಶಂಭುಧ್ಯಾನಮುಂಜ್ಞಾನಮನಭವಲಸದ್ಭಕ್ತಿ
ಯುಂಮುಕ್ತಿಯುಂಶಾ | ಶ್ವತಪೂರ್ಣಾನಂದಮುಂಕುಂದದೆಕೊಡುಶರಣಶ್ರೇಣಿ
ಣಿಗೆಂದುಂವೃಷೇಂದ್ರ ||೨೪||

ಚಂ|| ಬಸವಪದಾಬ್ಜದಾಸನೆನಿಸಿರ್ದಷಡಕ್ಷರಿದೇವನಿಂತುನಿ | ರ್ಮಿ
ಸಿದಪುರಾಣಮುಂಪಡೆದಿದಂಬರೆದೋದುವಕೇಳ್ವಮಾನವ || ರ್ವಸುಧೆಯೊಳ್

ತ್ಯಪೂರ್ವಸುಖಭೋಗಮನಾಳ್ದು ನಿರಾಮಯತ್ವದಿಂ । ದೆಸೆದಸಮಾಕ್ಷನೀಂ
ಪರದೊಳಗೆಗಳವೋಕ್ಷಮನಾಳ್ದು ರಂಜಿಪರ್ ॥೭೫॥

ಚಂ॥ ಸುರಪನಭೋಗಮುಂಧನದಕ್ಕೈಸಿರಿಯುಂರವಿಯುಚ್ಚ ತೇಜಮುಂ
ಗುರುವಿನಬುದ್ಧಿಯುಂಗುಹನಸಾಹಸಮುಂರತಿರಾಜನಂದಮುಂ ॥ ಮರುತ
ನಸತ್ವಮುಂಬಿದಿಯವಿದ್ಯೆಯುಮುಂಬುಜನಾಭನೇಳ್ಗೆಯುಂ। ದೊರೆವುದುಕೇ
ಳ್ವಮರ್ತ್ಯತತಿಗೀಬಸವೇಶ್ವರಸತ್ಪುರಾಣಮುಂ ॥೭೬॥

ಚಂ ॥ ಪದೆದಿದನೋದುವರ್ಥಮುಸುವಾರ್ಲಿಸಪೂಜಿಸಮಾನವರ್ಗೆ
ದು । ರ್ಗದಮುಪಮೃತ್ಯುತಸ್ಕರವಿಷಗ್ರಹದುಷ್ಟಮೃಗಾದಿಭೀತಿಕುಂ ॥ ದದ
ಜಡಭಾವದುಬ್ಬಿತೆದರಿದ್ರತೆಕಂಟಕಮೆಂಬಿವೆಲ್ಲಮುಂ । ಸದಮಳಧರ್ಮರೂ
ಪಪರಿದಿಕ್ಕಿಸುಖಂಗೊಡುನೀಂವೃಷಾಧಿಪ ॥೭೭॥

ಚಂ॥ ಘನಕರುಣಸ್ಪ್ರತಾನದಮುಪತ್ವಮನೀಶ್ವರನೋರ್ವನಲ್ಲದಬ್ಜನಯ
ನವಾಗ್ವರಾದಿದಿವಿಜರ್ಮುನಿಗಳ್ತಿಳಿಯಲ್ಕಸಮರ್ಥರ ॥ ಲ್ಲಿನಜಡಬುದ್ಧಿಗೇನೆ
ನಗೆಶಕ್ಯಮೆತನ್ಮಹಿಮಾಬ್ಧಿಯೊಂದುಸೀ । ರ್ಪನಿಯನಿತಂವೃಷೇಂದ್ರಪ್ರೊಗ
ಳ್ದೀಂಕ್ಷಮಿಸೆನ್ನಯಸಾಹಸದೇಳ್ಗೆಯಂ ॥೭೮॥

ಕಂ॥ಗುರುಪಾಲ್ಕುರಿಕೆಯಸೋಮಾ । ರ್ಯರಭೀಮಕವೀಂದ್ರಶಂಕರಾ
ರ್ಯಪಾದಾಂ ॥ ಬುರುಹಕ್ಕೆಮಣಿದವಂದಿತ । ವರಕೃಪೆಯಿಂದೊರೆದೆನೀವು
ರಾಣಮನಿಳೆಯೊಳ್ ॥೭೯॥

ಮ॥ ಸ್ರ॥ ವ್ಯ ॥ ಜಪದಿಂದಂಜ್ಞಾನದಿಂದಂಸದಮಳಮತಿಯಿಂದಂ
ಸದಾಚಾರದಿಂದಂ । ತಪದಿಂದಂಹೋಮದಿಂದಂಮುನಿಪಭಜನದಿಂಕ್ಷೇತ್ರ
ಯಾತ್ರಾದಿಯಿಂದಂ ॥ ವ್ಯಪದೇಶಂಚಿತ್ತದಾನಕ್ರಿಯೆಯಿನೊದವಿದತ್ಯಂತ
ಪೂರ್ಣಾಘಮಿದಿ । ವ್ಯಪುರಾಣಾಕರ್ಣನೋದ್ಯತ್ಸುಕೃತದೊರೆಗೆತಾಂಸಾಟ
ಯಲ್ತಲ್ತಜಸ್ರಂ ॥೮೦॥

ಚಂ ॥ ಪ್ರಮಥಗಣಾಂಘ್ರಿಪಂಕಜಕೆರುದ್ರಗಣೇಂದ್ರಪದಾಂಬುಜಕ್ಕೆ
ಸಂ । ಯಮಿಸುತವೃತ್ತಯುಕ್ತಶಿವಭಕ್ತಮಹಾಗಣಪಾದವಾರಿಜ ॥ ಕ್ಕಮ
ರ್ದತಿಭಕ್ತಿಯಿಂದಗಣೆತಪ್ರಣಮಸ್ಕೃತಿಗೆಯ್ದುದಾಸಭಾ । ವಮನೊಡನಾ
ಳ್ದುಜಾರೆಘನಮಾಲಿಕೃತಾರ್ಥತೆತಾಳ್ದುಬಾಳ್ವೆನಾಂ ॥೮೧॥

ಚಂ॥ ದುರಿತಘನೌಘಚಂಡಪವನಂ ಗ್ರಹಸರ್ಪಸುಪರ್ಣಮಾರ್ತಿಸಿಂ
ಧುರಪರಿ ದುರ್ಗದೋಗ್ರಗಿರಿವಜ್ರ ಮರಾತಿಸರೋಧಿಬಾಡಬಂ ॥ ಪರಕೃತ

ಕಕ್ಷನೂರುಹಕುಠಾರ ಮಶೇಷವಿಷಾಬ್ಜ ಷಂಡಕುಂ | ಜರಮಿದುಜಾಪಕರ್ಗೆ
ಭವಕಕ್ಷದವಂ ಬಸವಾಕ್ಷರತ್ರಯಂ ||೮೨||

ಚಂ || ವಿವಿಧವಿಪತ್ಕದಂಬಕುಜರಾಜಿಕುಠಾರ ಮರಾತಿವಾತಭು |
ಕೃ ನ್ವಿಜಿತಮೇಘವಹ್ನಿ ಯಮುದರ್ಪ್ಪಚಯೋತ್ಪಲಚಂಡಭಾನು ದು || ರ್ಭ
ವನಲಿನಪ್ರತಾನತುಹಿನಂ ದುರಿತೌಘಘಸಪ್ರಭಂಜನಂ | ಭುವನದಸಜ್ಜನಾ
ಳಿಗೆನೃಪೇಂದ್ರಪವಸ್ಮೃತಿ ಸರ್ವಸೌಖ್ಯದಂ ||೮೩||

ಮ || ತಿರುನೀಲಾಂಗನೆಕನ್ಯೆಸಂಗವಿಭುಕಣ್ಣಪ್ಪಂಮಹಾದೇವಿಶಂ |
ಕರನಿಷ್ಠರ್ಕಲಿನಾಥರುದ್ರಪಶುಪರ್ಭಾಸ್ವನ್ನಮಿತ್ತಂಡಿಯೆಂ | ಬರಿವರ್ಮುಗ್ಧ
ಮಹೇಶಭಕ್ತರಿವರಂಭ್ರಧ್ಯಾನಮೆಂದೆಂಬಭಾ | ಸುರಚಂದ್ರಾತಪದಿಂಮ
ದೀಯಪರಿತಾಪಧ್ವಾಂತಮಂನೀಗುವೆಂ ||೮೪||

ಮ|| ವರದಾಸಂಶಿವಲೆಂಕಮಂಚಣಸುದಾರಶ್ರೀಪತೀಶರ್ಗುಣಾ |
ಕರನಾಡೋಹರಕಕ್ಕಯಂಶ್ವಪಚದೇವಂಜ್ಞಾನಸಂಬಂಧಬಾ || ಚರಸರ್ಪಂ
ಡಿತಮಲ್ಲಿಕಾರ್ಜುನರಜಸ್ರಂಪಾಲಿಸುತ್ತಿರ್ಕೆಸಾ | ದರಮೆಮ್ಮಂಪರಶಾಸ್ತ್ರ
ವಿದ್ವಿಜಯಭಕ್ತರ್ಸತ್ಕಳಾಮಂಡಿತರ್ || ||೮೫||

ಕಂ|| ಅಜಗಣ್ಣನನಿಮಿಷ್ಪೆಯಂ | ನಿಜಗುಣನುಂಸಿದ್ಧರಾಮಸುರುಲಿಂ
ಗಾರ್ಯಂ || ವೃಜಿನಹರಪೂಸಲಯ್ಯನು | ಮಜಷಮಹಾಯೋಗಿಭಕ್ತರಿವರೆ
ಮಗಾಳ್ದರ್ || ||೮೬||

ಕಂ|| ವರಪಾಲಗುರ್ಜರಂಸೌಂ | ದರನಾಥಂಮುಲ್ಹಣಯ್ಯನುದ್ಭಟದೇವಂ||
ಸುರುಚಿರಸತ್ಯಣ್ಣನಿವ | ರ್ಪರಶಿವಯುತಭೋಗಿಭಕ್ತರಿವರಂಪೊಗಳ್ವೆಂ ||

ಕಂ|| ಅತಿಭಕ್ತಂಗೊಲ್ಲಳಸು|ನ್ನತಕನ್ನದಬೊಮ್ಮಜೊಮ್ಮರಾಸಿಂಬಿಜ
ಗೆ|| ನ್ನುತಮೂರ್ಖನಾಥರಿವರ|ನ್ನಿತಶಿವನಿರ್ಲೇಪಭಕ್ತರೆಮ್ಮಯವಿಭುಗಳ್||

ಕಂ|| ವರವಾಗೀಶಂಸಕಳೇ | ಶ್ವರನೋಹಿಲಮೋಳಿಗಾರ್ಯಮಾದೇ
ವಿಶುಭಾ || ಕರಕೇಶಿರಾಜರಿವರುರು|ತರನಿಜವೈರಾಗ್ಯಭಕ್ತರಾನಿವರಣುಗಂ||

ಕಂ|| ತಿರುನೀಲಕಂಠರಘಸಂ | ಹರದಸರಂಸೇದಿರಾಜನೇಣಾಧಿಪನ||
ಚ್ಚರಿಯುಮರನೀತಿಮೊನೆಯಿಡು | ವರಧಿಕತರಶಾಂತಭಕ್ತರಾನಿವರಸುತಂ||

ಕಂ || ಉರುವೀರಶಂಕರಂಸೌಂ | ದರನಾಚಾರ್ಯಮರಿಲೇಶಕೇತ
ಯ್ಯಂಬಂ||ಧುರಕಲ್ಲಿನಾಥಸೋಮಾ|ರ್ಯರಶಿವಮತಶೀಲಭಕ್ತರನುಚರನಪ್ಪೆಂ||

ಕಂ|| ಅತಿದಾನಿಭಕ್ತರೆನಿಪು | ನ್ನತಸಿಂಧುಮರಾಳಸಿಂಧುಬಲ್ಲಾಳರ

ವಿ ॥ ಶ್ರುತಸಾನಕಾಜರಸಜಸ। ನುತಶಿರಿಯಾಳ್ವನಪದಾಬ್ಜಸೇವಕನಪ್ಪೆಂ

ಕಂ॥ಕರಿಕಾಲಚೋಳನಿಂಬಿಗ। ಳುರುಮಲಯಾಧಿಪಹಲಾಯುಧಚ
ಗಳಿಬಂ ॥ ಧುರಸಾಮವೇದಿಗಳಿವ ।ರ್ಗರಚಿತ್ರಕರಭಕ್ತರಿವರತೊಳ್ತಾನಪ್ಪೆಂ

ಕಂ॥ ನೊರಟದಬೊಂಕಯ್ಯಂತಂ । ಕರದಾಸಂಮಾಚಿದೇವನಿರಿ
ತ್ತಂರಾ ॥ ಮರಸಂನಾಚಯ್ಯಂಭಾ ।ಸ್ಕರದೇವಂವೀರಭಕ್ತರಿವರಡಿವಿಡಿವೆಂ

ಕಂ॥ ಭೂಮಿಯೊಳದ್ಭುತಭಕ್ತರು । ವೇಮಯ್ಯಂಮುಸುಟೆಚೌ
ನಾನಾಪರಸಂ । ರೇಮಯ್ಯಂಕಿನ್ನರಸಭಿ । ರಾಮಂಬಾಹೂರಬೊಮ್ಮನೆ
ಗೆರೆಯರಿವರ್ ||೯೫||

ಕಂ॥ ವಿಲಸತ್ಸ್ವತಂತ್ರಭಕ್ತ । ರ್ಗಲದಂಕಂಘಟ್ಟಿವಾಳನ ಮಿರೆವಿ
ಡಂ ॥ ಕಲಿಗಣನಾಥಂಚಂದಯ ।ಹಲಾಯುಧಪ್ರಭುಗಳಿವರಕಿಂಕರನಪ್ಪೆಂ

ಮ॥ ವೃ ॥ ಗುರುಭಕ್ತಂಗುರುಭಕ್ತನಾತ್ಮಘನಲಿಂಗಪ್ರಾಣಿಸತ್ಯಂ
ನಾ । ಚರಭಕ್ತಂಕಲಿಕಂಬಯಂಭಸಿತನಿಷ್ಠಜ್ಞಾನಸಂಬಂಧಿಸೌಂ ॥ ದ
ತ್ರಂಗಿರಿಕಾಕ್ಷನಿಷ್ಠನುರುಮಾರಂಪಾದತೀರ್ಥಪ್ರಿಯಂ।ಚರಶೇಷಪ್ರಿಯನಪ್ಪ
ಬಾಚರಸರೀಸದ್ಭಕ್ತರಂವಂದಿಸೆಂ ||೯೭||

ಚಂ॥ ಇಳೆಯೊಳಿಸಾಣದೆಂತುಛಲದಿಂಬಲದಿಂದತಿನಿಷ್ಠೆಯಿಂಮನ
ಗೊಳಿಸುವಭಕ್ತಿಯಿಂತನುಮನೋಧನಿತಾಸುಖಮುಖ್ಯವಸ್ತುಸಂ ॥ ಕು
ಮನಸಂಚಕತ್ವದಿನೊರಲ್ದಘನಂಗೆಸಮರ್ಪಿಸುತ್ತೆನಿ । ಸ್ಟಳಸುಬಮಾಳ್ವಸ
ರ್ಗಶಿವಭಕ್ತರಪಾದುಕೆಯಾಂಪಭಕ್ತನಾ ||೯೮||

ಕಂ॥ ಪಲವಂದಾಚರಣೆಗಳಿಂ । ನಲಸದೆಪಡೆದಂದುಮಿಂದುಮುಂ
ದಭವನನೊ । ಲ್ಮೊಲಿಸಿದೊಲಿಸಲ್ಕೆನೆರೆದಿ। ರ್ದೊಲಿಯಿಪಶಿವಶರಣರೆಲ್ಲರಂ
ಘ್ರಿಗೆಮಣಿವೆಂ ||೯೯||

ಮ॥ ಸ್ರ॥ ವೃ॥ ಪ್ರಣವಾರ್ಥಂನೀನೆಸಚ್ಚಿತ್ಸುಖರಸಮಯಂನೀನೆ
ಲೀಲಾಕಟಾಕ್ಷೇ । ಕ್ಷಣದಿಂಬ್ರಹ್ಮಾಂಡಮಂಮುಂಪಡೆದುಪೊರೆವನುಂನೀನೆ
ಸನ್ಮುಕ್ತಿಚಿಂತಾ ॥ ಮಣಿರೂಪಂನೀನೆತತ್ವಾಳಿಗೆಮೊದಲಿಗನುಂನೀನೆಮದ್ದೇ
ಶಿಕೇಂದ್ರಾ । ಗ್ರಣಿಯುಂ ಕೇಳ್ನೀನೆಯೆನ್ನಂಪೊರೆಪೊರೆಸತತಂನಂಬಿದೆಂಶ್ರೀ
ವೃಷೇಂದ್ರ ॥ ||೧೦೦||

ಕವಿರಾಜವಿರಾಜಿತವೃತ್ತಂ॥ ಜಯಜಯದೇವಸುಧಾಮಯಧಾಮ
ಯಶಸ್ಕಮಹಃಕಲಿತಾಕ್ಷನಿರಾ । ಮಯಮಹಿತಾಂಗಸದಂಗನಪುಂಗವವಾ

ಹತಿಮೋಹಕು ಶೇ ‖ ಶಯನಯನೇಕ್ಷಣ ಸಾರಸಸಾರಸಮರ್ಚಿತ ಪಾದ ಪಯೋಜಸದಾ | ಶ್ರಿಯಭಯದೂರ ಕುಮಾರ ಕುಮಾರ ಸುಧಾಕರ ಶೇಖರ ಶೂಲಧರ ‖ .... ‖೧೦೧‖

ಮತ್ತಕೋಕಿಲ ‖ಕುಂಡಲೀಶ್ವರ ಕುಂಡಲಾಂಚಿತಗಂಡಮಂಡಲಖಂಡಿತಾ | ಖಂಡಸಾಹಸದಂಡ ಭೃದ್ಭುಜದಂಡ ಚಂಡಕರ ಪ್ರಭಾ ‖ ಮುಂಡಿತಾಂಗ ಸಮಂಡಜಧ್ವಜಕಾಂಡರಕ್ಷಿತ ಕಾಂಡದೋ|ರ್ದಂಡಪಾಲಯಚಂಡಿಕಾಮುಖ ಪುಂಡರೀಕ ದಿವಾಕರ ‖ ....

ವೃ‖ ಮತಿಯಿಂದಂ ಭಕ್ತಿಯಿಂದಂ ಛಲದಬಲದೆ ವೈರಾಗ್ಯದಿಂ ಧ್ಯಾನದಿಂ ಸಂ | ನತಿಯಿಂದಂ ಶ್ರದ್ಧೆಯಿಂದಂ ಜಪ ತಪದನುಷ್ಠಾನದಿಂ ದೇವನಿಮ್ಮಂ‖ ಕ್ಷಿತಿಯೊಳ್ಭಕ್ತ ರ್ಸಮರ್ಥರ್ಬಿಡದೊಲಿಸಿದರಾಂದೀನನೇಗೆಯ್ವೆನಸ್ಮ | ತ್ಪತಿಧರ್ಮ್ಮಂ ನಿಂಮದೆನ್ನಂ ಪೊರೆಪೊರೆಪುರರುಳಂ ನೋಡದೆಂನೋಳ್ಪುದಾಗಿ ‖ .... ‖೧೦೩‖

ಶಿವಶಿವ ದೇವದೇವ ಪರಮೇಶ ರಮೇಶ ಸುಬಾಣಬಾಣದಾ| ನವನವಸಂಪದಪ್ರದಸುಧಾ ಮಸುಧಾ ಮಭಸಾರಿ ವಾರಿಜೋ‖ ದ್ಭವನಭನವಂದ್ಯ‖ ವಂದ್ಯಮೃಗಲಕ್ಷಣ ಲಕ್ಷಣ ಗೋಪಗೋಪ ಬಾಂ | ಧವ ಧವಳಾಂಗ ಕುಂಡಲಿಸ ಕುಂಡಲ ಪಾಲಿಪುದೆನ್ನನೀಶ್ವರ ‖ ‖೧೦೪‖

ಮಲ್ಲಿಕಾಮಾಲಾ ವೃತ್ತ ‖ಕಾಮಸಾಮಜ ಸಾಮಜಾರಿ ಜಿತಾಮಯಂ ಕರುಣಾಮಯಂ | ಸೋಮತಾಮರಸಾಪ್ತ ಸಪ್ತಶಿಲಾಕ್ಷ ನಂಧಕಬಂಧಕಂ ‖ ಭೂಮಧಾಮ ಜಟಾಧರಂ ಗಣಪೋಷಣಂ ಗುಣಭೂಷಣಂ | ಸ್ವಾಮಿಕಾಮಿತಮಾಗೆ ಭಕ್ತಜನಕ್ಕೆ ವೀತಭವಂ ಶಿವಂ ‖೧೦೫‖

ಕಂ‖ ಶುಭವಿಭವಮ ನಭವಂಕೊಡು | ಗೆ ಭವಾನಿಸು ಸಂಪದಂಗಳಂ ಮಾಳ್ಕೆ ಪೊದ ‖ ಳ್ದಿಭವದನನೀಗೆನಿರ್ವಿ | ಘ್ನಭಾವಮಂ ಸುಜನವಿತತಿಗಳೆಯೊ ಳಜಸ್ರಂ‖ .... ‖೧೦೬‖

ವೃ‖ ಪರಮಕೃಪಾಕರಂ ಪ್ರಬಳದೇಶಿಕವಂಶ ಸರೋಜಭಾಸ್ಕರಂ | ದುರಿತನಿವಾರಣಂ ದುರಭಿಮಾನ ಮತಾಂಬುಜಮತ್ತ ವಾರಣಂ‖ ವರಗುಣಭೂಷಣಂ ವಿರಹಿತೇಷಣ ನಾಗಮವಿದ್ವರೇಣ್ಯ ಮ | ದ್ಗುರು ಚಿಕವೀರದೇಶಿಕ ಶಿಖಾಮಣಿ ರಕ್ಷಿಸುಗೆಂಮನಾವಗಂ ‖ ‖೧೦೭‖

ಕಲಿಕಾಲುಷ್ಯಕಠೋರ ಕಾನನಕುಠಾರಂ ಭಕ್ತಿಸಂಪತ್ತಿಮ | ದ್ವಿಲ

ಸದ್ಭಾವ ಮಹಾನುಭಾವ ನಭವ್ಯೋದ್ಯಗ್ಧ ಮೂರ್ತರೂಪಂ ಧರಾ ॥ ಲಲನಾಪಾವನಕೃತ್ಯದಂ ಪರಮಶೈವಾಂಬೋಧಿ ಚಂದ್ರಂಧೃಪಾ । ಕಲಿತಂ ಶ್ರೀಬಸವೇಶ್ವರಂ ಪ್ರೋರೆಗೆಭಕ್ತ ವ್ರಾತಮಂ ಸಂತತಂ ॥ .... ॥೧೦೮॥

ಬಸವಾಂಘ್ರಿತ್ರಯಕೊಳ್ಸಿಸಿಂ ಸನೆದುನೂರುಂ ಶಬ್ದಮಂಸಾಣದ॥ ರ್ಚಿಸಿದ ಸೋಮಕವೀಂದ್ರ ಭೀಮ ಕವಿಗಳ್ ಶ್ರೀಶಂಕರಾರಾಧ್ಯರಿಂ ॥ ದೆಸೆವಸ್ಥಂ ನಗಳಿಳ್ದಂದು ಕಬ್ಬಮಸಿದಂ ಮಿಕ್ಕಂಘ್ರಿಗಾದಂಸಮ ॥ ರ್ಚಿಸಿದಂ ತತ್ಕೃಪೆಯಿಂ ಷಡಕ್ಷರಿ ಶಿವಾಚಾರ್ಯಂ ಮಹಾಭಕ್ತಿಯಿಂ ॥

ಧರಣೀಭಾಗದೊಳೀ ಪುರಾಣಮನಮಂ ಬಾನಂದದಿಂ ದೋದುವಾವರದಿಂಕೇಳ್ವ ಸದರ್ಥವಂಪಡೆದು ಪೇಳ್ವತ್ಯಂತ ಶಿಷ್ಯರ್ಗೆ ಶಾಂ ॥ ಕರಿಯಾಣ್ಮಂಸಲಿಮಾಳ್ಕಿ ಬೇಳ್ಪವರಮಂ ನಿತ್ಯಾಯುಮಂ ಶ್ರೀಯುಮಂ । ಪರಮಾನಂದಮ ನಾತ್ಮಯೊಲಪಂ ವಿಶ್ವಾಧಿಕಂ ಶಂಕರಂ ॥೧೦೯॥

ಶಿವಭಕ್ತರ್ಗೆ ಶಿವಾರ್ಚಕರ್ಗೆ ಶಿವಲಿಂಗ ಧ್ಯಾನಯುಕ್ತರ್ಗೆ, ಶಾಂ । ಭವತತ್ವಾನು ಭವಪ್ರಭಾವ ಭರಿತಸ್ವಾಂತರ್ಗೆ ಲಿಂಗಾಂಗನಂ ॥ ನವಿಶಿಷ್ಟರ್ಗಳ ವೀರಶೈವ ಶರಣರ್ಗೆಂದುಂ ವೃಷೇಂದ್ರಂ ಶುಭೋ । ತ್ಸವಮಂಮಾಳ್ಕೆ ಕೃಪಾಸಮುದ್ರ ನನಘಂ ಕಲ್ಯಾಣಕಲ್ಪದ್ರುಮಃ॥ ॥೧೧೦॥

ಸೋಮಾಂಕಂ ಸೋಮಸುದ್ಯದ್ಯುಷನಪ್ರಸಕಿಮಂ ಭಿಕ್ಷುಮೃಕಾಮಾಂತಕಾಭ್ರ । ಗಾನ್ಯೋಂದ್ರಾರ್ಯಬ್ಜ ಜೇಹಾಚ್ಯುತ ರಿಪುನಪ್ರರಧಾಂಗನಂ ವ್ಯಾಧರೀಲೊ ॥ ದ್ದಾಮಂ ಕಂಕಾಳಚಂಡೇಶ್ವದ ವಿಷದಬಿಭಾಸ್ವದ್ವಕ್ತ್ರದಾತಂ । ವ್ಯೋಮೋದ್ಯಕಾಂಘ್ರಿಯುಂಮಂ ಪ್ರೋರೆಗೆ ಸುಮಕರಂ ದಕ್ಷಿಣಾಮೂರ್ತಿಲಿಂಗಂ ॥ .... ॥೧೧೧॥

ಒದವಿದ ಚಂದ್ರ ಬಾಣ ನಿಧಿ ಭೂಧರ ಸಂಖ್ಯೆಯನಾಳ್ವ ಸಂದನಂ॥ ಮದಕರ ಶಾಲಿವಾಹನಶಕಾಬ್ದದ ಸಾಧು ನಿಜಾಬ್ದದ ಮಾಘಮಾ । ಸದಸಿತಪಕ್ಷ ಪಂಚಮಿಯ ಭಾರ್ಗವ ವಾರದೊಳೀಪುರಾಣ ಮಾ । ದುದು ಮಂತ್ರೂಣ್ ವಿರಾಕೃಪಯಿಂದೆ ಷಡಕ್ಷರಿದೇವ ನಿರ್ಮಿತಂ ॥೧೧೨॥

ಲಲಿತ॥ ಹೀರಹಿಮಕಾರ ಗಿರಿನಾರದವರೀರ ಘನಸಾರ ಸುರವಾರಣತುಷಾರ ಕರತಾರಾ । ಹಾರಸಿತನೀರಧರ ಪಾರದಸುಧಾರಸಕವಿಾರ ಧುಗಿನಾಮಬರಗೌರ ಸುಯಶೋಂಕ ॥ ಘೋರಭವದೂರ ಜಿತಶೂರ ಶರಮಾರ ಶುಭಸಾರ ಯಮಿವಾರ ನುತವೀರ ಶಿವಭೃತ್ಯಾ । ಧಾರಸದುದೋರ ಸದ

ವಾರ ಸುಖಸ್ಫೂರ ಜಯಚಾರುಪದ ಸಾರಸವಿಹಾರ ಬಸವೇಶ ||೧೧೩||

ಪೃಥ್ವೀವೃತ್ತ|| ಸುವರ್ಣರಥಪೂಜಿತೆ ಸುಕರಕೀರ್ತಿವಿಭ್ರಾಜಿತೆ | ಕೃಪಾರಸತರಂಗಿಣೀ ಕುಪಿತದೈತ್ಯಸಂಹಾರಿಣಿ|| ಕಪರ್ದಿಹೃದಯಪ್ರಿಯೆಕನಕವರ್ಣೆ ಸಚ್ಚಿನ್ಮಯಿ | ಜಪಾಸುಮರುಚಿಜನನಿ ಪಾಲಿಸದ್ರೀಂದ್ರಜೆ||೧೧೪||

ನಾಂದಿ || ಲಲಿತಪದವೃತ್ತ|| ಕುಷ್ಠಮುಖ ದುಸ್ಸಹ ಬಲಿಷ್ಠಗದಮರ್ದನ ಗರಿಷ್ಠನಿಜವಜ್ಜಲ ಯುಧಿಷ್ಠಿರನರಾಜ್ಯಾ | ಧಿಷ್ಠಿತ ಜಗತ್ರಯವರಿಷ್ಠ ಗರುಡಾಂಕ ಪರಮೆಷ್ಠಿಮತಭರ್ಗಪದನಿಷ್ಠ ಜನಲೋಲಾ || ಶ್ರೀಷ್ಟಸುಖವಿಪ್ರಕರ ಪಟ್ಟಸುರಭೂಜ ಖಲಕಾಷ್ಠದವಪಾವಕ ವರಿಷ್ಠಗಣಸ್ಪಂದ | ಜೇಷ್ಠವರಿವರ್ಜಿತ ಲಘೇಷ್ಠಮತವಾದಿಕುಲಸುಷ್ಠು ವಚನೋತ್ಕರ ಸುಟಿಷ್ಠಬಸವೇಶ || .... ||೧೧೫||

ಗದ್ಯ|| ಇದು ವಿನಮದಖಿಳ ಸುರಾಸುರೇಂದ್ರ ಮಕುಟತಟಘಟಿತ
ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ
ಪರಮಶಿವಲಿಂಗ ಪಾದಾರವಿಂದ ಪರಾಗಭಸಿತ ಭಾಸುರ
ಲಲಾಟಪಟ್ಟ ಸರಸಜನಮಾನಿತೋಭಯ ಕವಿತಾವಿಶಾರದ
ಶ್ರೀ ಷಡಕ್ಷರಿ ದೇವ ಭಕ್ತಿವಿರಚಿತ ಶ್ರೀವೃಷಭರಾಜ
ವಿಜಯ ಮಹಾ ಪುರಾಣದೋಳ್ ಬಸವರಾಜವಿಜ
ಯ ವರ್ಣನಂ ದ್ವಿಚತ್ವಾರಿಂಶ ದಾಶ್ವಾಸಂ
ಪರಿ ಸಮಾಪ್ತಂ

ವೃಷಭೇಂದ್ರ ವಿಜಯವು ಸಮಾಪ್ತವಾದುದು.

ಪ್ರಕಟಣೆ.

ಇದರಡಿ ಕಂಡ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತೆ.

ಪದ್ಯ ಜೈಮಿನಿ ಚಿಕ್ಕಸೈಜು ಪದ ಪದ ವಿಂಗಡಿಸಿರುವದು ತಪ್ಪುಗಳಿಲ್ಲದೆ ಚೆನ್ನಾಗಿರುತ್ತೆ.	೧	೮	೦
ಶಿವಶರಣರ, ವಿಲಾಸ, ಪದ್ಯ, ಚರಮೂರ್ತಿವಿರಚಿತ	೨	೦	೦
ವಚನ. ರಾಮಾಯಣ	೦	೧೨	೦
ಮದನಮೋಹನ ಚರಿತ್ರೆ	೦	೮	೦
ಬೃಹತ್ಕಥಾಮಂಜರಿ	೦	೧೨	೦
ಶಕ್ತಿ. ಹೊಸನಾವಲು	೦	೮	೦
ಶ್ರೀಕೃಷ್ಣ ಬೋಧಾಮೃತ	೦	೧೨	೦
ಪ್ರಶ್ನೋತ್ತರ. ಲೆಖ್ಖಬೋಧಿನಿ ಹೊಸಮುದ್ರಣ	೧	೮	೦
ಭೂಮಿ ಅಳತೆಯನ್ನುವ, ಮೋಜಣಿಕಲಿಯುವ ಪುಸ್ತಕ	೧	೦	೦
ಟೀಕು. ತ್ರಿಕಾಂಡ. ಅಮರ	೦	೧೨	೦
ಟೀಕು. ಅನುಭವಾಮೃತ	೦	೧೨	೦
ಟೀಕು. ನಿರ್ಗುಣರ. ಆರುಶಾಸ್ತ್ರ	೫	೦	೦
ಟೀಕು. ಸಪ್ಪಣ್ಣನವರ ವಚನ	೦	೧೨	೦
ಕೈವಲ್ಯನವನೀತ	೦	೮	೦
ಹಾರಮೋನಿಯಂ. ಸ್ವಯಂ ಬೋಧಿನಿ	೦	೧೨	೦
ರತ್ನಮಣಿಹೊಸ ಕಥೆ	೦	೪	೦
ವೇದಾಂತ ಶುಕಸಪ್ತತಿ, ೭೦ ಕಥೆಗಳು	೨	೮	೦
ವಚನಜ್ಞಾನಸಿಂಧು, ಶಿದ್ಧಾರೂಢರಿಂದ ವಿರಚಿತವಾದದ್ದು	೩	೦	೦
ಭಕ್ತಿ ವಿಜಯ	೨	೮	೦
ಜ್ಯೋತಿಷ ಬಾಲಶಿಕ್ಷೆ. (ಹೊಸಮುದ್ರಣ	೦	೬	೦

ವಾಜಪೇಯಂ, ಗೋವಿಂದಯ್ಯ ಅಂಡ್ ಬ್ರದರ್

ಬುಕ್ಸೆಲರ್ ಅಂಡ್ ಪ್ರಿಂಟರ್

ಚಿಕ್ಕಪೇಟೆ ಬೆಂಗಳೂರು ಸಿಟಿ.